# ಕರ್ನಾಟಕ ಪ್ರಾಂತರಚನೆ
## ಮತ್ತು
# ಕೊಡಗು.

— ಬೇ:—'ಕನ್ನಡಿಗ', ಕೊಡಗು —

ದಕ್ಷಿಣ ಕನ್ನಡ.

ಕಾಪುಗೋಡಿನಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತಿಗೆ ಹೋಗುವ ಅವಕಾಶದಿಂದ ಕಾರಣ ಕನ್ನಡ ಏಕೀಕರಣದ ಪರಿಸ್ಥಿತಿ ಹೇಗಿದೆ ಎಂಬುದರ ಪೂರ್ಣಾನುಭವವಾಯಿತು. ಸಭೆ ನಡೆದ ದಕ್ಷಿಣ ಕನ್ನಡ ಜಿಲ್ಲೆಯವರ ವಾಣಿಯಲ್ಲಿ ಒಂದು ವಿಧದ ದುಃಖತಾಪಗಳು ಕಂಡುಬರುತ್ತಿದ್ದವು. ದಕ್ಷಿಣ ಕನ್ನಡದಲ್ಲೇ ಏಕೀಕರಣ ಕೆತ್ತಾಟದ ಒತ್ತಡ ಕಂಡುಬರುತ್ತಿದೆ. ಹತ್ತಿರದ ಮಲಯಾಳದವರು ದಕ್ಷಿಣ ಕನ್ನಡವು ಮಲಬಾರಿಗೆ ಸೇರಬೇಕು ಎನ್ನುತ್ತಾರೆ! ಕೇರಳದವರಿಗೆ ದಕ್ಷಿಣ ಕನ್ನಡದ ಕೊಲ್ಲೂರಿನ ಸಂಬಂಧವಿದೆಯಂತೆ. ಗೋಕರ್ಣದ ಪರೆಗೂ ಆವರೆ ಯಾತ್ರಾ ಸ್ಥಳವಂತೆ ಆದ್ದರಿಂದ ದ. ಕನ್ನಡ ಕೇರಳಕ್ಕೆ ಸೇರಬೇಕೆಂದು ಅವರ ವಾದ. ಈ ವಿಚಾರದಲ್ಲಿ ಸತ್ಯತೆಯಿರಲಿ ಯೂ ಇಲ್ಲದಿರಲಿ ಒಂದು ಪ್ರಧಾನವಲ್ಲ. ಹೇಗೂ ದಕ್ಷಿಣ ಕನ್ನಡದ ಜನರಲ್ಲಿಯೇ ಏಕೀಕರಣದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಸುಮಾರು ೧೫ ಲಕ್ಷ ಜನಸಂಖ್ಯೆಯಿರುವ ಈ ಭಾಗದಲ್ಲಿ ಸುಮಾರು ಹತ್ತುಲಕ್ಷ ಜನರು ತುಳುವರು ಇನ್ನರು ತಮ್ಮದೇ ಆದ 'ತುಳುನಾಡು' ಒಂದನ್ನು ರಚಿಸುವ ಪ್ರಚಾರ ಒಮ್ಮೆ ಮಾಡಿದ್ದರು. ಆದರೆ ದಕ್ಷಿಣ ಕನ್ನಡವು ಸ್ವತಂತ್ರವಾಗಿ ನಿಲ್ಲುವ ಪಟ್ಟು ಚೈತನ್ಯವುಳ್ಳದಲ್ಲ. ಅದರಲ್ಲಿ ಬೆಳೆಯುವ ಆಹಾರ ಧಾನ್ಯಗಳು ಅಲ್ಲಿರುವ ಜನರಿಗೆ ಸಾಲವು, ಎರಡು ಬೆಳೆ ತೆಗೆದರೂ ಹಲವು ಕೈಗಾರಿಕೆಗಳನ್ನು ಮಾಡುತ್ತಿದ್ದರೂ ಜೀವನ ಹೊರೆಯಲು ಲಕ್ಷಗಟ್ಟಲೆ ಜನ ಹೊರಗೆ ಹೋಗಬೇಕಾಗುತ್ತದೆ. ಆದ್ದರಿಂದ ದಕ್ಷಿಣ ಕನ್ನಡದಲ್ಲಿ ೧೫ ಲಕ್ಷ ಜನರಿದ್ದರೂ, ಅದು ಬೇರೆ ಇರಲಾರದು. ಆದ್ದರಿಂದ ತಾವು ಬೇರೆ ಇರಬೇಕೆಂಬ ಎಸ್ಟೇ ಕಾಂಕ್ಷೆ ಇದ್ದರೂ ಆವರಿಗೆ ಜಾಗಿರಲು ಸಾಧ್ಯವಾಗದು. ಆದ್ದರಿಂದಲೇ 'ತುಳುನಾಡು'ನವರೂ ಇಂದು ಕರ್ನಾಟಕ ಏಕೀಕರಣ ಪ್ರಶ್ನೆಗೆ ಒಪ್ಪುವ ಪ್ರಸಂಗಬಂದಿದೆ. ಇದಕ್ಕೆ ಒಪ್ಪಲು ಇನ್ನೊಂದು ಕಾರಣವಿದೆ. ಮದ್ರಾಸ್ ಸರಕಾರದೊಡನೆ ಜೋಡಿಸಲ್ಪಟ್ಟಿರುವ ಈ ದಕ್ಷಿಣ ಕನ್ನಡವು ಇಂದು ಪಡುತ್ತಿರುವ ಕಷ್ಟವು ಅವರಿಗೇ ಗೊತ್ತು. ತಮ್ಮ ನಾಡಿನವರೇ ಮಂತ್ರಿಗಳಾಗಿರಬಹುದಾದರೂ ದೂರದ ಮದ್ರಾಸಿನಲ್ಲಿರುವ ಅವರ ದರ್ಶನವಾಗುವದೇ ಅಪರೂಪ. ದ. ಕನ್ನಡದವರ ಕೊಗು ಮದ್ರಾಸಿಗೆ ಮುಟ್ಟುವದೇ ದುರ್ಲಭ. ಮುಟ್ಟಿದರೂ ಅದು ಫಲಕಾರಿಯಲ್ಲವೆನ್ನುತ್ತಾರೆ. (ಕೊಡಗು ಕರ್ನಾಟಕಕ್ಕೆ ಸೇರಿದರೆ ಅದಕ್ಕೆ ಈ ಪರಿಸ್ಥಿತಿಯೇ ಆಗುವದು) ಆದ್ದರಿಂದ ಹತ್ತುಲಕ್ಷವಿರುವ ತುಳುವರು ಕರ್ನಾಟಕವನ್ನು ಸೇರಲು ತೀರ್ಮಾನಿಸಿದರೆ ಅದು ಅವರ ಆರ್ಥಿಕ ನಿರ್ಬಲತೆಯು ಕಾರಣದಿಂದ. ಸ್ವತಂತ್ರವಾಗಿ ತಮ್ಮ ಕಾಲಿನ ಮೇಲೆ ನಿಲ್ಲುವ ಚೈತನ್ಯವಿಲ್ಲದ ಕಾರಣದಿಂದ. ಆದರೂ ಮೈಸೂರು, ಕೊಡಗುಗಳು ಕರ್ನಾಟಕವನ್ನು ಸೇರಿದ್ದರೆ ತಾವು ಸರಿಯೆಂದು ದಕ್ಷಿಣ ಕನ್ನಡದವರು ಹಲವರಿದ್ದಾರೆ.

ಏಕೀಕರಣ.

ಕರ್ನಾಟಕ ಏಕೀಕರಣವನ್ನು ಕೇಂದ್ರ ಸರಕಾರವು ವಿರೋಧಿಸುತ್ತಿರುವದು ೨೩ ಆಡಳಿತಗಳಲ್ಲಿ ಹರಿದು ಹಂಚಿರುವ ಭಾಗಗಳನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ಉಸಸ್ಥಿತವಾಗುವ ಘರ್ಷಣೆಯ ದೃಷ್ಟಿಯಿಂದ ಮಾತ್ರವಲ್ಲ; ಬದಲು ಕರ್ನಾಟಕದ ಆರ್ಥಿಕ ಸ್ಥಿತಿಯು ಸ್ವತಂತ್ರವಾಗಿ ಬಾಳುವ ಭಾಗ್ಯವ ಗಿಲ್ಲವೆಂಬುದು ಶ್ರೀ. ರಂಗನಾಥ ದಿವಾಕರರ ಭಾಷಣದಿಂದ ತಿಳಿಯಬಂತು. ಈ ದೃಷ್ಟಿಯಿಂದ ಕರ್ನಾಟಕದ ಆರ್ಥಿಕ ಸ್ಥಿತಿ ಹೇಗಿದೆಯೆಂಬ ಪನ್ನು ಸ್ವಲ್ಪ ವಿಚಾರಿಸಿದರೆ ಹಿಕವಾದೀತು. ಮೈಸೂರು ಕರ್ನಾಟಕ ಪ್ರಾಂತಕ್ಕೆ ಸೇರಬೇಕಾದರೆ ಕೆಳಕ್ಕೆ ಪಾತಿಕೊಂಡಿರುವ ಭಾಗಗಳಲ್ಲಾ ಸೇರಿದರೆ ಕನ್ನಡನಾಡು ಒಂಗು ಲಕ್ಷ ಚದರ ಮೈಲು ವಿಸ್ತೀರ್ಣದ, ಸುಮಾರು ೨ ಕೋಟಿ ಜನಸಂಖ್ಯೆ ಇರುವ ೨೦ ಕೋಟಿ ಸಂಪೂರ್ಣವು ಪ್ರಾಂತವಾಗುವದು. ಅಂದರೆ ಪ್ರತಿಯೊಬ್ಬ ಪ್ರಜೆಯ ತಲಾ ಒಂದರ ರೂ ೧೦-ಸರಕಾರದ ವರಮಾನವಾಗುವದು. ಒಂದು ಚದರ ಮೈಲಿಗೆ ೫೦೦ ಜನರಿ ಜನಸಂಖ್ಯೆಯಾಗುವದು. ಕನ್ನಡನಾಡಿನಲ್ಲಿ ಬಹು ಭಾಗವು ಫಲವತ್ತಾಗಿಲ್ಲ, ರಾಯಲಸೀಮೆ, ಬಳ್ಳಾರಿ, ಬಿಜಾಪುರ ಇವು ಬರಗ ಲಕ್ಕೆ ಹೆಸರಾದುವು. ಆದ್ದರಿಂದ ಕನ್ನಡನಾಡಿನ ಉತ್ಪತ್ತಿ ಹೆಚ್ಚಿಸುವ ಫಲಕ್ಕೆ ವಿಪರೀತ ದುಡ್ಡಿನ ವ್ಯಯವೂ ಅಗತ್ಯವಿದೆ. ಕನ್ನಡನಾಡಿನ ಆರ್ಥಿಕ ಸ್ಥಿತಿ ಈ ಉಲ್ಬಣಾವಸ್ಥೆಯಲ್ಲಿರುವ ಕಾರಣದಿಂದಲೇ ಕೇಂದ್ರವಿಂದ ಏಕೀಕರಣಕ್ಕೆ ವಿರೋಧ ಬಂದಿರಬಹುದು.

ಇತ್ತೀಚೆಗೆ ಮೈಸೂರಿನಲ್ಲಿ ಪ್ರಜಾಪ್ರಭುತ್ವಾಬ್ದರಿ ಸರಕಾರ ರಚಿಸಿದಾದ ಮೇಲೆ ಮೈಸೂರಿನವರು ತಾವು ಸ್ವತಂತ್ರ ನಿಲ್ಲುವ ಪ್ರಚಾರ ಪೊಡಗಿದ್ದಾರೆ ಕನ್ನಡಿನ ಬರಡು ಪ್ರದೇಶಗಳನ್ನು ಸೇರಿ ತಮ್ಮ ಸಂಪತ್ತನ್ನು ಅಲ್ಲಿ ಚೆಲ್ಲಲು ಅವರು ತಯಾರಿಲ್ಲ. ಈ ವರೆಗೆ ಕನ್ನಡ ಏಕೀಕರಣ ವಾದಿಗಳು ಮೈಸೂರು ಕನ್ನಾಡಿಗೆ ಸೇರಲಿ ಯೂ ಸೇರದಿರಲಿ; ಉಳಿದ ಭಾಗಗಳ ಏಕೀಕರಣವನ್ನಾದರೂ ಸಾಧಿಸುವೆವೆಂದು ಸಾರುತ್ತಿದ್ದರು ಮೈಸೂರು ಕಾಂಗ್ರೆಸ್ ಮಂತ್ರಿಮಂಡಲವು ಏಕೀಕರಣದ ವಿಚಾರ ನಿರ್ಣಯಕ್ಕೆ ಬಂದಿಲ್ಲ. ಆ ನಿರ್ಣಯವು ಜನಾಭಿಪ್ರಾಯದಂತೆಯೇ ಆಗಬೇಕಾದುದರಿಂದ ಮೈಸೂರು ಸ್ವತಂತ್ರ ನಿಲ್ಲುವ ಸಾಧ್ಯತೆ ಹೆಚ್ಚು ಕಾಣುತ್ತಿದೆ. ಇಲ್ಲವೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಸೂಚಿಸಿದಂತೆ 'ಸಬ್ ಫೆಡರೇಶನ್'ಗಳ ವಿರ್ಮಾಣಗಳೂಬಹುದು. ಆದ್ದರಿಂದ ಇಪ್ಪತ್ತೊಂಭತ್ತುವರೆ ಸಾವಿರ ಚದರ ಮೈಲು ವಿಸ್ತಾರವಿದ್ದು ಎಪ್ಪತ್ತಾರು ಲಕ್ಷ ಜನ ಸಂಖ್ಯೆಯದ್ದು ಹತ್ತುಕೋಟಿ ರೂಪಾಯಿ ವರಮಾನವಿರುವ ಮೈಸೂರು ಬೇರೆ ನಿಂತರೆ ಅಲ್ಲಿ ಇನ್ನಿ ಸಂಬಂಧವಿಲ್ಲದೆ ಹರಿದು ಹಂಚಿದ ೭೦ ಸಾವಿರ ಚದರ ಮೈಲಿನ ಒಂದೂಕಾಲುಕೋಟಿ ಜನಸಂಖ್ಯೆಯ, ಸುಮಾರು ಹತ್ತುಕೋಟಿ ವರಮಾನದ ಭಾಗ ಉಳಿಯುವದು ಇತರ ಸಿಸ್ತಾರ, ಜನಸಂಖ್ಯೆ, ವರಮಾನ ನೋಡಿದರೆ ಈ ಭಾಗವು ಪಲವತ್ತಾದ್ದಲ್ಲವೆಂದು ಎತ್ತಿಹೇಳುತ್ತದೆ. ಈ ಪ್ರಾಂತದಲ್ಲಿ ಪ್ರಜೆಯ ತಲಾ ಒಂದರ ರೂಪಾ ಉತ್ಪತ್ತಿ ಸರಕಾರಕ್ಕೆ ಒದಗುವದು. ಆದ್ದರಿಂದ ಮೈಸೂರನ್ನಳಿದ ಕರ್ನಾಟಕ ಏಕೀಕರಣವು ಆರ್ಥಿಕದೃಷ್ಟಿಯಿಂದ ಇನ್ನು ಪ್ಪ ನಿರ್ಬಲವಾಗಿಸಬಹುದು. ಇದು ಕನ್ನಡ ಭಾಗಗಳ ಸ್ಥಿತಿ.

ಮೈಸೂರಿನ ಪ್ರಕೃತ ಸ್ಥಿತಿಯನ್ನಿವಲೋಕಿಸಿದರೂ ಮುಕ್ಕಲು ಕೋಟಿ ಜನಸಂಖ್ಯೆ ಇರುವ ಮೈಸೂರಿನಲ್ಲಿ ಸರಕಾರಕ್ಕೆ ಹತ್ತುಕೋಟಿ ವರಮಾನವಿದೆ. ಅಂದರೆ ತಲಾ ರೂ ೧೫ ಎಂದಾಯಿತು. ಮೈಸೂರು ಈವರೆಗೆ ಸ್ವತಂತ್ರವಾಗಿದ್ದು ಸಾಕಷ್ಟು ಬೈಗರಿಕೆಯಲ್ಲಿ ಮುಂದುವರಿದಿರುವದರಿಂದ ಸ್ವತಂತ್ರವಾಗಿ ಬಾಳಲು ಅಡಚಿಕ್ಕೆ ತೊಂದರೆಯಾಗಲಾರದು. ಹಿಗಿರುವ ಪ್ರಚಾರದಂತೆ ಮೈಸೂರು ಸ್ವತಂತ್ರವಾದರೆ ಕನ್ನಾಡಿಗೆ ಸಂಬಂಧವೇ ಇಲ್ಲದೆ ಅಂಡಮಾನಿನಂತೆ ದೂರ ಉಳಿಯಬೇಕಾದ ಮಡಕಶಿರಾ, ಸೇಲಂ, ಕೊಯಮುತ್ತೂರು, ನೀಲಗಿರಿ ಮೊದಲಾದುವನ್ನು ಒಂದೇ ಆಡಳಿತಕ್ಕೆ ಹೇಗೆ ತರಲು ಸಾಧ್ಯ? ಕನ್ನಾಡಿಗೆ ದೂರಯಬೇಕೆನ್ನುವ ಈ ಭಾಗಗಳಲ್ಲಿ ಪ್ರತ್ಯೇಕ ಆಡಳಿತ ನಡೆಯಲೇಬೇಡವೇ? ಆದ್ದರಿಂದ ಮೈಸೂರು ಕೇರದಿದ್ದರೆ ಆರ್ಥಿಕ ಮತ್ತು ಭೌಗೋಳಿಕ ದೃಷ್ಟಿಯಿಂದ ಕನ್ನಡ ಏಕೀಕರಣ ಅಸಂಭವ.

ಪ್ರತ್ಯೇಕ ಕೊಡಗು

ವಿಶಾಲ ಕನ್ನಡನಾಡು ಒಂದಾಗಿ ಸುವ್ಯವಸ್ಥಿತ ಆಡಳಿತ ನಡಸುವದು ಕಷ್ಟವಾಗಿರುವಾಗ ಚಿಕ್ಕ ಕೊಡಗು ಹೇಗೆ ಪ್ರತ್ಯೇಕ ನಿಂತೀತು ಎಂಬುದು ಸ್ವಾಭಾವಿಕವಾದ ಪ್ರಶ್ನೆ. ೧೫೯೩ ಚದರ ಮೈಲುಗಳ ವಿಸ್ತೀರ್ಣವಿದ್ದು, ೧,೭೦,೭೬೯ ಜನರಿಂದ ಕೂಡಿದ ಕೊಡಗಿನ ವಾರ್ಷಿಕ ವರಮಾನ ೪೦ ಲಕ್ಷ (ಈ ಮೂರು ವರ್ಷಗಳ ಸರಾಸರಿ) ಆಗಿದೆ. ಅಂದರೆ ಪ್ರತಿಯೊಬ್ಬನಿಂದ ಸರಾಸರಿ ರೂ. ೨೫ ಸರಕಾರಕ್ಕೆ ವರಮಾನವಿದೆಯೆಂದಾಯಿತು. ಕನ್ನಡನಾಡಿನ ಸರಕಾರವು ಪ್ರತಿಯೊಬ್ಬನಿಗೆ ರೂ. ೮/-ರ ಹಿತವೂಡಬಲ್ಲುದಾದರೆ, ಮೈಸೂರು ಸರಕಾರವು ರೂ ೧೫/-ರ ಅನುಕೂಲಮಾಡಿಕೊಡಬಲ್ಲುದಾದರೆ, ಕೊಡಗು ಸರಕಾರವು ಪ್ರತಿಯೊಬ್ಬನಿಗೆ ರೂ ೨೫/-ರ ಅನುಕೂಲ ಕಲ್ಪಿಸಿಕೊಡಬಹುದಾಗಿದೆ. ಈ ಕಾರಣದಿಂದಲೇ ಅನಾದಿಯಿಂದಲೂ ಕೊಡಗು ಸ್ವತಂತ್ರವಿರಲು ಶಕ್ತವಾಯಿತು. ಕೊಡಗಿನಲ್ಲಿ ಯಾವ ಕೈಗಾರಿಕೆಯೂ ಇಲ್ಲ; ಅಭಿವೃದ್ಧಿಯ ಕೆಲಸಗಳೂ ಇಲ್ಲ ಎಂದು ದೂರು ಹೇಳುವವರಿಗೆ ಕರ್ನಾಟಕದಲ್ಲಿ ಏನು ಗಿದೆಯೆಂಬುದನ್ನು ವಿವರಿಸಿ ಸಂಪಾದಕರು ಸ್ಥಳಕೊಟ್ಟರೆ ಬರವ ಭಾರ ಒರೆಯುವೆನು.

ಕೊಡಗಿನಲ್ಲಿ ಪ್ರತಿನಿರೋಧವನ್ನು ಜಾರಿಗೆ ತಂದರೆ ಸರಕಾರದ ಆದಾಯ ಕಡಿಮೆಯಾಗ ತದ; ಆದ್ದರಿಂದ ಕರ್ನಾಟಕಕ್ಕೆ ಸೇರಬೇಡವೆನ್ನವರು ಕೆಲವರಿದ್ದಾರೆ. ಪ್ರತಿನಿರೋಧದ ಸಮಸ್ಯೆ ಕೂಡಗಿಗೆ ಮಾತ್ರ ಕೊಡಗಿನ ಉತ್ಪತ್ತಿಯಲ್ಲಿ ಅರ್ಧ ಮೋದರೂ ಅದೇ ರೀತಿ ಕನ್ನಡನಾಡಿನ ಉದ್ಯಮಗಳ ಮೇಲೆ ಬೀಳುವದು. ಆದ್ದರಿಂದ ಕನ್ನಡದಲ್ಲಿ ಪ್ರತಿನಿರೋಧ ಜಾರಿಗೆ ತಂದುದರಿಂದ ೬೦ ಲಕ್ಷ ರೂಪಾಯಿಗಳ ಆದಾಯ ಕಡಿಮೆ ಬಿದ್ದಿದೆ. ಕೊಡಗು ಫಲವತ್ತಾದ ಜೇಶ. ನೂರಾರು ಕೈಗಾರಿಕೆಗಳನ್ನು ಕೈಕೊಳ್ಳುವ ಸಾಧ್ಯತೆಯಿದೆ. ಇಂದಿನ ಪರಿಸ್ಥಿತಿಯಲ್ಲಾ ಕೊಡಗಿನಿಂದ ಕೇಂದ್ರ ಸರಕಾರಕ್ಕೆ ಹೊಗುತ್ತಿರುವ ಸುಮಾರು ೧೭ ಲಕ್ಷ ಎಕ್ಸೈಸ್ ತೆರಿಗೆ, ಸುಮಾರು ೩ ಲಕ್ಷ ಆದಾಯ ತೆರಿಗೆಯಲ್ಲಿ ಈಗ ಕೇಂದ್ರ ಸರಕಾರವು ಒಪ್ಪಿರುವಂತೆ ಶೇ೨೫ ರಷ್ಟು (ಕೇಳದ ಪಿ. ರಷ್ಟು ದೊರೆಯುವೇ ಕಮಿ ಪ್ರಾಂತಗಳ ಕೇಳಿಕೆ ೭೫) ಕೊಟ್ಟರೂ ಪ್ರತಿನಿರೋಧದಿಂದ ಕಡಿಮೆಯಾಗುವ ಹಣವು ಇಲ್ಲಿ ಭರ್ತಿಯಾಗುವದು. ಪ್ರತಿನಿರೋಧವಾದರೆ ಸರಕಾರಕ್ಕೆ ೮೮ ಲಕ್ಷ ಯೋತೆ ಬೇಳುವದೆನ್ನುವದು ಮಾತ್ರವಲ್ಲ. ಬದಲು ಇಂದು ಕಡುಕಷ್ಟನಷ್ಟಕ್ಕಾಗಿ ಕೊಡಗಿನಲ್ಲಿ ನೆಚ್ಚವಾಗುತ್ತಿರುವ ಸುಮಾರು ೩೫ ಲಕ್ಷ ರೂಪಾಯಿಗಳು ಜನರಲ್ಲಿ ಉಳಿದು ಜವರ ಆರ್ಥಿಕ ಸ್ಥಿತಿ ಒಮ್ಮೆ ಉತ್ತಮಗೊಳ್ಳುವದನ್ನು ಗಮನಿಸಬೇಕು! ಕೊಡಗಿನ ಬಡ ರೈತನಿಗೆ ಒಂದೇ ಕಾಸು ಜೆಚ್ಚಿಗೆ ತೆರಿಗೆ ಹಾಕದೆ ಕೊಡಗಿನ ಆದಾಯವನ್ನು ಸುಲಪವಲ್ಲಿ ೫೦ ಲಕ್ಷಕ್ಕೆ ಏರಿಸುವ ಸಾಧ್ಯತೆ ಇದೆ. ಕೊಡಗಿನಲ್ಲಿ ವರ್ಷಕ್ಕೆ ರೂ. ೫೦೦೦/- ಕ್ಕೆ ಪೆಚ್ಚು ನಿವ್ವಳ ಲಾಭವಿರುವ ವ್ಯವಸಾಯಗಾರರಿಂದ ಒರಿಸ್ಸಾ, ಮದ್ರಾಸಿನಲ್ಲಿರುವಂತೆ ವ್ಯವಸಾಯ ತೆರಿಗೆ ಹಾಕಿದರೆ ಹತ್ತುಲಕ್ಷಕ್ಕೆ ಕಡಿಮೆ ಇಲ್ಲದ (ಈ ಮೊದಲು ಅಂದಾ ಜು ಮಾಡಿದ ತಜ್ಞರೊಬ್ಬರ ಲೆಕ್ಕದಂತೆ) ರೂಪಾಯಿ ವರಮಾನ ಬರಲಿದೆ ಇಂಥ ಸದ್ಯದ ಪರಿಸ್ಥಿತಿಯ ಮಟ್ಟಿಗೆ!

**ಕೊಡಗಿನಲ್ಲಿ ದೊಡ್ಡ ಕೈಗಾರಿಕೆಗಳಿಗೆ, ನೀರಾವರಿಯೋಜನೆಗಳಿಗೆದುಡ್ಡಿಲ್ಲ ಎಂದು ಪ್ರಶ್ನಿಸುವವರಿದ್ದಾರೆ. ದುಡ್ಡು ಎಲ್ಲಿಯೂ ಇಲ್ಲ; ಕೊಡಗಿನಲ್ಲಿಯೂ ಇಲ್ಲ; ಕರ್ನಾಟಕದಲ್ಲಿ ಮೊದಲೇ ಇಲ್ಲ, ಕೇಂದ್ರ ಸರಕಾರ**

(೫ ನೇ ಪುಟ ನೋಡಿ)

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ತಾರೀಕು ೯-೧೧-೧೯೫೬ನೇ ಶುಕ್ರವಾರ | ಸಂಖ್ಯೆ ೪೧

# ಕೊಡಗು

ತಾ. ೯-೧೦-೧೯೪೮ನೇ ಶುಕ್ರವಾರ

## ಸ್ಕೂಲ್ ಫೈನಲ್ ಪರೀಕ್ಷೆ.

ಸ್ಕೂಲ್ ಫೈನಲ್ ತರಗತಿಯಲ್ಲಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಆರಿಸುವಾಗ ತೀಕಡ ಹತ್ತಕ್ಕೆ ಮೀರಿ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರಲು ಹಿಂದುಳಿಯದಂತೆ ನೋಡತಕ್ಕದ್ದು ಎಂದು 'ಪಬ್ಲಿಕ್ ಇನ್ಸ್ಟ್ರಕ್ಷನ್ ಡೈರೆಕ್ಟರ'ರ ಸರ್ಕ್ಯೂಲಾರು ಪ್ರತಿ ತಾಲೆಗಳಿಗೂ ಬಂದಿರಬಹುದು. ಅದರಂತೆ ಮಡಿಕೇರಿ ಹುಡುಗರ ಹೈಸ್ಕೂಲು ಸ್ಕೂಲ್ ಫೈನಲ್ ತರಗತಿಯಲ್ಲಿದ್ದ ಎಲ್ಲಾ ೧೦೨ ವಿದ್ಯಾರ್ಥಿಗಳನ್ನೂ, ವೀರಾಜಪೇಟೆ ಹೈಸ್ಕೂಲು ಎಲ್ಲಾ ೨೫ ವಿದ್ಯಾರ್ಥಿಗಳನ್ನೂ ಪರೀಕ್ಷೆಗೆ ಕೂರಲು ಅನುಮತಿ ಕೊಟ್ಟಿದೆ. ನಾಪೋಕ್ಲು ಹೈಸ್ಕೂಲು ತನ್ನ ೩೫ ವಿದ್ಯಾರ್ಥಿಗಳಲ್ಲಿ ೨೩ ಜನರನ್ನು ಮಾತ್ರ ಆರಿಸಿದೆ. ಮಡಿಕೇರಿ ಹುಡುಗಿಯರ ಹೈಸ್ಕೂಲು ತನ್ನ ೩೫ ವಿದ್ಯಾರ್ಥಿನಿಯರಲ್ಲಿ ೨೭ ಜನರನ್ನು ಆರಿಸಿದೆ. ಸೋಮವಾರಪೇಟೆ ಮತ್ತು ಪೊನ್ನಂಪೇಟೆ ಹೈಸ್ಕೂಲುಗಳಲ್ಲೂ ಈ ವರೆಗಿದ್ದ ಹಳೆ ಸಂಪ್ರದಾಯ ಪ್ರಕಟವಿಟ್ಟನ್ನೆ ಆಯ್ಕೆಯೇ ಆಗಿರಬಹುದು. ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳ ಮೂದರಿಯನ್ನು ನೋಡಿ ಉಳಿದ ಎಲ್ಲಾ ಹೈಸ್ಕೂಲುಗಳ ಸ್ಕೂಲ್ ಫೈನಲ್ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರುವಂಥಾ ಆನು ಮಾಡಿದ್ದರೆ ಬಹು ಚೆನ್ನಾಗಿತ್ತು. ಈಗ ಅದನ್ನು ಮಾಡುವದು ಒಂದು ವೇಳೆ ಆ ಸಾಧ್ಯವಾದರೆ 'ಪಬ್ಲಿಕ್ ಇನ್ಸ್ಟ್ರಕ್ಷನ್ ಡೈರೆಕ್ಟರ್' ಸರ್ಕ್ಯೂಲಾರಿನಂತೆ ಲೇಕಡ ೧೦ಕ್ಕೆ ಕಡಿಮೆಯಿಲ್ಲದೆ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರುವ ಅಸ್ಪದ ಮಾಡಬೇಕಾದುದು ಕರ್ತವ್ಯವಿದೆ. ಈ ಹೈಸ್ಕೂಲುಗಳು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಹಾಗೆ ವರ್ತಿಸುವರಾಗಿ ನಂಬಲಾಗಿದೆ.

ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಆರಿಸುವ 'ಸಿಲೆಕ್ಷನ್' ಪದ್ಧತಿಯು ಹಲವು ವರ್ಷಗಳಿಂದಲೂ ಇದೆ. ಯೋಗ್ಯ ವಿದ್ಯಾರ್ಥಿಗಳನ್ನು ಮಾತ್ರ ಆರಿಸಿ ತಮ್ಮ ಶಾಲೆಯ ಪರೀಕ್ಷಾ ಫಲಿತಾಂಶವು ಉತ್ತಮವಾಗಿದೆಯೆಂದು ತೋರಿಸುವದು ಶಾಲೆಗಳ ಸಂಪ್ರದಾಯ. ಈ ಸಂಪ್ರದಾಯನೇ 'ಸಿಲೆಕ್ಷ'ನಿನ ಉಗಮವೂ ಆಯಿತು. ಶಾಲೆಯಲ್ಲಿ ನೂರು ವಿದ್ಯಾರ್ಥಿಗಳಿದ್ದರೆ ಅವರಲ್ಲಿ ಉತ್ತಮ ೪೦ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಆರಿಸಿ ಅವರು ೪೦ ಜನರೂ ತೇರ್ಗಡೆಯಾಗಿ ಶಾಲೆಯು ಪರೀಕ್ಷಾ ಫಲಿತಾಂಶವನ್ನು ಹೆಚ್ಚಿಸಿಕೊಳ್ಳುವುದೇ 'ಸಿಲೆಕ್ಷನ್' ಪದ್ಧತಿಯ ಉದ್ದೇಶವಾಗಿತ್ತು. ಆದರೆ ಹೆಚ್ಚಿನ ಸಂದರ್ಭದಲ್ಲಿ ಈ ಉದ್ದೇಶವು ಸಫಲವಾಗುವದಿಲ್ಲ. 'ಸಿಲೆಕ್ಷನ್' ದೊರೆಯದ ವಿದ್ಯಾರ್ಥಿಗಳಲ್ಲಿ ಪರೀಕ್ಷೆಯನ್ನು ಪಾಸಾಗಬಹುದಾದವರೂ ಉಳಿದುಹೋಗಬಹುದು. ಹಾಗಾಗುವದು ವಿದ್ಯಾರ್ಥಿಗೆ ಮತ್ತು ವಿದ್ಯಾರ್ಥಿಯ ಪೋಷಕರಿಗೆ ನಷ್ಟದಾಯಕವಾದುದು. ಈ 'ಸಿಲೆಕ್ಷನ್' ಪದ್ಧತಿಯನ್ನು ತೆಗೆದುಹಾಕಬೇಕು ಎಂಬ ಚಳವಳಿ ಹಲವು ವರ್ಷಗಳಿಂದ ನಡೆಯುತ್ತಿತ್ತು. ಕಡೆಗೆ ಸ್ವತಂತ್ರ ಭಾರತದಲ್ಲಿ ಈ ಪದ್ಧತಿಯು ಶಿಥಿಲಗೊಂಡು ಕ್ರಮಶಃ ಅದು ಮಾಯವಾಗುವ ಚಿಹ್ನೆಗಳು ಕಾಣುತ್ತಿವೆ.

ಈ ಸಂದರ್ಭದಲ್ಲಿ ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೂ ಒಂದು ಎಚ್ಚರಿಕೆಯ ಮಾತು ಹೇಳಬಯಸುತ್ತೇವೆ. ಮುಂದೆ 'ಸಿಲೆಕ್ಷನ್' ಪದ್ಧತಿಯು ಸಂಪೂರ್ಣವಾಗಿ ಯವಾಗುವದು ಅವರ ಮೇಲೆಯೇ ನಿಂತಿದೆ. ತಮಗೆ ದೊರೆತ ಈ ಸಂದರ್ಭವನ್ನು ಉಪಯೋಗಿಸಿ ಪ್ರತಿಯೊಬ್ಬನೂ ತೇರ್ಗಡೆಯಾಗುವ ಪ್ರಯತ್ನವಾಡಬೇಕು. ಈ ವರ್ಷ ಅತ್ಯುತ್ತಮವಾದ ಫಲಿತಾಂಶ ದೊರೆತರೆ ಮುಂದೆಯೂ 'ಸಿಲೆಕ್ಷನ್' ಇಲ್ಲದೆ ಎಲ್ಲಾ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹಿಸುವ ವಿಚಾರವನ್ನು ಶಾಲಾಧಿಕಾರಿಗಳು ಮಾಡುವರು. ವಿದ್ಯಾರ್ಥಿಗಳು ತಮ್ಮ ತಾಲೆಗಳ, ಮುಂದೆ ಬರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ವಪ್ರಯತ್ನವಾಡಿ ಉತ್ತಮ ಫಲಿತಾಂಶವನ್ನು ತರುವರೆಂದು ನಮ್ಮ ಆಶೆ.

## ವರ್ತಮಾನ.

ಡೆಲ್ಲಿಯಲ್ಲಿರುವ ಇಂಡಿಯಾ ಕ್ಷಯರೋಗ ಸಂಘದ ಕಾರ್ಯದರ್ಶಿಯವರಾದ ಶ್ರೀ ಬೊಳಕರಂಡ ಕಾರ್ಯಪ್ಪನವರಿಗೂ, ಬೆಂಗಳೂರಿನಲ್ಲಿರುವ ಶ್ರೀ ಪಾಲೇಕಂಡ ಮೇದಪ್ಪನವರ ಪತ್ನಿಯವರಿಗೂ ಹೊಸ ವರ್ಷದ ಬಿರುದಾವಳಿಯಲ್ಲಿ ಫೈಸರ್-ಇ-ಹಿಂದ್ ಮೆಡಲು (ಬ್ರಾನ್ಸ್) ಕೊಡಲ್ಪಟ್ಟಿದೆಯೆಂದು ತಿಳಿಯಬರುತ್ತದೆ.

ಭತ್ತದ ಬೆಲೆಯನ್ನು ಮದ್ರಾಸು ಮತ್ತು ಮೈಸೂರಿನಲ್ಲಿರುವಂತೆ ಗಾಡಿಗೆ ರೂ. 155-0-0ಕ್ಕೆ ನಿರ್ಣಯಿಸಿ ಕೇಳಿಕೊಳ್ಳಲು ಪ್ರಾಂತೀಯ ಪಡಿರೇಷನಿನ ಪರವಾಗಿ ಚುನಾಯಿತರಾದ ಶ್ರೀ ಗಳಾದ ಪಿ. ವಿ. ಬೆಳ್ಯಪ್ಪ, ನಡಿಕೇರಿಯಂಡ ಸೋಮಯ್ಯ ಮತ್ತು ಪಾಂಡಂಡ ಮುದ್ದಪ್ಪನವರೂ, ವೀರಾಜಪೇಟೆ ಸಾರ್ವಜನಿಕ ಸಭೆಯ ಪರವಾಗಿ ಆರಿಸಲ್ಪಟ್ಟ ಶ್ರೀ ಗಳಾದ ಮೊತಂಡ ಚಂಗಪ್ಪ, ಬಲ್ಲಡಿಚಂಡ ಬೋಪಯ್ಯ ಮತ್ತು ಪಿ ಐ ಬೆಳ್ಯಪ್ಪನವರೂ ಈ ದಿನ ಚೀಫ್ ಕಮಿಷನರರವರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದಾರೆಂದು ತಿಳಿಯಬರುತ್ತದೆ.

ತಾ. ೫-೧೦-೪೮ರಲ್ಲಿ ಕಮ್ಯೂನಿಸ್ಟ್ ಪಕ್ಷದ ಶ್ರೀ ಎಸ್. ಎನ್. ಹೊಳ್ಳ ಮತ್ತು ಶ್ರೀ ಜೆಕ್ಕರೆ ಮೋಟಯ್ಯ ಇವರು ಮಡಿಕೇರಿಯ ಜಮೀನ್ದಾರರ ಸಂಘದ ಕಟ್ಟಡದ ಎದುರು ಕರ್ನಾಟಕ ಏಕೀಕರಣದ ವಿಚಾರ ಭಾಷಣ ಮಾಡಿದರು.

ತಾ ೬-೧೦-೪೮ ರಲ್ಲಿ ಶ್ರೀ ಅವಿಲಮೂದಂಡ ಉತ್ತಯ್ಯನವರು ಇವರ್ಕಿ ಗೃಹ ಕಲಹದ ಸಂಬಂಧ ಗುಂಡ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವದಾಗಿಯೂ, ಪೊಲೀಸು ತನಿಖೆ ನಡೆಸುತ್ತಿರುವುದಾಗಿಯೂ ವಾರ್ತೆ.

ಕೇಂದ್ರ ಸರಕಾರದ ನಿರ್ಣಯದಂತೆ ಪ್ರತಿ ಸರಕಾರಿ ಉದ್ಯೋಗಿಗೆ ವರ್ಷಕ್ಕೆ ೩೦ ದಿನಗಳ 'ಕ್ಯಾಜುವಲ್' ರಜ ಕೊಡಬಹುದೆಂದೂ, ಈ 'ಕ್ಯಾಜುವಲ್' ರಜವನ್ನು ಬೇರೆ ಅಧಿಕೃತ ಸರಕಾರಿ ರಜೆಯಾದ ಆದಿತ್ಯವಾರಗಳೊಡನೆ ಸೇರಿಸಿ ತೆಗೆದುಕೊಳ್ಳಬಹುದಾದರೂ ಒಂದು ಬಾರಿಗೆ ಈ ರಜವು ಹತ್ತು ದಿನಗಳಿಗೆ ಮೀರಬಾರದಾಗಿ ಪ್ರಕಟಿಸಲಾಗಿದೆ.

ಗರ್ವಾಲೆ ಗ್ರಾಮದ ಶ್ರೀ ಕಾಳಯರ ಕಾಳಪ್ಪನವರು ತಾ. ೨೮-೧೦-೪೮ರಲ್ಲಿ ಒಂದು ದೊಡ್ಡ ಕರಡಿಯನ್ನು ಗುಂಡಿಕ್ಕಿ ಕೊಂದಿರುವರು.

## ಬಾತ್ಮಿ.

## ಮತ್ತೊಮ್ಮೆ ಅಸಂಬದ್ಧ ಪ್ರಲಾಪ.

### ಸಹಕಾರ ಸಂಘಗಳ ಮೇಲೆ ಅಪಪ್ರಚಾರ.

ಸಹಕಾರಿಗಳೇ, ಈಗ ಕೆಲವು ದಿನಗಳಿಂದ 'ಜನ್ಮಭೂಮಿ' ಪತ್ರಿಕೆಯಲ್ಲಿ ಸಹಕಾರ ಸಂಸ್ಥೆಗಳನ್ನು ಕುರಿತು ಒಂದೆರಡು ಅಪಪ್ರಚಾರದ ಬಾತ್ಮಿಗಳು ಪ್ರಕಟವಾಗಿರುವುದು ಸರಿಯಷ್ಟೆ. ಸಹಕಾರಿ ಸಂಘಗಳ ಚುನಾಯಿತ ಕಾರ್ಯಕಾರಿ ಮಂಡಳಿಯಲ್ಲಿ ಯಾವ ಸ್ಥಳ ದೊರೆಯದ ನಿರಾಶೆಯಿಂದಲೋ ಅಥವಾ ಸಹಕಾರ ಸಂಸ್ಥೆಗಳ ಅಭಿವೃದ್ಧಿಯಿಂದ ತನ್ನ ಸ್ವಂತ ಲಾಭಕ್ಕೆ ಧಕ್ಕೆ ತಗಲುತ್ತೆ ಎಂಬ ಸ್ವಾರ್ಥದೃಷ್ಟಿಯಿಂದಲೋ ಈ ತರದ ನಿಜವಲ್ಲದ ಆರೋಪದ ಲೇಖನಗಳನ್ನು ಪ್ರಕಟಿಸಿದ್ದಾಗಿರಬೇಕು. ಹೀಗೆ ಪ್ರಕಟಿಸಿದ್ದು ಇದು ಸೌಜನ್ಯವಲ್ಲ. ಈ ಮೊದಲು ಕೆಲವು ಸಾರಿ, ಈ ತರದ ನಿಜವಲ್ಲದ ಆರೋಪಗಳ ಬಾತ್ಮಿಗಳ ಉದ್ದಿಶ್ಯವನ್ನು ಸಹಕಾರಿಗಳು ಅರಿತು, ಅವುಗಳಿಗೆ ತಿರಸ್ಕಾರ ಭಾವವನ್ನು ತೋರಿಸಿದುದರಿಂದ ಇಂಥಾ ಅಪಪ್ರಚಾರವು ಕೆಲವು ಕಾಲ ನಿಂತಿತ್ತು. ಈಗ ಪುನಹ ಯಾವುದೋ ಉದ್ದಿಶ್ಯದಿಂದ ಪ್ರಾರಂಭವಾಗಿದೆ

ಕೆಲವು ಸಂಘಗಳಲ್ಲಿ ಹಣ ಯಾ ಭತ್ತವನ್ನು ದುರುಪಯೋಗ ಪಡಿಸಿದ್ದನ್ನು ಕುರಿತು ಪ್ರಸ್ತಾಪಿಸಲಾಗಿದೆ. ಅನೇಕ ವರ್ಷಗಳಿಗೆ ಹಿಂದೆ ಪೊನ್ನಂಪೇಟೆ ಭತ್ತಸ್ಟೋರಿನಲ್ಲಿ ಕಾಣೆಯಾದ ಭತ್ತದ ವಿಚಾರ, ಐದು ಆರು ವರ್ಷಗಳಿಗೆ ಹಿಂದೆ ಕೈಕೇರಿ ಭತ್ತದ ಸ್ಟೋರಿನಲ್ಲಿ ಬತ್ತ ದುರುಪಯೋಗದ ಪಡಿಸಿದ ವಿಚಾರ, ಪೊನ್ನಂಪೇಟೆ ಟೌನ್‌ಸಂಘದ ಕೆಲವು ದುರುಪಯೋಗದ ವಿಷಯ, ಮೂರು ವರ್ಷಗಳ ಹಿಂದೆ ದಕ್ಷಿಣ ಕೊಡಗು ಸ್ಟೋರಿನಲ್ಲಿ ಸಕ್ಕರೆ ಕಡಿಮೆಯಾದ ವಿಚಾರ ಇತ್ತೀಚೆಗೆ ಕಿಗ್ಗಾಲು ಏಕೋಪ ಸಹಕಾರ ಸಂಘದಲ್ಲೂ, ಕೊಟ್ಟೂರು ಸ್ಟೋರಿನಲ್ಲೂ, ವಿದ್ಯಾಇಲಾಖಾ ಉದ್ಯೋಗಸ್ಥರ ಸಂಘದಲ್ಲೂ, ಗುಮಸ್ತರುಗಳು ಹಣದುರುಪಯೋಗ ಪಡಿಸಿದ್ದನ್ನು ಪೋಲಿಸಿಗೆ ತನ್ನೆ ಬಗ್ಗೆ ಕೇಸು ಕೊಡಲಾಗಿದೆ ಎಂಬದನ್ನು ಅಪಪ್ರಚಾರಕರು ಮರೆತಿರುವರೇ! ನೂದಲಿನ ಎರಡು ಸಂಘಗಳಲ್ಲಿ ಪೊಲೀಸಿನವರು ರುಜುವಾತು ಇಲ್ಲವೆಂದು ಕೇಸನ್ನು ಬೀಸಿಟು ಮಾಡಿರುವರು. ಇತ್ತೀಚೆಗಿನ ಮೂರು ಕೇಸುಗಳ ವಿಚಾರ ನಡಿಸುತ್ತಿದ್ದಾರೆ.

ಇವೆಲ್ಲಾ ಕೇಸುಗಳಲ್ಲಿ ಆದ ಹಣದ ನಷ್ಟದ ಬಾಬಿನಲ್ಲೂ ಸಂಬಂಧಪಟ್ಟ ಗುಮಾಸ್ತರುಗಳ ಮೇಲೆ ರಿಜಿಸ್ಟ್ರಾರವರ ಕೋರ್ಟಿನಲ್ಲಿ ದಾವಾ ಆಗಲಾಗಿ ತಕ್ಕ ತೀರ್ಪು ಕೊಡಲ್ಪಟ್ಟಿದೆ ಮತ್ತು ಈಗಲೂ ಕೊಡಲ್ಪಡುತ್ತಿದೆ. ಕೆಲವು ಸ್ಟೋರುಗಳು ಮುಚ್ಚಿಹೋದ ವಿಚಾರಗಳನ್ನು ಎತ್ತಿ ಹೇಳಿರುತ್ತಾರೆ. ಪೊನ್ನಂಪೇಟೆ, ಅತ್ತಿ, ಮಡಿಕೇರಿ ಮತ್ತು ಸೆಂಬ್ರುಲ್ ಸ್ಟೋರುಗಳೂ ಹತ್ತು ಹದಿನಾರು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಾಗ್ಗೆ ಸಾಕಷ್ಟು ಅನುಭವ ವಿಲ್ಲದೆ ನಷ್ಟದಿಂದ ನಡಿಸಲ್ಪಟ್ಟ ಕಾರಣ ಹೆಚ್ಚಿನ ನಷ್ಟವನ್ನು ಪಡೆಯಲು ಅವುಗಳನ್ನು ಮುಚ್ಚಬೇಕಾಯಿತು. ಹೆಚ್ಚಾಗಿ ಕೈತಕಂದಲೇ ನಡಿಸಲ್ಪಡುವ ಸಹಕಾರಿ ಸಂಸ್ಥೆಗಳಲ್ಲಿ, ಅನುಭವ ಬಂದಂತೆ ಅವುಗಳಲ್ಲಿ ನಷ್ಟವಾಗುವದನ್ನು ಮುಚ್ಚುವುದು, ಶಿಥಿಲವಾಗುತ್ತಿರುವುದನ್ನು ಭದ್ರಪಡಿಸುವುದು ಅವಶ್ಯವಿರುವಲ್ಲಿ ಹೊಸ ಸಂಘಗಳನ್ನು ನೈವಸ್ಥಾಪಿಸುವುದು ಸಹಕಾರ ಚಳವಳಿಯ ಧ್ಯೇಯ-ಧೋರಣೆಯಾಗಿದೆ. ಇದು ಎಲ್ಲಾ ದೇಶದ ಸಹಕಾರ ಚಳವಳಿಯಲ್ಲಿ ಸಾಮಾನ್ಯವಾಗಿ ಅವಲಂಭಿಸುತ್ತಿರುವ ಮಾರ್ಗವಾಗಿದೆ. ಸಹಕಾರ ಇಲಾಖಾ ಅಧಿಕಾರಿಗಳ ಪರಿಶೋಧನೆಯೂ, ಬ್ಯಾಂಕಿನ ಸುಪರ್‌ವೈಜರುಗಳ ಮೇಲುಸ್ತುವಾರಿಯೂ ಕಡಿಮೆಯೂವುದರಿಂದ ಈ ರೀತಿಯ ಅನಾಹುತಕ್ಕೆ ಕಾರಣವೆಂದು ಹೇಳುತ್ತಿದ್ದಾರೆ ಬದಲು ಪರಿಶೋಧನೆ ಮತ್ತು ಮೇಲ್ವಿಚಾರಣೆಯು ಆಗಿಂದಾಗ್ಗೆ ನಡೆಯುತ್ತಿರುವುದರಿಂದಲೇ ಈ ತರದ ದುರುಪಯೋಗಗಳು ಹೊರಬಿದ್ದದ್ದು ದಾಗಿದೆ. ಸುಮಾರು 400 ಸಂಘಗಳಿರುವಲ್ಲಿ ವರ್ಷಕ್ಕೆ ಒಂದೆರಡು ಇಂಥಾ ಕೇಸುಗಳಾಗುವುದರಲ್ಲಿ ವಿಶೇಷವೇನಿಲ್ಲ. ಆದರಲ್ಲೂ ಅವುಗಳ ಮೇಲೆ ಯಃಕ್ತರೀತಿ ಕ್ರಮ ಜರಗಿಸಲ್ಪಟ್ಟಿದೆ.

ಹಿಂದೂಸ್ಥಾನದಲ್ಲೇ ಹೆಸರುಗೊಂಡಿರುವ ಮದ್ರಾಸು ಪ್ರೈಸ್ಲಿ ಕೇನ್ ಸ್ಟೋರಿನಲ್ಲಿ ಗುಮಸ್ತರೇ ಕಾಣೆಯಾಗಿರುವುದು, ಕೆಲವು ವರ್ಷಗಳ ಹಿಂದೆ ಮದ್ರಾಸು ಹೈಕೋರ್ಟಿನ ಉದ್ಯೋಗಸ್ಥರ ಸಂಘದಲ್ಲಿ ಹಣ ದುರುಪಯೋಗವಾದುದಲ್ಲದೆ, ಕೊಡಗಿನ ಸರಕಾರದ ಬಿಜಾನೆಯಲ್ಲಿ ಮತ್ತು ನಾಡುಖುಚೇರಿಗಳಲ್ಲಿ ಹಣವು ಕಾಣೆಯಾದುದು ಇಂದುವಾಗ್ಯೆ, ಮದ್ರಾಸು ಸಹಕಾರ ಚಳವಳಿವಾಗಲಿ, ಕೊಡಗಿನ ಸರಕಾರವಾಗಲಿ ಹಾಳೆಂದು ಹೇಳಲು ಸಾಧ್ಯವಿದೆಯೇ!

ಸಹಕಾರ ಇಲಾಖೆಗೆ ಒಬ್ಬ ಪ್ರತ್ಯೇಕ ಅಧಿಕಾರಿ ಬೇಕೆಂದು ಸಹಕಾರಿಗಳು ಈ ಮೊದಲು ನಡೆಸಿದ ಚಳವಳಿಯು ವ್ಯರ್ಥವಾಗಿಲ್ಲವೇನೋ? ಪ್ರತ್ಯೇಕ ರಿಜಿಸ್ಟ್ರಾರರ ನೇಮಕವಾದ ಮೇಲೆ ಕೊಡಗಿನ ಸಹಕಾರ ಸಂಘಗಳು ದಿನದಿನಕ್ಕೆ ಅಭಿವೃದ್ಧಿ ಹೊಂದಿ, ಇಡೀ ಹಿಂದೂಸ್ಥಾನದಲ್ಲಿ ಒಂದು ನೇ ಸ್ಥಾನವನ್ನು ಪಡೆದದ್ದು ಈ ಅಪಪ್ರಚಾರಕರಿಗೆ ಆಗುಮೆಯನ್ನುಂಟು ಮಾಡಿದಿಯೋ?

ಪ್ರಾಂತೀಯ ಸಹಕಾರ ಬ್ಯಾಂಕು ಮತ್ತು ಫೆಡರೇಷನ್ ಇವುಗಳ ಡೈರೆಕ್ಟರುಗಳಲ್ಲಿ ಬಲಿಷ್ಠವಿರುವ ವಾರ್ಟ್‌ಗಳಲ್ಲಿ ಪ್ರೋಹಿತನ್ನು ಹೂರಿಸಿದ್ದಾರೆ. ಬಾತ್ಮಿದಾರರ ನಿಜವಾದ ಗುಟ್ಟು ಈ ಆರೋಪದಿಂದ ಹೊರಬಿದ್ದಿದೆ ಎಂಬದರಲ್ಲಿ ಸಂಶಯವಿಲ್ಲ ಈ ಸಂಸ್ಥೆಗಳಲ್ಲಿ ನಡೆಯುವ ವಾರ್ಷಿಕ ಚುನಾವಣೆಗಳಲ್ಲಿ ಪೈಪೋಟಿ ನಡೆಯಿಸಿ, ಹಲವು ಸಾರಿ ಸೋತು, ನಿರಾಶೆಗೊಂಡವರು ಈ ತರಹದ ಬರವಣಿಗೆಗಳ ಸಂಪ್ರಕಟಿಸುವುದರಲ್ಲಿ ಆಶ್ಚರ್ಯವೇನಿದೆ. ಬಾತ್ಮಿದಾರರ ದೃಷ್ಟಿಯಲ್ಲಿ ಮುಂಬರುವ ಚುನಾವಣೆಯು ಇದೆ ಎಂದರೆ ತಪ್ಪಾಗಲಾರದು. ಆದರೆ ದೇಶದ ಸಹಕಾರಿಗಳಿಗೆ ಸ್ವಾರ್ಥತೆಯನ್ನು ಬಿಟ್ಟು, ಒಡಗ್ರಾಮಸ್ಥರ ಅಭಿವೃದ್ಧಿಗಾಗಿ ಹೆಣಗಾಡುವವರು ಯಾರಿರುವರೆಂಬುದು ಗೊತ್ತಿಲ್ಲದೆ ಇಲ್ಲ. ಆದ ಕಾರಣ ತಕ್ಕ ಮಟ್ಟಿಗೆ ತಿಳುವಳಿಕೆಯಿರುವ ಕೊಡಗಿನ ಸಹಕಾರಿಗಳು ಅಪಪ್ರಚಾರಕ್ಕೆ ಬಲಿಬೀಳದೆ ವಿವೇಚನೆಯಿಂದ ವರ್ತಿಸುವರೆಂಬುದರಲ್ಲಿ ಸಂಶಯವಿಲ್ಲ.

ಸಹಕಾರಿ.

# ಸಬ್ ಫೆಡರೇಶನ್ ಯೋಜನೆ.

## ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ತಾತಾಚಾರ್ಯ ಶರ್ಮ ಇವರ ಸೂಚನೆ.

ಈ ಅಧ್ಯಕ್ಷಪದವಿಯು ಜವಾಬ್ದಾರಿ ಎನ್ನೆಬುದು ಸ್ಪಷ್ಟವಾಗುತ್ತದೆ. 'ಕನ್ನಡ ನಾಡನ್ನು ಕಟ್ಟಲು ಹೆಣಗಾಡಬೇಕು' ಈ ವಾಕ್ಯವೊಂದರಲ್ಲಿ ಸಮ್ಮೇಳನದ–ಪರಿಸ್ಥಿತಿ–ಕರ್ತವ್ಯ ಏನೆಂಬುದು ಸೂಚಿತವಾಗಿದೆ. ಅಧ್ಯಕ್ಷನೆಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ. ಈ ಸಮ್ಮೇಳನದ ಮುಖಪರಿಸ್ಥಿತಿಗೆ ಸುಖ–ಕನ್ನಡ ಜನಪದದ ಮಹಾಮುಖ ಕನ್ನಡ ನಾಡಿನ ಜನರು 'ನಾಡನ್ನು ಕಟ್ಟಬೇಕು' ಎಂಬ ಸಂಕಲ್ಪ ಗೂಡಿ ಅನೇಕ ವರ್ಷಗಳಾದವು ಆ ಸಂಕಲ್ಪವು ಫಲಿಸಿ ಸಿದ್ಧಿಯು ಕಾಲ ಸಮೀಪಿಸುತ್ತಿರುವ ಹಾಗಿದೆ. 'ಹಿಗೋ ಸಿದ್ಧಿಸಿತು' ಎಂಬುಕಾಶರಗೋಡಿನವೆಂದಿಕೆಯಿಂದ ಕನ್ನಡಿಗರೆಲ್ಲ ಉಚ್ಚ ಕಂರವಿಂದ, ಸಾಗರಘೋಷವನ್ನು ಮಿಂಚಿ ಘೋಷಿಸಿದ್ದಾದರೆ ಸಿದ್ಧಿಸಿತು! ಇಚ್ಛಾಶಕ್ತಿಯನ್ನು ಮೀರಿಸಿ ಶಕ್ತಿ ಮತ್ತೆಲ್ಲಿಂದಿಲ್ಲ

### ಅಭಿಮಾನ ಧನರಾಗಬೇಕು.

ಇಚ್ಛಾಶಕ್ತಿಯು ಜಾತಿಗೆ ಮತ್ತೊಂದು ಇಚ್ಛೆಯ ಹೊಡಲನೆಯ ಹೆಜ್ಜೆಯಾಗಿದೆ, ಪ್ರಗತಿಪಥದಲ್ಲಿ, ಎಂಥಹಾ ಧನೆಯ ಯಂತ್ರನಗರದಲ್ಲಿ ಅಭಿನವನವು ಎಡಪನೆಯ ಹೆಜ್ಜೆ ಅಭಿಮಾನವಿಲ್ಲದೆ ಇರುವಿಕೆಯೇ ಇಲ್ಲಿ. ಅಭಿಮಾನರಹಿತರಾಗ ಎಷ್ಟಾಪ್ರ ದೇಶವೇ, ಒ ತೀ ಶೂನ್ಯ ಸ್ವಾಮಿ ಎನಬೇಕು. ಎನ್ನವರು ತನ್ನ ನಾಡೆ ಸ್ವರ್ಗವು, ಎನ್ನ ಜೀವಿ ಎಂಬ ಅಭಿಮಾನ ಬರಬೇಕು. ಅಂತೆಯೇ ತನ್ನ ದೇಶ, ತನ್ನ ಜನ, ತನ್ನ ಜನರದು ಎಂಬ ಅಭಿಮಾನ ಬರಬೇಕು.

### ಸಂಸ್ಕೃತಿ-ಪ್ರಜಾತಂತ್ರ.

ಸಾಹಿತ್ಯವು ಜೀವನವಾರರೆ ಜನಜೀವನವನ್ನು ಕಲಾವಿದರು, ಸಾಹಿತಿಯು, ಸೌಂದರ್ಯೋಪಾಸಕರು, ಸಾಧಕರು ಮೂಲಕ ರೂಪಗೊಂಡ, ಸಂರ್ಯಾಗೊಂಡು. ವ್ಯಕ್ತಿವಾಗುತ್ತದೆ; ಆ ವ್ಯಕ್ತಿಯು ಸಾಹಿತ್ಯದಲ್ಲಿ ಗದ್ಯ, ಪದ್ಯ, ನಾಟಕ ವಿವರ್ಸ ಹೀಗೆ ನಾನಾ ರೂಪ ಹೊಂದುತ್ತದೆ. ಕಲೆಯಲ್ಲಿ ಚಿತ್ರ, ರೂಪ, ಶಿಲ್ಪ ಮೊದಲಾದ ವರ್ಣ, ಮೃದುರೇಖಾವಿಲಾಸದಲ್ಲಿ ಕಾಣಬರುತ್ತದೆ. ಗಾಯನದಲ್ಲಿ ನಾದಾಂಪದಲ್ಲಿ ಕೇಳಬರುತ್ತದೆ.

ಇದು ಪ್ರಜಾತಂತ್ರದ ಯುಗ. ಪ್ರಜೆಯ ಆಪೇಕ್ಷೆಯಂತೆ ಸಂಸ್ಕೃತಿಯ ಪ್ರಪಂಚ. ಈ ಅಪೇಕ್ಷೆಗಳು ನಿರ್ಮಲವಾಗಿರಬೇಕು; ಆದರ್ಶಯುತವಾಗಿರಬೇಕು. ಪ್ರಜಾತಂತ್ರವು ಸಾಮಾನ್ಯ ಜನರಲ್ಲಾ ಮಹಾದವೇಕ್ಷೆಗಳನ್ನು ಹುಟ್ಟಿಸುತ್ತದೆ. ಮತ್ತೆ ಸಂಸ್ಕೃತಿಯು ಈ ಅಪೇಕ್ಷೆಗಳಿಗೆ ಶಿಕ್ಷಣ ಕೊಟ್ಟು, ಸಂಯಮವಿತ್ತು, ಸೌಂದರ್ಯವಿತ್ತು, ಶಕ್ತಿಯುತವನ್ನಾಗಿ ಮಾಡುತ್ತದೆ. ಭಾವಸಂಯಮ, ಶಕ್ತಿಯ ಉತ್ಪತ್ತಿ, ಸಂವರ್ಧನ ಇದೇ–ಸಂಸ್ಕೃತಿಯ ಮೂಲ.

ಪ್ರಜಾತಂತ್ರವು ಸ್ಥಿರಪಡಬೇಕಾದರೆ, ಪ್ರಜಾತಂತ್ರಕ್ಕೆ ಯಾವ ಪೀಡೆಯೂ ಇಲ್ಲದೆ ಅವರ ಯೋಗಕ್ಷೇಮ ಸಾಧನ ಯೋಗ್ಯವಾದ ವಾತಾವರಣ, ಜೀವನ, ವ್ಯವಸ್ಥೆ ಇರಬೇಕಾದರೆ ಪ್ರಜೆಗಳ ಪ್ರಜ್ಞೆ ಬೆಳೆಯಬೇಕು. ಅವರ ಲೋಕಜ್ಞಾನದ ಮಟ್ಟ ಹೆಚ್ಚಬೇಕು. ಆ ಹೆಚ್ಚಿನ ಮಟ್ಟದಿಂದ ಕೆಳಕ್ಕೆ ಇದು ಒಂದು ಗೆರೆಯೂ ಇಳಿಯದಂತೆ ನೋಡಿಕೊಳ್ಳಬೇಕು.

ಕಲಾವಿದ, ಸಾಹಿತಿ ಇವರಿಬ್ಬರೂ ರಾಷ್ಟ್ರಸ್ಥಿತಿಕಾರಣಕರ್ತರು ಸಾಹಿತಿಗಳೆನ್ನು ಸ್ಫೂರ್ತಿಗೂಡಬೇಕು; ಕಲಾವಿದರೆನ್ನು ನಿರ್ಮಾಣಗೂಡಬೇಕು. ಅವರು ಇಂದಿನ ಜನಜೀವನದ ಪ್ರತಿಬಿಂಬವಾಗಿರಬೇಕು. ಒಂದು ಕಡೆ ಇವರು ನಡೆಯುವ, ಪ್ರಸಕ್ತ ಜೀವನದ ಪತ್ರಚಿತ್ರಗಳನ್ನೆತ್ತಿ ತೋರಿಸುವರು, ಇನ್ನೊಂದು ಕಡೆ ಇವರು ಭವಿಷ್ಯಕಾವ, ಸಾಧಿಸಬೇಕಾದ ಆದರ್ಶ ಜೀವನ ಚಿತ್ರಗಳನ್ನು ನಿರ್ಮಿಸುವುದು ಇವರಿಂದ ಕೆಲಸಗಳೂ ಎಂಬಂತಿರಬೇಕು. ಈ ಕೆಲಸಗಳಿಗೆ ಬೇಕಾದ ಶಕ್ತಿಯ ಮೂಲವನ್ನು ಪ್ರಜೆಯಲ್ಲಿ ಉತ್ಪತ್ತಿ ಮಾಡಬೇಕು. ಅಂತಹ ಶಕ್ತಿಯು ಉತ್ಪತ್ತಿ ಸ್ಥಾನವೆನಿಸಬೇಕು ಸಾಹಿತ್ಯ ಪರಿಷತ್ತು.

### ಶಾಂತಿಗೆ ಸ್ವಾಗತ.

ಕರ್ನಾಟಕದಲ್ಲಿ ಕ್ರಾಂತಿಯನ್ನು ಇಂದು ತರಣ ಲೋಕವು ಅಪೇಕ್ಷಿಸುತ್ತದೆ. ಅಪೇಕ್ಷಿಸುವುದೇನು? ಕ್ರಾಂತಿಚಿತ್ಕಲೆಯೆ ನಾಡನ್ನೆಲ್ಲ ತಿರಿಸಿ ಜೀಯುವನ್ನೆಲ್ಲ ದಹಿಸುತ್ತದೆ. ಸಿದ್ರಿಯಾಚಿಜ್ಞರಗೊಳ್ಳುವಂತೆ ಎಲ್ಲರನ್ನೆ ಬಿಸಿಗೊಳಿಸುತ್ತದೆ. ಇದನ್ನು ಸಮಾನುಭೂತಿಯಿಂದ, ಸ್ನೇಹದಿಂದ, ದೂರದೃಷ್ಟಿಯಿಂದ ಕಾಣಲಾಗದವರು ಸರ್ವನಾಶಮಯಿ ತಿಮ ಗೋಳಾಡುತ್ತಿದ್ದಾರೆ. ಸಿರಾಕವಾದಿಗಳು ನಿಟ್ಟುಸಿರನ್ನು ಬಿಡುತ್ತಿದ್ದಾರೆ. ನಿರಂಕುಶಾಧಿಕಾರಿಗಳು, ಗುತ್ತಿಗೆದಾರರು, ಸೂರೆಗಾರರು ಭಗ್ನಸಂಸಾರಧಾರಿಗಳನ್ನು ನಮಸ್ಕರಿಸುತ್ತ ಕಿಲ್ಲ ಸ್ವಲ್ಪನಾನ್ನಾದರೂ ಉಳಿಸಿಕೊಳ್ಳೋಣವೆಂಬ ದುರಾಶೆಯಿಂದ ಹೊಸ ಹೊಸ ನೋಟಿಕೊತ್ತಲಗಳನ್ನು ಕಟ್ಟಿಕೊಳ್ಳುತ್ತಲಿದ್ದಾರೆ. ಭ್ರಾಂತಿ ಸಮೂಹಂಧದ ಜ್ವಿ ಇವೆಲ್ಲ ಆಸಿವಾರ್ಯ. ಈ ಸಂದರ್ಭದಲ್ಲಿ ಸತ್ಯ ಪ್ರಸಿಗಳು, ಸತ್ಯಪರಾಕ್ರಮಿಗಳು, ರಾಷ್ಟ್ರಸ್ಥಾಪನಾಕ ಶಲಿಗಳ, ಕಲಾವಿದರು, ಸಾಹಿತಿಗಳು, ಪಾರಮಾರ್ಥಿಕ ಪ್ರಯೋಗಪಟುಗಳು, ಎಲ್ಲರೂ ವಿಶೇಷ ಧ್ಯೇಯದಿಂದ 'ಕ್ರಾಂತಿಗಿದೊ ಸ್ವಾಗತ' ಎಂದು ಸಾರುತ್ತ ನುಂಗುವರಿಯಬೇಕು.

### ಕರ್ನಾಟಕದ ರಾಷ್ಟ್ರಭಾಷೆ ಕನ್ನಡ.

ಈ ನಾಡಿನಲ್ಲಿ ನೆಲಸಿರುವವರ ಮನೆ ನಾಡು ಏನೇ ಆಗಿರಲಿ ಅವರು ಕನ್ನಡವನ್ನು ತಮ್ಮ ನೇರಭಾಷೆಯೆಂದು ಅಂಗೀಕಾರ ಮಾಡಬೇಕು; ಮನೋಲೋಕದ ತಂಗೀಕಾರ ಮಾತ್ರವಲ್ಲ; ಕನ್ನಡ ಕಲಿಯಬೇಕು; ತಮ್ಮ ಸಕಲ ವ್ಯವಹಾರವನ್ನೂ ಕನ್ನಡದ ಮೂಲಕವಾಗಿಯೇ ನಡೆಸಬೇಕು. ತಮ್ಮ ಮಕ್ಕಳು ಮರಿಗಳು ವಿದ್ಯಾಭ್ಯಾಸವನ್ನೆಲ್ಲ ಕನ್ನಡದ ಮೂಲಕವಾಗಿಯೇ ನಡೆಸಬೇಕು ಕನ್ನಡದ ಮೂಲಕವಾಗಿಯೇ ತಮ್ಮ ಮೋಕ್ಷವೆಂಬ ಜ್ಞಾನ ಅವರಲ್ಲಿ ಮೂಡಬೇಕು.

ಕನ್ನಡ ನಾಡಿನಲ್ಲಿ ಪ್ರಭುತ್ವಗಳಲ್ಲಿ ಕನ್ನಡ ಸ್ಪಷ್ಟವಾಗಬೇಕು. ಸರಕಾರಗಳ ಸಕಲ ಕಾರ್ಯಗಳೂ ಕನ್ನಡ ಭಾಷೆಯ ಮೂಲಕವೆ ನಿರ್ವಹಣೆಯಾಗಬೇಕು.

ಇನ್ನು ನ್ಯಾಯಸ್ಥಾನಗಳವರೆಗೆ ಕನ್ನಡ ಇಲ್ಲ. ಕನ್ನಡನಾಡಿನಲ್ಲಿ ನ್ಯಾಯಸ್ಥಾನಗಳ ಭಾಷೆಯೂ ಕನ್ನಡವೆ ಆಗಿರುವುದು ನ್ಯಾಯಸಮ್ಮತವಾಗಿದೆ ಬೆಂಬು ಮಾಜಿಸ್ಟ್ರೇಟ್ ಕೋರ್ಟಿನಿಂದ ಆ ವೆಂಥವ ಗಿ ಹೈಕೋರ್ಟಿನ ವರೆಗೂ ಕನ್ನಡವೇ ಸಾಮ್ರಾಜ್ಯವಾಗಬೇಕು.

### ಪ್ರಚಾರಾನಾವಶ್ಯಕತೆ.

ರಾಷ್ಟ್ರ ದೊಗ್ಗಕ್ಕೆ, ಮನಸ್ಸಿನ ಸಮ್ಮತಿಗೆ, ಒಟ್ಟು ಜೀವನದ ಭವ್ಯತೆಗೆ ರಕ್ತಪರಿಚಲನವು ಅನಿವಾರ್ಯಕ ಆ ರಕ್ತ ಸಂಚಾರ ನಾಡಿಗಳು ಅಂಗ ಅಂಗಗಳಲ್ಲೂ ನಡಯುವೇಕು. ಒಂದು ಮಟ್ಟಿದ ಕಾವಿಸಿಂದ, ಒಂದು ಪ್ರಮಾಣದ ಬೆಳವಣಿಗೆಯಿಂದ ರಕ್ತಸಂಚಲನವಾಗಬೇಕು. ಈ ಕಾರ್ಯವು ಕ್ಷಣಕಾಲ ಸಹ ನಿಲ್ಲದಂತೆ ನೋಡಿಕೊಳ್ಳಬೇಕು. ಹಾಗೆಯೇ ಒಂದು ದೇಶದ ಭದ್ರತೆ ಮತ್ತು ಯೋಗಕ್ಷೇಮ ಸಾಧನೆಯು ಕೆಲಸ. ಅಂಥ ಮೇಲೆ ರಾಷ್ಟ್ರ ದೇಶದಲ್ಲಿ ಜ್ಞಾನ ಪ್ರಚಾರ ವಾಹಿನಿಯು ವಿಕ ಪ್ರಕಾರವಾಗಿ ವೇಗವಾಗಿ ನಾಡಿನ ನಾನಾ ನಾಳಗಳಲ್ಲಿ ಹರಿಯುತ್ತಿರಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಚಾರಕ್ಕೆ ಪ್ರಥಮ ಸ್ಥಾನ ಕನ್ನಡ ನಾಡಿನಲ್ಲಿ ಈಗ ನಾಡಿನ ಭಾಷೆ ಸಾಹಿತ್ಯ ಕಲಾಕೌಶಲ ಇತಿಹಾಸ ಸಾಂಪತ್ತಿನ ಸೌಭಾಗ್ಯ, ವಿನಾಶಕಾರ್ಯಪ್ರಕೃತಿಗಳು ಬೌರ್ಬಲ್ಯಗಳು ಇವುಗಳನ್ನು ಕುರಿತು ಸಮನ್ವಯಸಿತವಾದ ರೀತಿಯಿಂದ ಪ್ರಚಾರ ನಡೆಯಬೇಕು. ಇದಕ್ಕಾಗಿ ಪ್ರಚಾರ ಪ್ರಕಟನ ಕಾರ್ಯವಿಧಾನಗಳನ್ನು ಕುದುರಿಸಬೇಕು. ಸಂಚಾರೋಪನ್ಯಾಸಗಳು ನಡೆಯುತ್ತ ಹೋಗಬೇಕು. ವಿಜ್ಞಾಪನೆಗಳೂ ಕರಿಗಳೂ ಗನಕಿಗಳೂ ವಾಗ್ಮಿಗಳೂ ತಂಡೋಪತಂಡವಾಗಿ ಮೇಲೆ ಮೇಲೆ ನಾಡಿನಲ್ಲೆಲ್ಲಾ ಸಂಚಾರ ಮಾಡಬೇಕು.

### ಕರ್ನಾಟಕ ವಿಕೀಕರಣ ಪ್ರಯತ್ನ.

ರಾಜಕೀಯವಾಗಿ ಕನ್ನಡ ನಾಡೊಂದಾಗುವ ವರೆಗೂ ನಮ್ಮ ಆಶಯಗಳಲ್ಲಿ ಬರಿಯ ಕನಸಾಗಿಯೇ ಉಳಿಯುತ್ತವೆ ಕನ್ನಡ ನಾಡು ಸುಮಾರು ಇಪ್ಪತ್ತು ಆಡಳಿತಗಳಿಗೆ ಹರಿದು ಹಂಚಿಕೆಯಾಗಿ ಹೋಗಿರುವುದೇ ಇವಕ್ಕೆ ಕಾರಣ. ಆದಕ್ಕಾಗಿ ಒಂದಲ್ಲ ಒಂದು ರೀತಿಯಿಂದ ಏಕಮುಖವಾಗುವ ವರೆಗೆ ಕನ್ನಡಿಗರ ಏಕೀಕರಣ ಮನೋರಥವೀಡೇರುವ ಮಾತಿಲ್ಲ. ರಾಜಕೀಯವಾದ ಏಕೀಕರಣವಾಗಬೇಕು; ಅಂದರೆ ಕರ್ನಾಟಕ ಮಹಾ ರಾಷ್ಟ್ರ ನಿರ್ಮಾಣವಾಗಬೇಕು.

### ನೆಹರುಗಳ ಮಾತು.

ದೆಹಲಿ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತ್ಯದ ವಿಚಾರ ಬಂತು. ಆಗ ಮಹಾಪ್ರಧಾನ ಜವಾಹರಲಾಲ್ ನೆಹರು ಗಳು–

'ಆಂಧ್ರ ಪ್ರಾಂತ್ಯವಾಗಬೇಕೆಂದು ಕೇಳುವದು ಬಹಳ ನ್ಯಾಯವಾಗಿದೆ. ಈ ಪ್ರಶ್ನೆಯು ಕುರಿತಾದ ಕಷ್ಟಗಳಲ್ಲೆಲ್ಲಾ ಇಲ್ಲಿ ಗಣಿಸಿ. ನೆಯ ಇಸವಿಯು ಇಂಡಿಯಾ ಸರಕಾರ ಶಾಸನದಲ್ಲಿ ಒದಿನಾ ಮತ್ತು ಸಿಂಧ್ ಪ್ರಾಂತ್ಯಗಳನ್ನು ಸೇರಿಸಿದಂತೆ ಹೊಸ ರಾಜ್ಯಾಂಗ ವ್ಯವಸ್ಥೆಯಲ್ಲಿ ನಾನಾ ಪ್ರಾಂತ್ಯಗಳೊಂದಿಗೆ ಇದನ್ನು ಸೇರಿಸಬಹುದು ರಾಜ್ಯಾಂಗ ವ್ಯವಸ್ಥೆಯನ್ನೆಂಗೀಕರಿಸಿದ ಕೂಡಲೆ ತೀರ್ಮಾನವನ್ನಾಚರಣೆಗೆ ತರಬಹುದು ಎಂಬುದಾಗಿ ಹೇಳಿದರು. ಅಷ್ಟು ಮಾತ್ರವಲ್ಲ–

'ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತ್ಯಗಳ ನಿರ್ಮಾಣದ ಮಾತನ್ನೆತ್ತಿದರೆ ಅಸಾಧ್ಯ ಕಷ್ಟಗಳೇಳುತ್ತವೆ. ಸಂಬಂಧಪಟ್ಟ ಪ್ರಾಂತ್ಯಗಳ ಸ್ವರೂಪ ಮತ್ತು ಜೀವನ ರಚನೆಗೇ ಪ್ರಬಲ ಸಂಚಕಾರ ಬರುತ್ತವೆ. ಈ ಪ್ರಶ್ನೆಯನ್ನು ಸರ್ವತೋಮುಖವಾಗಿ ಪರೀಕ್ಷೆ ಮಾಡಬೇಕಾಗಿದೆ, ಆಗ ಮಾತ್ರ ತೀರ್ಮಾನವು ತೃಪ್ತಿಕರವಾಗಿಯೂ ಸಬಂಧಪಟ್ಟ ಪಕ್ಷಗಳಿಗೆ ಅಂಗೀಕಾರ ಯೋಗ್ಯವೂ ಆಗುತ್ತದೆ' ಅಂದರು.

ಆಗ ಶ್ರೀ. ದಿವಾಕರರವರು ಛಿದ್ರಿಕರ್ಣಾಟಕದ ದುರಂತ ಪರಿಸ್ಥಿತಿಯನ್ನು ಮಹಾ ಪ್ರಧಾನರ ಗಮನಕ್ಕೆ ತಂದರು.

ಹಲವು ಸದಸ್ಯರು ಉಪಮಹಾಪ್ರಧಾನ ಸರದಾರ ಪಟೇಲರಗೀವಿಚಾರದಲ್ಲಿ ಸ್ಪಷ್ಟೀಕರಣ ರೂಪದ ಪತ್ರವೊಂದನ್ನು ಬರೆದಿದ್ದಾರೆ. ಆಂಧ್ರ ಪ್ರಾಂತ್ಯ ನಿರ್ಮಾಣದೊಂದಿಗೆ ಕರ್ನಾಟಕ ಪ್ರಾಂತ್ಯನಿರ್ಮಾಣ ಕಾರ್ಯವನ್ನು ಕೈಕೊಳ್ಳಬೇಕೆಂದು ತಿಳಿಸಿದ್ದಾರೆ. ಕೇಳ್ಕರರ ತೀರ್ಮಾನ ಕನ್ನಡಿಗರಿಗೆ ಒಪ್ಪಿಗೆ ಇಲ್ಲ. ಬಳ್ಳಾರಿ ಸಮಸ್ಯೆ ತೀರ್ಮಾನವಾಗದೆ ಆಂಧ್ರ ಪ್ರಾಂತ್ಯ ನಿರ್ಮಾಣ ತೀರ್ಮಾನವಾಗಲಾರದು.

### ಕರ್ನಾಟಕ ಸಬ್–ಫೆಡರೇಷನ್.

ಸದ್ಯಕ್ಕೆ ಗೋವೆ, ಹೈದರಾಬಾದ್ ಕರ್ನಾಟಕ ಕ್ಷೇತ್ರಗಳನ್ನು ಬಿಟ್ಟರೆ, (೧) ಮುಂಬಯಿಯ ನಾಲ್ಕು ಜಿಲ್ಲೆಗಳು; (೨) ಮದರಾಸಿನ ಮೂರು ಜಿಲ್ಲೆಗಳು; (೩) ಕೂರ್ಗ; (೪) ಮೈಸೂರು ಸಂಸ್ಥಾನ; (೫) ದಕ್ಷಿಣದ ಹಿದಿನಾಲ್ಕು ಸಂಸ್ಥಾನಗಳು; ಹೀಗೆ ಏಮ ಪ್ರತ್ಯೇಕ ಕ್ಷೇತ್ರ ಮತ್ತು ಆಡಳಿತವಿರುತ್ತವೆ. ಏಮನೆಯ ಕ್ಷೇತ್ರವ್ಯಾಪ್ತಿಯಲ್ಲಿ ಹದಿನಾಲ್ಕು ಆಡಳಿತಗಳಿವೆ. ಇವೆಲ್ಲ ನೈದನ್ನು ಒಂದುಗೂಡಿಸಬೇಕು. ಅವುಗಳ ಇಂದಿನ ಸ್ವರೂಪವನ್ನು ಸಾಕಾದಷ್ಟು ಮಟ್ಟಿಗೆ ಹಾಗೆಯೇ ಉಳಿಸಿ ಆಸಿವಾರ್ಯವೆಂಎನ್ನು ಬದಲಾವಣೆಗಳನ್ನು ಮಾಡಿ ಈ ಕಾರ್ಯವನ್ನು ಸಾಧಿಸಬಹುದು. 'ಕರ್ನಾಟಕ ಸಬ್–ಫೆಡರೇಷನ್' ಮೂಲಕ ಮಾತ್ರ ಕನ್ನಡನಾಡಿಗೆ ವಿಶಿಷ್ಟವೆನಿಸಿರುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೆಂದು ಕಂಡುಬರುತ್ತದೆ.

'ಸಬ್–ಫೆಡರೇಷನ್'ನಲ್ಲಿ ಅಂಗರಾಜ್ಯಗಳು ಐದಿರಬೇಕೆ; ಮೂರಿರತಕ್ಕದ್ದೆ; ಎರಡೇ ಸಾಕೆ ಎಂಬ ಪ್ರಶ್ನೆಗಳನ್ನು ಚಿ

# ಕರ್ನಾಟಕ ಏಕೀಕರಣ ಗೋಷ್ಠಿ.

## ಅಧ್ಯಕ್ಷ ಶ್ರೀ ರಂಗನಾಥ ದಿವಾಕರರ ಭಾಷಣ.

ಕನ್ನಡ ನಾಡು ಯಜಮಾನನಿಲ್ಲದ ಮನೆಯಾಗಿದೆ. ಒಂದೆಡೆ ಆಂಧ್ರರು, ಇನ್ನೊಂದೆಡೆ ತಮಿಳರು, ಮತ್ತೊಂದೆಡೆ ಮಲಯಾಳಿಗಳು, ಮಗುದೊಂದೆಡೆ ಮಹಾರಾಷ್ಟ್ರರು ಈ ನಮ್ಮ ನಾಡಿನ ಸೊತ್ತನ್ನು ಅದಹರಿಸುತಿದ್ದಾರೆ. ಇದಕ್ಕೆ ಕಾರಣ ವಿಕಶಿತಂತ್ರ ಕರ್ನಾಟಕವಾಗದಿರುವುದು. ವಿಕಶಿತಂತ್ರ ಕರ್ನಾಟಕವಿರದೆ ಜನರ ಹಾವಳಿಯು ತಪ್ಪಲಾರದು.

ಐವತ್ತಕ್ಕೆ ಪಂಡಿತ ನೆಹರುಗಳು ಭಾರತ ಸ್ವಾತಂತ್ರ್ಯ ಸಂಗ್ರಾಮ ರಂಗದಲ್ಲಿ ಹೋರಾಡುತಿದ್ದಾಗ ಕರ್ನಾಟಕವೇನೆ, ಎಲ್ಲಾ ಭಾಷಾವಾರು ಪ್ರಾಂತಗಳ ನಿರ್ಮಾಣವು ಭಾರತ ಸ್ವಾತಂತ್ರ್ಯದ ತಳಹದಿಯೆಂದು ಸಾರಿದ್ದರು. ಅದೇನೋ ಕನ್ನಡಿಗರ ದೌರ್ಭಾಗ್ಯದಿಂದ ಅವರ ಮಗ ಪಂಡಿತ ಜವಾಹರಲಾಲರಲ್ಲಿ ಕರ್ನಾಟಕ ಪ್ರಾಂತರಚನೆಯ ವಿಚಾರ ವಾಗಿ ಮಾತೆತ್ತಿದಾಗ ಸಾಕಷ್ಟು ಸಂಪತ್ತಿಲ್ಲದ ನೆಲೆಯು ಕರ್ನಾಟಕ ಪ್ರಾಂತರಚನೆಗೆ ಅಡ್ಡಿಯಾಗಿಬಿಡ ಎಂದರುವರು. ತಂದೆಯಲ್ಲಿದ್ದ ನುಡಿ ಮಗನಲ್ಲಿಲ್ಲದಾಗಿ ಇಂದು ನಮಗೆ ಕಾಣುತ್ತಿದೆ.

ಕರ್ನಾಟಕ ಪ್ರಾಂತರಚನೆಯ ಮೂತಿಗೆ ಹಣವು ಮುಖ್ಯವೆಂದು ಕಾಂಗ್ರೆಸ್ಸಿನ ಧುರೀಣರು ಹೇಳುತ್ತಾರೆ. ಸರದಾರ ವಲ್ಲಭಭಾಯಿ ಪಟೇಲರು ಇಟ್ಟ ಹೆಜ್ಜೆಯನ್ನು ಹಿಂದಿಡದ ಯೋಧರು. ಅವರೇ ಇಂದಿನ ಕನ್ನಡ ಪ್ರಾಂತರಚನೆಯ ವಿಷಯದಲ್ಲಿ ತನ್ನ ಹೆಜ್ಜೆಯನ್ನು ಹಿಂದಿಡುವುದನ್ನು ನಾವು ಕಾಣುತ್ತಿರುವೆವು. ಕಿಶೆಯೊಳಗಣ ರೊಕ್ಕವನ್ನು ಕಂಡು ಸ್ವಾನ ಗೊಡುವ ಯೋಜನೆ ಇಂದಿನ ಭಾರತ ಸರಕಾರದ್ದು. ಆಮೇರಿಕದಲ್ಲಿ ಕರ್ನಾಟಕಕ್ಕಿಂತಲೂ ಕಿರಿದಾದ ಪ್ರಾಂತಗಳನ್ನು ಮಾಡಿದ್ದು ಕಂಡುಬರುತ್ತಿದೆ. ಅಲ್ಲಿ ಇಲ್ಲಿನ ಹಾಗೆ ಅಂದರೆ ಕರ್ನಾಟಕದ ಭೂಭಾಗ ಮತ್ತು ಜನಸಂಖ್ಯೆ ಸಂಪತ್ತಿನ ನೆಲೆಗಳಿಂದ ಕಿರಿದಾದ ಪ್ರಾಂತರಚನೆಯು ಇದ್ದುದು ಕಂಡು ಬರುತ್ತಿದೆ. ಅಮೇರಿಕದವರು ಈ ಯೋಜನೆಯನ್ನೇಕೆ ಮಾಡಿರುವರು? ಅಲ್ಲಿನ ಜನರ ಬಳಿಯುವಿಕೆಯ ಉದ್ದೇಶವಲ್ಲದೆ ಮತ್ತೇನು?

ಕನ್ನಡ ಪ್ರಾಂತರಚನೆಯು ವಿಚಾರದಲ್ಲಿ ಆಡಚಣೆಯು ಮೂತನ್ನು ಇಂದು ಭಾರತದ ಸರಕಾರವು ಹೆಳುತ್ತಿದೆ. ಆ ಆಡಚಣೆಯನ್ನು ದೂರೀಕರಿಸುವುದೇ ಪ್ರಾಂತರಚನೆಯು ನಿಜಾರ. ಹಲವಾರು ಕಾರ್ಯಗಳ ಆಡಚಣೆಯನ್ನು ಕಡಮೆ ಗೊಳಿಸಲು ಪ್ರಾಂತರಚನೆಯಾಗಬೇಕು. ಕರ್ನಾಟಕ ಪ್ರಾಂತರಚನೆಯು ಭಾರತದ ಸ್ವಾತಂತ್ರ್ಯವನ್ನು ಕಾಯಲುಳ್ಳದು. ಅದರ ಕಷ್ಟದ ಹಾದಿಯನ್ನು ದೂರೀಕರಿಸುವುದು ಈ ಪ್ರಾಂತರಚನೆಯಲ್ಲಿದೆ. ಕಾರ್ಯನಿರ್ವಾಹದ ಆಡಚಣೆಯು ದೂರ ಗೊಳ್ಳಬೇಕಾದರೆ ಪ್ರಾಂತರಚನೆಯ ಹೊಣೆಗಾರಿಕೆ ಸಲ್ಲದೇಕು.

ಹಸಿವನು ಅಡುಗೆಯೂಗುವ ತನಕ ಸುಮ್ಮನಿರಬಹುದು. ಎಲೆಯಿಟ್ಟು ಬಳಸಿಯೂಯಿತು ತುಸ್ಸವಿಕ್ಕಿಯೂಯಿತು. ಮುಂದೆ ಊಣಕೂಡದಂದರೆ ಸುಮ್ಮನಿರಬರುವುದೇ? ಬಾರತದ ಸ್ವಾತಂತ್ರ್ಯವನ್ನು ತರಲು ಕನ್ನಡಿಗರು ತಮ್ಮ ತನುಮನ ಧನಗಳನ್ನರ್ಪಿಸಿದ್ದಾರೆ. ಸ್ವಾತಂತ್ರ್ಯದ ಅಡುಗೆಯೂಗಿ ಭೋಜನವಸ್ಸನ್ನಾಲು ನಾವಿಂದು ಕುಳಿತವರಿದ್ದೇವೆ. ತುಪ್ಪ ವಿದ್ದವೇಲೆ ತಡೆಯುತ್ತಿರುವುದು ಕೆಟ್ಟಿದೆಯವರನ್ನು ಕೆರಳಿಸದೆ ಉಳಿಯದು.

## ಸ್ವಾಗತಾಧ್ಯಕ್ಷ ಶ್ರೀ ಕೆ. ಆರ್. ಕಾರಂತರ ಭಾಷಣ.

ಪ್ರಾಂತರಚನೆಯ ಬೆಳವಣಿಗೆ ಆರಂಭವು ಆಗಿನಿಂದಿಲ್ಲ. ಸುಮಾರು ೧೯೧೯ ರಿಂದ. ಈ ವಿಷಯದಲ್ಲಿ ಕನ್ನಡದವರೇನೂ ಹಿಂದುಳಿಯಲಿಲ್ಲ. ಮದ್ರಾಸು ಪ್ರಾಂತದ ಕನ್ನಡಿಗರು ಅನುಭವಿಸುವ ಕಷ್ಟ ಪರಿಸ್ಥಿತಿ ಎಲ್ಲರಿಗೂ ತಿಳಿದೇ ಇದೆ ಯಾದರೂ ಇಂದಿನ ಕಾಂಗ್ರೆಸ್ಸು ಸರಕಾರದ ಅಧಿಕಾರವು ಆಂಧ್ರ, ತಮಿಳ ಮಲೆಯಾಳ ವರ್ಗದವರಿಂದಲೂ ಅಧಿಕಾರಿಗಳಿಂದಲೂ ಏನೂ ಸುಖವಿಲ್ಲದ್ದಲ್ಲ. ಆಂಧ್ರರ ಪ್ರಶ್ನೆಯು ಸಂತರ ಕನ್ನಡಿಗರದು. ಬಳ್ಳಾರಿಯು ಆಂಧ್ರಕ್ಕೆ ಸೇರಬೇಕಂತೆ. ನೀಲಗಿರಿ ತಮಿಳರ ಸೊತ್ತಾಗಬೇಕಂತೆ. ಇದಕ್ಕಿರುವ ಯೋಜನೆಯೇ ಮದ್ರಾಸ್ ಮಂತ್ರಿವರ್ಗದವರಲ್ಲಿ ತೋರಿಬರುತ್ತಿದೆ. ಕೊಯಮುತ್ತೂರು ಕನ್ನಡಿಗರು ಹೆರವರ ಪಾಲಾಗಬೇಕು. ತಾಸರಗೋಡು ವಿಚಾರ ಇನ್ನೂ ಇದೆ. ಉಳಿದ ದಕ್ಷಿಣ ಕನ್ನಡದವರು ಎಲ್ಲಿಗೆ ಬೇಕೋ ಅಲ್ಲಿಗೆ ಸೇರಬೇಕಂತೆ. ಮದ್ರಾಸು ಸರಕಾರದೊಡನೆ ಹಾಗಿದ್ದರೆ ನಾವು ಸೇರುವುದು ಬೇಡ. ನುಂಬಯಿಯ ಕನ್ನಡಿಗರನ್ನು ನಾವು ಬಿಡುವಂತಿಲ್ಲ.

ದಕ್ಷಿಣ ಕನ್ನಡದ ಜನರಿಗೆ ನಮನೆ ನೂತು ಭಿನ್ನ ಭಿನ್ನವಾಗಿದ್ದರೂ ಕನ್ನಡವನ್ನು ಬಿಟ್ಟರಲು ಆಶಿಸುತ್ತಿಲ್ಲ. ಕೇಳಪ್ಪನವರ ಆಶೆ ತಮ್ಮ ಪ್ರಾಂತನನ್ನು ಬಳೆಯಿಸುವುದರಲ್ಲಿದ್ದು ಜನತೆಯ ಭಂಡವಾಳ ಸಂಪ್ರದಾಯದ್ದಾಗಿದೆ. ಭಂಡವಾಳಗಾರನು ಆಸ್ತಿಯನ್ನು ಮಾಡಿ ಗಡಿಯನ್ನು ಮುಂದೊತ್ತುವಂತೆ ಕನ್ನಡಿಗರ ಮೇಲೆ ಕೇಳಪ್ಪನವರ ಈ ಕ್ರಮ ಸಾಗುತ್ತಿದೆ. ಅದಕ್ಕಾದರೂ ಒಪ್ಪತ್ತಿಲ್ಲ.

ದಕ್ಷಿಣ ಕನ್ನಡದ ಜನರು ಉಳಿದ ಕನ್ನಡಿಗರಲ್ಲಿ ತುಂಬಾ ಸಂಪರ್ಕವನ್ನು ಬೆಳೆಸಿದ್ದಾರೆ. ಕೊಡಗು, ಶಿವಮೊಗ್ಗ, ಮೈಸೂರುಗಳಲ್ಲಿ ವ್ಯಾಪಾರದ ಸಂಪರ್ಕವನ್ನು ದಕ್ಷಿಣ ಕನ್ನಡವು ಬೆಳೆಸಿದೆ. ಆದಲ್ಲದೆ ಜಮೀನುದಾರರು ಕಾಫಿ, ಏಲಕ್ಕಿ, ಚಾ ತೋಟಗಳಿಗೆ, ಕೆಲಸಗಾರರೂ ಆಗಿರುವವರು ದಕ್ಷಿಣ ಕನ್ನಡದವರೇ ಆಗಾಣುತ್ತಿರುವರು.

ಕಾಂಗ್ರೆಸ್ಸು ಹಿಂದೆ ಪ್ರಾಂತ ರಚನೆಯು ನುಮ್ಮುವೆಂದು ಹೇಳುತಿತ್ತು. ಭಾರತ ಸ್ವಾತಂತ್ರ್ಯದ ನಂತರ ಇದನ್ನೆತ್ತಿದಾಗ ತನ್ನ ಧೋರಣೆಯನ್ನು ಬದಲಾಯಿಸಿದಂತಿದೆ. ಪಂಡಿತ ನೆಹರುಗಳೂ, ಪಟೇಲರೂ ಕರ್ನಾಟಕ ವಿಕೇಕರಣದ ವಿಚಾರವನ್ನು ಕೇಳಿದಾಗ ಅದನ್ನು ಹಿಂದಕ್ಕೆ ಹಾಕುವರು. ಆಂಧ್ರರ ಪ್ರಶ್ನೆಯು ನಮ್ಮದು ಎನ್ನುವರು. ಕನ್ನಡಿಗರು ಹಿಂದುಳಿಯಲು ಬಾರದೆಂದು ಹೋರಾಟವನ್ನೇ ಮಾಡಬೇಕೆಂದು ಇನ್ನೂ ಗರ್ಜಿಸಿರಬಹುದು. ಈ ಕಾರ್ಯಸಾಧನೆಗೆ ನಮ್ಮ ಜಿಲ್ಲೆಯಿಂದ ಹತ್ತು ಸಾವಿರ ರೂಪಾಯಿಗಳನ್ನು ನಮ್ಮ ಜಿಲ್ಲೆಯವರು ಕೊಟ್ಟು ಕರ್ನಾಟಕದ ಸ್ವಾತಂತ್ರ್ಯವನ್ನು ಭಾರತದ ಸ್ವಾತಂತ್ರ್ಯದೊಂದಿಗೆ ರಕ್ಷಿಸುವ ತ್ಯಾಗ ಜಾಗೃತಿಗಳನ್ನು ಇಂದು ಹೊಂದಬೇಕಿದೆ.

---

# ಅಖಿಲ ಕನ್ನಾಡು ಏಕೀಕರಣ ಸಮ್ಮೇಳನ

## ಉದ್ಘಾಟಕರಾದ ಶ್ರೀ ಎಚ್. ಸಿದ್ದಯ್ಯನವರ ಭಾಷಣ.

ನಮ್ಮ ರಾಷ್ಟ್ರವು ಪುನರುತ್ಥಾನವಾದ ಈ ಮಹಾಕಾಲದಲ್ಲಿ ಕನ್ನಡ ಜನ ತಮ್ಮ ಗುರಿಯನ್ನು ಸಾಧಿಸಬೇಕು. ಅವರಿಗಿರುವುದು ಒಂದೇ ಗುರಿ. ಅದು ಕನ್ನಡ ಪ್ರಾಂತ ಒಂದುಗೂಡಬೇಕೆಂಬುದು. ಭಾರತವು ಬಲಯುತವಾಗಬೇಕಾದರೆ ಭಾರತದ ಸನಸ್ತ ಭಾಗಗಳೂ ಬಲಯುತವಾಗಿರಬೇಕು. ವಿಸ್ತಾರವಾದ ಸನುದ್ರ ತೀರವನ್ನುಳ್ಳ ಮೂನ್ನೂರು ಮೈಲಿ ದೂರ ಹರಡಿದ ಸಮುದ್ರ ತೀರವನ್ನುಳ್ಳ ಕನ್ನಡ ನಾಡು ಭಾರತದ ಈ ಪ್ರದೇಶವನ್ನು ರಕ್ಷಿಸಲು ಸಶಕ್ತವಾಗಬೇಕು.

ನಮಗೆ ಭವ್ಯವಾದ ಪ್ರಾಚೀನ ಇತಿಹಾಸವಿದೆ. ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ, ಕೆಳದಿ, ಮೈಸೂರು, ಕೊಡಗು ಮುಂತಾದ ಅರಸು ಮನೆತನಗಳು ನಮ್ಮ ಇತಿಹಾಸವನ್ನು ಉಜ್ವಲಗೊಳಿಸಿವೆ. ನೇಪಾಲಿನ ಮಲ್ಲರಾಜರು ಕನ್ನಡಿಗರು. ಕನ್ನಡಿಗರು ಒಂದು ಕಾಲದಲ್ಲಿ ಬಹು ದೂರದ ಬಂಗಾಲವನ್ನು ಜಯಿಸಿದ್ದರು.

ಭಾರತದ ಅತೀಪ್ರಾಚೀನ ಭಾಷೆಗಳಲ್ಲಿ ಕನ್ನಡ ಮೂರನೆಯದು. ಭಾಷೆಯಲ್ಲಿ, ಭಾವದಲ್ಲಿ, ಲಾಲಿತ್ಯದಲ್ಲಿ, ಸೊಬಗಿನಲ್ಲಿ, ಸಂಗೀತದಲ್ಲಿ, ಕೊನೆಯದಾಗಿ ಲಿಪಿಯ ಸೌಂದರ್ಯದಲ್ಲಿ ಕನ್ನಡ ಉನ್ನತವಾದುದು. ಸಾಹಿತ್ಯದ ಹಲವು ವಿಭಾಗಗಳಲ್ಲಿ ಕನ್ನಡಿಗರು ತಮ್ಮ ಹಿರಿಮೆಯನ್ನು ಗಳಿಸಿದ್ದಾರೆ.

ಭವ್ಯಸೌಧಗಳನ್ನು ನಿರ್ಮಿಸಿದವರು ಲೋಕ ವಿರಗಾಗುವ ಮೂರ್ತಿಗಳನ್ನು ಸೃಷ್ಟಿಸಿದವರು, ಕಲ್ಲಿನಲ್ಲಿ ಜೀವಪ್ರತ್ಯಕ್ಷಗಳನ್ನು ತುಂಬಿದವರು ಕನ್ನಡಿಗರು.

ಇದಿಷ್ಟೂ ಕನ್ನಡ ನಾಡಿನ ಪ್ರಾಚೀನ ಘನತೆಯೂಯಿತು. ಕನ್ನಡ ನಾಡಿನ ಪ್ರಾದೇಶಿಕ ಪರಿಚಯವನ್ನು ಕೊಡುವುದಾದರೆ ಅದು ೧೯,೪೯೦ ಚದರ ಮೈಲಿ ಪ್ರದೇಶವನ್ನು ಒಳಗೊಂಡ ವಿಸ್ತಾರಭಾಗ. ಅದರ ಜನಸಂಖ್ಯೆ ಸುಮಾರು ಎರಡು ಕೋಟಿ. ಸಂಸ್ಥಾನಗಳನ್ನುಳಿದ ಕನ್ನಡ ಭಾಗವೇ ಒಂದು ವೇಳೆ ಏಕಪ್ರಾಂತವಾಗಬೇಕಾದರೆ ಆದು ಆಗಲೂ ತನ್ನ ಆಡಳಿತವನ್ನು ನಡೆಸಿಕೊಂಡು ಹೋಗಬಹುದಾದ ಸಾಧನ ಸಂಪತ್ತಿಯನ್ನು ಪಡೆದಿದೆ. ಮತ್ತು ಇದಕ್ಕೆ ಇಪ್ಪತ್ತೊಂಭತ್ತುವರೆ ಸಾವಿರ ಚದರ ಮೈಲಿಯುಳ್ಳ, ಹತ್ತು ಕೋಟಿವರವನ್ನವಿರುವ ಎಪ್ಪತ್ತಾರು ಲಕ್ಷ ಪ್ರಜಾಸಂಖ್ಯೆಯುಳ್ಳ ಮೈಸೂರು ಸಂಸ್ಥಾನವೂ ಸೇರಿದರೆ ಆದರ ಪ್ರಶಸ್ತಿ ಇನ್ನೂ ಶ್ರೇಷ್ಠವಾಗುವುದು. ಅಂತೆಯೇ ನಿಜಾಂ ರಾಜ್ಯದ ಇಪ್ಪತ್ತಾರು ಸಾವಿರ ಚದರ ಮೈಲಿಯ ಕೊಪ್ಪಳ, ರಾಯಚೂರು, ಕಲಬುರ್ಗಿ, ಮತ್ತು ಬಿದರೆ ಜಿಲ್ಲೆಗಳು ಸೇರಬೇಕು. ಆದರೆ ಪದ್ಯಕ್ಕೆ ಇದು ಒಂದು ಸವಸ್ಯೆ. ಪ್ರಜಾತಿಪ್ರಾಯವೇ ಕೊನೆಯ ತೀರ್ಮಾನವಾಗುವ ಕಾಲದಲ್ಲಿ ಈ ಸಮಸ್ಯೆಯು ಸುಗಮವಾಗಿ ಬಗೆಹರಿದೀತೆಂದು ಹಾರೈಸೋಣ.

ಈಗಾಗಲೆ ಮೈಸೂರು ಶ್ರೀಮನ್ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಜಾ ಸರಕಾರವನ್ನೇರ್ಪಡಿಸಿದ್ದಾರೆ. ಪ್ರಜೆಗಳ ಪ್ರತಿನಿಧಿಗಳೇ ರಾಜ್ಯ ಸೂತ್ರವನ್ನು ಕೈಗೊಂಡಿದ್ದಾರೆ. ಶ್ರೀಮನ್ ಮಹಾರಾಜರವರು ಅಖಿಲ ಕರ್ನಾಟಕಕ್ಕೂ ದೊರೆಗಳಾಗಿ ತಕ್ಷಣಿಲೆ ಪ್ರಭುತ್ವನೇರ್ಪ

---

ನ್ನಾಗಿ ಪರೀಕ್ಷೆಮಾಡಬೇಕು, ಅಂಗರಾಜ್ಯಗಳ ಸಂಖ್ಯೆಯನ್ನು ಆವಶ್ಯಕ್ಕೆ ಮಟ್ಟಿಗೆ ಕಡಿಮೆ ಮಾಡುವುದು ರಾಷ್ಟ್ರಭದ್ರತೆಯ ದೃಷ್ಟಿಯಿಂದ ಬಹಳ ಅವಶ್ಯಕವೆಂಬುದನ್ನು ಇತ್ತೀಚಿನ ಭಾರತದ ಇತಿಹಾಸವು ನಮ್ಮ ಆನುಭವಕ್ಕೆ ತಂದುಕೊಡುತ್ತಿದೆ.

(೧) ಮೇಲೆ ಸೂಚಿಸಿದಂತೆ ಐದು ವಿಧಾನಗಳಲ್ಲಿನ್ನಿಳಿಸಿ, ಐದು ಅಂಗರಾಜ್ಯಗಳನ್ನು ಮಾಡೋಣವೆ?

(೨) ಮುಂಬಯಿ, ಮದರಾಸು, ಕೊಡಗನ್ನು, ಸೇರಿಸಿ ಒಂದು ರಾಜ್ಯ; ಮೈಸೂರು ಸಂಸ್ಥಾನವೇ ಒಂದು ರಾಜ್ಯ; ಸಂಸ್ಥಾನಗಳ ಕೂಟವೊಂದು ರಾಜ್ಯ; ಒಟ್ಟು ಮೂರು ಅಂಗರಾಜ್ಯಗಳನ್ನು ನಿರ್ಮಿಸೋಣವೆ?

(೩) ಹಿಂದಿನಂತೆಲ್ಲ ಸಂಸ್ಥಾನಗಳನ್ನೂ ಮುಂಬಯಿ ಮತ್ತು ಮದರಾಸು ಪ್ರಾಂತ್ಯಗಳ ಕರ್ನಾಟಕದೊಂದಿಗೇ ಬೆರೆಸಿ ಒಂದು 'ಡೊಮಿನಿಯನ್ ಕರ್ನಾಟಕ'ವು ಒಂದು ಮೈಸೂರು ಸಂಸ್ಥಾನ; ಹೀಗೆ ಎರಡೇ ಅಂಗರಾಜ್ಯಗಳನ್ನು ಉಳಿಸೋಣವೆ?

ಸಬ್ ಫೆಡರೇಷನ್' ಆಲೋಚನೆಯು ಒಪ್ಪಿಗೆಯೂಗುವುದಾದರೆ ಪ್ರತಿನಿಧಿ ನಿಪುಣರ ಸಮಿತಿಯೊಂದನ್ನು ರಚಿಸಿ ಅಲ್ಲಿ, (೧) 'ಸಬ್'-ಫೆಡರೇಷನ್' ರೂಪ, ರಚನೆ (೨) ಅಂಗರಾಜ್ಯಗಳ ಸಂಖ್ಯೆ, (೩) ಸಬ್-ಫೆಡರೇಷನ್ ಕೇಂದ್ರ; (೪) ಅಂಗರಾಜ್ಯಗಳು ಕೇಂದ್ರಕ್ಕೆ ಬಿಟ್ಟುಕೊಡಬೇಕಾದ ಆಡಳಿತಾಂಶಗಳು (೫) ಕೇಂದ್ರದ ಹಣಕಾಸು: ಇವೇ ಮುಂತಾದ ವಿವರಗಳನ್ನೆಲ್ಲ ನಿಶ್ಚಯವೂಡಬೇಕು. ಕರ್ನಾಟಕ ಏಕೀಕರಣ ಮಹಾಸಭೆಯು ಇತ್ತ ಕಡೆ ಗಮನಕೊಡಬಹುದು.

ಟ್ಟರೆ ಆದು ನಮ್ಮ ದೇಶಕ್ಕೆ ಭೂಷಣವೇ ಆದೀತು

ಕನ್ನಡ ಪ್ರಾಂತ ನಿರ್ಮಾಣಕ್ಕೆ ನಮ್ಮ ಒತ್ತಾಯ ಮತ್ತು ನವ್ಯ ಅಭಿಮತ ಪುಟ ಲವಾಗಬೇಕು ಆಂಧ್ರರೂ, ಮಹಾ ರಾಷ್ಟ್ರರೂ ಪ್ರಚಂಡ ಚಳವಳಿ ಹಡಿಸಿ ದ್ದಾರೆ ತಮಿಳರೂ ಕೇರಳಿಯರೂ ತ ಮ್ಮ ತಮ್ಮ ಪ್ರಾಂತಗಳಿಗಾಗಿ ಒತ್ತಾಯ ಮಾಡುತ್ತಿದ್ದಾರೆ ಗಡಿ ನಿರ್ಮಾಣದಲ್ಲಿ ಕನ್ನಡ ಭಾಗಗಳು ಯಾವುವೆಂಬುದು ಸ ರ್ವಸಮ್ಮತವಾಗುವಂತೆ ನಿರ್ಣಯವಾಗ ಬೇಕು ಆದರೆ ಈ ಕಾರ್ಯ ನಡೆಯು ವ ಗ ನಮ್ಮ ಎಚ್ಚರಿಕೆ ಎಷ್ಟಿದ್ದರೂ ಸಾಲದು

ಹೀಗೆ ನಿರ್ಮಾಣವಾದ ಕನ್ನಡ ಪ್ರಾಂ ತದ ಕರ ವಿಧದಿಂದಲೂ ಅಭಿವೃದ್ಧಿ ಹೊಂ ದಿರುವುದರಲ್ಲಿ ಏನೂ ಸಂಶಯ ವಿಲ್ಲ ಇದ ಕ್ಕಿರುವ ವನ, ಖನಿಜ ಸಂಪತ್ತು ವಿಸ್ತಾರ ವಾದ ಹೆಲವು ಬಂದರುಗಳನ್ನೊಳ್ಳ ಸಮಂ ದ್ರತೀರ, ಫಲವತ್ತಾದ ಭೂಭಾಗಗಳು, ಆನೆಂಕ ನದಿಗಳು -ಇನೆಲ್ಲಾ ಈ ನಾಡಿನ ಸಂಪತ್ತಿಗೆ ಭದ್ರತೆಯೊಗಿವೆ ಸುಮಾರು ಒಂದು ಲಕ್ಷ ಚದರಮೈಲಿಯುಳ್ಳ, ಎರ ಡು ಕೋಟಿ ಜನರಂಬೆ, ಬಹುಭಾಷೆಗಳನ್ನ ಡೆ ಸಮೂರು ಇಪ್ಪತ್ತು ಕೋಟಿ ರೂಪಾಯ ಉಳ್ಳದ್ದಾಗುವ ಈ ಪ್ರಾಂತ ವಿಸ್ತಾರದಲ್ಲಿ, ಜನಸಂಖ್ಯೆಯಲ್ಲಿ ಮತ್ತು ಆದಾಯದಲ್ಲಿ ಅಸ್ಸಾಂ, ಸಿಂಧ್, ಒರಿಸ್ಸಾ, ಪಾಯಮೈ ಗಡಿ ಪ್ರಾಂತಗಳನ್ನು ಮೀರಿಸುತ್ತದೆ

---

## ಅರಣ್ಯ ಇಲಾಖೆ-ಕೊಡಗು.

ಮಡಿಕೇರಿ ೫-1-1948

ಹೇರಳವಾದ ತೇಗ, ಬೀಟೆ, ಹೊನ್ನೆ ಮತ್ತಿ, ನಂದಿ ಮತ್ತು ಇತರ ಜಾತಿಯ ದಿಮ್ಮಿಗಳು ಮತ್ತು ತೇಗದ ಸರಗಳು ಹೂಣ ಸೂರಿನಲ್ಲಿರುವ ಪ ಇಲ ಪು ಡಿಪೋ ದಲ್ಲಿ 1948ನೇ ಇಸವಿ ಜನವರಿ ತಿಂಗಳು 30ನೇ ತಾರೀಕ್ಕಿನವರೆಗೆ ಬೆಳಿಗ್ಗೆ 10 30 ಗಂ ಟೆಗೆ ಹರಾಜು ಹೊಕ್ಕಲ್ಪಡುವುದು ಹೆಚ್ಚಿ ನ ವಿವರಗಳಿಗೆ ಕೊಡಗು ಜೋಯಿಂಟ್ ಫಾರೆ ಸ್ಟ್ ಆಫೀಸರ್, ಮಡಿಕೇರಿ ಇವರಿಗೆ ಬರೆ ದುಕೊಳ್ಳತಕ್ಕದ್ದು

ಪಿ ಎಂ ಕಾಶಾಲಪ್ಪ
ಜೋಯಿಂಟ್ ಫಾರೆಸ್ಟ್ ಆಫೀಸರ್
ಕೊಡಗು

---

## FOR SALE.

20 84 acres of wetlands, 12 00 acres of young robusta and orange interplanted, 23 00 acres of Jungle fit for coffee and two tanks near Anandapur in Cowri Puliyeri village Ammatti Nad Price Rs 17,000 or near offer

*Apply to*
**P. K Puvaiah**
*Ghattadhalla Estate, Sidapur*

---

(ಗಾನೇ ಪುರದಿಂದ ಸಾಗಿದ್ದು)

ದಲ್ಲಿಯೂ ದುಡ್ಡಿಗೆ ತೊಂದರೆ ಇಜಿ ರಾ ಜ್ಯಗಳ ಆಡಳಿತ ಕ್ರಮ, ಕೈಗಾರಿಕಾ ಯೋಜನೆಗಳ ಜಾರಿಕ್ರಮ ಇವುಗಳನ್ನು ಅಭ್ಯಾಸ ಮಾಡಿದವರಿಗೆ ಈ ಪ್ರಶ್ನೆ ಎಂದೂ ಜರಿಲ ಸಮಸ್ಯೆಯಲ್ಲ ಹಿಂದೂದೇಶದ ಯಾವ ಸರಕಾರಕ್ಕೂ ತನ್ನ ಎಲ್ಲಾ ಪುನ ರ್ರಚನಾ ಕಾರ್ಯಕ್ರಮಗಳನ್ನು ಸ್ವತಂತ್ರ ವಾಗಿ ನೂಡಿಕೊಳ್ಳಲು ದುಡ್ಡಿಲ್ಲ ಯಾವ ಸರಕಾರವೂ ಬೇಕ್ಕಸದಲ್ಲಿ ದುಡ್ಡು ನಿಶ್ಚೆಂ ಸಮಿಟ್ಟ ಬೆದ್ಯೋಗಿಕ ಉದ್ಯಮಗಳನ್ನು ಕೈಕೊಳ್ಳುವದಿಲ್ಲ ತಿರುವಾಂಕೂರ, ಕೊ ಚ್ಚಿನ್ ಸರಕಾರಗಳು ಕಮ್ಮ ಸಂಚ ವರ್ಷ ದ ಯೋಜನೆಗೆ ಸಂಬಂಧಿಸಿದಿವೆ ಇಂಡಿ ಯಾ ಸರಕಾರವು "ಸ್ವಾತಂತ್ರ್ಯ" ಸಾಲ ವೊಂದನ್ನು ಕೆಗೆಯುವ ಇಚ್ಛೆಯಲ್ಲಿದೆ ಪ ಕಿಸ್ತಾನ ಸರಕಾರವು ಹೊರದೇಶಗಳಿಂ ದ ಸಾಲ ತೆಗೆಯುವಿ ಆದರಂತೆಯೇ ಯಾವದೇ ಪ್ರಗತಿಗ್ರಾಮಿ ಸರಕಾರವು ಜ ನಹಿತಕಾರ್ಯಕ್ಕಾಗಿ ತನ್ನ ಪ್ರಜೆಗಳಿಂದ ಇಲ್ಲವೇ ಹೊರಗಿನಿಂದ ಸಾಲ ಎತ್ತಬೇಕಾ ಗುತ್ತದೆ ಕೂಡಗಿನಲ್ಲಿ 'ಹೈಡ್ರೋ ಎಲೆಕ್ಟ್ರಿ ಕ್ಟ್' ಯೋಜನೆಗೆ ಇಲ್ಲವೇ ಹಾರಂಗಿ ಆಣೆಕಟ್ಟಿಗೆ ದಂತಿಯಂದಿಂದ ಇಲ್ಲವೇ ಜೊ ರಗಿಂದ ಸಾಲ ತೆಗೆಯ ಮಾಡಬಹುದಾಗಿ ದೆ ಕೂಡಗಿನಲ್ಲಿ ಫಲಪ್ರದ ದೇಶದ ಸರಕಾರವು ಸಕಪ್ಪ ಸಾಲ ಪಡೆಯುವ ದು ಸುಲಭವಾದ ಈ ಸಾಲ ಮರು ಪಾವತಿಯು ಸಲಭೀತಿಯಲ್ಲಿ ಸರಕಾರ ಕ್ಕೆ ಭಾರವೆನಿಸುವದಿಲ್ಲ ರೀತಿ ಆಯೋ ಜನೆಯ ಉದ್ದೇಶ ಇರಬೇಕು ಆಗುವದು

ಕನ್ನಡನಾಡು ವಿಶಾಲವಾಗುವದರಲ್ಲಿ ಹೊದ ಆದರೆ ಸ್ವತಂತ್ರ ಪ್ರಾಂತವಾಗ ಲು ಅವಕ್ಕಿರುವವೆಂದು ಹೆಚ್ಚಿನ ವರ ಕಾಳಜಿ, ಸಾಧ್ಯತೆ ಕೊಡಗಿಗೆ ಇದೆ ಕೂ ಡಗು ಪ್ರಶ್ನೆಂಕವಿದ್ದರೆ ೨೦ ಲಕ್ಷ ಜನಂ ಬೈಗುಳ ಸ್ವಿಚ್ಚ ಲೆಂಡಿನಂತೆ ಸಮ, ಶ ತಿ, ಶ್ರಗತಿಯ ತವರು ಮನೆಯೊಗಿ ಜಾವಿ ಸ ಬಹುದು ಪ್ರತಿಯೊಬ್ಬನೂ ಈ ವಿ ಚ ರದಲ್ಲಿ ಕೊಮ್ಮುವಾರು ಭವನೆಯ ನ್ನು ಬಿಟ್ಟು ನೈಜದೃಷ್ಟಿಯಿಂದ ನೋ ಡಿದ ರೆ ಪರಿಸ್ಥಿತಿಯು ಮನವರಿಕೆಯಾಗ ಪದ. "ಕೊಡಗಿನ ೪೨,೦೦೦ ವಿರುವ ಕೂಡವ ರು ಉದಾರ ಬುದ್ಧಿಯಿಂದ ಕನ್ನಡ ನಾಡಿ ಗೆ ಸೇರಬೇಕು" ಎಂಬ ಪ್ರೆ ಎನ್ ಎಸ್ ಕಿಟ್ಟಿಯವರ ತಪ್ಪು ತಿಳುವಳಿಕೆಯ ಕೊಡಗಿನ ಪ್ರಶ್ನೆ ಕೇವಲ ಕೊಡವರಿ ಗಿ ಅಲ್ಲ. "ವಿಶಾಲ ಕರ್ನಾಟಕದಲ್ಲಿ ನಮ್ಮ ಮಂತ್ರಿಗಳು ಜಾತಿಯವರು ಇದ್ದಾರೆ ಆ ದ್ದರಿಂದ ವಿಶೇಷಣವಾಗಬೇಕು"ನ್ನುವದೂ ತಪ್ಪು ವಿಶೇಷಣವಾದರೂ ಅವರವರ ಗೆ ನಿಜವೇ ವಿಶಿಷ್ಟ ಧಾರವಾಡದ ವೈನನು ಕೊಡಗಿನ ಶ್ರೀಮನ ಬೂಕ್ಕಸತಂಬಿಸಿ ಕೊ ಡನ ಅಲ್ಲಿಯ ಬ್ರಾಹ್ಮಣನು ಇಲ್ಲಿಯ ವನನ್ನು ತಲೆಯ ಮೇಲಿಡನ ಕೊಡ ಗು ಪ್ರತ್ಯೇಕವಿದ್ದರೆ ಇಲ್ಲಿಯ ಆಡಳಿತವು ಬಹುಮತಿಯಾದ ಇತರರ ಕೈಯಲ್ಲೇ ಇರುವದು ಅಂದ ವೇಲೆ ಫ್ರೌಢಮತ ದಾನ ಜಾರಿಗೆ ಬರುವ ಭವಿಷ್ಯದಲ್ಲಿ ಕೊಡ ವರ ದಬ್ಬಾಳಿಕೆಯ ಮಾತೇಳಿ? ಕೊಡವ ರು ಸಂಕೀರ್ಣ ಹೃದಯದವರಲ್ಲ ಇದ ಕ್ಕೆ ನಾಡಿಗೆ ನಾಡೇ ಸಾಕ್ಷಿ ನುಡಿಯುತ್ತಿ ದೆ. ಕೊಡಗನ್ನು ಯಾರೇ ಆಳಿದರೂ ಕೊಡಗಿನವರೆಲ್ಲರ ಹಿತವಾಗಿರಬೇಕು ಎಂಬುದೇ ಅವರ ಆಶಯ

---

# THE CAUVERY
## Paper Mills & Forest Industries, Ltd.

(INCORPORATED IN COORG)

The above Company which has been formed with the object of erecting and running a big Paper Factory in accordance with a huge scheme approved by highly qualified experts having practical experience of the industry in and outside India, was registered on 20th August 1947, in the Province of Coorg, with an authorised Capital of 2½ crores, permission for which was accorded by the Controller of Capital Issues, Government of India on 23rd May 1947, after the scheme was passed through several departments of the Central Government, including the Paper Development Secretariat The Company's application to the Government of Mysore for being permitted to issue only 15 lakhs capital in Mysore State has also been granted The Government of Coorg have blessed the Company by granting monopoly rights in respect of raw materials required for the industry and other valuable concessions The Company will not issue a public prospectus till prescribed conditions are fulfilled

The promoters have come to learn with concern that a Company with the name of "The Cauvery Valley Paper Mills, Ltd" was registered on 3rd November 1947 with the Registrar of Joint Stock Companies in Mysore, Bangalore, with an authorised capital of Rupees One Crore and that the said Company has issued a public Prospectus in Mysore state dated 7th November 1947 offering a share capital of Rs 5 lakhs

We the undersigned issue this public notice to prevent the possibility of confusion between "The Cauvery Paper Mills and Forest Industries, Limited", of which we are promoters and "The Cauvery Valley Paper Mills, Ltd" the Company registered in Mysore

VIJAI VEL & CO.
Managing Agents
*Dated 15th December '47* BANGALORE & MERCARA.

---

## WARDEN MARCHES AHEAD.

ANOTHER YEAR OF RECORD BUSINESS

Youngest working on Surplus of Funds of Progress of the past three years

| Business | 1944 | 1945 | 1946 |
|---|---|---|---|
| Introduced Rs | 1,20,57,513 | 1,56,19,295 | 2,01 53,277 |
| Completed Rs | 1,04,77,316 | 1,32,87,529 | 1,72,12 180 |

## WARDEN INSURANCE CO., Ltd.

H. O. BOMBAY

*ORGANISATION ALL OVER INDIA CEYLON & EAST AFRICA*

Wide scope for energetic young men as Agents, Special Agents and paid Organisers under our new Expansion Scheme

*For particulars apply to*
**P. C Karambaya,**
Brach Secretary

*Branch Office for Mysore State & Coorg*
112 Gandhinagar,
BANGALORE City

ವಾರ್ಡನ್ ಇನ್ಶೂರೆನ್ಸ್ ಕಂಪೆನಿ. ಲಿಮಿಟೆಡ್.
(ಹೆಡ್ ಆಫೀಸ್—ಬೊಂಬಾಯಿ)
ಮೈಸೂರು ಮತ್ತು ಕೂರ್ಗ್ ಶಾಖೆ
V ಮೆಯಿನ್ ರೋಡ್ ಗಾಂಧಿ ನಗರ, ಬೆಂಗಳೂರು ಸಿಟಿ

## ಹರಿಜನರ ಸಭೆ.

ಕೊಡಗು ರಾಷ್ಟ್ರಸೇವಾದಳವರು ತಾ. ೨೦-೧೨-೪೬ ನೇ ಶನಿವಾರ ೩ ಗಂಟೆಗೆ ಪೊಳ್ಳಬೆಟ್ಟದ ಸನಿಹಪದಲ್ಲಿರುವ ಚೆನ್ನಯ್ಯನಕೋಟೆ ವೈದಾನದಲ್ಲಿ ಶ್ರೀಮಾನ್ ಐಚೆಟ್ಟಿರ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಹರಿಜನರ ಬಹಿರಂಗ ಸಭೆಯೊಂದು ಜರಿಗಿ ಹರಿಜನೋದ್ಧಾರ ಸಂಘವೊಂದು ಸ್ಥಾಪನೆಯಾಯಿತು. ಶ್ರೀ. ಬಿ. ಎ. ಪೂವಯ್ಯ, ಶ್ರೀ. ಇ. ಸೋ. ಚಿಣ್ಣಪ್ಪ, ಶ್ರೀ. ಕೆ. ಕೆ. ಕುಟ್ಟಪ್ಪ, ಶ್ರೀ. ಯಂ. ಡಿ. ಮೊಚಯ್ಯ ಹರಿಜನ ಕುನ್ನ ಇವರುಗಳು ಇದರ ವಿಷಯವಾಗಿ ಭಾಷಣ ಮಾಡಿದರು. ಈ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳು ಬಹುಮತದಿಂದ ಅಂಗೀಕರಿಸಲ್ಪಟ್ಟವು.

(೧) ಕೊಡಗಿನಲ್ಲಿ ಹರಿಜನ ಬಾಲಕ ಬಾಲಕಿಯರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡಿಸುವಂತೆಯೂ, ಇದಕ್ಕೆ ತಕ್ಕ ಅನುಕೂಲತೆಗಳನ್ನು ಅಂದರೆ ಹರಿಜನ ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ, ಲೇಖನ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂದೂ ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ.

(೨) ಹರಿಜನ ವಿದ್ಯಾರ್ಥಿಗಳಾಗಿ ಸರಕಾರದವರು ಕೊಡುತ್ತಿರುವ ಈಗಿನ ವಿದ್ಯಾರ್ಥಿ ವೇತನಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸರಕಾರವನ್ನು ಈ ಸಭೆಯು ಪ್ರಾರ್ಥಿಸುತ್ತದೆ.

(೩) ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೊಂದಿದ ಹರಿಜನ ಯುವಕ ಯುವತಿಯರಿಗೆ ಸರಕಾರಿ ನೌಕರಿಯನ್ನು ಒದಗಿಸಿಕೊಡಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

(೪) ಮುಂದೆ ಬರುವ ಕೌನ್ಸಿಲ್ ಮತ್ತು ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಹರಿಜನರಿಗೂ ಕೆಲವು ಸ್ಥಳಗಳನ್ನು ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

(೫) ಹರಿಜನರಿಗೆ ಅಂಗಡಿಗಳಲ್ಲಿ ಸರಿಯಾದ ವ್ಯವಸ್ಥೆ ನೂಡಿ ಬಟ್ಟೆ ಒಗಸಿಕೊಡಬೇಕೆಂದು ಸರಕಾರವನ್ನು ಈ ಸಭೆಯು ಪ್ರಾರ್ಥಿಸುವುದು.

(೬) ನೆರೆ ಪ್ರಾಂತ್ಯವಾದ ಮೈಸೂರು ಸೀಮೆಯಲ್ಲಿ ಹರಿಜನರಿಗೆ ವಾಸದ ಸೌಕರ್ಯಕ್ಕಾಗಿ ಮುಪ್ಪತ್ತಾಗಿ ಹಂಚು, ಮಣ್ಣು, ಬಿದಿರು ಇವುಗಳನ್ನು ಕೊಟ್ಟಿರುವಂತೆ ಕೊಡಗಿನಲ್ಲಿಯೂ ಕೊಡಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

(೭) ಕೊಡಗಿನ ಎಲ್ಲಾ ಹರಿಜನರಿಗೆ ವೈಸಾರಿಯಲ್ಲಿ ತರಿ ಯಾ ಕುಷ್ಕಿ ವ್ಯವಸಾಯಗಳನ್ನು ಮಾಡಲು ಪ್ರತಿಯೊಬ್ಬನಿಗೆ ಕಡಿಮೆ ಪಕ್ಷ ಮೂರು ಎಕ್ರೆ ಜಾಗವನ್ನು ಮುಪ್ಪತ್ತಾಗಿ ಕೊಡಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುವುದು.

(೮) ಹರಿಜನರಿಗೆಲ್ಲಾ ಹತ್ತಿ ಮತ್ತು ತಕಳಿ ಯಾ ಚರಕವನ್ನೊದಗಿಸಿಕೊಟ್ಟು ಪ್ರತಿಯೊಬ್ಬನೂ ನೂಲುಮಾಡುವ ಏರ್ಪಾಡು ಮಾಡಬೇಕೆಂದು ಈ ಸಭೆಯು ಪ್ರಾರ್ಥನೆ.

(೯) ಇಲ್ಲಿಯ ಹರಿಜನರಿಗೆ ಒಂದು ಶಾಲೆಯ ಕಟ್ಟಡಕ್ಕೆ ಕಳೆದ ಮೂರು ವರ್ಷಗಳಿಂದ ಪ್ರಯತ್ನಿಸಿದರೂ ಈ ವರೆಗೆ ಯಾವ ಪ್ರಯೋಜನವೂ ಆಗದಿರಂದ ಸ್ಥಳೀಯ ಸರಕಾರವು ಒಂದು ಕಟ್ಟಡವನ್ನು ಒಡನೆ ಕಟ್ಟಲು ಸಹಾಯ ಕೊಡಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

---

## 'ಹರಿಜನ ಸೇವಕ ಸಂಘ'

ನಾನು ತಾ. 26-12-47 ರ 'ಕೊಡಗು' ಪತ್ರಿಕೆಯಲ್ಲಿ ಕುರುಬ ಜನಾಂಗದ ವಿಚಿಂಗಿನ ನಡವಳಿಕೆಯನ್ನು ಓದಿದೆನು. ಎಲ್ಲರೂ ಹರಿಜನೋದ್ಧಾರ ಎಂದು ಬರೀ ಪಂಚಮರನ್ನು ಉದ್ಧರಿಸುತ್ತಿರುವ ಕಾಲದಲ್ಲಿ ಪಂಚಮರಿಗಿಂತಲೂ ವಿದ್ಯೆಯಲ್ಲಿ, ಸಭ್ಯತೆಯಲ್ಲಿ ಆರ್ಥಿಕ ಸ್ಥಿತಿಯಲ್ಲಿ ಮತ್ತು ಜೀವನ ಕ್ರಮದಲ್ಲಿ ಬಹು ಹಿಂದೆ ಉಳಿದಿರುವ ನಮ್ಮಲ್ಲಿಯ ಕುರುಬರ ಉದ್ಧಾರಕ್ಕಾಗಿ ಇಂಥ ಒಂದು ಸಂಘ ಸ್ಥಾಪನೆಯಾಗುವುದು ನಮ್ಮ ನಾಡಿಗೆ ಬಹು ಹಿತವೇ ಸರಿ. ಅಂದು ನಡೆದ ವಿಚಿಂಗಿನ ಪರಿಣಾಮವಾಗಿ ಈಗಾಗಲೇ ನಂಜರಾಜ ಪಟ್ಟಣದ ಶಾಲೆಗೆ ಹನ್ನೆರಡು ಕುರುಬ ಹುಡುಗರು ಒದುಬರಹ ಕಲಿಯಲು ಹಾಜರಾಗುತ್ತಲಿರುವರು.

ಆದರೆ ಕುರುಬ ಎಂಬುದು ಕುರಿ ಮೇಯಿಸುವವನಿಗೆ ಆದ್ದರಿಂದ ಈ ನಮ್ಮ ಕುರುಬರು ಆ ವೃತ್ತಿಯಲ್ಲಿ ಇಲ್ಲದ ಕಾರಣ ಸದರಿ ಸಂಘಕ್ಕೆ 'ಹರಿಜನ ಸೇವಕ ಸಂಘ' ಎಂಬದಾಗಿ ನಾಮಕರಣ ಮಾಡಬೇಕಾಗಿ ಸಂಘದ ವ್ಯವಸ್ಥಾಪಕರನ್ನು ಪ್ರಾರ್ಥಿಸುತ್ತೇನೆ.

ಕುರುಬರು--ಎಂದರೆ ಅರಬನರು. ಹರ-ಎಂದರೆ ಈಶ್ವರ ಈಶ್ವರನಿಗೂ ಇಶ್ವರನಿಗೂ ತುಂಬಾ ಹೋಲಿಕೆಗಳವೆ (1) ಈಶ್ವರನಿಗೆ ಮನೆ ಮಠಗಳಲ್ಲ, ಸ್ಮಶಾನ. ಕಾಡೇ ಅವನ ವಾಸಸ್ಥಳ. ಇವರಿಗೂ ಅದೆ (2) ಈಶ್ವರನಿಗೆ ಪೂರ್ಣ ಉಡುಪು ಇಲ್ಲ, ಅರೆ ಬೆತ್ತಲು. ಇವರೂ ಹಾಗೆಯೇ. (3) ಈಶ್ವರನ ಹಣೆಗಣ್ಣಿನಲ್ಲಿ ಯಾವಾಗಲೂ ಬೆಂಕಿ ಇರುತ್ತೆ. ತೆದೋರೀತಿ ಈ ಕುಟುಂಬದವರುವಲ್ಲಿ ಹಗಲು ರಾತ್ರಿ ಬೆಂಕಿ ಇದ್ದೇ ಇರುತ್ತೆ. ದೀಪವನ್ನೂ ಅವರು ಉಪಯೋಗಿಸರು. (4) ಈಶ್ವರನು ತನ್ನ ಮಗ ಗಜಾನನನ್ನು (ಗಣಪತಿ) ಪ್ರೀತಿಸುತ್ತಾನೆ ಇವರು ಗಜರಾಜನ ವಂಶವನ್ನೇ ತನ್ನ ವಶದಲ್ಲಿಟ್ಟುಕೊಂಡು ಮೆಕ್ಕೆಳಂತೆ ಸಾಕ್ತಾರೆ. (5) ಈಶ್ವರನು ಕಿರಾತ ವೇಶ ಧರಿಸಿ ಬೇಟೆಯಾಡಿದನು. ಇವರೂ ಅವನಂತೆಯೇ ಬೇಟೆಯಲ್ಲಿ ನಿಪುಣರು.

ಹೀಗೆ ಹೋಲಿಕೆ ಇರುವುದರಿಂದ ಸದ ಸದರಿ ಸಂಘಕ್ಕೆ 'ಹರಿಜನ ಸೇವಕ ಸಂಘ' ಎಂದು ಹೆಸರಿಡಬೇಕಾಗಿ ಪುನಹ ಪ್ರಾರ್ಥಿಸುತ್ತೇನೆ. ಬೈಯ್ಯೆಯ್ಯಗೌಡ.

---

## ಪ್ರಕಟಣೆ.

ನಾಪೋಕ್ಲುನಾಡು ಬೇಂಗೂರು ಗ್ರಾಮದಲ್ಲಿ ನನ್ನ ಚಿಕ್ಕ ತಂದೆ ಬಾಯೆಡ ಪೊಣ್ಣಪ್ಪನವರ ಹೆಸರಿನಲ್ಲಿ ಜಮೂಬಂದಿ ನಡೆಯು ಬರುತ್ತಿರುವ ನಮ್ಮ ಕುಟುಂಬದ ಸ್ಥಿರಾಸ್ತಿಯು ಶ್ರೀ. ಮಂದಪ್ಪಂಡ ಕಾಳಪ್ಪನವರ ಹೆಸರಿನಲ್ಲಿ ಗಿರ್ವಿಯಾಗಿದೆ. ಸದರಿ ಗಿರ್ವಿಯನ್ನು ಬಿಡಿಸಿಕೊಳ್ಳುವ ಉದ್ದಿಶ್ಯ ನನ್ನ ಚಿಕ್ಕ ತಂದೆ ಪೊಣ್ಣಪ್ಪನವರು ಸದರಿ ಆಸ್ತಿಯನ್ನು ಕ್ರಯ ಪತ್ರ ಮೂಲಕ ಪರಾಧೀನ ಮಾಡುವುದಾಗಿ ನಿರ್ಧರಿಸಿದೆ. ಈ ಸೊತ್ತನ್ನು ಪರಾಧೀನ ಮಾಡುವ ಹಕ್ಕು ಅವರಿಗೆ ಇಲ್ಲದಿರುವುದರಿಂದ ಕ್ರಯಕ್ಕೆ ಪಡಕೊಳ್ಳತಕ್ಕವರು ಮುಂದೆ ಆಗಬಹುದಾದ ನಷ್ಟಗಳಿಗೆ ಜವಾಬ್ದಾರರಾಗಬೇಕಾಗಬಹುದೆಂಬ ಸಂಗತಿಯನ್ನು ತಿಳಿಸಿದೆ.

ಬಾಯೆಡ ಪೊನ್ನಪ್ಪ.

---

## ಆಸ್ತಿ ಮೂರಾಟಕ್ಕಿದೆ.

ವೀರಾಜಪೇಟೆನಾಡು ಪಾಲಂಗಾಲ ಗ್ರಾಮದಲ್ಲಿ ಎಂದರೆ ನಾಲ್ಕುನಾಡು ರಸ್ತೆ ಕಡಂಗದಿಂದ 1½ ಮೈಲು ತೆಂಕ ಭಾಗಕ್ಕೆ 420 ಬಟ್ಟೆ ಒಳ್ಳೆಯ ನೀರಾವರಿ ಭೂಮಿ ಮತ್ತು ಇದಕ್ಕೆ ಸೇರಿದ 32 ಏಕರು ಬಾಣೆ. ವಾರಗಾರರಿಗೆ ಯೋಗ್ಯವಾದ 3 ಹುಲ್ಲಿನ ಮನೆಗಳು ಮೂರಾಟಕ್ಕಿವೆ. ಕ್ರಯ 18,000 ಯ ಇವರ ಸಮೀಪ. ಕೊಂಡುಕೊಳ್ಳುವ ಮಾಯಿಸಿದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಕಡಿಕೇರಿಯಂಡ ಮಾದಪ್ಪ.
ಕಣ್ಣಂಪೂಡು ತೋಟ.
2-2 ವೀರಾಜಪೇಟೆ.

---

ವೀರಾಜಪೇಟೆಗೆ 'ಕೊಡಗು' ವಿಜೆಂಟರು:
**ಶ್ರೀ ಕೆ. ಎಂ. ಸುಬ್ರಾಯಪ್ಪನವರು.**


ಏಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್ & ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮಬ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ 1, ಉಡುಪಿ.

(ಟೆಲಿಫೋನ್ ನಂ. 8138)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

**ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ಠೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ರೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚೆನ್ನ, ಳೆಳ್ಳ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಸಾ. ಕಾರ್ಯದರ್ಶಿ. ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

**ಎಂಪೈರ್ ಆಫ್ ಇಂಡಿಯಾ**

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು | ಒಟ್ಟು ಆದಾಯ .... | 1,07,09,000 | ರೂಪಾಯಿ |
| | ಚಾಲ್ತಿಯಿರುವ ವಿಮೆ .... | 17,74,52,000 | ,, |
| ಸ್ವತ್ತು ಸಂಗತಿಗಳು. | ಆಸ್ತಿ .... .... | 6,67,60,000 | ,, |
| ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | .... | 8,83,62,000 | ,, |

ಅಂಗ ಸಂಸ್ಥೆಗಳು: ಟಿಪ್ಪಿಕ್ಟ್ ಟೋರ್ಸ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. ಏಜೆನ್ಸಿ: ಆರ್ಜಿಗಳನ್ನು ಸ್ವಾಗತಿಸಿದೆ. ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ತಾರೀಕು ೧೬-೧೧-೧೯೩೨ ಸೋಮವಾರ | ಸಂಚಿಕೆ ೩೦

## ಗಾಂಧೀಜಿಯವರ ಉಪವಾಸ.

ಮಹಾತ್ಮಾಗಾಂಧೀಜಿಯವರು ಕೋಮುವಾರು ಐತ್ಯಕ್ಕಾಗಿ ಕಾ. ೧೫ ೧೯೩೨ ಮಲರ ಬೆಳಿಗ್ಗೆ ೧೧ ಗಂಟೆಯಿಂದ ಅನಿಶ್ಚಿತ ಅವಧಿಯ ವರೆಗೆ ಉಪವಾಸವ್ರತವನ್ನು ಕೈಕೊಂಡಿರುವರು. ಉಪವಾಸ ಕೈಗೊಳ್ಳುವ ದಿನ ಬೆಳಿಗ್ಗೆ ೮ ಗಂಟೆಗೆ ಎದ್ದು ವ್ರಾರ್ಥನೆ, ಗಾಳಿವಿಹಾರ, ಸ್ನಾನಗಳನ್ನು ತೀರಿಸಿ ತಮ್ಮ ವೈಖರಿಸ್ಪದ ಆಹಾರವಾದ ಆಡಿನ ಹಾಲು, ಜೇನು ಸಿದ ತರಕಾರಿ ಮತ್ತು ಹಣ್ಣುಸರ ತೆಗೆದುಕೊಂಡು ನಂತರ ಉಪವಾಸವನ್ನು ಕೈಕೊಂಡರು. ಮಹಾತ್ಮಾಗಾಂಧೀಜಿಯವರು ತೆಗೆದುಕೊಂಡ ಮೊದಲನೇ ಉಪವಾಸವಿದು. ಉಪವಾಸ ಹೇಗೆ ದುಕೊಳ್ಳುವ ಮುನ್ನ ಬಿರ್ಲಾಭವನದ ಆವರಣದಲ್ಲಿ ವ್ರಾರ್ಥನೆ ನಡೆಯಿತು. ಕುರಾನು, ಸಿಕ್ಖರ ಗ್ರಂಥಸಾಹಿಬ್, ಗೀತಾ ಶ್ಲೋಕಗಳನ್ನು ಪಾಡಿದ ನಂತರ ಮಹಾತ್ಮರ ಮೆಚ್ಚಿನ 'ವೈಷ್ಣವ ಜನತೋ—' ಗೀತೆಯು ಹಾಡಲ್ಪಟ್ಟಿತು.

ಮಹಾತ್ಮಾಗಾಂಧೀಜಿಯವರು ತಮ್ಮ ಉಪವಾಸದ ಉದ್ದೇಶವನ್ನು ಹೇಳುತ್ತಾ ಹೀಗೆಂದರು—'ಶಾರೀರಿಕ ಆರೋಗ್ಯಕ್ಕಾಗಿ ಉಪವಾಸ ಮಾಡುವವರಿದ್ದಾರೆ. ಮನಸ್ಸಿನ ಕಲ್ಮಶವನ್ನು ತೊಳೆಯುವಾಕಲು ಉಪವಾಸ ಮಾಡುವವರಿದ್ದಾರೆ. ಈ ಉಪವಾಸಗಳನ್ನು ಮಾಡುವಲು ಆಹಿಂಸೆಯಲ್ಲಿ ಅಚಲವಿಶ್ವಾಸವಿರಬೇಕಾದವರಾಗಬೇಕಿಲ್ಲ. ನಮ್ಮಲ್ಲಿ ಅನಾಚಾರ, ತಪ್ಪುಗಳನ್ನು ವಿರೋಧಿಸಲು ಅಹಿಂಸೆಯ ಭಕ್ತನಿಗಿರುವ ಒಂದೇ ಮಾರ್ಗವೆಂದರೆ ಉಪವಾಸ. ಇಂಥಾ ಒಂದು ಸಂದರ್ಭವು ಈಗ ಒಂದಿದೆ. ಕಲ್ಕತ್ತಾದಿಂದ ಸೆಪ್ಟೆಂಬರ್ ತಾರೀಕಿನಲ್ಲಿ ಪತ್ರಿಮ ಪಂಜಾಬಿಗೆ ಹೋಗಲು ದೆಲ್ಲಿಗೆ ಬಂದಾಗ ನಗುವಿನ ಬೀಡಾದ ಡೆಲ್ಲಿಯು ರೋಧನದ ನಿಲಯವಾಗಿತ್ತು. ನನ್ನನ್ನು ಸ್ವಾಗತಿಸಲು ಬಂದ ಸರ್ದಾರ ಪಟೇಲರ ಮುಖದಲ್ಲಿಯೂ ವಾಸ್ತವವಾದ ಆ ನಗುಹಾಸ್ಯವಿರಲಿಲ್ಲ. ಅವರು ನನಗೆ ಡೆಲ್ಲಿಯ ಕೋಮುವಾರು ಹತ್ಯಾಕಾಂಡವನ್ನು ವಿವರಿಸಿದರು. ದೇರದ ಹಲವು ಭಾಗಗಳಲ್ಲಿ ಸೈನ್ಯ ಮತ್ತು ಪೊಲೀಸರ ಭಯದಿಂದ ಕೋಮುವಾರು ಪ್ರತೀಕಾರ ಭಾವವು ಹೊರಬೀಳದೆ ಗುಪ್ತವಾಗಿದ್ದರೂ ಈ ಭಾವನೆಯು ಜನರ ಹೃದಯದಲ್ಲಿ ಭೀಕರ ಹಿಂಸೆಯ ಸೇಡು ಕಲಿತಿದೆ. ಯಾವಾಗಲಾದರೊಮ್ಮೆ ಅದು ಹೊರಬರಬಹುದು. ಇದು ನನ್ನ ಕಾರ್ಯದ ಸಫಲತೆಯನ್ನು ತೋರಿಸುವದಿಲ್ಲ. ನನ್ನ ಅನಮನ ಸ್ನೇಹಿತ ಮೃತ್ಯುವಿನಿಂದ ನಾನು ಬೇರೆ ಉಳಿಯಬೇಕಾದರೆ ಈ ಸಾಫಲ್ಯವನ್ನು ಪಡೆಯುವೆ ಇಷ್ಟಿಲೇ ಅದಕ್ಕಾಗಿ ಮಡಿಯುವೆ

ಹಿಂದೂ, ಮುಸ್ಲಿಂ, ಸಿಕ್ಖರಲ್ಲಿ ಸ್ನೇಹ ಬಾಂಧವ್ಯವು ಬೆಸೆಯಬೇಕೆಂಬುದೇ ನನ್ನ ಕೋರಿಕೆ. ಕಂಡಿ ಈ ಸ್ನೇಹವನ್ನು ಎಂದಿ ಮಾಡುವ ಗಿದು ನನ್ನ ಆಮರಣಾಂತ ಇಯು ಅನೇಕ ದಿನಗಳಿಂದ ನನ್ನ ಕರ್ತವ್ಯ ಕಡೆಗೆ ಕೈ ಯಿ ತ್ತಿ ತೋರಿ ಸುತ್ತಿರುವ ಅಂತರ್ ಧ್ವನಿಯು ನನಗೆ ತಪ್ಪಿದ ಕರೆ ಇರಬಹುದೆಂದು ನಿರ್ಧರಿಸುತ್ತಿದ್ದೇನು. ಈಗ ಆಯಿತೆಂದು ಪ್ರಭುವಿನ ಕರೆ ಬಂದಿದೆ. ತನ್ನ ಇಷ್ಟದಂತೆ ಇಂದಿಗೆ ಬಿಡುವನ್ನಿದ್ದಾಗಲು ನಿಜವಾದ ಸತ್ಯಾಗ್ರಹಿಗಿರುವ ಲಂಬಿಸಿ ಅಗ್ನಿ ಉಪವಾಸ.

ಮುಂಬಯಿಂದ ಬಿಲ ನನ್ನನ್ನು ಬಂಧಿಸಿದಾಗ ಮುಸ್ಲಿಮರಿಗೆ ಬೇಕಾಗಿ ಉತ್ತರಿಸಲು ನನಗೆ ಧೈರ್ಯವಾಗಿರಲಿಲ್ಲ. ನಾನು ಸ್ವತಂತ್ರನಾಗಿರುವ ಪರಿಸ್ಥಿತಿಯು ನನ್ನನ್ನು ಹೀಗೆಂದಾಗಿದ್ದು. ಕಳೆದ ಮೂರು ದಿನಗಳಿಂದ ಈ ವಿಚಾರ ನಾಪಾಗಿ ಅಲೋಚಿಸಿದ್ದೇನೆ. ಕಡೆಗೆ ಈ ನಿರ್ಧಾರಕ್ಕೆ ಬಂದಿದ್ದೇನೆ. ಕಡೆಗೆ ಈ ನಿರ್ಧಾರವು ಮನೋಭಿಲಾಷೆಯಲ್ಲಿ ಬನ್ನಿ ನನ್ನನ್ನು ವ್ಯಕ್ತಿವನ್ನಾಗಿ ಮಾಡಿದು. ಪರಿಶ್ರಮವಾದ ಮನುಷ್ಯನಿಗೆ ಕರ್ತವ್ಯವಿಮುಖನನ್ನು ಮಾಡಿದೆ ಎಲೆಯುವಷ್ಟಕ್ಕೆ ಥಾ ಮಹೋನ್ನತವಾದ ಕಾರ್ಯ ಬೇರೆ ಇರದು. ಪ್ರತಿಯೊಬ್ಬನೂ ಈ ನನ್ನ ನ್ಯಯುಕ್ತವನ್ನು ಅರ್ಥಮಾಡಿಸಬೇಕು. ನನಗಾಗಿ ಮತ್ತು ನನ್ನೊಡನೆ ಪ್ರಾರ್ಥನೆಯಿರಲಿ.

ನಾಳೆಯ ಪ್ರಥಮ ಊಟದ ನಂತರ ಉಪವಾಸವು ಪ್ರಾರಂಭವಾಗುತ್ತದೆ. ಎಂದಿನ ವರೆಗೆ ಎಂಬುದು ಅನಿಶ್ಚಿತ. ನಾನು ನೀರು ಕುಡಿಯಬಹುದು ಯಾ ನಿಂಬೆರಸ ತೆಗೆದುಕೊಳ್ಳಬಹುದು ಎಲ್ಲಾ ಕೋಮುಗಳ ಹೃದಯಪರಿವರ್ತನವಾಗಿ ಐಕ್ಯತೆ ನೆಲಸಿದಾಗ, ತಮ್ಮ ಕರ್ತವ್ಯವನ್ನು ತಾವು ತಿಳಿದು ಒದಗೂಡಿದಾಗ ಉಪವಾಸವು ನಿಲ್ಲುವದು. ಜಗತ್ತಿನ ದೃಷ್ಟಿಯಲ್ಲಿ ಕೆಳಗಿಳಿಯುತ್ತಿರುವ ಭಾರತದ ಪ್ರತಿಷ್ಠೆಗೆ ಗೌರವಗಳನ್ನು ಉಳಿಸಿದ ಮಹಾ ಸೌಭಾಗ್ಯವು ಇವರಿಂದ ಎಲ್ಲರಿಗೂ ಕೂಡುವದು.

ಸ್ನೇಹಿತರಿರಲಿ, ಶತ್ರುವಿರಲಿ ಯಾರೂ ನನ್ನೊಡನೆ ಸ್ನೇಹಿಸಿವರಿಲ್ಲ. ಉಪವಾಸದಲ್ಲಿ ನಂಬಿಕೆಯಿಲ್ಲದ ಅನೇಕ ಸ್ನೇಹಿತರಿದ್ದಾರೆ. ಅವರು ನನ್ನ ಈ ಕಾರ್ಯವನ್ನು ಸಹಿಸಿ ನನಗೆ ಈ ಕಾರ್ಯಸ್ವಾತಂತ್ರ್ಯವನ್ನು ಕೊಡಬೇಕು. ದೇವರೇ ನನ್ನ ಆ ಪ್ರಚ್ಛ ಸಲಹೆಗಾರನಾಗಿರುವದರಿಂದ ಈ ಕೀರ್ಮಾನವನ್ನು ಬೇರೆ ಯಾರ ಸಹಾಯವಿಲ್ಲದೆ ನಾನೇ ತೆಗೆದುಕೊಂಡಿರುವೆನು. ನಾನು ತಪ್ಪುಮಾಡಿರುವೆನೆಂದು ಖಚಿತವಾದರೆ ಉಪವಾಸವನ್ನು ಹಿಂತೆಗೆಯಲು ಹೆದರಲಾರೆ. ಇಡೀ ಹಿಂದೂದೇಶವು ನನ್ನ ಕರೆಗೆ ಕಿವಿಕೊಡುವದಾದರೆ ಉಪವಾಸವು ಕೊನೆಗೊಳ್ಳಬಹುದು. ಈ ಉಪವಾಸದಿಂದ ಯಾರ ಮೇಲೂ ಬಲತ್ಕಾರ ವಿಲ್ಲ. ಇದರಿಂದ ಬಲಹೀನವಾದ ಸ್ಥಳಾಪೇಕ್ಷೆಯು ನನಗಿಲ್ಲ. ಆದ್ದರಿಂದ ಪ್ರತಿಯೊಬ್ಬನೂ ಈ ಕೋಮುವಾರು ಪಿಡಂಭೂತನನ್ನು ಪರ್ಯಾಲೋಚಿಸಿ, ನನಗೆ ಖಚಿತವೆಂದು ತೋರುವ, ಆಮರಕಾಂತಿಯನ್ನು ಹಡೆಯಲು ಅನುವಾಗುವ ಮಟ್ಟಿನ ಅನಿವಾರ್ಯವಾದರೆ ಯಾಗ ಮಾಡುವ ಸ್ವಾತಂತ್ರ್ಯ ಕೊಡಬೇಕು.

ಹಿಂದೂದೇರಲ್ಲಿ ಹಿಂದೂ, ಮುಸ್ಲಿಂ, ಸಿಕ್ಖರ ಪರಸ್ಪರ ಕೊಡೆಯ ಬಾಗು ಬಿಲ್ಕಾಶ್ವವನ್ನು ಸೂಚಿಸುವಂತೆಂದು ವಿರಣವು ನನಗೆ ಖಚಿತವಾಕ್ಕಿನ್ನ ಬಲವಗಿಯಾಗಿ ಪರಿಣಮಿಸಿದೆ. ನಾನು ನದ್ಧನಿತ್ಯ, ದರಿಂದ, ಪಾಪಾದಾಣ ಬಾಂಧಿಸಿ ಇದರ ಆಯೆ ದೆಜಿ ಹಿಂದೂ ದೇಶವು ಅನುಸರಿಸಿ ಸರ್ವ ನಾಶವಾದಂತೆ ಪಾಕಿಸ್ತಾನದಲ್ಲಿಯೂ ಇನ್ನೂ ಧರ್ಮವು ನಾಶವಾದರೂ ಆವರ ಧರ್ಮವು ಬೇರೆಡೆ ಉಳಿದೇ ಉಳಿಯುವದು. ಹಿಂದೂದೇಶದಲ್ಲಿ ಹಿಂದೂ ಧರ್ಮ, ಸಿಕ್ಖ ಧರ್ಮಗಳು ಅಳಿದರೆ ಜಗತ್ತಿನಲ್ಲಿ ಅವುಗಳ ಅಸ್ತಿತ್ವವೆಲ್ಲ? ಹಿಂದೂ ದೇಶದ ಭಯಾನಕ ಪರಿಸ್ಥಿತಿಯನ್ನು ಅವಲೋಕಿಸಿರಿ. ಈ ಜಗತ್ಪರಿತ್ರೆ, ಅಂಧಾಕಾರವಾತಾವರಣದಲ್ಲಿ ಆತ್ಮಸ್ಪರ್ಶೆಯು ದೀಪ ಪ್ರಜ್ವಲ್ಲಿಸಿ, ಹತ್ಯಾ ಕೋಮುದಲ್ಲಿ ಆಸ್ಥಿರತೆಗೊಳ್ಳಲು ತಯಾರಿರುವ ವೈಸ್ಯಪೂರಿತ ಭಾರತ ಪುತ್ರನೊಬ್ಬನು ಸಾಕಷ್ಟು ಪವಿತ್ರನಾಗಿದ್ದಾನೆಂಬುದನ್ನು ನೆನೆದು ಹರ್ಷಗೊಳ್ಳಿರಿ.

ಯಾರೂ ಬಿರ್ಲಾ ಭವನಕ್ಕೆ ಬಂದು ನನ್ನ ಉಪವಾಸವನ್ನು ನಿಲ್ಲಿಸುವ ಪ್ರಯತ್ನಕ್ಕೆ ಕೈಹಾಕಬೇರಿ ನಾನು ಪಾವನ ಪರಮಾತ್ಮನ ಕೈಯಲ್ಲಿದ್ದೇನೆ. ಬಲಲು ಎಲ್ಲರೂ ಅಂತರ್ಮುಖರಾಗಿ ತಮ್ಮ ತಮ್ಮ ಹೃದಯ ಪರೀಕ್ಷೆಮಾಡಿಕೊಳ್ಳಿರಿ. ತಮ್ಮ ಕರ್ತವ್ಯವನ್ನು ಕಂದ ಕೊಂಡು ಅದರಂತೆ ವರ್ತಿಸುವವರಿಗೆ ನನ್ನ ಪ್ರಯತ್ನದಲ್ಲಿ ಸಹಾಯಕರಾಗುವರು."

## "ಬೇತ್ರರಿಗೆ ಸೇತುವೆಯಿಲ್ಲ; ಉದರ್ಿಂದ ಕರ್ನಾಟಕಕ್ಕೆ ಸೇರಿರಿ!"

ಲೇ: 'ಕನ್ನಡಿಗ' ಕೊಡಗು.

ಕೊಡಗಿನ ಸಮಸ್ಯೆಯ ಸಿಹಾರ ಮಾಡುವಾಗ ಕಾಂಗ್ರೆಸಿನವರಿಗೆ ಮುಂಜಿ ರಂಪ ವಾರ್ಡಗಳ್ಳಿ ವ್ಯಸ್ಥಾಪನೆ ಮಾಡುವ ಆಧಿಕ್ಯ ಉಡುಪಿ ಆಧಿಕ್ಯ ಸ್ಥಿತಿಯಲ್ಲಿ ಕೂಡಿದು ಅನ್ಯಪನಾವಿಗೀಧಾ ಹೋಗಿ ಉತ್ಸಮವಾಗಿದೆಯೆಂಬುದನ್ನು ನನ್ನ ಕಳೆದ ಲೇಖನದಲ್ಲಿ ವಿವರಿಸಲಾಗಿತ್ತು. 'ಕೊಡಗಿನಲ್ಲಿ ಜನವಿನೋದಾವಾದ ಯಾವ ತಲಸಗಳೂ ಇಲ್ಲಿ; ಜಂತರಿಗೆ ನಾವುಗಳು ಧನವಿಲ್ಲಿ; ಲಕ್ಷ್ಮಣ ತೀರ್ಥಕ್ಕೆ ಅಣಕಟ್ಟು ಕಟ್ಟಲು ಹಣವಿಲ್ಲ, ಪಾರಂಗಿ ನೀರಾವರಿ ಯೋಜನೆಗೆ ದುಡ್ಡಿಲ್ಲ. ಆಸ್ಪರಿಂದ ಕರ್ನಾಟಕಕ್ಕೆ ನೀರಾವರಿ ಉತ್ತಮ' ಉತ್ತಮ ನೆಂದು ಪ್ರಚಾರ ನಡೆಯುತ್ತಿದೆ. ಕನ್ನಡನಾಡು ಒಂದಾದರೆ ಇವಕ್ಕೆಲ್ಲ ಹಣವಲ್ಲಿಂದ ಬಂದೀತೆಂದು ಯಾರೂ ಹೇಳುವದಿಲ್ಲ. ಒಂದೇ ಮಾತಿನಿಂದ ಹೇಳುವದಾದರೆ ಬರುವ ನಾಳ್ಗತ್ತೆ ಇಲ್ಲವೇ ಇಲ್ಲ. ಕನ್ನಡ ಭಾಗವು ಯಾವದೇ ಪ್ರದೇಶವು ಕೊಡಗಿನ ಮೆಟ್ಟ ಸಲವತ್ತಾಗಿಲ್ಲ. ಯಾವದೇ ಭಾಗದ ವೈತರು ಕೊಡಗಿನ ವೈತರಷ್ಟು ಧನಾಢ್ಯರಲ್ಲ. ವಿದ್ಯಾಸಂಪನ್ನರಲ್ಲ. ಕರ್ನಾಟಕದ ಸರಕಾರಕ್ಕೆ ಈಗ ಪ್ರತಿ ಪ್ರಜೆಗೆ ಕಲಾ ರೂ. ೮/-ರಂತೆ ಉತ್ಪತ್ತಿ ಬರುತ್ತಿರುವದಾಗಿದೆ. ಇದನ್ನು ಕೊಡುವಸೇ ವೈತನಿಗೆ ಪ್ರಾಣಕ್ಕೆ ಬಂದಿದೆ. ಈ ಬಂದು ಲಕ್ಷ ವಿಸ್ತೀರ್ಣವಾಗುವ ಕನ್ನಡ ನಾಡಿನಲ್ಲಿ ಆವಶ್ಯಕವಾದ ಕೆಲಸ ಮಾಡಲು ಕನ್ನಡನಾಡಿಗೆ ಹಣವೆಲ್ಲಿದೆ? ಲೆಕ್ಕದಲ್ಲಿ ೨೦ ಕೋಟಿ ದೊಡ್ಡದಾಗಿ ಕಂಡರೂ ಅದರಿಂದ ಸಾಧಿಸಲ್ಪಡಬೇಕಾದ ಕಾರ್ಯಗಳು ಮಹಾಮೇರುವಿನಂತಿವೆ. ಕೊಡಗಿನಲ್ಲಿ ಇಂದಿನ ಪ್ರತಿಗಾಮಿ ಸರಕಾರವು ಜನಹಿತಕಾರಕ ಯಾವದೇ ಕೆಲಸ ಮಾಡಿದ್ದಿ ಅಯಿನ ವರೆಗೆ ಮಾಡುವದೂ ಇಲ್ಲ. ಆದರೆ ಕರ್ನಾಟಕದಲ್ಲಿ ಇಂದಿನ ಪರಿಸ್ಥಿತಿ ಬೇಗಿದೆ?

ಬಿಳಿಗೂರ್ರವ ಬರಗಾಲಕ್ಕೆ ಹೆಸರಾದ ದಾರಿ. ಸಾವಿರಾರು ಜನರು ಹೊಟ್ಟೆಗಿಲ್ಲದೆ ಸಾಯುತ್ತಾರೆ. ಇಂಥಾ ಬಿಳಿಗೂರ್ರವು ಜಲ್ಲಿಯಲ್ಲಿ ನಾಲ್ಕಕ್ಕು ನದಿಗಳು ಹರಿದುಮುತ್ತವೆ. ಈ ನದಿಗಳಿಗೆ ಆಣೆಕಟ್ಟೆ ಕಟ್ಟಿದರೆ ಬಿಳಿಗೂರ್ರವು ಬಂಗಾಲ ದೂರವಾಗಬಹುದು. ಈ ಯೋಜನೆಯ ಯೋಜನೆಯಂತೆ ಇದಿಯಲ್ಲಿ ಒಸಲ್ಪಟ್ಟರೂ ಇಂದಿನ ವರೆಗೆ ಅಣೆಕಟ್ಟಿಗಲ್ಲಿ ಜನರು ಹೊಟ್ಟೆಗಿಲ್ಲದೆ ಸಾಯುವದೂ ನಿಂತಿಲ್ಲ. ಇಂಥಾ ಅತ್ಯಾವಶ್ಯಕ ಪ್ರದೇಶಕ್ಕೆ ನೀರಾವರಿಯೋಜನೆ ಮಾಡದೆ ಯಾವ ಕರ್ನಾಟಕ ಸರಕಾರ ಹಾಗಿಂಗಿ, ಯಾ ಲಕ್ಷ್ಮಣ ತೀರ್ಥ ಆಣೆ ಕಟ್ಟುಗಳನ್ನು ಕಟ್ಟೀತು?

ತುಂಗಭದ್ರಾನದಿಗೆ ಬಳ್ಳಾರಿ ಜಿಲ್ಲೆಯಲ್ಲಿ ಬಲೆಕಟ್ಟು ಕಟ್ಟಿ ಇಡೀ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳನ್ನು ಬರಗಾಲದ ಬೀಡಿನ ಬದಲು ನಸುನಗುವ ಧಾನ್ಯ ಕಣಜವಾಗಿ ಮಾಡುವ ಸೂಚನೆಯನ್ನು ಪ್ರವಾಸಾಯ 'ರಿಂಯಲ್ ಕಮಿಷನ್' ಸೂಚಿಸಿತ್ತು. ಈ ಕೆಲಸ ಈ ವರೆಗೆ ಆಗಿದೆಯೇ?

ಕೊಯಮುತ್ತೂರಿನ ಮೇಲಿನ ಭವಾನಿ ನೀರಾವರಿ ಯೋಜನೆಯನ್ನು ಕೈಕೊಂಡರೆ ೧೮೨,೦೦೦ ಎಕರೆ ಪ್ರಥಮ ಬೆಳೆಯೂ, ೬೨,೦೦೦ ಎಕ್ರೆ ದ್ವಿತೀಯ ಬೆಳೆಯೂ ಬರುವದು. ೧೯೦೭ ರಲ್ಲಿ ಮಾಡಿ

(೫ ನೇ ಪುಟ ನೋಡಿ)

# ಕೊಡಗು

ತಾ. ೧೬-೧೧-೧೯೪೪ನೇ ಶುಕ್ರವಾರ


## ಗಾಂಧೀಜಿಯವರ ಉಪವಾಸ.

ಮತ್ತೊಮ್ಮೆ ಮಹಾತ್ಮಾಗಾಂಧೀಯವರು ಅನಿಶ್ಚಿತ ಅವಧಿಯ ಉಪವಾಸಕ್ಕೆ ಕೈಗೊಂಡಿದ್ದಾರೆ. ಕಳೆದ ಆಗಸ್ಟ್ ತಿಂಗಳಲ್ಲಿ ಮಹಾತ್ಮರು ಕಲ್ಕತ್ತಾದಲ್ಲಾದ ಹಿಂದೂ ಮುಸ್ಲಿಂ ಗಲಭೆಯ ಕಾರಣ ಉಪವಾಸ ತೆಗೆದುಕೊಂಡಿದ್ದರು. ಕಲ್ಕತ್ತಾದ ಮುಂದಾಳುಗಳು ಕಲ್ಕತ್ತಾದಲ್ಲಿ ಇನ್ನು ಹಿಂದೂ ಮುಸ್ಲಿಂ ಗಲಭೆಯಾಗದಂತೆ ನೋಡಿಕೊಳ್ಳುವದಾಗಿ ತಮ್ಮ ಜೀವವನ್ನೆ ಪಣವಾಗಿರಿಸಿ ಭರವಸೆ ಕೊಟ್ಟ ರೀತಿ ಮಹಾತ್ಮರು ಉಪವಾಸವನ್ನು ನಿಲ್ಲಿಸಿದರು. ಆದರೂ ಕೂಡ ಮಹಾತ್ಮರ ಮನಸ್ಸಿಗೆ ನೆಮ್ಮದಿಯಿಲ್ಲ. ಭಾರತಕ್ಕೆ ಬಂದ ಸ್ವಾತಂತ್ರ್ಯವೂ ಅವರಿಗೆ ಸಂತಸಪ್ರದವಾಗಿಲ್ಲ. ಹಿಂದೂ ದೇಶದ ಕೋಮುವಾರು ಸಮಸ್ಯೆಯ ಎದುರು ಅಹಿಂಸೆಯು ತತ್ಕಾಲಕ್ಕಾದರೂ ನಿಷ್ಕ್ರಿಯವಾಗುತ್ತಿದೆಯೆನ್ನುವದು ಅವರಿಗೆ ಬಹು ದುಃಖವನ್ನು ತಂದಿದೆ ಈ ವಿಚಾರದಲ್ಲಿ ಅವರು ಬರೆದ ಮಾತು ಗಮನೀಯವಿದೆ. 'ಅಹಿಂಸೆಗೆ ಸೋಲಿಲ್ಲ. ಬದಲು ಯಾವುದನ್ನು ಅಹಿಂಸೆಯೆಂದು ನಾನು ಭಾವಿಸಿದ್ದೆನೋ ಅದು ಅಹಿಂಸೆಯಾಗಿರದೆ ಅಹಿಂಸಾಭಿದಾನಕ್ಕೆ ಸರ್ವಥಾ ಯೋಗ್ಯವಲ್ಲದ ದುರ್ಬಲರ ನಿಷ್ಕ್ರಿಯ ಪ್ರತೀಕಾರವಾಗಿತ್ತೆಂಬುದನ್ನು ಕೆಲಸ ಕೈಗೂಡುವ ವರೆಗೂ ಕಂಡುಕೊಳ್ಳಲಾರದೆ ಹೋದ ನನ್ನ ಸೋಲನ್ನು ನಾನು ಒಪ್ಪಬೇಕು. ಇಂದು ಹಿಂದೂದೇಶದಲ್ಲಿ ನಡೆಯುತ್ತಿರುವ ಆಂತರ್ಯುದ್ಧವು ಕಳೆದ ಮೂವತ್ತು ವರ್ಷಗಳ ದುರ್ಬಲರ ಕ್ರಿಯೆಯಿಂದ ಉದ್ಭವಿಸಿದ ಪ್ರತಿಸ್ಪಂದನೇ ಸರಿ.' ಆದ್ದರಿಂದ ಹಿಂದೂದೇಶದ ಇಂದಿನ ದಾರುಣಸ್ಥಿತಿಗೆ ಭಾರತೀಯರು ಅಹಿಂಸೆಯು ಸೋಗಿನಲ್ಲಿ ತೋರಿದ ನಿಷ್ಕ್ರಿಯ ಹೇಡಿತನವೇ ಕಾರಣವೆನ್ನಬಹುದು. ಮಹಾತ್ಮರ ಪವಿತ್ರ ಮನಸ್ಸಿಗೆ ಈ ವಿಚಾರ ಬಹು ವ್ಯಥೆನೊದುತ್ತಿದೆ. ಇಂದು ಡೆಲ್ಲಿಯೂ ಕಲ್ಕತ್ತದಲ್ಲಿ ತೋರಿಕೆಯ ಶಾಂತಿಯಿದ್ದರೂ ಅದು ಪೊಲೀಸರ, ಸೈನ್ಯದ ಹೆದರಿಕೆಯ ಪರಿಣಾಮವಲ್ಲದೆ ಹಿಂದೂ ಮುಸ್ಲಿಮರ ಹೃದಯಪರಿವರ್ತನೆಯಿಂದಲ್ಲ. ಬದಲು ಹೃದಯಗಳಲ್ಲಿ ಪ್ರತೀಕಾರ ಭಾವನೆಯು ತುಂಬಿತುಳುಕುತ್ತಿದೆ ಎಂಬ ಅವರ ಮಾತು ಅಕ್ಷರಶಃ ನಿಜವಾದುದು. ಹೃದಯಪರಿವರ್ತನೆಯಿಲ್ಲದೆ ದೇಶದಲ್ಲಿ ಎಂದೂ ಶಾಂತಿ ನೆಲೆನಿಲ್ಲದು; ಆದ್ದರಿಂದ ಗಾಂಧೀಜಿಯವರು ತಮ್ಮ ಅಮರವಾಣಿಯಲ್ಲಿ ಹೇಳಿರುವಂತೆ ಪ್ರತಿಯೊಬ್ಬನೂ ತನ್ನ ಹೃದಯ ಪರೀಕ್ಷೆ ಮಾಡಬೇಕು. 'ಕೋಮುವಾರು ಭಾವನೆಯಿಸ್ಸನ್ನು ಕಿತ್ತೊಗೆಯಬೇಕು.

ಗಾಂಧೀಜಿಯವರಿಗೆ ಇಂದು ೭೫ನೇ ವಯಸ್ಸು. ಕಳೆದ ಉಪವಾಸದ ತಾಪದಿಂದ ಇನ್ನೂ ಅವರ ಶಿಥಿಲಶರೀರವು ಪೂರ್ಣ ಗುಣಹೊಂದಿರುವದಿಲ್ಲ. ಪುನಹ ಅನಿಶ್ಚಿತ ಅವಧಿಯ ಉಪವಾಸವೆಂದರೆ ಸರ್ವರಿಗೂ ವ್ಯಸನಕಾರಕವಾಗಿದೆ. ಮಹಾತ್ಮರ ಜೀವನ ಭಾರತಕ್ಕೆ ಇಂದಿನಷ್ಟು ಅತ್ಯವಶ್ಯ ಎಂದೂ ಇಲ್ಲ. ಕೋಮುವಾರು ಭೂತದ ನಗ್ನನೃತ್ಯದ ಈ ಕಾಲದಲ್ಲಿ ದುಃಖೀಭಾರತವನ್ನು ಶಾಂತಿಯ ದಂಡಿಗೆ ಮುಟ್ಟಿಸಬಲ್ಲ ಏಕ ವ್ಯಕ್ತಿ ಮಹಾತ್ಮರೇ. ಇದೇ ಅಲ್ಲ; ಶಾಂತಿಯ ನೆಲೆಗಾಣದೆ ತತ್ತರಿಸುತ್ತಿರುವ ಜಗತ್ತಿಗೂ ಮಹಾತ್ಮರ ಅವಶ್ಯಕತೆಯಿದೆ. ಅಂಧಾ ಭಾಗ್ಯಜ್ಯೋತಿಯು ನಂದಿಹೋಗದಂತೆ ನೋಡುವದು ಪ್ರತಿಯೊಬ್ಬನ ಕರ್ತವ್ಯ. ಅದರಲ್ಲೂ ಡೆಲ್ಲಿಯವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಡೆಲ್ಲಿಯಲ್ಲಿ ಹಿಂದೂ ಮುಸ್ಲಿಂ ಐಕ್ಯದ ಸಾಧನೆಯನ್ನು ದೃಢಪಡಿಸಿ ಮಹಾತ್ಮರಿಗೆ ಭರವಸೆಕೊಟ್ಟರೆ ಉಪವಾಸವು ನಿಲ್ಲಬಹುದು. ಆದ್ದರಿಂದ ಸರ್ವರೂ ಅಂತರ್ಮುಖರಾಗಿ ಆತ್ಮಪರೀಕ್ಷೆ ಮಾಡುವಾ. ಮಹಾತ್ಮರ ಉಪವಾಸವು ಶೀಘ್ರ ಕೊನೆಗೊಳ್ಳುವಂತೆ ಪ್ರಾರ್ಥಿಸುವಾ. ಭಗವಂತನು ಈ ಜಗಜ್ಯೋತಿಯು ಇನ್ನೂ ಚಿರಕಾಲ ಬೆಳಗುವಂತೆ ಮಾಡಲೆಂದು ಪ್ರಾರ್ಥಿಸುವಾ.

## ಭತ್ತದ ಕ್ರಯ.

ಈ ವರ್ಷ ಕೊಡಗಿನ ಭತ್ತದ ಬೆಳೆಯು ಬಹಳ ಕಡಿಮೆಯಾದ ಕಾರಣ, ರೇಶನ್ ಪದ್ಧತಿಯು ರದ್ದಾಗಿರುವದರಿಂದ ವರ್ತಕರ್ತ್ಯದಲ್ಲಿ ಇಲ್ಲಿ ಕೊಂಡುಕೊಂಡು ಉಣ್ಣುವವರ ಸಹಾಯಕ್ಕಾಗಿ ೨ ಸಾವಿರ ಟನ್ ಅಂದರೆ ೬೬ ಸಾವಿರ ಗಾಡಿ ಭತ್ತವನ್ನು ಪ್ರೊವಿನಿಶ್ಯಲ್ ರಿಸರ್ವ್ ಇಟ್ಟು ಬರೇ ೭೬ ಸಾವಿರ ಟನ್ ಅಕ್ಕಿ ಎಂದರೆ ೧೧೫ ಸಾವಿರ ಟನ್ ಭತ್ತ ಅಂದರೆ ೧೪೫ ಸಾವಿರ ಗಾಡಿ ಭತ್ತವನ್ನು ಹೊರ ಪ್ರಾಂತ್ಯಕ್ಕೆ ಕಳುಹಿಸಬಹುದೆಂದು ಸ್ಥಳೀಯ ಸರ್ಕಾರದವರು ಅಂದಾಜು ಮಾಡಿರುವರೆಂದು ತಿಳಿಯಬರುತ್ತದೆ. ಇದರಲ್ಲಿ ೩ ಸಾವಿರ ಟನ್ ಅಕ್ಕಿ ಅಂದರೆ ೪೬ ಸಾವಿರ ಟನ್ ಭತ್ತವನ್ನು ಬರುವ ಮಾರ್ಚ್ ತಿಂಗಳು ಅಷ್ಟರೊಳಗೆ ಅಕ್ಕಿ ಯೂ ಭತ್ತದ ರೂಪದಲ್ಲಿ ಮೈಸೂರು ಸರ್ಕಾರಕ್ಕೆ ಕೊಡುವಂತೆ ಇಂಡಿಯಾ ಸರ್ಕಾರದವರ ಹುಕುಂ ಆಗಿದೆ. ಉಳಿದ ೪೨ ಸಾವಿರ ಟನ್ ಅಕ್ಕಿಯನ್ನು ಯಾವ ಸರ್ಕಾರಕ್ಕೆ ಎಷ್ಟೂವಾಗ ಕೊಡಬೇಕೆಂಬ ಇಂಡಿಯಾ ಸರ್ಕಾರದ ಹುಕುಮನ್ನು ಕಾಯಲಾಗಿದೆ

ಪ್ರೊವಿನಿಶ್ಯಲ್ ರಿಸರ್ವ್ ಭತ್ತವನ್ನು ಅರ್ಧ ಸಹಕಾರಿ ಸ್ಟೋರುಗಳೂ, ಉಳಿದ ಅರ್ಧವನ್ನು ವ್ಯಾಪಾರಸ್ಥರ ಸಂಘದವರೂ ದಾಸ್ತಾನು ಇಡುವಂತೆ ತೀರ್ಮಾನವಾಗಿದೆ. ಹೊರಗೆ ದೋಗುವ ಭತ್ತವನ್ನು ಕಳೆದ ವರ್ಷದಂತೆಯೇ ಲೇವಡ ೬೦ ರಷ್ಟು ಸಹಕಾರಿ ಫೆಡರೇಶನಿನ ಮೂಲಕವೂ, ಲೇವಡ ೪೦ರಷ್ಟು ವ್ಯಾಪಾರಸ್ಥರ ಸಂಘದ ಮೂಲಕವೂ ಜಮಾಯಿಸುವಂತೆಯೂ, ಸರ್ಕಾರಿ, ಚೀಫ್ ಏಜೆಂಟರ ಮತ್ತು ಸಬ್ ಏಜೆಂಟರ ಕಮಿಷನಗಳೂ, ಮೂರು ವೈಲಿನೊಳಗಿನ ಗಾಡಿ ಬಾಡಿಗೆಯೂ ಕಳೆದ ವರ್ಷದಂತೆಯೇ ಇರುವಂತೆಯೂ ನಿಶ್ಚಯಿಸಲಾಗಿದೆ. ಆದರೆ ಎಲ್ಲಾ ತರದ ಭತ್ತದ ಕ್ರಯ ಗಾಡಿಯೊಂದಕ್ಕೆ ರೂ. ೧೮-೪-೦ ರಂತೆ ಹೆಚ್ಚಿಸಲಾಗಿದೆ. ಕಳೆದ ವರ್ಷವಿದ್ದ ಭತ್ತ ತುಂಬುವ ಸೆಂಟರುಗಳೊಂದಿಗೆ ಈ ವರ್ಷ ಮರಿಕಾಡಿನ ಬಾಡಗರಕೇರಿಯನ್ನೂ ಸೆಂಟರಾಗಿ ಸೇರಿಸಲಾಗಿದೆ. ಈ ಸೆಂಟರುಗಳಲ್ಲಿ ಲಾರಿಗೆ ಭತ್ತ ತುಂಬಿಸಿಕೊಡುವ ರೈತರಿಗೂ ಸಬ್ ಏಜೆಂಟರಂತೆಯೇ ಪೂರ್ತಿ ಕಮಿಷನನ್ನು ಗಾಡಿಯೊಂದರ ರೂ. ೪-೧೨-೦ ಕೊಡುವಂತೆ ನಿಶ್ಚಯಿಸಲಾಗಿದೆ. ಅಂದರೆ ಈ ಸೆಂಟರುಗಳಲ್ಲಿ ಸೈಸೂರಿನವರ ಯಾ ಮಿಲ್ಲಿನವರ ಲಾರಿಗಳಿಗೆ ಭತ್ತವನ್ನು ತುಂಬಿಸಿಕೊಡುವ ಸಬ್ ಏಜೆಂಟ್ ಅಥವಾ ರೈತನಿಗೆ ಬಿಳಿಯ ಭತ್ತ ಗಾಡಿಗೆ ಕ್ರಯ ರೂ. ೧೪೩-೪-೦ ಮತ್ತು ಗಾಡಿಬಾಡಿಗೆ ರೂ. ೩-೬-೦ ಮತ್ತು ಕಮಿಷನು ರೂ. ೪-೧೬-೦. ಜುಮ್ಲೆ ರೂ. ೧೪೧-೬-೦ ದೊರೆಯತಕ್ಕದ್ದು. ಸರ್ ಏಜೆಂಟಿಗೆ ಭತ್ತ ಕೂಡುವ ರೈತನಿಗೆ ಗಾಡಿಗೆ ರೂ ೧೪೬-೧೦-೦ ಮಾತ್ರ ದೊರೆಯುವುದು. ಇದರಿಂದ ರೈತನ ಕಣದಿಂದ ಲಾರಿಗೆ ತುಂಬುವ ಸೆಂಟರಿಗೆ ಆಗುವ ಗಾಡಿ ಬಾಡಿಗೆ ರೈತನು ವಜಕೊಡಬೇಕಾಗುವುದು. ಈ ತಾ. ೨೦ನೇ ತಾರೀಕಿನಿಂದಲೇ ಭತ್ತ ಯಾ ಅಕ್ಕಿಯ ವ್ಯವಹಾರ ಪ್ರಾರಂಭವಾಗುವುದು.

ಇದಲ್ಲದೆ ಇಂಡಿಯಾ ಸರ್ಕಾರದವರು ಪ್ರಾಂತ್ಯದಿಂದ ಹೊರಗೆ ಹೋಗುವ ಭತ್ತ ಮಣ ಒಂದಕ್ಕೆ ಒಂದು ರೂಪಾಯಿ ಅಂದರೆ ಗಾಡಿಗೆ ರೂ. ೫೧ ಯಂತೆಯೂ, ಪ್ರಾಂತ್ಯದೊಳಗೆ ಜಮಾಯಿಸುವ ಭತ್ತ ಗಾಡಿಗೆ ರೂ. ೧೦೨ ಯಂತೆಯೂ 'ಪ್ರಾಡಬೋನಸ್' ಕೊಡಲಿರುವರು. ಈ ಹಣವನ್ನು ಇಲ್ಲಿ ಭತ್ತ ಜಮಾಯಿಸಿ, ಕೊಂಡುಕೊಳ್ಳುವವರಿಗೆ ಹಂಚುವುದರಲ್ಲಿ ಉಂಟಾಗುವ ನಷ್ಟ ಭರ್ತಿಮಾಡಿಕೊಂಡು ಉಳಿದ ಮೊಬಲಗನ್ನು ಹೆಚ್ಚಿನ ಭತ್ತ ಬೆಳೆಸಲು ರೈತರಿಗೆ ಕಮ್ಮಿ ಕ್ರಯದಲ್ಲಿ ಗೊಬ್ಬರ ಹಂಚಲು ಉಪಯೋಗಿಸಲ್ಪಡುವುದು.

## ವರ್ತಮಾನ.

ಕೊಡಗು ಸರಕಾರದಿಂದ ಕೊಡಲ್ಪಟ್ಟ ಹನ್ನೆರಡು ತಿಂಗಳುಗಳಿಗೆ ಕಡಿಮೆಯಾಗಿ ಉಪಯೋಗಿಸಲ್ಪಟ್ಟ ನೋಟಾರು ವಾಹನಗಳ ಮೂರಾಟಕ್ಕೆ ಆಪ್ಪನೆಯು ಆರ್ಜಿಗಳು ಆಲೋಚಿಸಲ್ಪಡಲಾರವೆಂದು ಪ್ರಕಟವಾಗಿದೆ.

ಮಡಿಕೇರಿ ಕೇಂದ್ರದಲ್ಲಿ ಕಳೆದ ನವಂಬರಿನಲ್ಲಿ ನಡೆದ ಹಿಂದೀ ಪರೀಕ್ಷೆಗಳಲ್ಲಿ ಪ್ರಾದಮಿಕದಲ್ಲಿ ಶ್ರೀಗಳಾವ ಪಿ. ಶಾಂತಬಾಯಿ, ಕೆ. ಯಸ್. ಸುಂದರ, ಕೆ. ವಿ. ಸರೋಜಿನಿ (ಪ್ರಥಮಶ್ರೇಣಿ) ಪಿ. ಯಂ. ಸುಬ್ಬಮ್ಮಯ್ಯ, ಡಿ. ಎ. ಜೋಯಪ್ಪ, ಟಿ. ಅನುಸೂಯದೇವಿ, ಕುಮಾರಿ ಉಮಾ ಶೆಟ್ಟಿ, ಶ್ರೀಮತಿ ಪಿ. ಟಿ. ಸುಬ್ಬಯ್ಯ, ಎಂ. ಕೆ. ಕಾವೇರಿ, ಎನ್. ಎಸ್. ಗಂಗಮ್ಮ, ಕೆ. ಸಿ. ಸೀತಮ್ಮ, ಪಿ. ಎಂ. ಸುಬ್ಬಮ್ಮ, ಕೆ. ಎ ಬೊಳ್ಳಮ್ಮ, ಬಿ. ವಿ. ಗಂಗಮ್ಮ, ಬಿ. ಯಂ. ಚೋಂದಮ್ಮ, ಕೆ. ಎ. ಗಂಗಮ್ಮ, ಪಿ. ಸಿ. ಮುತ್ತಮ್ಮ, ಪಿ ಪಿ. ಅಕ್ಕಮ್ಮ, ಬಿ. ಟಿ. ಸೀತಮ್ಮ, ಹೆಚ್. ಕೆ. ರುಕ್ಮಿಣಿ ಇವರುಗಳೂ, ಪೂರ್ವಸೂದಲ್ಲಿ ಶ್ರೀಗಳಾದ ಕೆ. ಕೆ. ಪೂವಮ್ಮ, ಎ. ಎನ್. ಮಾಚಮ್ಮ ಎ. ಸಿ. ನೀಲ, ಮೇರಿಯಂಡ ಎಂ. ಸೀತಮ್ಮ, ಬಿದ್ದಂಡ ಟಿ. ಸುಬ್ಬಮ್ಮ, ಜೆ. ಎಂ. ರಾಜಿಗ್ಸ್, ಚೌರಿರ ಜಿ. ಬೊಳ್ಳಮ್ಮ, ಶ್ರೀಮತಿ ಕುಟ್ಟೇಟಿರ ಎಂ. ಅಪ್ಪಚ್ಚು ಎಸ್. ಎಸ್. ಸರೋಜ, ಪಿ. ಕೆ. ರಾಮಚಂದ್ರ ಇವರುಗಳೂ ರಾಷ್ಟ್ರಭಾಷಾದಲ್ಲಿ ಶ್ರೀಗಳಾದ ಕೋದಂಡ ಸಿ. ಕಾವೇರಿ, ಚೆಂಬಾಂಡ ಸಿ ಸೀತಮ್ಮ, ಎಂ. ಸಿ ಗಂಗಮ್ಮ, ಎಂ. ಕೆ. ಸುಮಿತ್ರ, ಕೆ. ಕೆ. ಮಂಜುಳ, ಬಿ. ಎ. ಪಂಕಜ ಇವರುಗಳೂ ತೇರ್ಗಡೆಯಾಗಿರುವರು.

ಒತ್ತಡದ ಕ್ರಯವನ್ನು ಗಾಡಿಗೆ ರೂ. ೧೪-೪-೦ ಹೆಚ್ಚಿಸಲಾಗಿದೆ. ಸೈಸೂರಿಗೆ ಅಕ್ಕಿಯು ವಹಿವಾಟು ತಾರೀಕು ೨೦-೧೧-೪೪ರಿಂದ ಪ್ರಾರಂಭವಾಗುವದು.

ಕೊಡಗು ಜೇನುನೇಣ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ತಾ. ೧೭-೧೧-೪೪ ರಲ್ಲಿ ವೀರಾಜಪೇಟೆಯಲ್ಲಿ ನಡೆಯುವದು.

ಕೊಡಗಿಗೆ ಒಂದಿದ್ದ ಸರ್ ಪತ್ತಾರ್ ಸಿಂಗ್ ಮತ್ತು ಶ್ರೀ ಕೊತವಾಲರು ನಿನ್ನೆ ದಿನ ಮೈಸೂರಿಗೆ ಪ್ರಯಾಣ ಬೆಳೆಸಿದರು.

---

## ಸ್ವೀಕಾರ.

### ಪ್ರಭಾತ ಮಾಸಪತ್ರಿಕೆ.

ಕೊಡಗು ಪ್ರಗತಿಪರ ಸಾಹಿತ್ಯ ಸಂಘದವರ ಮುಖ ಪತ್ರವಾದ 'ಪ್ರಭಾತ' ವನ್ನು ಆದರದಿಂದ ಸ್ವೀಕರಿಸಿದ್ದೇವೆ. ಸ್ವಾತಂತ್ರೋದಯವಾದ ನವ ವರ್ಷದ ಸಂಪ್ರಭಾತದಲ್ಲಿ 'ಪ್ರಭಾತ'ವು ಸಾಹಿತ್ಯ ಸೇವೆಯ ಆರಾಧನೆಗೆ ಹೊರಟಿದೆ. ಒಂದೇ ಪತ್ರಿಕೆಯಲ್ಲಿ ಕನ್ನಡ, ಹಿಂದೀ, ಉರ್ದೂ, ಇಂಗ್ಲಿಷ್ ಭಾಷೆಗಳಲ್ಲಿ ಸಾಹಿತ್ಯಾರಾಧನೆ ಮಾಡುವದು ಸಾಹಸದ ಮಾತೇ ಆಗಿದೆ. ಪ್ರಗತಿಪರ ಸಾಹಿತ್ಯ ಸಂಘದವರ ಈ ಉದಾತ್ತ ಧ್ಯೇಯವು ಸಾಧ್ಯವಾಗಲಿ. 'ಪ್ರಭಾತದ' ಪ್ರಥಮ ಸಂಚಿಕೆಯಲ್ಲಿ ಕೆಲವು ಲೇಖನಗಳಿದ್ದರೂ 'ಪ್ರಗತಿಪರ ಸಾಹಿತ್ಯ'ದ ಕೊರತೆ ಇದೆ. ಇದನ್ನು ವ್ಯವಸ್ಥಾಪಕರು ತುಂಬಿಕೊಳ್ಳದಿದ್ದರೆ ಪತ್ರಿಕೆಯ ಧ್ಯೇಯ ಸಾಫಲ್ಯವಾಗದು. ಇಂದಿನ ಕಾಲದಲ್ಲಿ ಪತ್ರಿಕೆಗಳು ಹುಟ್ಟುವದಕ್ಕೂ ಆಳಿಯುವದಕ್ಕೂ ಕೊನೆ ಮೊದಲಿಲ್ಲ ಕೊಡಗಿನಲ್ಲಿ ಮಾಸಿಕ ಪತ್ರಿಕೆಗಳು ಇಲ್ಲವೇ ಇಲ್ಲ. ಈ ಅಭಾವನನ್ನು 'ಪ್ರಭಾತ'ವು ಹೋಗಲಾಡಿಸಿ ಚಿರಕಾಲ ಜನಪ್ರಿಯವಾದ ಕೈದೀವಿಗೆಯಾಗಿ ಬೆಳಗಲಿ.

---


ವೀರಾಜಪೇಟೆಗೆ 'ಕೊಡಗು' ಏಜೆಂಟರು:

ಶ್ರೀ ಕೆ. ಎಂ. ಸುಬ್ರಾಯನವರು.

# ಮೊಸ್ಕೋದಲ್ಲಿ ರಾಯಭಾರಿ ಜೀವನ

## ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅನುಭವಗಳು.

[ಫಾರ್ವರ್ಡ್ ಪತ್ರಿಕೆಯಿಂದ]

ಮೊಸ್ಕೋ ನಗರವಲ್ಲಿನ ಜೀವನದ ಸಂಕ್ಷಿಪ್ತ ಪರಿಚಯವನ್ನು ಭಾರತದ ಮೊಸ್ಕೋ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಇತ್ತೀಚೆಗೆ ಘಟನಾ ಸಮಿತಿ ಸದಸ್ಯರ ಒಂದು ಸಭೆಯಲ್ಲಿ ಮಾಡಿಕೊಟ್ಟರು. ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಪಂಡಿತ ಜವಾಹರಲಾಲ ನೆಹರೂರವರು ಅಲಂಕರಿಸಿದ್ದರು.

ವಿದೇಶದಲ್ಲಿಯೂ ಒಂದು ರಾಯಭಾರಿ ಕಚೇರಿಯೆಂದರೆ, ವಿದೇಶದಲ್ಲಿ ನನ್ನ ಮಾತೃದೇಶದ ಒಂದು ಚಿಕ್ಕ ದ್ವೀಪದಂತೆ ಎಂಬುದಾಗಿ ಶ್ರೀಮತಿ ವಿಜಯಲಕ್ಷ್ಮಿಯವರು ಸುಭಾಷರಿಗೆ ನೆನಪುಮಾಡಿದರು. ಮೊಸ್ಕೋನಲ್ಲಿ ಭಾರತದ ರಾಯಭಾರಿ ಕಚೇರಿಯೆಂದರೆ ಒಂದು ಚಿಕ್ಕ ಮಾದರಿ ಭಾರತದಂತಾಗಬೇಕೆಂದರು. ಆ ರಾಯಭಾರಿ ಕಚೇರಿಯಲ್ಲಿ ಭಾರತವು ಹೇಗಿದೆ ಎಂಬುದರ ಎಂದರೆ ಪೂರ್ಣ ಕಲೆ, ಆಹಾರ, ವೇಷಭೂಷಣಗಳು, ಪದ್ಧತಿಗಳು, ಭಾಷೆ, ಕಲೆ ಇತ್ಯಾದಿಗಳ ಪ್ರದರ್ಶನವಾಗಬೇಕು. ಈಗಿನ ದಿನಗಳಲ್ಲಿ ಈ ರೀತಿಯ ಮಾದರಿ ಕಾರ್ಯಗಳು ಅವಶ್ಯವಾಗಿವೆ. ಕಷ್ಟಸಾಧ್ಯವಿದೆ ಎಂಬುದಾಗಿ ಒಪ್ಪಲಕ್ಕೆ ಮಾತು. ಹೆಚ್ಚಿನ ರಾಯಭಾರಿ ಕಚೇರಿಗಳಿಗೆ ಬೇಕಾದ ಆಹಾರ ಪದಾರ್ಥಗಳು ಆಯಾಯ ರಾಷ್ಟ್ರಗಳಲ್ಲಿ ದೊರೆಯುವುದಿಲ್ಲ. ಅವುಗಳನ್ನು ಸ್ವಂತ ಬೇಕಾದಷ್ಟು ಹಣ ಕೊಟ್ಟು ತರಿಸಿಕೊಳ್ಳಬೇಕಾಗುತ್ತದೆ. ಆದರೆ ವಿಜಯಲಕ್ಷ್ಮಿಯವರಿಗೆ ಇದು ಸಾಧ್ಯವಾಗಲಿಲ್ಲ. ತನ್ನ ಪ್ರೀತಿಯ ಸಹೋದರನ ಕಡೆಗೆ ಒಮ್ಮೆ ದೃಷ್ಟಿ ಬೀರಿ ಶ್ರೀಮತಿಯವರೆಂದರು "ಭಾರತ ಸರಕಾರವು ಅಂತಹ ಸೌಕರ್ಯಗಳ ಬಗ್ಗೆ ನನಗೆ ನಿಧಿ ಮಂಜೂರು ಮಾಡಿಲ್ಲ." ಅದೇ ರೀತಿ ಭಾರತ ಸರಕಾರವು ಒದಗಿಸಿಕೊಟ್ಟ ಸಂಕುಚಿತ ಸೌಕರ್ಯಗಳನ್ನು ಕುರಿತು ವಿನೋದಸರಣಿಯಲ್ಲಿ ಆಗಾಗ ಟೀಕೋಕ್ತಿಗಳನ್ನಾಡುವಾಗ ಶ್ರೀಮತಿಯವರು ಪಂಡಿತ ನೆಹರೂರವರ ಕಡೆಗೆ ಮುಗುಳ್ನಗೆಗೆ ಬೀರುತ್ತಿದ್ದರು. ಭಾರತದ ಪ್ರಧಾನ ಪಂಡಿತ ನೆಹರೂಗಳಾದರೋ ಏನೂ ಅಂಜದವರಂತೆ, ಒಂದು ಸಿಗರೇಟು ಬಾಯಲ್ಲಿಟ್ಟು ಹೊಗೆ ಬಿಡುತ್ತಿದ್ದರು. ತನ್ನ ಒಂದು ತಿಂಗಳ ಅನುಭವದಲ್ಲಿ ಒಮ್ಮೆಯಾದರೂ ಭಾರತದಲ್ಲಿ ದೊರೆಯದಂಥ ತೃಪ್ತಿಯ ಒಂದೂಟ ತನಗೆ ಮೊಸ್ಕೋದಲ್ಲಿ ದೊರೆತುದಿಲ್ಲವೆಂದರು. ತವಗೆ ವಿಲಾಸ ವೈಭವಗಳಲ್ಲಿ ಅಭಿರುಚಿಯೆಂದೂ, ಆದರೆ ಅದನ್ನು ಒದಗಿಸಿಕೊಳ್ಳಲು ಆರ್ಥಿಕ ಪರಿಸ್ಥಿತಿ ಹಾಗು ಶರತ್ತುಗಳು ಕಡಿಯೂ ಗಿವೆಯೆಂದೂ ತಿಳಿಸಿದರು.

### ವಿಲಾಸ ವೈಭವಗಳಿಲ್ಲ.

ಬರೀ ಜೀವನದ ಅವಶ್ಯಕತೆಗಳು ಎಂದರೆ, ಕಳ್ಳು, ರೊಟ್ಟಿ, ಸ್ಥಳೀಯ ಒಂದು ರೀತಿಯ ವೈನು, ರಷ್ಯನ್ ಧಾರಾಳ್ವರಸ ಇವು ಯಥೇಷ್ಟವಾಗಿ ಮತ್ತು ಅಗ್ಗ ಬೆಲೆಗೆ ದೊರೆಯುತ್ತಿದ್ದುದಂತೆ ಆದರೆ ಜೀವನದ ಅನಿವಾರ್ಯಕತೆಗಳ ಮೇರೆ ಬಿಟ್ಟು ಒಂದು ಹೆಜ್ಜೆ ಹೊರಗಿಟ್ಟರೆ ಮುಗಿಲು ಮುಟ್ಟುವ ಧಾರಣೆಗಳನ್ನೆದುರಿಸಬೇಕು. ಬರೀ ಜೀವನಾವಶ್ಯಕತೆಗಳ ! ಸಾಕು, ಅವ್ಯರಲ್ಲೇ ತೃಪ್ತಿಪಟ್ಟುಕೊಳ್ಳಬೇಕು. ವಿಲಾಸ ವೈಭವಗಳು! ಅವು ಶ್ರೀಮಂತರಿಗೆ ಹೇಳಿದವುಗಳು-ಅವರು ಹಣವನ್ನು ರಾಶಿ ಗಟ್ಟಲೆ ಸುರಿದೇ ಅವುಗಳನ್ನು ಪಡೆಯುತ್ತಿತ್ತು. ಸಕ್ಕರೆ ಇರು ವಿಲಾಸ ಪದಾರ್ಥದಲ್ಲಿ ಸೇರಿತ್ತು-ಇದೇ ರೀತಿ ಹಾಲು, ರಷ್ಯನ್ ಚಾ ಇವಕ್ಕೆ ಇವೆರಡೂ ಬೇಕಾಗಿದ್ದಿಲ್ಲ.

ಆ ಚಾಂದಲ್ಲೇ ಶ್ರೀಮತಿ ವಿಜಯಲಕ್ಷ್ಮಿಯವರು ತೃಪ್ತಿಪಟ್ಟುಕೊಂಡಿದ್ದರು; ಆದರೆ ಅವರ ಹಿಂದಿಯ ಸೇವಕರು ಚಾ ಸೇವನೆಯಕ್ಕೆ ಹಾಲುಬೇಕೆಂದು ಗೊಣಗುಟ್ಟುತ್ತಿದ್ದರು. ಅವರಿಗಾಗಿ ಉದಾರ ಮನಸ್ಸಿನ ಆಕೆ ಬಹಳ ಪ್ರಯತ್ನಪಟ್ಟರು. ಆದರೆ ಯಶ ದೊರಯಲಿಲ್ಲ. ಹಲವು ಅಧಿಕಾರಿಗಳಿಗೆ, ಚಿಕಿತ್ಸಾಲಯಗಳಿಗೆ ಮತ್ತು ಶಿಶುಗಳಿಗೆ ಹೋಗುತ್ತದೆ; ಅಲ್ಲಿಗೆ ಸುಸಾಕಾಗಿ ಉಲ್ಬಣದು ಬಹಿರಂಗ ಮಾರ್ಕೆಟಿಗೆ ಬರಬೇಕು. ಹೀಗೆ ೧೧ ಮಿಲಿಯ ರಷ್ಯನ್ ಪ್ರಜೆಗಳೊಡನೆ ಸ್ಪರ್ಧಾಗೆ ನಿಂತು ಹಾಲ ಪಡೆಯುಬೇಕು. ಯುದ್ಧಕ್ಕೆ ಮೊದಲು ಮೊಸ್ಕೋ ಪ್ರಜಾಸಂಖ್ಯೆ ೫ ಮಿಲಿಯ ಇತ್ತು; ಈಗ ಅದು ೧೧ ಮಿಲಿಯದ ಮಾಡಿದೆ.

ಬಹಿರಂಗ ಅಂಗಡಿ ಒಂದೂ ಇಲ್ಲ; ಡಿಪೋಗಳಲ್ಲಿ ರೇಷನ್ ಕ್ರಮದಂತೆ ಮಾರಾಟ. ೫೭ ರಾಯಭಾರಿ ದಳಗಳಿಗೆ ಅವಶ್ಯಕತೆ ಪೂರೈಸಲು ಕೇವಲ ಒಂದು ಡಿಪೋ. ಕೆಲವು ರಾಯಭಾರಿ ಕಚೇರಿಗಳಲ್ಲಿ ಸಿಬಂದಿಯೇ ೧೦೦ರಿಂದ ೩೦೦ರ ತನಕ ಇರುತ್ತದೆ. ಹೀಗಾಗಿ ಪೂರೈಕೆಯಲ್ಲಿ ಕೊರತೆಯುಂಟಾಗುವದು ಸಹಜ. ಮತ್ತೊಂದು ಬಹಿರಂಗ ಮಾರ್ಕೇಟು ಇದೆ. ಕಾನೂನಿನನ್ವಯ ನಡೆಯುವ ಕಪ್ಪು ಮಾರ್ಕೇಟು. ಅಲ್ಲಿ ನನಗೆ ಬೇಕಾದ ಹಲವುವಸ್ತುಗಳು ದೊರೆಯುವವು. ಆದರೆ ಮುಗಿಲು ಮುಟ್ಟಿದ ಧಾರಣೆ ಕೊಟ್ಟರೆ ಮಾತ್ರ. ಒಂದು ಹೂವಿನ ಗೊಂಚಲಿಗೆ ರೂಪಾಯಿ ೫೦; ಒಂದು ಕೋಳಿ ನೊಟ್ಟಿಗೆ ೧೦ ಆಣೆ. ಇದೇ ರೀತಿಯ ಬೆಲೆ ಸಕ್ಕರೆಗೆ ಕೂಡ.

### ಕರವಸ್ತ್ರಗಳಿಲ್ಲ.

ರೇಷನ್ ಪ್ರಮಾಣ ಹೊರತು ಹೆಚ್ಚಿಗೆ ಬೇಕಾದರೆ ಬಹಿರಂಗ ಮಾರ್ಕೆಟ್ಟಿನಲ್ಲಿ ದೊರೆಯುದು; ಸರಕಾರಿ ಲಾಯಿಸನ್ ಅಧಿಕಾರಿಗಳನ್ನು ಕಂಡರಾಯಿತು. ಅವರು ನಿಮಗೆ ಕೊಡುವ ಉಪದೇಶ ಮೊಸ್ಕೊ ನಗರದ ೧೧ ಮಿಲಿಯ ಪ್ರಜೆಗಳೊಡನೆ ಸ್ಪರ್ಧಿಸಿರೆಂಬುದೇ. ಮೊಸ್ಕೋದಲ್ಲಿ ಶ್ರೀಮತಿ ವಿಜಯ ಲಕ್ಷ್ಮಿಯವರಿಗೆ ಒಂದು ಕರವಸ್ತ್ರ ಇಲ್ಲನೇ ಡಜ್ಜನ್ ಹೊಂದುವುದು ಕೇವಲ ಅಸಾಧ್ಯವಾಯಿತು. ಗೃಹಕೃತ್ಯ ನಡೆಸುವವರಿಗೆ ಅತು ಇಲ್ಲದಿದ್ದರೆ ಬಹಳ ಪ್ರಯಾಸ ನೋಡಿ. ಹೀಗಾಗಿ ಶ್ರೀಮತಿಯವರು ಕರವಸ್ತ್ರ ಮತ್ತು ಉಬ್ಬುವ ವಸ್ತ್ರದ ಬಗ್ಗೆ ತನ್ನಲ್ಲಿದ್ದ ನಾಲ್ಕು ಬಿದ್ದರ್ ಶೀಟಿಗಳನ್ನು ಕತ್ತರಿಸಬೇಕಾಯಿತು ಆವರ ಜೊತೆಯಲ್ಲಿ ಬಿದ್ದನ ಈ ನಾಲ್ಕು ಶೀಟಿಗಳು ಮಾತ್ರ ಇದ್ದುದರಿಂದ ಅವುಗಳ ಕತ್ತರಿಸುವಾಗ ತುಂಬಾ ದುಃಖವಾಯಿತಂತೆ.

### ರಷ್ಯಾದಲ್ಲಿ ಹಿಂದಿ.

ಶ್ರೀಮತಿಯವರು ತನ್ನ ಆಗಮನದ ಪತ್ರವನ್ನು ಹಿಂದಿಯಲ್ಲಿ "Supreme Presidianto sabhasadon" ಎಂದು ಪ್ರೆಸಿಡಿಯಮ್ ಸದಸ್ಯರಿಗೆ ಬರೆದರು. ಮರುದಿನ ಅವರಿಗೆ ವಿಶೇಷಕಾರಿ ಕಚೇರಿಯಿಂದ ಫೋನ್ ಬಂತು. "ಶ್ರೀಮತಿಯವರೇ, ನೀವು ಬರೆಸಿದ ಪತ್ರದಲ್ಲಿ ಒಂದು ಕಡೆ ಶುದ್ಧ ದೋಷವಿದೆ" ಎಂದು. ಏನು, ರಷ್ಯನರೊಬ್ಬರು ಹಿಂದಿಯ ಸುಸಂಸ್ಕೃತ ಪಂಡಿತೆಯ ಬರೆಸಿ ಹಿಂದೀ ಪತ್ರದಲ್ಲಿ ತೋಷ ಹುಡುಕುವುದೆಂದ ದೇನು! ರಷ್ಯಾದಲ್ಲಿ ಹಿಂದಿ ಅಭ್ಯಾಸ ಆಷ್ಟು ಮುಂದುವರಿದ ಒಗ್ಗೆ ಶ್ರೀಮತಿಯವರಿಗೆ ತುಂಬಾ ಆಶ್ಚರ್ಯವಾಯಿತು. ಫೋನ್‌ದಲ್ಲಿ ಮಾತಾಡಿದವರು ಆಲ್ಪಲಿತ ಸರಣಿಯಲ್ಲಿ ಹಿಂದಿ ಭಾಷೆಯನ್ನಾಡುತ್ತಿದ್ದರು. "Supreme Presidium ko Adhyakshya" ಪ್ರೆಸಿಡಿಯಮ್ ಅಧ್ಯಕ್ಷೆಗೆ ಎಂದು ಶ್ರೀಮತಿಯವರು ಸಂಬೋಧಿಸಬೇಕಾಗಿತ್ತು.

### ಬುದ್ಧನ ವಿಗ್ರಹದ ಬಯಕೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ರಷ್ಯನ್ ಸೇವಕರೂ ಕೆಲವು ಹಿಂದೀ ಶಬ್ದಗಳನ್ನು ಕಲಿತಿದ್ದಾರೆ. ಒಂದು ದಿನ ಶ್ರೀಮತಿಯವರು ತನ್ನ ಓರ್ವ ರಷ್ಯನ್ ಸೇವಕನಿಗೆ ಸ್ನಾನಕ್ಕೆ ನಿದ್ದ ಪಡಿಸುವಂತೆ ಆಜ್ಞಾಪಿಸಿದಾಗ ಆ ಸೇವಕನು ಕಚ್ಚಿ ಹಿಂದೀ ಮಾತನಾಡುತ್ತಾ 'ಮೇಲೆ ಮಾಳಿಗೆಯಲ್ಲಿ ನಿದ್ದ ಪಡಿಸಲೇ? ಇಲ್ಲನೇ ಕೆಳಗೆ ಆಗಬಹುದೇ? ಎಂದು ಕೇಳಿದಾಗ ವಿಜಯ ಲಕ್ಷ್ಮಿಯವರು ಆಶ್ಚರ್ಯಪಟ್ಟರು. ಶ್ರೀಮತಿಯವರು ಈ ವರೆಗೆ ಕೇವಲ ರಷ್ಯನ್ ಅಕ್ಷರಗಳನ್ನು ಮಾತ್ರ ಕಲಿಯಲು ಸಮರ್ಥರಾಗಿದ್ದಾರೆ ಭಾಷಾ ಯುಗವು ಬಲು ಕಠಿಣವಂತೆ. ಅಲ್ಲವೇ?

ಭಾರತದ ಗೌರವವನ್ನು ಮೊಸ್ಕೋದಲ್ಲಿ ಕಾಯುವಂತೆ ತನಗೆ ಸೌಕರ್ಯ ಒದಗಿಸಿಕೊಡಬೇಕೆಂದು ಶ್ರೀಮತಿಯವರು ಘಟನಾ ಸಮಿತಿ ಸದಸ್ಯರೊಡನೆ ವಿನಂತಿಸಿಕೊಂಡರು. ನಟರಂಜನ ಹಾಗೂ ಬುದ್ಧನ ಒಂದು ವಿಗ್ರಹವನ್ನು ರಾಯಭಾರಿ ಕಚೇರಿಯಲ್ಲಿರಿಸುವ ಬಗ್ಗೆ ತನಗೆ ಒದಗಿಸಿ ಕೊಡಬೇಕೆಂದು ಕೇಳಿ ಕೊಂಡಿದ್ದಾರೆ. ಒಳ್ಳೆಯ ಹಿಂದೀಯ ಕಲಾಚಿತ್ರಗಳನ್ನೂ ಅವರು ಆಯಿಸಿದ್ದಾರೆ. ಒಳ್ಳೆಯ ಒಂದು ಕಂಬಳಿಯೂ ಅವರಿಗೆ ಬೇಕಂತೆ. ಒಂದು ಒಳ್ಳೆಯ ಕಂಬಳಿಯನ್ನು ಒಳ್ಳೆ ಹೆಚ್ಚಿಗೆ ಬೆಲೆಕೊಟ್ಟು ಅವರು ಬಾಡಿಗೆಗೆ ಪಡಕೊಂಡಿದ್ದಾರಂತೆ.

'ಪ್ರಭಾತ'

---

# —— ಓಲೆಗಳ ಓಡಾಟ ——

ಕಾರ್ಕಳ,
ತಾ. ೯-೬-೪೮.

ಗೆಳೆಯಾ,

ದೇಶಕ್ಕೆ ಸೇವೆಮಾಡಿ ಒಲಿದಾನೆಕೊಡಬೇಕಾಗಿದ್ದ ಕಾಲದಲ್ಲಿ ನಾನು ಚಿಕ್ಕವನಿದ್ದೆ. ದೇಶಕ್ಕಾಗಿ ಆಗ ಏನೂ ತ್ಯಾಗಿಸಲಾಗಲಿಲ್ಲ. 'ಜನಸೇವೆಯೇ ಜನಾರ್ದನನ ಸೇವೆ'ಯೆಂದರಿಂದ ಸೇವೆಮಾಡುವ ಅಭಿಲಾಷೆ ತುಂಬಾ ಇದೆ. ಸೇವೆಗೆ ಹೊರಟಲ್ಲಿ ದಾರಿ ದುರ್ಗಮವಾಗಿದೆ. ಅಡ್ಡಿ ಆತಂಕಗಳು ಅಡ್ಡ ಬರುತ್ತಿವೆ. 'ನೀನು ಯಾವ ಪಕ್ಷ, ನಮ್ಮ ಪಕ್ಷಕ್ಕೆ ಬಾ' ಎಂಬ ಬಲಾತ್ಕಾರಗಳಾಗುತ್ತಿವೆ. ಸ್ವಲ್ಪ ಮಂದಿ ಹೊಗಳುವವರಿದ್ದರೂ, ತೆಗಳುವವರೂ ಇದ್ದಾರೆ. ಪ್ರಯತ್ನ ನಿರತ್ಸಾಹಯಗಿರುವೆನು. ಕಷ್ಟಕಾಲವಾದರೂ ಕುಟುಂಬಸ್ಥರು ಹೊಟ್ಟೆ ಬಟ್ಟೆಗೆ ಈಗ ಹಿಂದಿನಷ್ಟು ತೊಂದರೆ ಪಡುತ್ತಿಲ್ಲ. ನಿನ್ನ ಭವಿಷ್ಯಾಯವೇನು?

ವಿಮುಖ.

ಸಾಗರ,
ತಾ. ೧೨-೬-೪೮.

ಪ್ರಿಯ ಮಿತ್ರಾ,

ಓಲೆಯನ್ನು ಓದಿ ಓಲಾಡಿದೆನು. ಉತ್ತಮ ಕೆಲಸಗಳಿಗೆ ಅನೇಕ ಅಡಚಣೆಗಳು ಬರುವದು ಸಹಜ. 'ಜನಸೇವೆಯೆ' ಉದಾತ್ತವೆಂದು ನೀನು ನಂಬುವದಾದರೆ ಸಣ್ಣ ವೈಷ್ಟ ವಿಷಯಗಳಿಗೆ ಕೈಹಾಕದಿರು. ಪಾರ್ಟಿ ಪಕ್ಷಗಳನ್ನು ಕಟ್ಟಿಕೊಳ್ಳದಿರು. ಹೊಗಳುವವರನ್ನೂ ತೆಗಳುವವರನ್ನೂ ಸಮದೃಷ್ಟಿಯಿಂದ ನೋಡು. ಪದವಿಗಾಗಿ ಹೋರಾಡಿದವರ ಕೈವಾಡಕ್ಕೇನಾದರೂ ಸಿಲುಕಿದರೆ 'ಜನಸೇವೆ' ಮಾಡುವ ಯೋಗ್ಯತೆ ನಿನಗಿದ್ದರೂ ಅದನ್ನು ಉಪಯೋಗಿಸಲಾರದಾಗುವಿ. ಊಹನೆಯಿಂದ ಊರುಕೆಟ್ಟಿತು. ಶಿಖರದ ನುಡಿಗೆ ಕವಿಗೊಟ್ಟು ಅಕಾರಣವಾಗಿ ವಿತ್ರರನ್ನು ಕಳಕೊಳ್ಳದಿರು. ಸೊಲ್ಲಿಗೂ ಸಾಧನೆಗೂ ಸಾಮ್ಯವಿರಲಿ. ಪ್ರಪಂಚವು ನಾಟ್ಯರಂಗ. ವಹಿಸಿದ ಪಾತ್ರವನ್ನು ನಿಷ್ಕಳಂಕ ರೀತಿಯಲ್ಲಿ ಅಡುವದೇ ಕರ್ತವ್ಯ. ನಿನ್ನ ಕಾರ್ಯಕ್ಷೇತ್ರಕ್ಕೊಂದು ಗಡಿ ನಿರ್ಣಯಿಸಿಕೋ. ಜನಸೇವೆಗೆಂದು ಹೊರಟು ಕುರ್ಚಿಗೆ ಕಣ್ಣಿಡದಿರು. ಜೇಬು ತುಂಬಿಸುವ ಕೆಲಸದಿಂದ ದೂರವಿರು. ತನ್ನನ್ನು ಉದ್ಧಾರಮಾಡಲೂ ಬೇಡ; ಪರರನ್ನು ಹಳಯಲೂಬೇಡ. ಸ್ವಾರ್ಥವೆಂಬುದು ಲೇಷ ಮಾತ್ರವೂ ನಿನ್ನಲ್ಲಿಲ್ಲದಿರಲಿ.

ಪಣ್ಮುಖ.

ಕೆಂಗೇರಿ,
ದಿ.೧೦-೬-೪೮.

ಗೆಳೆಯಾ,

ನಿನ್ನ ಧರ್ಮವಾಣಿಯ ಪತ್ರ ಓದಿದೆನು. ಸಮನ್ವಯದೃಷ್ಟಿ ಈ ಕಾಲದಲ್ಲಿ, ಅದರಲ್ಲೂ ರಾಜಕೀಯ ರಂಗದಲ್ಲಿ ಸಾಧ್ಯವಿಲ್ಲ. ಚರಿತ್ರೆಯ ಪುಟಗಳನ್ನೊಮ್ಮೆ ನೋಡು ಮಹಮ್ಮದ್‌ಘೋರಿಯು ಕೈ

ಬಿಟ್ಟ ಕಾರಣವಲ್ಲವೇ ಪೃಥ್ವೀರಾಜನು ಕೈದಿಯಾಗಿ ಕಣ್ಣು ಕಳೆದುಕೊಂಡು ಅಂತಿಮವನ್ನು ಕಾಣಬೇಕಾಯಿತು? ಉದಾರತೆಯನ್ನು ತೋರಿಸಿದುದರಿಂದಲ್ಲವೇ ಮುಸ್ಲಿಂ ಲೀಗು ಮೇಲೇರಿ ಹಿಂದೂದೇಶದ ವಿಭಜನೆಯೊದಗಿದುದು? ಆದ್ದರಿಂದ 'ಜನಸೇವೆ'ಯೊಗಬೇಕಾದರೆ ದುಷ್ಟರನ್ನು ದುಷ್ಟರಂತೆಯೇ ಕಾಣಬೇಕು. ಮಹಾಭಾರತದಲ್ಲಿ ಯುಧಿಷ್ಠಿರನಾದರೂ ಇದೇ ತತ್ವವನ್ನು ಸಾರಿ ಹೇಳಲಿಲ್ಲವೇ? ಜಗತ್ತು ನಾಟ್ಯರಂಗವಿರಬಹುದು. ಆದರೆ ದುಷ್ಟರಿಗೆ ದುಷ್ಟನಾಗಿ, ಶಿಷ್ಟರಿಗೆ ಶಿಷ್ಟನಾಗಿ, ಕಳ್ಳರಿಗೆ ಕಳ್ಳನಾಗಿ ವರ್ತಿಸಬೇಕಾನುದೇ ಇಂದಿನ ಯುಗಧರ್ಮ. ನಾವಾಗಿ ಬೇರೊಬ್ಬರನ್ನು ಕೆಳಗೆ ತಳ್ಳುವದು ಬೇಡ ಆದರೆ ನಮ್ಮನ್ನು ತಳ್ಳಲು ಬರುವವರನ್ನು ಎದುರಿಸದಿದ್ದರೆ ಹೇಡಿತನವಲ್ಲವೇ? ಕಾಶ್ಮೀರದಲ್ಲಿ ಧಾಳಿಗಾರರು ನುಗ್ಗಿದಾಗ ಸಮನ್ವಯ ದೃಷ್ಟಿಯೆಂದು ಕಳಿತ್ತಿದ್ದರೆ ಪರಿಸ್ಥಿತಿ ಏನಾಗುತಿತ್ತು? ಆದ್ದರಿಂದ ರಾಜಕೀಯ ರಂಗದಲ್ಲಿ ನೋಸಕ್ಕೆ ಮೋಸದಿಂದಲೇ ಉತ್ತರ ಕೊಡಬೇಕು. ದೊಣ್ಣೆ ಹಿಡಿದು ಮೇಲೇರಿ ಬರುವವನನ್ನು ಬರಿಗೈಯಿಂದ ಎದುರಿಸುವದು ಹುಚ್ಚುತನವಲ್ಲವೇ?

ವಿಮುಖ.

ಸಾಕಾರು,
ತಾ. ೧೩-೧೧-೪೪.

ಪ್ರಿಯ ವಿಮುಖ,

ನಿನ್ನ ಪತ್ರವನ್ನು ಓದಿದೆನು. ಮನಸ್ಸಿಗೆ ವ್ಯಥೆಯೂಯಿತು. ನೀನಿನ್ನೂ ಬಾಲಕ. ವಿಮಲ ರಾಜಕೀಯದ ಘೋರನೆಗಳನ್ನು ತಿಳಿದಿಲ್ಲ. 'ಜನಸೇವೆ' ಎಂಬುದರ ಅರ್ಥವೂ ನಿನಗಾಗಲಿಲ್ಲ. ಯಾವ ರಾಜಕೀಯದಲ್ಲಿ ಧರ್ಮಬುದ್ಧಿ, ಸತ್ಯ, ಅಹಿಂಸೆ, ಸಮನ್ವಯ ಭಾವಗಳಿಲ್ಲವೋ ಅದು ರಾಜಕೀಯವಾಗುದು. ಜನಸೇವೆಯ ಮಾರ್ಗವದಾಗದು. ರಾಜಕೀಯವು ಜನಸೇವೆಯ ಉದಾತ್ತ ಅಂತಸ್ಥಿನಿಂದ ಸ್ವಾರ್ಥಸಾಧನೆಯ ಕೆಳಗಿನ ಕೆಸರಿಗೆ ಏಳೆಯಲ್ಪಟ್ಟ ಕಾರಣವೇ ಅದರಲ್ಲಿ ದ್ವೇಷ, ಅಸೂಯೆಗಳಿಗೆ ಎಡೆಯಾಗುತ್ತದೆ. ಸ್ವಲ್ಪ ಸೂಕ್ಷ್ಮವಾಗಿ ಆಲೋಚಿಸು. ನೀನು ಜನರ ಹಿತಸಾಧನೆ ಮಾಡಲು ಹೊರಟಿವನಾದರೆ ಇನ್ನೊಬ್ಬರ ಮೇಲೆ ಕೈಮಾಡುವ ಮತೇಕೆ? ಜನರಿಗೆ ಹಿತವಾಗಬೇಕೆನ್ನುವವರಿಗೆ ಪಾರ್ಟಿ ಪಂಗಡಗಳೇಕೆ? ಯಾರೇ ಇರಲಿ, ನಿಜವಾದ ಜನಸೇವಕರೆಲ್ಲರೂ ಒಮ್ಮತದವರಾಗುವರು! ಅಧಿಕಾರದಡೆಯಬೇಕು, ಸ್ವಾರ್ಥತೆ ಸಾಧಿಸಿಕೊಳ್ಳಬೇಕು; ಪ್ರತಿಷ್ಠೆ ಪಡೆಯಬೇಕು ಎಂಬ ಕಾಂಕ್ಷೆಗಳು ಹುಟ್ಟುವದರಿಂದ ಪಾರ್ಟಿಗಳಾಗುತ್ತವೆ ಅದರ ಸಾಧನೆಗೆ ತತ್ವಗಳ ಕೊಲೆಯೊಗುತ್ತದೆ. ಜನಸೇವಾದೀಕ್ಷೆಯು ಮಣ್ಣಾಗುತ್ತದೆ. ನಿನ್ನ ದಾರಿ ತಪ್ಪು. ಎಲ್ಲಿಯ ವರೆಗೆ ಜಗತ್ತಿನ ಜನರೆಲ್ಲರೂ ಸಹೋದರರು; ಪ್ರತಿಯೊಬ್ಬನಿಗೂ ನಿಷ್ಕಳಂಕತೆಯೇ ಬದುಕಿ ಬಾಳುವ ಹಕ್ಕಿದೆ ಯೆಂಬುದನ್ನು ಅರಿಯೆಯೋ ಅಂದಿನ ವರೆಗೆ ನಿನ್ನಿಂದ ಜನಸೇವೆಯೊಗಲಾರದು. ಶತ್ರುಗಳೆಂದು ಯಾರನ್ನು ಎದುರಿಸಲು ಹೊರಟಿರುವೆ? ಅವರೂ ಮಾನವರಲ್ಲವೇ? ಅವರಿಗೂ ನಿನ್ನಂತೆ ಹಳ್ಳು ಬಾಧ್ಯತೆಗಳಿಲ್ಲವೇ? ನಿನ್ನನ್ನು ಶತ್ರುವಂತೆ ಕಾಣಿದರೂ ನೀನು ಉದಾರತೆಯನ್ನು ತೋರಿದ್ದಿದ್ದರೆ ನಿನ್ನ ಜನಸೇವೆಯೆಲ್ಲಿ? ನಿನ್ನ ಸೇನೆಯು ನಿನ್ನ ಪಕ್ಷದ ಇಲ್ಲವೇ ನಿನಗೆ ಹಿತವಾಗುವ ಜನರ ಸೇವೆಯಲ್ಲಿಯೇ ನೀ ಮಿತವಾಗಿದೆಯೇ? ಹಾಗಾದರೆ ನೀನು ದೇಶಸೇವಕನಾಗಲಾರೆ. ಪಾರ್ಟಿ ಪಕ್ಷಗಳನ್ನು ತ್ಯಜಿಸು. ಸತ್ಯದ ಕಡೆಗೆ ಕಣ್ಣಿಡು. ಎಲ್ಲರನ್ನೂ ಸ್ನೇಹಿತರಂತೆ ಕಾಣು. ಆಗ ಜನಸೇವಾ ಮಾರ್ಗವು ತೆರೆದು ಕಾಣುವದು.

ಸಣ್ಣುಳ.

---

# ರಾಜಕೀಯದಲ್ಲಿ-ದ್ವೇಷ, ದೂಷಣೆಗಳ ಸ್ಥಾನ.

— ಲೇಖಕ:—ಶ್ರೀಮತಿ ಕಾವೇರಿ, ಕೊಡಗು —

ಪತ್ರಿಕೆಗಳನ್ನು ಓದುವ ಹುಚ್ಚುರುವ ನಾನು ನನ್ನ ಓದಿನ ಸಹಾಯದಿಂದ ಈ ಲೇಖನವನ್ನು ಬರೆಯತೊಡಗಿರುವೆನು. ನಾನು ರಾಜಕೀಯ ಕ್ಷೇತ್ರದಲ್ಲಿ ಇಲ್ಲದ ಕಾರಣ ಈ ಲೇಖನಕ್ಕೆ ಅನುಭವದ ಬೆಂಬಲವಿಲ್ಲ. ಆದರೂ ಕೂಡ ಈ ಲೇಖನದಲ್ಲಿಯ ವಿಚಾರಗಳನ್ನು ರಾಜಕೀಯ ರಂಗದಲ್ಲಿ ದುಡಿಯುವವರು ತಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಬೇಕು. ಆ ಒರೆಗಲ್ಲಿನ ಪರೀಕ್ಷೆಯು ಈ ಲೇಖನದಲ್ಲಿ ಸತ್ಯಾಂಶವಿದೆಯೆಂಬುದನ್ನು ಶ್ರುತಪಡಿಸಿದರೆ ಲೇಖನ ಸಾರ್ಥಕವಾದಂತೆ.

'ರಾಜಕೀಯ'ವೆಂದರೆ ಸಾಧಾರಣವಾಗಿ ಜನರ ಆಡಳಿತ, ಜನತೆಗಾಗಿ, ಸರಕಾರಕ್ಕೂ ಇರುವ ಸಂಬಂಧ ಇವುಗಳಷ್ಟಾಪಕ ಬರುತ್ತದೆ. ಇದರಲ್ಲಿ ಸೇವೆ, ಸಹಾಯಗಳಿಗೂ ಎಡೆ ಇದೆ. ಆದರೆ ಇಂದು 'ರಾಜಕೀಯ'ವೆಂದರೆ ವಿಪಟಿಂಗುಗಳು, ಬಿರುಸಿನ ಭಾಷಣಗಳು, ಎದುರು ಪಕ್ಷದವರ ದೂಷಣೆಗಳು, ಚುನಾವಣೆ, ಅಧಿಕಾರ ಇವುಗಳೆಂದು ಅರ್ಥವಾಗುತ್ತದೆ! ನಾನು ಬರೆಯುತ್ತಿರುವ ಇಂದಿನ ರಾಜಕೀಯವು 'ರಾಜಕೀಯವು ಲಪಂಗರ ಕಾರ್ಯಕ್ಷೇತ್ರ'ವೆಂಬ ಕವಿಯ ಮಾತಿಗೆ ಸಾಕ್ಷಿಸಾಡಿಯುತ್ತಿದೆ. ರಾಜಕೀಯದಲ್ಲಿ ಪರಿಣಾಮಕಾರಕವಾಗಿ ಉಪಯೋಗಿಸಲ್ಪಡುವ ಆಯುಧಗಳೆಂದರೆ ನಿಂದೆ, ದ್ವೇಷ ಮೊದಲಾದವು ತಮ್ಮಲ್ಲಿರುವ ಆಯೋಗ್ಯತೆಯನ್ನು ಮುಚ್ಚಿಕೊಳ್ಳಲು ಇವು ಸುಲಭಸಾಧನಗಳು!

ಜಗತ್ತಿನ ರಾಜಕೀಯ ರಂಗವನ್ನೊಮ್ಮೆ ಅವಲೋಕಿಸಿದರೆ ಈ ಅಸೂಯೆ, ನಿಂದೆ, ದ್ವೇಶಗಳನ್ನು ಹಿಟ್ಟರನಷ್ಟು ಚಾತುರ್ಯದಲ್ಲಿ ಉಪಯೋಗಿಸಿದವರು ಯಾರೂ ಇಲ್ಲವೆನ್ನಬಹುದು. ತನ್ನ 'ನಾರ್ಡಿಕ್' ತತ್ವವನ್ನು ಸಾರಿ ಪ್ರಚಾರಕ್ಕೆ ಪ್ರಾರಂಭಿಸಿದಾಗ ಜರ್ಮನಿಯು ಅಧಃಪತನಕ್ಕೆ ಎಡೆಯಾದೀತೆ ಕಾರಣರೆಂಬ ಮಾತನ್ನು ಎತ್ತಿ ಕಟ್ಟಿ ಜನರ ದೃಷ್ಟಿಯನ್ನು ಅತ್ತ ಸೆಳೆದನು. ಸಾವೊನ್ನೆ ಜರ್ಮನಿಯು ಇದನ್ನು ತಿರಿಯೂರೆ ತೀಳಿ ಮನಸಾರೆ ಒಪ್ಪಿದನು. ಜರ್ಮನರು ಆರ್ಯರು ಎಂಬ ತತ್ವಕ್ಕೆ ಬಲಿಬಿದ್ದನು. ಜಗತ್ತಿನ ಎಲ್ಲಾ ಜನರು ಆರ್ಯಾರ್ಯರು ಎಂದು ದ್ವೇಷಿಸಶಿಷಗಿದನು. ಹಿಟ್ಲರನು ಹುಟ್ಟಿಸಬೇಕೆಂದಿದ್ದ ನಾಮಿ ತತ್ವದ ಕೈಗೊಂಬೆಯಾದನು. ಜಗತ್ತಿನಲ್ಲಿ ಜರ್ಮನರನ್ನು ವಿದ್ಯಾವಂತರಾದ ಜನಾಂಗ ಬೇರಿಲ್ಲ. ಅಧುನಿಕ ಜಗತ್ತಿನ ಲ್ಲಿ ಕೈಗಾರಿಕೆ ಕಲೆಗಳಲ್ಲಿ, ವಿಜ್ಞಾನ, ಉದ್ಯೋಗಗಳಲ್ಲಿ, ಜರ್ಮನರನ್ನು ಮಿಂಚಿದವರಿಲ್ಲ. ಇಂಥಾ ವಿದ್ಯಾವಂತ, ನಾಗರೀಕ ಜನಾಂಗವೇ ಹಿಟ್ಲರನು ಹುಟ್ಟಿಸಿದ ದ್ವೇಶ, ಅಸೂಯೆಗಳ ಪ್ರವಾಹದಲ್ಲಿ ಮುಳುಗಿ ಮುಂಗಾಣದಾಯಿತೆಂದರೆ, ವಿದ್ಯೆ ಇಲ್ಲಗ, ಜ್ಞಾನ ಬೆಳೆಯದ, ಜನತೆಯಿರುವ ದೇಶಗಳಲ್ಲಿ ರಾಜಕೀಯವು ದ್ವೇಷ, ನಿಂದೆಗಳ ಆಡಿಪಾಯವನ್ನು ನಿಲ್ಲಿಸಲ್ಪಟ್ಟರೆ ಗತಿಯೇನು?

ಕಮ್ಯೂನಿಷ್ಟರು ತೆಗೆದುಕೊಳ್ಳಿ. ಅವರ ಧ್ಯೇಯವೇ ಬಡ್ಡ ಕಲಹ! ಕೂಲಿಗಾರರನ್ನು ಬಂಡವಾಳಗಾರರ ಮೇಲೆತ್ತಿ ಕಟ್ಟುವದು. ಬಂಡವಾಳಗಾರರನ್ನು ದ್ವೇಷಿಸುವದು. ಅವರ ಉನ್ನತಿಯನ್ನೆ ಯತ್ನಿಸುವದು. ರಷ್ಯಾದಲ್ಲಿ ಇಂದು ಜಯಪ್ರದವಾಗಿ ಕಾಮಗಾರರ ರಾಜ್ಯಸ್ಥಾಪನೆಯೊಯಿತು. ಇದು ಶಿಥಿಲವಾಗದೆ ಉಳಿಯಬೇಕಾದರೆ ಈ ಜನರು ಉತ್ಸಾಹದಿಂದ ನೋಡುವ ಹೊಸ ರಂಗಗಳನ್ನು ರಚಿಸಬೇಕು. ಇಲ್ಲದಿದ್ದರೆ ತಮ್ಮ ಸ್ಥಿತಿಯು ಅಲೋಕನ ಮಾಡುವ ಅವಕಾಶ ಅವರಿಗೆ ದೊರೆಯುವದು. ಆದ್ದರಿಂದ ಕಮ್ಯೂನಿಷ್ಟರು ಹೊಸ ಹೊಸ ರಂಗಕ್ಕೆ ಕಾಲಿಟ್ಟಿದ್ದರೆ. ಜಗತ್ತಿನ್ನೇ ಕಮ್ಯೂನಿಷ್ಟ್ ರಾಷ್ಟ್ರವನ್ನಾಗಿ ಪರಿವರ್ತಿಸಲು ಯತ್ನಿಸಿದ್ದಾರೆ!

ಅಮೇರಿಕಾದ ಪ್ರೆಸಿಡೆಂಟ್ ಟ್ರೂಮನ್ನರ ನೀತಿಯನ್ನು ನೋಡುವ. ಬಂಡವಳವಾದವನ್ನು ಎತ್ತಿ ಕಮ್ಯೂನಿಷ್ಟರನ್ನು ದ್ವೇಷಿಸುತ್ತಿದ್ದಾರೆ. ತನ್ನ ಆಡಳಿತ ಅಯೋಗ್ಯತೆಗೆ 'ಕಮ್ಯೂನಿಷ್ಟ್' ಭಯವನ್ನು ಎತ್ತಿ ಕಟ್ಟಿದ್ದಾರೆ. ರಷ್ಯಾವೆಂದರೆ ಪ್ರತಿ ಅಮೇರಿಕನು ದ್ವೇಷಿಸುವಂತೆ ಅಮೇರಿಕಾ ರಾಜಕೀಯ ರಂಗವನ್ನು ತಯಾರುಗೊಳಿಸುತ್ತಿದ್ದಾರೆ.

ಹಿಂದೂದೇಶದ ಮುಸ್ಲಿಂ ಲೀಗಿನ ಚರಿತ್ರೆಯು ರಾಜಕೀಯದಲ್ಲಿ ದ್ವೇಶದ ಸ್ಥಾನದ ಸೂರ್ಣ ಮಾಹಿತಿಯನ್ನು ಕೊಡುತ್ತದೆ. ಕುದ್ದ ರಾಜಕೀಯ ಕ್ಷೇತ್ರದಲ್ಲಿ ಅಸಫಲನಾದ ಜನ್ನಾಸು ತನ್ನ ಆಸೆ, ಆಕಾಂಕ್ಷೆಗಳು ಮಣ್ಣಾಗೂಡಲು ತನಗೊಂದು ರಂಗಸ್ಥಳದ ರಚನೆಗಿಳಿದನು. 'ಹಿಂದೂ ಗಳ ದಬ್ಬಾಳಿಕೆ,' 'ಹಿಂದೂಗಳು ಹಿಂದೂ ದೇಶವನ್ನು ಆಳಲು ಹೊರಟಿದ್ದಾರೆ' 'ಧರ್ಮವು ಗಂಡಾತರದಲ್ಲಿದೆ' ಎಂಬ ದ್ವೇಷ ಸೂರಿತ ಶ್ಲೋಕಗಳನ್ನೆತ್ತಿ ಹುಟ್ಟಿವಾಗಿದ್ದ ಮುಸ್ಲಿಂ ಜನಕ್ಕೆ ಚೇತನಕೊಟ್ಟನು. ಮುಸ್ಲಿಮರ ದ್ವೇಷವು ಅತನ ಪ್ರಚಾರದಿಂದಾಗಿ ದಿನೇ ದಿನೇ ಹೆಚ್ಚಿತು. ದ್ವೇಶವೇ ರಾಜಕೀಯದ ಮಹಾಯುಧವೆಂದು ತಿಳಿದ ಲೀಗು ಮುಸ್ಲಿಮರ ಅಜ್ಞಾನ, ಅಧಃಪತನಗಳಿಗೆ ಹಿಂದುಗಳೇ ಕಾರಣರೆನ್ನುವಂತೆ ಬೋಧಿಸಿತು. ಈ ದ್ವೇಶ, ನಿಂದೆಗಳ ಕೂಸೇ ಪಾಕಿಸ್ತಾನ, ರಾಜಕೀಯದಲ್ಲಿ ದ್ವೇಶವು ಸಾಧಿಸಬಹುದಾದ ಪರಮೋನ್ನತ ಕಾರ್ಯವಿದು.

ತಮ್ಮ ಚಿಕ್ಕ ಜಗತ್ತಾದ ಕೊಡಗನ್ನು ತೆಗೆದುಕೊಂಡರೂ ರಾಜಕೀಯದಲ್ಲಿ ಈ ಅಯುಧದ ಶಕ್ತಿಯನ್ನರಿತ ಜನರು ಅದನ್ನು ಉಪಯೋಗಿಸುತ್ತಿದ್ದಾರೆ. ತಾನು ಮೇಲೇರಬೇಕಿದ್ದರೆ ಇನ್ನೊಬ್ಬನನ್ನು ಕೆಳಗೆ ತಾಕಿ ಸಾಧ್ಯವಿದ್ದರೆ ಅತನ ಮೇಲೆ ನಿಂತು ಏರಬೇಕೆಷ್ಟನ ಪ್ರಯತ್ನ ನಡೆದಿದೆ. ಕೊಡಗಿನ ಜನರಲ್ಲಿ ನೂಂಕ್ಕೆ ೨೦ ಜನ ವಿದ್ಯಾವಂತರಿರಬಹುದು. ನೂರಕ್ಕೆ ನೂರರಷ್ಟು ವಿದ್ಯಾವಂತರಿರುವ ಜಗತ್ತಿನ ಒಂದನೇ ನಾಗರೀಕ ಜನಾಂಗವಾದ ಜರ್ಮನಿಯು ರಾಜಕೀಯದಲ್ಲಿ ದ್ವೇಶ, ಕ್ರೋಧಗಳಿಗೆಡೆಕೊಟ್ಟು ಅನಾಹುತಕ್ಕೆ ಕಾರಣವಾಗಿರುವಾಗ, ಶಿಷ್ಟ ನಾಗರೀಕ ರಲ್ಲದ ಕೊಡಗಿನ ಜನರಲ್ಲಿ ಈ ದ್ವೇಷ ರಾಜಕೀಯವು ಅನಿಷ್ಟ ಕಾರ್ಯಗಳಿಗೆ ಹೇತುವಾಗಬಹುದು. ರಾಜಕೀಯದಲ್ಲಿ ದ್ವೇಷ, ವೈಕ್ತಿದೂಷಣೆ, ನೊವಲಾದುವನ್ನು ತರುವವರು ತಮ್ಮ ಅಯೋಗ್ಯತೆಯನ್ನು ಮುಚ್ಚಲು ಇವುಗಳನ್ನು ಆಶ್ರಯಿಸುವದಾಗಿದೆ. ಈ ದ್ವೇಷಪೂರಿತ ರಾಜಕೀಯವು ತತ್ಕಾಲ ಜಯವನ್ನು ಸಾಧಿಸಿಕೊಡಬಹುದು. ಆದರೆ ಇದನ್ನು ಬಿತ್ತಿದವರೇ ಅವಕ್ಕೆ ಆಹುತಿಯಾಗುವಂತೆ ಕಾಲವು ಬಾರದಿರದು. ರಾಜಕೀಯದಲ್ಲಿ ದ್ವೇಷ, ಅಸೂಯೆ, ಕ್ರೋಧಗಳಿಗೆಡೆಕೊಡಬಾರದೆಂದು ಕೂಗುತ್ತಿರುವ ಏಕಕ್ಷರವೆಂದರೆ ಸೇವಗ್ರಾಮ ಸನ್ಯಾಸಿಯದು. ಆದರೆ ಸ್ವಾರ್ಥತೆ, ಅಧಿಕಾರ ಲಾಲಸೆಗಳಿಗೆ ಮನಸೋತ ಅದಾವನು ಆ ಸ್ವರವನ್ನು ಕೇಳುವನು! ಪುಣ್ಯಕ್ಕೆ 'ಸಾಗರೀಕತೆ' ಕ್ರಿಸ್ತನ ಕಾಲದಿಂದ ಈಗ ಮುಂದರಿದಿದೆ. ಇಲ್ಲದಿದ್ದರೆ ಗಾಂಧಿಯನ್ನು ತಿಲಾಬೆಗೆ ಈ ಜನ ಏಂಸದೆ ಬಿಡುತ್ತಿರಲಿಲ್ಲ!

---

## "ಸೀತಾ ರಾಮರ ಪುನರ್ಮಿಲನವಾಗಬೇಕು"

ಕೊಡಗಿನ ಅಭಿಮಾನಿ ದೇವತೆ ತಾಯಿ ಕಾವೇರಿ ದಿಗಿಲು ಗೊಂಡಿರುವಳು. ನೋಡಲಾ! ಸಿರಿವೊಗದ ಮೇಲೆ ಕಣ್ಣೀರ ಕೋಟ್ಟು ಕೊಟ್ಟಳ್ಕುತ್ತಿದೆ. ಕೊಡಗ ಕೊಡಗೇತರರೆಂಬ ಭೇದಭಾವದ ಅಮಲನ್ನು ಕುಡಿದು ಪಾಯದವರಾಗುವರೇ ಕೊಡಗಿನ ವೀರ ಪುತ್ರರು! ತೊಲುವ ಕನ್ನಡನಾಡು ಉದಯಿಸಲು, ಬಾಳಿಬದುಳಲು ಅಳಿಯಬೇಕೆ? ಕೊಡಗು ಅಳಿಯಬೇಕೇ? ಕೊಡಗು ಕಳ್ಕುತ ನಾಡಿನ ಜಲ್ಲೆಯಾಗಬೇಕೇ?

ಕೊಡಗಿನ ಭವಿಷ್ಯದ ವಿಚಾರವಾಗಿ ನಾಡಮತ ಎರಡು ಹೋಳಾಗಿದೆ. ಒಮ್ಮತವಿಲ್ಲ. ಪ್ರತ್ಯೇಕವಾದ, ವಿಶೇಷರಣ ವಾದಗಳ ಗೊಂದಲದಲ್ಲಿ ಜನತೆ ತಲ್ಲಣಿಸುತ್ತಿದೆ. ಉತ್ತರೋತ್ತರ ಶ್ರೇಯೋಭಿವೃದ್ಧಿಯ ಮಾರ್ಗವಾಗಿದಾಗಿದೆ. ಬುದ್ಧಿ

ಯನ್ನು ಕೊರೆಯುತ್ತಿದೆ. ಪ್ರತ್ಯೇಕವಾಗಿರಬೇಕೇ? ಒಂದಾಗಿರಬೇಕೆ? ಎಂಬ ಪ್ರಶ್ನೆ.

ಪ್ರತ್ಯೇಕವಾದಿಗಳನ್ನೊಮ್ಮೆ ಕೆಣಕೋಣ. ಚರಿತ್ರೆಯು ಬೆಳಕನ್ನು ಕಂಡಂದಿನಿಂದ ಕೊಡಗು ಪ್ರತ್ಯೇಕವಾಗಿ ಸ್ವತಂತ್ರವಾಗಿ ಇದೆ. ಎಂಥಾ ವಿಶ್ಲಪಕಾಲದಲ್ಲೂ ಜಗ್ಗದೆ ಕೊಡಗು ದೃಢಮೂಲವಾಗಿ ಕುಡುಮಲೆಯೊಳಗಿ ಉಳಿದು ಬಾಳಿದೆ. ಕರ್ನಾಟಕದಲ್ಲಿ ವಿಲೀನವಾಗಿ ಜಿಲ್ಲೆಯೇ ತಾಲೋಕೋ ಆದಲ್ಲಿ ಆತ್ಮವಳಿದು ಹೆಸರಳಿಯುವ ಭಯವಿದೆ. ಬೊಂಬಾಯಿಯ ಬಿಜಾಪುರವಾದೀತು, ಮದ್ರಾಸಿನ ಮಲೆನಾಡಾದೀತು. ಪಳ್ಳಿಕೆ ಶುದ್ಧ ನಿರ್ಮಲ ಜಲದೊಂದಿಗೆ ವಿಶ್ವಾಪಾಲ್ಲಿ ತಾನು ಒಂದಾದಂತೆ ತನ್ನ ಗುಣವನ್ನು ನೀರಲ್ಲಿ ಬೀರುತ್ತದೆ. ದಣುವು ಬಾಯಾರಿಕೆಗಳನ್ನು ಹೋಗಲಾಡಿಸುವಂತಾಗುತ್ತದೆ. ನೀರು ಕೊಳಕಾಗಿದ್ದಲ್ಲಿ ವಿಷಲಪಿಂದ ವಾಂಛಿತ ಫಲವಿಲ್ಲ ಸಕ್ಕರೆಯೆಸ್ಟು ನಷ್ಟ! ಅಂತೆಯೇ ಮಿಕ್ಕಾದ ಕನ್ನಡ ಪ್ರದೇಶದಲ್ಲಿ ಇಂದು ಕೋಮುವಾರು (ಹಿಂದು ಮುಸ್ಲಿಂ ಮಾತ್ರವಲ್ಲ) ವಿಷಮಿಶ್ರ ಸ್ವಾರ್ಥ ವಾತಾವರಣವಿರುವುದರಿಂದ ಏಕೀಕರಣಕ್ಕೆ ಸೆರಿಸೋಣ. ಆದರೆ ಆತುರ ಬೇಡ

ಏಕೀಕರಣವಾದಿಗಳ ಮತ ವೀಲೀನೀಕರಣ. ಕೊಡಗಿಗೆ ಲಕ್ಷ್ಮಿಯ ವರದ ಹಸ್ತವಿಲ್ಲದುದರಿಂದ ಸ್ವತಂತ್ರವಾಗಿ ನಿಲ್ಲುವ ಯೋಗ್ಯತೆ ಇಲ್ಲ ಸಿರಿವಂತಿಕೆಯ ಕರ್ನಾಟಕದಲ್ಲಿ ಒಂದಾಗಿ ಸ್ವಾತಂತ್ರ್ಯದ ಗೊಡವೆಯನ್ನು ಬಿಟ್ಟು ಕನ್ನಡಿಗರೆಲ್ಲರೂ ಒಂದೆಂಬ ಒಂದಾಗೋಣ. ಏಕೀಕರಣಕ್ಕೆ ಇದೋ ಸ್ವಾಗತವೆನ್ನೋಣ. ತಡವಾಯ್ತಲ್ಲಿ ಕನ್ನಡ ಜನತೆಗೆ ನಿಘಾತವಾದೀತು. ಕನ್ನಡ ನಾಡಿನ ಆತ್ಮವೇ ಆಳವೀತು.

ಭಾರತದಲ್ಲಿ ಇಂದು ಸ್ವಪ್ನದಲ್ಲಿ ಯೋಚಿಸದ ಘಟನೆಗಳಾಗುತ್ತಿವೆ. ಚಿಕ್ಕ ಸಣ್ಣ ಸಂಸ್ಥಾನಗಳು ನೆರೆಯ ಪ್ರಾಂತ್ಯದೊಂದಿಗೆ ಒಂದಾಗುತ್ತಿವೆ; ಏಕ್ಯವಾಗುತ್ತಿವೆ. ಅಲ್ಲಿ ಜನತೆಯ ಒಮ್ಮತವಿದೆ. ಇಲ್ಲಿ ಒಮ್ಮತವಿಲ್ಲ. ಪಕ್ಷ ಪಕ್ಷಗಳ ವಾದ ಸರಣಿಯಲ್ಲಿ ತತ್ವವೇನಾದರೂ ಹುದುಗಿದೆಯೇ? ಇಲ್ಲವಿರದು. ನನ್ನ ದೃಷ್ಟಿಯಲ್ಲಿ ಬೋಸವಿಲ್ಲದಿದ್ದರೆ ಇಲ್ಲಿ ಈ ಚಿತ್ರವನ್ನು ಕಾಣುತ್ತೀನೆ ಅತ್ತ ದದದಲ್ಲಿ ರಾಮ. ಇತ್ತ ದಡದಲ್ಲಿ ಸೀತೆ. ನಡುವೆ ಭೋರ್ಗರೆವ, ಭಯಮುದ್ರೆ. ಪ್ರತ್ಯೇಕಿಸಿರುವ ಆಳವಾದ ಸಮುದ್ರಕ್ಕೆ ಸೇತು ಬಂಧವಾಗಬೇಕು. ಸೀತಾ ರಾಮರ ಪುನರ್ಮಿಲನವಾಗಬೇಕು. ಭವ್ಯ ಭಾರತದ ಘಟಕವಾದ ಸಿರಿಗನ್ನಡ ನಾಡಿನಲ್ಲಿ ಕೊಡಗು ಕೊಡಗಾಗಿ ಸೇರಬೇಕು ಕರ್ನಾಟಕದಲ್ಲಿ ಮಿಕ್ಕಾದ ಅಂಗರಾಜ್ಯಗಳೊಂದಿಗೆ ಸಮ ಪ್ರತಿನಿಧ್ಯತೆಯಿಂದ ಕೊಡಗಾಗಿ ಬಾಳಬೇಕು ರಾಂಡಜಿಸಬೇಕು. ಉಭಯಪಕ್ಷನ, ಉಭಯ ದಂಡಿಯ ಮುಂದಾಳುಗಳು ತಮ್ಮ ಮತ ಸಾರವನ್ನು ಒಂದುಮಾಡಿ ಕೊಡಗಿನ ಒಮ್ಮತವೆಂದು ಒಕ್ಕೊರಲಿನಿಂದ ಸಾರುವರೇ! ಕೊಡಗಿನ, ಕನ್ನಡ ಜನತೆಯ, ಭಾರತದ ಕೃತಜ್ಞತೆಯನ್ನು ಮಡಿಲಲ್ಲಿ ಹಾಕಿಕೊಳ್ಳುವರೇ!

"ಸ್ನೇಹಕ"

(೧ ನೇ ಪುಟದಿಂದ ಸಗಿದ್ದು.)

ದ ಮಿ. ಬೀಲ್‌ರವರ ಈ ಸಲಹೆಗಳನ್ನು ಜಾರಿಯಲ್ಲಿ ತಂದಿದ್ದರೆ ಬಿಳಿಗೂಪುರ, ಸೋಲಾಪುರ, ಕೊಯಮುತ್ತೂರುಗಳಲ್ಲಿ ಬರಗಾಲದ ಸುಳಿವಿರುತ್ತಿರಲಿಲ್ಲ. ಬಿಳಿಗೂಪುರ, ಮತ್ತು ಸೋಲಾಪುರಗಳು ಬರಗಾಲ ಪೀಡಿತ ಜಿಲ್ಲೆಗಳೆಂದು ಕರೆಯಲ್ಪಡುತ್ತಿದ್ದವೇ? ಲಕ್ಷಾಂತರ ಜನರು ಬರಗಾಲಕ್ಕೆ ತುತ್ತಾಗುತ್ತಿದ್ದರೇ? ನೀರಾವರಿ ಯೋಜನೆ ಜೀವನ ಮರಣದ ಸಮಸ್ಯೆ. ಇಬಿಜ್ಜಿದೆ ನೂರಾರು ಜನ ಪ್ರತಿವರ್ಷ ಸಾಯುತ್ತಿದ್ದಾರೆ ಇಂಥಾ ತತ್ಕ್ಷಣವ್ಯಕ್ಷ ಕಾರ್ಯಗಳೇ ಜಾರಿಗೆ ಬಂದಿಲ್ಲ. ಬರುವ ಸಾಧ್ಯತೆಯೂ ಸದ್ಯಕ್ಕಿಲ್ಲ. ಇದರಂತೆಯೇ ಕೊಡಗಿನ ಹತ್ತಿರದಲ್ಲಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾಂ, ಧಾರವಾಡ ಜಿಲ್ಲೆಗಳಲ್ಲಿ ಏನಾಗಿದೆಯೆಂಬುದು ಬಹು ಜನರಿಗೆ ಗೊತ್ತಿದೆ. ಬೊಂಬಾಯಿ ಪ್ರಾಂತದ ಆಡಳಿತವಲ್ಲಿರುವ ಕನ್ನಡ ಭಾಗಗಳ ತಳಮಳವೂ, ಮದ್ರಾಸ್ ಸರಕಾರದ ಆಡಿಯಲ್ಲಿರುವ ಭಾಗಗಳ ಕಳವಳವೂ ಜಗಜ್ಜಾಹಿತವಾಗಿದೆ. ದಕ್ಷಿಣ ಕನ್ನಡವು ಮದ್ರಾಸ್ ಪ್ರಾಂತಕ್ಕೆ ಸೇರಿದೆಯೆಂಬುದನ್ನೇ ತಿಳಿದು ಆಡಳಿತಗಾರರೂ ಮದ್ರಾಸಿನಲ್ಲಿರಬಹುದು ಮದ್ರಾಸಿನ ಯುದ್ಧೋತ್ತರ ರಚನೆಯಲ್ಲಿ ಮಲಬಾರಿನಲ್ಲಾಗಬೇಕಿದ್ದ ನೆಲಗಡಲೆ ಮತ್ತಿತರ ಕಾರ್ಯಾನೆಗಳನ್ನು 'ಸೀಡೆಡ್' ಜಿಲ್ಲೆಯಲ್ಲಿ ಸ್ಥಾಪಿಸಿದ ನೀತಿ, ಆಕಾರಬಿರಿಯುವಂತೆ ಮಲಬಾರಿನವರು, ದಕ್ಷಿಣ ಕನ್ನಡದವರು ಕೂಗಿಕೊಂಡರೂ, ಇವರ ಪ್ರತಿನಿಧಿಗಳು ಮಂತ್ರಿಗಳಾಗಿದ್ದರೂ ಶುಕ್ರವಾರದಲ್ಲಿ ಕೈಗಾಗದೆ ಈ ಭಾಗದ ಜನರು ಹಾಹಾಕಾರವೆಬ್ಬಿಸುತ್ತಿರುವ ಮಾದರಿ ಎಲ್ಲರಿಗೂ ತಿಳಿದಿದೆ. ಇದನ್ನು ತಿಳಿದೂ ತಿಳಿದೂ ಯೂಪೋ ಶುಕ್ರತ್ವದಿಂದ ಪ್ರತ್ಯೇಕವಾಗಿರುವ ಕೊಡಗು ವಿಶಾಲ ಕರ್ನಾಟಕದಲ್ಲಿ ವಿಲೀನವಾಗಬೇಕೆ? ಈ ಕನ್ನಡ ಭಾಗಗಳು ಜೇರಿ ಪ್ರಾಂತವಲ್ಲಿ ಹಂಚಿಹೋದ ಕಾರಣ ಅಭಿವೃದ್ಧಿ ಸಾಧ್ಯವಾಗಿಲ್ಲವೆನ್ನಬಹುದು ಕೊಡಗಿಗೀಂಥಾ ರಕ್ಷಿಸಂಪನ್ನ ಮಲಬಾರಿನ ಕೂಗು ಮದ್ರಾಸಿಗೆ ಮುಟ್ಟುತ್ತಿಲ್ಲ. ದಕ್ಷಿಣ ಕನ್ನಡದವರ ಮೊರೆ ಕೇಳುತ್ತಿಲ್ಲ. ಹಾಗಾದರೆ ಕೊಡಗಿನ ಕೂಗು ವಿಕೀಕರಣ ಆಡಳಿತ ಕೇಂದ್ರಕ್ಕೆ ಮೇಗೆ ಮುಟ್ಟುವುದು?

ಒಂದು ನೇಳೆ ಕರ್ನಾಟಕ್ಕೆ ಕೊಡಗು ಸೇರಿದರೂ ಕೊಡಗಿನ ಹಾರಂಗಿ ಯೋಜನೆ, ಬೇತರಿ ಸೇತುವೆ, ಲಕ್ಷ್ಮಣತೀರ್ಥ ಆಣೆಕಟ್ಟು ಇವುಗಳು ಉಳ್ಳಾರಿ, ಅನಂತಪುರ, ಬಿಳಿಗೂಪುರಗಳ ನೀರಾವರಿ ಯೋಜನೆಗಳಿಗಿಂತ ಪ್ರಾಮುಖ್ಯವೇ? ಈ ಯೋಜನೆಗಳಿಗೆ ಹಣ ವದಗಿಸುವುದು ಕನ್ನಡಿಗ ಭಾವಿ ಸರಕಾರಕ್ಕೆ ಅಸಾಧ್ಯವಾಗಬಹುದು. ಬಂಜರುಗಾಡಾಗಿರುವ ಈ ಭಾಗಗಳು ವ್ಯವಸಾಯ ಯೋಗ್ಯವಾಗಬೇಕಾದರೆ ಕೋಟ್ಯಾಂತರ ಹಣ ಖರ್ಚಾಗಬೇಕು. ಸೋಲಾಪುರ, ಬಿಳಿಗೂಪುರ, ಬೆಳಗಾಮ್, ಧಾರವಾಡ, ಉ. ಕನ್ನಡ, ದ. ಕನ್ನಡ, ಪ್ರತಿಯೊಂದಕ್ಕೂ ಅವುಗಳ ಅತ್ಯಾವಶ್ಯಕ ಸಮಸ್ಯೆಗಳವೆ. ಮೈಸೂರಿಗೂ ಅವರ ಜರಿಲ ಪ್ರಶ್ನೆಗಳವೆ. ಈ ಭಾಗಗಳ ಪ್ರಶ್ನೆಗಳು ಕೊಡಗಿನ ಪ್ರಶ್ನೆಯಂತಲ್ಲ. ಕೊಡಗಿನ ಪ್ರಶ್ನೆಗಳು ಇನ್ನೂ ಹಲವಾರು ವರ್ಷ ತಡೆದರೂ ಪ್ರಾಣಹೋಗುವ ಸಂದರ್ಭವಿಲ್ಲ. ಆದರೆ ಕರ್ನಾಡಿನ ಇತರ ಭಾಗಗಳಲ್ಲಿ? ಆದ್ದರಿಂದ ಕರ್ನಾಡಿನ ಇತರ ಭಾಗಗಳನ್ನು ಕೊಡಗಿನ ಮಟ್ಟಕ್ಕೆ ತರಲು ಹಲವು ವರ್ಷಗಳು ಹಿಡಿಯಲೇಬೇಕು. ಹಾಗಾದರೆ ಕರ್ನಾಡಿನ ಸರಕಾರ ಸಂಯೋಜನ ನಾಡಿಗಳು ಹೇಳುವಂತೆ ಕೊಡಗಿಗೆ ಎಲ್ಲಿಂದ ಹಣ ವದಗಿಸುವುದು? ಕೊಡಗಿನಲ್ಲಿ ಹೇಗೆ ಕೈಗಾರಿಕೋದ್ಯಮಗಳನ್ನು ಕೈಕೊಳ್ಳವುದು?

ಕೆಲವು ದಿನಗಳಿಗೆ ಹಿಂದೆ 'ಬೊಂಬೇ ಕ್ರಾನಿಕಲ್' ಪತ್ರಿಕೆಯ ಸುದ್ದಿಗಾರನೊಬ್ಬನು ಬರೆದಿದ್ದಂತೆ-ಚೀಫ್ ಕಮಿಷನರ ಪ್ರಾಂತಗಳ ಪೈಕಿ ಕೊಡಗೊಂದು ಮಾತ್ರ ಸ್ವತಂತ್ರವಾಗಿ ನಿಲ್ಲಬಲ್ಲುದು. ಡೆಲ್ಲಿಯ ಆರ್ಥಿಕ ಸ್ಥಿತಿ ನೆಟ್ಟಗಿಲ್ಲ. ಅಜಮಿರ್ ಮಿರ್‌ವಾರಿಯೂ ಆರ್ಥಿಕ ದೃಷ್ಟಿಯಿಂದ ಸ್ವಂತ ಕಾಲಿನಲ್ಲಿ ನಿಲ್ಲಲಾರದು. ಕೊಡಗು ಮಾತ್ರ ಚೀಫ್ ಕಮಿಷನರ ವ್ಯಾಂಪಗಳಲ್ಲಿ ತನ್ನ ಆದಾಯ ವೆಚ್ಚವನ್ನು ಸರಿಗಟ್ಟಿಕೊಂಡು ಹೋಗುತ್ತಿರುವದು. ಆದ್ದರಿಂದ ಕೊಡಗು ಮಾತ್ರ ಸ್ವತಂತ್ರ ಆಡಳಿತದಲ್ಲಿರಲಿ. ಉಳಿವುಗುಗಳನ್ನು ದೊಡ್ಡ ವ್ಯಾಂಪಗೊಡನೆ ಸೇರಿಸಿಬಿಡಬೇಕು-ಈಗ ಡೆಲ್ಲಿ, ಅಜಮಿರ್ ಮಿರ್‌ವಾರಿಗಳೇ ಸ್ವತಂತ್ರ ಆಡಳಿತದಲ್ಲಿರುವಾಗ ಕೊಡಗನ್ನು ಬೇರೆ ಭಾಗಕ್ಕೆ ಸೇರಿಸಬೇಕೆಂಬುದು ಅರ್ಥವಿಲ್ಲದ ಮಾತು.

ಕೊಡಗಿನ ಸರಕಾರದ ಆದಾಯವನ್ನು ೫೦ ಲಕ್ಷಕ್ಕೆ ಏರಿಸುವದು ಪ್ರಯಾಸದ ಕೆಲಸವಲ್ಲ. ಯಾವ ಹೊಸ ಕೈಗಾರಿಕೆ, ಹೊಸ ಆದಾಯದ ಮಾರ್ಗಗಳನ್ನು ಕೈಕೊಳ್ಳದೆ ಈ ಆದಾಯ ಬರುವದರಲ್ಲಿ ಸಂಶಯವಿಲ್ಲ. ಇಂದಿನ ಆದಾಯವನ್ನೇ ಲೆಕ್ಕ ಮಾಡಿದರೂ ಕೊಡಗಿನ ಉತ್ಪತ್ತಿ ಸರಾಸರಿ ರೂ ೩೫ ಲಕ್ಷವೆಂದರೂ ಆಡಳಿತ ಖರ್ಚಿಗೆ ೧೫ ಲಕ್ಷವಿಟ್ಟರೂ (ಇಂದಿನದು ೧೧ ಲಕ್ಷ) ಪ್ರತಿ ವರ್ಷ ಹಲವು ಲಕ್ಷ ರೂ ಪಾಯಿಗಳ ಹೊಸ ಕೆಲಸ ಮಾಡಬಹುದು. ವರ್ಷಕ್ಕೊಂದರಂತೆ ಹಾರಂಗಿ ನೀರಾವರಿ ಯೋಜನೆ ಮಾಡಬಹುದು. ಪ್ರತಿ ವರ್ಷ ನಾಲ್ಕು ಲಕ್ಷ್ಮಣತೀರ್ಥ ಆಣೆಕಟ್ಟು ಕಟ್ಟಬಹುದು. ಒಂದೇ ವರ್ಷದಲ್ಲಿ ಬೇತರಿ, ಕೊಟ್ಟಮುಡಿಗಳಲ್ಲಿ ಸೇತುವೆ ಕಟ್ಟಬಹುದು. ಒಂದೇ ವರ್ಷದ ಉಳುವರಿಯಿಂದ ಬೇಕಾವತೆ ಎರಡುಕಾಲೇಜುಶಿಕ್ಷಣವನ್ನು ಕೊಡಿಸಬಹುದು. ಇದಲ್ಲದೆ ಇಂದು ಉಳುವರಿ ಇರುವ ೪ ಕೋಟಿ ರೂಪಾಯಿಯಿಂದ ಇನ್ನೂ ಅನೇಕ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು.

ಇದನ್ನೆಲ್ಲಾ ಕೊಡಗಿನ ಜನರು ಆಲೋಚಿಸಬೇಕು. ನಾನು ಬರೆದ ಟೀಪುನಗಳನ್ನು ಅಕ್ಷರಶಃ ಒಪ್ಪಿಕೊಳ್ಳಬೇಕು ಎನ್ನುವವನು ನಾನಲ್ಲ. ಆದರಲ್ಲಿ ಸತ್ಯತೆ ಇದೆಯೇ ಪರಿಶೀಲಿಸಿರಿ. ಸತ್ಯಾಂಶವಿದ್ದರೆ ಹಾಗೆ ಮಾಡಿರಿ. ಏಕೆಂದರೆ ಕೊಡಗಿನ ಭವಿಷ್ಯವು ತುಂಬಾ ವಿಚಾರಿಸಬೇಕಾದ ಪ್ರಶ್ನೆ. ಹೂರೂ ಬೇಜವಾಬ್ದಾರಿಯಿಂದ ವರ್ತಿಸಬಾರದು. ಕನ್ನಡಿಗನಾಗಿ ಕನ್ನಡ ಅಭಿನೂತನದಲ್ಲಿ ಯಾರಿಗೂ ಹಿಂದಿಲ್ಲದ ವನು ನಾನಾದರೂ ಅನೇಕ ವರ್ಷಗಳಿಂದ ಪ್ರತ್ಯೇಕ ಬಾಳಿ ಬದುಕುತ್ತಿರುವ ಸುಂದರ ಕೊಡಗಿನ ವ್ಯಕ್ತಿತ್ವವನ್ನು, ಅದರ ಸಂಸ್ಕೃತಿ, ಸಂಪ್ರದಾಯಗಳನ್ನು, ವೈಶಿಷ್ಟ್ಯ ವಿಲಕ್ಷಣತೆಗಳನ್ನು ಹಾಳುಗೂಡಿಸಲು ನಾನು ಎಂದೂ ತಯಾರಿಲ್ಲ. ಕೊಡಗಿನ ವಿಶಿಷ್ಟತೆ ಕೊಡಗಿಗಾಗಿ ಬೇಕು. ಕನ್ನಡ ನಾಡಿಗಾಗಿಬೇಕು, ಹಿಂದೂದೇಶಕ್ಕಾಗಿ ಬೇಕು. ಸಿಟ್ಟಿನಲ್ಲಿ ಕುಯ್ದುಕೊಂಡ ಮೂಗು ಹೇಗೆ ಸಮಾಧಾನವಾದ ನಂತರ ಕೂಡಿ ಬರದೋ ಆದೇರೀತಿ ಕೆಲವು ವ್ಯಕ್ತಿಗಳ ಮೇಲಿನ ದ್ವೇಶದಿಂದ, ಇಲ್ಲವೇ ತಮ್ಮ ಸ್ವಂತ ಲಾಭದ ಆಲೆಯಿಂದ ಕೊಡಗು ಜನತೆಯ ಕುತ್ತಿಗೆಗೆ ಕತ್ತಿ ಇಡಬಿರಿ.

'ಸಿರಿಗನ್ನಡಂಗೆಲ್ಗೆ.'

## ಪ್ರಕಟಣೆ.

1. ಈ ವೆಂಪಲು ನಮ್ಮಲ್ಲಿ ವ್ಯಾಪಾರ ಮಾಡುತ್ತಿದ್ದಂತ ವ್ಯಾಪಾರಸ್ಥರಿಗೆ ಈ ಮಧ್ಯೆ ಕಾಫಿ ಹುಡಿ ಸಿಕ್ಕದೆ ಬಹಳ ತೊಂದರೆ ಆಗಿದೆ. ಇದಕ್ಕೆ ನಾವು ನಿಮ್ಮ ಕ್ಷಮೆ ಕೇಳಿಕೊಳ್ಳುತ್ತೀವೆ ಮತ್ತು ಸ್ಥಳಿನಿಂದ ಕಾಫಿ ಬಾರದೆ ಇದ್ದದ್ದೇ ಇದಕ್ಕೆ ಕಾರಣವೆಂದು ತಿಳಿಸುತ್ತೀವೆ

ಇನ್ನು ಮುಂದಕ್ಕೆ ಕಾಫಿ ಹುಡಿಬೇಕಾದವರು ದಯವಿಟ್ಟು ಬಾಲಿ ಟಿನ್ನು ಮತ್ತು ರಾತಲಿಗೆ ರೂ. 1-7-0 ಪ್ರಕಾರ ಹಣ ಕಳುಹಿಸಿ ಕೂಟ್ಟಲ್ಲು ಅವರವರ ಸ್ಥಳಕ್ಕೆ ಬಸ್ಸಿನಲ್ಲಿ ಮುಕ್ತತ್ವಾಗಿ ಬಟವಾಡೆ ಮಾಡುತ್ತೀವೆ.

2. ಮೂಳೆ ಮಣ ಒಂದರ ರೂ. 0-12-0 ಯಂತೆ ಫೈಜಂಪೇಟೆಯಲ್ಲಿ ಡೆಲಿವರಿ ತೆಗೆದುಕೊಳ್ಳುತ್ತೀವೆ.

3. ಜಮ್ಮ ಮತ್ತು ಸಾಗಿನ ಜಾಗಗಳಿಂದ ಸೀಗೆ ಕಾಯಿ ಜಾಸುಯಿಸಿ ಸಾರ ತಕ್ಕವರು ಪಡನೆ ಅವರವರಿಗೆ ಸನ್ಮಂಧ ಪಟ್ಟ ನಾಡು ಕಚೇರಿಗಳಿಗೆ ಬರೆದು ವಾಸು ಜೆಗೆದುಕೊಳ್ಳಬೇಕಾಗಿದೆ ಸೀಗೆ ಕಾಯಿ ವ್ಯಾಪಾರ ಮಾಡತಕ್ಕಂಥವರು ನಮ್ಮ ವಿಲ್ಲಿಗೆ ಸರಬರಾಯಿ ಮಾಡಲು ಒಪ್ಪುವುದಾದರೆ ತಕ್ಕ ಎಗ್ರಿಮೆಂಟಿನ ಮೇಲೆ ಹಣ ಆಡ್ವಾನ್ಸು ಕೊಡಲಾಗುವುದು

ಮೇನೇಜಿಂಗ್ ಪ್ಲೈರೆಕ್ಟರ್,
ದಿ. ಕೂರ್ಗ್ ಜನರಲ್ ಇಂಡಸ್ಟ್ರಿಯಸ್
4-1 ಲಿಮಿಟೆಡ್, ಮರ್ಕಾರ.

## WANTED.

A Manager with the qualification of Accountancy, Book-keeping and office routine and a clerk with experience of correspondence and maintaining stock register. The initial pay will be fixed on merit. The applications should reach this office on or before 31st. January 1948.

**N. A. Uthappa,**
*Managing Director,*
*For Coorg Cloth Merchants Co-Ltd.*

*Mercara.*
*12-1 1948.*

## ಐದನೇ ಕೊಡಗು ಪ್ರಾಂತೀಕ ದನಗಳ ಪ್ರದರ್ಶನ.

ಈ ಪ್ರದರ್ಶನವು ಮಡಿಕೇರಿಯಲ್ಲಿ ತಾರೀಕು ೧೩, ೧೪, ೧೫ ಈ ಮೂರು ದಿನಗಳು ನಡೆಯಿತು. ಕೇಂದ್ರ ಸರಕಾರದ ವ್ಯವಸಾಯ ಪರಿಶೋಧನಾ ಸಮಿತಿಯ ಉಪಾಧ್ಯಕ್ಷರಾದ ಸರ್ ದತಾರ್ ಸಿಂಗ್‌ರವರೂ, ಕೇಂದ್ರ ಸರಕಾರದ "ಫೈರಿ" (ಹಾಲು) ಸರಬರಾಯಿ ಸಲಹೆಗಾರರಾದ ಶ್ರೀ ಕೊತ್‌ವಾಲರವರೂ ಬಂದಿದ್ದರು. ದನಗಳ ಪರೀಕ್ಷೆಯಾದ ನಂತರ ತಾರೀಕು ೧೫ರಲ್ಲಿ ಕೋಹಿನೂರು ಟಾಕೀಸಿನಲ್ಲಿ ಸಭೆ ನಡೆಯಿತು. ಕೊಡಗಿನ ಚೀಫ್ ಕಮಿಷನರು ಕೇಂದ್ರ ಸರಕಾರದಿಂದ ಬಂದ ಮಾನ್ಯ ಅತಿಥಿಗಳನ್ನು ಸ್ವಾಗತಿಸಿ ಅವರು ಕೊಡುತ್ತಿರುವ ಸಹಾಯ ಸಲಹೆಗಳನ್ನು ವಿವರಿಸಿದರು. ಪ್ರದರ್ಶನ ಸಮಿತಿಯ ಪರ ರಾ. ಬ. ಕೆ. ಜಿ. ಬೆಳ್ಯಪ್ಪನವರು ಒಂದು ವರದಿಯನ್ನು ಓದಿದರು.

**ಸರ್ ದತಾರ್ ಸಿಂಗರ ಭಾಷಣ.**

ನಂತರ ಸರ್ ದತಾರ್ ಸಿಂಗರು ಈ ರೀತಿ ಭಾಷಣ ಮಾಡಿದರು. "ನಾನು ಮತ್ತು ನನ್ನ ಸಹೋದ್ಯೋಗಿ ಶ್ರೀ ಕೊತ್‌ವಾಲರು ಕೊಡಗಿಗೆ ಹೊಸಬರಲ್ಲ. ಅವರು ಕಳೆದ ೨೦ ವರ್ಷಗಳಿಂದ ಕೊಡಗಿನೊಡನೆ ಸಂಬಂಧವಿಟ್ಟು ಕೊಂಡಿರುವರು. ಕೊಡಗಿನಲ್ಲಿ ಜಾನುವಾರುಗಳನ್ನು ಸಾಕುವ ಬಗ್ಗೆ ಹೆಚ್ಚು ಆಸಕ್ತಿ ಕಂಡು ಬರುತ್ತಿದೆ. ನಿಮ್ಮ ಜಾನುವಾರು ಪ್ರದರ್ಶನಕ್ಕೆ ರೈತನ ಕುಯಿಲು ಕೆಲಸದ ಈ ಸಮಯವನ್ನು ಆರಿಸಿದ್ದು ಸರಿಯಲ್ಲ. ಕೇಂದ್ರ ಜಾನುವಾರು ಜಾತ್ರೆಗೆ ಮಡಿಕೇರಿಯು ತಕ್ಕ ಸ್ಥಳವಲ್ಲ. ಈ ಪ್ರದರ್ಶನದಲ್ಲಿ ಭಾಗವಹಿಸಲು ಹೆಳ್ಳಯು ರೈತನಿಗೆ ಅನುವಾಗುವಂತೆ ಯೋಗ್ಯ ಸ್ಥಳದಲ್ಲಿ ಯೋಗ್ಯ ಸಮಯಕ್ಕೆ ಮುಂದಿನ ವರ್ಷದಿಂದ ಈ ಪ್ರದರ್ಶನವನ್ನು ಏರ್ಪಡಿಸುವಿರಾಗಿ ನಂಬುತ್ತೇನೆ. ಮೈಸೂರಿನಿಂದ ಕೊಡಗಿಗೆ ಜಾನುವಾರುಗಳೂ, ಗೊಬ್ಬರವೂ ಬರಲು ನಿರ್ಬಂಧವಿದೆಯೆಂದು ತಿಳಿದೆನು. ನಾನು ಮೈಸೂರು ಮಂತ್ರಿಗಳನ್ನು ಕಾಣಲಿರುವದರಿಂದ ಈ ವಿಚಾರ ಅವರ ಮುಂದಿಟ್ಟು ಈ ನಿರ್ಬಂಧವನ್ನು ತೆಗೆದುಹಾಕುವ ಪ್ರಯತ್ನ ಮಾಡುವೆನು. ಕೊಡಗಿನಲ್ಲಿ ಜಾನುವಾರುಗಳಿಗೆ ಮೇಯಲು ಸೌಕರ್ಯವಿಲ್ಲ. ಫಾರೆಸ್ಟುಗಳಲ್ಲಿ ಕೆಲವು ಸಮಯದ ವರೆಗೆ ಮಾತ್ರ ಮೇಯಿಸಬಹುದು. ಬೇಸಿಗೆಯಲ್ಲಿ ಬೆಂಕಿಯ ದೆಸೆಯಿಂದ ಫಾರೆಸ್ಟ್ ಇಲಾಖೆಯವರು ದನಗಳನ್ನು ಮೇಯಿಸಲು ಬಿಡಲಾರರು. ಆದ್ದರಿಂದ ಅಲ್ಲಲ್ಲಿ ದನ ಮೇಯಿಸುವ ಕೇಂದ್ರಗಳನ್ನು (Concentration Camps) ಏರ್ಪಡಿಸಿ ಅಲ್ಲಿ ಸದಾ ದನ ಮೇಯಿಸುವ ವ್ಯವಸ್ಥೆಯು ಮಾಡುವ ಸೂಚನೆಯನ್ನೀಯುವೆನು. ಕೊಡಗಿನಲ್ಲಿ ಹಾಲು ಸರಬರಾಯಿಯು "ಫೈರಿಫಾರಂ" ಗಳನ್ನು ಹೆಚ್ಚಿಸಬೇಕು. ಸರಕಾರವು ೧೦೦, ೫೦೦ ಎಕ್ರೆ ಜಾಗಕೊಟ್ಟು ಇಂಥಾ ಫಾರೀಂ ನಿಲಯಗಳು ಹೆಚ್ಚಾಗುವಂತೆ ಪ್ರೋತ್ಸಾಹಿಸಬೇಕು. ದನಗಳ ಸೇವನಿಗೆ ಪ್ರತಿಯೊಬ್ಬನು ಹುಲ್ಲು ಬೆಳೆಸಬೇಕು. 'ಗಿನಿ' ಹುಲ್ಲನ್ನು ಬೆಳೆಸಿದ ಪ್ರತಿ ಏಕರೆಗೆ ರೂಪಾಯಿ ೨೦ರಂತೆ ಬಹುಮಾನ ಕೊಡುವ ಏರ್ಪಾಡನ್ನು ನಿಮ್ಮ ಚೀಫ್ ಕಮಿಷನರು ಮಾಡಿರುವರೆಂದು ಕೇಳಿ ಸಂತುಷ್ಟನಾದೆನು.

ಕೊಡಗಿನಲ್ಲಿ ಆರು ಜಾನುವಾರುಗಳ ಆಸ್ಪತ್ರೆ ಇದ್ದರೂ ಅವುಗಳಿಗೆ ಮೂರೇ ತರಬೇತಿ ಹೊಂದಿದ ಡಾಕ್ಟರುಗಳಿರುವರು. "ವೆಟೆರ್‌ನರಿ ಸ್ಟಾಕ್‌ಮೆನ್"ಗಳ ಅಭಾವವೂ ಇದೆ. ನಿರಾಶ್ರಿತರಾಗಿರುವ ಉತ್ತರ ದೇಶದ ಜನರಲ್ಲಿ, ಆರ್ಹತೆ ಇರುವ ಕೆಲವರನ್ನು ನಿಮ್ಮದೇ ಜನರನ್ನು ತರಬೇತು ಮಾಡಿಕೊಳ್ಳುವವರಿಗೆ ಕಳುಹಿಸಿ ಕೊಡುವ ಪ್ರಯತ್ನ ಮಾಡುವೆನು. ಕೇಂದ್ರ ಸರಕಾರದಿಂದ ಈಗಿನಿಮ್ಮ ಜಾನುವಾರು ಪ್ರದರ್ಶನಗಳಿಗೆ ಕೊಡಲ್ಪಡುವಂಥಾ ಈಗಿನ ಧನ ಸಹಾಯ ಮತ್ತು ಸಾಧ್ಯವಾದ ಇನ್ನಿತರ ಸಹಾಯಗಳನ್ನು ಒದಗಿಸಿ ಕೊಡುವಂತೆ ಭರವಸೆ ಹೇಳುತ್ತೇನೆ.

ಜನರ ಆಭಿವೃದ್ಧಿಗೆ ಮಿಶ್ರ ಉದ್ಯಮಗಳನ್ನು ಕೈಗೊಳ್ಳಬೇಕು. ವ್ಯವಸಾಯ ಒಂದನ್ನೆನುಸರಿಸಿ ವರ್ಷಕ್ಕೆ ಆರುಸಿಂಗಳು ಸುಮ್ಮನಿರುವುದು ಉಚಿತವಲ್ಲ. ಆದ್ದರಿಂದ ದನಗಳನ್ನು, ಹಂದಿ, ಕೋಳಿಗಳನ್ನು ಸಾಕುವ ಉದ್ಯಮ ಕೈಗೊಳ್ಳಬೇಕು. ಚಿಕ್ಕ ಕೈಗಾರಿಕೆಗಳನ್ನೂ ನಡಿಬೇಕು. ಮನೆಯ ಪ್ರತಿಯೊಬ್ಬನೂ ಅವನವನಿಗೆ ಸಾಧ್ಯವಾದ ಉದ್ಯಮಗಳನ್ನು ಕೈಕೊಂಡು ಮಾಡಿದರೆ ಕುಟುಂಬದ ಆದಾಯವು ಹೆಚ್ಚಿ ಜೀವನವು ಸುಖಮಯವಾಗುವದು.

## ಚೈಯಂಡಾಣೆ ಸಾರ್ವಜನಿಕ ವಿೂಟಿಂಗು.

ತಾರೀಕು 23-12-47 ರಲ್ಲು ಶ್ರೀ ಎಸ್. ಎಸ್. ನಾರಾಯಣ ಮೂರ್ತಿಯವರು ಪತ್ರ ಮೂಲಕ ವಿೂಟಿಂಗಿಗೆ ಕರಸಿದಲ್ಲು ಬಹಳ ಕಮ್ಮಿ ಜನರು ಸೇರಿದ್ದರಿಂದಲೂ, ವಿೂಟಿಂಗು ಉದ್ದಿಶ್ಯ ತಿಳಿಯದೆಯೂರು ತಯಾರಿರದ್ದರಿಂದಲೂ, ಮೆ. ಪಟ್ಟಚೆರವಂಡ ಬೆಳ್ಯಪ್ಪನವರ ಸೂಚನೆ ಮೇರೆ ತಾರೀಕು 28-12-47ರಲ್ಲು ಸಭೆ ಸೇರುವಂತೆಯೂ ವಿೂಟಿಂಗನ್ನು ಡಿಬೇಟಿಂಗ್ ಸೊಸೈಟಿ ವಿೂಟಿಂಗಿನಂತೆ ನಡಿಸುವಂತೆಯೂ ತೀರ್ಮಾನಿಸಲಾಯ್ತು. ಅಧ್ಯಕ್ಷತೆಗೆ ಶ್ರೀ ಬಿದ್ದಂಡ ಟಿ. ಮಂದಣ್ಣನವರನ್ನೂ, ಕಾಲೇಜನ್ನು ಸ್ಯೆಂಟ್ ಫಿಲೋಮಿನ ಸಂಸ್ಥೆಯವರು ನಡಿಸುವುದು ಒಳ್ಳೆಯದೆಂದು ವಿರೋಧವಾಗಿ ಶ್ರೀ ಪಟ್ಟಚೆರವಂಡ ಐ ಬೆಳ್ಯಪ್ಪನವರು ಇವರಿಗೆ ಒತ್ತಾಸೆಯಾಗಿ ಶ್ರೀ ಪೊನ್ನಚಂದ ಉತ್ತಪ್ಪನವರನ್ನೂ ಸೇರಿಸಲಾಗಿತ್ತು.

ತಾರೀಕು 28-12-47ರಲ್ಲು ಸ್ಕೂಲಾ ವೈದಾನದಬಳಿ ಸುಮಾರು 2 ಗಂಟೆಗೆ ಸಭೆ ಸೇರಿತು. ಶ್ರೀ ಎಸ್. ಎಸ್. ನಾರಾಯಣ ಮೂರ್ತಿಯವರು 'ಸೆಂಟ್ ಫಿಲೋಮಿನ' ಸಂಸ್ಥೆಯವರಿಗೆ ಕಾಲೇಜನ್ನು ತೆರೆಯಲು ಬಿಡುವದು ಉತ್ತಮವೆಂದು ಕೆಲವು ಕಾರಣಗಳನ್ನು ಸಭೆಯ ಮುಂದಿಟ್ಟರು. ಇವರಿಗೆ ಒತ್ತಾಸೆ ಮಾತಾಡಬೇಕಾದವರು ವಿೂಟಿಂಗಿಗೆ ಬರಲಿಲ್ಲ. ರೋಧಕ್ಕೆ ನಿಂತ ಶ್ರೀ ಪಟ್ಟಚೆರವಂಡ ಐ. ಬೆಳ್ಯಪ್ಪನವರು ಶ್ರೀ ಮೂರ್ತಿಯವರ ಪ್ರತಿಯೊಂದು ಕಾರಣಗಳನ್ನು ಖಂಡಿಸಿ ವಿರೋಧಿಸಿದರು. ಶ್ರೀ ಬೆಳ್ಯಪ್ಪನವರ ಒತ್ತಾಸೆಯವರಾದ ಶ್ರೀ ಪೊನ್ನಚಂಡ ಉತ್ತಪ್ಪನವರು ಲಬಿಯಲ್ಲಿ ಪಕ್ಷವಾಗಿಯೂ ಕಡೆಕೇಸಲು ಶ್ರೀ ಎಸ್. ಎಸ್. ನಾರಾಯಣ ಮೂರ್ತಿಯವರ ಹಿಂಬಾಲಕರಾಗಿಯು ಮಾತಾಡಿದರು ಶ್ರೀ ತೋಟಂಬೈಲ ಕಳಪ್ಪನವರು ಕ್ರಿಶ್ಚನ್ ಸಂಸ್ಥೆಯವರಿಗೆ ಬಿಡುವುದು ಉತ್ತಮವೆಂದು ಮಾತಾಡಿದರು. ಶ್ರೀಗಳಾದ ಬಾಚೆಟ್ಟಿರ ಚಿಣ್ಣಪ್ಪನವರು ಮತ್ತು ಪಟ್ಟಚೆರವಂಡ ಮೊಣ್ಣಪ್ಪನವರು, ಬೊವ್ವೇರಿಯಂಡ ಚಿಣ್ಣಪ್ಪನವರ ಮತ್ತು ಮುಂಡ್ಯೋಳಂಡ ಕುಟ್ಟಪ್ಪನವರು ಠರಾವಿಗೆ ವಿರೋಧಿಸಿ ಮಾತಾಡಿದರು. ಓಟಿಗೆ ಹಾಕಲಾಗಿ 9 ಜನರು ಶ್ರೀ ಎಸ್. ಎಸ್ ನಾರಾಯಣಮೂರ್ತಿಯವರ ಪಕ್ಷವಾಗಿಯೂ, 24 ಜನರು ಶ್ರೀ ಪಟ್ಟಚೆರವಂಡ ಐ. ಬೆಳ್ಯಪ್ಪನವರ ಪಕ್ಷವಾಗಿಯೂ ಓಟು ನೂಡಿದ್ದರಿಂದ ಠರಾವು ಪಾಸಾಗಿಲ್ಲ.

ಚೈಯ್ಯಂಡಾಣೆ, 28-12-47. ಬಿ. ಟಿ. ಮಂದಣ್ಣ, ಅಧ್ಯಕ್ಷ.


ಏಮೆ ನೂಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕೆಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಪೊಂಬಾಯಿ.

**ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ರೇವನ್ಯೂ ಖಾತೆ 3,30,268-1-8, ವಸೂಲಾದ ಪ್ರೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ರೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

**ಎಂಪೈರ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಪ್ನ ಸಂಗತಿಗಳು. | ಒಟ್ಟು ಆದಾಯ | .... | 1,07,09,000 ರೂಪಾಯಿ |
| | ಚಾಲ್ತಿಯಿರುವ ವಿಮೆ | .... | 17,74,52,000 ,, |
| | ಆಸ್ತಿ | .... | 6,67,60,000 ,, |
| | ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು | .... | 8,83,62,000 ,, |

ಅಂಗ ಕಛೇರಿ: ತಿಪ್ಪೈಶ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಆರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಕೋಂಬೇ.


Edited, Printed and Published by P. I. Bellayya at 'Kodagu' Press, Mercara, for 'Kodagu' Ltd.

# ಕೊಡಗಿನ ಮುಂದಾಳುಗಳ ಅವಗಾಹನೆಗೆ-

— ಲೇಃ—'ಓಂ' ಕೂಡಗು —

ಸ್ವಾತಂತ್ರ್ಯಾಗಾಂಧೀಜಿಯವರು ಮುಂದಾಳುಗಳನ್ನು ಮಾತ್ರ ಪರಿಗಣಿಸಿರಲಿಲ್ಲ. ಕಾಂಗ್ರೆಸ್ಸು ಅಧಿಕಾರಕ್ಕೆ ಬರುವುದಕ್ಕೆ ಮೊದಲೇ ತ್ಯಾಗ ಮಾಡಿದುದರಿಂದ ನೆಗ್ಗೆ ಸ್ವಾತಂತ್ರ್ಯ ಬಂದಿದೆ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಲ್ಲಾ ಸಮುದಾಯದವರೂ ಶಕ್ತ್ಯಾನುಸಾರ ದುಡಿದಿದ್ದಾರೆ ಮುಂದಾಳುಗಳೆನ್ನಿಸಿಕೊಳ್ಳುವವರು ಹೆಸರುಮಾತ್ರ, ನಿಃಸ್ವಾರ್ಥತೆ ಸ್ವಾತಂತ್ರ್ಯ ಸೌಧ ಬಂಧನ ಶಾಯಿಗಳಿಗೆ ಪರ್ಯಾಪ್ತ ಪೂರ್ವಗಳಲ್ಲಿ ಬಂದಿಸಿದ್ದರೆ ಹಿಂಬಾಲಕರೆನ್ನುವ ಸಾಮಾನ್ಯ ಜನತೆಯು ತಮ್ಮ ಆಳಿಲು ಸೇವೆಯನ್ನು ಸಲ್ಲಿಸಿದ್ದಾರೆ. ಈ ಆಳಿಲು ಸೇವೆಯು ಎಂದೂ ಮುಂದಾಳುಗಳ ಎಷ್ಟು ಸೇವೆಗೆ ಕಡಿಮೆಯಿಲ್ಲ ಸಿರಿವಂತನು ಸಾವಿರ ರೂಪಾಯಿಗಳ ದಾನ ಮಾಡಬಹುದು. ಆದರೆ ಬಡವನನ್ನ ಪೈಕ್ಕೆಯಿಂ ದೈರ್ಘ್ಯಕ್ಕೂ ಬಿಡಿಕಾಸು ಅದಕ್ಕಿಂದು ಪವಿತ್ರವೆನಿಸಬಹುದು.. ಆದೇ ರೀತಿ ದೇಶಕ್ಕಾಗಿ ಎಲ್ಲರೂ ತ್ಯಾಗಮಾಡಿದ್ದಾರೆ. ಕಾಂಗ್ರೆಸ್ಸಿಗರೆನ್ನಿ ವವರು ಮನೆಮಠ ಬಿಟ್ಟು ಜೈಲಿಗೆ ಹೋಗಿದ್ದರೆ ರಾಜಕೀಯ. ಸನ್ಯಾಸಿಗಳಂತೆ ಹೋರಾಟಕ್ಕೆ ಧನಸಹಾಯ ಮಾಡಿದವರು, ಜೈಲಿಗೆ ಹೋಗದ ಜನ ಜಾಗೃತಿ ಮಾಡಿದವರೂ ಇದ್ದಾರೆ. ಇವರೆಲ್ಲರ ತ್ಯಾಗ, ದುಡಿಮೆಗಳ ಸಮ್ಮಿಲನ ಫಲವಿಂದು ಸ್ವಾತಂತ್ರ್ಯಕಾಂತ ಬಂಗಿದು. ಈ ಒಂದು ಸ್ವಾತಂತ್ರ್ಯವು ಪ್ರತಿಯೊಂದು ಮನಸಿಗೂ ಮುಟ್ಟಬೇಕು ಪ್ರಲಯೊಬ್ಬ ವ್ಯಕ್ತಿಯೂ ಇದರ ಲಾಭ ಪಡೆಯಬೇಕು. ಈ ಸ್ವಾತಂತ್ರ್ಯವನ್ನು ಸ್ವಾಗತಿಸಿ, ಅದರ ಲಾಭ ಪಡೆಯುವಾಗ ಯಾರೂ ನಾನು ಹೆಚ್ಚು ತ್ಯಾಗ ಮಾಡಿದ್ದೇನೆ. ನಾನು ನಿರಶನ ವ್ರತ ಮಾಡಿದ್ದೇನೆ ನಾನು ಸಾರ್ವಸ್ವ ಕಳೆದು ಕೊಂಡಿದ್ದೇನೆ. ಆದ್ದರಿಂದ ನನಗೆ ಅಧಿಕಾರಬೇಕು. ಹೆಚ್ಚಿನ ಸಂಬಳತ್ತು ಬೇಕೆನ್ನದಿರಲಿ!

ಕಳೆದ ಆಗಷ್ಟ್ ೧೫ರಲ್ಲಿ ಡೆಲ್ಲಿಯಲ್ಲಿಯು ದಯಾವಾದ ಸ್ವತಂತ್ರ್ಯಸೂರ್ಯನ ವಿಚಾರವನ್ನು ಕೇಳಿ ಕೂಡಗಿನವರಾದ ನಾವು ಸಂತೃಪ್ತರಾಗಿರುವವೇ ವಿನಹ ಆ ಸೂರ್ಯನ ಪ್ರಭೆಯು ಕೂಡಗಿಗೆ ಇನ್ನೂ ಬೀಳಲಿಲ್ಲ. ಕಾರ್ಗತ್ತಲು ಕವಿದ ನಮ್ಮ ಮಾರ್ಗದರ್ಶಿ ದೀಪಕಾ ತೋರಿ ಬರುತ್ತಿಲ್ಲ. ಇಲ್ಲಿಯ ಪರಿಸ್ಥಿತಿಯು ಹಿಂದಿನಂತೆಯೇ ಇದೆ. ಆಡಳಿತವೂ ಈ ಹಿಂದಿನಂತೆಯೇ ನಡೆಯುತ್ತಿದೆ ಅಧಿಕಾರ ವೃಂದದ ಮನೋಭಾವದಲ್ಲೂ ಹೇಳಿಕೊಳ್ಳಬಹುದಾದ ಬದಲಾವಣೆಯಾಗಿಲ್ಲ. ಹೀಗೆ ವಿಧಾಯಕವಾದ ಕ್ಷೇತ್ರಯಾವುದೂ ಆಗದಿದ್ದರೂ ಜನಜೀವನದಲ್ಲಿ ಒಂದು ರೀತಿಯ ಜಾಗೃತಿ ಬಂದಿದೆ. ಸ್ವಾತಂತ್ರ್ಯದ ಸುಮಹೂರ್ತದಲ್ಲಿ ಅಧಿಕಾರವು ಜನತೆಯ ಕೈಗೆ ಬರುವಂಗ ಈ ಅಧಿಕಾರ ಸೂತ್ರವನ್ನು ಹಿಡಿಯಲು ಕೈಗಳ ಪೈಪೋಟಿ ನಡೆಯುತ್ತಿದೆ. ಈ ಪೈಪೋಟಿಯೇ ಇಂದು ಕೊಡಗಿನ ರಾಜಕೀಯ ರಂಗದ ಕೋಲಾಹಲಕ್ಕೆ ಕಾರಣವಾಗಿದೆ. ತಮ್ಮ ತಮ್ಮ ಕೈಗಳನ್ನು ಬಲಮಾಡಿಕೊಳ್ಳಲು ಪ್ರತಿಯೊಬ್ಬರೂ ಪ್ರಯತ್ನಿಸುತ್ತಾರೆ. ಜನತೆ ಕಕ್ಕಾಬಿಕ್ಕಿಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಮುಂದಾಳುಗಳಲ್ಲಿ ಕೆಲವರು ಸ್ವಾತಂತ್ರ್ಯ ಸಂಸ್ಥೆಯ ಸದಸ್ಯತ್ವವನ್ನು ಪಡೆದಿದ್ದಾರೆ. ಇನ್ನು ಕೆಲವರು ಸ್ವಾತಂತ್ರ್ಯ ಸಂಸ್ಥೆಯ ಸದಸ್ಯತ್ವವನ್ನು ಪಡೆಯಲಿಲ್ಲ

# ಕೊ ಡ ಗು

ತಾ. ೩೦-೧-೧೯೪೮ನೇ ಶುಕ್ರವಾರ

## ಬಟ್ಟೆ ನಿಯಂತ್ರಣ.

ಧೀರ್ಘ ವಿಚಾರ ವಿನಿಮಯದ ನಂ ರ ಬಟ್ಟೆಯ ನಿಯಂತ್ರಣವನ್ನು ಹಿಂದೂ ಸ್ಥಾನ ಸರಕಾರವು ರದ್ದು ಮಾಡಿದೆ. ಯು ದ್ಧ ಕಾಲದಲ್ಲಿ ಹೇರಲ್ಪಟ್ಟಿ ಎಲ್ಲಾ ನಿಯಂ ತ್ರಣಗಳಿಂದಲೂ ಜನತೆ ತೊಂದರೆಪಡಬೇ ಕಾಯಿತು. ಯುದ್ಧದ ಸಂದಿಗ್ಧದ ಸಮಯದಲ್ಲಿ ನಿಯಂತ್ರಣವು ಅವಶ್ಯವಾದರೂ ನಿಯಂತ್ರಣಾಧಿಕಾರವಿದ್ದವರಲ್ಲಿ ವ್ಯಾಪಾ ಣಿಕತೆಯು ಅಭಾವವಿದ್ದುದರಿಂದ ನಿಯಂ ತ್ರಣವು ಬಡ ಜನರ ಭಾಗಕ್ಕೆ ಕಷ್ಟಕರ ವಾ ಗಿತ್ತು. ಹಿಂದೂಸ್ಥಾನದಲ್ಲಿ ಬ ಟ್ಟೆಯ ಕೊರತೆ ಹೆಚ್ಚಾಗಿ ಕಾರಣ ಇಂಡಿ ಯಾ ಸರಕಾರವು ೧೯೫೩ ರಲ್ಲೇ ಬಟ್ಟೆ ನಿ ಯಂತ್ರಣವನ್ನು ಜಾರಿಗೆ ತಂದಿತು. ಕೊ ಡಗಿನಲ್ಲಿ ಅದು ಖಡ್ಡಾಯವಾಗಿ ಜಾರಿಗೆ ನಂತರ ಬಂದಿತು. ಬಟ್ಟೆಯ ಪಟ್ಟಿಗೆ ಕೊಡಗಿಗೆ ಸಾಕಷ್ಟು 'ಕೋಟಾ'ವು ಕೇಂ ದ್ರದಿಂದ ನಿಶ್ಚಿತವಾಗಿದ್ದರೂ ಇತರ ಪ್ರಾಂತಗಳಿಗಿಂತಾ ಕೊಡಗಿಗೆ ಹೆಚ್ಚಿನ ಸ ವಲತ್ತು ದೊರಕಿತ್ತೆಂದು ಹೇಳಬಹುದು. ಆದರೆ ನಿಶ್ಚಿತ 'ಕೋಟಾ'ವನ್ನು ಸರಕಾರದ ಲ್ಲಿ ತಂದರೆ, ಪಂಚಾಯ್ತನ್ನು ಸರಿಯಾಗಿ ವಿತ ರಣೆ ಮಾಡದೆ ಬಟ್ಟೆಗೆ ತೊಂದರೆ ಪಡಬೇ ಕಾಯಿತು. ವ್ಯಾಪಾರಿಗಳೆಲ್ಲರೂ ಈ ವಿತರಣೆಯಲ್ಲಿ ವ್ಯಾಪಾರಿಕ ರೀತಿಯಿಂದ ವರ್ತಿಸಿರುವರೆಂದು ಹೇಳಲು ಸಾಧ್ಯವಿಲ್ಲ. ಅಭಾವ ಆದೇಶ ಕೆಲವು ವ್ಯಾಪಾರಿಗಳ ಕೃಪಾಂಕ್ಷೆ, ಅವ್ಯಾಪಾರಿಕ ವರ್ತನೆಗಳಿಂದ ಜನತೆಗೆ ತೊಂದರೆಯಾಯಿತು. ಹೊರ ಗಿನ ಪ್ರಾಂತಗಳಲ್ಲಿ ಬಡ ಜನರು ಮೈಮು ಚ್ಚಲು ಬಟ್ಟೆಯಿಲ್ಲದೆ ಆತ್ಮಹತ್ಯಸೂಡಿ ಕೊಂಡ, ವೇಟೆಗೆ ಹೋಗಲಾರದೆ ಉಪ ವಾಸ ಬಿದ್ದ ನಿದರ್ಶನಗಳಿದ್ದರೆ ಕೊಡಗಿನಲ್ಲಿ ವರ್ಷಗಟ್ಟಲೆ ಸೂ ಸ ಬಟ್ಟೆ ಕಾಣದ ಜ ನರಿದ್ದಾರೆ. 'ಸ್ಪ್ಯಾಂಡರ್ಡ್' ಬ ಟ್ಟೆಯ ನೃವಸ್ಥೆಯಿಂದಾಗಿ ಬಟ್ಟೆಯು ತೊಂ ದರೆ ಸ್ವಲ್ಪ ಕಡಿಮೆಯಿತ್ತು. ಆದರ ನಂ ತರ ಬಡ ಜನರು ಬಹು ಕಷ್ಟಪಟ್ಟರು. ಈಗಲೂ ಕಷ್ಟ ನಿವಾರಣೆ ಆಗಿಲ್ಲ. 'ಕೋ ಟಾ' ಬಟ್ಟೆಯ ವಂಯಿ ನೋಡುವ ಗ್ರಾಸು ಸ್ಥರು ಹುಡುಕಲು ಇದ್ದಾರೆ. ಇಂಥಾ ಹದಗೆಟ್ಟ ನಿಯಂತ್ರಣ ಪದ್ಧತಿಯನ್ನು ತೆ ಗೆದು ಹಾಕಿದುದು ಉತ್ತಮವಾಯಿತು.

ನಿಯಂತ್ರಣವನ್ನು ತೆಗೆದು ಹಾಕಿ ದೊಡನೆಯೇ ಈ ಸರಿಗೆ ನಡೆದುಬರುತ್ತಿ ದ್ದ ಅಲ್ಪ ಸ್ವಲ್ಪ ಸರಬರಾಜೂ ಬಂಧ್ಯಾಗಿ ಜನತೆಗೆ ವಿಪರೀತ ತೊಂದರೆಯೊಗುವ ಸಂ ಭವವಿ'. ವ್ಯಾಪಾರಿಗಳು ಹದ್ದು ಮೀರಿ ಕೆಲಸ ಏ.ಪಡಿಸುವ ಸಂಭವವೂ ಇದೆ. ಇದ ನ್ನು ಎಚ್ಚರಿಕೆಯಿಂದ ಪಡೆಗಟ್ಟಿದ್ದರೆ ಜ ನತೆಗೆ ವಿಪರೀತ ತೊಂದರೆ ಆದೀತು. ಹಿಂ ದೂಡೀಶದ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಬಟ್ಟೆಯ ಉತ್ಪಾದನೆ ಈ ವ ರ್ಷ ಹೆಚ್ಚಾಬೀತೆಂದು ಹೇಳುವ ಧೈ ರ್ಯವಿಲ್ಲ. ಗಿರಣಿಗಳಲ್ಲಿ ಆಗಾಗ ಮು ಷ್ಕರಗಳು ನಡೆಯುತ್ತಿವೆ. ಇಂಥಾ ಮು ಷ್ಕರಗಳು ನಡೆಯದಂತೆ ಸರಕಾರಗಳು ಎ ಚ್ಚರಿಕೆ ವಹಿಸಬೇಕು. ಈ ವರೆಗೆ ವ್ಯಾ ಪಾರಕ್ಕರು ನಿಯಂತ್ರಣವಿದೆ; ಆದ್ದರಿಂದ ಬಟ್ಟೆ ಒದಗಿಸುವದು ಅಸಾಧ್ಯವೆಂದು ಹೇ ಳುತ್ತಿದ್ದರು. ಈಗಲೂ ಅವರಿಗೆ ಖಾಸಗಿ ಯಾಗಿ ಸಾಕಷ್ಟು ಬಟ್ಟೆ ತರುವ ಅವ್ಕಾಶವಿ ಲ್ಲದಿದ್ದರೂ ದೊರೆಯುವ ಬಟ್ಟೆಯನ್ನು ಹೆ ಚ್ಚಿನ ಲಾಭದ ಆಶೆ ಇಡದೆ ಜನಸಾಮಾ ನ್ಯರ ಮಾನಮುಚ್ಚುವದಕ್ಕಾಗಿ ಯೋಗ್ಯ ರೀತಿ ವಿತರಣೆ ಮಾಡಬೇಕು. ಸರಕಾರ ವೂ ನಿಯಂತ್ರಣ ಹೋಯಿತೆಂದು ಈ ಕ ಡೆಗೆ ನೃಷ್ಟಿಯಿಡದೆ ವರ್ತಿಸಿದರೆ ಅನಾಹು ತವಾದೀತು. ಅದರೂ ಬಟ್ಟೆಯ ವಿತರ ಣೆಯ ಬಗ್ಗೆ ಕೆಲ ಸಮಯದ ವರೆಗೆ ನಿಗ ವಿಡಬೇಕು.

## ವರ್ತಮಾನ.

ಕೊಡಗು ಟಿಂಬರ್ ಫೈಕ್ಟರ್ಸ್‌ಲು ಆ ಟೋಟಗಳ ಸ್ಪರ್ಧೆಯು ತಾರೀಕು ೫ ಮ ತ್ತು ೬ರಲ್ಲಿ ಮಡಿಕೇರಿಯಲ್ಲಿ ನಡೆಯುವ ದು ಕೊಡಗಿನ ಚೀಫ್ ಕಮಿಷನರು ಬಹುಮಾನ ವಿತರಣೆ ಮಾಡುವರು.

ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ತಾರೀಕು ೩೦-೧-೪೮ರಲ್ಲಿ ಮಡಿಕೇರಿ ಹೈಸ್ಕೂಲು ಆವರಣದಲ್ಲಿ ಶ್ರೀ. ಸಿ. ಎಂ. ರಾಮಯ್ಯರ ತಿಪ್ಪುಣ್ಣೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಭೆಯಿತ್ತು. ಶ್ರೀಗಳಾದ ಬಿ. ಡಿ. ಗಣಪತಿ, ಸಿ. ಬಿ. ಮೋಟಯ್ಯ, ಎಂ. ಎಂ. ಸುಬ್ರಮಣಿ, ಬಿ. ಎಂ. ಸುಬ್ಬಯ್ಯ ಇವರುಗಳು ಭಾಷಣ ಮಾಡಿದರು.

ತಾರೀಕು ೩೦-೧-೪೮ರಲ್ಲಿ ಮಡಿ ಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ನೇತಾ ಜಿ ಬೋಸರ ದಿನಾಚರಣೆಯನ್ನು ಕಾಲೆ ಯ ಆವರಣದಲ್ಲಿ ಸಡಿಬಿಡದೆ ಮರುನ ಡಿಗೆಯ ನಂದಿ ಸಭೆ ನಿರೆದು ಶ್ರೀಗಳಾದ ಬಿ. ಎಸ್. ಕರಿಯಪ್ಪ, ಆತ್ಮಭಾನುದೆಳೆ ಮೊದಲಾದವರು ಭಾಷಣಮಾಡಿದರು.

ಪೊನ್ನಂಪೇಟೆನಾಡು ಕೊಟ್ಟುಗೇರಿ ಗ್ರಾಮದ ಶ್ರೀ ಮಾಚಂಗಡ ದೇವಯ್ಯನವ ರು ತಾ. ೧೭-೧-೪೮ರಲ್ಲಿ ತಮ್ಮ ೮೭ ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಹಿಂದೀ ಪೂರ್ವಭಾಗದ ಮುಖ್ಯಸೇ ನಾಧಿಪತಿಯಾಗಿದ್ದ ಲೆ. ಜ. ಕೆ ಎಂ. ಕಾರ್ಯಪ್ಪನವರನ್ನು ಜಿಲ್ಲಾ ಮತ್ತು ಪೂ ರ್ವ ಪಂಜಾಬ್ ವಿಭಾಗದ ಸೈನ್ಯ ಸೇ ನಾಪತಿಯಾಗಿ ನೇಮಿಸಲಾಗಿದೆ.

ಫೈನಾನ್ಸ್ ಕಮಿಟಿಯ ಮೀಟಿಂಗು ತಾ. ೨೭ರಲ್ಲಿ ಮಡಿಕೇರಿಯಲ್ಲಿ ನಡೆ ಯಿತು.

ಕೊಡಗು 'ಪ್ರಜಾ ಸೋಷಲಿಸ್ಟ್ ಪಾರ್ಟಿ' ವಿಠ ರ ದನಗಳ ಜೊತೆಯಲ್ಲಿದ್ದು ಈಗ ಅಲ್ಲಿಂದ ಲೂ ಕಾಲ್ಕೀಳುವಾಗಿದೆ. ಕರವು ಮಾತ್ರ ಈ ಗ ತವರ್ಷವೆ.

ಆಚ್ಚಿ ಕರಿ ಬಣ್ಣದ ಅಂದ ಮುಖ ಳ್ಳಾಲು ಅಡಿ ಬಿಳಿಯದ ಸ್ವಲ್ಪ ಬೂದಿದ ಮೊ ನೆಯೊಗಿರುವ ನೆಟ್ಟಗೋಡಿನ ಸುಮಾರು ೪೪ ಅಡಿ ಎತ್ತರದ ಪುಷ್ಯರಾಗಿರುವ ಈ ಹಡವನ್ನು, ಪತ್ತೆಹಚ್ಚಿಕೊಟ್ಟವರಿಗೆ ರೂ. ೫/-ಬಹುಮಾನ ಕೊಡಲಾಗುವದು.

ಎನ್ ಕೆ. ಮೃಚಯ್ಯ,
ಶ್ರೀ. ಕೃಷ್ಣಪ್ಪಾರ್ಕಿಸಿ,
ವೀರಾಜಪೇಟೆ.

## ವಾರ್ತೆ.

ಭಾರತದ ಗವರ್ನರ್ ಜನರಲರಾದ ಲಾರ್ಡ್ ಮೌಂಟ್ ಬೆಟನರು ಬಹಿವ ಜ್ಞಾನಿಸಂತರ ಭಾರೀದಿಂದ ನಿನ್ನೆಕ್ಕರಾ ಗಿ ಹೋಗುವರೆಂದು ಅಧಿಕೃತ ತಿಳಿದು ಬಂದಿದೆ. ಮುಂದೆ ಗವರ್ನರರು ಯೂ ರಾಗೆ ಬಹುದೆಂದು ಊಹಾಪೋಹಗಳಾ ಗುತ್ತಿವೆ

ಪಾಕಿಸ್ತಾನ ಸರಕಾರದ ಕಾಯಿದೆ ಮತ್ತು ಕೂಲಿಕಾರ ಮಂತ್ರಿಗಳಾದ ಶ್ರೀ ಜೋಗೇಂದ್ರನಾಥ ಮಂಡಲರವರು ತಮ್ಮ ಮಂತ್ರಿಪದಕ್ಕೆ ರಾಜಿನಾಮೆ ಕೊಟ್ಟು ಪೂ ರ್ವ ಬಂಗಾಳದ ಮಂತ್ರಿ ಮಂಡಳವನ್ನು ಸೇರುವರೆಂದು ವಾರ್ತೆ ಇದೆ.

ಪಾಕಿಸ್ತಾನ ಸೇನೆಗಳು ರಜಪೂತಾ ನದಲ್ಲಿಯ ೧೯,೦೦೦ ಚದರ ಮೈಲು ವಿಸ್ತಾರದ ಜೈಸಲ್ಮೀರ್ ಎಂಬ ಸಂಸ್ಥಾ ನದ ಮೇಲೆ ಧಾಳಿ ಮಾಡಿವೆಯೆಂದೂ ಇಂಡಿಯಾ ಸರಕಾರದ ಸೇನೆಗಳು ಇವ ರನ್ನು ಓಡಿಸಿರುವರೆಂದೂ ಈ ಸಂದರ್ಭ ಇಂಡಿಯಾದ ಸಂರಕ್ಷಣಾ ಮಂತ್ರಿ ಬಲದೇವ ಸಿಂಗರು ಪಾಕಿಸ್ತಾನ ವು ಎಚ್ಚರಿಕೆಯಿಂದ ವರ್ತಿಸಬೇಕೆಂದೂ, ಹಿಂ ದೂದೇಶದ ಗೌರವಕ್ಕೆ ಧಾಸಿ ತರುವ ಯಾ ವ ಕೆಲಸಗಳನ್ನೂ ಸಹಿಸಲಾರೆವೆಂದೂ ಹೇಳಿ ದ್ದಾರೆ.

ಫ್ರಾನ್ಸಿನ ಸಮಾಜವಾದಿ ಪ್ರಧಾನಿ ರಾದ ಮಿಲಿಯೊಸ್ ಬ್ಲಮ್ಮರು ಪೂತನ್ಯಾ ಡುತ್ತ ಒಟ್ಟ ವ್ಯಕ್ತಿ, ಇತಿಹಾಸವನ್ನು ಹೇ ಗೆ ಬದಲಿಸಬಲ್ಲನೆಂಬುವುದಕ್ಕೆ ಮಹಾತ್ಮ ಗಾಂಧಿಯವರು ಒಂದು ಉದಾಹರಣೆಯೂ ಗಿರುವರು. ಅವರೇನೂ ದೇಶದ ಮು ಖ್ಯಾಧಿಕಾರಿಯೊಗಿಲ್ಲದಿದ್ದರೂ ಇವರ ಆ ತ್ಮ ಬಲದಿಂದ ಹಾಗೂ ತ್ಯಾಗ ಶಕ್ತಿಯಿಂ ದ ದೇಶದ ಧೋರಣೆಯನ್ನೇ ಬದಲಿಸಲು ಶಕ್ತರಾದರು ಎಂದರಿಯುವು

ಬರ್ಮಾ ಸ್ವಾತಂತ್ರ್ಯ ವಾರ್ಷಿಕೋತ್ಸವ ಯ ಸಂಬಂಧವಾಗಿ ರಾ. ರಾಜೇಂದ್ರ ಪ್ರ ಸಾದರವರು ರಂಗೂನಿಗೆ ಹೋಗಿದ್ದಾಗ ಬರ್ಮಾದಲ್ಲಿರುವ ಭಾರತೀಯರಲ್ಲಿರೂ ಸೇರಿ ಅವರಿಗೆ ೭೫,೦೦೦ ರೂಪಾಯಿಗಳ ನಿಧಿಯನ್ನು ಅರ್ಪಿಸಿದರೆಂದೂ, ಇದರಲ್ಲಿ ೧೦,೦೦೦ ರೂಪಾಯಿ ಗಳನ್ನು ನಿರಾಶ್ರಿತರಿಗಾಗಿ ವಿನಿಯೋಗಿಸುವಂತೆ ತಿಳಿಸಿದ್ದಾರೆಂದೂ ಹೇಳಲಾಗಿದೆ.

## ರೂ. ೫ ಬಹುಮಾನ.

ನನ್ನ ಬಾಸ್ಕೆಟ್ ಕೆಳಗಿನ ಚಿಹ್ನೆಯ ಒಂದು ಹಳೆಯ ಮತ್ತರ ಕರವು ಈ ಗ ೨೪ ವರ್ಷಗಳಿಂದ ಚೆರಾಪಿಗೆ ಬೆಟ್ಟದ ಕು ಕ್ಕಲೂರು ಗ್ರಾಮದ ಶ್ರೀ ಬಡಕಡ ಸಂಜ ಪ್ಪನವರಲ್ಲಿಂದ ಪರಾರಿಯಾಗಿದ್ದು ಈಚೆಗೆ ಆ ಹಸವು ಶ್ರೀ. ವಾಟೇರಿರ ಚಂಗಪ್ಪನವ ರ ದನಗಳ ಜೊತೆಯಲ್ಲಿದ್ದು ಈಗ ಅಲ್ಲಿಂದ ಲೂ ಕಾಲ್ಕೀಳುವಾಗಿದೆ. ಕರವು ಮಾತ್ರ ಈ ಗ ತವರ್ಷವೆ.

ಆಚ್ಚಿ ಕರಿ ಬಣ್ಣದ ಅಂದ ಮುಖ ಳ್ಳಾಲು ಅಡಿ ಬಿಳಿಯದ ಸ್ವಲ್ಪ ಬೂದಿದ ಮೊ ನೆಯೊಗಿರುವ ನೆಟ್ಟಗೋಡಿನ ಸುಮಾರು ೪೪ ಅಡಿ ಎತ್ತರದ ಪುಷ್ಯರಾಗಿರುವ ಈ ಹಡವನ್ನು, ಪತ್ತೆಹಚ್ಚಿಕೊಟ್ಟವರಿಗೆ ರೂ. ೫/-ಬಹುಮಾನ ಕೊಡಲಾಗುವದು.

ಎನ್ ಕೆ. ಮೃಚಯ್ಯ,
ಶ್ರೀ. ಕೃಷ್ಣಪ್ಪಾರ್ಕಿಸಿ,
ವೀರಾಜಪೇಟೆ.

## ಮರೆನಾಡು ನಿಯೋಗ ಗೋಷ್ಠಿ.

ಮರೆನಾಡಿನ ದುಸ್ಥಿತಿಯನ್ನು ಕೊಡ ಗು ಚೀಫ್ ಕಮಿಷನರ ಮುಂದಿಡಲು ಆ ಜಿಲ್ಲೆಯ ಸಾರ್ವಜನಿಕರ ಪರ ಶ್ರೀಗಳಾದ ಕಾಳಿಮಾಡ ವೆಂಕಯ್ಯ, ಮಲ್ಲೇಂಗಡ ಮಾಚಯ್ಯ, ನೆಲ್ಲಿರ ಮಾದಪ್ಪ, ಬಟ್ಟೆ ಯಂಡ ಬೋಪಯ್ಯ ಮತ್ತು ನೆಲ್ಲಿರ ನಾ ಚಪ್ಪ ಇವರುಗಳಿಂದ ಕೂಡಿದ ನಿಯೋಗ ಗೋಷ್ಠಿಯೊಂದು ತಾರೀಕು ೩೦-೧-೪೮ ರಲ್ಲಿ ಸಾಯಂಕಾಲ ೪ ಗಂಟೆಗೆ ಚೀಫ್ ಕಮಿಷನರನ್ನು ಕಂಡು ತಮ್ಮ ನಾಡಿನ ದುರ್ದೆಶೆಯನ್ನು ಕುರಿತು ಈ ಕೆಳಗಿನ ವಿ ಚಾರಗಳನ್ನು ಅವರ ಮುಂದಿಟ್ಟರು.

(೧) ಮರೆನಾಡಿನಿಂದ ಮಲಬಾರಿಗೆ ಒಂದು ರಸ್ತೆ (ಕೇವಲ ನಾಲ್ಕು ಮೈಲು ಮಾಗ ಬೇಕಾದೆ) ಆಗತ್ಯ. ಇದಕ್ಕೆ ರೂ. ೧೫,೦೦೦ ಬೇಕು. (೨) ಮರೆನಾಡಿಗೆ ಒಂದು ಆಸ್ಪ ತ್ರೆ ಆವಶ್ಯಬೇಕು. (೩) ಇಬ್ಬಿದು ಶಾಲೆ ಯನ್ನು ಆಭಿವೃದ್ಧಿಗೊಳಿಸಿ ಯೋಗ್ಯ ಹೈ ಯರ್ ಎಲಿಮೆಂಟರಿ ಶಾಲೆ ಮಾಡಬೇಕು (೪) ಶೆಟ್ಟಿಗೇರಿಯಿಂದ ಮರೆನಾಡಿಗೆ ಹೋಗುವ ರಸ್ತೆಯಲ್ಲಿರುವ ತೂಗು ಸೇತು ವೆಯನ್ನು ದುರಸ್ತು ಗೊಳಿಸಬೇಕು. ಈ ವಿಚಾರಗಳನ್ನು ಕೂಲಂಕುಶವಾಗಿ ಕೇಳಿದ ಚೀಫ್ ಕಮಿಷನರು ಇದಕ್ಕೆ ತ್ನ ಶಕ್ತಿ ಯಿರಿ ಸಹಾಯ ಸಹಕಾರಗಳನ್ನು ಕೂ ಡುವದಾಗಿಯೂ, ಇವುಗಳನ್ನು ತಾನೇ ಖುದ್ದು ಪರೀಕ್ಷೀಸಲು ಫೆಬ್ರವರಿ ೫ ರಿಂ ದ ೭ರವರೆಗೆ ತಾವೇ ಕೆಸೊಳ್ಳಿ ಎಸ್ಟೇಟ್ ಗೆ ಇಂಜಿನಿಯರ್ ಸಮೇತ ಎಂಬುದಾಗಿ ಯೂ ಭರವಸೆ ಕೊಟ್ಟರು. ಈ ಕಾರ್ಯಕ್ಕೆ ಹೆಚ್ಚು ಖರ್ಚಾಗಲಾರದೆಂದೂ ಅದಕ್ಕೆ ಬೇಕಾದ ಹಣವನ್ನು ಸಿದ್ಧಪಡಿಸಿಟ್ಟಿರುವುದಾಗಿಯೂ ಭರವಸೆಯಿತ್ತರು.

ಈ ವಿಚಾರವಾಗಿ ಕೊಡಗು ಪ್ರಜಾ ಸಭೆಯು ನೈನಾನ್ಸ್ ಕಮಿಟಿಯ ಮುಂದೆ ತನ್ನ ಕೋರಿಕೆಗಳನ್ನು ಸಲ್ಲಿಸಿದಾಗ ಆ ಸಮಿತಿಯು ಭರವಸೆಯ ತ್ತರು. ಅದೇ ವಿಷಯವಾಗಿ ಕೊಡಗು ಪ್ರಜಾ ಸಭೆಯು ನೈನಾನ್ಸ್ ಕಮಿಟಿಯನ್ನು ಕಂಡು ಸಾ ಕ್ಷಾತ್ಕರಿಸಿದ್ದಾಗ ಅವರು ನಮ್ಮ ಕೋರಿಕೆಗಳ ನ್ನು ಸಹಾನುಭೂತಿಯಿಂದ ಕಂಡು ಫೈ ನಾನ್ಸ್ ಕಮಿಟಿಯಿಂದ ನಾಡಿನ ಉ ದ್ಧಾರಕ್ಕಾಗಿ ರೂ. ೧೦,೦೦೦ ಸಹಾಯ ಮಾಡುತ್ತೇವೆಂದೂ ಭರವಸೆ ಇತ್ತರು.

ಕೆ. ಎಸ್. ಮುದ್ದಯ್ಯ,
ನಿಯೋಗಗೋಷ್ಠಿಯ ಪರವಾ.

## ಮಾರಾಟಕ್ಕಿದೆ.

ಶೇಟರ್‌ನೇಟೆಯಿಂದ ಎರಡು ಮೈ ಲು ದೂರ ಮಡಿಕೇರಿ ರಸ್ತೆಯಲ್ಲಿ ಗುಡ್ಡೆ ಹೊಸೂರು ಕೈಕಂಬದ ಹತ್ತಿರ ಉತ್ತಮ ವಾದ ೧೫ ಕ್ರಾ ಜಾಗ ಮಾರಾಟಕ್ಕಿದೆ. ಈ ಗಲೂ ಕೂಡ ನೀರಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಇದರ ಮೇಲಿರುವ ಗದ್ದೆಗಳು ಸಾಗುವಾಣಿಯಲ್ಲಿವೆ. ಸ್ವಲ್ಪ ಕೆಲಸ ಮಾಡಿದರೆ ಇಲ್ಲಿ ೪೦೦ ಬಟ್ಟೆ ಭೂ ಮಿಯೊಗಬಹುದು. ಖರೀದಿದಾರರು ಖದ್ದಾಗಲಿ ಯೂ ಪತ್ರ ಮೂಲಕವಾಗಲೀ ಗ್ಯಾನೇ 'ಕೊಡಗು' ಪತ್ರಿಕಾಲಯದಲ್ಲಾಗಲಿ ವಿಚಾರಿಸಿ ಬೆಲೆ ಮತ್ತು ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಬಹುದು.

ಬಿ. ರಾಮಯ್ಯ,
ಬಸ್ ಏಜೆಂಟ್,
ಸೂಟಿಕೊಪ್ಪ.

# —ಲೇಖನಿಗಳ ಮೇಲೆ ಠೀಕೆ—

ಲೇ:—ಶ್ರೀ ಬಿ ಎಂ. ಬೆಳ್ಯಪ್ಪ, ವೀರಾಜಪೇಟೆ.

ತಾರೀಕು ೧೫-೧೧-೪೮ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ 'ಕೊಡಗಿನ ಭವಿಷ್ಯ' ಎಂಬ ನನ್ನ ಲೇಖನಿಯ ಮೇಲೆ ತಾರೀಕು ೩೧-೧೧-೪೮ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಶ್ರೀಯುತ ಕರ್ಕೇರ್ ರವರು, ಮೂಡಿದ ಠೀಕೆ ಮತ್ತು ತಾ. ೧೫-೧೧-೪೮ರ 'ಜನ್ಮಭೂಮಿ' ಪತ್ರಿಕೆಯಲ್ಲಿಯು ಶ್ರೀಯುತರುಗಳಾದ ಚಿನ್ನಪ್ಪರವರು ಮತ್ತು ಕೊಡಂದೇರ ಬಿ. ಚಂಗಪ್ಪ ಇವರುಗಳ ಬಾಣ್ಮಿಗಳಿಗೂ ಈ ಲೇಖನವು ಉತ್ತರವಾಗಿದೆ. ನೆಪ್ಪೀ ವಿಶ್ವರ ಹಾಹ್ಯಸ್ಪದವಾದ ಠೀಕೆಗಳ ಪ್ರತಿಯೊಂದು ಭಾಗಕ್ಕೂ ಸರಿಯಾದ ಉತ್ತರವೀಯಬೇಕಾಗಿದ್ದೆನು ಆದರೆ ಈ ಮಹಾಶಯರು ಮಹತ್ವವೆಂದು ನೆನೆಸಿಕೊಂಡಿರಬಹುದಾದ ಈ ಅಲ್ಪ ಠೀಕೆಗಳಿಗೆ ಧೀರ್ಘ ಉತ್ತರವೀಯುವದಕ್ಕಿಂತಲೂ ಹೆಚ್ಚುಮಹತ್ವದ ಕಾರ್ಯದಲ್ಲಿ ನಾನು ತೊಡಗಿರುವುದರಿಂದ ನನ್ನ ಅಮೂಲ್ಯ ಸಮಯವನ್ನು ಈ ಒಗ್ಗಳ್ಳಿ ವ್ಯರ್ಥ ಪಡಿಸಿಕೊಳ್ಳಲು ಬಯಸುವುದಿಲ್ಲ. ಉತ್ತುದ್ದ ಲೇಖನಗಳನ್ನು ಬರೆಯುತ್ತಾ ಪ್ರಯೋಜನಕಾರಿಯಾದ ಲೇಖನಗಳನ್ನು ತುಂಬಬಹುದಾದ ಪತ್ರಿಕೆಯ ಸ್ಥಳವನ್ನೂ ಆಕ್ರಮಿಸುವ ಇಚ್ಛೆ ನನಗಿಲ್ಲ. ರಾಜಕೀಯದಲ್ಲಿ ಆಸಕ್ತಿಯೂ, ವ್ಯಕ್ತಿಗತ ದೂಷಣೆಗೂ ಸ್ಥಳವಿರುವುದಿಲ್ಲ. ಒಟ್ಟಿನಲ್ಲಿ ಇಂಥಾ ಒಂದು ಲೇಖನವನ್ನು ಬರೆಯುವ ಮನಸ್ಸು ನನಗೆ ಕಿಂಚಿತ್ತಾದರೂ ಇಲ್ಲವಾಗಿದ್ದರೂ ಒಂದರ ಮೇಲೊಂದಾಗಿ ಬರುತ್ತಿರುವ ಠೀಕೆಗಳಿಗೆ ಸಕಾಲದಲ್ಲಿ ಉತ್ತರಕೊಡದಿದ್ದರೆ ಸರಿಣಾಮವು ಸಹಾಯಕವಾದೀತೆಂಬ ಭಾವನೆಯಿಂದ ಇದನ್ನು ಬರೆಯತೊಡಗಿದೆನು.

ಶ್ರೀಯ ಮಿತ್ರರೇ, ನಾನು ಕೈಕೊಂಡಿರುವ ಕಾರ್ಯದಲ್ಲಿ ನನ್ನದೇ ಆದ ಒಂದು ನೀತಿ ಮತ್ತು ರೀತಿ ಇದೆ. ಈ ಕಾರ್ಯಕ್ಕೆ ನಾನು ಯಾರ ಹೊಗಳಿಕೆಯನ್ನೂ ತೆಗಳಿಕೆಯನ್ನೂ (ಅವು ಯಾವ ಬಣ್ಣದ್ದೇ ಆಗಲಿ) ಲೆಕ್ಕಿಸುವವನಲ್ಲ. ರಾಜಕೀಯದಲ್ಲಿ ನನಗೆ ದೊರೆತ ಅಲ್ಪ ಅನುಭವದಿಂದ ನನಗೆ ಸರಿಯೆಂದು ತೋರಿದುದನ್ನು ಲೇಖನಗಳ ಮೂಲಕ ಜನತೆಯ ಮುಂದಿಡುತ್ತೇನೆ. ನನ್ನ ಅಭಿಪ್ರಾಯಗಳಲ್ಲಿ ಜೇನಿರಬಹುದು, ವಿಷವಿರಬಹುದು. ಸಾರ್ವಜನಿಕರು ಅವನ್ನು ತೆಗೆದುಕೊಳ್ಳಬಹುದು ಯಾ ಬಿಡಬಹುದು. ಹೇಗೂ ಜಯಾಪಜಯಗಳಿಗೆ ಹೆದರಿ ನಾನು ಆತ್ಮ ಘಾತುಕನಾಗಲಾರೆನು. ನೀವು ನನ್ನ ಲೇಖನಗಳನ್ನು ಅರ್ಥವಿಲ್ಲದ, ಹೀಯಾಳಿಸುವ ರೀತಿಯಲ್ಲಿ ಠೀಕಿಸುವುದರ ಬದಲು, ನನ್ನ ಪ್ರತ್ಯೇಕವಾದ ಕಾರಣಗಳಿಗೆ ಸಂಯೋಜನಾ ಸಮರ್ಥನೆಯ ಪ್ರತಿಕಾರಗಳನ್ನು ಬರೆದಿದ್ದರೆ ನಿಮ್ಮ ಶ್ರಮವೂ ಸಫಲವಾಗುತ್ತಿತ್ತು. ಜನತೆಗೆ ಅದೊಂದು ಪ್ರಯೋಜನವಾಗುತ್ತಿತ್ತು. ಮೂರ್ಖವಲ್ಲದೆ ಸಂಯೋಜನಾವಾದದಲ್ಲಿ ಹುರುಳಿದೆ ಎಂದಾಗುತ್ತಿತ್ತು. ಬದಲು ನೀವು ಕೈಕೊಂಡದ್ದು, ಅರ್ಥವಿಲ್ಲದ ಹೀಯಾಳಿಕೆಯ ಬಾಣ ತಮ್ಮತ್ತು ತಾನೇ ದೊಡ್ಡವರೆಂದು ಕೊಳ್ಳುವ ಒಣಜಂಭ ಮತ್ತು ವ್ಯಕ್ತಿದೂಷಣೆ!

ಮೊದಲಾಗಿ ಶ್ರೀಯುತ ಕರ್ಕೇರ್ ರವರಿಗೆ ಉತ್ತರವಾಗಿ ಬರೆಯುವುದೆಂದರೆ ಅವರ ಲೇಖನಿಗೆ ರಾಜಕೀಯ ತತ್ವವನ್ನಾಚರಿಸದೆ ಬರೇ ಹೀಯಾಳಿಸುವ ಕೆಲ್ಲಿ ಶಬ್ದಗಳನ್ನು ಪ್ರಯೋಗಿಸಿರುವ ಶ್ರೀಯುತರ ಜಕಾಯಿ ವಿಷಯ ಲೇಖನಿ ಬರೆಯಲು ಸಮರ್ಥವಲ್ಲ ಬದಲು ಶ್ರೀ. ಎನ್. ಎಸ್. ಕೃಷ್ಣನ್‌ರವರು ನಟಿಸುವ ತಮಿಳು ಚಿತ್ರಗಳಿಗೆ 'ಡೈಲಾಗ್' ಬರೆಯಲು ಸಮರ್ಥರೆಂದು ಅವರ ಲೇಖನಿಯು ಎತ್ತಿ ಹೇಳುತ್ತಿತ್ತು.

ಶ್ರೀ. ಚಿನ್ನಪ್ಪನವರು (ಭಾರತದ ಪಾಕಿಸ್ತಾನವೇ) ಕೊಡಗಿನಲ್ಲಿ ಲಿಂಗಾಯತ ಸ್ಥಾನವೊಂದನ್ನು ಸ್ಥಾಪಿಸಲು ಸೊಟಕಟ್ಟಿದಂತೆ ಭಾಸವಾಗುತ್ತದೆ ಶ್ರೀಯ ಮಿತ್ರರೇ, ನಾವಿಂದು ಕೊಡಗಿನಲ್ಲಿದ್ದ ಕೊಡಗನ್ನು ಒಂದುಗೂಡಿಸಿ, ಅದಕ್ಕೊಂದು ಸುಂದರ ರಾಜಧಾನಿಯನ್ನು ನಿರ್ಮಿಸಿ ರಾಜ್ಯಾಂಗ ರಚಿಸಿ ಪೂಡಿದ ಕೀರ್ತಿಯನ್ನು ಲಿಂಗಾಯತ ರಾಜರಿಗೆಂದು ನೀವು ಹೇಳುವುದಾದರೆ, ಇಂದು 'ಕೊಡಗು' ಎಂದೆನ್ನಿಸಿಕೊಳ್ಳುವ ಈ ದೇಶವನ್ನು ರೂಪಿತಗೊಳಿಸಿದ ಕೀರ್ತಿಯು ಕೊಡವರ ಪೂರ್ವಜರಿಗೆ ಹೋಗುತ್ತದೆಂಬ ನಿರ್ವಿವಾದದ ಸಂಗತಿಯನ್ನು ನೀವು ಒಪ್ಪಬೇಡವೇ? ನೀವು ಕುಂತು ಬರೆಯುವ ಕಾಲದಲ್ಲಿ ಕೊಡಗೇ ಏತಕ್ಕೆ ಇಡೀ ಹಿಂದೂಸ್ಥಾನವೇ ಅಲ್ಲ, ಭೂಲೋಕದಲ್ಲಿ ಇಂದು ಮಹಾರಾಷ್ಟ್ರಗಳೆನಿಸಿಕೊಳ್ಳುವ ರಾಷ್ಟ್ರಗಳೆಲ್ಲವೂ ಇಂದಿನಂತೆ ಏಕವಾಗಿರದೆ ಛಿದ್ರವಿಚ್ಛಿದ್ರವಾಗಿ ಸಹಸ್ರಾರು ಅಡಳಿತದಲ್ಲಿರುವೆಂಬುದನ್ನು ಚರಿತ್ರೆಯು ಹೇಳುವುದಿಲ್ಲವೇ? ಆರ್ಲ್ಡಮೈನಿಂದ ಹಿಡಿದು ನಾಲ್ಕು ಪ್ರತ್ಯೇಕ ರಾಜಪ್ರಭುತ್ವದಾಳಿಕೆಯಲ್ಲಿದ್ದ ಇಂದಿನ ಗ್ರೇಟ್ ಬ್ರಿಟನ್ನನ್ನು (ವಿ. ಡಿವೆಲರವರ ಐರ್ಲಂಡು ಬಿಟ್ಟು) ಒಂದು ಧ್ವಜದಡಿಯಲ್ಲಿ ತಂದ ಕೀರ್ತಿಯು ಬ್ರಿಟನ್ನರಿಗಲ್ಲದೆ ಸಮ್ಮಿಲನಾವಧಿಯಲ್ಲಿ ರಾಜ್ಯಭಾರ ಮಾಡಿದ ಜರ್ಮನ್ ರಕ್ತ ಸಂಬಂಧದ ಬ್ರಿಟಿಷ್ ರಾಜರುಗಳಿಗೋ? ಕೊಡಗನ್ನು ಕೆಲಕಾಲ ಲಿಂಗಾಯತ ರಾಜರು (ದೇಶೀಯರ ಸಹಾಯದಿಂದ) ಆಳಿದ ಮಾತ್ರಕ್ಕೆ ಕೊಡಗು ಇಂದು ಪರ ರಾಷ್ಟ್ರಕ್ಕೆ ಸೇರಬೇಕೆಂದಿದೆಯೇ? ನನ್ನ ಲೇಖನದಲ್ಲಿ ನಿಮ್ಮ ಪಂಗಡಕ್ಕೆ ಸಹ ಕೊಡಗಿನ ಭವಿಷ್ಯದ ವಿಚಾರ ಮತದೀಯಲು ಹಕ್ಕಿದೆ ಎಂದು ಬರೆದದ ಕಾರಣ ನೀವು ಈ ರೀತಿ ಠೀಕೆಸಿದ್ದು ಮತ್ತು ಸಂಯೋಜನೆಯನ್ನು ಸಮರ್ಥಿಸುವುದಲ್ಲದೆ, ನಿಮ್ಮ ಪಂಗಡದ ಯಾ ದೇಶದ ಹಿತದೃಷ್ಟಿಯಿಂದಲ್ಲವೆಂದು ತಿಳಿಯಬೇಕಾಗಿದೆ. ನಿಮ್ಮ ಲೇಖನದಲ್ಲಿ 'ಕೊಡಗಿನ ಆತೀ ಉತ್ತರ ಮತ್ತು ಪೂರ್ವಭಾಗಗಳಲ್ಲಿರುವ (ನಿಮ್ಮ ಪಂಗಡವೆಂದರ್ಥ) ನಿವಾಸಿಗಳಿಗೂ ಕೊಡಗಿನ ಇನ್ನಿತರ ನಿವಾಸಿಗಳಿಗೂ ಯಾವ ವಿಚಾರದಲ್ಲಿಯೂ ಪರಸ್ಪರ ಹೋಲಿಕೆ ಇಲ್ಲ. ಅವರು ಮೈಸೂರಿನ ಒಡನಾಡಿಗಳೆಂದು' ಬರೆದ ವಾಕ್ಯಗಳೇ ಕೊಡಗಿನ ಭವಿಷ್ಯದ ವಿಚಾರವಾಗಿ ನೀವು ಮತೆಪೀಯಲು ಹಕ್ಕುಳ್ಳವರಲ್ಲವೆಂಬುವುದನ್ನು ಎತ್ತಿ ತೋರಿಸುತ್ತದೆಂದರೆ ತಪ್ಪಾಗುತ್ತದೆಯೇ? ಕಥಾಭಾ ನಿಮಗೆ ಅಂತಹ ಒಂದು ಹಕ್ಕು ಕಾರಣಾಂತರಗಳಿಂದ ಕೊಡಲ್ಪಡುವುದಾದರೂ ನಿನ್ನು ಒಂದು ಅಲ್ಪ ಸಂಖ್ಯಾತ್ಮಕ ಪಂಗಡದ ಹಿತಕ್ಕಾಗಿ ಕೊಡಗು ಪರಪ್ರಾಂತ್ಯದೊಂದಿಗೆ ಸಂಯೋಜನೆಯಾಗಬೇಕೆಂದಿದಯೇ? ಈ ಭಾಗದ ನಿವಾಸಿಗಳು ವಿದ್ಯೆ, ಬುದ್ಧಿಯಲ್ಲಿ ಹಿಂದುಳಿದಿದ್ದಾರೆ ಎಂಬುವುದು ನಿಮ್ಮ ಇನ್ನೊಂದು ವಾಕ್ಯ. ನಿಮ್ಮ ಲೇಖನಿಯು ಆದಿಭಾಗದಲ್ಲಿ ಕೊಡಲಿರಿಗೆ ವಿದ್ಯೆಯನ್ನು ಕೊಟ್ಟು ವಿದ್ಯಾನಂತರನ್ನಾಗಿಯೂ ಬುದ್ಧಿವಂತರನ್ನಾಗಿಯೂ ಮಾಡಿದ್ದು ನಿಮ್ಮ ಪಂಗಡದವರೆಂದು ಬಹು ರೀತಿಯಿಂದ ಬರೆಯುತ್ತಾ ಮಧ್ಯಭಾಗದಲ್ಲಿ ಅಂತಹ ಒಂದು ಪಂಗಡವು ಪಿಶ್ಚೆ ಬುದ್ಧಿಯಲ್ಲಿ ಹಿಂದುಳಿದಿದೆ ಎಂಬ ನಿಮ್ಮ ಬಣಹವು ಹಾಸ್ಯಕ್ಕೆ ಈಡಾಗದೇ? ಇನ್ನಾದರೂ ಲೇಖನಿಯನ್ನು ಪ್ರಕಟಣೆಗೆ ಕಳುಹಿಸುವ ಮುನ್ನ ಒಂದೆರಡು ಬಾರಿ ಓದುವ ಅಭ್ಯಾಸವೂಡಿ. ಸ್ಕಾಂದ ಪುರಾಣವನ್ನು ವಯಲಿಟ್ಟು ಓದಿದರೆ ಕೊಡವರಲ್ಲಿ ರಾಜರಿದ್ದರೇ? ಎಂಬ ಪ್ರಶ್ನೆಗೆ ನಿಮಗೆ ಉತ್ತರ ಸಿಗದಿರದು. ಕೊಡಗಿನ ಎರೇ ಅದ ನಿಮಗೆ ಕೊಡವನು ಚಂದ್ರವಂಶದ ಕ್ಷತ್ರಿಯ ರಾಜವಂಶಸ್ಥನೊಬ್ಬನ ಸಂತತಿ ಎಂಬುವುದು ತಿಳಿಯದೇ ಇರುವುದು ಶೋಚನೀಯವಾಗಿದೆ. ನೀವು ಹುಟ್ಟಿ ಬೆಳೆದ ನಾಡಿನ ಮತ್ತು ನಿಮ್ಮ ಸಹೋದರೀ ಪಂಗಡಗಳ ಚರಿತ್ರೆಯು ಸಾಕಷ್ಟು ಪರಿಜ್ಞಾನವಿಲ್ಲದ ನೀವು ಮೇಧಾವಿಗಳೇದು ಭಾವಿಸಿ ಗುಡ್ಡವನ್ನು ಬಿಟ್ಟು ಒಮ್ಮಲೇ ಪರ್ವತಕ್ಕೆ ಹಾರಿನೋಡಿದರೆ ಎಲ್ಲಾದರೂ ಕಾಲುಜಾರಿದೀತು! ನೂರಂವತ್ತು ಸಾವಿರ ಜನರ ಉನ್ನತಿ ಅವನತಿಗಳ ಮೇಲಣ ಸಮಸ್ಯೆಯ ಪರಿಶೀಲನೆಯ ಈ ಕಾಲದಲ್ಲಿ ನಿಮ್ಮ ಪಂಗಡವನ್ನ ಸಣ್ಣ ಪಂಗಡವನ್ನು ಹೊಗಳಿಕೊಳ್ಳುವ ಇನ್ನೋದನ್ನು ತೆಗಳುವ ಹೀನಾಚರಣೆಗೆ ಇಳಿಯಬೇಡಿ. 'ಕೊಡವ ಸಭೆಯು ಸ್ಥಾಪಿತವಾದುದಾದರೂ ಯಾಕೆ?' ಎಂದಿದ್ದೀರಿ. ರಾಜಕೀಯ ಬಣ್ಣವಿಲ್ಲದ ಒಂದು ಸಾಂಪ್ರದಾಯಿಕ ಸಂಸ್ಥೆಯನ್ನು ನೀವು ಒತ್ತಾಯಪಡಿಸಿ ರಾಜಕೀಯಕ್ಕೆಳೆಸಿದರೆ ಪ್ರಯೋಜನವಾದರೂ ಯಾರಿಗೆ?

ಶ್ರೀ. ಕೊಡಂದೇರ ಬಿ. ಚಂಗಪ್ಪನವರು ನನ್ನ ಲೇಖನಿಯನ್ನು ಠೀಕಿಸುತ್ತಾ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರನ್ನು ತೆಗಳಿಯೂ ದೊಡ್ಡ ತಂದೆ ಕುಟ್ಟಯ್ಯನವರನ್ನು ಹೊಗಳಿಯೂ ಬರೆದ ನನ್ನ ನೇತೆದ ಅರ್ಧವಾದರೂ ನನಗಾಗುವುದಿಲ್ಲ. ನನ್ನ ಲೇಖನಿಗೂ ಶ್ರೀಯುತರುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ನನಗೂ ಶ್ರೀಯುತ ಪಿ. ಐ ಬೆಳ್ಯಪ್ಪನವರಿಗೂ ಇರುವ ಸಂಬಂಧವೆಂದರೆ ಎರಡು ಸಂಗತಿಗಳಲ್ಲಿ ಮಾತ್ರ. ಒಂದನೆಯದಾಗಿ ನಾವಿಬ್ಬರೂ ಪ್ರತ್ಯೇಕವಾದಿಗಳು. ಎರಡನೆಯದಾಗಿ ನನ್ನ ಅಲ್ಪ ಲೇಖನಿಗಳಿಗೆ ಅವರ ಸಂಪಾದಕತ್ವದ 'ಕೊಡಗು' ಪತ್ರಿಕೆಯಲ್ಲಿ ಸ್ಥಳ ದಯವಿಟ್ಟು ಕೊಡುತ್ತಾರೆ. ಅಷ್ಟೆ. ನಿಮ್ಮಿಬ್ಬರಿಗೆ ವೈಯಕ್ತಿಕ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ನೀವು ನಿಮ್ಮೊಳಗೆ ತೀರಿಸಿಕೊಳ್ಳಿ. ದೇಶದ ಉನ್ನತಿಗೆ ಎದುರಾಗಿ ಆದನ್ನೊಡ್ಡಬೇಡಿ. ಎರಡರೂ ಜೇನುಕುರುಬರೂ ಕೊಡಗಿನ ಸರಿಯಾದ ನಿವಾಸಿಗಳಲ್ಲವೆಂದು ಯಾರಿಂದಲೂ ಹೇಳಲಿಕ್ಕೆ ಸಾಧ್ಯವಿಲ್ಲ. ನೀವು ತಪ್ಪಾಗಿ ವಿಚಾರಣೆಯಲ್ಲಿ ತುದುಕೊಂಡ ಪಂಗಡವು ಬೇರೆ. ಅದು ವಯನಾಡಿನ ನಿವಾಸಿಗಳಾದ ಬೆಟ್ಟಕುರುಬರು. ನಾನೊಬ್ಬ ಪಿತ್ರಾರ್ಜಿತ ಆಸ್ತಿಯು ಉತ್ಪತ್ತಿಯಿಂದಲೂ ಅಲ್ಪ ವೇತನದ ನೌಕರಿಯಿಂದಲೂ ಜೀವನ ಸಾಗಿಸುತ್ತಿರುವ ಕಡಿಮೆ ದರ್ಜೆಯ ವ್ಯಕ್ತಿ. ನಾನು ಕಾನ್ಸಿಲ್ ಚುನಾವಣೆಗೆ ಸ್ಪರ್ಧಿಸುವವನಲ್ಲ. ಬಳವಳಿಗ್ದವರ ಮತ್ತು ಯೂರೋಪಿಯನ್ ವ್ಲಾಂಟರುಗಳ ಆಳುಗಳ ಮತದಾನದ ಪ್ರಯೋಜನ ಹೊಂದುವ ಕಾಂಕ್ಷೆಯೂ ನನಗಿಲ್ಲ. ನನ್ನ ವಿಳಾಸವು ಲೇಖನದ ಆದಿಯಲ್ಲಿದೆ. ಹಿಂದಿನ ಲೇಖನದಲ್ಲೂ ತಿಳಿಸಿದ್ದು. (ನನ್ನ ಪರಿಚಯದಿಂದ ನಿಮಗಾಗಬಹುದಾದ ಪ್ರಯೋಜನವಾದರೂ ಏನು?) ಶ್ರೀ. ಪಿ. ಐ. ಬೆಳ್ಯಪ್ಪನವರಿಗಾಗಿಯೂ, ನೀವು ಬರೆದಂತೆ ಅಧಿಕಾರಿವರ್ಗದ ವರ್ಗಾವರ್ಗಿತಲ್ಲದೆ ಪೂಡುವುದಕ್ಕಾಗಿಯೂ ಕೊಡಗು ಪ್ರತ್ಯೇಕವಾಗಿರಬೇಕೆಂದಲ್ಲ ಯಾ ನಿಮ್ಮ ಕೆಲವರ ಹಿತದೃಷ್ಟಿಯಿಂದ ಕೊಡಗು ಪರಪ್ರಾಂತ್ಯದೊಂದಿಗೆ ಸಂಯೋಜನೆಯಾಗಬೇಕೆಂದೂ ಅಲ್ಲ. ಸಂಯೋಜನೆ ಯಾ ಪ್ರತ್ಯೇಕವಾಗಿರೋಣವು ದೇಶದ ಮತ್ತು ಅದರ ನೂರಿರುವತ್ತು ಸಾವಿರ ನಿವಾಸಿಗಳ ಹಿತದೃಷ್ಟಿಯಿಂದ.

ಪ್ರತಿ ಒಂದು ಕಾರ್ಯಕ್ಷೇತ್ರದಲ್ಲಿಯೂ ವಿರುದ್ಧ ಪಕ್ಷ ಒಂದಿಲ್ಲದಿದ್ದರೆ ಕಾರ್ಯವು ಸಾಂಗವಾಗಿಯೂ ಪ್ರಯೋಜನಕಾರಿಯಾಗಿಯೂ ನೆರವೇರದು. ಆದರೆ ನೀವು ಹಿಡಿದ ಹಾದಿಯು ತಪ್ಪು ತರದ್ದು. ಪರರ ಲೇಖನಿಗಳನ್ನು ಹೀಯಾಳಿಸುವುದೆರ ಬದಲು ಸಂಯೋಜನೆಗೆ ಸರಿಯಾದ ಕಾರಣಗಳನ್ನು ಜನತೆಯ ಮುಂದಿಡಿ. ಹಾಗಿದ್ದಲ್ಲಿ ಅದು ಎಲ್ಲರಿಗೂ ಶ್ರೇಯಸ್ಕರ.

ಅತ್ಯಾವಶ್ಯದ ಪ್ರಯಾಣವನ್ನು ಕೈಕೊಂಡಿರುವ ಪ್ರಯಾಣಿಕನೊಬ್ಬನಿಗೆ ರಸ್ತೆ ಬದಿಯಲ್ಲಿ ಕೂತ ಕಪಿಯೊಂದು ಹಲ್ಲು ಕಿರಿದ ಮಾತ್ರಕ್ಕೆ ಪ್ರಯಾಣಿಕನು ತನ್ನ ಪ್ರಯಾಣವನ್ನು ಅಲ್ಲಿಗೆ ಕೊನೆಗಾಣಿಸುವನೇ! ಅದರಂತೆ ಈ ತರದ ಮಂಗಚೇಷ್ಟೆಗಳು ನನ್ನ ಮಾರ್ಗವನ್ನು ತಡೆಗಟ್ಟಲಾರವೆಂಬುದು ಮಾತ್ರ ನಿಮ್ಮ ಜ್ಞಾಪಕದಲ್ಲಿರಲಿ.

# ✹ ಕರ್ನಾಟಕ ವಿಶ್ವವಿದ್ಯಾಲಯ ✹

## ಶ್ರೀ ನಿಡ್ಯಮಲೆ ಸೋಮಣ್ಣನವರಿಗೆ ಕೆಲವು ಸವಾಲುಗಳು.

— ಲೇ:—'ಕನ್ನಡಿಗ' ಕೊಡಗು —

ನಾನು ತಾ. ೨೯-೧೧-೪೮ರ 'ಕೊಡಗು' ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ನಿಮಗೆ ತಪ್ಪೆಂದು ತೋರಿದ 'ಕರ್ನಾಟಕ ವಿಶ್ವವಿದ್ಯಾಲಯದ' ವಿಚಾರದ ರೀತಿಯ ಬಗ್ಗೆ ನೀವು ಬರೆದ ವಿಸ್ತೃತ ಲೇಖನವನ್ನು ಆದಷ್ಟೆ ಸಲ್ಲಪಕ್ಕ ಆಸ್ಥೆಯಿಂದ ಓದಿದೆನು. ವಿಶ್ವವಿದ್ಯಾಲಯ ಸಮಿತಿಯಲ್ಲಿ ನೀವಿರುವದನ್ನು ನೋಡಲೇ ನಾನು ತಿಳಿದಿದ್ದೆನು. ಆ ಸಮಿತಿಯಲ್ಲಿರುವ ಸದಸ್ಯರ ಹೆಸರೂ ನನಗೆ ತಿಳಿದಿತ್ತು. ಆ ವಿಚಾರ ನನ್ನ ಬೇಖನದಲ್ಲಿಯೇ ಇತ್ತು. ಅದಕ್ಕಾಗಿ ಪತ್ರಿಕೆಯ ಅಮೂಲ್ಯ ಸ್ಥಳವಲ್ಲಿ ೨ ಕಲಂ ವೆಚ್ಚ ನೋಡಬೇಕಿತ್ತೇ? ಇರಲಿ, ಬೊಂಬಾಯಿ ಸರಕಾರ ಮತ್ತು ವಿಶ್ವವಿದ್ಯಾಲಯವು ತಮ್ಮ ಆಡಳಿತಕ್ಕೆ ಅಡಕವಾಗಿರುವ ವಿವಿಧ ಭಾಷೆಗಳ ಭಾಗದ ಪ್ರೌಢ ವಿದ್ಯಾಸಂಸ್ಥೆಗಳನ್ನು ಭಾಷಾವಾರು ಮತ್ತು ಪ್ರಾದೇಶಿಕ ವಿಶ್ವವಿದ್ಯಾಲಯಗಳ ಕೈಕೆಳಗೆ ತರುವ ಆಲೋಚನೆ ಮಾಡಿದಂದರ ಅಲ್ಲಿಯ ಅಮೂಲ್ಯ ಭಾಷೆಯು ಏಕೃತಿ, ಪ್ರಗತಿಯ ದೃಷ್ಟಿಯಿಂದ ಎಂದು ನೀವು ಒಪ್ಪುವಿರಲ್ಲವೇ? ಆಂದ ಮೇಲೆ ಒಂದೇ ಭಾಷೆಯಿರುವ, ಒಂದೇ ಆಡಳಿತದಲ್ಲಿರುವ ಭಾಗಕ್ಕೆ ಆ ಭಾಗದ ಭಾಷೆಯೇ ಶಿಕ್ಷಣ ಮಾಧ್ಯಮವಾದ ಒಂದೇ ವಿಶ್ವವಿದ್ಯಾಲಯ ಇರಬೇಕೆಂಬ ತತ್ವವನ್ನು ನೀವು ಒಪ್ಪುವಿರಲ್ಲವೇ? ಇದನ್ನು ನೀವು ಒಪ್ಪುವದಿಲ್ಲವಾದರೆ ಭಾಷಾವಾರು ದೃಷ್ಟಿಯಿಂದ ವಿಶ್ವವಿದ್ಯಾಲಯ ಸ್ಥಾಪಿಸುವ ಸರಕಾರದ ಮತ್ತು ನಿಮ್ಮ ಕೊಗಿನ ಆಶಯವೇನು? ಒಂದೇ ಭಾಷೆಯ, ಒಂದೇ ಆಡಳಿತದ ಪ್ರಾಂತದಲ್ಲಿ ನಾಲ್ಕಾರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಈ ವಿಶ್ವವಿದ್ಯಾಲಯಗಳ ಕೆಲಸ ಕಾರ್ಯಗಳು ಏಕಮುಖವಾಗಿ, ಅಯಾ ಭಾಗದ ಭಾಷೆಯು ಉತ್ಕರ್ಷದ ದೃಷ್ಟಿಯಿಂದ ನಡೆಯುವಂತೆ ಇವುಗಳ ಮೇಲೆ ಯಾವ ಸಂಸ್ಥೆಯನ್ನು ರಚಿಸಲು ನಿಶ್ಚಯಿಸಿರುವಿರಿ? ನನಗೆ 'ವಿಶ್ವವಿದ್ಯಾಲಯ'ವೆಂಬ ಶಬ್ದದ ಅರ್ಥ ತಿಳಿದಿಲ್ಲವೆಂದು ವಿಶ್ವವಿದ್ಯಾಲಯದಲ್ಲಿ ಓದಿದ ನೀವು ನಿಮ್ಮ ಬೆನ್ನು ಥಪ್ಪರಿಸಿಕೊಂಡಿರುವಿರಿ. ನನಗಿಂಥಾ ನೀವು ಬುದ್ಧಿವಂತರಿರಬಹುದು. ಆದರೆ ಬುದ್ಧಿಪಂತನೆಂಬ ಹೆಮ್ಮೆಯಿಂದಲೇ ಆಕಾಶ ನೋಡಿ ನಡೆದರೆ ನೆಲ ಕಾಣಲಾರದು! ಏನೋ ಒಂದು ಉತ್ತರ ಕೊಡಲು ಹೊರಟ ನೀವು ನನ್ನ ಮೂತಿನ ಸವ-ರ್ಥನೆಯನ್ನೇ ಮಾಡಿದ್ದೀರಿ! ನಿಮಗೆ ತಿಳಿಯದಂತೆ ಅದು ನಿಮ್ಮ ಲೇಖನದಲ್ಲಿ ಬಂದಿದೆ. ಕರ್ನಾಡಿನ ವಿಕೇಂದ್ರೀಕರಣಕ್ಕೆ ಕರ್ನಾಡಿನ ವಿದ್ಯೆಯ ವಿಕೇಂದ್ರೀಕರಣ ಬೇಕಿಲ್ಲ. ಒಂದೇ ಶಾಸ್ತ್ರ ಬೋಧಿಸುವ ವಿಶ್ವವಿದ್ಯಾಲಯಗಳು ಬೇಕಾದಷ್ಟಿರಬಹುದು. ಆಂದರೆ ಸಂಸ್ಕೃತಿಯ ವಿಕೇಂದ್ರೀಕರಣ ಬೇಡವೆಂದು ನೀವು ಅಭಿಪ್ರಾಯಪಟ್ಟಂತಾಗಿದೆ. (ವಾಸ್ತವವಾಗಿ ಈ ಸಂಸ್ಕೃತಿಯ ವಿಕೇಗೆಯಾಗಬೇಕು. ಕರ್ನಾಡಿನ ಜನ ಕಲೆಯಲ್ಲಿ, ಸಾಹಿತ್ಯದಲ್ಲಿ, ಸರ್ವರಂಗಗಳಲ್ಲಿ ಮೇಲೇಳಬೇಕೆಂದೇ ಇದಕ್ಕೆಲ್ಲಾ ಆಧಾರವಾದ ಭಾಷಾವಾರು ಪ್ರಾಂತರಚನೆ; ಅವಶ್ಯಮಗುಣ ವಿದ್ಯಾಪ್ರಚಾರ, ಎಂದು ವಿಕೇಕರಣವಾದಿಗಳು ಅಭಿಪ್ರಾಯಪಡುತ್ತಾರೆ. ಇದಕ್ಕೆ ನೀವೂ ಒಪ್ಪಬಹುದು.) ಆದರೆ ವಿಶ್ವವಿದ್ಯಾಲಯಗಳು ಬೇರೆ ಬೇರೆ ಇರಬಹುದು! ಎನ್ನುವ ನೀವು ಒಂದೇ ಭಾಷೆಯಾಡುವವರು ಬೇರೆ ಬೇರೆ ಆಡಳಿತದಲ್ಲಿರುವ ಪ್ರಸಂಗಕ್ಕೆ ವಿರೋಧಿಸುವದು ಹೇಗೆ? ಇಂದು ಭಾಷಾವಾರು ತತ್ವದ ಮೇಲೆ ಅಳವಡಿಸಲ್ಪಟ್ಟ ಒಂದೇ ಆಡಳಿತದಲ್ಲಿರುವ ಹಿಂದೂ ದೇಶದ ಯಾವದೇ ಪ್ರಾಂತದಲ್ಲಿ ಒಂದೇ ಭಾಷೆಯು ಎರಡು ವಿಶ್ವವಿದ್ಯಾಲಯಗಳು ಒಂದೇ ವಿಚಾರಕ್ಕಾಗಿ ಕೆಲಸ ಮಾಡುತ್ತಿದ್ದರೆ ನಾಡುವ ಯೋಜನೆ ಇದ್ದರೆ ನೀವು ಬಯಸುವಿಟ್ಟು ತಿಳಿಸಬೇಕು. ವಿಶ್ವವಿದ್ಯಾಲಯಗಳೆರಬಹುದು ಬೇರೆ ಬೇರೆ ದೃಷ್ಟಿಯ ವಿಶ್ವವಿದ್ಯಾಲಯಗಳಿರಬಹುದು. ಬೇರೆ ಬೇರೆ ಶಾಸ್ತ್ರಗಳಿಗಾಗಿರಬಹುದು. ಅಮೇರಿಕಾದಲ್ಲಿ ಪಾನುವಾರಗಳನ್ನು ಸಾಕುವ (Animal Husbandry) ವಿಶ್ವವಿದ್ಯಾಲಯಗಳೇ ಬೇರೆ ಇದ್ದರೆ ಧಾರವಾಡದಲ್ಲಿ ಸ್ಥಾಪಿಸಲು ಹೊರಟಿದ್ದು ಯಾವ 'Husbandry' ಯ ವಿಶ್ವವಿದ್ಯಾಲಯವೆಂದು ಸ್ಪಷ್ಟ ಹೇಳಬೇಕು. ಹಾಗಾದರೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಕಲಿಸಲ್ಪಡುವ ವಿಚಾರಗಳನ್ನು ಒಪ್ಪಿ ಈ ವಿಚಾರಗಳಲ್ಲಿ ಮೈಸೂರು ವಿಶ್ವವಿದ್ಯಾಲಯವೇ ಕರ್ನಾಟಕದ ವಿಶ್ವವಿದ್ಯಾಲಯವೆಂದು ಒಪ್ಪುವಿರೇ?

ಕನ್ನಡಿಗೆ ಏದು ವಿಶ್ವವಿದ್ಯಾಲಯಗಳು ಬೇಕೆಂದು ತಜ್ಞರ ಅಭಿಪ್ರಾಯವಿರುವದೆಂದು ನೀವು ಹೇಳಿದೆವಾದರೆ ಧಾರವಾಡದಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಲು ಹೊಂಟ ನೀವು ದಕ್ಷಿಣ ಕನ್ನಡದಲ್ಲಿ ಒಂದು, ಕ್ರೈದರಾಬಾದಿನಲ್ಲಿ ಒಂದು ಹೀಗೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಪ್ರಯತ್ನ ನಾಡಿರುವಿರಾ? ಬದಲು ನಮ್ಮಾನ್ಸಾ ಸರಕಾರಕ್ಕೆ ಸೇರಿದ ಭಾಗಗಳನ್ನು ಸೇರಿಸಿ ಧಾರವಾಡದಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸುವ ಹಂಬಲವೇಕೆ? ದ. ಕನ್ನಡದಲ್ಲಿ ೧೫೫ ಲಕ್ಷಕ್ಕೂ ಮಿಕ್ಕಿ ಜನರಿದ್ದಾರೆ. ಅವರಿಗೊಂದು ವಿಶ್ವವಿದ್ಯಾಲಯ ಸ್ಥಾಪಿಸಿಕೊಡುವ ಭರವಸೆ ನಿಮಗಿದೆಯೇ? ಭಾಷಾವಾರು ತತ್ವದಂತೆ ರಚಿಸಲ್ಪಡುವ ವಿಶ್ವವಿದ್ಯಾಲಯಗಳನ್ನು ನೀವು ಕಾಲೇಜುಗಳೆಂದು ಭಾವಿಸಿರಲಿಕ್ಕಿಲ್ಲ ತಾನೇ? 'ಅಮೇರಿಕಾದಲ್ಲಿ ಒಂದೊಂದು ವಿಜ್ಞಾನ ಶಾಸ್ತ್ರಕ್ಕೂ ಒಂದೊಂದು ವಿಶ್ವವಿದ್ಯಾಲಯ ಸ್ಥಾಪಿಸುವ ಯೋಜನೆ ಇದೆ' ಎನ್ನುವ ನಿಮ್ಮ ವೊತು ಒಪ್ಪತಕ್ಕದ್ದು ಹಾಗೆಯೇ ಆಗಬೇಕು. ಆವರೆ ಒಂದೇ ಆಡಳಿತದಲ್ಲಿ ಒಂದೇ ವಿಜ್ಞಾನ ಶಾಸ್ತ್ರದ ತರ ಬೇತುಗೊಳಿಸುವ ತಿರಿಗಳನ್ನು ಕೊಡುವ ಭಿನ್ನಭಿನ್ನ ವಿಶ್ವವಿದ್ಯಾಲಯಗಳ ಅವಶ್ಯಕತೆ ಎಲ್ಲಿದೆ? ಅಮೇರಿಕಾದಲ್ಲಿ ಈ ಉದಾಹರಣೆ ಇದ್ದರೆ ದಯಮಾಡಿ ತಿಳಿಸಿರಿ. ಒಂದೇ ಭಾಷೆಯು, ಒಂದೇ ಆಡಳಿತದ ಒಳಗಿರುವ ಪ್ರಾಂತದಲ್ಲಿ ನಿಮ್ಮ ಕಲ್ಪನೆಯಂತೆ ಏದಾರು ವಿಶ್ವವಿದ್ಯಾಲಯಗಳಾಗಿ ವಿದ್ಯಾಕ್ಷೇತ್ರದಲ್ಲಿ ಪರಸ್ಪರ ಸಂಬಂಧವಿಲ್ಲದ ಏದಾರು ರೀತಿಯು ದಿಗ್ವಿಗಳನ್ನು ಕೊಡುವ ನಿಮ್ಮ ಕಲ್ಪನೆಯ ಆರ್ಥವೇನು? ಈ ವಿಶ್ವವಿದ್ಯಾಲಯಗಳು ಒಂದೇ ರೀತಿಯ ಶಿಕ್ಷಣಕ್ರಮವನ್ನನುಸರಿಸುವ ಸಾಧ್ಯತೆ ಎಂತು? ಹಾಗೆ ಮಾಡುವ ಕೇಂದ್ರ ಶಕ್ತಿಯೊಂದಿದ್ದರೆ ಇವು ಕಾಲೇಜುಗಳಾಗದೆ ವಿಶ್ವವಿದ್ಯಾಲಯಗಳೆಂತು? ಮಂಗಳೂರಲ್ಲಿ ನಾಕಾಶಾಸ್ತ್ರದ ವಿಶ್ವವಿದ್ಯಾಲಯವಾಗಲಿ. ಕೊಡಗಿನಲ್ಲಿ ಅರಣ್ಯಶಾಸ್ತ್ರದ ವಿಶ್ವವಿದ್ಯಾಲಯವಾಗಲಿ. ಸುಸ್ವಾಗತ! ಆದರೆ ನೀವು ಧಾರವಾಡದಲ್ಲಿ ಸ್ಥಾಪಿಸಲು ಹೊರಟಿರುವ ವಿಶ್ವವಿದ್ಯಾಲಯವು ಯಾವ ವೈಶಿಷ್ಟ್ಯದಿಂದ? ಮೈಸೂರು ವಿಶ್ವವಿದ್ಯಾಲಯದಲ್ಲಿ ಕಲಿಸಲ್ಪಡದ ಭಿನ್ನವಾದ ವಿಜ್ಞಾನ ಶಾಸ್ತ್ರಗಳ ವಿಶ್ವವಿದ್ಯಾಲಯವಾದರೆ ನಿಮಗೆ ನಾನು ಋಣಿಯು.

ಕರ್ನಾಟಕ ಪ್ರಾಂತವಾದರೆ 'ಕನ್ನಡಿ'ಗೆ ಬೇಸರವೇಕೆ? ಕನ್ನಡ ಪ್ರಾಂತರಚನೆಯಿಂದ ಇಂದು ತೊಳಲಿ ಬಳಲುತ್ತಿರುವ ಕರ್ನಾಡಿನ ಜನರ ಜೀವನವು ಸುಖಮಯವಾಗುವದಾದರೆ 'ಕನ್ನಡಿಗ' ನಿಗಾಗುವ ಸಂತೋಷಕ್ಕೆ ವಾರವಿಲ್ಲ. ಕನ್ನಡನಾಡು ಅಗಲಿ ಕನ್ನಡಿಗನ ಹಾರ್ದಿಕ ಬೆಂಬಲ ಅವಕ್ಕಿದೆ. ಆದರೆ ಈ ಪ್ರಯತ್ನದಲ್ಲಿ ಯಾರ ಮೇಲೂ ಬಲಾತ್ಕಾರ ಪ್ರಯೋಗದ ಪ್ರಸಕ್ತಿಯೇಕೆ? ಸುಳ್ಳು ಪ್ರಚಾರದ ಆಡಂಬರವೇಕೆ? ಕನ್ನಡ ನಾಡಿನ ವಿಕೇಕರಣದಿಂದ ಕೊಡಗಿನವರ ಸ್ಥಿತಿ ಈ ರೀತಿ ಸುಧಾರಿಸುತ್ತದೆ; ಇಂದಿರುವ ಅವಮಜೀವನ ಮಟ್ಟವು ಈ ರೀತಿ ಉತ್ತಮವಾಗುತ್ತದೆ ಎಂದು ಸಕಾರಣವಾಗಿ ಜನತೆಯಲ್ಲಿ ಪ್ರಚಾರ ಮಾಡಿರಿ. ಈ ಕಳೆದ ಕೆಲವು ಲೇಖನಗಳಲ್ಲಿ ನಾನು ಜನತೆಯ ಮುಂದಿಟ್ಟಿರುವ ಆಂಶಗಳನ್ನು ಖಂಡನಮಂಡನ ಮಾಡಿ ಸಂಯೋಜನಾವಾದಿಗಳಾದ ನೀವು ಸಮರ್ಥಕ ರೀತಿಯ ಉತ್ತರವಿರಿ. ನಿಮ್ಮ ಉತ್ತರದಲ್ಲಿ ತತ್ವವಿದ್ದರೆ ಅವನ್ನು ಒಪ್ಪಲು ಎಂದೂ ಹಿಂಜರಿಯುವವನು ನಾನಲ್ಲ. ಅದರೆ ನರಿಯ ಶಾಲನ್ನು ಬಿಟ್ಟು ಮರದ ಬೇರನ್ನು ಹಿಡಿದಂತೆ ನಿಜಸಮಸ್ಯೆಯನ್ನು ಬದಿಗರಿಸಿ ಇಲ್ಲ ಸಲ್ಲದ ವ್ಯಕ್ತಿ ದೂಷಣೆ, ಸಂಕುಚಿತ ರಾಜಕೀಯಕ್ಕೆ ಎಡೆಯೊಡುವದು ದೇಶಕ್ಕೆ ಹಾನಿಕರವಾದುದು.

ಕೊಡಗಿನ ರಾಜಕೀಯದಲ್ಲಿ ಕೋಮುವಾರು ವಿಷ ಪ್ರವೇಶಿಸಿರುವಂತೆ ಕರ್ನಾಡಿನ ವಿಕೇಕರಣ ವಿಚಾರದಲ್ಲೂ, ವಕ್ಕಲಿಗರು, ಲಿಂಗಾಯತರು, ಬ್ರಾಹ್ಮಣರು, ಮೊದಲಾದ ಭಿನ್ನತೆಯು ಬೇಡು ಬಿಟ್ಟಿರುವದನ್ನು ಕರ್ನಾಟಕ ಸಾಹಿತ್ಯರಂಗದಲ್ಲಿ ದುಡಿಯುತ್ತಿರುವ, ಕನ್ನಡನಾಡಿನ ಮುಂದಾಳುಗಳಲ್ಲಿ ಕೆಲವರಾದರೂ ಪರಿಚಯವಿದುವನೆಗೆ ತಿಳಿದಿದೆ. (ಇದರ ವಿಸ್ತೃತ ಪರಿಚಯ ನಿಮಗೆ ಬೇಕಿದ್ದರೆ ನಿಮ್ಮ ಉತ್ತರ ನೋಡಿ ಬರೆಯುವೆನು) ಈ ಸಂಕೀರ್ಣ ಭಾವನೆಯೇ ವಿಶ್ವವಿದ್ಯಾಲಯ ಸಮಸ್ಯೆಯಲ್ಲೂ ತಾರಲಾರದೆಂದು ಹೇಳುವ ಧೈರ್ಯ ಯಾರಿಗೆ? ಆದ್ದರಿಂದ ಚೆಲುವ ಕನ್ನಡ ನಾಡಿನ ಉದಯವಾಗಬೇಕಾದರೆ ಈ ಸಂಕೀರ್ಣತೆ ತೊಲಗಬೇಕು ಕನ್ನಡನಾಡಿನಲ್ಲಿ ಧಾರವಾಡ, ಹುಬ್ಬಳ್ಳಿಗಳು ನೆಲೆಗೆರಿ ಸಾಲದು. ಪ್ರತಿಯೊಂದು ಭಾಗದ ಉತ್ಕರ್ಷಗ, ಪ್ರತಿಯೊಂದು ಜನಾಂಗದ ಉನ್ನತಿಯು ಸರ್ವಾಗವಾಗಬೇಕು. ಕೊಡಗು ಕರ್ನಾಟಕಕ್ಕೆ ಸೇರಬೇಕಾದರೆ ಕೊಡಗಿನ ಜನರ ಹೃದಯವನ್ನು ಒಲಿಸಿರಿ ಅದು ಮೂತಿನ ಮಲ್ಲಿತನದಿಂದಲ್ಲ; ಅವರ ಭವಿಷ್ಯದಲ್ಲಿ ಆಗಬಹುದಾದ ಉತ್ಕರ್ಷದ ನೈಜ ಚಿತ್ರವನ್ನು ಅವರ ಮುಂದಿಡುವದರಿಂದ. ಹಾಗೆ ಮಾಡಿದರೆ ನಿಮ್ಮಲ್ಲಿರುವ ಸತ್ಯತೆಯನ್ನು ನಾವು ನೋಡ ಬಲ್ಲೆವು. ಸಂಯೋಜನೆಯಿಂದ ಹಿತವಾಗುವದಿದ್ದರೆ ನಮಗೆ ಬೆಂಬಲವೀಯುವೆವು. ಆದರೆ ಸಂಯೋಜನೆಯಿಂದ ದೇಶಕ್ಕೆ ಹಾನಿ ಆಗುತ್ತದೆ ಎಂಬದನ್ನು ಅಂಕೆ ಸಂಕೆಗಳಿಂದ ನಿಮಗೆ ತೋರಿಸಿಕೊಟ್ಟರೆ ನಿಜಾಂಶವನ್ನು ಒಪ್ಪಿ ಕೊಡಗಿನ ಹಿತಕ್ಕಾಗಿ ದುಡಿಯಲು ಕಂಕಣಬದ್ಧರಾಗುವಿರಾ?

---

## ಪ್ರಕಟಣೆ.

1. ಈ ಮೊದಲು ನಮ್ಮಲ್ಲಿ ವ್ಯಾಪಾರ ಮಾಡುತ್ತಿದ್ದಂತ ವ್ಯಾಪಾರಸ್ಥರಿಗೆ ಈ ಮಧ್ಯೆ ಕಾಫಿ ಹುಡಿಸಿಕ್ಕದೆ ಬಹಳ ತೊಂದರೆ ಆಗಿದೆ. ಇದಕ್ಕೆ ನಾವು ನಿಮ್ಮ ಕ್ಷಮೆ ಕೇಳಕೊಳ್ಳುತ್ತೇವೆ ಮತ್ತು ಪೂರಿನಿಂದ ಕಾಫಿ ಬಾರದೆ ಇದ್ದದ್ದೇ ಇದಕ್ಕೆ ಕಾರಣವೆಂದು ತಿಳಿಸುತ್ತೇವೆ.

ಇನ್ನು ಮುಂದಕ್ಕೆ ಕಾಫಿ ಹುಡಿಬೇಕಾದವರು ದಯವಿಟ್ಟು ಜುಲಿ ೬ನ್ನು ಮುತ್ತು ರಾತಲಿಗೆ ರೂ. 1-7-0 ಪ್ರಕಾರ ಹಣ ಕಳುಹಿಸಿ ಕೂಟ್ಟಲ್ಲು ಅವರವರ ಸ್ಥಳಕ್ಕೆ ಬಸ್ಸಿನಲ್ಲಿ ಮುಪ್ಪತ್ತಾಗಿ ಬಟವಾಡೆ ಮಾಡುತ್ತೇವೆ

2. ಮೂಳೆ ಮಣ ಒಂದರ ರೂ. 0-12-0 ಯಂತೆ ಫೈಜರ್‌ಪೇಟೆಯಲ್ಲಿ ಡೆಲಿವರಿ ತೆಗೆದುಕೊಳ್ಳುತ್ತೇವೆ.

3. ಜಮ್ಮ ಮತ್ತು ಸಾಗಿನ ಜಾಗಗಳಿಂದ ಸೀಗೆ ಕಾಯಿ ಜವಾಯಿಸಿ ಮೂರ ತಕ್ಕವರು ಪಡನೆ ಅವರವರಿಗೆ ಸನ್ಮಾಧ್ಯಪಟ್ಟ ನಾಡು ಕಚೇರಿಗಳಿಗೆ ಬರೆದು ಪಾಸು ತೆಗೆದುಕೊಳ್ಳಬೇಕಾಗಿದೆ. ಸೀಗೆ ಕಾಯಿ ವ್ಯಾಪಾರ ಮಾಡತಕ್ಕಂಥವರು ನಮ್ಮ ಮಿಲ್ಲಿಗೆ ಸರಬರಾಯಿ ಮಾಡಲು ಒಪ್ಪುವುದಾದರೆ ತಕ್ಕ ಎಗ್ರಿಮೆಂಟಿನ ಮೇಲೆ ಹಣ ಅಡ್ವಾನ್ಸು ಕೊಡಲಾಗುವುದು

**ಮೇಜೇಜೆಂಗ್ ಪೈರಿಕ್ಚರ್ಸ್,**
ದಿ. ಕೂರ್ಗ್ ಜನರಲ್ ಇಂಡಸ್ಟ್ರೀಸ್
4-3 ಲಿಮಿಟೆಡ್, ಮಡಿಕೇರಿ.

---

ವೀರಾಜಪೇಟೆಗೆ 'ಕೊಡಗು' ವಿಜೆಂಟರು:
**ಶ್ರೀ ಕೆ. ಎಂ. ಸುಬ್ರಾಯಪಪ್ಪ**

## ಪಿಸು ಮಾತು.

"ಏನ್ರಿ ಸತ್ಯವೋ ಅಸತ್ಯವೆ? ಆವತ್ತು ನೀವು ಮೇಲೆ ಬರೆದ ರೀತಿಗೆ ನಾವು ಜವಾಬನ್ನು ನಿರೀಕ್ಷಿಸಿದರೂ ಚಾರಲೀ ಇಲ್ಲ. ಬಹುಶಃ ನಮ್ಮಂಥಾ ಸುಧಾರಕರ ಮೇಲೆ ಲೇಖನಿ ಎತ್ತುವ ಎದೆಗಾರಿಕೆ ಯಾರಿಗಿದೆ? ಆಲ್ರಿ, ನನ್ನ ಆ ಒಂದಾಣಿಗೆಯ ಪೈಲಿ, ಸರಣಿ ಬಹು ಚೆನ್ನಾಗಿದಲ್ಲಿನೇ? ನನ್ನ ಹೆಂಡತಿ ಅದನ್ನು ನೋಡಿ ನಕ್ಕು ನಲಿದಳು"

* * *

'ಬಹು ಕಾಲದಿಂದ ಸುಖದು ಖಗಳಲ್ಲಿ ಭಾಗಿಗಳಾಗಿದ್ದು ಕೊಂಡು ಬಂದ ಮಿತ್ರರ ವೈಪ್ರೀಯ ಕಂಡಿಸಿ ಹೋಗಲು ಏಳೂರಲ್ಲಿ ಅಣಿಯ ಬಹು ಸಂಣ ಕಾರಣವೇ ಸಾಕು"

* * *

'ಸ್ವಲ್ಪ ಸಮಾಧಾನದಿಂದಿರಿ ನಿನ್ನ ಎಲ್ಲಾ ಕಷಿಲ ವಿಗಳನ್ನು ಈಡೇರಿಸುತ್ತೇನೆ ಇಷ್ಟು ನಿಮ್ಮರಿಳಾಗಪದು ಬೇಡ

ನಮಸ್ಕಾರಕ್ಕೆ, ನಿಮ್ಮ ಎಲ್ಲಾ ಸಾಲಗಳನ್ನು ಪಟ್ಟಾಭಿ ಅಂತ್ಯಮೊಳಗೆ ಚುಕ್ತಾಗುವಾಹುದ್ದನೆ ಬೆ ಕವಿಪನು ಅಷ್ಟಾ ಕಾರದ ಮಿಂಚಿತ ಅದ್ದರಿಂದ ಪಟ್ಟಿ ನಾಲಕ್ಕೆ ಇಳಿಸಿಕೊಂಡು ನೂರು ರೂಪಾಯಿ ದೀರ್ಘ ಸಲಗಟ್ಟಿನ ಸೂನ ಉಳಿಸಿ"

* * *

"ಹರಿಜನರಿಗೆ ಒಂದು ಮನೆ ಮಾಡಿಕೊಡಿವೆ, ದೇವಿರ ಸಂಗೈಂದನ್ನಾದರಾಡಿದವ ಕೈಲ್ಲ ಜನ ಸಂಪೊರೂರು ಆಯಿತು ನಹಿಲು ಕಂಪೆಯೆಂದು ಆಗಬೇಕಿವೆ ಎಂಥಗಳ ಸ್ವಾತಂತ್ರ್ಯವೆ? ಜನಹಿತರಜನ ಕೈಕಾರ್ಯ"

"ಈ ಊರನ್ನು ಮುಂದೆ ತರಲು ನಾನೆಷ್ಟು ಕಷ್ಟಪಟ್ಟೆ ಪತಿಕಲಕಕ್ಕೂ ನಾನೇ ಮುಂದೆಯಿಂತು ನೂಡಿದೆ ಆದರೆ ಇಲ್ಲಿಯ ಜನರು ಒಳ್ಳೆಯವರಲ್ಲ ಹೇಗೂ ಮುಂದಿನ ಚುನಾವಣೆಯ ವರಗೆ ಪ್ರಯತ್ನಿಸುವಾ"

* * *

'ಕೊಡಗಿನ ಸಂಯೋಜನೆಯು ನಿನ್ನ ಪ್ರಜಾರ ಯತ್ನಿಯಾಗಬೇಕು ದೆಲೆ ಪ್ರಚಾರ ಮಾಡಿಳಿಸಿಲ್ಲಿ ಎರಮ ಹೆಜನರನ್ನು, ಎಂದೆಂದಿಗೂ ಬರಲ್ಲ ಬೇಗೆ ಹಿಂದುಳಿದವರ ಪಂಗಡದವರನ್ನು ಸೇರಿಸಿಕೊಳ್ಳಬೇಕು"

"ಲೈಟಿಸ್ಟಿ, ನಾವು ಗುಟ್ಟಾಗಿ ವಿಷಯಂಗು ಕಲಿಸಿದ್ದ ನೀವ ಆದರ ನೋಟೀಸನ್ನು ಇಂತರಿಗೆ ತೋರಿಸಿದ್ದೀರಿ? ನಾವು ಲಜ್ಜೆಗಳು ಸಂಪ ಲೋಚನೆ ಇಲ್ಲದವರೇ? ಪಂಚೆ ಪಗೆಯಾದಿವರೆ, ಎಚ್ಚರಿಕೆ!"

* * *

## ಅನುಭವ ಮಂಟಪ.

ತಪ್ಪನ್ನು ಪರಿಹಾರಿಸಲು ಪ್ರಯತ್ನ ಪಡುವಷ್ಟರಮಟ್ಟಿಗೆ ದೊಡ್ಡ ಅಪರಾಧವೆನ್ನಿಸಿದಿಲ್ಲ.

* * *

ತನ್ನಂತೆಯೇ ಇತರರೆಂದು ತಿಳಿಯುವದು ಎಲ್ಲರಿಗೂ ತನ್ನಯಿಂದಲೆ ಗದು ಸೂಳೆಯರು ಗರತಿಯ ರನ್ನು ತನ್ನಂತೆಯೇ ಎಂದು ತಿಳಿಯಲಾರಿಂತಿ?

* * *

ಒಂದೂ ದಿವಸದ ಜೀವಿತವಿಹುದೆಂಬ ಅಗ್ಗ ಸತ್ಯವನ್ನು ಸಾಮಾನ್ಯಿಗೊಳಿಸುತ್ತದೆ ನೂರು ವರ್ಷ ಬಾಳಿ ಪುನಃಸ್ಥಾಪನೆಯಿಂದ ಜಗತ್ತಿಗೆ ಎಸ್ಟು ಸಂದಾಯಬೇಕು?

* * *

ಹುಲಿಯ ಪ್ಪು ತ್ಪಾದವಿರಬೇಕು. ಆದರೆ ಹುಲಿಯಂತೆ ಪರಿವರ್ತನೆಯಾದರದು

* * *

ಮನಬಂದಂತೆ ಸಡೆಯುವದಕ್ಕೆ ಸ್ವೈರ ಸಂಚಾರವೆನ್ನುತ್ತಾರೆ ಮನಬಂದಂತೆ ನಡೆಯಲು ಅವಕಾಶವಿರುವದಕ್ಕೆ ಸ್ವಾತಂತ್ರ್ಯವೆನ್ನುತ್ತಾರೆ

'ವೈಶ್ಯಗುಪ್ತ'

---

ಬಾಕ್ಸಿ

## ಕರ್ನಾಟಕ ವಿಕೀಕರಣ ಕಾರ್ಯಕಾರಿ ಸಮಿತಿ ಮಡಿಕೇರಿ.

### ಕನ್ನಡಮ್ಮನಲ್ಲಿ ನಿವೇದನೆ

ದಿನಾಂಕ ೭೪-೧೦-೪೮ ಆ ಪುಣ್ಯದಿನವಾಗಿರುತ್ತದೆ. ಆ ದಿನ ಗುಪ್ತಗಾಮಿನಿಯಾಗಿ ಹರಿದ ಬಾ ಕಾವೇರಿಯ ದಿನಲ್ಲಿ ಕನ್ನಡ ವಿಕೀಕರಣ ತಾಯಿಯ ಸ್ಥಿರ ರೀತಿಯಲ್ಲಿ ಸೂರ್ತಿಗೊಂದ ದಿನ! ಪವಿತ್ರ ಕಾವೇರಿ ತೀರದ ಕೊಡಗಿನ ನೈಸರ್ಗಿಕ ವಾತಾವರಣದಲ್ಲಿ ಜಿಲ್ಲಾ, ಬದಲು ವೈಶ್ರಿಯ ಮಧ್ಯಾಹ್ನ ರ ದೆಸೆಯ ಸೂರ್ಯನಿರುವಾಗ ಕೀಸಿನ ಮದಿಲಲ್ಲಿ!

ದಿವ ಕೊಯ್ಲೂರಿನ ವಿಪ್ರಮಂದಿರ! ರಾತ್ರಿ ಒಯ್ಯೂತರೆ ಬೆಡಗನ್ನು ತೊಂಡಿಸಿ ಜನರನ್ನು ಆಕರ್ಷಿಸಿ ಹೆಗಲು ರುದ್ರಯೂ ಮಿಯಂತಿರುವ 'ಸಿಕಾರಾಣಿ'ಯಾದ ನಿನ್ನ ಗರ್ಭದಲ್ಲೇ ಈ ವಿಕೀಕರಣ ಶಿಶುವಿನ ಜನನವಾಗಬೇಕಿತ್ತೆ! ಧನ್ಯಳಾದೆ! ನಿನ್ನ ಈ ಕೂಸು ನ್ಯಾಯಬದ್ಧವಾಗಬಲ್ಲವೇ? ಇಲ್ಲದಿದ್ದರೆ ಈ ಗರ್ಭಪಾತ ಪ್ರಸವವೇಕೆ?

ಕನ್ನಡಮ್ಮ, ನಿರಂತರ ತಿರಿಯುವ ರೆಯಲ್ಲಿ ನಿಂತು ದೀನರ ಸೇವೆಗಾಗಿ, ನನ್ನ ನಾಡಿನ ಅಜ್ಯುದಯಕ್ಕಾಗಿ, ನಿನ್ನ ಹಿರಿಮೆಯ ಕೀರ್ತಿಗಾಗಿ, ನಾವ ಸಲ್ಲಿಸಿದ ನಮ್ಮನ್ನು ಮಂಚಿಸಿ ಈ ಕಾರ್ಯ ಮಾಡಿದೆ ಏಕ? 'ಕೊಡಗಿನ ಭವಿಷ್ಯ'ದಲ್ಲಿ 'ವಿಕೀಕರಣ ರಂಗ'ದಲ್ಲಿ ದುಡಿಯುವ ಸ್ವಾರ್ಥಿ ಕೆಲವು ಜನರಿಗೆ ಮಾತ್ರವೇನು? ನಾಲ್ಕು ಪದವೀಧರರೂ, ಕೆಲವು ಬಂಡವಾಳಗಾರರೂ, ಮತ್ತೆ ಕೆಲವು 'ಸೈ' ಗುಟ್ಟುವವರೂ ಇವರೇ ನಿನ್ನ ಭಕ್ತರೇನು? ನಿನ್ನ ಗೌರವವನ್ನ ಪಾರ್ಟಿಯ ತತ್ವಕ್ಕೆ, ಅಧಿಕಾರಲಾಲಸೆಯ ವೇದಿಕೆಗೆ ಬಲಿಕೊಡುವ ಈ ಜನರೇ ನಿನ್ನ ಸೇವಕರೇನು?

ರಾಜಧಾನಿಯು ಕೋಸುನೂರು ಚಿತ್ರಮಂದಿರದಲ್ಲಿ ನಿನ್ನ ಈ ಆಷಾಢಭೂತರ ಸಭೆ ಸೇರಿತ್ತು. ವಿಕೀಕರಣ ಶಿಸ್ತಿನಿಂದವದು ಕೆಲವರ ಮಾತ್ರ ಹಕ್ಕೇನು? ಈ ಮಿಟಿಂಗಿನ ಆಮ್ವಾನ ಪತ್ರ ದೂರಕಿ ಮಿಟಿಂಗಿಗೆ ಹೋದವರನ್ನೂ ವಾಪಾಸು ಕಳುಹಿಸಿದರಂತೆ! ಈ ವಿಚಾರ ನಿಮರ್ಕಿಗೊಡುವ ಹಕ್ಕು ನಾಡಿನ ಜನರೆಲ್ಲರ ಹಕ್ಕಲ್ಲವೇ? ದೊಡ್ಡ ಮಂಡಿಸುವ ಕಟ್ಟಿದವರು ಬುದ್ಧಿವಂತರೂ, ಕನ್ನಡಿಕ ಪಾಕಿದವರು ದೂರದೃಷ್ಟಿ ಯವರೂ, ಶಾಲಕಾಯರು ನಿಶಾಲ ಹೃದಯವಿವರೆಂದೂ, ಬೂಬ್ಬಿರಿದು ಮೂಕಾಡುವವರು ರಾಷ್ಟ್ರರಜನಾಕೆಯರೆಂದೂ ನಿನ್ನ ಭಾವನೆಯೆ? ಈ ಭಕ್ತರು ಅಲ್ಲಿ ಗುಬ್ಬಿಗಳಿ ಸೇರಿ ಮೂವಿದ ತೀರ್ಮಾನವೆದ ಅದರನ್ನೇನು? ಪತ್ರಿಕಾ ಕಾರ್ಯಕರ್ತರು ಇದನ್ನು ಪ್ರಕಟಿಸಬಾರದಾಗಿ ಅವರ ಕೇಳಿಕೊಂಡ ಆಶಯವೇನು?

ಕೂಡಗಿನ ಸುಂದರ ಮನೋಹರ ಮಂದಿರಕ್ಕೆ ಕನ್ನಕೊರೆದು ನುಗ್ಗಿರುವ ನಿನ್ನ ಭಕ್ತರನ್ನು ಯಾವ ಹೆಸರಿನಿಂದ ಕರೆಯಬಹುದು? ಆದರೆ ಈ ದಾರಿಯಿಂದ ನಿನ್ನ ಭಕ್ತರು ಗುರಿ ಸಾಧಿಸದೆ ನಿನ್ನ ಭಕ್ತರದೆ ಸತ್ಯ ಜಯಿಸ್ತಿಯಾಗಿದ್ದರೆ ಇತರರು ಎಂದನ್ನು ಕೇಳಿದರೆ ಹಾಸ್ಯವೆನಿಸು? ನಿನ್ನ ಕಾರ್ಯಕ್ರಮ ಇತರರಿಗೆ ತಿಳಿದರೆ ಬರುವ ಗಾಡಾಂತರವೇನು? ಸತ್ಯವೆ ಅಡಿಗ್ಲ ಮಾಲೆ ಕನ್ನಡನಾಡು ಕಟ್ಟಲ್ಪಡಬೇಕೆ ನಿನಗೆ ಅಮೋಘ ಜನರನ್ನು ಸೃಷ್ಟಿಸಲು ಯಿಸುವ ನೂಗ್ರ ಸಕ್ತಿದು ಎಂದಿಂದ ಒಂದು ನೆಂಳೆ ಜಯದೂರೆರೂ ಆದು ಚಿರಕಾಲ ಬಾಳದು

ನಕೋಂ ಸೋಮವಂಶಿಯಯ್ಯ

---

## ಹಿಂದೀ ಅಧ್ಯಾಪಕರ ನೇಮಕ.

ಕಪಮೆ ಸಂಬಳಕ್ಕೆ ದೊರಯುವದೆಂದು ರುದ್ಧವಾಗಿ ಉಜಾರಣೆಯನ್ನು ಮಾಡಲಶಕ್ತರಾದವರನ್ನು ಶಾಲೆಗಳಲ್ಲಿ ಬಡಾ ನಿಷ್ಟಿಕರನ್ನಾಗಿ ಮಾಡಿ, ಎದಿಗೆ ಸಮಾವಡಿಸಿ ಗ್ಲಿಷ್ ಭಾಷೆಯನ್ನು ತಿಯಿಯ ಸ್ಥಾನದಲ್ಲಿದ್ದ ಕನ್ನಡದ ಆಸನಂಲ್ಲಿ ಕುಳ್ಳಿರಿಸಿ ಕೂಡಗಿನ ವಿದ್ಯಾವಂತರೆ ಕನ್ನಡದ ಜ್ಞಾನವು ಯಂಗಮಟ್ಟದಲ್ಲಿ ಇರುವುದೆಂಬುವ ಸ್ಪಷ್ಟತೆಗಿದೆ ದೊಡ್ಡ ದೊಡ್ಡ ಪದವೀಧರರೂ ಕೂಡ ಕನ್ನಡದಲ್ಲಿನ ಪ್ರಮ ಜ್ಞಾನವನ್ನು ಒಹಿರಂಗವಾಗಿ ಪ್ರಕಟಪಡಿಸುವವರಲ್ಲಿ ದೂರ್ವಸ್ಥಿಕಯನ್ನು ನೆನೆಯೊಪ್ಪಲೇ ಇವಕ್ಕೆ ಸಂಕ್ಷೆ

'ಜೆಳಿಯ ಗರಾಜ್ಯ ಪೊಂಕತೆಯಲ್ಲಿಯೆ ತೋರುವುದು' ಎಂಬಂತೆ ಹಿಂದಿಯ ಸ್ಥಿತಿಯೂ ಕನ್ನಡದ ಸ್ಥಿತಿಗಿಂತ ಕೀಳಾಗುವುದೆಂಬ ಸಂದೇಹವಾಗುತ್ತಿದೆ ಈಗ ಹಿಂದೀಯನ್ನು ಸ್ವಾಗತಿಸಿದ ಕೊಡಗಿನ ಏಕಮಾತ್ರ ಸರಕಾರಿ ಶಾಲೆಯೆಂದರೆ ವೀರಾಜಪೇಟೆಯ ಶಾಲೆಗೆ ಅವೇಲಾಜ ಧ್ಯಯನ ಲಗತ್ಯವಿದ್ದರೆ ಅವರನ್ನು ಹಿಂದೀ ಬೋಧಕ್ಕೆ ನಿಯಮಿಸಿ ನಾಮಕರಣ ಮಾಡದೆ ಇತರ ಉಪಾಧ್ಯಾಯರುಗಳಿಗೆ ಸಮಾನವಾಗಿ ಸಂಬಳ ಸೇರಿಸಿ ಹಿಂದೀಯ ಮಾನವನ್ನಾದರೂ ಸಂರಕ್ಷಿಸಬಹುದಿತ್ತು.

ಮಾಳವಳ್ಳಿ

---

G O N.O 1930 ಸೆಪ್ಟೆಂಬರ್ 1947ಕ್ಕೆ ಅನುಸಾರವಾಗಿ ಹಿಂದೂಸ್ಥಾನಿ ಉಪಾಧ್ಯಾಯರ ಯೋಗ್ಯತೆಯು ಈ ರೀತಿ ಇರತಕ್ಕದ್ದು (1) ನಾಗರಿ ಮತ್ತು ಉರ್ದೂ ಭಾಷೆಗಳ ತಿಳಿವಳಿಕೆ (2) ಯಾವ ಶಾಲೆಯಲ್ಲಿ ಮಂತ್ರ ಹೇಳುತ್ತಿರುವರೋ ಆ ಪ್ರದೇಶದ ಪ್ರಾಂತಿಕ ಭಾಷೆಯಲ್ಲಿ ಪರಿಕೇಳಲು ಬೋಧಿಸುವ ಯೋಗ್ಯತೆ (3) ಹಿಂದೀ ಪ್ರಚಾರಕ ಸನದು ಅಥವಾ ರಾಷ್ಟ್ರಭಾಷಾ ವಿಶಾರದ ಅಥವಾ ಅದಕ್ಕೂ ಸರಿಸಮಾನವಾದ ಸ್ವೀಕೃತ ಪರೀಕ್ಷೆ.

ಯಾವ ಉಪಾಧ್ಯಾಯರಿಗೆ ನೇಮಕವು 9ನೇ ಜೂನ್ 1947ಕ್ಕೆ ಅಥವಾ ಅದರನಂತರ ಆಗಿದೆಯೋ ಮತ್ತು ಯಾರು 'ಹಿಂದೀ ಪ್ರಚಾರಕ' ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದಿಲ್ಲವೋ ಅವರು ಎರಡು ವರ್ಷಗಳ ಒಳಗೆ ಸನದನ್ನು ಹೊಂದಿಕೊಳ್ಳತಕ್ಕದ್ದು

ಮೇಲ್ಕಂಡ ಯೋಗ್ಯತೆಯನ್ನು ವೀರಾಜಪೇಟೆಯ ಉಳಿದ ಉಪಾಧ್ಯಾಯರು ಪಡೆಯ ಬೇಕಾದರೆ ಕಡಿಮೆ ಎಂದರೆ 5 ವರ್ಷಗಳು ದಾಟಲಬಹುದೆಂದು ನನ್ನ ಊಹನ ಅಷ್ಟರ ವರೆಗೆ ಆ ಶಾಲೆಯ ಹಿಂದೀ ವಿದ್ಯಾರ್ಥಿಗಳ ಗತಿ ಏನಾಗಬಹುದೆಂದು ಹೇಳಬೇಕಾಗಿಲ್ಲರನ್ನೆ, ಕೂಡಗಿನಲ್ಲಿ ಸಾಕಷ್ಟು ಹಿಂದಿ ಕಲಿತವರಿದ್ದರೂ ಅವರನ್ನು ಬಿಟ್ಟು ಯಾವುದೊಂದೂ ಸ್ವೀಕೃತ ಹಿಂದೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದವರನ್ನು ಹಿಂದೀ ಅಧ್ಯಾಪಕರನ್ನಾಗಿ ಮಾಡುವ ದಾಕ್ಷಿಣ್ಯ ಅಧಿಕಾರವು ನಮಗೆ ತಿಳಿಯದಾಗಿದೆ ಕೂಡಗಿನಲ್ಲಿ ಪ್ರಚಾರಕ ಸನದನ್ನು ಪದದವರು ಇಲ್ಲವೆಂದೊಡನೆ ಆದರೆ ವಿಕರಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಇರುವರು. ಮದ್ರಾಸಿನಲ್ಲಿ ಪಂಡಿತರಿಗೆ ರಗಿನಿಶ್ಚಿತವಾಗಿರುವ ಸಂಬಳದಲ್ಲಿ ಇಷ್ಟಾಗಿ ಕೂಡುವ ವ್ಯವಸ್ಥೆ ಮಾಡಿದ್ದರೆ ಶಾರ್ಜಾಕ್ಕೆಯಲ್ಲಿ ಉಸಾಧ್ಯಾಯರೇ ಬೇರೆ ಕಡೆಯಿಂದಲಾದರೂ ಬರುತ್ತಿದ್ದರು. ಮದ್ರಾಸಿನ ಡಿಪ್ಲಿಕ್ಯಾಟೋರ್ಡ್ ಪತ್ರಿಕೆಯ ನಿಸಿಪಾಲಿಟಿಗಳ್ಲಿ ಪಂಡಿತರ ಉಗಿನ ಸಂಬಳಗಳ ವರ ಈ ಕೆಳಗೆ ಮಾಡಲಗಿದೆ

'I. T. ಗ್ರೇಡ್ 70-5 110, ಒಂದನೇ ಗ್ರೇಡ್ 60-4-100/5 130, ಎರಡನೆ ಗ್ರೇಡ್ 40-1-1 2-70'

(ಮದ್ರಾಸಿನ ವಿದ್ಯಾಮಂತ್ರಿಗಳು ದಿ ಸೆಂಬರ್ 17ರಲ್ಲಿ ಲಾಸಿಲ್ ಸಭೆಯಲ್ಲಿ ಇತ್ತಿ ಗೆಳಿಗೆ ಕೊಟ್ಟ ಉತ್ತರದಿಂದ)

ಅಂತ್ಯದಲ್ಲಿ ನನ್ನದೊಂದು ನನ್ನ ಸೂಚನೆಯೆಂದರೆ ಯಾವುದಾದರೂ ವಿಶೇಷ ಕಾರಣಗಳಿಂದ ವೀರಾಜಪೇಟೆಯ ಶಾಲೆಗೆ ಅವೇಲಾಜ ಧ್ಯಯನ ಅಗತ್ಯವಿದ್ದರೆ ಅವರನ್ನು ಹಿಂದೀ ಬೋಧಕ್ಕೆ ನಾಮಕರಣ ಮಾಡದೆ ಇತರ ಉಪಾಧ್ಯಾಯರುಗಳಿಗೆ ಸಮಾನವಾಗಿ ಸಂಬಳ ಸೇರಿಸಿ ಹಿಂದೀಯ ಮಾನವನ್ನಾದರೂ ಸಂರಕ್ಷಿಸಬಹುದಿತ್ತು.

ಮಾಳವಳ್ಳಿ

---

# ಕರ್ನಾಟಕ ಪಾಂತವೂ —
# — ಮೈಸೂರು ಸಂಸ್ಥಾನವೂ.

ಲೇ:—ಶ್ರೀ ಎಸ್. ಹಿರಣಯ್ಯ ಇವರು.
(ನಿವೃತ್ತ ರೆವಿನ್ಯೂ ಕಮಿಶನರ್, ಮೈಸೂರು.)

ಇಂಡಿಯಾದ ಮುಖ್ಯ ಮಂತ್ರಿಯವರು ಭಾಷಾವಾರು ಪ್ರಾಂತರಚನೆಗೆ ತಮ್ಮ ಆಕ್ಷೇಪಣೆಯನ್ನಿತ್ತು ಆಂಧ್ರರ ಕೇಳಿಕೆಗೆ ದೊರೆಯಬೇಕಾದ ಪುರಸ್ಕಾರವನ್ನು ಸರಿಯಾಗಿಯೇ ಕೊಟ್ಟಿದ್ದಾರೆ ಕನ್ನಡ ಜನರ ಆಶಯವಾದ ಕನ್ನಡನಾಡು ಕೊಂದರೆ ತೊಡರುಗಳಿದ್ದರೂ ಆಗುವದರಲ್ಲಿ ಸಂಶಯವಿಲ್ಲವೆಂದು. ಆದ್ದರಿಂದ ಈ ಸಮಯದಲ್ಲಿಯೆ ಈ ಪ್ರಾಂತನಿರ್ಮಾಣಕ್ಕೆ ಯೋಗ್ಯ ಯೋಜನೆ ಮಾಡಿ ನಮ್ಮ ಕೇಂದ್ರ ಶಾಶನ ಸಭೆಯು ಶೀಘ್ರ ಆದನ್ನು ಅಂಗೀಕರಿಸುವಂತೆ ಮಾಡಬೇಕು. ಸಮ್ಮೇಳನ, ರಠಾವುಗಳು ಸಾಲದು. ಒಂದು ದಕ್ಷ ಮತ್ತು ಯೋಗ್ಯ ಸಮಿತಿಯನ್ನು ನೇಮಿಸಿ ಈ ಹೊಸ ಪ್ರಾಂತ ನಿರ್ಮಾಣದ ಸಾಧ್ಯತೆಯನ್ನು ಆರ್ಥಿಕ ಭದ್ರತೆಯು, ಪ್ರಗತಿಗಾಮಿ ಮತ್ತು ದಕ್ಷ ಆಡಳಿತದ ದೃಷ್ಟಿಯಿಂದ ಪರಿಶೀಲಿಸಿ ಆಧಾರಪೂರ್ವಕವಾದ ಒಂದು ಯೋಜನೆ ತಯಾರಿಸಬೇಕು. ಆರ್ಥಿಕ, ವ್ಯವಸಾಯಿಕ, ವಿದ್ಯೆಯ, ವೈದ್ಯಕೀಯ, ನಿರ್ವಹಣೆ, ನೀರಾವರಿ, ವಿದ್ಯುಚ್ಛಕ್ತಿ, ಔದ್ಯೋಗಿಕ ಮೊದಲಾದವುಗಳ ಸಾಧ್ಯತೆಯನ್ನು ಈ ಪರಿಶೀಲನೆಯು ಒಳಗೊಂಡಿರಬೇಕು. ಈ ಪರಿಶೀಲನೆಯು ಕೇಳ್ಕರ್ ಪರಿಶೀಲನಾಸಮಿತಿಯ ಸೂಚನೆಯಂತೆ ಇಂದು ಬೊಂಬಾಯಿ ಪುನ್ಸು ಮದ್ರಾಸಿನ ಪೂರ್ಣ ಕನ್ನಡ ವ್ಯಾಪ್ತಗಳಾದ ಧಾರವಾಡ, ಉತ್ತರ ಕನ್ನಡ, ಬಿಜಾಪುರ, ಬ. ಕ ನ್ನಡ, ಬೆಳಗಾವಿನ ಕೆಲವು ಭಾಗ, ಸೋಲಾಪುರ, ಬೆಳ್ಳಾರಿಗಳಿಗೆ ಪೂರ್ತ ಅನ್ವಯಿಸತಕ್ಕದ್ದು. ಈಗ ಬೆರ್ಜಿಗಾಮ್ಲಿನವರ ಗಡಿ ಪ್ರಾಂತಗಳ ವಿಚಾರ ತೀರ್ಮಾನಿಸಲು ಸರಹದ್ದು ನಿರ್ಣಯ ಸಮಿತಿಗೆ ಬಿಡಬಹುದು. ಕೊಡಗು ಕನ್ನಡ ಭಾಗವಾಗಿದೆ. ಇದನ್ನು ಈ ಪರಿಶೀಲನೆಗೆ ಸೇರಿಸಿಕೊಳ್ಳಬಹುದು. ಆದರೆ ಗಾತ್ರಸ್ವರೂಪ ಕೂಡಾಗಿ ನವರು ತಮ್ಮ ಸುಂದರ ಗೆದ್ದುರಾಜ್ಯವನ್ನು ಬೇರೆ ಪ್ರಾಂತದೊಳಗೆ ವಿಲೀನಮಾಡಲು ಒಪ್ಪುವರೋ ಎಂಬುದು ಸಂಶಯದ ಮಾತು. ಈ ಮೇಲಿನ ರೀತಿಯ ಪರಿಶೀಲನೆಯಿಂದ ಹೊಸ ಪ್ರಾಂತ್ಯದ ರೂಪರೇಷೆ ಏನು? ಅದರ ಸಾಧ್ಯತೆ ಹೇಗೆ ಎಂಬುದು ಮನನವರತೆಯೊಗ್ಯವಾದುದು.

ಕನ್ನಡದ ಈ ಭಾಗಗಳನ್ನೂ ಸಂಸ್ಥಾನಗಳನ್ನೂ ಒಂದುಗೂಡಿಸಿ ಏಕ ಪ್ರಾಂತ ಮಾಡುವ ಕಾರ್ಯವು ಇನ್ನೂ ಕಠಿಣ ಮತ್ತು ವೈವಿಧ್ಯದ ಪ್ರಶ್ನೆಗಳನ್ನು ಮುಂದಿತ್ತುತ್ತದೆ. ಪ್ರಾಮುಖ್ಯ ಕನ್ನಡ ಸಂಸ್ಥಾನವಾದ ಮೈಸೂರಿಗೂ ಈ ಹೊಸ ಕರ್ನಾಟಕ ಪ್ರಾಂತಕ್ಕೂ ಯಾವ ಸಂಬಂಧವಿರಬೇಕು? ಅವೆರಡನ್ನೂ ಒಂದುಗೂಡಿಸುವದೇ? ಇಲ್ಲವೇ ಪರಸ್ಪರ ಸಂಬಂಧವು ಘಟಕಗಳಾಗಿ ಮಾಡುವದೇ? ಗತಕಾಲದ ವಿಜಯನಗರ ಸಾಮ್ರಾಜ್ಯವು ಕನಸನ್ನು ಕಟ್ಟು ಇಂದಿನ ಮೈಸೂರು ವಿಶಾಲವಾಗಿ ಆಗಾರಿಯನ್ನು ಮಟ್ಟಬೇಕಾಬಹುದು ಕನಸಿನ ಮಟ್ಟಿಗೆ ರೋಚಕ ವಿಚಾರವಾದರೂ ಕಾರ್ಯಕ್ರಮದಲ್ಲಿ ಮಹಾ ಎಡರುಗಳಿವೆ. ಉದಾಹರಣೆಗೆ ಇಂದು ಮೈಸೂರು ಹಿಂದೀ ಒಕ್ಕೂಟದ ಯಾವದೇ ಪ್ರಾಂತಕ್ಕೆಂದಕ್ಕೂ ಹೆಚ್ಚಿನ ಆಂತರಿಕ ಸ್ವಾಯತ್ತತೆಯನ್ನು ಪಡೆದಿದೆ. ಈ ಸ್ವಾಯತ್ತತೆಯನ್ನು ಅದು ಬೇರೆ ಪ್ರಾಂತದೊಡನೆ ಸೇರಿ ಕಳಕೊಳ್ಳಬೇಕೇಕೆ? ಕಳೆದ ಮುಕ್ಕಾಲು ಶತಮಾನದಿಂದ ಮೈಸೂರು ದೂರಾಲೋಚನೆಯ ದಿವಾನರನ್ನು ಪಡೆದು ತನ್ನ ಆರ್ಥಿಕ ಸ್ಥಿತಿಯನ್ನು, ಆಡಳಿತ ರೀತಿಯನ್ನು, ರಾಜಕೀಯ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡಿದೆ. ಮೈಸೂರಿನವರಿಗೆ ಪ್ರಾಣಪ್ರಿಯವಾದ ಈ ವಿಚಾರಗಳನ್ನು ಅವರು ಕಳಕೊಳ್ಳಲು ಇಚ್ಛಿಪರರು. ಇತ್ತಲಾಗಿ ಮೈಸೂರು ತನ್ನ ಉಳಿತಾಯ ನಿಧಿಯಿಂದ ಮತ್ತು ಸಾಲ ತೆಗೆದ ಬಂಡವಾಳದಿಂದ ಕೃಷ್ಣರಾಜೇಂದ್ರಸಾಗರ, ತಿಪಸಮುದ್ರ, ಶಿವಮ್ಮ ಮತ್ತು ಜೋಗ್ ವಿದ್ಯುಚ್ಛಕ್ತಿ ಕೇಂದ್ರಗಳು, ಭದ್ರಾವತಿ ಕಬ್ಬಿಣಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ, ಸರಕಾರದ ಸಹಾಯ ಪಡೆದ ತಾಗದ, ಸಕ್ಕರೆ, ಸೀಮೆಂಟ್, ಸೀಮೆಗೊಬ್ಬರ ಮೊದಲಾದ ಕಾರ್ಖಾನೆಗಳನ್ನು ತೆರೆದಿದೆ. ೨೫ ಕೋಟಿ ರೂಪಾಯಿಗಳಿಗೂ ಮಿಕ್ಕಿದ ಬಂಡವಾಳ ಇವುಗಳಿಗೆ ವಿನಿಯೋಗವಾಗಿದೆ. ಇದಕ್ಕೆ ಬಡ್ಡಿಯನ್ನು ಮೈಸೂರಿನ ಪ್ರಜೆಗಳು ತೆತ್ತಿದ್ದಾರೆ. ಇವುಗಳಲ್ಲಿ ಹಲವು ಕಂಪನಿಗಳು ಈಗ ಲಾಭದಾಯಕವಾಗುತ್ತಿವೆ. ಈ ಉತ್ಪತ್ತಿಯನ್ನು ಸಂಯುಕ್ತ ಕರ್ನಾಟಕದಲ್ಲಿ ಹೇಗೆ ವಿನಿಯೋಗಿಸುವದು? ಮೊನ್ನೆಯಾಗಿ ಬೆಂಗಳೂರಿನಲ್ಲಿ ನಡೆದ ಮೂರೆಂಗಿಗೆ ವಯನಾಡಿನಿಂದ ಬೊಂಬಾಯಿ ಮಂತ್ರಿಯ ಮೈಸೂರಿನವರು 'ತ್ಯಾಗಮಾಡಬೇಕೆಂದು ಅಫೀಲು ಮಾಡಿಕೊಂಡರು. ಈ ಅಫೀಲಿನ ಅರ್ಥವೇನು? ಈ ಸಮಸ್ಯೆಗಳ ತೃಪ್ತಿಕರವಾದ ಪರಿಹಾರದಿಂದಲೆ ಸಂಯುಕ್ತ ಕರ್ನಾಟಕ ರಚನೆಯ ಮಾರ್ಗ ಸುಗಮವಾಗಬಹುದು. ಈ ಪರಿಗೆ ಮೈಸೂರಿನ ವಿಚಾರ ಮಾತ್ರ ನಾನು ಬರೆದನು. ಆದರೆ ಹೈದರಾಬಾದಿನಲ್ಲಿ ಸೇರಿರುವ ಕನ್ನಡ ಭಾಗಗಳು ಇನ್ನಷ್ಟು ಜಟಿಲ ಪ್ರಶ್ನೆಗಳನ್ನು ಮುಂದಿಡಬಹುದು. ಈಗಿನ ಸದ್ಯದ ರಾಜಕೀಯ ಸ್ಥಿತಿಯಲ್ಲಿ ಅವು ಬಗೆಹರಿಯುವ ಮಾರ್ಗವೇ ಇಲ್ಲವೆನ್ನಬೇಕಾಗಿದೆ. ಮದರಾಸು ಪ್ರಾಂತ ಬೇರೆ ಸಂಸ್ಥಾನಗಳಲ್ಲಿ ಕನ್ನಡ ಮಾತಾಡುವವರಿದ್ದಾರೆ. ಸಂಯುಕ್ತ ಪ್ರಾಂತ್ಯಗಳವರು ಕನ್ನಡ ಪ್ರಾಂತವಾಗುವಾಗ ಉದನ್ನು ಸೇರುವ ನಿರ್ಣಯವನ್ನು ಮಾಡಿದ್ದರೂ ಈ ಸಂಸ್ಥಾನಗಳ ರಾಜಕೀಯ ಅಸ್ತಿತ್ವವೇ ಕರಗುತ್ತಿರುವ ಕಡಾಯಿಯಲ್ಲಿದ್ದಂತಿದೆ ಆದ್ದರಿಂದ ನನ್ನ ಸ್ನೇಹಿತರೂ ಕರ್ನಾಟಕದ ಮಹಾ ಪ್ರಚಾರಕರೂ ಆದ ಶ್ರೀ. ಗುಂಡಪ್ಪನವರು ಹೇಳುವಂತೆ ಈ ಸೂಚನೆಗಳನ್ನು ಮಾಡಬಯಸುತ್ತೇನೆ. ಶೀಘ್ರವಾಗಿ ಕನ್ನಡ ಪ್ರಾಂತವಾಗಬೇಕಾದರೆ ಈಗ ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿರುವ ಉಚ್ಚ ಕನ್ನಡ ಪ್ರಾಂತಗಳನ್ನು ಹಿಂದುಮುಂದಿನ ಪ್ರಯತ್ನ ಮೊದಲು ನಡೆಯಬೇಕು ಕೊಡಗಿನ ಜನರು ಒಪ್ಪುವದಾದರೆ ಆ ಪ್ರಾಂತವನ್ನೂ ಸೇರಿಸಿಕೊಳ್ಳಬಹುದು. ಇವುಗಳಿಂದ ಕೂಡಿದ ಒಂದು ಪ್ರಾಂತವಾಗಿ ಉದು ಕಾರ್ಯರೂಪಕ್ಕೆ ಬರುವ ಸ್ಥಿತಿಗೆ ಬಂದಾಗ ಸಂಸ್ಥಾನಗಳೊಡನೆ ಸೇರಿಸುವ ಪ್ರಶ್ನೆಯು ಸುಲಭವಾಗಬಹುದು. ಪ್ರಶ್ನೆಯು ಮಹತ್ವದ್ದು. ಮೈಸೂರಿನ ಮಟ್ಟಿಗೆ ಅದರ ಬಹುಕ್ಷೇಮ ನಿವಾಸಿಗಳಿಗೆ ಒಮ್ಮತದ ಅಭಿಪ್ರಾಯವಿಲ್ಲದೆ ಯಾವ ತೀರ್ಮಾನವನ್ನೂ ಮಾಡಲಿಕ್ಕೆ ಕೂಡದು.

'ಇಂದು' ಪತ್ರಿಕೆಯಿಂದ.

---

ಕೊಡಗು ಚೀಫ್ ಕಾರ್ಸ್ಟ್ ಆಫೀಸು,
ಮಡಿಕೇರಿ ತಾ. 8-1-1948.

## ನೋಟೀಸು.

ತಾರೀಕು 15-1-48ರಿಂದ ಕೊಡಗಿನ ಫಾರೆಸ್ಟುಗಳಲ್ಲಿ ಬೇಟೆಯಾಡುವ ಮತ್ತು ಗಾಡಿ ವಹಿವಾಟುಗಳನ್ನು ನಿಲ್ಲಿಸಲಾಗಿದೆಯೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಜಾಹೀರು ಪಡಿಸಲಾಗಿದೆ. ಈ ನೋಟೀಸು ಸರಕಾರಿ ವಹಿವಾಟುಗಳಿಗೆ ಸಂಬಂಧಿಸುವುದಲ್ಲ.

ಸಿ. ಯಂ. ಕುಶಾಲಪ್ಪ.
ಚೀಫ್ ಫಾರೆಸ್ಟ್ ಆಫೀಸರು.

---

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು.
ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
30 ಆರ್ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.
ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.
(ಟೆಲಿಫೋನ್ ನಂ. 8798)
ಇತರ ಆಫೀಸುಗಳು:—ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಪುದುಚೆರಿ, ಪುತ್ತು ಬೊಂಬಾಯಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.
ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ರೀವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮಿ ತೇವಣಾತಿಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬಳ್ಳಿ ಲಭರಾಗಳ ಮೇಲೆ ಸಾಲ ಕೊಡಲಾಗುವುದು. ನರ್ಮಕ್ಕೂಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.
ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆನೇಜ್ಮರ್.

ಎಂಪ್ಲೆರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897
48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಷ್ಟ ಸಂಗತಿಗಳು.
ಒಟ್ಟು ಆದಾಯ .... 1,07,09,000 ಮಿರಿದೆ
ಜಾರ್ತಿಯಿರುವ ವಿಮೆ .... 17,74,52,000 ,,
ಆಸ್ತಿ .... .... 6,67,60,000 ,,
ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು .... 8,83,62,000 ,,
ಶಾಖಾ ಕಛೇರಿ: ಶಿವಪ್ಪ ಬೋರ್ಡ್ ಬಿಲ್ಡಿಂಗ್, ಅಂಚೇಗೌಡರಸ್ಟ್ರೀ, ಬೆಂಗಳೂರು.
ಏಜೆನ್ಸಿ: ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಕಛೇರಿ: ಎಂಪ್ಲೆರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ.

Edited, Printed and Published by P. I. Bellappa at 'Kodagu Press, Mercara, for 'Kodagu' Ltd.

Reg. No. M- 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಸಿ. ಐ. ಬೆಳ್ಯಪ್ಪನವರು [ಪ್ರತಿಕೆ ಬಂದಾರಭ ೧-೨-೦

ಸಂಪುಟ ೨೬ | ತಾರೀಖು ೬-೨-೧೯೪೮ಲನೇ ಶುಕ್ರವಾರ | ಸಂಚಿಕೆ ೫೬

## ಘಟನೆ.

ತಾರೀಕು ೩೦-೧-೪೮ಲನೇ ಶುಕ್ರವಾರ ಸಾಯಂಕಾಲ ೫-೧೫ ಗಂಟೆಗೆ ಬಿರ್ಲಾ ಭವನದಿಂದ ಪ್ರಾರ್ಥನಾ ಸಭೆಗೆ ತಮ್ಮ ಸಂಗಾತಿಗಳೊಡನೆ ಬರುತ್ತಿದ್ದಾಗ ಶ್ರೀಮದ್ರಾಮನ ಪೆದ್ದ ಜನಸ್ತೋಮವು ಇಬ್ಬರಿಗಾಗಿ ಗಾಂಧೀಜಿಗೆ ದಾರಿಮಾಡಿತು. ಜನತೆಯ ಮಧ್ಯೆ ರುಳಿಕಿದ್ದ ೩೬ ವರ್ಷ ಸ್ಥಿನ ಯುವ ಕನ್ನಡಿಬ್ಬನು ಗಾಂಧೀಬಾಪುವರ ಮುಂದೆ ಬಂದು ಬಗ್ಗಿದನು. ಸಂಪ್ರದಾಯದಂತೆ ಗಾಂಧೀಜಿಯು ಪಾದಧೂಳಿಯನ್ನು ತೆಗೆಯ ಸ್ತಿರಬಹುದೆಂದು ನೆನಸಿ, ಗಾಂಧೀಜಿಯ ನಡೆದು ಬರುತ್ತಿದ್ದ ಕಡೆಗೆ ಆ ಯುವಕನಿಗೆ ಬಂದ ಒಡಗೆ ಸರಿಯಬೆಂಕೆ ಸಂಗಡಿಗರು ಹೇಳಿದರು. ಅಷ್ಟರಲ್ಲಿ ಮೇಲಿದ್ದ ಯುವಕನು ಕೆಳಗಿಂದ ರಾಮಲ್ಲರ್ ತೆಗೆದು ಮಹಾತ್ಮರಿಗೆ ಸುರಿದು ಗುಂ ದೂರದಿಂದ ಗುಂಡು ಹಾರಿಸಿದನು. ಎರಡು ಗುಂಡುಗಳು ಹೊಟ್ಟೆಗೂ, ಎಂಮ ಎದೆಗೂ ತಗಲಿ ಮಹಾತ್ಮರು ಪ್ರಜ್ಞೆತಪ್ಪಿ ಬಿದ್ದರು ಅವರ ಬಾಯಿಯಿಂದ 'ಹಾ ರಾಮ, ಹಾ ರಾಮ' ಶಬ್ದಗಳು ಹೊರಬಿದ್ದವು. ಅವರ ಕನ್ನಡಕ ಪಾದರಕ್ಷೆಗಳು ಅಸ್ತವ್ಯಸ್ತವಾದವು. ತಿರವನ್ನು ಎತ್ತಿ ಬಿರ್ಲಾ ಭವನಕ್ಕೆ ತರಲಾಯಿತು. ಅಲ್ಲಿ ಅವರು ಗುಂಡು ತಗಲಿದ ಒಂ ನಿಮಿಷಗಳ ನಂತರ ಅಮರರಾಯನ್ನು ಪಡೆದರು. ಮಹಾತ್ಮರು ಈ ಹುರಂತವನ್ನು ಸೂಪಲೇ ತಿಳಿದಿರುವಂತೆ ಆ ದಿನ ಬೆಳಗ್ಗೆ ಎಲ್ಲಾ ಸ್ವಮುಖ್ಯ ಪತ್ರಿಕೆಗಳನ್ನು ತರಿಸಿ ಎಲ್ಲವನ್ನೂ ಉದಂ ಓದಿದ್ದರಂತೆ. ಈ ಘೋರನಯೂದ ಹನೆಯೇ ಈ ವರ್ತಮಾನವು ಇಡೀ ಡೆಲ್ಲಿಯನ್ನು ದಂಗುಬಿಡಿ. ಭರತ ಖಂಡದ ಗವಿದಾದಿ ಖಿಂದಖಿಂದಗಳಲ್ಲಿ ಪ್ರತಿಧ್ವನಿಸಿತು. ಇದಿ ಪೂರ್ವಂದಿರವು ದುಃಖ ಬಂಧಿಯಲ್ಲಿ ಮುಳುಗಿತು. ದೆಲ್ಲಿಯ ಲಕ್ಷಾಂತರ ಜನರು ಬಿರ್ಲಾ ಭವನಕ್ಕೆ ಸಾಗಿದರು.

## ಶವಸಂಸ್ಕಾರ.

ಮಾರನೆ ದಿನ ಬೆಳಗ್ಗೆ ೧೦ ಗಂಟೆಗೆ ಬಿರ್ಲಾ ಭವನದಿಂದ ಜಮುನಾಘಾಟ್ ನವರೆಗಿರುವ ೪ ಳ್ತು ಮೈಲು ದೂರವನ್ನು ಕ್ರಮಿಸಲು ೪ ಗಂಟೆ ಸಮಯವು ಹಿಡಿಯಿತು. ಉದ್ದಕ್ಕೂ ಜನಸಮುದಾಯವೇ ಕಿಕ್ಕಿರಿದು ನೆರೆದಿತ್ತು. ರಮ್ಯ ಅತ್ಯದ್ಭುತ ಬೆಳಕಾಗಿ, ಜಯಜಯವನದ ಜೋಡನವಾಗಿದ್ದ ಭರತ ಖಂಡದ ಆಧ್ಯಾತ್ಮಿಕ ಮತ್ತು ರಾಜಕೀಯ ಗುರುವಿನ ಅಂತಿಮ ದರ್ಶನಕ್ಕಾಗಿ ಇಡೀ ಭರತಖಂಡವೇ ಧಾವಿಸಿತ್ತು ರಸ್ತೆಯಲ್ಲಿ ತಿಡೆಗಳಲ್ಲಾಗಲಿ ಸ್ಥಳವಿಲ್ಲ. ನೆಲದ ಮೂಲೆಲ, ಒಂದೇ ಸಾರಿದಲ್ಲಿ ನಿಲ್ಲಲು ಸ್ಥಳವಿಲ್ಲಿ. ಎಲ್ಲಿ ನೋಡಿದರೂ ಜನರು. ಎಲ್ಲರ ಕಣ್ಣಿನಲ್ಲಿಯೂ ಆಶ್ರು ಧಾರೆ. ಮಹಾತ್ಮಾ ಗಾಂಧೀ ಕೀ ಜೈ' ಗಗನಭೆದಿಯುವಂತೆ ಮೊಳಗುತಿತ್ತು. ಅನೇಕರು ಜನರ ನುಗ್ಗಾಟವಲ್ಲಿ, ನೂಕಾಟದಲ್ಲಿ ಕಳವಳದಲ್ಲಿ ಪ್ರಜ್ಞೆತಪ್ಪಿ ಬಿದ್ದರು ಜನಸಂದಣಿಯನ್ನು ಹತೋಟಿಯಲ್ಲಿಡಲು ನಾಲ್ಕುಸಾವಿರದ ಸಿವಾಯಿಯರ ಪಡೆಯೂ, ದಿಲ್ಲಿಯ ಎಲ್ಲಾ ಪೊಲೀಸ್ ಪಡೆಯೂ, ವ್ಯವಸ್ಥೆಯ ರಕ್ಷಣೆಗಾಗಿ ದಳವೂ ಬೇಕಾಯಿತು.

ವೈದಿಕ ಸಂಸ್ಕಾರದಂತೆ ಎಲ್ಲ ಕರ್ಮಗಳು ನೆರವೇರಿದ ನಂತರ ಮಹಾತ್ಮರ ಪುತ್ರ ರಾಮದಾಸ್ ಗಾಂಧೀಜಿಯವರು ಚಿತೆ ಇಟ್ಟರು. ಚಿತೆಯು ಹೊತ್ತಿ ಉರಿಯ ತೊಡಗಿತು. ಜನತೆಯಲ್ಲಿ ಹಾಹಾಕಾರ ಹೆಚ್ಚಿತು ಪೊಲೀಸ್ ಪತ್ತ ಸೈನಿಕ ಗೋಡೆಯನ್ನು ನುಗ್ಗಿಬ್ಬೆಂಕೆಗೆ ಬೀಳುವಂತೆ ಜನಸಂದಣಿ ಶೋಕಾತಿರೇಕದಿಂದ




# ಗಾಂಧೀಜಿಯವರ ದುರಂತ ಸಾವು.

ನುಂಬರಿಬಿ ಅ ಧಿಕಾರಿಗಳಾಗಿ ನಿಲಿಸಿ ಮಹಾತ್ಮರ ಕಾರ್ಯಗಳನ್ನು ಮುಂದುವರಿಸಲು ಪ್ರಯತ್ನಿಸಿದರು. ಜನತೆಯ ಅಭಿಮಾನಕ್ಕೆ ಪಾತ್ರರಾದ ಮಹಾತ್ಮರ ಅಂತಿಮ ದರ್ಶನಕ್ಕಾಗಿ ಇಡೀ ಭರತಖಂಡದ ಜನತೆಯ ಪ್ರತಿನಿಧಿಗಳು ಧಾವಿಸಿದ್ದರು. ಭೌತಿಕ ಕಲೇವರವು ಪಂಚಭೂತಗಳಲ್ಲಿ ವಿಲೀನವಾಯಿತು. ಆದರೆ ಅವರ ಆತ್ಮವು ಅಮರವಾಗಿ ಜನತೆಯ ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಸಿತು.

## ಸ್ವಗತ.

ಮಹಾತ್ಮರ ಸಾವಿನ ಸುದ್ದಿಯು ಜಗತ್ತಿನಾದ್ಯಂತ ಹರಡಿತು. ಅವರ ಸಾವಿಗೆ ಸಂತಾಪ ಸೂಚಕವಾಗಿ ಅನೇಕ ದೇಶಗಳಲ್ಲಿ ಧ್ವಜಗಳನ್ನು ಅರ್ಧಕ್ಕೆ ಇಳಿಸಲಾಯಿತು. ಅನೇಕ ದೇಶಗಳ ಪ್ರಮುಖರು ಮಹಾತ್ಮರ ಸಾವಿಗೆ ಸಂತಾಪ ಸೂಚಿಸಿ ಸಂದೇಶಗಳನ್ನು ಕಳುಹಿಸಿದರು. ಅಮೆರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಶ್ರೀ ಟ್ರೂಮನ್ ಅವರು ಸಂತಾಪ ಸೂಚಕ ಸಂದೇಶವನ್ನು ಕಳುಹಿಸಿದರು. ಇಂಗ್ಲೆಂಡಿನ ಪ್ರಧಾನಿ ಶ್ರೀ ಅಟ್ಲಿಯವರು ಸಂತಾಪ ಸೂಚಕ ಸಂದೇಶವನ್ನು ಕಳುಹಿಸಿದರು. ಇಂಗ್ಲೆಂಡಿನ ರಾಜ ಮನೆತನದ

ಕೊಡಗು

— ತಾರೀಕು 6—2—1948ನೇ ಶುಕ್ರವಾರ —

# ಭಾಷ್ಪಾಂಜಲಿ.

ಗಾಳಿ ಬೀಸುವದು ನಿಂತಿತು. ಮರಗಿಡಗಳು ಸ್ತಬ್ಧವಾದವು. ನೂರನ ನಿಮಂತ ಚೇತನವು ಕಾಂತಿ ಹೀನವಾಯಿತು. ಯುಗಯುಗಾಂತರಗಳ ತಪಸ್ಸಿನ ಪ್ರಭಾವದಿಂದ ಸಮುದ್ರಕ್ಕಿಂಥಲೂ ವಿಶಾಲ ಪ್ರೇಮದ, ಹಿಮಾಲಯಕ್ಕಿಂಥಲೂ ಉಚ್ಚಭಾವನೆಯು ಪ್ರತೀಕವಾಗಿದ್ದ ಬಾಪು ಕಣ್ಮರೆಯಾದಾಗ ಇಡೀ ಜಗತ್ತೇ ಸ್ತಬ್ಧವಾಯಿತು. ಕಣ್ಣೀರ ಕಡಲು ಹರಿಯಿತು. ಕರ್ತವ್ಯ ಶೂನ್ಯರಾಗಿ ಜನ ಸ್ತೋಮವು ಕಕ್ಕಾಬಿಕ್ಕಿಯಾಯಿತು. ಗಭೀರಗಂಭೀರವಾದ ಮೌನವ ಕುಲ ಪರ್ವತದಲ್ಲಿ ತರುಣಾರುಣ ರಾಗರಂಜಿತ ಭುವನ ಮನಮೋಹಕವಾಗಿದ್ದ ಪರ್ವತ ದಲ ಸೌಂದರ್ಯವಪದ್ಮವು ಕ್ರೂರ ಹಸ್ತಕ್ಕೆ ಸಿಕ್ಕಿ ನಾಶವಾಯಿತು. ಅಭಯ ಪ್ರದಾನ ದಿನಕರನು ಅಸ್ತಂಗತನಾದನು. ಮಾನವ ಕುಲವು ಅನಾಥವಾಗಿ ಕಣ್ಣೀರ ಕಾಲುವೆ ಹರಿಸಿತು.

ದೀನ ದರಿದ್ರರ ನಿಟ್ಟುಸಿರಿನ ಗಾಳಿಯಲ್ಲಿ, ಜನಸಾಮಾನ್ಯರ ಕಳವಳದ ಕಡಲಿನಲ್ಲಿ, ಪಕ್ಷಿತರುವರೆ ಭಯ ಕೈಂಕರ್ಯಗಳ ವಮುವಿನಲ್ಲಿ, ಎಲ್ಲಾಗೂ ಒಂದು ಆರಾಜ್ಯೋತಿಯಾಗಿ, ಸರ್ವರಿಗೂ ಮಾರ್ಗದರ್ಶಕ ಶಕ್ತಿಯಾಗಿ ಮೆರೆದ, ಸರ್ವರ ಆಶೆಯ ಸ್ವಾತಂತ್ರ್ಯಪ್ಪನ್ನು ಒದಗಿಸಿದ ರಾಷ್ಟ್ರ ಪಿತ ಬಾಪುವನ್ನು ಆ ಸ್ವತಂತ್ರ ದೇಶವೇ ಕೊಲೆಮಾಡಬೇಕೆ? ಸನಾತನ ಧರ್ಮೋದ್ಧಾರಕರಾದ ಶ್ರೀ ಮುನಿಗಳನ್ನು ಪೆಕ್ಕ, ಜಗತ್ಕಿಗೇ, ಧರ್ಮ ಪಥವನ್ನು ತೋರಿಸಿದ ಧರ್ಮಿಕ ಭಾರತದಲ್ಲೇ ಧರ್ಮಪುರುಷನ ಕೊಲೆಯಾಗಬೇಕೆ?

ಮಳಿಗು ಮನವೇ ಮುಳಿಗು. ದುಃಖ ಸಾಗರದಲ್ಲಿ ಮುಳುಗು. ಸರ್ವ ದೃಕ್ಕಿಂಥಲೂ ಅಗಾಧವಾದ ಆತ್ಮ ಸಮುದ್ರದಲ್ಲಿ ಮುಳಿಗು. ಆತ್ಮ ಸಮ ಪ್ರಜ್ಞೆ ಕೇವಲ ಕಳದ ರಾತ್ರಿಯಾಗಿರದೆ ಅಲ್ಲಿ ಮುತ್ತು ರತ್ನಗಳನ್ನೆಯೇ ನೋಡಾ. ಆತ್ಮದ ಅನುಸಂಧಾನ ಸೂಡು. ಜ್ಞಾನ ದೀಪ ಉರಿಸು. ಪ್ರೇಮ, ಸ್ನೇಹ, ಸೌಹಾರ್ದತೆಗಳ ಮುತ್ತುಗಳನ್ನು ಅಳವಡಿಕು. ಎಂದಿರುತ್ತೆ ನಾವೂ ಪೂರ್ಣದ ನೂರ್ವದಿಗಂತದಲ್ಲಿ ಉದಯಿಸಿಬರಲಿ ಜಗತ್ತನ ಮಾನವ ಸ್ನೇಹ ಗಿಡ ನೋಡು. ಸಮಾರಾಧನು ತರುಣಲವ ಹಿಲ್ಲೋಲಗಳ ಮಸ್ಯೆ ಎಂಬಂತೆ ಕಂ ಳಿ ಬಂದರೂ ಆತನ ಮರ್ಮರದಲ್ಲಿ ನರಳುವ ಧ್ವನಿಯಿದೆ; ಹಾಗಂತಿರುವ ನೂರಾರು ಪಕ್ಷಿಗಳ ಗಾನ ನೆರಳ್ಲಿಯೂ ರೋಧನ ತುಂಬಿದೆ, ನೋಡಿ. ಗಾಂಧಿ ತಿರೋಧಾನದಿಂದ ಮೈನುರಿತಿರುವ ಜಗತ್ತಿಗೆ, ಕತ್ತಲೆ ಕವಿಯುವ ಮುಂಗಾಣನೆ ಪಡವರಿ ಸುತ್ತಿ ಪ ಜನತ್ಕೆ ಬೆಳಕಿನ ಮಾರ್ಗ ತೋರುವೆಯಾ? ಯಾಗ ದರಿ ಯುಗ ದೇವನ ತತ್ವ ಸಿದ್ಧಾಂತಗಳನ್ನು ಅನುಸರಿಸಿ ಅನುಷ್ಠಾನದಲ್ಲಿ ತಾ. ದುಃಖಿತ ಭಾರತಾಂಬೆಯು ನಗುಮುಖದಿಂದ ನಲಿಯುವಂತೆ, ಬಾರತಿಯ ಸಚ್ಚಿನ ಕವಿ ರನು ತೋರಿಸಿದ ಪಥದಲ್ಲಿ ಮುನ್ನಡೆ.

ಬಹು ಪುರಾತನ ಕಾಲದ ಇತಿಹಾಸದ ಗರ್ಭದಿಂದ ಹೊಮ್ಮಿ, ಸರ್ವತ್ರ ವಿಖ್ಯಾರಗಳಿಂದ ಮಂಡಿತನಾಗಿ ಚಿಮ್ಮಿ, ಅರಣ್ಯಾರಣ್ಯ ಕಂದಾ ಆಯುಗಳಲ್ಲಿ ಸೃಷ್ಟಿ ಧ್ವಸಿಸಿ, ಜಡವಾಗಿದ್ದ ಭಾರತ ಭೂವಿಯನ್ನು ಬಡಿದೆಬ್ಬಿಸಿ ಬ್ರಾಹ್ಮ ಭಕ್ತಿ, ಕರ್ಮ, ವೈರಾಗ್ಯ ಸೇವಾತತ್ವಗಳನ್ನು ಉಚ್ಚ ಸ್ವರದಿಂದ ಸಾರಿದ ಅಗ್ನಿ ಸತವಾದ ಪ ಹಾಪುರ ವಿಠಲ ವಾಣಿಯು ಇಂದು ಸೀಳ ಒಡಿರಿಸಿದೆಯೇ. ಆದರೆ ಆಸಂ ಹೂಡಿದ ಸಾಧನೆ, ಸಿದ್ಧಿ, ಸಾಕ್ಷಾತ್ಕಾರಗಳ ಬೀಜ ಇವಾಗಿ ಭಾರತೀಯರು ಮುಳ್ಳರಾಗಿದ್ದಾರೆ. ಪರದಾಸ್ಯತೆಯ ಪಾತ ಳದಿಂದ ಮೇಲೆ ತ್ತಲು ಸಹಾಯಕವಾದ ತತ್ವವು ಸ್ವಾತಂತ್ರ್ಯಪ ಸ್ವರ್ಗದಲ್ಲಿ ಅಪಪ್ರಯೋಜಕವಿನೆನ್ನಿ ವಂತಾದರೆ ಅಂಥ ಭಾರತೀಯರಿಂದ ತವ್ಮ ಆತ್ಮನಾಶವೂಡಿಕೊಂಡಂತೆ ಆಗ ತ್ತಿನ ಧರ್ಮಸಭಸ್ಥ ಬತ್ತಿ ಬಡಾದಂತೆ!

ಆದ್ದರಿಂದ ಜೀ ಮಾನವ, ವೃತಾನ್ಯಕೆ ಪುನರಾಗತನಾಗನು. ಕಳೆದ ದಿನವು ಪುನಹ ಬಾರದು. ಬೀಸಿದ ಗಾಳಿಯು ಮೊದಲಿನಂತೆ ಪುನಹ ಬೀಸದು. ಜೀವನದ ಕಳಿದ ಒಂದೇ ದೇಹವನ್ನು ಎರಡುಬಾರಿ ಹೊಂದನೆ. ಭೂತ ಖಂಡ ಪುನರ್ಜನ್ಮವೇ, ಆತೀತವು ಪ್ರಜ್ಞೆಯಿಂದ ಪ್ರತ್ಯಕ್ಷ ಶರೀರಧಾರಿಗಳಾದ ಸಹೊ ದರ ಸಹೋದರಿಯರಿಗೆ ಅಣಿಯೋಗ, ಮನಸ್ಸಿನ ಕಲ್ಮಶವನ್ನು ಕೊಳೆಯು ಶಿಸ್ತೆಯಲ್ಲಿ ಪಾತ್ರೆಯನ್ನು ಕಂಡು ಪ್ರೇಮ ಪಥವಲ್ಲಿ ನಡೆ ಪಂಥ, ಪಕ್ಷಗಳ ಬಾಹುಬದ್ಧರ ಸಾಹಸದಲ್ಲಿ ಶಕ್ತಿ ಕ್ಷಯಮಾಡದೆ ಏಕಾಗ್ರ ಸನ್ನಿಷ್ಟ ಪಥದಲ್ಲಿ ಸಾಗು. ಯಾವ ಶಕ್ತಿಯು ದಿಗ್ದಿಗಂತ ವ್ಯಾಪಿಯಾಗಿ ಯುದ್ಧಾವಕ್ತ ಜಗತ್ತನ್ನು ಸಚ್ಚಿದಕ್ಕೆ ಹಚ್ಚಲು ಪ್ರಯತ್ನಿಸಿತೋ ಆ ಶಕ್ತಿಯ ಪೂರ್ಣ ತತ್ವವನ್ನು ಭಾರತ, ಅನುಭವಿಸು. ದಾಸಜಾತಿಯ ಚಿತ್ತೈಯೊಪ ಈರ್ಷ್ಯಾ ದ್ವೇಷಗಳನ್ನು ದೂರಮೂಡಾ. ಈ ಮಹಾಗಾಂಧಿಯ ಎಗತ್ಕ್ಕ ಪುನರ್ಜನಿಗೆ ಸಹಾಯಕನಾಗಿ ಹೆಗಲು ಕೊಟ್ಟು ಧೀರನಾಗಿ ಶ್ರಮಿಸು. ಅಂದು ಆ ಹ.ತ ತ್ಮಕ್ಕೆ ಸಂತೋಷ. ಅಂದು ಆ ಅಮಂತ ಆತ್ಮಕ್ಕೆ ಚಿರಶಾಂತಿ.

## ಕೊಡಗಿನ ಕಂಬನಿ.

ವಪಾತ್ಮ ಗಾಂಧೀಜಿಯವರ ಕೂಲೆಯು ತಾ. ೩೦-೧-೪೮ ರ ಸಾಯಂಕಾಲ ೬ ಗಂಟೆಗೆ ಮಂದಿಕೇರಿಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಸಿನಿಮಾ ಮಂದಿರಗಳು ಮುಚ್ಚಲ್ಪಟ್ಟವು. ಎಲ್ಲ ಚಟುವಟಿಕೆಯೂ ಸ್ಥಬ್ದಗೊಂಡಿತು. ಪ್ರತಿ ಮನೆಯಲ್ಲೂ ರೋಧನ ಧ್ವನಿ ಕೇಳಿಬರುತಿತ್ತು. ದುಃಖಸಾಗರದಲ್ಲಿ ಜನತೆಯು ಮುಳುಗಿತು. ನೂರಕ್ಕೆ ದಿನ ಇಡೀ ಮಂದಿಕೇರಿಯ ಜನರು ಈ ಹಿಂದೆ ೧೯೩೪ರಲ್ಲಿ ಮಹಾತ್ಮರು ಇಂದು ಭಾಷಣ ಮಾಡಿದ ರಾಜ ಸೀಟ್ ಗಳಲ್ಲಿ ನೆರೆದು ಪೌನ ಮೆರವಣಿಗೆಯಾಯಿತು. ಮೆರವಣಿಗೆಯು ಅರ್ಧ ವೈಲು ಉದ್ದವಿತ್ತು. ಎಲ್ಲರೂ ಸಾಯಂಕಾಲ ೪ ಗಂಟೆಗೆ ಏನೂ ಹೊಗೆಯು ಪಕ್ಕದ್ಸೇರಿ ನೈದಾನದಲ್ಲಿ ನೇರಿ ಬಹಿರಂಗ ಪ್ರಾರ್ಥನೆ ನಡೆಯಿತ್ತು. ಮಂದಿಕೇರಿಯ ಪ್ರಮುಖರೊಂದು ಅಂಗಡಿ, ಹೊಟೆಲು, ಆಫೀಸು, ಸರ್ವರೂ ಮುಚ್ಚಲ್ಪಟ್ಟಿದ್ದವು. ಇದೇ ರೀತಿ ತಾ. ೩೧ರಲ್ಲಿ ವಿರಾಜಪೇಟೆ, ಸಾಮ್ಪಾಲ್ಲು, ಮೂರ್ನಾಡು, ಆನ್ಮಂಡಿ, ಸಿದ್ದಾಪುರ, ಕೊಮಾರವಾರಪೇಟೆ, ಶನಿವಾರ ಸಂತೆ, ಹೆಬ್ಬಾಲೆ, ಫ್ರೈಜರ್‌ಸಾಟೆ ಮೊದಲಾದ ಪಲಪ್ರಮುಖಳಗಳಲ್ಲಿ ಸರ್ವಾನುಮತ ಪ್ರತಿಳಂನ್ನು ಬಿಜರಿಸಿ ವಧ್ಯಾಹ್ನದ ಮೇಲೆ ರಾಮಭಜನೆಯಿಂದ ಸಾರ್ವಜನಿಕ ಸಭೆ ನಡೆಸಿ ಸಾಯಂಕಾಲ ೪ ಗಂಟೆಗೆ ಸಮೂಹವಪ ಹೊಳೆ ಆಧವಾ ತೋಡಿನ ಪಡದಲ್ಲಿ ಭಗವದ್ಗೀತೆ ಕುರಾನ್ ಗ್ರಂಥಗಳಿಂಗ ಶ್ಲೋಕ ಪಠಣ ಮಾಡಿ ಪ್ರಾರ್ಥನೆ ನಡೆಸಲು ಯತ್ನಿಸಿದ ದಿನ ಪ್ರಾರ್ಥನೆಯನ್ನು ಶ್ರೀ ಕೆ. ಡಿಂಬಯ್ಯ ನವರು ಅಧ್ಯಕ್ಷತೆಯಲ್ಲೂ, ಫೂರ್ಣಾನಂದ ವಿದ್ಯಾಸಮಿತಿಯ ಶಿಕ್ಷಕ ವೃಂದವು ಅಧ್ಯಕ್ಷತೆಯಲ್ಲೂ ಹುದಿಕೇರಿ ಪ್ರೌಢಶಾಲೆಯ ವಿದ್ಯಾರ್ಥಿಗಳ ಅಧ್ಯಕ್ಷತೆಯಲ್ಲೂ, ನಲ ಸಕ್ಕೆಲ್ಲಾ ಗಾಂಧಿ ಮಂದಿರದಲ್ಲಿ ಶ್ರೀ ಮಂಡೆಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲೂ, ವ್ಯಾಧ್ಯಾಪಕ ವೃಂದವು ಅಧ್ಯಕ್ಷತೆಯಲ್ಲೂ ಪ್ರಾರ್ಥನೆ ನಡೆಸಲಾಯಿತು.

### ಸಂಘಾಪ ಸಭೆಗಳು.

ಈ ತಾರೀಕು ೩೧-೧-೪೮ ರಲ್ಲಿ ಸೋಮವಾರಪೇಟೆನಾಡಿನವರ ಸಭೆಯೊಂದು ಶ್ರೀ ಡಿ. ಎಸ್. ದಾನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತ್ತು. ಶ್ರೀ ಪಿ. ಐ ಬೆಳ್ಯಪ್ಪನವರು, ಅಲ್ಲಿಯ ಗಣ್ಯರು ಅಧ್ಯಪಿಕೆ ಶ್ರೀ. ಗಾಯಿತ್ರಮ್ಮನವರು, ಶ್ರೀ. ಬಿ ಸಿ ಸಿಂದ್ಯಪ್ಪನವರು, ಮಾತ್ತರ ಅಪಾದನೀಯ ವೆಯನ್ನು ಕುರಿತು ಭಾಷಣ ಮಾಡಿದರಂತರ ಗಾಂಧೀಜಿಯವರ ಅಗಲಿಕೆಯಿಂದ ಸಿಧಿಸಕ್ಕೆಪಟ್ಟ ಖಾಲಿಯನ್ನು ತುಂಬಿಸಿ ತಮ್ಮ ಆತ್ಮಕ್ಕೆ ಶಾಂತಿಯನ್ನು ಬಯಸಿ, ಭಾರತ ಜನಾಂಗಕ್ಕೆ ಆಗ ಅಪಾರ ನಷ್ಟವನ್ನು ಸಹಿಸುವ ಶಕ್ತಿಯಿಂದನ್ನು, ಕೊಡವ ಮಕ್ಕೆ ಭಗವಂತನ ಕೃಪಾಕಟಾಕ್ಷ ಪ್ರಾಪ್ತಿಯಾಗಲೆಂದು ಪ್ರಾರ್ಥಿಸಿ ಮಂಜೂರಾದ ಪ್ರಾಸ್ತಾವನೆಗಳನ್ನು ಸಭೆ ಅಂಗೀಕರಿಸಿತು.

ತಾ. ೩೧-೧-೪೮ ರಲ್ಲಿ ಅಮ್ಮತ್ತಿಯಲ್ಲಿ ಶ್ರೀ. ಐ. ಸಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತ್ತು. ಮಂದ ಕ್ಕರ ಗಣಪತಿಯವರು ಶ್ರೀ. ಪಿ ಸಿ. ಬೆಳ್ಯಪ್ಪನವರಿಂದ ಮಾಡಲ್ಪಟ್ಟ ನಂತರ ನೇಲಿನ ಆಧ್ಯಕ್ಷ ಭಾಷಣ ಮತ್ತು ಪ್ರಾಮಾಣಿಕ ಕಾರ್ಯಗಳನ್ನು ಎಲ್ಲರೂ ಎನ್ನಾನಿಸಿದರು. ತಾ. ೩೧-೧-೪೮ ರಲ್ಲಿ ಕೋಪಟಾರು ಗ್ರಾಮಸ್ಥರು ಗ್ರಾಮದೇವಸ್ಥಾನದಲ್ಲಿ ಸಭೆ ಸೇರಿ ರಾಷ್ಟ್ರಪಿತಾಮಹನಿಗೆ ಪೂಜೆಯಲ್ಲಿ ಸಿ, ಭಗವದ್ಗೀತೆ ಪಾರಾಯಣಮಾಡಿದರು.

ತಾರೀಕು ೪-೨-೪೮ ರಲ್ಲಿ ವೀರಾಜಪೇಟೆಯ ಶಾಲಾ ವಿದ್ಯಾರ್ಥಿಗಳೂ, ಸಾರ್ವಜನಿಕರೂ ರಾಮಭಜನೆಯಿಂದ ಸೇಟೆಯಲ್ಲಿ ಮೆರವಣಿಗೆ ನಡೆಸಿ ಮಧ್ಯಾಹ್ನ ೨ ಗಂಟೆಗೆ ಕಾಲೋನಿಯ ಪಕ್ಕದ ವೈದಾನದಲ್ಲಿ ಶ್ರೀ. ನಾಯಿಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನೆರೆದಿರು. ಭವದ್ಗೀತೆ, ಕುರಾನ್‌ಗಳ ಪಠನದ ನಂತರ ಮಹಾತ್ಮರ ಗುಣಗಾನವನ್ನು ಶ್ರೀ. ಪಿ. ಐ. ಬೆಳ್ಯಪ್ಪನವರು ಮಾಡಿದ ನಂತರ ದುಃಖಕರ ತೀರಾವು ಒಮ್ಮತದಿಂದ ಪಾಸು ಮಾಡಲ್ಪಟ್ಟು ನೆಹರೂರವರಿಗೆ ತಂತಿಳಿಸಲಾಯಿತು.

ತಾರೀಕು ೫-೨-೪೮ ರಲ್ಲಿ ಮೂರ್ನಾಡಿನಲ್ಲಿ ಶಾಲಾಬಾಲಕರು ಮತ್ತು ಸಾರ್ವಜನಿಕರು ಮೌನಣಿಗೆ ಮಾಡಿದ ನಂತರ ಮಧ್ಯಾಹ್ನ ೨ ಗಂಟೆಗೆ ಶ್ರೀ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತ್ತು. ಅಧ್ಯಕ್ಷರು ಗಾಂಧೀಜಿಯವರ ಜೀವನಜೀವನ ಪರಿಚಯವನ್ನು ಜನರಿಗೆ ಮಾಡಿದ ನಂತರ ಮೇಲಿನಂತೆ ತೀರಾವುಗಳಾಗಿ ತಂತಿ ಕಳುಹಿಸಲ್ಪಟ್ಟಿತು.

ತಾರೀಕು ೬-೨-೪೮ ರಲ್ಲಿ ೧೧-೩೦ ಗಂಟೆಗೆ ಮಂಡಿಕೇರಿಯಲ್ಲಿ ಕೊಹಿನೂರು ಟಾಕೀಸಿನಲ್ಲಿ, ಡಿ. ಬಿ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತ್ತು. ತಾ. ೧೫ರಂದು ನಮ್ಮಾತ್ಮರ ಶ್ರಾದ್ಧಾದ ವಿಚಾರದು ಮಾಡಲು ಒಂದು ಸಮಿತಿ ನೇಮಕವಾಯಿತು.

## ಮರ್ಚೆನ.

ಮಂಡನಪಲ್ಲಿ ಕಾಲೇಜಿನಲ್ಲಿ ಓದುತ್ತಿರುವ ಶ್ರೀ ಕ. ಎ ಭೀಮಯ್ಯನವರು ಮಧ್ಯಾಹ್ನಾರ ಮರಣವಾರ್ತೆಯ ಕೇಳಿ ಬಹಳ ಗಂಟೆಗಳ ಒಲಿ ಉಪವಾಸ ಮಾಡಿದರು.

ಸಿದಗಲು ಪರಿಸರ (ಪ ಸನ ನಾಕು ನ) ಇಲಾಖೆಯ ಸ್ಯಾನ್ ಅಗಿದ್ದ ಶ್ರೀ ಚೆಕ್ಕೆರವಂದ ಬೆಳ್ಯಪ್ಪನವರನ್ನು ತಾರೀಕು ೩೦-೧-೪೮ರಲ್ಲಿ ರಾಸಿಜಾಟ್ಸ್-ರೇಸ್ ಕೋರ್ಸ್ ಟಸ್ಯಲ್ಲಿ ಬುಲೆಟ್ ಕುದ್ದಿಗೆ ಕುಯಿದು ಕೊಂ ಎಪ್ಪಾಕಿದ್ದರೆಂದು ತಿಳಿದುಬಂದಿದೆ ತನಿಖೆ ನಡೆಯುತ್ತಿದೆ

ತಾ. ೩೧ರಲ್ಲಿ ನಾಪೋಕ್ಲುವಲ್ಲಿ ಶ್ರೀ ಕೇಲಪ್ಪೆರ ದೇವಯ್ಯ ಮತ್ತು ಕುಟ್ಟಪ್ಪನವರ ವತಿಯಿಂದ ಜೇಕಿ ಹುತ್ತಿ ಸುವಾಗರು ಒಂದು ಸಾವಿರ ರೂ ಪರಿಗೆ ನಷ್ಟವಾಗಿರುಯೆಂದು ತಿಳಿಯ ತ್ತೇವೆ.

ಮೂರು ದಿನಗಳಿಂದ ಕಾಣೆಯಾಗಿದ್ದ ಬೇಕು ಗ್ರಾಮದ ಶ್ರೀ ಬೆಳ್ಳೇಪಂಡ ಪೊನ್ನಪ್ಪನವರ ಕವವು ತಾ. ೧-೨-೪೮ರಲ್ಲಿ ಕೊಟ್ಟಸಂ.ದಿಯ ಹತ್ತಿರ ಕಾವೇರಿ ಹೊಳೆಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಿದ್ದು ಪೊಲೀಸಿಯಿಂಗ ತಿಳಿಯುತ್ತೇವ.

ಶ್ರೀ ಬೊಳ್ಳೆರಂಡ ಕಾರ್ಯಪ್ಪನವರಿಗೆ 'ಕೈಸರ್ ಐ ಹಿಂದ್' ಪದಕವನ್ನು ಸಿಕ್ಕಿ ದಕ್ಕಾಗಿ ಅಭಿನಂದಿಸಲು ತಾ. ೩೦-೧-೪೮ ರಲ್ಲಿ ಕೊಣಂಜಗೇರಿ ಗ್ರಾಮಸ್ಥರು ಒಕ್ಕೂಟವನ್ನು ವಿರ್ಮಿಸಿ ಗೌರವಿಸಿದರು.

COORG FOREST DEPARTMENT.

**TIMBER SALE NOTICE.**

*Mercara the 3rd February 48.*

The sales of Timber fixed for 31-1-1948 and adjourned due to Mahatmaji's death, will be resumed on 18-2-1948 at 10-30 A. M.

**C. M. Kushalappa**

*Chief Forest Officer, Coorg.*

## ಸತ್ಯಶೋಧಕ.

ಮಹಾತ್ಮ ಗಾಂಧೀಜಿಯವರು ಇಂದು ಇಲ್ಲ. ಅವರೊಂದಿಗೆ ವಿಶ್ವಾತ್ಮಿಕತೆಯ ಬೆಳಕು ನಂದಿಹೋಯಿತ. ಸತ್ಯಂ, ಶಿವಂ, ಸುಂದರವಾಗಿ ಬೆಳಗಿದ ಅವರ ಜೀವನ ಕುಸುಮದ ಕೆಲವು ಎಸಳುಗಳವು. ದುಃಖಭಾರದಿಂದ ಬಗ್ಗಿದ, ದುಃಖಾತ್ಮ ಬಿಂದುಗಳಿಂದ ಸಿಂಚಿತವಾದ ಈ ಲೇಖನಿಯು ದಶದಿಕ್ಕುಗಳನ್ನು ಬೆಳಗುತ್ತಿರುವ ಸೂರ್ಯನನ್ನು ಹಣತೆಯ ಪ್ರಕಾಶದಿಂದ ಹುಡುಕಿದಂತೆ. ಆದರೂ ಹೃದಯ ವೇದನೆಯು ಹೇಳಿಕೊಳ್ಳುವದಂದ ಹಗುರವಾಗುವಂತೆ ಈ ಬಹಿರಂಗ ಗುಣಕಥನ.

ಶೋಧಕನು ತನ್ನ ತಪ್ಪನ್ನು ಒಪ್ಪಿಕೊಳ್ಳುವವನಾಗಬೇಕು. ಇತರರಿಂದ ಕಲಿಯುವ ಗುಣ ಆತನಲ್ಲಿ ಇರಬೇಕು. ಕತ್ತಲು ಕವಿದ ಜೀವನದಲ್ಲಿ ಕಣ್ಣು ಕಾಣದು. ಅದಕ್ಕಾಗಿ ಜೀವನದಲ್ಲಿ ಶಿಸ್ತಿರಬೇಕು. ಶರಣತೆಬೇಕು. ದೈನ್ಯತೆಬೇಕು. ಕಂಡದ್ದೆಲ್ಲಾ ತನಗೆ ಬೇಕೆನ್ನುವನು ಅವುಗಳನ್ನು ಹೊತ್ತುಕೊಂಡು ಮುಂದೆ ನಡೆಯಲಾರನು. ಆದ್ದರಿಂದ ಸತ್ಯಶೋಧಕನು ತ್ಯಾಗಿಯಾಗಬೇಕು. ಐಹಿಕ ಮೋಹವಿರಬಾರದು. ಗಾಂಧೀಜಿಯವರದು ಈ ರೀತಿಯ ಜೀವ. ಜಗತ್ತಿನ ವಿಚಾರಗಳಲ್ಲಿ ಎಷ್ಟು ಆಸಕ್ತರೋ ಅಷ್ಟೇ ಅನಾಸಕ್ತರು. ಸತ್ಯದ ಪಥವಲ್ಲಿ ಶೋಧಕರಾಗಿ ಮುನ್ನಡೆದರು. ತಮ್ಮ ತಪ್ಪುಗಳನ್ನು ಒಪ್ಪಿಕೊಂಡರು. ಇತರರಿಂದ ಕಲಿತರು. ಮುಂದೆ ಸಾಗಿ 'ಸತ್ಯವೇ ದೇವರೆ'ಂಬ ತಮ್ಮ ಸಿದ್ಧಾಂತವನ್ನು ಸಾರಿದರು. ಮಹಾತ್ಮರು ತಮ್ಮ ಆತ್ಮಕಥೆಗೆ 'ಸತ್ಯಶೋಧನೆ' ಎಂದೇ ಹೆಸರಿಟ್ಟಿದ್ದಾರೆ. ಜೀವನದಲ್ಲಿ ಎಡರುತೊಡರುಗಳನ್ನು ಧೈರ್ಯದಿಂದ ಎದುರಿಸುವವನೇ ಶೋಧಕನಾಗಬಲ್ಲನು. ಜೀವನದ ವಿವಿಧ ಕ್ಷೇತ್ರಗಳಲ್ಲಿಯೂ ಅವರು ಶ್ರಮಿಸಿದ್ದಾರೆ. ಬಾಲ್ಯದಲ್ಲಿ ಹೊಗೆಸೊಪ್ಪು ಸೇದಿದರು. ಮಾಂಸ ತಿನ್ನಲು ಯತ್ನಿಸಿದರು. ಯೋಗ್ಯ 'ಇಂಗ್ಲಿಷ್ ನಾಗರೀಕ'ನಾಗಲು ಯತ್ನಿಸಿದರು. ತನ್ನ ಆಹಾರದಲ್ಲಿ ಶೋಧನೆ ನಡೆಸಿದರು. ಖರ್ಚನ್ನು ಕಡಿಮೆ ಮಾಡಿದರು. ಮೌನವ್ರತವನ್ನು ಆಚ್ಚರಿಸಿದರು. ಸ್ವೇಚ್ಛಾಮಯ ಜೀವನಕ್ಕೆ ತೊಡಗಿದರು. ಆಫ್ರಿಕಾದಲ್ಲಿ ತಮ್ಮ ಶೋಧನಾಮಂದಿರವನ್ನು ಏರ್ಪಡಿಸಿದರು. 'ಟಾಲ್‌ಸ್ಟಾಯ್ ಫಾರ್ಮ್' ತೆರೆದರು. ಶುಚಿತ್ವ, ನೈಸರ್ಗಿಕ ಚಿಕಿತ್ಸೆಗಳ ಕಡೆ ಶ್ರಮಿಸಿದರು. ಕ್ರೂರ ಶಸ್ತ್ರಾಗ್ರಹದ ಅವಿಷ್ಕಾರ ಮಾಡಿದರು. ಹಿಂಸಾಸಕ್ತ ಜಗತ್ತಿಗೆ ಶಾಂತಿಯ, ಪ್ರಗತಿಯ ಮಾರ್ಗವನ್ನು ತೋರಿಸಿದರು. ಅವರು ಉಪವಾಸದ ರಂಗದಲ್ಲಿ ಶೋಧನೆ ಗಿಳಿದರು. ಅದು ಜಗತ್ತಿನ ಸರ್ವಕಕ್ಷ ಆಯುಧವೆಂಬುದನ್ನು ಎತ್ತಿತೋರಿಸಿದರು. ಮೌನವರತ್ನಿಯ ಪರಸ್ಪರ ಸಂಶೋಧ, ರಾಷ್ಟ್ರರಾತ್ಮಗಳಲ್ಲಿಯು ಬಂಧುತ್ವ, ಜಾತಿಜಾತಿಗಳೊಳಗಿನ ಮೈತ್ರಿ ಈ ಪ್ರತಿಯೊಂದು ಕ್ಷೇತ್ರದಲ್ಲಿಯೂ ಶೋಧನೆ ಗೈದಿದರು. ಹಾದಿಹುಲ್ಲು ಜಗತ್ತಿನ ಜೀವನ ಸತ್ಯವಾಗಿ ಮಾಡಿದರು. ಸತ್ಯ

# ಬೆಳಕಿನ ಬಾಳು.

ಲೇ:—ಬಿ. ಡಿ. ಗಣಪತಿ.

ವು ಮಾನವತೆಯ ಭಾಗ್ಯದೀಪವೆಂದರು. ಅಹಿಂಸವು ಜಗತ್ತಿನ ಉದ್ಧಾರ ಮಾರ್ಗವೆಂದು ಸಾರಿದರು. ಹೀಗೆಯೇ ತಮ್ಮ ಸತ್ಯಶೋಧನಾಮಾರ್ಗದಲ್ಲಿ ಕೃಮಶಃ ಮೇಲೇರುತ್ತಾ ಮುನ್ನಡೆದರು. ತಮ್ಮ ಅಂತರಂಗ ಗುರಿಯನ್ನು ತಲಪಿದರು. ಎಡಗೆನ್ನೆಗುಂಡು ಬಿದ್ದಾಗ ಹಸನ್ಮುಖರಾಗಿ 'ಹಾ ರಾಮ್ ಹಾ ರಾಮ್' ಹೇಳಬೇಕಾದರೆ ಅದು ಮುಕ್ತಾತ್ಮವಸಗಳ್ಳಿದೆ ಬೇರೆಯಪರಿಂದ ಸಾಧ್ಯವಿಲ್ಲ. ಮಹಾತ್ಮರು ತಮ್ಮ ಶೋಧನೆಯಿಂದ ಗುರಿಮುಟ್ಟಿದರು. ಸತ್ಯವನ್ನು ಅರಿತರು. 'ಜಗತ್ತಿನಲ್ಲಿ ನಿಸ್ಪಲವಾಗದ ಒಂದೇ ಪ್ರಯತ್ನವಿದ್ದರೆ ಅದು ದೇವರ ಅನ್ವೇಷಣೆ.' (God is the one Being who is never sought in vain.)

### ಸನ್ಯಾಸಿ.

೧೯೧೫ರಲ್ಲಿ ಮಹಾತ್ಮಾಗಾಂಧೀಜಿಯವರು ಗೋಖಲೆಯವರ ಒಂದು ಭಾವಚಿತ್ರವನ್ನು ಅನಾವರಣ ಮಾಡುತ್ತಾ "ಹರಕು ಬಟ್ಟೆಯ, ಮಾಸಿದ ವಸ್ತ್ರದ ಜನತೆಯಲ್ಲಿ ದೇವರಿದ್ದಾನೆ ಎಂಬ ಸ್ಫೂರ್ತಿಯನ್ನು ಕೇಳಿದೊಡನೆಯೇ ನಾನು ನನ್ನ ಬಟ್ಟೆಯನ್ನು ನೋಡಿದೆ. ಅದು ಹೆಂದಿರಲಿಲ್ಲ. ಬೆಳಿದಂಗಳಂತೆ ಬೆಳ್ಳಗಿತ್ತು. ದೇಶದು ನನ್ನ ಉಂಪರ್ಯದಲ್ಲಿ ಇನ್ನೂ ಆಸನ ಪಡೆದಿಲ್ಲ" ಎಂದು ಹೇಳಿದರು. ಮಹಾತ್ಮರ ಸನ್ಯಾಸಿ ಜೀವನವ ಚೈತ್ರವನ್ನು ಈ ವಾಕ್ಯ ಕೊಡುತ್ತದೆ. ಜನ ಸಾಮಾನ್ಯರ ಜೀವನ ಮಟ್ಟಕ್ಕಿಂಥಾ ಮೇಲಿನ ರೀತಿಯ ಜೀವನವು ಚೋರತನಕ್ಕೆ ಕಡಿಮೆಯಲ್ಲ. ಈ ತತ್ವವನ್ನು ಆಚರಿಸಿಯೇ ಅವರು ಬಡವರಲ್ಲಿ ಬಡವರಾದರು. ಬಡಲೈತನಂತೆ ಜೀವಿಸ ತೊಡಗಿದರು. 'ನಗ್ನ ಫಕೀರ' ನೆಂಬ ಬಿರುದನ್ನುಗಳಿಸಿದರು. ಅವರ ಆಶ್ರಮವು ಕೈತನ ಕುಟೀರ. ಅವರ ಉಡಿಗೆಯು ಎಂಡು ತುಂಡು ಬಳ್ಳಿಟ್ಟೆ. ಅವರ ಆಹಾರವು ಅಡಿನ ಪಾಲು, ಒಂದೆರಡು ಹಣ್ಣು ಹಂಪಲು 'ದೇವರ ಅಸಂಖ್ಯ ಹೆಸರುಗಳಲ್ಲಿ ದರಿದ್ರನಾರಾಯಣನೆಂಬುದೇ ಎಲ್ಲದಕ್ಕಿಂತಲೂ ಸವಿಶ್ರವಾದುದು.' ಎಂದ ವರ ಭಾವನೆ. ಬ್ರಹ್ಮಚರ್ಯವನ್ನೆಭ್ಯಸಮೂಡಿ ಶರೀರದ ಸರ್ವಾಂಗಗಳನ್ನೂ ತಮ್ಮ ಹಿಡಿತದಲ್ಲಿಟ್ಟವರಿಗಿಂಥಾ ದೊಡ್ಡ ಸನ್ಯಾಸಿ ಯಾರು? ಡಾಕ್ಟರುಗಳು ಮಹಾತ್ಮರ ಅಪೆಬಿಟ್ಟು ವೃಷಣ ಚೈತ್ರರಾಗಿದ್ದಾಗ ನಾನು ಸಾಯೆನೆಂದು ಸ್ಪಷ್ಟವಾಗಿ ಹೇಳಿ ಬದುಕಿದರು. ರಾಮನ ನಿಸ್ಸೀಮ ಭಕ್ತರವರು. ಅವಂ ಪ್ರಾರ್ಥನಾ ಸಭೆಗಳು ಸ್ವಾರ್ಥತೆಯ ನುರಿ ಭೂನಿರ್ಯಂಥಾ ವಾತಾವರಣದಲ್ಲಿ ಸಚೇತನರಾಗುತ್ತಿದ್ದವು. ಆತ್ಮ ಶುದ್ಧಿಯ ಅವರ ಪ್ರಧಾನವು ಅವರು ಮುಟ್ಟಿದವರ ಮನ ಪಾವನಗೊಳಿಸುತ್ತಿತ್ತು. ಅವರು ಮಾತಾಡಿಸಿದವರಲ್ಲಿ ಚೇತನವನ್ನು ಹುಟ್ಟು ಸುತ್ತಿತ್ತು. ಕಾಲ್ಚಕ್ರಿಂಥಾ ಕಡೆಯಾಗಿದ್ದ ಭಾರತೀಯರನ್ನು ಕೆಚ್ಚೆದೆಯ ಕಟ್ಟಾಳುಗಳನ್ನಾಗಿ ಮಾಡಿದ ಪ್ರತಿಭೆಯ ಅವರ ಪಾವನ ಚರಿತ್ರೆಯ ಫಲ. ಒಬ್ಬನ ಆತ್ಮ ಪಾವಿತ್ರ್ಯವು ಅಸಸ ಸುತ್ತಮುತ್ತಲಿನ ಜನರಲ್ಲಿಯೂ ಅವರ ಪ್ರಭಾವವನ್ನು ಬೀರುವದು. ಮಹಾತ್ಮರ ಸನ್ಯಾಸವು ಪುರಾಣದ ಏಂಟೆಕಾಲಿನ, ಗುಹೆಯ, ಇಲ್ಲವೇ ಗೋಡಾರಣ್ಯದ ಸನ್ಯಾಸವಲ್ಲ. ಮಹಾತ್ಮರ ಸನ್ಯಾಸವು ಪ್ರಕೃತಿಯ ಮಡಿಲಲ್ಲಿ. ಜನ ತೆಯು ನಿಬಿಡರಾಶಿಯಲ್ಲಿ. ಆಕಾಶದ ನಕ್ಷತ್ರಗಳೇ ಜಿವರ ಪೂರ್ವದೀಪಗಳು. ಪ್ರಭಾತದ ವಿಕಸಿತ ಕುಸುಮಗಳು, ರಸ ಭಾರದಿಂದ ಬಗ್ಗಿದ ಪಣ್ಣು ಹಂಪಲುಗಳು ನಿಷ್ಕಲ್ಮಶ ಜಿವಿತ ಹೇಯುವ ನದಿನದಗಳು, ಇವೇ ಅವರ ಸ್ನೂಜ್ಯ ಸಹಕ್ಯಗಳು. ಇಡೀ ಪ್ರಕೃಂಚವೇ ಇವರದು. ದುಃಖಿತ ಜಗತ್ತಿನ ಕಷ್ಟಲು ಕವಿದ ಮೂರ್ಗದ ಬೆಳಕಾಗಿರುವ ಅಹಿಂಸಾ ಸಾಧಕರಿಗೆ ಆತ್ಮ ಪರೀಶುದ್ಧತೆ ಮತ್ತು ಆತ್ಮಯಜ್ಞವೇ ಸಾಧನಗಳು.

### ಕರ್ಮಯೋಗಿ.

ಕರ್ಮವು ಮಾನವನ ಜೀವನದ ಚಿಹ್ನೆ. ನಿಷ್ಕಾಮಕರ್ಮವೇ ಅತ್ಯುತ್ಕೃಷ್ಟ ಭಗವದ್ ಆರಾಧನೆ. 'ಬಡ ಜನರ ಸೇವೆ ಗಿಂಥಾ ಮಿಗಿಲಾದ ದೇವತಾರಾಧನೆ ಬೇರಿಲ್ಲ'ವೆಂಬುದೇ ಮಹಾತ್ಮರ ವಾಣಿ. ಈ ದೃಷ್ಟಿಯಿಂದಲೇ ಬಡವರ ಉದ್ಧಾರಕ್ಕಾಗಿ ಸ್ವದೇಶಿ ಚಳವಳವನ್ನು ಕೈಗೊಂಡರು. ಇದರಿಂದ ಕೆಲಸದ ಗೌರವವನ್ನು ಜನತೆಯಲ್ಲಿ ಹುಟ್ಟಿದರು. ಯಾವ ಕೆಲಸವೂ ಹೀನವಾದುದಲ್ಲ. ಮಹಾತ್ಮರ ಕರ್ಮಯೋಗದ ಸಂಕೇತವೇ ಚರಕವಾ. 'ನೂಲುವದು ಮತ್ತು ನೇಯುವದು ನಮ್ಮ ಮೇದಕಾಲವಿಂದಲೂ ಬಂನಿದೆ. ಈಜಿಪ್ಟ್ ದೇಶವು ಜಗದ್ವಿಖ್ಯಾತವಾದ ತನ್ನ 'ಸಿರಿಮಿಡು'ಗಳನ್ನೆ ಕಟ್ಟುವ ಮೊದಲು ರಾಜ ಹಮ್ಮುರಬಿಯು ತನ್ನ ಸಿದ್ಧಾಂತಗಳನ್ನು ಬರೆಯುವ ಮೊದಲು ಹಿಂದೂದೇಶವು ಭೌತಿಕ ಮತ್ತು ಅಧ್ಯಾತ್ಮಿಕತೆ ನೇಯಿಗೆಯನ್ನು ಪ್ರಾರಂಭಿಸಿದೆ! ವೇದಾಂತಿಯು (ತತ್ವವಾಯ) ಮನುಷ್ಯನ ಆತ್ಮವನ್ನು ಪರಿಶುದ್ಧಗೊಳಿಸಿ ಅಂತರಿಕ ಪಾವಿತ್ರ್ಯತೆಯ ವಸ್ತ್ರವನ್ನು ನೆಯ್ದಿದ್ದರೆ ನೆಯಿಗೆಯವನು (ತಂತುವಾಯ) ಮಾನವನ ಸಗ್ಗತೆಯನ್ನು ಮುಚ್ಚುವ ಬಟ್ಟೆಯನ್ನು ಅನಾದಿಯಿಂದಲೇ ತಯಾರಿಸಿದ್ದಾನೆ. ಈ ಎರಡರ ಸಮ್ಮಿಲನವು ಮಹಾತ್ಮರ ಚರಖಾಯೋಗದಲ್ಲಿ ಆಗಿದೆ. ಆರ್ಥಿಕ ದೃಷ್ಟಿಯಿಂದ ಚರಖಾವು ಭಾರತದ ಬಡತನವನ್ನು ನೀಗಿಸುವ ಮಾರ್ಗ. ನೈತಿಕ ದೃಷ್ಟಿಯಿಂದ ಮಾನವನನ್ನು ಮೇಲ್ಮಟ್ಟಕ್ಕೆ ಏರಿಸುವ ಸಾಧನವದು. 'ಅದು ಜೀವನ ಮಾರ್ಗದ ಸಾಧನವಾಗಿ ಭಿಕ್ಷಾಟನೆಯನ್ನು ನಿಲ್ಲಿಸುವದು. ಸೋಮಾರಿತನವನ್ನು ನೀಗಿ ಮನೋಸ್ಥೈರ್ಯವನ್ನು ಕೊಡುವದು. ಮಿಲಿಯೋತರ ಜನರು ಇದನ್ನು ಕೈಗೊಂಡರೆ ಮಾನವನ ಮುಖವನ್ನು ಇದು ದೇವರತ್ತ ತಿರುಗಿಸುವದು. ಚರಕಾವ ಪ್ರತಿ ಸುತ್ತೂ ಕೂಡ ಶಾಂತಿ, ಪ್ರೇಮ ಮತ್ತು ಸದ್ಭಾವನೆಯ ನೂಲನ್ನು ತಯಾರಿಸುತ್ತಿದೆ' ಎಂದು ಮಹಾತ್ಮರೇ ಹೇಳಿದ್ದಾರೆ. ಮಹಾತ್ಮರ ಸಾರ್ವತ್ರಿಕ ಪ್ರೇಮ ತತ್ವದಲ್ಲಿ ಖಾದಿಯೋಗವೇ ಕೇಂದ್ರ ಬಿಂದು. ಮಹಾತ್ಮರು ತನ್ನ ಅಂತಿಮದ ವರೆಗೂ ರಾಜಕೀಯ ಸನ್ಯಾಸಿಯಾಗಿ ಜನತೆಯ ಕಲ್ಯಾಣಕ್ಕಾಗಿ ದುಡಿದರು. ಸ್ವಾರ್ಥತೆಯ ಛಾಯೆಯಿಲ್ಲದೆ, ಫಲಾಪೇಕ್ಷೆಯಿಲ್ಲದೆ, ಯಾವುದೇ ಬಣ್ಣ ಬಡಿಯು ಇಲ್ಲದೆ ಜನತೆಗಾಗಿ ದುಡಿದ ಮಡಿಲಿಯು ಕರ್ಮಯೋಗವಲ್ಲದೆ ಬೇರೇನು? ಆದ್ದರಿಂದಲೇ ತಾನು ರೈತ, ಕಾರ್ಮಿಕ ಎಂದು ಕೊಳ್ಳುವದರಲ್ಲಿ ಗಾಂಧೀಜಿಗೆ ಸಂತೋಷ ವಿತ್ತು. 'ಸಾವಿನ ಮುಬದಲ್ಲೂ ಇತರರಿಗೆ ಸಹಾಯ ಮಾಡು. ಸಾವಿರ ಬಾರಿ ಮೋಸಹೋಡಲ್ಪಟ್ಟರೂ ಅವಿಶ್ವಾಸದ ಪ್ರಶ್ನೆ ಬೇಡ. ಕೇವಲ ನಿನ್ನ ಕರ್ಮದ ಕಡೆಗೆ ಕಣ್ಣಿಡು. ಬಡವಾಗಿ ನಿನ್ನ ಸಹಾಯ ಮಾಡ ಅವರ ಹೊಗಳಿಕೆಯನ್ನು ಕಾಯಬಾದರು. ಅವರ ಸೇವೆ ಮಾಡಲು ದೊರೆತ ಸಂದರ್ಭಕ್ಕಾಗಿ ಅವರನ್ನು ಅಂಗಾಧಿಸು. ಇದು ಕರ್ಮಯೋಗಿಯ ಮಾರ್ಗ.' ಈ ದೃಷ್ಟಿಯಿಂದ ಮಹಾತ್ಮರು ಆತ್ಯುಚ್ಚ ಕರ್ಮಯೋಗಿ.

### ಕವಿ ಹಾಗು ಕಲಾಕಾರ.

"ಕಲೆಯೇ ಕರ್ಮ. ಹಸಿದ ಮಿಲಿಯೋತರ ಜನರು ಕೇವಲ ಅನ್ನದ ಹಾಡನ್ನು ಅಪೇಕ್ಷಿಸುತ್ತಿದ್ದಾರೆ. ಆ ಹಾಡನ್ನು ಒದಗಿಸುವ ಕವಿಯೇ ನಿಜವಾದ ಕಲಾಕಾರ. ಮಹಾತ್ಮರು ಅಹಮ್ಮದಾಬಾದ್ ರಾಷ್ಟ್ರೀಯ ಸಂಗೀತ ಸಭೆಯವರನ್ನು ಕುರಿತು ಹೇಳಿದ ಮಾತುಗಳವು. 'ಭಾರತದ ಮಿಲಿಯೋತರ ಮನೆಗಳಲ್ಲಿ ಸಂಗೀತ ಕೇಳಿ ಬರಬೇಕಾದರೆ ನೀವು ಖಾದಿ ಧರಿಸಬೇಕು. ನೂಲು ಮಾಡಬೇಕು. ಇಂದಿನ ನಮ್ಮ ಸಂಗೀತವು ಕರ್ಣಾನಂದಕರವೇನೋ ಹೌದು. ಆದರೆ ಬಡಗುಡಿಸಲಿನವನಿಗೆ ಆದರ ಭಾಗ್ಯವೆಲ್ಲಿದೆ? ನಿಮ್ಮ ಸಂಗೀತ ಹರಕು ಗುಡಿಸಲನ್ನು ಮುಟ್ಟುವಂತಾಗಲಿ" ಎಂಬುದೇ ಅವರ ದೃಷ್ಟಿ. ಮಹಾತ್ಮರಿಗೆ ಜೀವನವೇ ಸಂಗೀತ. ಜೀವನದಲ್ಲಿ ಮಾಡಬೇಕಾದ ಕರ್ಮವೇ ಕಲೆ ಮಹಾತ್ಮರ ದಂಡಿಯಾತ್ರೆಯ ಉಪಮೆಯು ಸನ್ನಿವೇಶವು ಸಂಗೀತ ಹಾಗೂ ಕಲಾಭರಿತವಾದುದು. ಮಹಾತ್ಮರು ಸಾಂದರ್ಯೋಪಾಸಕರು. ಹಿಮಾಲಯದ ಗಾಂಭೀರ್ಯ, ಅಲ್ಲಹಾಬಾದಿನ ತ್ರಿವೇಣಿ, ಭಾರತೀಯ ವಾದವಸ್ತ್ರ ಅನುಪಿಷ್ಟ ತೊಳೆಯುತ್ತಿರುವ ಕನ್ಯಾಕುಮಾರಿ ಇವುಗಳಿಂದಾಗುವಷ್ಟು ಸಂತೋಷ ಅವರಿಗೆ ಕಾಗದದ ಮೇಲೆ ಬರೆದ ಚಿತ್ರದಿಂದ ಆಗಲಾರದು (When I admire the wonders of the sunset or the beauty of the moon, my Soul expands in worship of the Creator) 'ಸೂರ್ಯಾಸ್ತಮನದ ಇಲ್ಲವೇ ಚಂದ್ರನ ಸೌಂದರ್ಯದ ಆಶ್ಚರ್ಯಕಾರಕ ಚಿತ್ರವನ್ನು ನೋಡಿದಾಗ ಸೃಷ್ಟಿಕರ್ತನ ಆರಾಧನೆಯಲ್ಲಿ ನನ್ನಾತ್ಮವು ವಿಕಸಿತಗೊಳ್ಳುವದು' ಎಂದು ಮಹಾತ್ಮರು ಹೇಳಿರುವರು ಒಮ್ಮೆ ವಿಶಾಲೆಯ ರಾ

ಡೆಯು ಕೆಲವು ಹೂಗಳನ್ನು ತಂದು ಮಹಾತ್ಮರಿಗೆ ಕೊಟ್ಟಾಗ ಕಣ್ಣಿನಲ್ಲಿ ನೀರು ತುಂಬಿ, ಗದ್ಗದ ಸ್ವರದಿಂದ ಮಹಾತ್ಮರು ಹೇಳಿದರು, 'ಮರಗಿಡಗಳೂ ನಮ್ಮಂತೆಯೇ ಜೀವವಿರುವ ವಸ್ತುಗಳು. ಅವೂ ಕೂಡಾ ಜೀವಿಸುತ್ತವೆ. ಉಸಿರಾಡುತ್ತವೆ. ನಿದ್ರಿಸುತ್ತವೆ' ವರ್ಡ್ಸ್‌ವರ್ತ್ ಕವಿಯಂತೆ ಗಾಂಧೀಜಿಯು ಪ್ರಕೃತಿ ಪ್ರೇಮಿ. ನಿಜವಾದ ಕಲೆಯು, ನೈಜವಾದ ಸಂಗೀತವು, ಸತ್ಯವಾದ ಸೌಂದರ್ಯವು ಆತ್ಮದ ಪರಿಚಯ ಮಾಡುವ ಸಾಧನವಾಗಬೇಕು. 'ಆದ್ದರಿಂದ ನನ್ನಲ್ಲಿ ಸಾಕಷ್ಟು ಸಂಗೀತವಿದೆ, ಕಲೆಯಿದೆ. ಸೌಂದರ್ಯವಿದೆ. ನನ್ನ ಕೋಣೆಯಲ್ಲಿ ಯಾವ ವಸ್ತುಗಳೂ ಇಲ್ಲದಿರಬಹುದು. ನನ್ನ ಕೋಣೆಗೆ ಮಾಡೇ ಇಲ್ಲದಿರಬಹುದು. ಆದರೆ ಆಕಾಶದ ತಾರೆಗಳ ಸೌಂದರ್ಯ ನನಗೆ ಹೊಳೆಯಲಿ. ನೈಸರ್ಗಿಕ ನೈಜ ಕಲೆ ತೋರಲಿ. ಆತ್ಮದ ಸತ್ಯ ಸಂಗೀತ ಕೇಳಲಿ.' ಹೊರಗಿನ ಸೌಂದರ್ಯವು ಮನುಷ್ಯನ ಅಂತರಿಕ ಸತ್ಯತೆಯನ್ನು ಪ್ರತಿಬಿಂಬಿಸುವದಾದರೆ ಮಾತ್ರ ಅದಕ್ಕೆ ಬೆಲೆ ಇದೆ. ಆದ್ದರಿಂದ ಸೌಂದರ್ಯವನ್ನು ಸತ್ಯದ ಮಾರ್ಗದಲ್ಲಿ ನೋಡಬೇಕು. ಆಗ ಮಾತ್ರ ಕಲೆಯು ಉದಯವಾಗುವದು. 'ಸತ್ಯದ ಅನ್ವೇಷಣೆಯು ಪ್ರಧಾನು. ಇದರ ಸಾಧನೆಯೂದರೆ ಸೌಂದರ್ಯ, ಕಲೆ, ಸಂಗೀತಗಳೆಲ್ಲವೂ ಬರುವವು. ಅಂತರಿಕತನ್ನು ಪತಿಬಿಂಬಿಸದ ಬಾಹ್ಯವು ಅರ್ಥಹೀನವಾದದ್ದು.' ಆದ್ದರಿಂದ ಜೀವನದ ಸತ್ಯಚಿತ್ರವನ್ನು ಚಿತ್ರಿಸದ ವಸ್ತುವು ಗಾಂಧೀಜಿಗೆ ಕಲೆಯೆಲ್ಲ. ಆತ್ಮದ ಕೃತಿಯನ್ನು ಹೊರಗೆಡಹದ ಸಂಗೀತವು ಸಂಗೀತವಲ್ಲ, ಹೃದಯದ ಸುಂದರತೆಯನ್ನು ತೋರ್ಪಡಿಸದ ಸೌಂದರ್ಯವು ಸೌಂದರ್ಯವೆಲ್ಲ.

### ಕ್ರಾಂತಿಕಾರ.

'ದೇವರಿಗಿಂಥಾ ದೊಡ್ಡ ಕ್ರಾಂತಿಕಾರ ಬೇರೊಬ್ಬನಿಲ್ಲ. ಬಸಿಲಿದ್ದಲ್ಲ ಮಳೆ ಹೊಡೆಸುವನಾತ. ಶಾಂತಿಯಿದ್ದಲ್ಲಿ ಬಿರುಗಾಳಿ ತರುವನಾತ. ಪರ್ವತ ವಿರುವಲ್ಲಿ ಸಾಗರವನ್ನೂ, ಸಾಗರವಿರುವಲ್ಲಿ ಪರ್ವತವನ್ನು ನಿರ್ಮಿಸಬಲ್ಲನವನು. ಆಕಾಶವನ್ನು ನೋಡಿದಾಗ ನನಗೆ ಆಶ್ಚರ್ಯವಾಗುತ್ತದೆ. ಅದು ಇಂಗ್ಲೆಂಡಿರಲಿ ಯಾ ಇಂಡಿಯಾವಿರಲಿ ಒಂದೇ ಆಕಾಶ. ಒಂದೇ ಆಕಾಶದಲ್ಲಿ ಒಂದೆಡೆ ಬಿಸಿಲಾದರೆ ಮತ್ತೊಂದೆಡೆ ಮೋಡ, ಗಾಳಿ!" ಅದೇ ರೀತಿ ಮಹಾತ್ಮರ ಜೀವನವೂ ಕ್ರಾಂತಿಯ ಸಾಗರ. ಚಿಕ್ಕಂದಿನಿಂದಲೇ ಇಂಗ್ಲೆಂಡಿಗೆ ಹೋಗುವಾಗ ಸಮುದ್ರ ನಿಯಮಗಳನ್ನು ಮುರಿಯಲೇಕಾಯಿತು. ಇಂಗ್ಲೆಂಡಿಗೆ ಹೋದ ನಂತರವಾಗಿಯೂ ಜೀವನದಲ್ಲಿ ಒಡನಾಡಿಗಳಾಗಿ ಸಿಕ್ಕಿದವರು ಸಾಮಾನ್ಯ ಜನರಲ್ಲ. ಅಸಾಧಾರಣ ವ್ಯಕ್ತಿಗಳು. ಅವರು ಕೂಡಾ ಸಮಾಜದ ಕಟ್ಟಳೆಗಳನ್ನು ಮೀರಿದವರು. ಅವರಲ್ಲಿ ಒಬ್ಬರು ಕಪ್ಪು ಜನಾಂಗದವರು. ಅವರ ಸ್ನೇಹವನ್ನು ಸಂಪಾದಿಸಿದ್ದರಿಂದ ಗಾಂಧೀಜಿಯವರು ಸಮಾಜದ ಕಟ್ಟಳೆಗಳನ್ನು ಮೀರಿದವರಾಗಿ ಕಾಣಿಸಿಕೊಂಡರು. ಅವರು ಕಪ್ಪು ಜನಾಂಗದವರಿಗೆ ಸಹಾಯಕರಾಗಿ ಕೆಲಸ ಮಾಡಿದ

ಹದ್ದು ಬಸ್ಸುಗಳಲ್ಲಿ. ಅವರದು ನಾರ್ವೆಜ್ಞಿಕ ಸಾಗರ ಪ್ರೇಮ ಸ್ವೀಮಿಹ್ಯದಯವು ತಪ್ಪು ಹೆಜ್ಜೆ ಇಟ್ಟರೂ ತನ್ನ ಪ್ರಿಯನಳ್ಳುವನ್ನು ಪ್ರೀತಿಸುತ್ತದೆ ಅದರಿಂದ ತನಗೆ ಆಘಾತವಾದರೂ ಪ್ರೀತಿಸುತ್ತದೆ ತನಗೆ ಸರಿ ಇದ್ದಾಗ ಸೂಕ್ಷ್ಮ ಪ್ರೀತಿಸುವದು ಶುದ್ಧ ಸ್ವಾರ್ಥವಾಗಲಾರದು ಆದ್ದರಿಂದ ದುಃಖ, ಕಷ್ಟಗಳು, ಪತಿತರು, ಸಿರಿವಂತರು ಎಂಬ ಬೇಧ ಭಾವ ಗಾಂಧೀಜಿಯ ಪ್ರೇಮಕ್ಕಿಲ್ಲ ಅವರದು ಸೀಮಾತೀತ ಪ್ರೇಮ 'ಸರ್ವಾಂತರ್ಯಾಮಿ ಸತ್ಯದ ಜೀವನವನ್ನು ಪ್ರತ್ಯಕ್ಷ ನೋಡಬೇಕಾದರೆ ಸೃಷ್ಟಿಯ ಪ್ರತೀ ಸೀಚ ಪ್ರಾಣಿಯನ್ನೂ ತದ್ಭಿನ್ನವೆಯೇ ಪ್ರೀತಿಸಲು ಶಕ್ತನಾಗಬೇಕು.' (To see the all-pervading spirit of truth face to face one must be able to love the meanest of creation as oneself.)

ಸರ್ವಾಂತರ್ಯಾಮಿ

ಗಾಂಧೀಜಿಗೆ ಸಾವಿಲ್ಲ ಇಂಥ ಅವರು ಲೌಕಿಕ ಶರೀರ ಬಿಡುವದರಿಂದ ಮುಕ್ತರಾಗಿ ಸರ್ವಾಂತರ್ಯಾಮಿಯಾಗಿದ್ದಾರೆ ನಮ್ಮ ಜೀವ ಮಾನದಲ್ಲಿ ಅವರು ಸಾರ್ಥಕತೆ ಅಹಿಂಸಾಕಾರಗಳನ್ನು ಕಟ್ಟಿ ಬೆಸೆವ ಸೇವ ಕರಾಗಿ ಕಡೆ ಉಸಿರಿನ ತನಕ ಶ್ರಮಿಸಿದರು ಜಮುನಾ ನದಿಯ ರಾಮಘಾಟಿನಲ್ಲಿ ಅವರ ಭೌತಿಕ ಶರೀರವನ್ನು ಹೋಮಮಾಡಿ ಭಾರತದ ಪ್ರತಿ ವ್ಯಕ್ತಿಯ ಹೃದಯದಲ್ಲಿ ಸ್ಥಾನ ಪಡೆದು ಅಮರರಾಗಿರುವರು ಮಹಾತ್ಮರ ಜೀವನ ತೇಜಸ್ಸು ಭಾರತಕ್ಕೆ ಮಾತ್ರವಲ್ಲ, ಜಗತ್ತಿಗೆ ಇಡೀ ಜಗತ್ತಿಗೆ 'ಜಗತ್ತಿನೊಡನೆ ಸ್ನೇಹ ಬೆಳೆಸುವದೇ ನನ್ನ ಗುರಿ ನಾವು ಜಗತ್ತಿನ ಭ್ರಾತೃಭಾವಕ್ಕಾಗಿ ಬದುಕುವಾ, ಜಗತ್ತಿನ ಭ್ರಾತೃ ಭಾವಕ್ಕಾಗಿ ಮಡಿಯುವಾ' (My goal is friendship with the world. We shall live for world brotherhood and die for world-brotherhood) ಎಂಬುದೇ ಅವರಮತ ಭಾರತ ಸ್ವಾತಂತ್ರ್ಯವು ಅವರ ಪ್ರದಮ ಕರ್ತವ್ಯವಾಗಿತ್ತು ಇವನ್ನು ಸಾಧಿಸಿ ಜಗತ್ತಿನ ಉದ್ಧಾರಕ್ಕೆ ಹೆಣಗುವದು ಅವರ ಆಶಯವಾಗಿತ್ತು ಇದೇ ಮಾತನ್ನು ಅವರು 'Through realisation of freedom of India, I hope to realise and carry on the mission of the brotherhood of man' ಎಂದು ಹೇಳಿದ್ದಾರೆ 'ನನ್ನ ಧರ್ಮದಿಂದ ಮೂಡಿ ಬಂದ ನನ್ನ ದೇಶ ಭಕ್ತಿ ಮತ್ತು ಧಾರ್ಮಿಕ ಭಾವನೆಯು ಎಲ್ಲಾ ಜೀವ ಜಂತುಗಳಿಗೂ ಅನ್ವಯಿಸುತ್ತದೆ ನಾನು ನನ್ನಂತೆ ತಿಳಿಯುವದು, ಭ್ರಾತೃ ಭಾವವನ್ನು ತಿಳಿಯುವದು ಮನುಷ್ಯನೆಂದು ಕರೆಯಲ್ಪಡುವ ವರ್ಗವನ್ನು ಕುರಿತು ಮಾತ್ರವಲ್ಲ, ಭೂಮಿಯಲ್ಲಿ ಹರಿಯುವ ಕ್ರಿಮಿಗಳನ್ನು ಹುಳ ಹುಪ್ಪಡಿಗಳನ್ನೂ ಕೂಡ ಈ ರೀತಿ ನೋಡುವದು ನನ್ನ ಧ್ಯೇಯ' ಎಂದ ಮಹಾತ್ಮರ ದೃಷ್ಟಿ ಎಷ್ಟು ವಿಶಾಲವಾದುದು ಮಹಾತ್ಮರು ವಾರ್ಧಿವ ಶರೀರವನ್ನು ತ್ಯಜಿಸಿದ್ದರೂ ಅವರು ಚಿರಂಜೀವಿಗಳು ಭಾರತದ ಪ್ರತಿ ಧೂಳಿನ ಕಣಕಣ ಅವರಿಗೆ ಋಣಿಯಾಗಿದೆ. ಪ್ರತಿ ಮರಗಿಡಗಳೂ ಅವರ ನೇತೃತ್ವದಲ್ಲಿ ನಡೆದ ಚಳುವಳಿಯ ವಿಮಲವಾತ್ಮ ವರಣದಿಂದ ಪುಲಕಿತವಾಗಿವೆ 'ಮಹಾತ್ಮ ಗಾಂಧೀಕೀ ಜೈ' ಶಬ್ದವು ಭಾರತಭಾಗ್ಯಾಕಾಶದಲ್ಲಿ ಮೊಳಗುತ್ತಿದೆ. ಇನ್ನೂ ಸಹಸ್ರಾರು ವರ್ಷಗಳ ವರೆಗೆ ಇದು ಮೊಳಗುವದು ಭಾರತದ ನಾನೂರು ಮಿಲಿಯ ಜನರಲ್ಲಿ ನಾನಾರೂಪಿನಿಂದ ಗಾಂಧಿ ಅವತರಿಸಿದ್ದಾರೆ ಕೆಲವರಲ್ಲಿ ಪೂರ್ಣಾಯ ರೂಪದಲ್ಲಿದ್ದರೆ, ಕೆಲವರಲ್ಲಿ ಚಿರಖಾದ ರೂಪದಲ್ಲಿ. ಕೆಲವರಲ್ಲಿ ಸತ್ಯದ ರೂಪ ದಲ್ಲಿದ್ದರೆ, ಕೆಲವರಲ್ಲಿ ಅಹಿಂಸೆಯ ರೂಪ ದಲ್ಲಿ ಹಿಂದೂಧರ್ಮೀಯರು ಬದುಕಿರುವ ವರೆಗೆ, ಭರತಖಂಡವು ಉಳಿದಿರುವ ವರೆಗೆ ಮಹಾತ್ಮರು ಚಿರಂಜೀವಿಗಳು. ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಂದು ಕಾರ್ಯದಲ್ಲಿ. ಪ್ರತಿಯೊಂದು ಶರೀರದಲ್ಲಿ ಮಹಾತ್ಮರಿಂದ ಹರಿಸಲ್ಪಟ್ಟ ಜೀವನ ಪ್ರವಾಹವು ಹರಿಯುತ್ತಿದೆ. ಈ ಶಕ್ತಿಯೇ ಭಾರತವನ್ನು ಜಗತ್ತಿನ ದೃಷ್ಟಿಯಲ್ಲಿ ಎತ್ತಿ ಕಟ್ಟಿದೆ. ಮಹಾತ್ಮರ ಈ ವಿಮಲ ತತ್ವಗಳನ್ನು ನಾವು ಅನುಸರಿಸುವ ವರೆಗೆ ಮಹಾತ್ಮರು ಅಮರರು. ಭರತಖಂಡವೂ ಚಿರಂಜೀವಿಯಾಗಿ ಜಗತ್ತಿನ ಶಾಂತಿತೀರ್ಥಕೆಯಾಗಿ ಬೆಳಗುವದು. ಮಹಾತ್ಮರಿದು ಬೆಳಕಿನ ಜೀವನ ಈ ಜೀವನವು ದುಃಖ ಕಾಲದಲ್ಲಿ ನಮಗೆ ಚೇತನಕಾರಿಯಾಗಿ, ಅಜ್ಞಾನದ ಸಮಯದಲ್ಲಿ ಜ್ಞಾನ ಜ್ಯೋತಿಯಾಗಿ, ನಿರಾಶಯ ಸಂದರ್ಭದಲ್ಲಿ ಆಶಾಕಿರಣವಾಗಿ ನಮ್ಮನ್ನು ಕೈಹಿಡಿದು ಮುನ್ನೆಡೆಸಲಿ

"Lead kindly Light"

---

# ಗಾಂಧೀ ಜೀವನದ ಕೆಲವು ರಸಮಯ ಸನ್ನಿವೇಶಗಳು.

ಸಂಗ್ರಾಹಕ:—'ಗುಪ್ತ', ಮಡಿಕೇರಿ.

ಗಾಂಧೀಜಿ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹಡಗಿನಲ್ಲಿದ್ದಾಗ ಜಪಾನ್ ದೇಶದ ಪ್ರಸಿದ್ಧ ಕವಿಯೋನೆ ನೆಗೂಚಿ ನೋಡಲು ಬಂದಿದ್ದರು. ಬಹಳಕಾಲ ಶರೀರವಿಗಂಧೀಜಿಯನ್ನು ನೋಡಿ ಈ ಸಾಮಾನ್ಯ ವ್ಯಕ್ತಿಯೇ ಆಯಿಂದ ಇಂಗ್ಲೆಂಡಿನ ಅದ್ವಿತೀಯ ಜೀವನವನ್ನು ನಡಾಯಿಸಿದಾತ ಎನಿಸಿದ ಆಶ್ಚರ್ಯವಾಗಿ ಕವಿಗೆ. ಗಾಂಧೀಜಿಯ ಬಲಿಯ ಮೇಲೆ ಏನನ್ನೂ ಬಟ್ಟೆಯಲ್ಲ ಸುತ್ತಿ ಇಟ್ಟುಂತಿತ್ತು. ಅದೇನು ಎಂದು ಕವಿ ಕೇಳಿದರ ಅದು ಮಣ್ಣಿನ ಪ್ರೋಲ್ಟಿನು. ಎರೆಣ್ಣನ್ನು ಒದ್ದಮೊಡಹಗ ತಲೆಯ ಸುತ್ತಲೆ ಬಟ್ಟೆ ಕೊಂಡಿದ್ದರ. ಗಾಂಧೀಜಿಗೆ ರಕ್ಷಣೆಗೆ ಹೆಚ್ಚಾಗಿತ್ತು ಅಲ್ಲಿ ಗಾಯಪಟ್ಟು ಒಳಿಂಬಿ ಅವರು ಕಂಡುಕೊಂಡಿದ್ದರು ಕವಿಯೊಡನೆ ಗಾಂಧೀಜಿ ಹೇಳಿದರು 'ಹಿಂದೂಸ್ಥಾನದ ಮಣ್ಣಿನಲ್ಲಿ ನಾನು ಹುಟ್ಟಿದ್ದೇನೆ ಹಿಂದೂಸ್ಥಾನದ ಮಣ್ಣಿಗೆ ಈ ಗನನ್ನ ಲೀಂಬು' ಈ ಮಣ್ಣಲ್ಲಿ ಏನನ್ನು ನಗೆಯೇ ಲ್ಯೋ ತ್ತಾ

* * *

ಲಂಡನ್ನಿನ ಗಿಲ್ಡ್ ಹೌಸಲ್ಲಿ ಸನ್ನಿಸಿದ ಪೌರಕೂಟ ಗಾಂಧೀಜಿಗೆ ಮಾಜ್ಯತ್ವ ಪ್ರಧಾನ ಮಾಡಿ ಪ್ರೌಢ ಪ್ರಶಸ್ತಿಯನ್ನು ಪತ್ರವನ್ನು ಮಾತ ಗುತ್ತಿದ್ದರು. ಸಾವಿರಾರು ಜನರು ನೆರೆದಿದ್ದರು. ಅದೇ ದಿನ ಸಮನ್ನು ತೆರೆದ ಕಾಂಚನದ ಬಾಯಿಯಿಂದ ಬರುವ ಮಾತು ಎಲ್ಲರೂ ಉತ್ಸುಕರಾಗಿದ್ದರು ಅವರೆಲ್ಲರು ಆನೇಕ ಪ್ರಶ್ನೆ ಕೇಳಿದರು 'ನಮ್ಮಲ್ಲಿ ಎಂದು ಏನನ್ನೂ ಇಟ್ಟುಕೊಳ್ಳದಿರುವದೇಕೆ ?' ಗಾಂಧೀಜಿ ಹೇಳಿದರು. 'ನಮ್ಮ ದೆಂದು ಏನೂ ಇಟ್ಟುಕೊಳ್ಳದಿರುವದೆಂದ ರೆ ನಿಮ್ಮ ವೈಸ್‌ರಾಯಿನ ಬಟ್ಟೆಗಳನ್ನು ಕಳಚಿಬಿಡುವ ಪ್ರಾಗಲ್ಲಿ ನಿಮ್ಮ ಎಲ್ಲಿ ನ ಹೆಂದರ್ಕ ಜಂಟಿಯ ಮೂಸಪನ್ನೇ ತೆಗೆದಿಟ್ಟಂತೆ ನಿಮ್ಮ ಹೇಳಿರಿ, 'ಇದಾನಿದು ಹೀಗೆ ಹೇಳುತ್ತೀರಿ? ನಿಮ್ಮ ವೈಸ್‌ರಾಯಿ ಬಟ್ಟೆ ಇಡೆಯಲ್ಲ, ಏನೂ ಇಲ್ಲ ಎನ್ನುವದು ಹೇಗೆ?" ತಡಕ್ಕೆ ನಾನು ಹೇಳುವದಿಷ್ಟು ಈ ದೇಹವಿರುವ ತನಕ ಸನಾಜದ ಗೃಹಿಯರ ಅವಕ್ಕೆ ಏನಾದರೂ ಬೊದಿಸಲೇಬೇಕು. ತಿರಿದು ನಗುತ್ತಾ ಹೇಳಿದರು, 'ಇಲ್ಲಿರುವ ಯಾರಾದರೂ ಬೇಕಾದರೆ ಒಂದನ್ನು ತೆಗೆದುಕೊಳ್ಳಬಹುದು.'

* * *

ಇಂಗ್ಲೆಂಡಿಗೆ ಗಾಂಧೀಜಿ ಹೋದಾಗ ಅಲ್ಲಿಯ ಪತ್ರಿಕೆಗಳು ಅವರನ್ನು ವಿಚಿತ್ರ ರೀತಿಯಲ್ಲಿ ವರ್ಣಿಸಿದವು ಅವರ ವೈಚಾಲ್ಯ ಔದಾರ್ಯಗಳನ್ನು ಚಿತ್ರಿಸಿದರು. ಒಬ್ಬ ಪತ್ರಿಕೋದ್ಯೋಗಿಯು ಹದ್ದುಮೀರಿ ವರ್ಣಿಸುತ್ತಾ 'ಪ್ರಿನ್ಸ್ ಆಫ್ ವೆಲ್ಸ್' ಹಿಂದೂಸ್ಥಾನಕ್ಕೆ ಬಂದಾಗ ಗಾಂಧೀಜಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆಂದು ಬರೆದಿದ್ದ. ಗಾಂಧೀಜಿ ಅಕನನ್ನು ಕರೆಸಿ ಹೇಳಿದರು. 'ಅಯ್ಯಾ, ಕದುಬಡವನಾದ ಬೀದಿ ಗಡಿಯುವವನ ಮುಂದೆ, ಹೊಲೆಯನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿಯೇನು, ಸಾವಿರಾರ್ ವರ್ಷಗಳಿಂದ ಅವರನ್ನು ಕೆಳಗೆ ತುಳಿದು ಕೆಳದು ದಕ್ಕಾಗಿ ಅವರ ಕ್ಷಮೆ ಬೇಡಲ್ಲಿ ಅವರ ಕಾಲಧೂಳಿಯನ್ನು ನನ್ನ ತಲೆಯ ಮೇಲಿಟ್ಟುಕೊಳ್ಳಬಲ್ಲೆ. ಆದರೆ 'ಪ್ರಿನ್ಸ್ ಆಫ್ ವೆಲ್ಸ್' ಅಕ್ಷಿ ಚಕ್ರವರ್ತಿಯ ಮುಂದೆ ನಮಸ್ಕಾರ ಕೂಡ ಮಾಡಲಾರೆ.'

* * *

ಗಾಂಧೀಜಿ ದಕ್ಷಿಣಕ್ಕೆ ಬಂದಿದ್ದಾಗ ನವಲಾರಿ ಒಡೆರ ಎಂಬಲ್ಲಿ ಒಬ್ಬರಂಗ ಸಭೆ ಮಹಾತ್ಮರು ಹೊಂಗಸರ ವೈಮನೋಲಿನ ಒಡವೆ ಸಲಿಸಬೇಕಾಗಿ ಯೂರಿ ಸುಲಿದಿಟ್ಟಿ ಅನೇಕರು ತಮ್ಮೊಡವೆಗಳನ್ನು ಕೊಡುತ್ತಿದ್ದರು. ಕೌಮುದಿ ಇವಯ. ಸ್ವಿನ ಹುಡುಗಿ ಒಂಗಾರದ ಒಡೆಯೆಂಜನನ್ನು ಕೊಟ್ಟು ಹಸ್ತಾಕ್ಷರ ಬೇಡಿದಳು. ಬಾಪು ಒಡಯತೊಡಗಿದಾಗ ಇನ್ನೊಂದು ಕೈಯೂ ಒದಿಯಿತ 'ಬಂದೇ ಸಾಕ ಮ್ಮಾ ಹಸ್ತಾಕ್ಷರ ಕೊಡುತ್ತೇನೆ' ಗಾಂಧೀಜಿ ಹೇಳಿದರು. ಅದಕ್ಕೆ ಉತ್ತರವಾಗಿ ಕೌಮುದಿ ಕೊರಳಲ್ಲಿಂದ ಸರಪಣಿ ತೆಗೆದು ಕೊಟ್ಟಳು ಬಾಪು ಕೇಳಿದರು, 'ಅಲ್ಲಾ ಮ್ಮಾ ನಿಮ್ಮ ತಂದೆ ತಾಯಿಗಳನ್ನು ಕೇಳಬೇಡವೇ ಮಗ ?' ಕೌಮುದಿ ಮೊತಾಡಿಲಿಲ್ಲ. ಕವಿಗೆ ಕೈಹಾಕಿ ಓಲೆಯನ್ನು ಕಳಚಿದಳು. ಜನರೆಯ ಕಲ್ಲೋಲಿಯಂತೆ ನೋಡತೊಡಗಿತ್ತು. ಯೂರೋ ಹೇಳಿದರು. ಈ ನಸ್ತ್ರಗಳನ್ನು ಹರಾಜು ಹಾಕಿತ್ತಿರುವನೇ ಕಾವ ವಿಯ ತಂದೆ ಎಂದು ಆತನ ಕಣ್ಣಿನಲ್ಲಿ ಅಲೌಕಿಕವಾದ ಹೊಳಪು ಮಿನುಗುತಿತ್ತು. 'ಈ ಒಡವೆಯೇನೋ ಕೊಟ್ಟೆ ಕೌಮುದಿ. ಮತ್ತೆ ಅವನ್ನು ಎಂದೂ ಧರಿಸದಿದ್ದರೆ ಈ ತ್ಯಾಗಕ್ಕೆ ಬೆಲೆ ತಾಯಿ.' ಎಂದು ಬಾಪು ಎಂದರು ಕೌಮುದಿಗೆ ವಯಸ್ಸು ಎಳೆದಾದರೂ ಹೃದಯ ಬೆಳೆದಿದ್ದು ದೃಷ್ಟಿ ಕಂದಿನಿಂದ 'ಅಗಲ' ಎಂದಳು ಬಾಪುವಿನ ಮುಖ ಅರಳಿತು 'ಕೌಮುದಿ, ನೀನು ಕಳಚಿಕೊಟ್ಟ ಒಡವೆಗಿಂತಾ ನಿನ್ನ ತ್ಯಾಗವೇ ಹಿರಿಯ ಒಡವೆ ತಂಗಿ' ಎಂದರು

* * *

ಸಂಯುಕ್ತ ಪ್ರಾಂತದಲ್ಲಿ ಗಾಂಧೀಜಿ ಪ್ರಯಾಣಮಾಡುತ್ತಿದ್ದರು ಕಾರು ಮಿಂಚಿನ ವೇಗದಿಂದ ಸಾಗುತ್ತಿತ್ತು. ಕಾರಿನ ಗಾಲಿಹಿಡಿದು ಕಾರು ನಿಂತಿದ್ದ ಮರವಡಿಯಲ್ಲಿ ಗಾಂಧೀಜಿಯನ್ನು ನೋಡಲೆಂದು ಕಾತರಿದ್ದ ೧೫ ವರ್ಷದ ಮುದ್ದು ಯೊಬ್ಬಳು 'ನಮ್ಮಲ್ಲಿ ಯೂರು ಮಹಾತ್ಮಗಾಂಧಿ' ಎಂದು ಕಾಳ ತ್ತಾ ಮುಂದೆ ಬಂದಳು 'ಏಕೆ ತಾಯಿ ಆತನನ್ನು ಏಕೆ ಹುಡಕುತ್ತಿಯಮ್ಮಾ' ಗಾಂಧೀಜಿ ಕೇಳಿದರು 'ನಾನು ಆನೇಕ ವೀರ್ಧಯಾತ್ರೆ ಮಾಡಿದ್ದೇನೆ ಬದರಿಕಾಶ್ರಮಕ್ಕೆ ಹೋಗಿದ್ದೇನೆ. ಆದರೆ ರಾಮಕೃಷ್ಣರ ಅವತಾರವಿದ್ದಂತೆ ಈಗ ಮಹಾತ್ಮಗಾಂಧಿ ಆತನ ದರ್ಶನವಾಗದೆ ನನಗೆ ನಾವು ಬಾರದು' ಎಂದಳು ತಾನು ಯಾರನ್ನು ನೋಡಲು ಬಯಸುತ್ತಿದ್ದಳೋ ಅತನೊಡನೆಯೇ ಎತಾಡಿ ತ್ತಿರುವಳೆಂದು ತಿಳಿದು ಆಕೆಯ ಆನಂದಕ್ಕೆ ಪಾರವಿಲ್ಲ ಆಕೆ ಗಾಂಧಿ ದರ್ಶನಕ್ಕಾಗಿ ಬೆಳಗಿನಿಂದ ಲಲ್ಲಿ ನೀಡಿದ್ದಳು. ಅವಳಿಗೆ ನಡೆಯಲು ಸಾ ಕಾರು ಹತ್ತಿಡಿ ಮುಂದೆ ನಿಂತಿದ್ದರೂ ಆಕೆಗೆ ದರ್ಶನವಾಗುತ್ತಿರಲಿಲ್ಲ. ಆದರೆ ಭಕ್ತ

ಳ ಮೊರೆಗೆ ಭಗವಂತನು 'ನೆ' ಕಾರಹಾಕು ನನೇ?

* * *

ಸಾಬರಮತಿ ಆಶ್ರಮದಲ್ಲಿ ಮಲೇರಿ ಯೂ ಹಾವಳಿ ಬಹಳ. ಇದನ್ನು ನಿವಾ ರಿಸುವದು ಹೇಗೆಂದು ದೊಡ್ಡ ಪ್ರಶ್ನೆಯಾ ಗಿತ್ತು. ಬಂದ ವೈದ್ಯರನ್ನೆಲ್ಲ ಕೇಳಿ ಆ ಯಿತು. ಎಲ್ಲರೂ ಸೊಳ್ಳೆಪರದೆ ಉಪ ಯೋಗಿಸಿರಿ ಎನ್ನುತ್ತಿದ್ದರು. 'ಸೊಳ್ಳೆಪರ ದೆ ಎಲ್ಲರಿಗೂ ಸಿಕ್ಕೀತೇ? ಬಡವರಿಗೆ ಸಾ ಧ್ಯವಾದ ಉಪಾಯ ಹೇಳ' ಎಂದರು ಗಾಂಧೀಜಿ ಒಂದು ಸಾರಿ ಒಬ್ಬರು ಹೇ ಳಿದರು 'ಮೈಗೆ ಸೀಮೆಣ್ಣೆ ಸವರಿಕೊಂ ಡರೆ ಸೊಳ್ಳೆಗಳು ಉಪದ್ರಕೊಡಲಾರವು. ಅಂದಿನಿಂದ ಗಾಂಧೀಜಿ ಸೀಮೇಣ್ಣೆಯನ್ನು ಮಲಗುವ ಮುಂಚೆ ಸವರಿಕೊಳ್ಳುತ್ತಿ ದ್ದರು.

* * *

ಒಂದು ದಿನ ಯಾರೋ 'ಕಸ್ತೂರ್ಬಾ' ನಿಮ್ಮ ತಾಯಿಯೇ' ಎಂದು ಗಾಂಧೀಜಿ ಯವ್ನು ಪ್ರಶ್ನಿಸಿದರು. ಗಾಂಧೀಜಿಗೆ ಒಂ ದೆಡೆ ನಗು ಮತ್ತೊಂದೆಡೆ ಆನಂದ; 'ಹೌ ದು' ಎಂದರು. ಮರುದಿನ ಒಂದು ಸಭೆ. ಕಸ್ತೂರ್ಬಾ ಬಂದಿರಲಿಲ್ಲ. 'ತಾಯಿ ಬಂ ದಿಲ್ಲವೇಕೆ?' ಜನರು ಕೇಳಿದರು. ಗಾಂ ಧೀಜಿ ಹೇಳಿದರು, 'ಕಸ್ತೂರ್ಬಾನನ್ನು ನನ್ನ ತಾಯಿ ಎಂದು ಹೇಳಿದರೆ ಅಪರಾ ಧವಲ್ಲ. ಸಂತೋಷವೇ ಎನ್ನಬೇಕು. ಕ ಸ್ತೂರ್ಬಾ ಮತ್ತು ನಾನು ಮೂತಾಡಿ ಕೊಂಡು ನಮ್ಮ ದಾಂಪತ್ಯವನ್ನು ಬಿಟ್ಟ ದ್ದೇವೆ. ಅಂದಿನಿಂದ ಆಕೆ ನನ್ನ ತಾಯಾ ಗಿದ್ದಾಳೆ. ನನಗಾಗಿ ದುಡಿದಿದ್ದಾಳೆ. ಗೌರ ವವೆಲ್ಲ ನನಗೆ. ದುಡಿತವೆಲ್ಲ ಅವಳಿಗೆ. ನಾ ವು ಇಬ್ಬರೂ ಸನುವೆಂದು ಕೂತಿದ್ದರೆ ಹೊ ಟ್ಟೆಗಿಲ್ಲದೆ, ಬಟ್ಟೆ ಸಮಯಕ್ಕಿಲ್ಲದೆ ನನ್ನ ಕೆ ಲಸವೇ ನಿಂತು ಹೋಗುತ್ತಿತ್ತು. ಆಕೆ ನನ್ನ ಪೂತೆಯೂ ಹೌದು. ಸರ್ವಸ್ವವೂ ಹೌದು.'

* * *

ಒಮ್ಮೆ ದೀನಬಂದು ಆಂಡ್ರೂಸ್ ಮ ತ್ತು ಗಾಂಧೀಜಿ ಒಂದು ಕಾಲುವೆಯ ದಡ ದಲ್ಲಿ ಮೂತಾಡುತ್ತಾ ಕುಳಿತ್ತಿದ್ದರು. 'ದೊಡ್ಡ ಜೀವ ಸಂಣ ಜೀವವನ್ನು ತಿನ್ನು ವದು, ತಿಂದು ಬದುಕುವದು ಪ್ರಕೃತಿ ನಿ ಯಮ. ಮನುಷ್ಯ ಮೊಸಾಹಾರಿಯಾ ದರೆ ತಪ್ಪೇನಲ್ಲ' ಎಂದರು ದೀನಬಂದು. ಗಾಂಧೀಜಿ ರೇಗಿ ಹೇಳಿದರು. 'ನೀನು ಕ್ರಿಸ್ತಾನ. ನೀನೂ ಈ ಮೂತಾಡುವದೇ? ಏಸು ಅವತರಿಸಿದ್ದು ಜೀವ ನಾಶಕ್ಕಲ್ಲ; ಜೀ ವ ರಕ್ಷಣೆಗೆ ಎಂದು ನೀನು ನಂಬಿಲ್ಲವೇ? ಏಸುವಿನ ಬಾಳು ತ್ಯಾಗದ್ದು. ಹಿಂಸೆಯ ದ್ದಲ್ಲ. ನಿನಗಾಗಿ ಜಗತ್ತಿಗಾಗಿ ಆತ ತ್ಯಾ ಗ ಮಾಡಲಿಲ್ಲವೇ? ಜೀವಹರಣವಲ್ಲ. ಪೈ ಶೀಗುಣ; ಜೀವತ್ಯಾಗ ಅಲ್ಲವೇ?"

* * *

ಗಾಂಧೀಜಿಯವರು ನಿದ್ದೆಯಿಲ್ಲದೆ ಗೆ ದ್ದಿದ್ದರು. ಬೇಕೆನಿಸಿದಾಗ, ಬೇಕೆನಿಸಿದ ಷ್ಟು ಹೊತ್ತು ನಿದ್ರೆ ಹೋಗಬಲ್ಲರು. ಸು ತ್ತಲೂ ಕಾಂಗ್ರೆಸ್ಸಿನ ಗದ್ದಲ ಮೊಳಗುತ್ತಿ ರುವಾಗ ವೇದಿಕೆಯ ಮೇಲೆಯೇ ಕೂತು ಬದು ಹತ್ತು ನಿಮಿಷ ಲೆಕ್ಕ ಇಟ್ಟು ನಿದ್ದೆ ಹೋಗುತ್ತಿದ್ದರು. ಗಾಂಧಿ-ಇರ್ವಿನ್ ಒಪ್ಪಂ ದ ಕಾಲ. ಕೆಲವು ಯೂರೋಪಿಯನರು ಗಾಂಧೀಜಿಯವರನ್ನು ಕಾಣಲು ಬರುವ ದಾಗಿ ಗೊತ್ತು ಮಾಡಿಕೊಂಡಿದ್ದರು. ಗಾಂಧೀಜಿ ಅದಕ್ಕೆ ಗಂಟೆ ನಿಮಿಷಕ್ಕೆ ಮೊದ ಲು ತಮ್ಮ ಬಿಡಾರಕ್ಕೆ ಬಂದರು. 'ನನ ಗೆ ಸ್ವಲ್ಪ ನಿದ್ದೆ ಬೇಕು; ಸ್ವಲ್ಪ ಮಲಗುತ್ತೇ ನೆ' ಎಂದರು 'ಕೇವಲ ಗಂಟೆ ನಿಮಿಷವಿದೆ. ಏನು ನಿದ್ದೆ ಬಂದೀತು' ಎಂದರು ಬೆರ್ಲಾರ ವರು. 'ಹದಿನೈದು ನಿಮಿಷ ಸಾಕು' ಎಂದ ರು ಗಾಂಧೀಜಿ. ಸರಿ ಹದಿನೈದು ನಿಮಿ ಷ ನಿದ್ದೆ ಮಾಡಿ ಎದ್ದು ಗೆಳೆಯರ ಭೇಟಿಗೆ ಹೋದರು. 'ನಿಮ್ಮ ನಿದ್ರಾಶಕ್ತಿ ಅದ್ಭು ತವಾದುದು' ಎಂದರು ಬೆರ್ಲಾರವರು. 'ನಿದ್ದೆಯು ನನ್ನ ಹಿಡಿತ ಹೋದರೆ ನನಗೆ ಕೊನೆಗಾಲ ಬಂದಂತೆ' ಎಂದರು ಗಾಂ ಧೀಜಿ.

* * *

ದೆಲ್ಲಿಯಲ್ಲಿ ಒಬ್ಬ ಹೆಂಗಸಿಗೆ ತೀರ ಕೊನೆಯಕಾಲ. ರಾಮನಾಮ ಜಪಿಸು ತ್ತಿದ್ದಳು. ಗಾಂಧೀಜಿಯ ಅತೀರ್ವಾದ ಪಡೆದು ದೇಹತ್ಯಾಗ ಮಾಡಬೇಕೆಂದು ಬ ಯಕೆ. ಆದರೆ ಗಾಂಧೀಜಿ ಕಾನ್‌ಪುರದ ಲ್ಲಿದ್ದರು. ಅಲಹಾಬಾದಿಗೆ ಹೋಗುವಾ ಗ ದಾರಿಯಲ್ಲಿ ಳಿನಕ್ಕಾಗಮನದಾಸ ಬೆರ್ಲಾ ರವರು ಈ ವಿಚಾರ ಹೇಳಿದರು. ಗಾಂ ಧೀಜಿಗೆ ಸಮಯವಿರಲಿಲ್ಲ. ಆದರೂ ಕಾ ರಿನಲ್ಲಿ ಹೊರಟರು. ಹೆಂಗಸು ರಾಮನಾ ಮ ಹೇಳುತ್ತಾ ಹಾಸಿಗೆಯಲ್ಲಿ ಮಲಗಿದ್ದ ಳು. 'ಗಾಂಧೀಜಿ ಬಂದಿದ್ದಾರಮ್ಮ' ಎಂ ದು ಬೆರ್ಲಾರವರು ಹೇಳಿದರು. ಆಕೆ ನಂಬಲಿಲ್ಲ. ಮೂನವ ಜೀವನದ ಬಯಕೆ ಎಷ್ಟೇ ಕುದ್ದವಾಗಿದ್ದರೂ ಹೀಗೆ ಸುಲಭ ವಾಗಿ ಈಡೇರದೆಂದು ಆಕೆಯು ನಂಬಿಕೆ. ಗಾಂಧೀಜಿ ಬಂದರು. ಅವರನ್ನು ನೋ ಡಿ ಆಕೆಯು ಎದ್ದು ಕೂರಲು ಯತ್ನಿಸಿದ ಳು. 'ಮೈ ಯೆಲ್ಲಿ ತ್ರಾಣವಿರಲಿಲ್ಲ. ಕಣ್ಣಿನಿಂದ ಎರಡು ಹನಿ ಉರುಳಿದವು. ಆಕೆಯು ಅಖಂಡ ಶಾಂತಿಯೆಡೆಗೆ ನಡೆ ದಳು. ಮಹಾತ್ಮರ ದರ್ಶನಕ್ಕಾಗಿ ಮಾತ್ರ ಜೀವ ಹಿಡಿದಿದ್ದಳು.

---

## ಕಾಂಗ್ರೆಸ್ಸಿಗೆ ಗಾಂಧೀಜಿಯವರ ಅಂತಿಮ ಸಂದೇಶ.

ಮುಂದೆ ಕಾಂಗ್ರೆಸ್ಸಿನ ರಚನೆ ಹೇಗಾ ಗಬೇಕು ಎಂಬ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ತಮ್ಮ ನಿಧನಕ್ಕೆ ಕೆಲವು ಗಂಟೆಗಳ ಮೊದಲು ಕ್ರಾಂತಿ ಕಾರಕ ಸೂ ಚನೆಗಳನ್ನು ಕಾಂಗ್ರೆಸ್ ಘಟನಾ ತ್ಮಕ ಉಪಸಮಿತಿಗೆ ಸೂಚಿಸಿರುವರು. ಮ ಹಾತ್ಮರು ಇದನ್ನು ಬರೆದು ಜವಾಬ್ದಾರಿ ಯುತ ಕಾಂಗ್ರೆಸು ಮುಂದಾಳೊಬ್ಬರ ಕೈ ಯಲ್ಲಿ ಕೊಟ್ಟಿರುವರಂತೆ.

ಮಹಾತ್ಮರ ಸೂಚನೆಯಂತೆ ಕಾಂಗ್ರೆ ಸಿನಲ್ಲಿ ಕೇವಲ ಜನತೆಯ ಸೇವಕರು ಮಾತ್ರ ಇರತಕ್ಕದ್ದು. ಇದು ಅಹಿಂಸಾ ತತ್ವಬದ್ಧವಾದ ಶಿಸ್ತಿನ ತರಬೇತು ಪಡೆದ ಸಂಸ್ಥೆಯಾಗಿರತಕ್ಕದ್ದು. ಈಗಿರುವ ಕಾಂಗ್ರೆ ಸ್ ಸಂಸ್ಥೆಯನ್ನು ವಿಸರ್ಜಿಸಲು ಅವರ ವಿರೋಧವಿಲ್ಲ ಈ ವಿಸರ್ಜನೆಯ ನೇತೃ ರ ಭಾರತದ ಏಳು ಲಕ್ಷ ಹಳ್ಳಿಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ದೃ ಷ್ಟಿಯ ಸೇವೆ ಮಾಡಲು ತಯಾರಿರುವ ನಿ ಸ್ವಾರ್ಥ ಸೇವಕರ ತಂಡದಿಂದ ಕೂಡಿದ ಸಂಸ್ಥೆಯು ರಚನೆಯಾಗಬೇಕು. ಗಾಂ ಧೀಜಿಯವರ ಕಲ್ಪನೆಯಂತೆ ಕಾಂ ಗ್ರೆಸು ನಿಸ್ವಾರ್ಥ ಕೆಲಸಗಾರರಿಂ ದ ಕೂಡಿದ್ದು ಇಂಥಾ ಒಂದೊಂದು ತಂಡ ವು ತಮ್ಮ ಮುಂದಾಳುಗಳನ್ನು ತಾವೇ ಆರಿಸಿಕೊಳ್ಳಬೇಕು. ಈ ತಂಡಗಳ ಮುಂ ದಾಳುಗಳು ಅಖಿಲ ಭಾರತ ಮುಂದಾಳು ಗಳನ್ನು ಆರಿಸಬೇಕು. ಕೆಲಸಗಾರನೆಂದರೆ ಅವನು ಸದಾ ಖಾದಿ ಉಡುವವನಾಗಬೇ ಕು. ಬೀ, ಕಾಫಿ, ಮೊದಕ ಪಾನೀಯು ಗಳನ್ನು ಬಿಟ್ಟವನಿರಬೇಕು. ಎಲ್ಲಾ ಧ ರ್ಮ, ಜಾತಿಗಳನ್ನು ಸಮದೃಷ್ಟಿಯಿಂದ ನೋಡುವವನಾಗಿರಬೇಕು. ಈಗಿರುವ ಗ್ರಾಮೋದ್ಯೋಗ ಸಂಘಗಳೆಲ್ಲಾ ಈ ಸಂ ಸ್ಥೆಯಲ್ಲಿ ವಿಲೀನವಾಗಬೇಕು.

---


## Small-Savings Scheme of the Government of India.

## ಇಂಡಿಯಾ ಸರಕಾರದ ಚಿಕ್ಕ ಉಳುವರಿ ಯೋಜನೆ.

### ನೀವು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಂಡುಕೊಂಡಿರುವಿರಾ?

ನಿಮ್ಮ ವ್ಯಾಪಾರ ಉದ್ಯಮಗಳು ಕಡಿಮೆಯಾದರೆ ರೋಗಾಪತ್ತುಗಳು ಬಂದರೆ ಅಥವಾ ನಿಮ್ಮ ಮಕ್ಕಳ ವಿದ್ಯೆ ಮದುವೆ ವಗೈರೆಗೆ ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯವನ್ನು ಹೇಗೆ ಭದ್ರಪಡಿಸಿರುವಿರಿ?

**ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ನಿಮ್ಮ ಭವಿಷ್ಯವನ್ನು ಭದ್ರಪಡಿಸುವುವು.**

ನೀವು ನಿಮ್ಮ ಅಥವಾ ನಿಮ್ಮ ಕುಟುಂಬದ ಪ್ರತಿಯೊಬ್ಬ ಮೆಂಬರನ ಹೆಸರಿನ ಲ್ಲಿಯೂ ರೂಪಾಯಿ ರೀತಿಂದ ರೂ. 15,000/--ಬೆಲೆಯ ಸರ್ಟಿಫಿಕೇಟುಗಳನ್ನು ಪೋಸ್ಟಾಫೀಸಿನಿಂದಾಗಲಿ ಸರಕಾರದ ಏಜೆಂಟರ ಮುಖಾಂತರವಾಗಲಿ ಕೊಂಡು ಕೊಳ್ಳಬಹುದು.

18 ತಿಂಗಳ ನಂತರ ಸರಕಾರದವರು ನಿಮ್ಮ ಹಣವನ್ನು ಬಡ್ಡಿ ಸಮೇತ ಯಾವಾಗ ಬೇಕಾದರೂ ಮರುಪಾವತಿ ಮಾಡುವರು. 12 ವರುಷಗಳ ವರೆಗೆ ತೆಗೆದುಕೊಳ್ಳದಿದ್ದರೆ ನಿಮ್ಮ ಹಣಕ್ಕೆ ವರುಷ 1ರ 100ಕ್ಕೆ 4½ ರೂ. ಬಡ್ಡಿದೊರೆ ಯುತ್ತೆ. ಅಂದರೆ ಪ್ರತಿ 100 ರೂಪಾಯಿ 150 ಆಗುತ್ತೆ. ಅದಾಯ ತೆರಿಗೆ ಯಿಲ್ಲ. ಚಿನ್ನಕ್ಕಿಂತಲು ಉತ್ತಮ. ಬೆಂಕಿಯ, ಕಳ್ಳರ ಭಯವಿಲ್ಲ. ಸರ್ಟಿಫಿ ಕೇಟುಗಳು ಅಕಸ್ಮಾತ್ ನಾಶವಾಗಿ ಹೋದರೆ ಹೊಸ ಪ್ರತಿಗಳನ್ನು ಪಡೆಯ ಬಹುದು.

**ನಮ್ಮ ಪ್ರಧಾನ ಮಂತ್ರಿ ಮೂಸ್ಕೆ ಹಂಡಿತ ನೆಹರೂರವರು ಹೇಳುವುದೇನೆಂದರೆ:–**

**ಈ ವರೆಗೆ ಸರಕಾರದವರು ಹೊರಡಿಸಿದ ಯಾವುದೇ ಯೋಜನೆಯಲ್ಲಿಯೂ ಸಾರ್ವಜನಿಕರಿಗೆ ಅಪನಂಬಿಕೆಯಿತ್ತು. ಅದಕ್ಕೆ ಕಾರಣವೂ ಇತ್ತು. ಇನ್ನು ಮುಂದೆ ಅಂಥಾ ಅಪನಂಬಿಕೆಗೆ ಎಡೆಯಿಲ್ಲ. ಪ್ರತಿಯೊಬ್ಬನೂ ಚಿಕ್ಕ ಉಳಿತಾ ಯದ ಸಂಸ್ಥೆಗೆ ಸೇರಿ ಸಾಧ್ಯವಾದಷ್ಟು ಹಣ ಉಳಿಸಿರಿ. ಇದರಿಂದ ಉಳಿಸಿದವರ ಮತ್ತು ಇಡೀ ಜನಾಂಗದ ಅಭಿವೃದ್ಧಿಗೂ, ನಮ್ಮ ಮಾತೃಭೂಮಿಯ ಪುನಃಶ್ರ ಚನೆಗೂ ಸಹಾಯವಾಗುವುದು.**

**ಇಂದಿನಿಂದಲೇ ಪ್ರಯತ್ನಿಸಿರಿ. ಉಳಿತಾಯದ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.**

4–1 **ಕೊಡಗು ಸರಕಾರದ ಪ್ರತಿನಿಧಿ.**


---

## ಪ್ರಕಟಣೆ.

1. ಈ ಮೊದಲು ನಮ್ಮಲ್ಲಿ ವ್ಯಾಪಾರ ಮಾಡುತ್ತಿದ್ದಂತೆ ವ್ಯಾಪಾರಸ್ಥರಿಗೆ ಈ ಮಧ್ಯೆ ಕಾಫಿ ಹುಡಿ ಸಿಕ್ಕದೆ ಬಹಳ ತೊಂದರೆ ಆಗಿದೆ. ಇದಕ್ಕೆ ನಾವು ನಿಮ್ಮ ಕ್ಷಮೆ ಕೇಳಿಕೊಳ್ಳುತ್ತೇವೆ ಮತ್ತು ಪೂರಿನಿಂದ ಕಾಫಿ ಬಾರದೆ ಇದ್ದದ್ದೇ ಇದಕ್ಕೆ ಕಾರಣವೆಂದು ತಿಳಿಸುತ್ತೇವೆ.

ಇನ್ನು ಮುಂದಕ್ಕೆ ಕಾಫಿ ಹುಡಿಬೇಕಾದವರು ದಯವಿಟ್ಟು ಖಾಲಿ ಟಿನ್ನು ಮತ್ತು ರಾತಲಿಗೆ ರೂ. 1-7-0 ಪ್ರಕಾರ ಹಣ ಕಳುಹಿಸಿ ಕೊಟ್ಟಲ್ಲು ಅವರವರ ಸ್ಥಳಕ್ಕೆ ಬಸ್ಸಿನಲ್ಲಿ ಮುಫತ್ತಾಗಿ ಬಟವಾಡೆ ಮಾಡುತ್ತೇವೆ

2. ಮೂಳೆ ಮಣ ಬಂದರ ರೂ. 0-12-0 ಯಂತೆ ಫೈಜರ್‌ಪೇಟೆಯಲ್ಲಿ ಡೆಲಿವರಿ ತೆಗೆದುಕೊಳ್ಳುತ್ತೇವೆ.

3. ಜಮ್ಮು ಮತ್ತು ಸಾಗಿನ ಜಾಗಗಳಿಂದ ನೀಗೆ ಕಾಯಿ ಜಮಾಯಿಸಿ ಮಾರತಕ್ಕವರು ವಡನೆ ಅವರವರಿಗೆ ಸಮ್ಮಂಧಪಟ್ಟ ನಾಡು ಕಚೇರಿಗಳಿಗೆ ಬರೆದು ಪಾಸು ತೆಗೆದುಕೊಳ್ಳಬೇಕಾಗಿದೆ. ನೀಗೆ ಕಾಯಿ ವ್ಯಾಪಾರ ಮಾಡತಕ್ಕಂಥವರು ನಮ್ಮ ಮಿಲ್ಲಿಗೆ ಸರಬರಾಯಿ ಮಾಡಲು ಒಪ್ಪಿವುದಾದರೆ ತಕ್ಕ ಎಗ್ರಿಮೆಂಟಿನ ಮೇರೆ ಹಣ ಅಡ್ವಾನ್ಸು ಕೊಡಲಾಗುವುದು.

**ನೇಚೇಜಿಂಗ್ ಪ್ಲೈಕ್ಟರ್ಸ್,**
**ಡಿ. ಕೂರ್ಗ್ ಜನರಲ್ ಇಂಡಸ್ಟ್ರೀಸ್**
4–4 **ಲಿಮಿಟೆಡ್, ಮಡಿಕೇರಿ.**

# ಕತ್ತಲು ಕವಿದ ಜಗತ್ತು ಕಣ್ಣೀರ ಕಡಲಲ್ಲಿ.

### ಇಂಗ್ಲೆಂಡ್

ಮಹಾತ್ಮರ ನಿಧನದ ಬಗ್ಗೆ ಮುಖ್ಯ ಮಂತ್ರಿ ಆಟ್ಲಿಯವರು ತಮ್ಮ ದೇಶದ ಸಂತಾಪವನ್ನು ವ್ಯಕ್ತಮಾಡುತ್ತಾ, 'ಮಹಾತ್ಮಾ ಗಾಂಧಿಯವರು ಜಗತ್ತಿನ ಆದ್ವಿತೀಯ ವ್ಯಕ್ತಿಗಳಲ್ಲಿ ಒಬ್ಬರು. ಸನ್ಯಾಸಿ ಜೀವನವನ್ನು ಆನುಸರಿ ಮಿಲಿಯೊಂತರ ಜನರ ಭಾಗ್ಯಜ್ಯೋತಿಯಾಗಿದ್ದರು. ಈದಿದ ಕಾಲುಶತಮಾನದಲ್ಲಿ ಹಿಂದೀ ಸಮಸ್ಯೆಯಲ್ಲಿ ಇವರದೇ ಕಡೆ ವಾಣಿಯಾಗಿತ್ತು. ಮಾನವ ಕೋಟಿಯ ಅಗ್ರಗಣ್ಯ ಸೇವಕನ ನಿಧನಕ್ಕೆ ನಮ್ಮ ಹೃತ್ಪೂರ್ವಕ ಸಂತಾಪಗಳು' ಎಂದಿರುವರು.

ತಂದಿನ ಅರಸರಾದ ಆರನೇ ಜಾರ್ಜ್‌ರು ಈ ರೀತಿ ತಿಳಿಸಿರುವರು. 'ಗಾಂಧಿಯವರ ಮರಣ ವಾರ್ತೆಯನ್ನು ನಾನತೀವ ದುಃಖದಿಂದ ಕೇಳಿದ್ದಿವಿ. ಭಾರತೀಯರಿಗೆ, ಇಡೀ ಮಾನವ ಜನಾಂಗಕ್ಕೆ ಪರಿಬಿಲಾರವೆ ನಷ್ಟವಿದು.'

### ಚೈನಾ.

ಚೈನಾ ಸರಕಾರದ ಪರ ಡಾ. ಹೊಲಿಂಗ್‌ಟನ್ ಟಿ ಫಗರು ಹೀಗೆ ಹೇಳಿದರು, 'ಮಹಾತ್ಮರ ಕೊಲೆಯನ್ನು ಚೈನೀ ಸರಕಾರವು ಕೇಳಿ ವ್ಯಸನಾಕ್ರಾಂತವಾಗಿದೆ, ಭಾರತಕ್ಕೆ ಸ್ವಾತಂತ್ರ್ಯ ಬಂದ ಈ ಸಮಯದಲ್ಲಿ ಭಾರತ ಸ್ವಾತಂತ್ರ್ಯ ವಿಲ್ಲಿ ಮಹಾತ್ಮರ ಕೊಲೆಯ ಕೃತ್ಯವು ದುಃಖದಾಯಕವಾದುದು. ಗಾಂಧೀಜಿಯು ಕೇವಲ ಭಾರತೀಯನಲ್ಲ. ವಿಶ್ವಾದ್ಯಂತ ಗುಣಾವ್ಯಕ್ತಿ. ಅವರ ನೆನಪು ನಾವಿರ ಸಂತಾಸಗಳವರೆಗೂ ಉಳಿಯುವುದು.'

### ಫ್ರಾನ್ಸ್.

ಫ್ರಾನ್ಸಿನ ರಾಷ್ಟ್ರೀಯ ಶಾಸನ ಸಭೆಯು ಮಹಾತ್ಮರ ಮರಣವಾರ್ತೆಯನ್ನು ಕೇಳಿದಾಗ ಗೌರವದಿಂದ ಎದ್ದು ನಿಂತಿತು. ಸಭೆಯ ಸ್ವೀಕರಾದ ಲ್ಯಾನ್ಸರವರು 'ಗಾಂಧೀಜಿಯವರು ನಿಸ್ಸೀಮ ಶೇಷಭಕ್ತರು. ಅವರ್ಕೊಂದಾ ಮಿಗಿಲಾಗಿ ವಿಚಾರ ಶೀಲರು. ದ್ವೇಷಕ್ಕಿಂಧಾ ಪ್ರೇಮವೇ ಜಗತ್ತಿನ ಜೀವನಾಧಾರವೆಂಬುದನ್ನು ಅವರು ಶ್ಲಾಘಿಸಿದ್ದರು.' ಎಂದರು.

### ಈಜಿಪ್ಟ್.

ಈಜಿಪ್ಟಿನ ಮುಖ್ಯಮಂತ್ರಿ ನಕ್ರೊಸಿ ಪಾಶಾರವರು 'ಆಬ್ರಹ್ಮ, ಜಗತ್ತಿನೊಂದಿಗೆ ಈ ಮಹಾವ್ಯಕ್ತಿಯು ನಿಧನಕ್ಕೆ ಕಣ್ಣೀರು ಮಿಡಿಯುತ್ತಿದೆ ಜಗತ್ತೇ ಎಂಥಾ ಕಂಡರಿಯದ ಬೃಹದ್ ವ್ಯಕ್ತಿ ಇವರು. ಹಿಂದೂ ಮುಸ್ಲಿಂ ಐಕ್ಯತೆಗಾಗಿ ದುಡಿಯುತ್ತಿದ್ದ ಈ ಸಮಯದಲ್ಲಿ ಅವರ ಕೊಲೆ ಇನ್ನಷ್ಟು ದುಃಖದಾಯಕವಾದುದು. ಜಗತ್ತಿನ ಚರಿತ್ರೆಯಲ್ಲಿ ಇಂಥಾ ದುರ್ದಾಗ ಪ್ರಸಂಗ ಎಂದೂ ಬಂದಿರಲಾರದು. ಮಹಾತ್ಮರ ಕೊಲೆ ಇದಲ್ಲ ಮಾನವಕುಣಕ್ಕೆ ಮಾಡಿದ ದ್ರೋಹ.' ಎಂದಿರುವರು.

### ಇಟಲಿ.

ಇಟಲಿಯ ವಿದೇಶೀ ಮಂತ್ರಿಯಾದ ಕಾರ್ಲೊ ಸೊಫೋರ್ಜಾರವರು, 'ನಮ್ಮ ಶೀಳಗೆಯನ್ನು ವಿನಾಶಪಥದಲ್ಲಿ ತಳ್ಳುತ್ತಿರುವ ಸಾರ್ವಭೌತೀಯ ಉಗ್ರರೂಪದರ್ಶಕ ಗಾಂಧೀಜಿಯು ಕೊಲೆ.' ಎಂದಿರುವರು.

### ಜರ್ಮನಿ.

ಜರ್ಮನಿಯಲ್ಲಿಯ ಅಮೇರಿಕನ್ ಮಿಲಿಟರಿ ಗವರ್ನರರು ಹೀಗೆಂದಿರುವರು. 'ದುಃಖದ ಆಗರವಾಗಿರುವ ಜಗತ್ತಿನಲ್ಲಿ ಸಂದರ್ಭಸಾಧನೆಗಿಂಧಾ ತತ್ವಕ್ಕಾಗಿ ತ್ಯಾಗಗೈಯುವವರೇ ಹಿರಿದೆಂಬ ಕಾರಣಕ್ಕಾಗಿ ಶ್ರಮಿಸಿದ ವ್ಯಕ್ತಿಯ ಕೊಲೆಗಾಗಿ ಸಂತಾಪಪಡುತ್ತೇನೆ'

### ಆಫ್ರಿಕಾ.

ದಕ್ಷಿಣ ಆಫ್ರಿಕಾದ ಮುಖ್ಯಮಂತ್ರಿ ಯೂದ ಜನರಲ್ ಸ್ಮಟ್ಸ್‌ರವರು 'ಅತ್ಯಂತ ದಾರುಣವಾದ ದುಃಖವಾರ್ತೆಯನ್ನು ಕೇಳಿದೆನು. ನರರಲ್ಲಿ ಅರಸನೆಂತಿದ್ದ ಗಾಂಧಿಯವರು ಕಣ್ಮರೆಯಾದರು. ನನ್ನ ಏಂ ವರ್ಷದ ಸಂಬಂಧವು ಅವರಲ್ಲಿ ನನ್ನ ಗೌರವ ಮತ್ತು ಭಕ್ತಿಯನ್ನು ಹೆಚ್ಚು ಪೂರಯಿತ್ತಾ ನಡೆದಿದೆ. ಅವರ ಈ ನಿಧನವು ಭಾರತದ ಆತ್ಮಕ್ಕೆ ಎಂಟರುವ ಕೋನವು ವಾರು ಕೊಳೆಯನ್ನು ತೊಳೆಯಲಿ.'

### ಅಮೇರಿಕಾ.

ಅಮೇರಿಕಾದ ಪ್ರೆಸಿಡೆಂಟ್ ಟ್ರೂಮನ್‌ರು 'ನೋಬೆಲ್‌ಪಾರಿತೋಷಕ ಗಾಂಧಿಯ ಕೊಲೆಯು ನನಗೆ ಅಪಾರ ದುಃಖವನ್ನುಂಟು ಮಾಡಿದೆ. ಅವರು ಭರತಖಂಡದ ಮಂದಾಳಾಗಿ, ಗುರುವಾಗಿ, ಶ್ರಮಿಸಿದರು. ಮಾನವ ಸೌಹಾರ್ದತೆಯ ಮತ್ತು ಶಾಂತಿಯ ಕಾರಣಕರ್ತಾಗಿ ಮತ್ತಿನ್ನಂಯ ಮಹಾಶಕ್ತಿಯು ವಿಲೀನವಾಯಿತು ಅವರ ಅನುಪಮ ಜೀವನವು ನಮ್ಮನ್ನು ಸನ್ಮಾರ್ಗಕ್ಕೆ ಹಚ್ಚಲಿ.'

### ಐಯರ್ಲೆಂಡ್.

ಐಯರ್ಲೆಂಡಿನ ಪ್ರಧಾನರಾದ ಎಮೋನ್ ಡಿವೆಲರಾರವರು ತಮ್ಮ ಸಂತಾಪವನ್ನು ಸೂಚಿಸುತ್ತಾ 'ಹಿಂದೂದೇಶಕ್ಕೆ ಸ್ವಾತಂತ್ರ್ಯವನುಕೊಟ್ಟ ಮಹಾವ್ಯಕ್ತಿಯನ್ನು ಹಿಂಬಾಲಿಯರು ಕಳಕೊಂಡರು. ಯೂರ ಅಂತಿಮತಾಗಾರನ್ನು ಅವರು ಜೀವಕ್ಕಾಗಿ ಸೂತಿರೋ ಆ ವಿಮಲಲಕ್ಷೆಯು ಭಾರತೀಯರಲ್ಲಿ ಭ್ರಾತೃಭಾವನೆಯನ್ನು ಹೆಚ್ಚಿಸಿ ಶಾಂತಿಯನ್ನು ತೊಡಲೆಂದು ನಾವು ಪ್ರಾರ್ಥಿಸುತ್ತೇವೆ' ಎಂದಿರುವರು.

### ಜಪಾನು.

ಜಪಾನಿನ ಮುಖ್ಯ ಮಂತ್ರಿಯಾದ ಟೆಟ್ಸು ಕಾಟಯಾಮರವರು 'ನನಗೆ ಗಾಂಧೀಜಿಯವರ ಬಗ್ಗೆ ಅನನ್ಯ ಗೌರವವಿತ್ತು. ಜಗತ್ತಿನ ಶಾಂತಿಗಾಗಿ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದರವರು. ಪರಬಲಕ್ಕೆ ಈ ಅತ್ಯಬಲ ಅಹಿಂಸೆಯಾಯಿತೆಂಬುದು ವಿಶಾದಕರ. ಭಾರತೀಯರು ಆತ್ಮಬಲವ ಆದರ್ಶವನ್ನೆತ್ತಿ ಜಗತ್ತಿನ ಕಲ್ಯಾಣಕ್ಕೆ ಕಾರಣರಾಗಲಿ.'

ಇನ್ನುಳಿದ ಅಬಿಸೀನಿಯಾ, ಟರ್ಕಿ, ಸ್ವಿಟ್ಸರ್ಲೆಂಡ್, ಸಿರಿಯಾ, ಪೋರ್ಚುಗಿಸ್, ಅಫಘಾನಿಸ್ತಾನ, ಜೆಕೊಸ್ಲೋವಾಕಿಯ, ಫಿನ್‌ಲೇಂಡ್, ನಾರ್ವೆ, ಬ್ರೇಝಿಲ್, ಇಂಡೊನೇಶಿಯಾ, ಬರ್ಮಾ, ಸಿಲೋನ್, ಆಸ್ಟ್ರೇಲಿಯಾ, ಫಿಲಿಪೈನ್, ಟೆಹರಾನ್, ಕೆನಡಾ, ಮೊದಲಾದ ಜಗತ್ತಿನ ಎಲ್ಲಾ ರಾಷ್ಟ್ರಗಳಿಂದ ಸಂತಾಪಸೂಚನೆ ಬಂದಿದೆ.

---

### ಪಂಡಿತ ಜವಾಹರ್‌ಲಾಲ್.

ಜವಾಹರ್‌ಲಾಲ್ ನೆಹರೂರವರು ಭಾರತ ಕೇಂದ್ರ ಶಾಸನ ಸಭೆಯಲ್ಲಿ ಹೀಗೆಂದರು. 'ನಮ್ಮನ್ನಗಲಿದ ಪರಾತ್ಮನನ್ನು ಹೊಗಳಲು ಕೂಡಾ ನಮ್ಮಲ್ಲಿ ಆರ್ಹತೆಯಿಲ್ಲ. ಭವಿಷ್ಯದ್ದಲ್ಲಿ, ಶತಮಾನಗಳು ಕಳೆದ ನಂತರ ಜನರು ನಮ್ಮ ಈ ಶೀಳಗೆಯ ವಿಚಾರ ಆಲೋಚಿಸುವರು. ಮಾನವ ರೂಪದಲ್ಲಿ ಈ ದೇಶದಲ್ಲಿ ಓಡಾಡಿದ ದೇವ ಸಂಭೂತರ ವಿಚಾರ ಆಲೋಚಿಸುವಾಗ ಅತನ ಪಾದವು ಸುತ್ತಿದ ಈ ದೇಶದಲ್ಲಿ ಈ ಸಮಯದಲ್ಲಿ ಜೀವಿಸಿದ ನಮ್ಮನ್ನು ಆ ಲೋಚಿಸುವರು. ಗಾಂಧೀಜಿಯವರ ಕೊಲೆಯ ವಿಚಾರ ನಮಗೆ, ನಮ್ಮ ಸರಕಾರಕ್ಕೆ ನಾಚಿಕೆಯ ವಸ್ತು. ಇಡೀ ಜಗತ್ತಿಗೆ ಜ್ಯೋತಿಯಾಗಿದ್ದ ನಿಧಿಯಂತಿದ್ದವರನ್ನು ರಕ್ಷಿಸಿ ಕೂಳ್ಳಲಾರದ ನಮ್ಮ ಕರ್ತವ್ಯ ಚ್ಯುತಿಗೆ ಪರಿಹಾರವಿಲ್ಲ. ವ್ಯಕ್ತಿಗಳನ್ನು ವರ್ಣಿಸಬಹುದು. ಹೊಗಳಬಹುದು. ಆದರೆ ಮಾನವನ ಕುಲದವನಲ್ಲದ ಈ ದೈವೀ ವ್ಯಕ್ತಿಯನ್ನು ಯಾವ ಮಾತಿನಿಂದ ಬಣ್ಣಿಸುವದು. ಅವರ ಜೀವಂತ ಕಾಲದಲ್ಲಿಯೇ ತನ್ನ ಕೃತಿಗಳಿಂದ ಊಹಿಸಲಾರದ ಪ್ರಭಾವವನ್ನು ಪಡೆದಿದ್ದಾರೆ. ಈ ಮೂರು ದಿನಗಳಿಂದ ಇಡೀ ಜಗತ್ತು ವಿಕಕಂಠದಿಂದ ಅವರ ಗುಣಗಾನ ಮಾಡುತ್ತಿದೆ. ಮಹಾತ್ಮರ ಉಜ್ವಲ ಪುಣ್ಯಕಾರಿಯ ಬೆಳಕಿನ ಬಲದಿಂದ ನಮ್ಮ ಹೃದಯ ಹಣತೆಗಳನ್ನೂ ನಾವು ಹಚ್ಚಿ ಕೊಂಡಿರುವೆವು. ಇನನ್ನು ಬೆಳಗಿ, ಯಾವ ಧ್ಯೇಯಕ್ಕಾಗಿ ಅವರು ಶ್ರಮಿಸಿದರೋ ಅದಕ್ಕಾಗಿ ಹೆಣಗುವಾ. ಮಹಾ ಮುಂದಾಳುಗಳಿಗೆ ಕಂಚಿನ, ಮಣ್ಣಿನ ತಾಮ್ರದ ಸ್ಮಾರಕಗಳನ್ನು ಮಾಡಿವೆಯುಂಟು. ಅವರೆ ಮಹಾತ್ಮರು ಪಮ್ಮ ಜೀವನ ಕಾಲದಲ್ಲೇ ಮಿಲಿಯೊಂತರ ಹೃದಯದಲ್ಲಿ ತಮ್ಮ ಅಚ್ಚಳಿಯದ ಸ್ಮಾರಕವನ್ನು ನಿಲ್ಲಿಸಿದ್ದಾರೆ ಈ ದೇಶವೇ ಮಹಾತ್ಮರ ಕೃಯ ರಚನೆಯು ಸುತ್ತಳೆ. ಭಾರತೀಯರನ್ನು ಸನ್ಮಾರ್ಗದಲ್ಲಿ ಹಚ್ಚಿದ ಅತನ ಏರುಪಿನ ಕೈಯೇ ಅತನ ಕೊಲೆಗೂಡಿತು. ಜೀವನದಲ್ಲಿ ನಮ್ಮ ಜೀವನವ ಜೀವಾಳವಾಗಿದ್ದ ಬಾಪುವು ಮರಣದ ನಂತರವೂ ನಮ್ಮ ಭಾಗ್ಯ ತಾರಕೆಯಾಗಿರಲಿ.'

### ಸರ್ವಾರ್ ಪಟೇಲ್.

'ಆ ದಿನ ನಾಲ್ಕು ಗಂಟೆಗೆ ನಾನು ಗಾಂಧೀಜಿಯವರನ್ನು ಕಾಣಲು ಹೋಗಿದ್ದೆ. ಐದು ಗಂಟೆಯ ಸಮಯಕ್ಕೆ ಅವರು ಗಡಿಯಾರ ತೋಂಪಿ ತನಗೆ ಪ್ರಾರ್ಥನೆಗೆ ಸಮಯವಾಯಿತೆಂದರು. ನಾನು ಬಿರ್ಲಾಭವನವನ್ನು ಬಿಟ್ಟು ನನ್ನ ಕೃತಕ್ಕೆ ಬರುವಷ್ಟರಲ್ಲಿ ನನಗೆ ಈ ವಾರ್ತೆ ಮುಟ್ಟಿತು. ತೀಕ್ಷ್ಣವಾಗಿ ನಾನು ಬಿರ್ಲಾಭವನಕ್ಕೆ ಧಾವಿಸಿದೆನು. ಗಾಯಗೊಂಡ ಮಹಾತ್ಮರು ಸ್ವಾರ್ಥನಾ ಮಗ್ನರಾದಂತೆ ಮಲಗಿದ್ದರು. ಮುಖವು ಕಳೆಯ ತೇಜದಿಂದ ಬೆಳಗುತಿತ್ತು. ದಯಸ್ಪಾಕ್ಷಿಯಂತೆಗಳು ಮೂರ್ತಿಮತ್ತಾಗಿದ್ದವು. ಅನೇಕ ಉಪವಾಸ, ಬಾಂಬು ಮೊದಲಾದ ದುರಂತಗಳಿಂದ ಬದುಕಿನ ಜೀವಳೆ ಹೊಚ್ಚಿಯಿಬಕನೆಯುವಿಂದ ಜಗತ್ತಿಗೆ ಇಲ್ಲದಾಯಿತು. ಇದು ವೈಶನದ ಕಾಲವಲ್ಲ. ಯಾವ ಉದಾತ್ತ ಶಕ್ತಿಗಳನ್ನು ಮಹಾತ್ಮರು ಉಪದೇಶಿಸಿದರೋ ಯಾವುದಕ್ಕಾಗಿ ತನ್ನ ಪ್ರಾಣವನ್ನೆರ್ಪಿಸಿದರೋ ಆ ತತ್ವಗಳೇ ನಮ್ಮ ಜೀವನ ಧ್ಯೇಯವಾಗಲಿ. ಅವರ ಜೀವಂತ ಕಾಲಕ್ಕೆ ಅವರ ಉಪದೇಶಕ್ಕೆ ನಾವು ಸಾಕಷ್ಟು ಮನಸ್ಸು ಕೊಡಲಿಲ್ಲಿ. ಇಂದಾದರೂ ಆ ನ್ಯೂನತೆಯನ್ನು ತಿದ್ದಿ ಕೊಳ್ಳುವಾ.'

### ಶರೋಜಿನಿ ದೇವಿ.

'ಇದು ಮಾನವ ಸಮುದಾಯವಲ್ಲ. ಇಡೀ ಜಗತ್ತೆ ಮಹಾತ್ಮರ ಬೃಹದ್ ವ್ಯಕ್ತಿತ್ವದ ವಿಚಾರ ಹೇಳುತ್ತಿದೆ. ಮಹಾತ್ಮರ ಪುಣ್ಯವು ಉಪವಾಸವು ಹಿಂದೂ ಮುಸ್ಲಿಂ ಐಕ್ಯತೆಗಾಗಿ. ಕಡೆ ಉಪವಾಸವೂ ಕೂಡ ಈ ಕಾರಣಕ್ಕಾಗಿಯೇ. ಗಾಂಧೀಜಿಯವರ ಜೀವನದಲ್ಲಿ ಪವರಿಸರಾಗಿ ಬೆರೆತು ಹೋದ ನಾವೂ ಸತ್ಪಂತೆಯೇ. ಇಂದು ಮಹಾತ್ಮರು ಸತ್ಪರೆಂದು ಭಾವಿಸಿದರೆ ಕರ್ತವ್ಯ ಚ್ಯುತರಾಗುವೆವು. ಮಹಾತ್ಮರ ಆತ್ಮ ಜ್ಯೋತಿಯು ಪಥದರ್ಶಿಗಳಲ್ಲೂ ಬೆಳಗುತ್ತಿದೆ. ಅವರ ಭೌತಿಕ, ನೈತಿಕ ಹಕ್ಕುದಾರರಾಗಿ ನಾವಿರುವೆವು. ಎದೆ ಬಡಿದುಕೊಳ್ಳುವ, ಕಣ್ಣೀರಿಡುವ, ಕೂದಲು ಕೆದರಿಕೊಳ್ಳುವ ಸಮಯವಿದಲ್ಲ. ನಾವು ಗಾಂಧೀಯವರ ಅಹಿಂಸಾ ಸೈನ್ಯದ ಯೋಧರು. ಅವರ ಧ್ವಜ ನಮ್ಮ ಕೈಯಲ್ಲಿದೆ. ಆ ಧ್ವಜಕ್ಕೆ ಅಪಮಾನವಾಗದಂತೆ ನೋಡುವುದು ನಮ್ಮ ಕರ್ತವ್ಯ. ಅವರ ಕಂಠ ಸ್ವರವು ಕೇಳಬರದಿದ್ದರೂ ಭಾರತದ ಮಿಲಿಯೊಂತರ ಕಂಠಗಳು ಅವರ ತತ್ವವನ್ನು ಸಾರಲಿ. ಮಿಲಿಯೊಂತರ ಕೈಗಳು ಅವರು ಬಿಟ್ಟ ಕೆಲಸವನ್ನು ಮಾಡಲಿ. ಮಹಾತ್ಮರ ಅಂತಿಮ ಸಂಸ್ಕಾರವು ಸಹಾಸ್ರಾರು ರಾಜರ ದಹಿಸಿ ಸ್ಥಳವಾದ ಜೆಲ್ಲಿಯಲ್ಲಿ ನಡೆದುದು ಉತ್ತಮವಾಯಿತು. ವಿಕ್ಟೋರಿಯ ಮಹಾತ್ಮರು ರಾಜರೊಳಗೆ ಮಹಾರಾಜರು. ನನ್ನ ತಂದೆಯ, ನನ್ನ ಗುರುವಿನ, ನನ್ನ ಮುಂದಾಳುವಿನ ಆತ್ಮವು ಶಾಂತಿಯಲ್ಲಿರದಿರಲಿ. ಆ ಶಕ್ತಿಯು ಶಾಂತಿಯನ್ನು ಪಡೆದರೆ ನಮ್ಮನ್ನು ಕರ್ತವ್ಯ ಪಥದಲ್ಲಿ ಉದ್ಬೋಧಿಸುವರಾರು? ಆ ಶಕ್ತಿ ನೂತನ ಜೀವನ ಶಕ್ತಿಯಾಗಿ ಪ್ರತಿ ನಾಡಿಯಲ್ಲಿ ಪ್ರವಹಿಸಲಿ'

### ಮಹಮ್ಮದಾಲಿ ಜಿನ್ನಾ.

'ಗಾಂಧಿಯವರ ಮೇಲೆ ಪಾರಿಶೀ ರೀತಿಯ ಕೈಮೊಡಿ ಆದರಿಂದ ಆವರು ಮೃತ್ಯುವಶರಾದುದಕ್ಕೆ ವಿಷಾದಿಸುತ್ತೇನೆ. ನಮ್ಮ ರಾಜಕೀಯ ಭಿನ್ನಭಾವಗಳು ಏನೇ ಇದ್ದರೂ ಹಿಂದೂ ಸಮಾಜದ ಪ್ರಗತಿಗೆ ಪಾರ್ಶ್ವನಾದ. ಹಿಂದೂ ಸಮಾಜದ ಪ್ರಮಾಖ್ಯಕ್ತಿ ಇವರು. ಹಿಂದೂ ಸಮಾಜಕ್ಕೂ, ಅವರ ದುಃಖಿತ ಕುಟುಂಬಕ್ಕೂ ನನ್ನ ಸಂತಾಪವನ್ನು ವ್ಯಕ್ತ ಮಾಡುತ್ತೇನೆ'

### ಆಚಾರ್ಯಾಲಿ.

'ಮಹಾತ್ಮಗಾಂಧೀಯವರ ಕೊಲೆಯು ಭರತ ಚರಿತ್ರೆಯು ಅತೀ ದುಃಖದ ಕಪ್ಪು. ಇಡೀ ಜಗತ್ತಿನ ಆತ್ಯುತ್ಕೃಷ್ಟ ವ್ಯಕ್ತಿಯನ್ನು ನಾವು ಕಳಕೊಂಡೆವು. ಕೈಪಿಸಿ ಪಕ್ಷದ ಸೆಲಸಿ ಅಹಿಂಸೆಗಾಗಿ ತಮ್ಮ ಶರೀರವನ್ನು ಗುಂಡಿಗೆ ಒಡ್ಡಿದರು. ಇಡೀ ಜೀವನದಲ್ಲಿ ಅವರಲ್ಲಿ ವಿಕ್ಷಕಾಗಿನಿಸಿದ ನಗೆ ಪುಷ್ಪಲ್ಲಿ ತನ್ನ ಜಂತಾಗಿದೆ. ಹಿಂದೂ ದೇಶವು ಅವರ ಸಿದ್ಧಾಂತಗಳನ್ನು ಎತ್ತಿ ಹಿಡಿದು ಇಂದು ನಡೆದ ದೌರ್ಜನ್ಯವನ್ನು ಪ್ರಜ್ಞಲಿಸಿ ಜಗತ್ತಿಗೆ ನೀಡಲಿ'

### ರಾಧಾಕೃಷ್ಣನ್.

'ಬಾಯಿಂದ ಮಾತುಗಳು ಬಾರವು. ಅಗಬರದ್ದು ಆಗಿ ಹೋಯಿತು ಈ ಯುಗದ ದೇವನಾದ ಆ ಪರಿಶುದ್ಧ, ಜ್ಞೇತನದಾಯಕ ಮನುಷ್ಯನು ಹೊಡ್ಡಿ ವ್ಯಕ್ತಿಯ್ಯಾನ ಗುಂಡಿಗೆ ಬಲಿಯಾದನೆಂದು. ಶಾಂತಿ ಸೌಂಶ್ರೆಯನಿಗೆ ವಿಶ್ವವನ್ನ ಕೊಡಿಸಿದ, ಕೈನ್ಯವನ್ನು ಸಿಲುಬೆಗೆ ಏರಿಸಿದ ಆ ದಿನದಿಂದ ಎಂದೂ ಪ್ರಧಾನತರಾಗಿಲ್ಲ. ಆ ಕಾರ್ಯಬುದ್ಧಿ ಇಂಗೂ ಇದೆ. ಅದರು ಪ ನರಿಗೆ ಜಗತ್ತಿಗೆ ಶಾಂತಿ ಇಲ್ಲ ಜಗತ್ತಿನ ಶಾಂತಿಗೆ ದುಃಗದೇವ ಮಹಾತ್ಮರೆದ್ದೇ ಏಳಬೇಕಾಗಿದೆ.'

---

## Mahatma Gandhi.

Deep is the wound that killed our Bapu.
Deeper is the wound inflicted on India
Deeper still is the wound on religion Hindu
Deepest is the wound on the brotherhood Idea

Deep is the wound that put out the light of Asia
Deeper is the wound that struck the soul of a millenia
Deeper still is the wound on the dumb teeming millions
Deepest is the wound on the cause of the united nations

Deep went the poison that killed socrates.
Deeper went the nails that crucified Jesus
Deeper still went the bullets that extinguished the light of the masses
Deepest is the anguish of all human classes.

C. K. T.


ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಸೂರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಜೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ 1, ಉಡುಪಿ.

(ಟೆಲಿಫೋನ್ ನಂ 6398)

ಇತರ ಆಫೀಸುಗಳು:—ಬೆಂಗಳೂರು, ತಿರುವನಂತರಂ, ಪಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.



**ಕೂಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ಠೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹಣ್ಣಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ರೇಪಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಬೆನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಜಿ.



**ಎಂಪೈರ್ ಆಫ್ ಇಂಡಿಯಾ**

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಪ್ನ ಸಂಗತಿಗಳು. | ಒಟ್ಟು ಆದಾಯ | .... | 1,07,09,000 ಮೀರಿದೆ |
| | ಚಾಲ್ತಿಯಿರುವ ವಿಮೆ | .... | 17,74,52,000 ,, |
| | ಆಸ್ತಿ | .... | 6,67,60,000 ,, |
| | ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು | .... | 8,83,62,000 ,, |

ಆಂಗ್ಲ ಳಿಗೆ. ಏಜೆನ್ಸಿ ಪ್ರಥಾನ ಳಿಗೆ:

ಹಿಸ್ಟ್ರಿಬ್ಯೂಟೋರ್ಸ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. } ಅರ್ಜಿಗಳನ್ನು ಸ್ವಾಗತಿಸಿದ { ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಮೋಂಬೇ.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

## ಚರಮ ಗೀತೆ.

(೩೦-೧-೪೮)

ಜಗದಿ ಕತ್ತಲು ಮುಸುಕಿ ಮುಂದರಿಯದಾಯ್ತೆಂದು
ನಡೆಯಿಸುವ ತಂದೆ ನೀ ಮರೆಯಾಗೆ ನಮ್ಮಿಂದ
ನಾವು ತಬ್ಬಲಿಯಾಗಿ ಬಾಳಲೆಂತಿನ್ನಳುಕು
ಜೀವಾತ್ಮ ತೊಲಗಿರುವ ದೇಹವಂತೆ!

ಗಾಂಧಿಗುಂ ಜರೆಯುಂಟೆ? ಮೃತಿಯುಂಟೆ? ಅಳಿವುಂಟೆ!
ಎಂದೆಮ್ಮನಾಶ್ಚರ್ಯಗೊಳಿಸಿ ನೀನೊಮ್ಮೆಗೇ
ಮೂಗುವಡಿಸೀ ಜಗನ ಪಯಣಗೈವರೆ ತಾತ
ಸ್ವಾತಂತ್ರ್ಯ ಸಂಗ್ರಾಮದಂಕವೀರ!!

ಹೃದಯ ಬಡಿದಾಯ್ತುಮಮ ಶೂನ್ಯಮೂಯ್ತೂ ಲೋಕ
ತುಂಬಿದೀ ಭರತಪದ ಮನಮುಳಗಿ ಬರಿದಾಯ್ತು
ಭಾರತಿಯ ನಡು ನೀರಿನಲಿ ಬಿಟ್ಟು ನಡೆವರೇ
ಓ ಮಹಾತ್ಮನೆ ಜ್ಯೋತಿಯೂರಿಸುವರೇ!!!

ಭಾರತಿಯ ಹಿರಿದೆನಿಸಿ ನಲಿಯಿಸುವರಾರಿನ್ನು
ಮೇರೆವ ಹಿಂಸಾವೃತದಿ ಬೆಳಕಿತ್ತ ಭಾಸ್ಕರನೇ
ಅಸ್ತಮಿಸುತಿಲ್ಲಿರುವೆ ಪುಣ್ಯಮೂರುಳ ನಿನ್ನ
ದಿವ್ಯ ದರ್ಶನವಿತ್ತ ಮುಗುಳು ನಗೆಯ!!

ನೊಂದು ಬೆಂದಿತು ಹೃದಯ ಬೊಕಳೆಯೊಂದೇ ತುಂಬಿ
ದುಃಖ ಸಾಗರವಾಯ್ತು ಭೂತ ಭವಿಷ್ಯ ನೆಲವು
ಭಕ್ಷಿಸದ ಸನ್ಯಾಟ ನುಡಿಬಾರದೈ ತಂದೆ
ಕಣ್ಣೀರಿನಿಂದೊಪ್ಪಿನೆ ಜೀರವಗಿತೆ!

ವೈ. ಶೇ. ಅನಂತಪದ್ಮನಾಭರಾವ್.

## ಬಾ ವು

ಜೀವನದ ನೆತ್ತರ್ಪ ಹೆಪ್ಪಿಯೊಯ್ತು ಭೂರ್ಜ ವಿ
ಯತ್ಕಳು! ಜೀವನ ಕಾನನದಿ ಕಂಪು ತಂ
ಪಿತ್ತ ಜೀವನದ ಚರು ಮಿತ್ಯಗಚ್ಚಿಗ ಸಿಲುಕಿ
ಬೆಂದುರಿದು ಭಸ್ಮವಾಯ್ತು—

ಬಿತ್ತರವ ನಾಯುಗದ ಧರ್ಮದ ಹಿಮಾಚಲದ
ನೆತ್ತಿಯಿಂದುರ್ಬುಸಿದ ವೈರಿಗಳಲಿಂದು
ಮಂಜ್ರೊಂದ ಪ್ರಗ್ಗಡಲಿಗಿಮ್ಮು ಕಟ್ಟುರೆಯೂಯ್ತು
ಬಿಂಧು ತಂಂ ಸಿಂಧುವಾಯ್ತು.

ಜೈತ್ರನಲಿ ಚಿಗುರಿದೆಲೆ ಮಾಗಿಯಲಿ ಹಣ್ಣಾಗಿ
ಧಾತ್ರಿಗು ಸುಳವ ನೆರವಿ ಜೇ ಬಾಳು ಸೂಯೆ ಸೂ
ಕ್ಷೇತ್ರದಿಂದುರುಳಿ ಕಾಲಾತೀತನಾಗಿ ನೀಂ
ಮರಣದಲಿ ಸುಕ್ತನಾದೆ.

ಹೆಕ್ಕಿ ಮರಿ ಜೊಲವಾದ ಮೊಟ್ಟೆಯನೆಯಿಂ ತನ್ನ
ಕೊಕ್ಕಿನಿಂ ಬರಿಯಂತಾನಂದದಿಂ ಬಾಂಧವತೆ
ಕೆಕ್ಕೆಗದರ್ವಂತೆ ನೀಂ ದೇಜನೀದವನುಳಿದು
ಪರಮಾತ್ಮಲೀನನಾದೆ.

ಬದುಕಿ ಮೂರವಲಿದ್ದೆ, ಸತ್ಯ ಪಲ್ಲವಾಪ
ಎದೆಯ ಬರುಗನ್ನಸಿಂದು ಅನುಭವಾಮೃತವಾಯ್ತು
ಇದು ವರೆಗಿನೆಣುರೂಪ ಮಿಂದು ತಂ ಪಿಭುವಾಯ್ತು
ಬಾಪು ಪರಮಾತ್ಮನಾಗಿ.

ನಂಬಿಹೆನು ಆತ್ಮವಚ್ಯುತನೆಂದು; ಆದರಿಂದಿ
ಕಂಬನಿಯ ಕರೆಯುವದೆ ನಾಸ್ತಿಕತೆ! ನಿನ್ನಾತ್ಮ
ತುಂಬಿರುವದಾ ಬ್ರಹ್ಮಸ್ವಂಬ ಪರ್ಯಂತಮುಂ
ಸರ್ವ ಸ್ವತಂತ್ರಮಾಗಿ.

ನೀಡಯ್ಯ ಓ ಗುರುವೆ, ಋಜು ದರ್ಶನವನೆಮಗೆ
ಮೂಢತೆಯ ಮುರಿವ ಸದ್ಬುದ್ಧಿಯಂ ಧೈರ್ಯಮಂ
ಗೂಢ ಚೈತನ್ಯಮಂ ಸನಿಯ ರಸ ಪೃಷ್ಟಿಯಂ
ಯುಕ್ತಿಯಂ ವ್ಯವಹಾರಕೆ.

ಹೃದಯ ದೌರ್ಬಲ್ಯಮಂ ಪರಿಹರಿಸಿ ಪಾಶವೀ
ಹೃದಯದಿಂ ನಿನ್ನ ಕಳಕೊಂಡ ಭಾರತಿಗೆ
ಸುಧವೆರಸಿ ನೀಡಯ್ಯ ವ್ಯತ್ಯ ಮೂಢುರ್ಯಮಂ
ಮುಕ್ತಿಯಂ ಪರಮಾರ್ಥಕೆ.

ವಿೂರಬಲ್ಲವರಾರು ಮಾಯೆ ಬೀಗಿಹ ಬಲೆಯ?
ವಿೂರಲಾರದೆ ಇನಸ್ಕೋಮ ಮರಗುವದು ನಿನಗಾಗಿ
ಜಾರಿದೆಯೊ, ಮುಕ್ತಿಸಾಧಕನೆ, ಸ್ವೀಕರಿಸು ಕಂಬನಿಯ
ಕವಿತೆಯೂರಾಧನೆ.

ದೇವರವತಾರವೆತ್ತವನೆಂದು ಕೆಲಮಂದಿ
ಭಾವಧಾರಗಳಾಗಿ ಪೂಜಿಪರು ಶರಣಾಗಿ
ಭೂಮಾತ್ಮ ಮತ್ತೊಮ್ಮೆ ಭಾರತದಿ ಜನಿಸೆಂದು ಈ
ಹುಚ್ಚು ಕವಿಕಲ್ಪನೆ.

— ಗೆ.

Reg. No. B. 1589.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೩೬ | ತಾರೀಕು ೧೩-೩-೧೯೩೪ನೇ ಶುಕ್ರವಾರ | ಸಂಚಿಕೆ ೩೭

## ॥ ಪ್ರಚಲಿತ ವಿಚಾರಗಳು ॥

### ಗಾಂಧಿ ವಸ್ತು ಸಂಗ್ರಹಾಲಯ.

ಗಾಂಧೀಜಿಯವರಿಗೆ ಗುಂಡು ತಗುಲಿದಾಗ ಅವರು ಉಟ್ಟುಕೊಂಡಿದ್ದ ರಕ್ತಾಭ್ಯಾದಿಕ ಖದ್ದರ್ ವಸ್ತ್ರ ಇದನ್ನು ಅವರ ಸ್ಮಾರಕವಾಗಿ ಪ್ರತ್ಯೇಕ ಒಂದು ಪ್ರದರ್ಶನಾಲಯದಲ್ಲಿ ಸಂಗ್ರಹಿಸುವ ನಿರ್ಧಾರವಾಗಿದೆ. ಅವರು ಕೆಳಕ್ಕೆ ಬೀಳುವಾಗ ಅವರು ಧರಿಸಿದ್ದ ಕನ್ನಡಿ ಬಿದ್ದುಹೋಗಿ ಅದನ್ನು ಹೂರೋ ಗಡಿಬಿಡಿಯಲ್ಲಿ ತೆಗೆದುಕೊಂಡಿರುವರು. ಅವರ ಪಾದರಕ್ಷೆಗಳಲ್ಲಿ ಒಂದು ಮೂಸ್ಯದೊರೆತಿದೆ. ಇನ್ನೊಂದು ಕಾಣೆಯಾಗಿದೆ ಈ ಅಮೂಲ್ಯ ವಸ್ತುಗಳನ್ನು ತೆಗೆದುಕೊಂಡವರು ವಾಪಾಸು ಕೊಡಬೇಕೆಂದು ಕೇಳಿಕೊಳ್ಳಲಾಗಿದೆ. ನವ ಜಾಲಿಯ ಪಾದಸಂಚಾರ ಯಾತ್ರೆಯಲ್ಲಿ ಅವರು ಧರಿಸುತ್ತಿದ್ದ ವಿಶಿಷ್ಟ ಹೇಟನ್ನೂ ಜೋಪಾನವಲ್ಲಿಡಲಾಗಿದೆ.

### ಸ್ಮಾರಕ.

ಮಹಾತ್ಮರ ಸ್ಮಾರಕ ಒಂದನ್ನು ಏರ್ಪಡಿಸಲು ಅಖಿಲಭಾರತ ಕಾಂಗ್ರೆಸ್ ಸಮಿತಿಯು ತೀರ್ಮಾನ ಮಾಡಿದೆ. ಹಿಂದೂದೇಶದ ಪ್ರತಿಯೊಬ್ಬನೂ ತನ್ನ ಹೆಸ್ರು ದಿನಗಳ ಸಂಪಾದನೆಯನ್ನು ಈ ನಿಧಿಗೆ ಕೊಡಬೇಕೆಂದು ಈ ಸಮಿತಿಯು ಅಪೇಕ್ಷಿಸುತ್ತಿದೆ. ಹೀಗೆ ಸಂಗ್ರಹವಾಗಬಹುದಾದ ಹಣ ಐದು ಕೋಟಿಗೂ ಮಿಕ್ಕಬಹುದೆಂದು ಅಂದಾಜುಮಾಡಲಾಗಿದೆ. ಕಾಂಗ್ರೆಸ್ ಪ್ರೆಸಿಡೆಂಟರಾದ ಡಾ. ರಾಜೇಂದ್ರ ಪ್ರಸಾದರು ರೂ. ೨೦೦೦ ಕೊಟ್ಟು ಈ ನಿಧಿಯನ್ನು ತೆರೆದಿರುವರು. ಧನ ಸಂಗ್ರಹವು ಆಗುತ್ತಿದೆ. ಬೊಂಬಾಯಿಯಲ್ಲಿ ಕೇಳಲಿಕ್ಕೆ ಮೊದಲೇ ಮಹಾತ್ಮರ ಸ್ಮಾರಕ ಕ್ಕೆಂದು ಕೇವಲ ಮೂರು ದಿನಗಳಲ್ಲಿ ಬೊಂಬಾಯಿ ಕಾಂಗ್ರೆಸ್ ಸಮಿತಿಯು ಖಚೇರಿಗೆ ೫೫ ಲಕ್ಷ ರೂಪಾಯಿಗಳು ಬಂದಿವೆಯಂತೆ!

### ಪವಿತ್ರ ಭಸ್ಮ.

ಮಹಾತ್ಮರ ಪವಿತ್ರ ಭಸ್ಮವನ್ನು ಹಿಂದೂದೇಶದ ವಿವಿಧ ಭಾಗಗಳಿಗೆ ಹಂಚಿಕೊಡಲಾಗಿದೆ. ಪ್ರತಿ ಪ್ರಾಂತದ ಗವರ್ನರರು ಇದನ್ನು ದೆಲ್ಲಿಯಿಂದ ಆಯಾಯ ಪ್ರಾಂತಗಳಿಗೆ ಕಂದಿರುವರು. ಈ ಭಸ್ಮವನ್ನು ಆಯಾಯ ವ್ಯಕ್ತಿಗಳ ಪವಿತ್ರ ನದಿಗಳಲ್ಲಿ ತಾ. ೧೫ ರಂದು ಅರ್ಪಿಸಲಾಗುವುದು. ಕೆಲವು ಕಡೆ ಇದನ್ನು ಚರಸ್ಮಾರಕವಾಗಿಡುವ ವ್ಯವಸ್ಥೆಯು ಮಾಡಲಾಗಿದೆ. ಕೊಡಗಿಗೂ ಈ ಭಸ್ಮವು ಬಂದಿದೆ. ತಾ. ೧೫ ರಲ್ಲಿ ಕಾವೇರಿಯಲ್ಲಿ ಇದರಲ್ಲಿ ಸ್ವಲ್ಪವನ್ನು ಅರ್ಪಿಸಿ ಸ್ವಲ್ಪವನ್ನು ಸ್ಮಾರಕಕ್ಕಾಗಿ ಇಡುವ ವ್ಯವಸ್ಥೆಯು ಮಾಡಿರುವರು.

### ಕೊಲೆಯ ವಿಚಾರಣೆ.

ಮಹಾತ್ಮ ಗಾಂಧೀಜಿಯವರ ಕೊಲೆಗೆ ಕೇವಲ ನಾಥೂರಾಮ್ ವಿನಾಯಕ ಗಾಡ್ಸೆ ಒಬ್ಬನು ಕಾರಣನಲ್ಲ. ಆತನ ಹಿಷ್ಟೆಲಹಾಲ್ಲಿ ವಿಚಾರಣೆಗಾರರು ದೊಡ್ಡ ತಂಡವೇ ಇದೆಯೆಂದು ಗೊತ್ತಾಗಿದೆ. ಪೋಲೀಸ್ ಮತ್ತು ಸಿ. ಐ. ಡಿ. ಯ ಶೋಧನೆಯಿಂದ ಬೊಂಬಾಯಿ, ಪೂನಾ, ದಿಲ್ಲಿ ಈ ಮೂರು ಕೇಂದ್ರಗಳಿಗೆ ಸಂಬಂಧಿಸಿ ವಿಚಾರಿ ಕೊಳುವೊಂದು ಇದೆಯೆಂದು ತಿಳಿಯುಬಂದಿದೆ. ಈ ವಿಚಾರಣೆಯಲ್ಲಿ ಅಲ್ವಾರ್ ಸಂಸ್ಥಾನದ ಸರಕಾರವೂ ಭಾಗಿಯಾಗಿರಬೇಕೆಂದು ತಿಳಿದುಬಂದಿದೆ. ಅಲ್ಲಿ ಮಹಾತ್ಮರ ಕೊಲೆಗೆ ಮೊದಲೇ, ಹಾಗಾಗುವೆಂಬ ವಾರ್ತೆ ಹಬ್ಬಿತ್ತೆಂದು, ಕೊಲೆಯ ನಂತರ ಕೆಲವರು ಸಂತೋಷದಾದ ಸಾರ್ವಜನಿಕರಿಗೆ ಸಿಹಿತಿಂಡಿ ಹಂಚಿದೆಂದೂ ತಿಳಿದುಬಂದಿದೆ ಇಂಡಿಯಾ ಸರಕಾರವು ಈ ಸಂಸ್ಥಾನದ ಅಧಿಕಾರಿಗಳನ್ನು ವಿಚಾರಣೆಗಾಗಿ ದೆಲ್ಲಿಯ ಸ್ಪೆಷಲ್ ಪೋಲೀಸ್ ಸ್ಥಾಪನೆಯವರಿಗೆ ಒಪ್ಪಿಸಿದೆ. ತನಿಖೆ ಬಿರುಸಿನಿಂದ ನಡೆಯುತ್ತಿದೆ.

### ಕೋಮುವಾರು ಸಂಸ್ಥೆಗಳಿಗೆಡೆಯಿಲ್ಲ

ಇಂಡಿಯಾ ಸರಕಾರವು ಒಂದು ಅಜ್ಞೆ ಹೊರಡಿಸಿ ಹಿಂದೂಸ್ಥಾನವಲ್ಲಿ ರಾಜಕೀಯ ಉದ್ದೇಶಗಳೂ ಕೋಮುವಾರು ಸಂಸ್ಥೆಗಳು ಇರಲಿಕ್ಕೂಡದೆಂದೂ, ನೈಸರ್ಗಿಕ ವಿಪತ್ತಿನ ಸಮಯದಲ್ಲಿ ಸಹಾಯಕ್ಕೆ ಮಾತ್ರ ಸಂಸ್ಥೆಗಳು ಇರಬಹುದೆಂದೂ ಆಜ್ಞೆಯಾಗಿದೆ. ಈ ಆಜ್ಞೆಯ ಪ್ರಕಾರ ಸಂಘ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ. ಈ ಆಜ್ಞೆಯ ಪ್ರಕಾರ ಹಿಂದೂ ಮಹಾಸಭೆಯ ಸ್ವಯಂಸೇವಕ ಸಂಘವು ಕೂಡ ಬರಖಾಸ್ತಾಗಿದೆ.

### ಮಂತ್ರಿಗಳಿಗೆ ರಕ್ಷಣೆ.

ಮಹಾತ್ಮರ ದುರಂತ ಪ್ರಳಯದ ನಂತರ ಕೇಂದ್ರದ ಎಲ್ಲಾ ಮಂತ್ರಿಗಳ ಮನೆಯ ಸುತ್ತಲೂ ಕಾವಲನ್ನು ಇಡಲಾಗಿದೆ. ಪಂಡಿತ ನೆಹರೂ ರವರು ಪಾರ್ಲಿಮೆಂಟ್ ಸದಸ್ಯರ ಮನೆಗಳ ಅಕ್ಕಪಕ್ಕಗಳಲ್ಲಿ ಪೋಲೀಸರೂ, ಮಿಲಿಟೇರಿಯವರೂ ದೇರೆ ಹಾಕಿ ಕಾವಲಿದ್ದಾರೆ. ಮಂತ್ರಿಗಳನ್ನು ನೋಡಲು ಬರುವವರನ್ನೆಲ್ಲಾ ಗೇಟಿನ ಬಳಿ ತಡೆದು ನಿಲ್ಲಿಸಿ ವಿಚಾರಿಸಿ ಒಳಗೆ ಬಿಡಲಾಗುತ್ತಿದೆ. ಶಾಸನ ಸಭೆಯ ಸುತ್ತಲೂ ಪಹರೆ ಬಿಗಿಯಾಗಿದೆ.

### ಭದ್ರತಾಮಂಡಳದಲ್ಲಿ ಕಾಶ್ಮೀರ ಪ್ರಶ್ನೆ.

ಕಾಶ್ಮೀರದ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಹಿಂದೂ ಸರಕಾರವು ಇಟ್ಟಿದೆಯಷ್ಟೆ. ಮಹಾತ್ಮರ ಕೊಲೆಯ ಕಾರಣ ಭದ್ರತಾಮಂಡಳವು ಮೂರು ದಿನಗಳ ವರೆಗೆ ಸ್ಥಗಿತವಾಗಿದ್ದು ತಾ. ೩ ರಿಂದ ಪುನಹ ವಿಚಾರಣೆ ಪ್ರಾರಂಭವಾಗಿದೆ. ಹಿಂದೂ ದೇಶದ ಪ್ರತಿನಿಧಿಯಾದ ಗೋಪಾಲಸ್ವಾಮಿ ಐಯ್ಯಂಗಾರರು ಮಾತಾಡುತ್ತಾ, ಭದ್ರತಾಮಂಡಳವು ಕಾಶ್ಮೀರದ ರಕ್ತಪಾತವನ್ನು ಮೊದಲು ನಿಲ್ಲಿಸಬೇಕೆ. ಗುಡ್ಡಗಾಡಿನ ಜನರು ಪಾಕಿಸ್ತಾನದ ನಾಲಿಕ ಬರುವದನ್ನು ತಡೆಗಟ್ಟಬೇಕು. ಕಾಶ್ಮೀರದಲ್ಲಿ ಜನಗಣನೆಗೆ ತೆಗೆಯಲು ಅವಕಾಶವಿಲ್ಲ. ಆದರೆ ಅದಕ್ಕೆ ಮೊದಲು ಅಲ್ಲಿ ನೆಲೆಯನ್ನಿತ್ತಿರುವ ರಕ್ತಪಾತ ನಿಲ್ಲಿಸಬೇಕು ಎಂದಿರುವರು. ಪಾಕಿಸ್ತಾನದ ಪ್ರತಿನಿಧಿಯು ಇದನ್ನು ವಿರೋಧಿಸಿದ್ದಾರೆ. ಭದ್ರತಾಮಂಡಳದಲ್ಲಿ ಈ ಸಮಸ್ಯೆಗೆ ಯೋಗ್ಯ ತೀರ್ಪು ದೊರೆಯುವಂತೆ ಕಂಡುಬರುವದಿಲ್ಲ. ಹಿಂದೀ ಸರಕಾರವು ಸಂಯುಕ್ತ ರಾಷ್ಟ್ರ ಸಂಘದಿಂದ ಈ ಪ್ರಶ್ನೆಯನ್ನು ಹಿಂತೆಗೆದುಕೊಳ್ಳಲೂಬಹುದು.

### ಮಹಾತ್ಮಜಿಯವರ ಪ್ರಿಯ ಗೀತೆ.

ವೈಷ್ಣವ ಜನತೋ ತೇನೆ ಕಹಿಯೇ, ಜೇ ಪೀದ ಪರಾಯಾ ಜಾಣೇರೆ
ಪರಗುಣಮೆ ಉಪಕಾರ ಕರೆ ತೋಯ್ಯ, ಮನ ಅಭಿಮಾನ ನ ಆಣೇರೆ ೧
ಸಕಲು ಲೋಕವೂ ಸಹುನೆ ವಂದೆ, ನಿಂದಾ ನ ಕರೇ ಕೇ ನೆಂದೆ
ವಾಚ ಕಾಛ ಮನ ನಿಶ್ಚಲ ರಾಯೆ, ಧನ ಧನ ಜನನೀ ತೇನೀರೆ ೨
ಸಮದೃಷ್ಟಿನೆ ಕೃಷ್ಣನೆ ತ್ಯಾಗೀ, ಪರ ಸ್ತ್ರೀ ಜೇನೆ ಮಾತ ಸಮಾರೆ
ಜಿಹ್ವಾ ಥಕೇ ಅಸತ್ಯ ನ ಬೋಲೆ, ಪರ ಧನ ನವ ಝಾಲೆ ಹಾಥರೇ ೩
ಮೋಹಮಾಯ ವ್ಯಾಪ ನಹಿ ಜೇನೆ, ದೃಢ ವೈರಾಗ್ಯ ಜೇ ನಾಮ ನವಾರೆ
ರಾಮ ನಾಮ ಸೂ ತಾಲೀ ಲಾಗೀ, ಸಕಲ ತೀರಥ ತೇನಾ ತನಮಾರೆ ೪
ವನಲೋಭೀನೆ ಕಪಟ ರಹಿತ ಛೆ, ಕಾಮ ಕ್ರೋಧ ನಿವಾರ್ಯಾರೆ
ಭಣೆ ನರಸಯ್ಯೆ ತೇನುಂ ದರಶನ ಕರತಾಂ ಕುಲ ಏಕೋತೇರ ತಾರ್ಯಾರೆ ೫

### ನೂರಾಟಕ್ಕಿದೆ.

ವೀರಾಜಪೇಟೆ ಮುನ್ಸಿಪಾಲಿಟಿಗೆ ಒತ್ತಾಗಿ ಆರ್ಜಿ ಗ್ರಾಮದಲ್ಲಿರುವ 4½ ಏಕರು ಸೀರಾವರಿ ಭೂಮಿ ೨ ಏಕರು ಬಾಣೆ ನೂರಾಟಕ್ಕಿದೆ. ಬಾಣೆ ಜಾಗವು ತೋಟ ವಗೈರೆ ವ್ಯವಸಾಯಕ್ಕೆ ಯೋಗ್ಯವಾಗಿದೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಎ. ಮೆಸ್ಕರೇನಿಯಸ್,
ಪೋಲೀಸ್ ಸ್ಟೇಶನ್ ರಸ್ತೆ,
ವೀರಾಜಪೇಟೆ.

### WANTED.

One experienced, able honest and reliable person who knows coffee, pepper cultivation to be in charge of my Pandurang Estate at Kartikolam near Mananjody. Apply with testimonials stating the minimum salary to;

K. K. Varkey. B. A. B. L.
*Tahasildar (on leave),*
*residing near Nedungady*
*Bank, Tellicherry.*

### ಗಾಂಧೀಜಿಯನ್ನು ಬದುಕಿಸುವ ಪ್ರಯತ್ನ.

ಮಹಾತ್ಮರ ಕೊಲೆಯ ವಾರ್ತೆ ಬಂದೊಡನೆಯೇ ಮದ್ರಾಸಿನ ಒಬ್ಬ ಸನ್ಯಾಸಿಯು ತಾವು ಗಾಂಧೀಜಿಯನ್ನು ಬದುಕಿಸುವೆನೆಂದು ಮದ್ರಾಸು ಪ್ರಧಾನರೊಟ್ಟಿಗೆ ಉಪ್ಪೇಗದಿಂದ ಹೇಳಿದನು. ಅವರು ಆ ದನ್ನು ಕಿವಿಗೆ ಹಾಕಿಕೊಳ್ಳದಿರಲು ಮದ್ರಾಸಿನಲ್ಲಿದ್ದ ಲೇಡಿ ಮೌಂಟ್‌ಬ್ಯಾಟನ್‌ರೊಡನೆ ಹೇಳಿಕೊಂಡನು. ಜವರಾಗಮನಿಸದಿರಲು ಈತನು ಅಳಗಪ್ಪಚೆಟ್ಟಿಯಾರ್‌ರಿಗೆ ಹೇಳಿದನು. ಗಾಂಧಿ ಕಿಮಸಂಸ್ಕಾರ ಸಮಾರಂಭಕ್ಕೆ ಹೋಗಲು ಅಳಗಪ್ಪಚೆಟ್ಟಿಯಾರರ ವಿಮಾನ ತಯಾರಾಗಿತ್ತು. ಅದರಲ್ಲಿ ಈ ಸನ್ಯಾಸಿಯೂ ಹೋದನು. ಗಾಂಧೀಜಿಯವರ ಶವವನ್ನು ಪರೀಕ್ಷಿಸುತ್ತಾ 'ಕುತ್ತಿಗೆಯ ಭಾಗದಲ್ಲಿ ಒಂದು ಗಾಯವನ್ನು ಮಾಡಿ ಔಷಧಿಯ ಒಂದನ್ನು ಹಿಂಡಿದರೆ ಗಾಂಧೀಜಿ ಒಂದು ಘಂಟೆಯಲ್ಲಿ ಬದುಕುವರು' ಎಂದು ಹೇಳಿದನಂತೆ. ಆದರೆ ಯಾರೂ ಮಹಾತ್ಮರ ಶರೀರಕ್ಕೆ ಗಾಯವಾಗಲು ಒಪ್ಪದ್ದರಿಂದ ಸನ್ಯಾಸಿಯು ಹತಾಶನಾಗಬೇಕಾಯಿತು.

### ಕಾಶ್ಮೀರದಲ್ಲಿ ಮಹಾಕಾಳಿಗೆ.

ಕಾಶ್ಮೀರದ ಜಮ್ಮು ಪ್ರದೇಶದಲ್ಲಿ ಪ್ರಚಂಡ ಕಾಳಿಗ ನಡೆಯುತ್ತಿದೆ. ಈ ಭಾಗದಲ್ಲಿ ಸುಮಾರು ೧೫,೦೦೦ ಧಾಳಿಕಾರರು ಭಾರತ ನೆಲೆಯ ಮೇಲೆ ಧಾಳಿ ಪ್ರಾರಂಭಿಸಿರುವರು. ಶುಕ್ರವಾರ ಶಾಕೇರಾ ಎಂಬಲ್ಲಿ ಭಾರತ ಸೇನೆಗಳು ಬ್ರಿಗೇಡಿಯರ್ ಉಸ್ಮಾನ್‌ರವರ ಸಾಯಕತ್ವದಲ್ಲಿ ಧಾಳಿಗಾರರನ್ನು ಎದುರಿಸಿ ಓಡಿಸಿರುವರು. ಈ ಕದನದಲ್ಲಿ ೨೦೦೦ ಕ್ಕಿಂತಾ ಹೆಚ್ಚು ಧಾಳಿಗಾರರು ಮಡಿದು ಹೋಗಿದ್ದು ಶೇಖ್ ಶೈಲು ಸೈನ್, ಮತ್ತು ಬೈಗ್‌ಗನ್‌ಗಳೂ ದೊರೆತಿವೆ. ಅವರ ಹೆಡಕಾರಿಯಲ್ಲಿ ಎರಡು ಮೇಜರ್‌ಗಳ ಶವವೂ ದೊರೆತಿವೆಯಂತೆ. ಈ ಯುದ್ಧದಲ್ಲಿ ಪಾಕಿಸ್ತಾನದ ವಿವರಣೆಗಳೂ ಇದ್ದವೆಂದು ಗೊತ್ತಾಗಿದೆ.

# ಕೊಡಗು

ತಾ. ೧೩-೨-೧೯೪೮ ನೇ ಶುಕ್ರವಾರ

## ಪ್ರಾರ್ಥನೆ.

ಭಾರತದ ನಲವತ್ತು ಕೋಟಿ ಜನತೆಯ ರಾಜಕೀಯ ಮತ್ತು ಆಧ್ಯಾತ್ಮಿಕ ಗುರೂ, ಜಗಜ್ಜನತೆ ಧರ್ಮ ಜೀವನದ ಮಾರ್ಗದರ್ಶಕಾ, ಮಾರ್ಬನೊಬ್ಬನ ಗುಂಡಿನನ್ನು ಎದೆಯಲ್ಲಿ ಧರಿಸಿಧಾಗ 'ಹಾ ರಾಮೂ' ಎಂದೆ ಅಲ್ಲವೇ? ಹಾ ರಾಮೂ, ತಿಳಿಗೇಡಿಗಳಾದ ಭಾರತೀಯರಿಂದ ರಕ್ಷಿಸೆಂದು ಕೊನೆ ಉಸಿರಿನಲ್ಲೂ ಹೇಳಿದೆಯೂ? ಕ್ಷಮಿಸು, ಕೃತಘ್ನೆರಾದ ನಿನ್ನ ಹಿಂಬಾಲಕರನ್ನು ಕ್ಷಮಿಸು

ನಿನ್ನ ಕೃತಿ ಅನಂತವಂತೆ ಅಸಂಖ್ಯವಾದುದು. ಸ್ವಕೃತಿಯಂತೆ ವೈವಿಧ್ಯಪೂರ್ಣವಾದುದು. ನಿನ್ನ ಮನೋ ಮಂದಿರ ಆಕಾಶದಂತೆ ಪರ್ವಗ್ರಾಸಿಯೂದುದು. ಸಂಕುಚಿತ ಭಾವಾತೀತವಾದುದು. ಅ ಸೂಯೆ, ಮತಭ್ರಾಂತಿ, ದುರಭಿಮಾನಗಳಿಂದ ನಿರ್ಲಿಪ್ತವಾದುದು. ಅದು ಬ್ರಹ್ಮಾಂಡದಂತೆ ಮಹಾಭೂಮವಾದುದು. ಹೇ ಜಗದ್ರಕ್ಷಕಾ, ಭಾರತೀಯರು ಈ ಪವಿತ್ರ ಪಥದರ್ಶಿಯ ಜೀವನವನ್ನನುಸರಿಸುವಂತೆ ಬುದ್ಧಿ ಕೊಡು.

ಮಹಾತ್ಮಾ, ನೀನೊಂದು ವ್ಯಕ್ತಿಯಲ್ಲ; ನಿನ್ನದೊಂದು ಸಂಸ್ಥೆಯಲ್ಲ; ನಿನ್ನದೊಂದು ಸ್ವರವಲ್ಲ; ನಿನ್ನ ಜೀವನ ಒಂದು ಸ್ವರಮೇಳ. ಈ ಸ್ವರ್ಗೀಯ ಸುಮಧುರ, ಸಂಗೀತ ಗಂಗಾಸ್ರವಾಹದಲ್ಲಿ ಸರ್ವ ದೇಶಗಳ, ಸರ್ವ ಧರ್ಮಗಳ, ಸರ್ವ ಸಂಸ್ಕೃತಿಗಳ್ಳ ಭಾವಗಳೆಲ್ಲವೂ ತರಂಗತರಂಗವಾಗಿ ಹೊಮ್ಮಿ ಚಿಮ್ಮಿವೆ. ಈ ನಿನ್ನ ಜೀವನ ಸಂಗೀತವು ಭರತ ಖಂಡದ ಪ್ರತಿ ಗಿಡ ಮರಗಳಿಂದ, ಪ್ರತಿ ಅಣುರೇಣು ಪ ಉತ್ತುಂಗ ಹಿಮಾಲಯದಿಂದ ಹಿಡಿದು ಪವಿತ್ರ ಕನ್ಯಾಕುಮಾರಿಯವರೆಗೆ ನಾನಾ ವಿನ್ಯಾಸದಿಂದ ಶೋಭಿಸುತ್ತಿದೆ. ಭಗವಂತಾ, ಭಾರತೀಯರಿಗೆ ಈ ಅನೀತಿ ಜೀವನ ಸಂಗೀತವನ್ನು ಲಾಲಿಸಿ ಅದರಿಂ ತನೆ 'ಓ' ಗೊಡುವ ಹೃದಯವನ್ನು ಕೊಡು.

ಬಾಪೂ, ನಿನ್ನ ಜೀವನ ಯಾತ್ರೆ ಚರಂ ಜೀವಿಯಾಗುವ.. ನಿನ್ನ ಬಹುನೋಪದೇಶಗಳು, ನಿನ್ನ ಉಪಖ್ಯಾನೆಗಳು, ನಿನ್ನ ಜೈತ್ರಯಾತ್ರೆ ಮತ್ತು ಅತ್ಯಶಕ್ತಿಗಳು ಜಗಜ್ಜನತೆಯ ಪ್ರತಿ ಪಾಡಿಗಳನ್ನು ಪ್ರವೇಶಿಸಿ ಅದರ ರ ಶ್ರಾಶಾಗಳನ್ನು ಮೊರೆದು, ಮಾಂಸದಲ್ಲಿ ಮಾಂಸವಾಗಿ, ಅಸ್ತಿಯಲ್ಲಿ ಅಸ್ತಿಯಾಗಿ, ಜೀವಕಣ ಶ್ರೇಯೋಗಮಕಣೆಂದು ಶಾ ಶ್ವತ ಪ್ರೇಮಕಣ ಕಟ್ಟಿಯಾಗಿ, ಅಖಂಡಾಖಂಡ ಸ್ವತಂತ್ರಭಾರತವಾಗಿ, ಶಿಖರಿ ಯು ತಿಮಿರದಲ್ಲೊಂದು ಆಶಾಕಿರಣವಾಗಿ, ಅಧೈರ್ಯದ ತಾಲದಲ್ಲೊಂದು ಸಾಂತ್ವ ಜನ್ಯವಾಗಿ ಪರಿಣಮಿಸಿ ಜಗಜೀವನವನ್ನು ಬೆಳಗುವಂತೆ ಭಗವಂತನು ಅನುಗ್ರಹಿಸಲಿ.

ಬಾಪೂ, ನೀನು ಅಮರನು. ಸೂರ್ಯ ಚಂದ್ರರುವವರೆಗೆ ಭೂಮಿ ಆಕಾಶಗಳರುವವರೆಗೆ, ನೂಸನ ಕುಲವು ಇರುವ ವರೆಗೆ ಜೀರಂಜೀವಿಯು. ನಿನ್ನ ಅನುರಣತೆಯು ಜಗತ್ತನ್ನು ಬೆಳಗಲಿ. ಭಾರತೀಯರು ಇನ್ನಾದರೂ ನಿನಗೆ ಕೃತಘ್ನೆರಾಗದಿರಲಿ.

## ವರ್ತಮಾನ.

ತಾರೀಕು ೩೦-೨-೪೮ ರಲ್ಲಿ ಹುದಿಕೇರಿಯಲ್ಲಿ ಶ್ರೀ ಕೆ. ಕೆ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನೆರೆದು ಹುದಿಕೇರಿ ತಾಲೆಯಲ್ಲಿ ನಲ್ಲಸೇ ಧಾರಂ ತೆರೆಯುವ ವ್ಯವಸ್ಥೆಮಾಡ ಬೇಕೆಂದೂ, ಹುದಿಕೇರಿಯಲ್ಲಿ ಪ್ರಾಥಮಿಕ ಆಸ್ಪತ್ರೆ ಇದಬೇಕೆಂದೂ ಕೇಳಿಕೊಳ್ಳುವ ರಂತೆ ಪ್ರಗಳಾದನ್ನ.

ಪರದಾಸ ಅಪ್ಪಚ್ಚುತವಿ ಸ್ಮಾರಕನಿಧಿಗಾಗಿ ಈ ನಡೆಗೆ ರೂ ೧೯೦೯-೧೩-೦ ಜಮೆಯಾಗಿದೆಯೆಂದೂ ಇದನ್ನು ಕೊಡಗು ಸಹಕಾರಿ ಪ್ರಾಂತೀಕ ಬ್ಯಾಂಕಿನಲ್ಲಿ ರೇವಣಾತಿಯಿಡಲಾಗಿದೆಯೆಂದೂ ತಿಳಿಸುತ್ತಾರೆ.

ಕಾಫಿಯಲ್ಲಿ ವ್ಯಾಪಾರ ಮಾಡುವವರು ಯಾ ಹುಡಿಮಾಡುವವರು ರಿಜಿಸ್ಟರು ಮಾಡಿಸಿಕೊಳ್ಳಬೇಕಾಗಿರುವದರಿಂದ ಆ ಬಗ್ಗೆಯ ಫಾರಂಗಳು ಚೀಫ್ ಇನ್ಸ್‌ಪೆಕ್ಟರ್ ಶಾಫಿ ಕಂಟ್ರೋಲ್, ಮಡಿಕೇರಿ ಇವರಲ್ಲಿ ದೊರೆಯುವದೆಂದು ತಿಳಿಸುತ್ತಾರೆ

ತಾರೀಕು ೮-೩-೪೮ ರಲ್ಲಿ ಮಡಿಕೇರಿ ಮಹಿಳಾ ಸಹಕಾರಿ ಸಮಾಜದ ಆಶ್ರಯದಲ್ಲಿ ರಾಷ್ಟ್ರಪಿತಾಮಹ ಗಾಂಧೀಜಿಯವರ ನಿಧನಕ್ಕೆ ಸಂತಾಪ ಸೂಚಿಸಲು ಶ್ರೀ. ಸಿ. ಎಂ. ರಾಮುರಾಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯು ಹುತಾತ್ಮರ ಆತ್ಮಕ್ಕೆ ಚಿರ ಶಾಂತಿಯನ್ನು ಬಯಸಿ ರಂವು ಮಾಡ ಲಾಯಿತು.

ತಾ. ೬-೩-೪೮ ರಿಂದ ೧೫-೩-೪೮ ರ ವರೆಗೆ ಮಡಿಕೇರಿ ಸಾರ್ವಜನಿಕರ ಪ್ರಾರ್ಥನಾ ಸಭೆಯು ಕೊಡಗು ಜನಿನಾರ್ಧರ ಸಂಘದ ಕಟ್ಟಡದ ಎದುರುಗಡೆ ವ್ಯವಸ್ಥಾನದಲ್ಲಿ ಪ್ರತಿ ದಿನ ಸಾಯಂಕಾಲ ೬ ಗಂಟೆಯಿಂದ ೭ ರ ವರೆಗೆ ನಡೆದು ಪ್ರಾರ್ಥನೆ, ಗೀತಾ, ಕುರಾನ್, ಬೈಬಲ್ ಪಠನ ಭಾಷಣ ನುತ್ತು 'ರಾಮಧುನ್'ಗಳೊಡನೆ ನಡೆಯಿತು. ಮುಂದೆ ಪ್ರತಿ ಶುಕ್ರವಾರ ಸಾಯಂಕಾಲ ಪ್ರಾರ್ಥನೆಯು ವಿಸರ್ಜನೆ ಮಾಡಿರುವರು

ಪೊನ್ನಂಪೇಟೆ ಪೀಸ್ ಕ್ಲಬ್ಬಿನವರು ಈ ಹಿಂದೆ ಪೊನ್ನಂಪೇಟೆಯಲ್ಲಿ ನಡೆದ ಸ್ವರಾಜ್ಯ ಹಾಕಿಕಪ್ಪು ಪಂದ್ಯಾವಳಿಯಲ್ಲೂ, ಅಮ್ಮತ್ತಿಯಲ್ಲಿ ನಡೆದ ಪಣಕರ ಬೋಪಯ್ಯನವರ ಜ್ಞಾಪಕಾರ್ಥ ಹಾಕಿಕಪ್ಪು ಪಂದ್ಯಾವಳಿಯಲ್ಲೂ ಜಯಶೀಲರಾಗಿ ಕಪ್ಪು ಗಳನ್ನು ಗೆದ್ದಿರುವರು.

ದ. ಕೊಡಗು ಜಿಲ್ಲಾ ಸಂಘದ ಮೇಜುಬಾಲುಗಳು ತಾ. ೯-೩-೪೮ರಲ್ಲು ಶ್ರೀಮತಿ ಸಕೀರಿಯಾಜಿ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ರಾಷ್ಟ್ರಪಿತ ಪೂಜ್ಯನೂಹಾತ್ಮಾಗಾಂಧೀಜಿಯವರ ಅಕಾಲ ಮರಣಕ್ಕೆ ಸಂತಾಪವನ್ನು ಸೂಚಿಸಿದರು. ಶ್ರೀಮಾನ್ ಶ್ರೀಪತಿರಾಯರು ಸಭೆಗೆ ಗಾಂಧೀಜಿಯವರ ತ್ಯಾಗಪ ವಿಷಯ ಮಾತಾಡಿ ಈ ಸಂಘವ ಬೆಸರಿನಲ್ಲಿ ಗಾಂಧೀಫಂಡಿಗೆ ಕೊಡುವುದಕ್ಕಾಗಿ ರೂ. ೫೦೦ನ್ನು ಕೊಟ್ಟರು.

ಬೋಂಬಾಯಿ ಕೊಡವ ಸಂಘದವರು ತಾ. ೭-೩-೪೮ರಲ್ಲಿ ಸಭೆಸೇರಿ ಮಹಾತ್ಮ ರ ನಿಧನಕ್ಕೆ ಸಂತಾಪವನ್ನು ಸೂಚಿಸುವ ಮತ್ತವರ ಆತ್ಮಕ್ಕೆ ಶಾಂತಿಯನ್ನು ಬಯಸುವ ಗೊತ್ತುವಳಿಯನ್ನು ಅಂಗೀಕರಿಸಿ ಮಹಾತ್ಮರ ಕಿರಿ ಪುತ್ರ ದೇವದಾಸ್ ಗಾಂಧಿಯವರಿಗೂ, ಜವಾಹರ್‌ಲಾಲ್ ನೆಹರೂರವರಿಗೂ ತಂತಿ ಮೂಲಕ ತಿಳಿಸಿರುವರು.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ವಿಚಾರಗಳ ಚರ್ಚೆ ತಾ. ೧೫ ರಷ್ಟಿ ಪ್ರಾರಂಭವಾಗುವುದೆಂದೂ ಆದಕ್ಕೆ ಸಂಬಂಧಿಸಿದ ದರಾಸ್ತುಗಳನ್ನು ತಾ ರ್ಚೆ ತಾ ೩ ರೊಳಗೆ ಕಳುಹಿಸಬೇಕೆಂದೂ ಪ್ರಕಟವಾಗಿದೆ

ಮಹಾತ್ಮರ ನಿಧನದ ಬಗ್ಗೆ ೧೩ ದಿನಗಳನ್ನು ಸಂತಾಪದಿನವಾಗಿ ಆಚರಿಸಬೇಕಿದ್ದ ಕಾರಣ ತಾ ೮ಕ್ಕೆ ಇತಲ್ಪಟ್ಟಿದ್ದ ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್‌ನ ವಾರ್ಷಿಕ ಮಹಾ ಸಭೆಯನ್ನು ಈ ತಾ ೨೫ಕ್ಕೆ ಮುಂದರಿಸಿಡಲಾಗಿದೆ.

ತಾರೀಕು ೪ರಲ್ಲಿ ವಿರಾಜಪೇಟೆಯಲ್ಲಿ ನಡೆದ ಕೊಡಗು ಕಂಪೆನಿಯ ದೈನಿಕ ರುಗಳ ವಿಚಾರಣೆಗಿನಲ್ಲಿ ಮಹಾತ್ಮರ ಅಕಾಲ ಮರಣಕ್ಕೆ ಸಂತಾಪ ಸೂಚಿಸಲಾಯಿತು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿಂಗ್ ಫೆಡರೇಶನಿನ ದೈನಿಕರುಗಳು ತಾ ೧೫ರಲ್ಲಿ ಫೆಡರೇಶನ್ ಆಫೀಸಿನಲ್ಲಿ ಸಭೆಸೇರಿ ಗಾಂಧೀಜಿಯವರ ಗಣಿಖಕರವಾದ ಮರಣಕ್ಕೆ ಸಂತಾಪ ಸೂಚಿಸಿರಾವು ಮಾಡಿದರು.

## ಮಡಿಕೇರಿಯಲ್ಲಿ ಗಾಂಧೀಜಿಯವರ ಶ್ರಾದ್ಧಾವಿಧಿ.

ತಾರೀಕು ೧೫ರ ಸಾಯಂಕಾಲ ಮಹಾತ್ಮರ ಪವಿತ್ರ ಭಸ್ಮವು ಮಡಿಕೇರಿಗೆ ತರಲ್ಪಡುವದೆಂದು ಗೊತ್ತಾದಂತೆ ಪುರಜನರು ತಂಡತಂಡವಾಗಿ 'ಬಿಳೇಡಿ' (ಜಿಲ್ಲಾ ಮ್ಯಾಜಿಸ್ಟ್ರೇಟರ ಬಂಗ್ಲೆ ಬಳಿ) ಹತ್ತಿರ ನೆರೆಸಲು ರಿವಾಜಿನಂತೆ ಮಾಡುತ್ತಾ ಭಸ್ಮದ ಯಾತ್ರೆ ನೋಡುತ್ತಿದ್ದರು. ಬೆಂಗಳೂರಿನಿಂದ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಭಸ್ಮವನ್ನು ತೆಗೆದುಕೊಂಡು ರಾತ್ರಿ ೯-೩೦ ಗಂಟೆಗೆ ಬಂದು ತಲಪಿದರು. ಇಡೀ ಜನತೆಯು ಗೋವಿಂದನ ನಾಮಸಂಕೀರ್ತನೆ ಮಾಡುತ್ತಾ ಸ್ವಾಗತಿಸಿತು. ನಂತರ ಈ ವಿಮಲ ಅವಶೇಷವನ್ನು ಚೇಫ್ ಕಮಿಷನರು ಪಲ್ಲಕಿಯಲ್ಲಿಟ್ಟರು. ಹೂವಿನ ಮಳೆಗರೆಯಿತು. ಮೇರವಣಿಗೆಯು ಹೊರಟಿತು. ಶ್ರೀಯುತರೇ ಪಲ್ಲಕ್ಕಿಯನ್ನು ಹೊತ್ತರು ರಾಮ ಭಜನೆ ಮಾಡುತ್ತಾ ಕೋಟೆಗೆ ಬಂದು ಕೋಟೆಯೊಳಗೆ ಅಲಂಕೃತವಾಗಿದ್ದ ಪೀಠದಲ್ಲಿ ರಾಜಮರ್ಯಾದೆಯಿಂದ ಅವನ್ನು ಇಡಲಾಯಿತು. ನಂತರ ಎಲ್ಲಾ ದರ್ಶನ ಮತ್ತು ಸ್ಪರ್ಶಕ್ಕೆ ಬಿಡಲಾಯಿತು. ಅಲ್ಲಿ ರಾತ್ರಿ ಇಡೀ ಭಗವದ್ಗಾನ ಸಂಕೀರ್ತನೆ ಮಾಡಲಾಯಿತು ಬೆಳಿಗ್ಗೆ ೭-೩೦ ಗಂಟೆಗೆ ಕೋಟೆಯ ಆವರಣದಲ್ಲಿ ಇಡೀ ಮಡಿಕೇರಿಯೇ ಬಾಮು ನೆರೆದಿತ್ತು. ಭಸ್ಮ ಪೊಂದಿಗೆ ಮೆರವಣಿಗೆಯು ಪ್ರಾರಂಭವಾಯಿತು. ಚೀಫ್ ಕಮಿಷನರೇ ಮೊದಲಾದ ಎಲ್ಲಾ ಉದ್ಯೋಗಸ್ಥರೂ ಮೆರವಣಿಗೆಯಲ್ಲಿದ್ದರು. ಪೋಲಿಸ್‌ಬಲವೂ ಇತ್ತು. ಪೇಟೆಯ ಪ್ರಮುಖ ಬೀದಿಗಳನ್ನು ಸುತ್ತಿ ರ್ಗಳಿಲ್ಲಿ ಮಹಾತ್ಮರು ಬಂದು ಭಾಷಣವಿತ್ತ ರಾಜಾಸೀಟಿನ ಸ್ಥಳದಲ್ಲಿ ಜನತೆಯು ಸೇರಿತು. ಭಜನೆ, ಕುರಾನ್, ಬೈಬಲ್ ಪಠನವಾದ ನಂತರ ಭಸ್ಮವನ್ನು ತಾಲೂಕಿಗೆ ತೆಗೆದುಕೊಂಡು ಹೋಗಲಾಯಿತು ಮಡಿಕೇರಿಯಿಂದ ಬಸ್ಸುಗಳ ವಿಶೇಷ ಏರ್ಪಾಡಾಗಿತ್ತು. ಭಾಗಮಂಡಲದಲ್ಲಿ ಮೆರವಣಿಗೆಯೂಯಿತು. ವಿಸ್ತಾರವಾದ ದಕ್ಷಿಣ ಕೊಡಗಿಗೆ ಕಳುಹಿಸಿದ ಭಸ್ಮದ ಒಂದು ಭಾಗವನ್ನು ಶೃಂಗೇರಿಯ ಕಾರಂಜಿಯಲ್ಲಿ ಇಟ್ಟು ಕೊಂಡು ಪೊನ್ನಂಪೇಟೆ, ಗೋಣಿಕೊಪ್ಪಲು ನುತ್ತು ವೀರಾಜಪೇಟೆಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ೧೧-೪೫ ಗಂಟೆಗೆ ಭಾಗಮಂಡ್ಲಕ್ಕೆ ತಲಪಲಾಯಿತ. ಮಧ್ಯಾಹ್ನ ೧೨ ಗಂಟೆಗೆ ಪವಿತ್ರ ಸಂಗಮದಲ್ಲಿ ಮಹಾತ್ಮರ ಅವಶೇಷವನ್ನು ಬೇಫ್ ಕಮಿಷನರ ಪತ್ನಿಯವರಿಂದ ವಿಲೀನ ಮಾಡಲ್ಪಟ್ಟಿತು. ಭಾಗಮಂಡಲದಲ್ಲೂ ಜನಸಂದಣಿಯು ಕಿಕ್ಕಿರಿದು ನೆರೆದಿತ್ತು. ಭಸ್ಮದ ಸ್ವಲ್ಪಾಂಶವನ್ನು ಮುಂದೆ ರಚಿಸಲ್ಪಡುವಬಹುದಾದ ಮಹಾತ್ಮರ ಸ್ಮಾರಕದ ಉಪಯೋಗಕ್ಕಾಗಿ ಸರಕಾರವೆ ಪರ್ಯವೇಕ್ಷಿಸಲು ಗಿದೆಯೆಂದು ಗೊತ್ತಾಗಿದೆ.

ಸಾಯಂಕಾಲ ೫ ಗಂಟೆಗೆ ಮಡಿಕೇರಿ ರಾಜಾಸೀಟ್‌ನಲ್ಲಿ ದೊಡ್ಡ ಸಭೆ ನೆರೆದಿತ್ತು. ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಿದ್ದರು. ಧ್ವನಿವರ್ಧಕ ಯಂತ್ರವು ಏರ್ಪಾಡಾಗಿತ್ತು 'ವೈಷ್ಣವ ಜನತೋ'ಮತ್ತಿತರ ಹಾಡುಗಳನ್ನು ಹಾಡಿದನಂತರ ಅಧ್ಯಕ್ಷರು ಗಾಂಧೀಜಿಯವರಿಗೆ ಗೌರವಾರ್ಪಣೆ ಮಾಡಿದರು. ನಂತರ ಶ್ರೀಗಳಾದ ಪಿ. ಎ. ಬೆಳ್ಯಪ್ಪ, ಕೆ. ಸಿ. ಕರುಂಬಯ್ಯ, ಎನ್. ಸೋಮಣ್ಣ, ಕೆ. ಫಾ. ಸಿಕ್ಕೇರಾ, ಅಬ್ದುಲ್ ರಹಮಾನ್ ಖಾನ್, ಡಾ ನಂಜುಂಡೇಶ್ವರ, ಮಿಸ್. ಕಡೆಮಾಡ ಸೀತಾಬೆಳ್ಯಪ್ಪ, ಬಿ. ಎಂ. ಸುಬ್ಬಯ್ಯ, ಬಿ. ಡಿ. ಗಣಪತಿ ನುತ್ತು ಮಿಸ್. ಪಿ. ಸೀತಾಬೆಳ್ಯಪ್ಪ ಇವರುಗಳು ಭಾಷಣ ಮಾಡಿದರು. 'ರಾಮಧುನ್'ನಿಂದ ಸಭೆಯು ಮುಕ್ತಾಯಗೊಂಡಿತು

ಗಾಂಧೀಜಿಯರ ಶ್ರಾದ್ಧಾದ ಈ ಪವಿತ್ರ ದಿನ ದರಿದ್ರನಾರಾಯಣರಿಗೆ ಅನ್ನಸಂತರ್ಪಣೆಯ ಏರ್ಪಾಡನ್ನು ಮಡಿಕೇರಿಯಲ್ಲಿ ಮಾಡಲಾಗಿತ್ತು. ಕೊಡಗು ಜಿಲ್ಲಾತ್ಮಕರ ಸಂಘದ ಕಟ್ಟಡದ ಆವರಣದಲ್ಲಿ ಇದು ನಡೆಯಿತ. ಸುಮಾರು ೮೦೦ ಜನ ಬಡ ಜನರ ಸೇವೆ ಮಾಡಲಾಯಿತು.

ತಾರೀಕು ೧೫ ಕ್ಕೆ ಕೊಡಗಿನ ಎಲ್ಲಾ ಸೇರಿ ಪಟ್ಟಣಗಳಲ್ಲಿಯೂ ಹಲವು ಗ್ರಾಮಗಳಲ್ಲಿಯೂ ಮೆರವಣಿಗೆ, ಶೋಕ ಸಭೆಗಳು, ಪೂಜೆ ಪುನಸ್ಕಾರಗಳು ನಡೆಯಲಾಗಿದೆ.

# ✹ ಗಾಂಧೀ ಜೀವನದ ಕೆಲವು ರಸಮಯ ಸನ್ನಿವೇಶಗಳು ✹

— ಸಂಗ್ರಾಹಕಃ—'ಗುಪ್ತ', ಮಡಿಕೇರಿ —

ಒಮ್ಮೆ ಪ್ರಸಿದ್ಧ ಕಲಾಕಾರರೊಬ್ಬರು ತಾವು ಚಿತ್ರಿಸಿದ ಅತೀ ಅಮೂಲ್ಯವಾದ ಚಿತ್ರವೊಂದನ್ನು ಗಾಂಧೀಜಿಗೆ ತೋರಿಸಿ ಅದರ ಸೊಬಗನ್ನು ವರ್ಣಿಸತೊಡಗಿದರು. ಗಾಂಧಿ ಬಸಿಯೂ ಜಾತಿ ಅಲ್ಲವೇ? 'ನಿನಗೆ ಕಲೆ ಗೊತ್ತಿಲ್ಲ' ಎಂದರು. 'ಇಲ್ಲಿಯ ಬಣ್ಣ ನೋಡಿ. ಈ ಬಣ್ಣದಲ್ಲಿ ಭಾವನೆಯು ಯಾವ ರೀತಿ ಮೂರ್ತಿಮತ್ತಾಗಿ ಬಂದಿದೆ' ಎಂದು ಕಲಾಕಾರನು ತಿಳಿಸಿದ. ಸರಕಾರಕ್ಕೆ ಸೊಪ್ಪು ಹಾಕದ ಗಾಂಧೀಜಿ ಈ ಕಲಾಕಾರನ ಮೂತಿಗೆ ಸೊಪ್ಪುಹಾಕುವರೇ? 'ತಮ್ಮಾ, ಇದಕ್ಕೆಷ್ಟು ಹಣ ಕೊಟ್ಟರುವೆ ಹೇಳು? ಇಷ್ಟೇ ಹಣ ವಿಂದ ಬಡ ಹುಡುಗನೊಬ್ಬನಿಗೆ ದಿನಾಲು ಬಾಳಷ್ಟು ಹಾಲು ಕೊಡುತ್ತಾ ಹೋಗು. ನೋರೆಯ ನೋಲೆ ಎಂಥಾ ಗಲಾಟೆ ಕಳೆ ಎಸುತ್ತದೆ ನೋಡು. ನಿರ್ಜೀವ ಚಿತ್ರಕ್ಕೆ ಹಣ ವೆಚ್ಚಮಾಡಿ ಸಜೀವ ಕಲೆಯ ಗೋ ಳಕಟ್ಟುವೆಯೊ?' ಎಂದರು. ಕಲಾಕಾ ನು ತಾಡಿ ತಲೆ ತಗ್ಗಿಸಿದರು.

* * *

ಗಾಂಧೀಜಿ ಸುಂಟಿಕೊಪ್ಪದ ಗುಂಡು ಕುಟ್ಟಿಯಲ್ಲಿ ತಂಗಿದ್ದರು. ರಮಣೀಯ ಪ್ರದೇಶ. ಅವರು ಇಳಿದಿದ್ದ ಮನೆಯ ನೆರೆಯಲ್ಲಿಯೇ ಗೌರಮ್ಮನ ಮನೆ. ಗಾಂಧೀಜಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಬೇಕೆಂದು ಆಕೆಯ ಬಯಕೆ. ಆಕೆ ಬೆಳಿಗ್ಗೆನಿಂದ ಉಪವಾಸ ಮಾಡತೊಡಗಿದಳು. ಗಾಂಧೀಜಿಗೆ ಈ ವಾರ್ತೆ ತಿಳಿಯಿತು. ಗೌರಮ್ಮನನ್ನು ಕೇಳಿದರು. 'ಏಕಮ್ಮಾ, ಉಪವಾಸ?' 'ನೀವು ನನ್ನ ಮನೆಗೆ ಬರಲೀ ಎಂದು. ನಿಮಗಾಗಿ ಕೆಲವು ಒಡವೆ ಇಟ್ಟಿದ್ದೇನೆ' ಗೌರಮ್ಮ ಗದ್ಗದ ಕಂಠದಿಂದ ಹೇಳಿದಳು. 'ಬಹಳ ಒಳ್ಳೇದು. ಮೊದಲು ನಿನ್ನ ಉಪವಾಸ ಮುಗಿಸಬೇಕು' ಗಾಂಧೀಜಿ ಎಂದರು. 'ನೀವು ಬರುತ್ತೀರಿ ಎಂದು ಮಾತು ಕೊಟ್ಟರೆ' ಎಂದಳು ಗೌರಮ್ಮ. 'ಮನದ ಕೇಳಬಾರದು ತಂಗೀ. ತೆಗೆದುಕೋ ಈ ಕಿತ್ತಳೆ ಹಣ್ಣು. ಅದನ್ನು ನೊದಲು ತಿನ್ನು. ಹೀಗಲ್ಲ ವ್ಯಾಪಾರ ಮಾಡತ್ತಾರೆಯೇ? ನಿನ್ನ ಪ್ರೇಮದ ದುರ್ಧಾರಶಕ್ತಿಯಲ್ಲಿ ನನಗೆ ನಂಬಿಕೆ ಇರಲಿ.' ಆಕೆ ಹಣ್ಣು ಮುಟ್ಟಲಿಲ್ಲ. ಆಕೆಗೆ ಗಾಂಧೀಜಿಯ ಮಾತು ಅರ್ಥವಾಗಿಲ್ಲಿ ಅನಮಾನದಿಂದ 'ನೀವು ಬರುತ್ತೀರಾ ಹಾಗಾದರೆ' ಎಂದಳು. 'ಬರುತ್ತಾರೆ ತಗೋ ತಾಯಿ' ಮಿರಾಬೆನ್ನು ನಗುತ್ತಾ ಹೇಳಿದಳು. ಗೌರಮ್ಮ ಹಣ್ಣು ತಿಂದಳು. ಗಾಂಧೀಜಿ ಆಶ್ರಿಗೆ ಬಿಟ್ಟಾರಿ. ಕೊಟ್ಟ ಆಭರಣ ಮತ್ತೆ ಇಡಬಾರದೆಂದು ನಿಯಮ ಮಾಡಿದರು.

* * *

ಗಾಂಧೀಜಿಗೂ ಮಕ್ಕಳಿಗೂ ಅತಿಶಯದ ಮೈತ್ರಿ. ಮಕ್ಕಳ ಗುಂಪೊಂದು ಗಾಂಧೀಜಿಯನ್ನು ನೋಡಲು ಬಂದಿತ್ತು. ಗಾಂಧೀಜಿಯವರು ಕೇಳಿದರು. 'ನಿಮ್ಮ ಉಪಾಧ್ಯಾಯರು ಪಾಠ ಚೆನ್ನಾಗಿ ಹೇಳುತ್ತಾರೆಯೇ?' ಮಕ್ಕಳಲ್ಲಿ ಹೌದೆಂದು ಕೆಲವರು ಹೇಳಿದರು. ಇಲ್ಲವೆಂದು ಕೆಲವರು. 'ನಿಮ್ಮನ್ನು ಹೊಡೆಯುತ್ತಾರೆಯೇ? 'ಬನ್ನೊಮ್ಮೆ ಹೊಡೆಯುತ್ತಾರೆ' ಎಂದು ಮಕ್ಕಳು ಉತ್ತರಿಸಿದರು. 'ನಿಮ್ಮ ಮೂಸ್ಟು ಒಳ್ಳೆಯವರಲ್ಲವೇ?' ಮತ್ತೆ ಕೇಳಿದರು. ಕೆಲವರು 'ಅಲ್ಲ'ವೆಂದರು. ಗಾಂಧೀಜಿ ಕೇಳಿದರು. ಹಾಗಾದರೆ ತಪ್ಪನ್ನೇ ಮಾಡದೆ ಪೂರಾ ಒಳ್ಳೆಯವರಾದವರನ್ನು ನೀವು ನೋಡಿದ್ದೀರಾ?' ಒಂದೆರಡು ನಿಮಿಷ ಮಕ್ಕಳು ಸ್ತಬ್ಧವಾಗಿದ್ದರು. ಅವರಲ್ಲಿ ಒಬ್ಬ ಹುಡುಗ ನೆಗುತ್ತಾ 'ಹೌದು ನೋಡಿದ್ದೇವೆ' ಎಂದು ಗಾಂಧೀಜಿಯ ಕಡೆಗೆ ಕೈ ತೋರಿಸಿದ. ಗಾಂಧೀಜಿಗೂ ಹುಡುಗನ ಮಾತಿನಿಂದ ಬೆರಗಾದಂತಾಯಿತು. 'ಅಲ್ಲಪ್ಪಾ, ನಾನು ಒಳ್ಳೆಯವನಾಗಿದ್ದರೆ ಸರಕಾರದವರು ನನ್ನನ್ನೆ ಆಗಾಗ್ಗೆ ಜೈಲಿಗೇಕೆ ಕಳಿಸುತ್ತಾರೆ?' ಬಾಪು ಕೇಳಿದರು. ಮಕ್ಕಳಿಗೆ ಅರ್ಥವಾಗಲಿಲ್ಲ. ಬಾಪು ವಿವರಿಸಿದರು. 'ನೋಡಿ, ಮನುಷ್ಯರಲ್ಲಿ ಯಾರೂ ಆಷ್ಟು ಒಳ್ಳೆಯವರಲ್ಲ. ತಪ್ಪೇ ಇಲ್ಲದವನು ದೇವರೊಬ್ಬನೇ. ನಾವೆಲ್ಲರೂ ದೇವರಂತೆ ಆಗಲು ಪ್ರಯತ್ನಿಸಬೇಕು. ಅದಕ್ಕೆ ಸತ್ಯವೇ ದಾರಿ. ಎಲ್ಲರೂ ಸತ್ಯ ಅಡಬೇಕು.'

* * *

ಗಾಂಧೀಜಿಯವರು ಇಟಲಿಯಲ್ಲಿದ್ದಾಗ ಇಟಲಿಯ ದೊರೆಯ ಕರಿಯ ಮಗಳು ಮೇರಿಯೂ ಗಾಂಧೀಜಿಯನ್ನು ನೋಡಲು ಬಂದಳು. ಬಾಲ್ಯನಿನ ಇದುರಿಗೆ ನೆಲದಲ್ಲಿ ಕುಳಿತಳು. ಗಾಂಧೀಜಿಗೆ ಆಕೆಯ ಭಾಷೆ ಬಾರದು. ಆಕೆಗೆ ಗಾಂಧೀಜಿಯ ಭಾಷೆ ತಿಳಿಯದು. ಗಾಂಧೀಜಿ ನೂಲು ತ್ತಾ ಆಕೆಯನ್ನು ನೋಡಿ ನಕ್ಕರು. ಆಕೆಯೂ ನಕ್ಕಳು. ಅರಮನೆಯವರಿ ತಾನು ತಂದಿದ್ದ ಹಣ್ಣಿನ ಬುಟ್ಟಿಯನ್ನು ಇಂದಿಟ್ಟು 'ಇವು ಹಿಂದೂಸ್ಥಾನಿ ಅಂಜೂರ. ನಿನಗೆ ಫಲಹಾರಕ್ಕಿರಲಿ ಎಂದು ತಂದೆ' ಎಂದಳು. ಬಾಪು ಬುಟ್ಟಿ ತೆಗೆದುಕೊಂಡು ನೋಡಿದರು. ತಮ್ಮ ಸಂತೋಷ ಸೂಚಿಸಿದರು. 'ಆದರೆ ಇದು ಅಂಜೂರ ವಲ್ಲ ತಂಗೀ' ಎಂದರು. ಬೆಲ್ಲದೇ ಮಾತೇ ಆದರೂ ಗಾಂಧೀಜಿಗೆ ಅವು ಸತ್ಯವಾಗಿರ ಬೇಕು. ಅರಸು ಕುವರಿಯೂಗಲಿ, ಆಕ್ಷರ ಕನ್ಯೆಯೂಗಲಿ. ಅಸತ್ಯಕ್ಕೆ ಕ್ಷಮೆ ಯೆಲ್ಲ.

* * *

ದಕ್ಷಿಣಾ ಆಫ್ರಿಕ. ಕೋರ್ಟಿನಿಂದ 'ಮೋಹನ್‌ದಾಸ್ ಕರಚಂದ್ ಗಾಂಧಿ' ಎಂದು ಕೂಗಿದರು. ತೆಳ್ಳಗೆ ಬಳುಕುತ್ತಾ ಗಾಂಧೀಜಿ ಅಪರಾಧಿಗಳ ಪಂಜರದಲ್ಲಿ ನಿಂತರು ವಿಚಾರಣೆಯೊಗಿ ಸ್ವಜನ ಸೇವೆಗಾಗಿ ಜೈಲು ಶಿಕ್ಷೆಯಾಯಿತು. ನೆರೆದಿದ್ದ ಜನರಿಗೆ ಮಹಾತ್ಮರು ತೊಟ್ಟ ಸಂದೇಶ ಏಗಿತ್ತು. 'ಬೇಕಾದವರು ಬೇಕಾದದ್ದನ್ನಲಿ, ನಾನು ಮತ್ತೆ ಮತ್ತೆ ಹೇಳುತ್ತೇನೆ. ಇದು ಧರ್ಮ ಯುದ್ಧ, ಧರ್ಮ ಸ್ವಾತಂತ್ರ್ಯದ ಕದನ. ಸರ್ವಧರ್ಮಗಳ ಮೂಲವಿದು. ದೇವರಿದುರು ನಿನ್ನನ್ನು ನಿಲ್ಲಿಸುವ ಧರ್ಮವಿದು.....ಏನು ಜೇಳಿದ ಮಾತನ್ನು ಹೇಳುತ್ತೇನೆ. ದೇವರನ್ನು ಹಿಂಬಾಲಿಸುವವರು ಜಗತ್ತನ್ನು ಬಿಡಬೇಕು. ಈ ಪ್ರಸಂಗದಲ್ಲಿ ನನ್ನ ಜನರಿಗೆ ಹೇಳುತ್ತೇನೆ. ಜಗತ್ತನ್ನು ಬಿಟ್ಟು ದೇವರನ್ನು ಹಿಡಿದುಕೊಳ್ಳಿ. ತಾಯಿ ಎದೆಗೆ ಗಟ್ಟಿಯಾಗಿ ಅವಚಿಕೊಳ್ಳುವ ಮಗು ವಿನಂತೆ ದೇವರನ್ನು ಹಿಡಿದುಕೊಳ್ಳಿ.' ಧೀರರು ದೇವರ ದಾರಿ!

* * *

ಗಾಂಧೀಜಿಯವರು ಸೇವಾಗ್ರಾಮದಲ್ಲಿದ್ದಾಗ ಅದೊಂದು ತೀರ್ಥಕ್ಷೇತ್ರವಿದ್ದಂತೆ. ಅಲ್ಲಿ ನಾನಾ ದೇಶದ ಜನರು ಬಂದಿರುತ್ತಿದ್ದರು ಒಬ್ಬ ಜಪಾನೀ ಭಿಕ್ಷುವೂ ಸೇವಾಗ್ರಾಮದಲ್ಲಿ ವಾಸವಿದ್ದನು. ನಿಜವಾದ ಸಾಧು ಆತ ಆಶ್ರಮ ಜೀವನಕ್ಕೆ ಹೊಂದಿಕೊಂಡು ಆ ಗುಂಪಿನಲ್ಲಿ ಬೆರೆತು ಹೋಗಿದ್ದ. ಆತನಿಗೊಂದು ಸಲ ಲಂಗೋಟಿಗೆ ಬಟ್ಟೆ ಬೇಕಾಯಿತು. ಎಲ್ಲಾ ಬಟ್ಟೆಗಿಂಥಾ ಜಪಾನಿನ ಬಟ್ಟೆ ತಾನೆ ಆಗ್ಗ. ಅದನ್ನು ತಂದ. ಗಾಂಧೀಜಿಯ ಕಣ್ಣಿಗೆದು ಬಿತ್ತು. 'ನಿನ್ನ ವಾಲಿಗೆ ಆದು ಸ್ವದೇಶಿ ಬಟ್ಟೆಯೇ ಸರಿ. ಆದರೆ ಹಿಂದೂಸ್ಥಾನದಲ್ಲಿರುವಾಗ ಹಾಗಲ್ಲ. ಆ ಪ್ರಿಕಾದಲ್ಲಿ ನಾನಿದ್ದಾಗ ಆಫ್ರಿಕಾದ ಸಾಮಾನುಗಳನ್ನೇ ಉಪಯೋಗಿಸುತ್ತಿದ್ದೆ. ನಾನು ನಿನಗೆ ಖಾದಿ ಹಾಕಲು ಹೇಳುತ್ತೇನೆ. ಖಾದಿಗೆ ಬೆಲೆ ಹೆಚ್ಚು ಹೌದು. ನೀನು ಸ್ವಲ್ಪ ಕಡಿಮೆ ಬಟ್ಟೆ ಕೊಡಂಥಾ ಯಿತು' ಎಂದರು ಸಾಧು ತಂದಿದ್ದ ಬಟ್ಟೆ ಹಿಂತಿರುಗಿ ಕೊಟ್ಟ. ಆ ರಾತ್ರಿ ಆತನ ದಿನಚರಿಯಲ್ಲಿ ಹೀಗೆ ಬರೆದಿತ್ತು. 'ಈ ದಿನ ಬೊಸ್ಟ ತಪ್ಪು ಮಾಡಿದೆ.'

* * *

ಮಿರಾಬೆನ್ನ ಮಲಬಾರಿನ ಹುಡುಗಿ. ಗಾಂಧೀಜಿಯವರಿಗೆ ತನ್ನೊಡನೆಗಳನ್ನು ಕೊಡಲು ಬಂದಳು. 'ನಿಮ್ಮ ತಂದೆ ತಾಯಿಯರನ್ನು ಕೇಳಿರುವೆಯಾ? 'ಗಾಂಧೀಜಿ ಕೇಳಿದರು. 'ಅವರನ್ನು ಒಪ್ಪಿಸುವ ಭಾರ ನನ್ನದು' ಮಿರಾಬೆನ್ನ ಹೇಳಿದಳು. ಹೌದು, ಮಲಯಾಳ ಹುಡುಗಿಯರು ದಿಟ್ಟಿಯರು. ನಾಕದಲ್ಲಿ ನಾನಾತರವ ಆಲಂಕಾರ ಇವೆ. ಒಡವೆ ಹಾಕುವದು ನನ್ನ ದೃಷ್ಟಿಯಿಂದ ಸೌಂದರ್ಯವಲ್ಲ. ನನಗೆ ಗುಣವೇ ಅಲಂಕಾರ' ಎಂದರು ಗಾಂಧೀಜಿ. 'ನೀವು ಹೇಳಿದಂತೆಯೇ ಮಾಡುವೆನು' ಎಂದಳು ಮಿರಾಬೆನ್ನ. 'ಬಲು ಚೆನ್ನ. ಈ ರಾತ್ರಿ ಯೋಚನೆಮಾಡಿ ನೋಡು' ಎಂದರು ಗಾಂಧೀಜಿ. ಮರುದಿನ ಮಿರಾಬೆನ್ನ ಬಂದಾಗ ಆಕೆಯ ಗುರುತೇ ಸಿಕ್ಕಲಿಲ್ಲ. ಮೈಯಲ್ಲಿ ಒಡವೆ ಒಂದೂ ಇಲ್ಲ. ಮಹದೇವ ದೇಸಾಯಿ ಕೇಳಿದರು 'ಎಲ್ಲಿ ನಿನ್ನ ಒಡವೆಗಳೆಲ್ಲಿ?' 'ಎಲ್ಲಾ ತೊಮ್ಮುಬಿಟ್ಟೆ. ಗಾಂಧೀಜಿಗಲ್ಲಿ ಧನ್ಯ ತಂದೆಗೆ ತುಂಬಾ ಸಾಲ, ನಾನು ಮತ್ತೊಂದಿಗೂ ಒಡವೆ ಧರಿಸೆನೆಂದು ಸಂಕಲ್ಪಮಾಡಿ ಈ ಒಡವೆಗಳಿಂದ ಸಾಲ ತೀರಿಸಲು ತಂದೆಗೆ ಕೊಟ್ಟೆನು' ಎಂದಳು ಮಿರಾಬೆನ್ನ. ಮಧ್ಯಾಹ್ನ ಸಭೆ. ಮಿರಾಬೆನ್ನೆಯ ಕುಟುಂಬವೆಲ್ಲಾ ಸಭೆಗೆ ಬಂದಿತ್ತು. ಮಿರಾಬೆನ್ನೆಯ ಒಂದು ಬಂಗಾರದ ಬಳೆ, ಒಂದು ಸರ ಕೊಟ್ಟಳು. ಗಾಂಧೀಜಿಗೆ ಆಕೆಯ ತಂದೆಯ ಸಾಲದ ವಿಚಾರ ಗೊತ್ತಿತ್ತು. 'ನೀವು ಒಡವೆ ಕೊಡಬೇಡ, ನಿನ್ನ ಸಾಲ ತೀರಿಸಿರಿ. ಮಿರಾಬೆನ್ನೆ ಒಡವೆ ಕೇಳುವದಿಲ್ಲ' ಎಂದರು. ಮಿರಾಬೆನ್ನೆಯು ಕೆನ್ನೆಯ ಮೇಲೆ ಮುತ್ತಿನ ಹನಿ ಸುರಿಯುತ್ತಿತ್ತು. ಕಂಠ ಬಿಗಿದುಬಂದಿತ್ತು. 'ನಿನ್ನ ಮಗಳು ತೊಟ್ಟ ಈ ವ್ರತಕ್ಕೆ ಹರಸಬಾರದೇ?' ಗಾಂಧೀಜಿ ಹೇಳಿದರು. 'ಮದುವೆ ಇದೆಯಲ್ಲ; ಒಡವೆ ಇಲ್ಲದ ಹುಡುಗಿಯನ್ನು ಯಾರು ಮದುವೆಯೊಗುತ್ತಾರೆ'? ಮಿರಾಬೆನ್ನೆಯ ತಾಯಿ ಹೇಳಿದರು. ಗಾಂಧೀಜಿ ಸಮಾಧಾನ ಹೇಳುತ್ತಾ ನುಡಿದರು. 'ಮದುವೆಯ ಚಿಂತೆ ನಿಮಗೇಕೆ? ಒಂದಲ್ಲ, ಏನತ್ತು ವರನನ್ನು ತರುತ್ತೇನೆ. ಅವರಲ್ಲಿ ಬೇಕಾದವರನ್ನು ಆರಿಸುವಿರಂತೆ' ಎಂದರು. ತಾಯಿ ಮಿರಾಬೆನ್ನೆಯನ್ನು ಹರಿಸಿದಳು. ಬಲಪ್ಪನೇ ಬಾಳ ಸವಿ. ಬದುಕಿನ ಭಾಗ್ಯ!

* * *

ಒಂದು ಸಲ ಕೆಲವು ಹೆಂಗಸರು ಗಾಂಧೀಜಿಯ ಭೇಟಿಗೆ ಬಂದಿದ್ದರ. ನಾಲ್ಕು ನಗೆಮಾತಾದ ಮೇಲೆ ಖಾದಿ ಉಡುತ್ತೇನೆಂದು ಪ್ರತಿಜ್ಞೆಮಾಡಿದ ಒಬ್ಬಾಕೆಯನ್ನು ನಿದೇ೯ಶಿಸಿ ಗಾಂಧೀಜಿ ಕೇಳಿದರು. 'ನಿನಗೆ ಮದುವೆ ಆಗಿದೆ ಏನನ್ನೂ?' ಹೌದೆಂದು ಆಕೆ ಉತ್ತರಿಸಿದಳು. 'ನಿನ್ನ ಗಂಡ ಖಾದಿ ಹಾಕುತ್ತಾನೆಯೇ?' ಎಂದು ಕೇಳಿದರು. ಇಲ್ಲವೆನ್ನುವಾಗ ಆಕೆಗೆ ತಂಬಾ ನಾಚಿಕೆ ಕೆನ್ನೆ ಕೆಂಪಾಗಿತ್ತು. 'ಹಾಗಾದರೆ ನಿನ್ನ ಗಂಡ ನಿನ್ನನ್ನು ಖಾದಿ ತೊಗಲು ಬಿಡುತ್ತಾನೋ ಇಲ್ಲವೋ?' ಎಂದರು ಗಾಂಧೀಜಿ. ಅವಳಿಗೆ ಏನೂ ತೋಚದಾಯಿತು. 'ಅವರು ಹೇಳುವಂತೆ ಮಾಡುತ್ತೇನೆ' ಎಂದಳು. 'ಆತನು ಖಾದಿತೊಡಬೇಡವೆಂದರೆ ನೀವು ಕೊಟ್ಟ ಪ್ರತಿಜ್ಞೆಯ ಗತಿಯೇನು.?' ಎಂದು ಗಾಂಧೀಜಿ ಕೇಳಿದರು. ಆಕೆಯ ಬಾಯಿಯಿಂದ ಮಾತು ಹೊರಡಲಿಲ್ಲ. ಗಾಂಧೀಜಿ ಹೇಳಿದರು. 'ಸೀತಾದೇವಿ ಶ್ರೀರಾಮ ಚಂದ್ರನ ಮಾತು ಮೀರಿದ್ದಾಳೆ, ಗೊತ್ತೇ ತಾಯಿ ನಿನಗೆ?' ಆಕೆಗೆ ಆ ಕಥೆ ಹೊಳೆಯಲಿಲ್ಲ. 'ಕೇಳು. ಶ್ರೀರಾಮ ಕಾಡಿಗೆ ಬರಬೇಡವೆಂದು ಸೀತೆಗೆ ಹೇಳಿದಾಗ ಆಕೆ ಆತನ ಮಾತನ್ನು ಕೇಳದಳೆ! ಇಲ್ಲ. ಆತನನ್ನು ಹಿಂಬಾಲಿಸುವದೇ ತನ್ನ ಧರ್ಮವೆಂದು ಆಕೆಗೆ ಗೊತ್ತು. ಆಕೆಯು ಹಾಗೆ ನೀನೂ ನಿನ್ನ ಗಂಡನ ಪೂಜೆ ಮಾಡು. ಆದರೆ ನಿನ್ನ ಧರ್ಮಕ್ಕೆ ಅಡ್ಡಿ ಬಂದರೆ ಮರ್ಯಾದೆಯಾಗಿ ಆತನ ಮಾತನ್ನು ಮೀರಬೇಕು. ತಿಳಿಯತೇನೆಮ್ಮಾ?' ಎಂದರು. ಆಕೆ ಇನ್ನು ಖಾದಿ ಹೊಡದೆ ಇದ್ದಾಳೆಯೇ?

———

# ಬಾಪುವಿನ ಅಡಿದಾವರೆಗಳಲ್ಲಿ.

(ಆಶ್ರಮವ ಸಿಯೊಬ್ಬರಿಂದ)

ಜೀವನದಲ್ಲಿ ಇಷ್ಟು ನಿರುತ್ಸಾಹ ತುಂಬಿ ನಿರಾಶೆ ಎಂದೂ ಕಂಡುದಿಲ್ಲ! ಪ್ರಪಂಚವೇ ಶೂನ್ಯ; ಸೃಷ್ಟಿಯೇ ಶೂನ್ಯ ಎಂಬಂತಿದೆ! ರಾತ್ರಿ ಕಾರಿರುಳು ಅತಿ ದೀರ್ಘ ಅತಿ ದಾರುಣವೆನಿಸುತ್ತಿದೆ! ಹೃದಯ ಬಿರಿಯುವಂತೆ ಭಾಸವಾಗುತ್ತಿದೆ, ತಲೆ ಚಿಡಚಿಡಿಸುತ್ತಿದೆ!

ಅಬ್ಬ, ಅದೇನು ಕನಸು, ಅದೆಲ್ಲಿಯ ಕನವರಿಕೆ? ಅಗೋ ನೋಡಲ್ಲಿ, ಅಂತಕ-ಪರಮ-ಚಾಂಡಾಲ, ಮಹಾತ್ಮಾಜೀಯನ್ನು ಸವಿಾಪಿಸುತ್ತಿದ್ದಾನೆ ಆಹಾ! ಬಾಪುವಿನ ಪುಷ್ಪ-ಸದೃಶ ಕೋಮಲ ಶರೀರ, ಗುಡುಸು ಭೂಮಿಯನ್ನು ತಾಗುವುದನ್ನು ನೋಡಲ್ಲಿ. ಹಾರ್ ರಾಮ್ ಹಾರ್ ರಾಮ್! ಹೇ, ಕಠೋರ ಭೂಮಿಯೇ, ಮಹಾತ್ಮನನ್ನು ಧಾರಿಸಿರುವ 'ಕಚ್ಚು' ನಿನಗೆಲ್ಲಿಯದು?

ಬಾಪೂ, ಕೆಲವೇ ದಿನಗಳ ಹಿಂದಿನ ಮಾತು. ಡೆಲ್ಲಿಯಲ್ಲಿ ನಡೆದ ಘಟನೆ. 'ಕಾರಿ'ನಿಂದಿಳಿಯುವಾಗ ನಿನ್ನ ಬೆರಳುಗಳು ಜಜ್ಜಿಹೋಗಿ, ನೀವು ಮೂರ್ಛಿತರಾದ ಸುದ್ದಿ ಕೇಳಿ, ಹೌಹಾರಿ ಹೋಗಿ ನಿನ್ನಲ್ಲಿಗೆ ಧಾವಿಸಿದೆವು. ನೀವು ಚೇತರಿಸಿಕೊಳ್ಳುತ್ತ ನಿನಗೆ ಸಹಜವಾದ ಹುಸಿನಗೆಯನ್ನು ಬೀರಿ 'ಏನಿಲ್ಲ, ಏನಿಲ್ಲ, (ಕುಛ್ ನಹೀ, ಕುಛ್ ನಹೀ) ಎಂದಿರಿ. ಆಪರಿಂದು ಕರೋರ ಗುಂಡುಗಳು ನಿನ್ನ ದೇಹದೊಳಹೊಕ್ಕು ನೀವು ಭೂಮಿಗುರುಳಿದಾಗ ನಾವು ನಿನ್ನಿಂದ ಅತಿ ದೂರದಲ್ಲಿದ್ದೇವೆ! ಹಾ ವಿಧಿಯೇ!

ಹೃದಯವೇ, ಶಾಸ್ತ್ರ ಹೃದಯವೇ, ಅಳು; ಅಳು. ಆದರೆ, ಅಬೇಕೇಕೆ? ಬಾಪೂ ನಿಜವಾಗಿ ಅಳಿದರೆ? ಶರೀರ-ಧರ್ಮ: ನೀವು ಅಳಿಯಲಾಪರೆ? ಬಾಪೂವೆಂದರೆ ಆವರ್ಶಗಳ ಪೂರ್ಣ-ಸ್ವರೂಪ! ಆದರ್ಶಗಳೆಂದಿಗೂ ಅಳಿಯುವುದಿಲ್ಲ-ಅಳಿಯಲಾರವು. ನಮ್ಮ ಆಶೆ-ಆಕಾಂಕ್ಷೆಗಳೆಲ್ಲವುಗಳ ಮೂರ್ತ-ಸ್ವರೂಪ ಬಾಪೂ.

ತಮ್ಮ ಪ್ರೀತಿಯ ಬಾಪುವನ್ನು ಕಳೆದುಕೊಂಡುದರಿಂದುಂಟಾದ ಶೂನ್ಯತೆ-ಶೋಕದ ಪರಿಹಾರಕ್ಕಾಗಿ ನಗರದ ಜನ ತಂಡ-ತಂಡವಾಗಿ ಆಶ್ರಮಕ್ಕೆ ಬರುತ್ತಿದ್ದಾರೆ. ಆದರೆ, ನಮ್ಮನ್ನು ಶೂನ್ಯತೆ-ಶೋಕ ಸತತವಾಗಿ ಆವರಿಸಿಕೊಂಡಿದೆಯೆಂಬ ಅಂಶ, ಪಾಪ, ಆ ಜನರಿಗೇನು ಗೊತ್ತು? ನಾವೀಗ ಗಂಟಿಸಲ್ಲಿದ್ದರೂ 'ಏಕಾಂಗಿ'ಗಳು; ಹಿಂದೊಮ್ಮೆ ನಮ್ಮ ಪ್ರೀತಿಯ ಮೌಲಾನಾ ಆಜಾದರು 'ಭಾರತವೊಂದು ಭಾರೀ ಬಂದೀಖಾನೆ' ಎಂದಿದ್ದರು ಹೌದು; ಇಂದು 'ಭಾರತವೊಂದು ದೊಡ್ಡ ಕಾಡ್ಯ!'

ಕೇವಲ ನಾಥೂರಾಮ ದೋಷಿಯಲ್ಲ. ದೋಷ, ದ್ವೇಷ, ಅಸೂಯೆ, ದುಷ್ಟ-ಅಪೇಕ್ಷೆ ಮೊದಲಾದ ದುರ್ಗಾಣಗಳಿಗೆ ಹೃದಯ ಮಂದಿರದಲ್ಲಿ ಆಸರೆಯಿತ್ತಿರುವ ನಾವೆಲ್ಲ ನಾಥೂರಾಮನ ದುಷ್ಕೃತ್ಯದಲ್ಲಿ ಭಾಗಿಗಳು. ನನ್ನು ಪೈಕಿ ಅನೇಕರ ಹೃದಯದಲ್ಲಿ ಸಂಚಯವಾಗಿರುವ ಪಾಪ-ರಾಶಿ ನಾಥೂರಾಮನಿಗೆ ಇಂಬುಗೊಟ್ಟು, ಪಾಪಕಾರ್ಯವನ್ನು ಅವನು ಕೊನೆಮುಟ್ಟಿಸುವಂತೆ ಮಾಡಿತು. ನಶಿಸಿ ಹೋಗುತ್ತಿರುವ ಆಧ್ಯಾತ್ಮಿಕ ಭಾವನೆಯ ಉದ್ದೀಪನಕ್ಕಾಗಿ ಬಾಪುವಿನ ಈ ಅಂತಿಮ 'ಬಲಿದಾನ' ಅವಶ್ಯಕವೆಂಬುದು ಭಗವದಿಚ್ಛೆಯೊ ಏನೋ?

ಬಾಪುವನ್ನು ಇಟ್ಟುಕೊಳ್ಳುವ-ಉಳಿಸಿಕೊಳ್ಳುವ ಯೋಗ್ಯತೆ ನಮಗಿಲ್ಲಿಯದು! ಈ ನಿರ್ಬಲ ಪ್ರಪಂಚದ ಯೋಗ್ಯತೆಗೆ ಮಿರಿದ ಮಹಾನ್ ವ್ಯಕ್ತಿ, ವಿಭೂತಿ-ಪುರುಷ-ಬಾಪು!

ಎಂದಿನಂತೆ ಪೂರ್ವ ದಿಗಂತದಲ್ಲಿ ಪ್ರಕಾಶಮಾನ ತೇಜಃ ಪುಂಜ ಸೂರ್ಯೋದಯವಾಗುತ್ತಿರಿದೆ. ಆದರೇನು, ಹೃದಯದ ಭಾರದ-ಶೋಕದ ದೆಸೆಯಿಂದ ಎಲ್ಲವೂ 'ಶೂನ್ಯ'ವಾಗಿ ತೋರುತ್ತಿದೆ. ಈ ಮಹಾ ಶೋಕದ ಸಮಯದಲ್ಲಿ ಅನೆಷ್ಟು ಶಾಂತಿ ಸಮಾಧಾನವನ್ನು ನವಂಗಿಸಿದ್ದಾನೆ! ಭಗವಂತನು ಅವನನ್ನು ಅನುಗ್ರಹಿಸಲಿ!

ಬಾಪೂ, ಕ್ಷಮಿಸು. ನಮ್ಮ ತಪ್ಪುಗಳನ್ನು ಕರ್ತವ್ಯ ಪರಾಙ್ಮುಖತೆಯನ್ನು ಕ್ಷಮಿಸು. ಸಂಶಯಗ್ರಸ್ತರಾದ ನಮಗೆ ನಿನ್ನನ್ನು ನಮ್ಮ ಸರಣ್ಯಾಗಿ ಪಡೆದುಕೊಳ್ಳುವ, ಹಿಂಬಾಲಿಸುವ ಧೈರ್ಯವನ್ನೇ ಇರಲಿಲ್ಲ. ನಾವು ನಿಶ್ಯಕ್ತರು ಆದರೂ, ನೀನು ನಮ್ಮನ್ನು ಅಡಿಪಟ್ಟ ಪ್ರೇಮದಿಂದ ನಿಶ್ಚಾಸದಿಂದ ಕಂಡೆ ಬಾಪೂ!

ಆತ ನಮ್ಮ ಹೃದಯದಲ್ಲಿ ಹೊತ್ತಿಸಿರುವ ಜ್ಯೋತಿ ಅಮರ ಜ್ಯೋತಿಯಾಗಿ, ಪರಂಜ್ಯೋತಿಯಾಗಿ ಪ್ರಕಾಶಿಸಲಿ!

'ತಾಯಿನಾಡ.'

---

# ಅವರ ಭಸ್ಮದಿಂದ.

— ಲೇ:—ಶ್ರೀ ರಾಜೇಂದ್ರ ಪ್ರಸಾದ್ —

ನಮಗೆ ದಾರಿದೋರಲು, ಧೈರ್ಯ ಕೊಡಲು ಸಾಂತ್ವನ ಹೇಳಲು, ಮೂತಾಡಿಸಲು ಗಾಂಧಿಯವರಿಂದು ರಕ್ತ ಮಾಂಸಮಯ ಶರೀರದಲ್ಲಿಲ್ಲ. ಆದರೆ ದೇಹವು ಮರ್ತ್ಯ ಮತ್ತು ಆಶಾಶ್ವತ. ಆತ್ಮವೊಂದೇ ಅನ್ಯತ ಮತ್ತು ಅವಿನಾಶಿ ಎಂದು ಅವರು ನಮಗೆ ಪದೇ ಪದೇ ಹೇಳಿಲ್ಲವೆ? ತನಗೆ ಉಪಯೋಗಕ್ಕೆ ಬೀಳುವ ವರೆಗೆ ತಮ್ಮ ದೇಹವನ್ನು ದೇವರು ಉಳಿಸುವನೆಂದು ಅವರು ಹೇಳಿಲ್ಲವೆ? ಅವರ ಆತ್ಮವು ಬಹುಶಃ ಶರೀರ ಬಂಧನದಿಂದ ಮುಕ್ತವಾಗಿ ಇನ್ನೂ ಹೆಚ್ಚು ಸ್ವತಂತ್ರವಾಗಿ ಕೆಲಸ ಮಾಡಿ ಸಿದ್ಧಿಸದೆ ಉಳಿದುದನ್ನು ಸಂಪೂರ್ಣವಾಗಿ ಸಾಧಿಸುವ ಸಾಧನಗಳನ್ನು ಸೃಜಿಸಬಹುದು. ಬಹುಶಃ ಯಮುನಾ ತೀರದಲ್ಲಿರುವ ಖೂದಿಯಿಂದ ಪರಪ್ಪರಂಲ್ಲಿರುವ ತಪ್ಪು ತಿಳಿವಳಿಕೆ ಮತ್ತು ಅಪನಂಬಿಗೆಗಳನ್ನು ಹೊಡೆದು ಹಾರಿಸಿ ತಾವು ಬದುಕಿ ಕೆಲಸಮಾಡಿ ಸಾಧಿಸಬಯಸಿದ ಮತ್ತು ಆ ಕಾರ್ಯದಲ್ಲೇ ಕೊಲೆಗಡುಕನ ಗುಂಡಿಗೆ ತುತ್ತಾಗಿ ಹೋದ ಶಾಂತಿ ಸಮಾಧಾನಗಳನ್ನು ಸ್ಥಾಪಿಸುವಂಥ ಶಕ್ತಿಗಳು ಎದ್ದು ಹೊರಟರೂ ಹೊರಟಾವು.

ಹಿಂದು ಧರ್ಮದಲ್ಲಿ, ವಿಶೇಷವಾಗಿ ಮಾನವ ಕುಲದಲ್ಲಿ ಇರುವ ಎಲ್ಲ ಉದಾತ್ತ ಮತ್ತು ಉಚ್ಚ ಭಾವಗಳ ಸಾರಸರ್ವಸ್ವವಾಗಿರಲಿಲ್ಲವೆ ಅವರು? ಆದರೂ ಆ ದೇಶ, ಧರ್ಮ, ಕುಲಗಳ ಇತಿಮಿತಿಯನ್ನರಿಯದ ಹೃದಯದಲ್ಲಿ ಗುರಿಯಿಟ್ಟು ಗುಂಡಿಕ್ಕಿದ್ದು ಒಂದು ಹಿಂದುಹಿಸ್ತನೇ ಅಲ್ಲವೆ? ಈ ಅಪರಾಧದ ಉದ್ದೇಶವೇನಿರಬಲ್ಲುದು? ಅದು ಹಿಂದುಧರ್ಮವನ್ನು ಉಳಿಸಲೆಂದೋ? ಹಿಂದು ಸಮಾಜವನ್ನು ಸೇವಿಸಲೆಂದೋ? ಹಾಗೆ ಒಂದು ಧರ್ಮದ ರಕ್ಷಣೆಯೂದೀ ಹಿಂದು ಸಮಾಜ ಅವರಿಂತ ಸೇವೆ ಹೊಂದಿತೆ? ಹಿಂದು ಧರ್ಮದ ವಿಶಾಲ ಚರಿತ್ರೆಯನ್ನು ಹುಡುಕಿರಿ. ಇಂತಹ ಕೆಟ್ಟ ವಿಶ್ವಾಸಘಾತಕ ಕಾರ್ಯ ನಿಮಗೆಲ್ಲೂ ಸಿಗದು. ಇದು ಆದರ ಚರಿತ್ರೆಯಲ್ಲಿಯಂತೆ ಗಳೆಯ-ಬರದ, ಕೆತ್ತಿ ತೆಗೆಯಬರದ ಕಗ್ಗುರುತು.

ನಾವು ಏನ್ನೆರಾಗಿದ್ದೇನೆ. ನಾವು ದಿವ್ಯಾಧಿಧರಾಗಿದ್ದೇವೆ. ನಾವು ನಿರಾಶರಾಗಬೇಕೆ? ದೇಹ ಕಾಣಲಾರದು. ಆದರೆ ಅವರು ನಮಗೊಂದು ಅಮೂಲ್ಯವಾದ ಪಿತ್ರಾರ್ಜಿತ ಸ್ವತ್ತನ್ನು ಬಿಟ್ಟು ಹೋಗಿಲ್ಲವೆ? ನಮ್ಮ ಪ್ರಗತಿಯಲ್ಲಿ ನಮ್ಮನ್ನು ಅಧರಿಸುವ ಮತ್ತು ಮುಂದಕ್ಕೊಯ್ಯುವ ಸ್ಫೂರ್ತಿ ಮತ್ತು ಉಪದೇಶಗಳನ್ನು ಸಾಕಷ್ಟು ಕೊಟ್ಟು ಹೋಗಿಲ್ಲವೆ? ಈ ಏಕಟ ದುರಂತದೆದುರಲ್ಲಿ ಅವರ ಕುಕ್ಕುಟಧ್ವನಿ ನಮ್ಮಲ್ಲಿ ಕರ್ತವ್ಯ ಬುದ್ಧಿಯನ್ನೆಬ್ಬಿಸಲಿ ಅವರು ಮಣ್ಣಿಂದ ಮಹಾವೀರರನ್ನು ತಯಾರಿಸಿದರು. ದಾಸ್ಯದ ವಿರುದ್ಧ, ಧರ್ಮದ ವಿರುದ್ಧ, ಅನ್ಯಾಯದ ವಿರುದ್ಧ ಜೀವಾವಧಿ ಹೋರಾಟದಲ್ಲಿ ಅವರು, ಅಲಕ್ಷಿತ ಸಾಧನಗಳನ್ನು ಬಳಸಿದರು. ಧರ್ಮವನ್ನು ಪ್ರತಿಷ್ಠಾಪಿಸಲು ಭಾರತಕ್ಕೆ ಇದೇ ಧೈರ್ಯ, ತ್ಯಾಗಶೀಲತೆ ಫಲಕಾರಿಸ್ಯಾರಗಳು ಬೇಕು. ಅದಕ್ಕಾಗಿ ಗಾಂಧಿಯವರು ತಮ್ಮ ಜೀವನವನ್ನೇ ಕೊಟ್ಟು ಬಿಟ್ಟಿದ್ದಾರೆ. ಅವರು ಈ ನೆಲದ ಮೇಲೆ ನಡೆಯುತ್ತಿದ್ದಾಗ ಹೇಗೋ ಹಾಗೇ ನಾವು ಅವರ ಮರಣಾನಂತರವೂ ಅವರನ್ನು ಅನುಸರಿಸಬೇಡವೇ?

ಇದು ಸಿಟ್ಟಿಗಾಗಲಿ, ಪ್ರತೀಕಾರಕ್ಕಾಗಲಿ ಸಮಯವಲ್ಲ. ಗಾಂಧಿಯವರ ಉಪದೇಶದಲ್ಲಿ ಅನ್ಯೋಂದಕ್ಕೂ ಕಾಲವಿಲ್ಲ, ಸ್ಥಳವಿಲ್ಲ. ನನಗೆ ಅಗತ್ಯವಾದುದೆಂದರೆ, ಈ ಅಪರಾಧಕ್ಕೆ ಕಾರಣವಾದ ಆತ್ಮಘಾತಕವಾದ ಸಂಕುಚಿತ ಜಾತೀಯತೆಯನ್ನು ಧ್ವಂಸಮಾಡುವ ದೃಢನಿಶ್ಚಯ. ಗಾಂಧಿಯವರ ರಾಜಕೀಯ, ಸಾಮಾಜಿಕ ಇಲ್ಲವೆ ಆರ್ಥಿಕ ಕಾರ್ಯಗಳಲ್ಲಿ ಯಾವಾಗಲೂ ಎರಡು ಮುಖಗಳಿದ್ದವು-ನಿಷೇಧಾತ್ಮಕ ಮತ್ತು ಅನುರೋಧಾತ್ಮಕ ಇಲ್ಲವೆ ರಚನಾತ್ಮಕ. ಸದಾಶಯ ಉದಯಿಸುವಂತೆ ದುರಾಶಯವನ್ನು ನಾಶಗೊಳಿಸಬೇಕು. ಜಾತೀಯ ಅಪನಂಬಿಕೆಗೆ ಮತ್ತು ಅಸಮಾಧಾನಗಳು ಅದೃಶ್ಯವಾಗಬೇಕು ಮತ್ತು ವಿಶ್ವಾಸ ಮತ್ತು ಸಮಾಧಾನಗಳು ಸ್ಥಾಪಿತವಾಗಬೇಕು. ಇದೇ ಅವರ ಕಡೆಯ ಬಯಕೆಯಾಗಿತ್ತು. ನಾವು ಖಂಡಿತವಾಗಿ ಅದನ್ನು ನೆರವೇರಿಸಬೇಕು.

---

# ಕರುಣಾಳು ಮೂರ್ತಿ-ಮುನ್ನಡೆಸಲಿ.

ಲೇ:—ಶ್ರೀ ಎಂ. ಪಿ. ಅಪ್ಪಯ್ಯ.

ಮಹಾತ್ಮ ಗಾಂಧೀಯವರ ಮರಣದಿಂದ ಹಿಂದೂಸ್ಥಾನ ಮಾತ್ರವಲ್ಲ, ಇಡೀ ಮಾನವ ಕುಲವೇ ಒಬ್ಬ ಪವಿತ್ರ ಪುತ್ರನನ್ನು ಪರಮಸೇವಕನನ್ನು ಕಳಕೊಂಡಿದೆ. ಹಿಂದೂ ಮತೆಯನ್ನು ಸ್ವತಂತ್ರಳಾಗಿರಿಸಲು ತಮ್ಮ ಬಾಳಿನ ಮುಖ್ಯಾಲು ಭಾಗವನ್ನು ಧಾರೆಯೆರೆದ ಈ ಪುಣ್ಯಮೂರ್ತಿಯ ಕೊಲೆಯು ಮಾನವ ವರ್ಗವನ್ನು ಅನಾಥವಾಗಿರಿಸಿರುವುದು.

ಪೂಜ್ಯ ಮಹಾತ್ಮ ಗಾಂಧಿಯವರು ಶ್ರೀಸ್ಥ ಹಿಂದು. ಶ್ರೀಸ್ಥ ಭಾರತೀಯರು. ಮಾನವ ಕುಲದ ಮಂದಾರ ಪುಷ್ಪ. ಹಿಂದುವಾಗಿ ಜನ್ಮವೆತ್ತಿದರೂ ಸರ್ವ ಮತಸ್ಥರಲ್ಲಿಯೂ ಸಮಾನ ಪ್ರೇಮ ತೋರುತ್ತಿದ್ದರು. ಜಾತಿ, ಮತ, ಕುಲ, ಭೇದಗಳು ಅವರಿಗಿರಲಿಲ್ಲ. ಆದುದರಿಂದಲೇ ಅವರಿಗೆ ಪ್ರತಿ ಮತಸ್ಥರಿಂದಲೂ ಸಮಾನ ಗೌರವ ಪ್ರೇಮಗಳು ದೊರೆತಿದ್ದವು. ಮತ ಛೇದದ ಬಳ್ಳಿಯೇ ಅವರ ಜೀವಕಳೆ ಉಸಿರಾಗಿತ್ತು. ನಮ್ಮ ಅಂತರ್ಕಲಹ ಸ್ವಾರ್ಥತೆ, ಸಂಕೀರ್ಣತೆಗಳಿಂದ ಅವರ ಬಾಳಿನ ಕೊನೆಯ ದಿನಗಳಲ್ಲಿ ಹುಳಿ ಹಿಂಡಿದಂತಾಗಿತ್ತು. ಹಾಗಾದರೂ ಸಹ ಅವರಿಗೆ ಯಾವ ಜನಾಂಗದ ಜನರಲ್ಲಿಯೂ ನಂಬಿಕೆ ಕಿಟ್ಟರಲಿಲ್ಲ. ಕಟ್ಟ ಕಡೆಗೆ ಎಲ್ಲಾ ಸಮಾಜಗಳೂ ಏಕವಾಗಿಯೇ ತೀರಬೇಕೆಂದು ಅವರ ನಂಬಿಕೆ. ಅಂಥಾ ಅಚಲವಾದ ಶ್ರದ್ಧೆ ಇದ್ದುದರಿಂದಲೇ ಅವರು ಏಕ್ಯ ಕ್ಕಾಗಿ ಪ್ರಯತ್ನಿಸುವುದನ್ನು ಎಂದೂ ಬಿಡಲಿಲ್ಲ. 'ಅಹಿಂಸೆಯೇ ಪರಮೋ ಧರ್ಮ' ವೆಂದು ಸಾರುತ್ತಿದ್ದ ಸಾರುವುದು ಮಾತ್ರವಲ್ಲದೆ ತಮ್ಮ ನಿತ್ಯದ ಬಾಳುವೆಯಲ್ಲಿ ಆಚರಿಸುತ್ತಿದ್ದ ಮಹಾತ್ಮರ ಮಾನವ ಸ್ವಭಾವ ಪರಿಚಯ, ಸೂಕ್ಷ್ಮ ಪರಿಶೀಲನಶಕ್ತಿ, ವಿವೇಚನಾ ಚಾತುರ್ಯ, ವಿಸ್ಮಯಕಾರಕವಾದುವು. ಅವರು ಏನೇ ತೀರ್ಮಾನ ಮಾಡಲಿ ಅವರದೇ ತರಿದಾರಿಯೂಗುತಿತ್ತು.

ತಾಯಿನಾಡಿನ ಏಳಿಗೆಗಾಗಿ ಮೂಡು ತ್ತಿದ್ದ ತಮ್ಮ ಸರ್ವ ಪ್ರಯತ್ನಗಳ ಸಾಧನೆಗೆಂದು ಅವರು ಸ್ಥಾಪಿಸಿದ ಗ್ರಾಮೋದ್ಯೋಗ ಸಂಘವನ್ನು ಮರೆಯಲು ದೀತೇ? ಅಹಿಂಸೆಗೆ ರಾಜಕೀಯ ಸಂಯೋಗ್ಯವಾದ ಬಾಹ್ಯ ಸಂಕೇತವೆಂದು ಮುಂದಿಟ್ಟ ರಾಜಕೀಯ ಮಂತ್ರವನ್ನು ಮರೆಯಲಾದೀತೆ? ಗೋರಕ್ಷಕ ಗೋಪ್ರಾಲನಂತೆ ಅವರು ಸ್ಥಾಪಿಸಿದ ಗೋಸೇವಾ ಸಂಘವನ್ನು ಮರೆಯಲಾದೀತೇ? ಭಾರತೀಯರ ವಿದ್ಯೆಯ ಜೊತೆಗೆ ಉದ್ಯೋಗವನ್ನೂ ಕಲ್ಪಿಸುವ 'ನಯಿ ತಾಲೀಂ' (Basic Education)ನ್ನು ಮರೆಯಲಾದೀತೆ? ಹಿಂದೂ ಧರ್ಮದ ಕಲಂಕವನ್ನು ಒರೆಸಲಿಕ್ಕಾಗಿ ಅವರು ಸ್ಥಾಪಿಸಿದ ಹರಿಜನ ಸಂಘವನ್ನು ಮರೆಯಲಾದೀತೇ? ಹೀಗೆ ಬಂದಲ್ಲ, ನೋರು ದೃಷ್ಟಿಯಿಂದ ಮಹಾತ್ಮರು ಜೀವಂತವಿದ್ದಾರೆ. ಹಿಂಸಾಮಯವಾದ ಜಗತ್ತಿನ ನಡುವೆ ನಾವು ಅಹಿಂಸೆಯಿಂದ ಬಾಳಬೇಕಾಗಿದೆ. ಸತ್ಯಕ್ಕೆ ಅಂಟಿಕೊಂಡರೆ ಮಾತ್ರ ಅದು ಸಾಧ್ಯ. ಸತ್ಯದಿಂದಲೇ ಪ್ರೀತಿ, ಪೂರ್ಣತೆ, ವಿನಯ. 'ಸತ್ಯವೇ ಬ್ರಹ್ಮ' ಎಂದು ಮಹಾತ್ಮರು ನಂಬಿದ್ದರು. ಸತ್ಯಕ್ಕಾಗಿ ಹುತಾತ್ಮರಾಗಲು ಕಪ್ಪು ಪಟ್ಟರು. ಅವರಿಗೆ ಬಂದ ಮರಣವು ಕೂಡ ಸತ್ಯದ ಆನ್ವೇಷಣೆಯಲ್ಲಿಯೇ! ಇದು ಭಗವಂತನ ಅನುಗ್ರಹವೋ ಏನೋ ಹೇಳಲು ಸಾಧ್ಯ. ಇದ್ದರೂ ಇರಬಹುದು. ಅವರ ಕೈಂತ ಬಯಸಬಹುದಾದ ಉತ್ತಮ ಸಾವು ಮತ್ತೊಂದಿಲ್ಲ. ಅವರು ಕಾಯಿಲೆಯೊಂದಿಗೆ ಹಾಸಿಗೆ ಹಿಡಿದು ಡಕ್ಕರುಗಳನ್ನು ಧಣಿಸಿ ಸಾಯಲಿಲ್ಲ ದೇವರ ಪ್ರಾರ್ಥನೆಗೆ ನಿಂತು ಇದ್ದಕ್ಕಿದ್ದ ಹಾಗೆ ಆಕಸ್ಮಿಕವಾಗಿ ಆನಂದಮಯ ಶಾಂತಿಗೆ ಸಾಗಿದರು. ತನ್ನ ಆದರ್ಶಗಳಿಗಾಗಿ ಪ್ರಾಣವನ್ನೇ ಬಲಿ ನೀಡಿದ ಮಹಾತ್ಮರು ಬಡವರ ದೀನ ಬಂಧುಗಳು.

ಇಂದು ಅವರು ನಮ್ಮ ಕಣ್ಮರೆಯಾದರೂ ಅವರು ಜೀವಂತ ಇರುವರೆಂದು ನಾವು ನಂಬಬೇಕು. ಅವರ ಪಾರ್ಥಿವ ಶರೀರವು ನಮ್ಮ ನಡುವೆ ಇರದಿದ್ದರೂ ಅವರು. ನೂನವರ್ಗಕ್ಕೆ ಸಾಯವಾಗಿ ಕಲ್ಪಿಸಿಕೊಟ್ಟಿರುವ ಕೃತಿ ಕೃತ್ಯಗಳು ನಮ್ಮ ನಡುವೆ ಇದ್ದು ನಮ್ಮ ನಮ್ಮ ಕರ್ತವ್ಯಗಳನ್ನು ನಾವು ಸರಿಯಾಗಿ ಮಾಡಬೇಕೆಂದು ನಮಗೆ ಉಸಿರುತ್ತಲೇ ಇವೆ.

ದೇಶದಲ್ಲಿ ಗಾಂಧೀಜಿಯವರ ಸ್ಮಾರಕಗಳನ್ನು ನಿರ್ಮಿಸಬೇಕೆಂದು ಜನರು ಕೇಳಿಕೊಳ್ಳಬಹುದು. ಹಾಗೆ ಕೇಳುವುದು ವಿಧಾಯಕ ಸ್ಮಾರಕಗಳನ್ನು ನಾನೆ ನಿರ್ಮಿಸಬಹುದು ಆದರೇ ಗಾಂಧೀಜಿಯವರು ಯಾವುದಕ್ಕಾಗಿ ಬದುಕಿದ್ದರೋ, ಯಾವುದಕ್ಕಾಗಿಯೇ ಪ್ರಾಣತ್ಯಾಗ ಮಾಡಿದರೋ ಆ ಕಾರ್ಯವನ್ನು ಸಾಧಿಸಿದಾಗ ಮೀರುವೆವೆಂಬ ಸಂಕಲ್ಪವನ್ನು ಕೈಗೊಳ್ಳಿದೆ ಯಾವ ಸ್ಮಾರಕವೂ ಸಂಪೂರ್ಣವಾಗದು. ಅವರು ಯಾವ ಬಡತನವನ್ನು ಕುರಿತು ನಿದರ್ಶನವಾಗಿದ್ದರೋ ಆಂಥ ಬಡ ಜನರನ್ನು ಉದ್ಧಾರ ಮಾಡಬೇಕು. ಹಿಂದೂಸ್ಥಾನದ ಸ್ವಾತಂತ್ರ್ಯ ಗೌರವಗಳನ್ನು ಕಾಪಾಡುವ ಕಾರ್ಯವನ್ನು ಅವರು ಹಿಂದೆ ಉಳಿದಿರುವ ನಮ್ಮ ನಾಲಿಗೆ ಬಿಟ್ಟರು ವುದರಿಂದ ನಾವು ಗಂಡಸರೂ, ಹೆಂಗಸರು ನಮ್ಮ ರಾಷ್ಟ್ರಪಿತಾಮಹರ ಮನಸ್ಸಿನ ಆಭಿಲಾಷೆಯನ್ನು ಪೂರೈಸಲು ಎಲ್ಲರೂ ಸೇರಿ ಮತ್ತೊಮ್ಮೆ ಹೊಸದಾಗಿ ಸರ್ವ ಪ್ರಯತ್ನ ಮಾಡೋಣ. ಹಾಗೆ ಮಾಡಿ ನಮ್ಮ 'ಬಾಪು' ಎತ್ತಿ ಹಿಡಿದ ಧ್ವಜದ ಗೌರವವನ್ನು ಕಾಯ್ದುಕೊಳ್ಳುವ. ಇದಕ್ಕಾಗಿ ಮಹಾತ್ಮರ ಆವರ ಜೀವಕ್ಕೆ ಚಿರಶಾಂತಿ ಯನ್ನಿಷ್ಟ ಭಗವಂತನು ಸಹಾಯವನ್ನೀಯಲಿ ಎಂದು ಅನುದಿನ ಪ್ರಾರ್ಥಿಸುವ.

## ಸಂತಾಪ ಸಭೆಗಳು.

ತಾರೀಕು ೭-೩-೪೮ರಲ್ಲಿ ಶನಿವಾರಸಂತೆ ಹೋಬಳಿಯ ಸಭೆಯೊಂದು ಶನಿವಾರಸಂತೆಯಲ್ಲೇ ಬಳಿ ಸೇರಿತ್ತು. ಶ್ರೀ ಎಚ್. ಎಂ. ಪುಟ್ಟಣ್ಣನವರು ಅಧ್ಯಕ್ಷರಾಗಿದ್ದರು. ಶ್ರೀ ಪಿ. ಎ. ಬೆಳ್ಯಪ್ಪನವರು ಮಹಾತ್ಮರ ಗುಣಗಾನ ಮಾಡಿದ ಮೇಲೆ ಗಾಂಧೀಜಿಯವರ ಮರಣಕ್ಕೆ ಆಕಾರ ದುಃಖವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಬಯಸಿ ಭಾರತೀಯರಿಗೆ ಈ ಸಪ್ಪನನ್ನು ಸಹಿಸುವ ಶಕ್ತಿಯನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸಿ ಶೋಕವು ಜ್ಞಾಪಕ ಮಾಡಲಾಯಿತು. ಈ ರೀತಿಯನ್ನು ಪ್ರಧಾನಮಂತ್ರಿ ಪಂಡಿತ ಜವಾಹರಲಾಲರಿಗೆ ಕಳುಹಿಸಲು ತೀರ್ಮಾನಿಸಲಾಯಿತು.

ತಾ. ೯-೩-೪೮ರಲ್ಲಿ ಹುದಿಕೇರಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಹೊಟ್ಟೇಂಗಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಮಹಾತ್ಮಾಜಿಯವರ ಸೇವೆಯನ್ನು ಕುರಿತು ಭಾಷಣಗಳು ನಡೆದ ಮೇಲೆ ಬೇಲಿನ ರೀತಿಯ ಠರಾವನ್ನು ಅಂಗೀಕರಿಸಲಾಯಿತು.

ತಾ. ೧೦-೩-೪೮ರಲ್ಲಿ ಸ್ಪೋದರಾಪಟ್ಟಿಯಲ್ಲಿ ಪೊರಸಭೆಯು ನಂತರ ನೊಕ್ಕಿಟ್ಟಿನ ಬಲಿ ಶ್ರೀ ಎಸ್. ಎಸ್. ರಾಮಲಿಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀ ಪಿ. ಎ. ಬೆಳ್ಯಪ್ಪನವರು ಮಹಾತ್ಮರ ದಿವ್ಯ ಚರಿತ್ರೆಯ ವಿಚಾರ ಮಾಡಿದ ನಂತರ ಮೇಲಿನ ಅರ್ಥದ ಠರಾವನ್ನು ಒಪ್ಪಿ ಮುಖ್ಯ ಮಂತ್ರಿಗಳಿಗೆ ಕಳುಹಿಸಲು ನಿರ್ಧಾರವಾಯಿತು.

## ಆಫೀಲು.

ಮುಸ್ಲಿಂ ನೇಶನಲ್ ಗಾರ್ಡ್ಸ್ ಸಂಸ್ಥೆಯು ಅವರ ಸ್ವಾಧೀನದಿಂದಿನ ಕೇವಲ ಸಾಮಾಜಿಕ ಕೆಲಸಗಳನ್ನು ಮಾಡುತ್ತಿತ್ತು. ಈ ಕೆಲಸ ದಿನಗಳಿಂದ ಆ ಕೆಲಸವನ್ನು ನಿಲ್ಲಿಸಲಾಗಿತ್ತು. ಆದರೆ ಇಂಡಿಯಾ ಸರಕಾರವು ಈ ಸಂಸ್ಥೆಯನ್ನು ಅಕ್ರಮ ಕೂಟವೆಂದು ಸಾರಾಂತ ಕಾರಣ ಮುಂದೆ ಕೊಡಗಿನಲ್ಲಿ ಈ ಸಂಸ್ಥೆಯು ಆಸ್ತಿತ್ವದಲ್ಲಿರಬಾರದು. ಕೇಂದ್ರ ಸರಕಾರದ ಆಜ್ಞೆಯಂತೆ ಕೊಡಗು ಜಿಲ್ಲೆಯ ಮುಸ್ಲಿಂ ಗಾರ್ಡ್ಸ್‌ಗಳು ಮತ್ತು ಎಲ್ಲಾ ಮುಸ್ಲಿಮರು ತಿರಸ್ಕಾರಪೂರ್ವಕ ದೇಶದಲ್ಲಿ ಶಾಂತಿ, ವ್ಯವಸ್ಥೆಗಳನ್ನು ಸ್ಥಾಪಿಸುವ ಬಗ್ಗೆ ಸರಕಾರಿಗಳಿಗೆ ಗ ಜೇಕಾಗಿದೆ

ಅಬ್ದುಲ್ ಮಜೀದ್ ಖಾನ್.
ಪ್ರೆಸಿಡೆಂಟ್.
ಕೊಡಗು ಜಿಲ್ಲಾ ಮುಸ್ಲಿಂ ಲೀಗ್.

**THE COORG TRANSPORT Ltd.**

The Company at its General meeting held on 21-12-1947 have declared a dividend of seven percent on the shares. The dividend warrants have been prepared and despatched to the registered addresses of the share holders.

**A. C. Madappa,**
Managing Director,
The Coorg Transport Ltd.,
*Mercara.*
10-2-48

## DEPARTMENT of AGRICULTURE.

Applications are invited for the post of an instructor in Bee-culture. The appointment is temporary till the permanent incumbent returns to the post The scale of pay is Rs 50/2½/2/75 and liable to change according to Pay Commisssion's recommendations Age should be below 30 years relaxable to persons who are already in service. Qualification:— Candidates must have passed intermedinte science and must have undergone training in Apiculture in some recognised institute The selected candidates should be able to join duty immediately. Last date for receipt of application is 25-2-48.

**B S. Varada Rajan,**
*Agricultural Officer,*
*Coorg, Mercara.*

## ಪ್ರಕಟಣೆ.

ಕೊಡಗು ಸರಕಾರವು 1948 ನೇ ಇಸವಿಯಲ್ಲಿ ಬತ್ತದ ಬೆಲೆಯನ್ನು ಈ ಕೆಳಗೆ ನಮೂದಿಸಿರುವಂತೆ ನಿಶ್ಚಯ ಮಾಡಿದೆ. 120 ಪಲಿಯ (1200 ಕೊಡಗಿನ ಸೇರು ಗಳ) 1 ಗಾಡಿ ಬತ್ತಕ್ಕೆ.

1. ಜೀರಿಗೆ ಸಣ್ಣ ,, 178-4-0
2. ಕೊಯಮುತ್ತೂರು ಸಣ್ಣ 148-4-0
3. ಬಿಳಿಯ ಕಂಬತ್ತಿ ಸಣ್ಣ ಮತ್ತು 143-4-0
4. ದೊಡ್ಡ ಸಣ್ಣ ಕತ್ತೆ . 138-4-0

ಗ್ರಾಮೋದ್ಯೋಗಿನಿ ಮುಖ್ಯ ಸ್ಥಳದಲ್ಲಿ (ಇಂದಿನಿಂದ ಒತ್ತೆಯ ವಿಲ್ಲಿನ ಸೇ-ಟ್ಟುಗಳಿಂದ ಸೂರು ಸೈಲಿಂಗ್‌ಕೇಳಗಿನ ಭೌತಿಕ ಕಣಗಳಲ್ಲಿ) ಮೇಲ್ಕಂಡ ಬೆಲೆಗಳನ್ನು ಕೊಡಲಾಗದು. ಆಲ್ಲದೆ ಗ್ರಾಮೋದ್ಯೋಗಿನಿಯ ಸ್ಥಳದಿಂದ ಬಸ್ಸುಗಳಿಗೆ ಸಾಗಿಸುವಾಗಲಿ ಮೂರು ಮೈಲಿಗಳೊಳಗಿದ್ದಲ್ಲಿ ಹೋಗಿ ಬರುವ ಪ್ರತಿಯೊಂದು ಬೈಲಿಗೆ ೧-೦-೦ ಆಕಸ್ಮಿಕ ಆಗುವ ಸಾಗಾಣಿಕೆ ಖರ್ಚು ಕೊಡಲಾಗುವದು.

ಕೆ. ಬಂಗಪ್ಪ,
ಜಂಟಿ ಕಾರ್ಯದರ್ಶಿ.

## ಬೇಕಾಗಿದ್ದಾರೆ.

ಕೊಡಗಿನ ಚೆಟ್ಟಳ್ಳಿ, ಒಡ್ಡರಪೊಟ್ಟ ಯುಷ್ಮಯ ಕಾಫಿ ಪರಿಶೋಧನಾ ಕೇಂದ್ರಕ್ಕೆ ಹತ್ತು ಲಕ್ಷ ಇಟ್ಟಿಗೆಗಳನ್ನು ತಯಾರಿಸಿಕೊಡಲು ಕಂಟ್ರಾಕ್ಟರರು ಬೇಕಾಗಿದ್ದಾರೆ. ನೀರಿನ ವ್ಯವಸ್ಥೆ, ಪಾದಿಯ ಅನುಕೂಲತೆ ಸ್ಥಳದಲ್ಲೇ ಇದೆ. ಹೆಚ್ಚಿನ ವಿವರಕ್ಕೆ ಈ ಪತ್ರಿಕೆಗೆ ಬರೆಯಿರಿ.

'ಎಗ್ರೋನಮಿಸ್ಟ್' ಕಾಫಿ ಬೋರ್ಡ್,
ಚೆಟ್ಟಳ್ಳಿ.

## ಆಸ್ತಿ ಮಾರಾಟಕ್ಕಿದೆ.

ಸುಂಟಿಕೊಪ್ಪಕ್ಕೆ 2½ ಮೈಲು ದೂರ ವಿರುವ ಅತ್ತೂರು ನಲ್ಲೂರು ಗ್ರಾಮದಲ್ಲಿ 400 ಬಟ್ಟಿ ನೀರಾವರಿ ಭೂಮಿಯೂ, 7 ಏಕೆ ಪಸಲಿಗೆ ಬರಲಿರುವ ಮತ್ತು ಆಣಿಪ ಸಲು ಬರುವ ಕಿತ್ತಳೆ ತೋಟವೂ 8 ಏಕ್ರೆ ಕಾಫಿ, ಕಿತ್ತಳೆ ವ್ಯವಸಾಯಕ್ಕೆ ಲಾಯಬಾಗಿರುವ ಜಾತಿ ಮರಗಳಿರುವ ಕಾಡು. ಭೂಮಿ ಮೂಡಲು ಅನುಕೂಲವಿರುವ 1½ ಏಕ್ರೆ ಜಾಗವೂ ಇದೆ. ರಾಜಾರಸ್ತೆಯಿಂದ ಆಸ್ತಿ ಮಧ್ಯದ ವರೆಗೂ ½ ಮೈಲು ದೂರವಿದ್ದು ಗಾಡಿಹೋಗುವ ರಸ್ತೆ ಇರುತ್ತೆ. 3 ಒಕ್ಕಲುಗಳವರಲು 3 ಮನೆಗಳಿದ್ದು ಒಂದು ದೊಡ್ಡ ಕೊಟ್ಟಿಗೆಯೂ ಇರುತ್ತೆ. ದನ ಮೇಯಲು ಭಾರೆಸ್ಸೂ ಪೈಸಾರಿಯೂ ಇದೆ. ಇದಕ್ಕನುಸಾರವಾಗಿ ಸುಂಟಿಕೊಪ್ಪ ಟ್ರಾನ್ಸಿಳಿ ಕಂಗಳೂರಿಂದ 38 ರೂ. ಬಾಡಿಗೆ ಬರುವ 2 ಮನೆಗಳೂ ಇದ್ದು ವ್ಯಾಪಾರಕ್ಕೂ ಆಸ್ತಿ ರೂಪಿತಕ್ಕೂ ಅನುಕೂಲವಿದೆ. ತೆಂಗಿನ ಬೆಲೆ 20,000 ರೂಪಾಯಿಗಳು ಅಧವಾ ಇದರ ಸಮಾನದ ಬೆಲೆಗೆ ಕೊಡಲ್ಪಡುವುದು. ಖಾಯಸ್ದಾರರು ಕೆಳಗಿನ ಆಡ್ರೆಸ್ಸಿನಲ್ಲಿ (ಪತ್ರಮೂಲಕವಾಗಲೀ ಖುದ್ದಾಗಲಿ ವಿಚಾರಿಸಬಹುದು.)

**X**
*C/o Manager*
*Kodagu Press*
*Mercara.*

## ಬೇಕಾಗಿದೆ.

ಓದು ಬರಹ ಗೊತ್ತಿರುವವರಿಗೆ ಮಿಲಿಟರಿಯಲ್ಲಿ ನಾನಾತರಹದ ಟೆಕ್ನಿಕಲ್ ಟ್ರೇನಿಂಗಿಗೂ ಮತ್ತು ಇನ್ಫೆಂಟ್ರಿಗೂ ಸೇರಲು ಇರಾಪೆ ಇರುವವರು ಮ. ರಾ. ಶ್ರೀ ಎ ಎ ಮುದ್ದಣ್ಣನವರನ್ನು ಈ ಕೆಳಗಿನ ಸ್ಥಳಗಳಲ್ಲಿನ ಟೆ. ಬಿ. ಗಳಲ್ಲಿ ನಮೂದಿಸಿ ೧ ತಾರೀಕುಗಳಲ್ಲಿ ನೇರವಿ ವಿಚಾರಗಳನ್ನು ತಿಳಿಸಿಕೊಳ್ಳಬಹುದು.

ರವಿವಾರದಂತೆ ಮಡಿಕೇರಿ ಕಂಗಳೂ ೯ ರಲ್ಲಿ

| | |
|---|---|
| ಸೋಮವಾರಪೇಟೆ, | 8 |
| ವೀರಾಜಪೇಟೆ, | 10 |
| ನಾಪೋಕ್ಲು, | 12 |
| ಪೊನ್ನಂಪೇಟೆ, | 14 |
| ಮಡಿಕೇರಿ, | 16, 17 & 18 |
| ಪುತ್ತೂರು, | 20 |
| ಮಂಗಳೂರು, | 22, 23, 24 |
| ಉಡುಪಿ, | 26 |
| ಕುಂದಾಪುರ, | 28 & 29 |

# ಅವರು ಅಮರರು.

ಲೇ:-ಡಾ. ಸುಶೀಲನಾಯರ್.

'ಗಾಂಧೀಜಿ ನಮ್ಮೆಡೆಗೆ ಬರುವರೆಂದು?' ಎಂಬುದಾಗಿ ಮುಲ್ತಾನದ ಪೆಪ್ಪೂಟ್ ಕಮೀಶನರರ ಹೆಂಡತಿ ಕಳೆದ ೩೦ನೇ ತಾರೀಕು ಸಾಯಂಕಾಲ ೪ ಗಂಟೆಗೆ ನಾನು ಅವರನ್ನು ಕಂಡಾಗ ಕೇಳಿದಳು. ಸ್ವಲ್ಪ ಸಮಯದ ನಂತರ ಸುಮಾರು ೬-೩೦ಕ್ಕೆ ಕಮೀಶನರ ಹೆಂಡತಿಯು ಒಳ್ಳೆ ಕಾತರಳಾಗಿ ಒಳನುಗ್ಗಿದಳು.

'ಜಗತ್ತು ಎಂಥ ದುರ್ದೈವಿಗಳಿಯುವದು!' ಎಂದು ಅವಳು ಕೂಗಿದಳು. 'ಗಾಂಧೀಜಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆ,' ನಾನು ಅತ್ಯಂತ ಬೆಚ್ಚಿಬಿದ್ದೆ ಮತ್ತು ನಡುಗಹತ್ತಿದೆ. 'ಇಲ್ಲ, ಅಲ್ಲ; ಅದೊಂದು ಹಾರಿಕೆಯ ಸುದ್ದಿ' ಎಂದು ಯಾರೋ ಒಬ್ಬರು ನುಡಿದರು. 'ಡೆಲ್ಲಿಗೆ ಫೋನ್ ಮಾಡಿ ಸತ್ಯವನ್ನು ತಿಳಿದುಕೊಳ್ಳುವ,' ಎಂದರು. ಆದರೆ ದಾರಿಕಾಯಲು ನನ್ನ ಮನಸ್ಸು ಒಪ್ಪಲಿಲ್ಲ. ಸತ್ಯವಾಗಿರಲಿ ಇಲ್ಲದಿರಲಿ ಲಾಹೋರಿಗೆ ಮರಳಿ ಹೋಗಿ ಅಲ್ಲಿಂದ ಡೆಲ್ಲಿಗೆ ಶಕ್ಯವಿದ್ದಷ್ಟು ಬೇಗ ಹೋಗಬಯಸಿದೆ. ಸ್ವಲ್ಪ ಹೊತ್ತಿನಲ್ಲಿಯೇ ಪಂಡಿತಜಿಯವರ ಪರಿಚಿತ ಧ್ವನಿಯು ಆಕಾಶವಾಣಿಯಲ್ಲಿ ಕೇಳಿಬಂತು. ಅತ್ಯಂತ ದುಃಖಿತರಾಗಿ ಅವರು ಮಾಡಿದ ಭಾಷಣವನ್ನು ಕೇಳಿ ಆಶೆಯೆಲ್ಲ ನಿರರ್ಥಕವಾಯಿತು. ನಾವೆಲ್ಲ ಪರದೇಶಿಯೂದೆವು. ಕೂಡಲೇ ನಾನು ಗಡಿಬಿಡಿಯಿಂದ ಸಾಮಾನುಗಳೆಲ್ಲ ಕಟ್ಟಿಕೊಂಡು ಡೆಲ್ಲಿಗೆ ಹೊರಟಿನು. ವಿಮಾನ ಬಂದಕೂಡಲೆ ಅವರು ಒಳ್ಳೇ ಆಸನದಿಂದ ಆದನ್ನು ಬಿಡುವ ಸಿದ್ಧತೆಯನ್ನು ಮಾಡಿದರು. ವೈಮಾನಿಕನಾದರೂ ಲಾಹೋರದಿಂದ ಡೆಲ್ಲಿಗೆ ಒಂದು ಗಂಟೆ ೨೦ ನಿಮಿಷಗಳಲ್ಲಿಯೇ ವಿಮಾನವನ್ನು ತಂದನು.

ನನ್ನ ಗಂಟುಗದಡಿಗಳನ್ನೆಲ್ಲ ಕ್ರಾಸ್ ಇವರ ವಶಕ್ಕೆ ಬಿಟ್ಟುಗೊಟ್ಟು ನಾನು ಕೂಡಲೇ ಮೋಟಾರಿನಲ್ಲಿ ಬಿರ್ಲಾ ಭವನಕ್ಕೆ ಧಾವಿಸಿದೆನು. ಈ ಕ್ರಾಸ್‌ರ ಜತೆಯಲ್ಲಿಯೇ ಮಹಾತ್ಮರು ನನ್ನನ್ನು ಭವಾಲ ಪುರಕ್ಕೆ ಕಳಿಸಿದ್ದರು. ನಾನಿನ್ನೂ ಎಚ್ಚರದಿಪ್ಪಿದ ಸ್ಥಿತಿಯಲ್ಲಿಯೇ ಇದ್ದೆನೆಂದು ಯೇಳಬಹುದು. ಮಿಯೂನ್ ಇಫ್ತಿಕರುದ್ದೀನರು ನನ್ನ ಸಂಗಡ ಬಂದರು. 'ನಾವು ಪ್ರತಿಯೊಬ್ಬರೂ ಗಾಂಧೀಜಿಯ ಕೂಲಿಗೆ ಹೊಣೆಗಾರರು' ಎಂದು ಅವರು ಕಣ್ಣೀರು ಸುರಿಸುತ್ತ ನೋಟರಿನಲ್ಲಿ ಕುಳಿತಾಗ ನನಗೆ ಯೇಳಿದರು. ನಾವು ಒಮ್ಮಿಲ್ಲ ಒನ್ನೆ ಅಹಿಂಸೆಯನ್ನು ನಿಷೇಧಿಸಿಲ್ಲವೆ? ನಮ್ಮ ಹೃದಯಾಂತರಾಳದಲ್ಲಿ ಬಹ್ಮೆಯೂದರೂ ಜಾತೀಯತೆಯ ಸೋಂಕಿಗೆ ಅವಕಾಶ ಕೊಟ್ಟಿರಲಿಲ್ಲವೆ? ನಾನು ಆ ಕ್ಷಣ ಪರೀಕ್ಷೆಯನ್ನು ಮಾಡಿಕೊಳ್ಳಹತ್ತಿದೆ. 'ಕೆಲವರು ಹೊಣೆಗೆಟ್ಟು ಮಾತಾಡುವರು.' ಉಳಿದವರು ಕೃತಿಮೂಡವರು.' ನಾನು ಮನಸ್ಸಿನಲ್ಲೇ ನುಡಿದುಕೊಂಡೆನು. 'ನಮ್ಮಲ್ಲಿ ಬಹುಶ ಎಲ್ಲರೂ ಯಾವ ಅಪರಾಧವ ಆರೋಪಕ್ಕೆ ಒಳಗಾಗಿರುವರೊ ಆದರ ಸ್ವಾಭಾವಿಕ ಪರಿಣಾಮವೆ ಆ ಹುಚ್ಚು ಮನುಷ್ಯ ಎಸಗಿದ ಕೃತ್ಯವು! ಅವನ ಆ ಕೃತ್ಯದಿಂದ ಹಿಂದುಸ್ಥಾನವೇ ನಾಚಿಕೆಯಿಂದ ಮೋರೆ ಕೆಳಗೆ ಹಾಕಬೇಕಾಗಿದೆ' ನಮ್ಮ ಹೆಣ್ಣು ಮಕ್ಕಳ ಬಗ್ಗೆಯೂ ನಾನು ವಿಚಾರ ಮಾಡಿದೆ. ಅವರೂ ಈ ದೋಷದಿಂದ ಮುಕ್ತವಾಗಿರುವದಿಲ್ಲ. ಈ ಬಗೆಯ ನುಡುವಿನೊಳಗಿಂದ ಗಾಂಧೀಜಿ ಎಂತು ಪಾರಾಗತಕ್ಕದ್ದು? ಅವರು ಉಪವಾಸಮಾಡಿದರು. ಅದರೀಗ ಕೊನೆ ಪ್ರಾಪ್ತವಾಯಿತು. ಅವರ ಕೊಲೆಯಾಯಿತು, ಅದೂ ಅವರ ಒಬ್ಬ ಬಂಧುವಿನಿಂದ!

ನಾವು ಬಿರ್ಲಾ ಭವನವನ್ನು ಮುಟ್ಟಿದೆವು. ಹಿಂಬಾಗಿಲಿನಿಂದ ಮೋಟಾರು ಒಳಗೆ ಪ್ರವೇಶ ಮಾಡಿತು. ಆ ಬಾಗಿಲಿನಲ್ಲಿಯೂ ವಿಪರೀತ ಜನ ಸಮ್ಮರ್ದವಿದ್ದಿತು. ಹುಚ್ಚಿಯಂತೆ ನಾನು ಜನರಲ್ಲಿ ದಾರಿ ಮಾಡಿಕೊಂಡು, ಹೊರಡಲು ಸಿದ್ಧವಾಗಿದ್ದ ಪಾಲಕಿಯಿದ್ದ ಸ್ಥಳಕ್ಕೇರಿ ಬಂದೆನು ಯಾರೋ ಒಬ್ಬರು ಮೇಲೇರಲು ನನಗೆ ಸಹಾಯ ಮಾಡಿದರು. ಸತ್ಯ ಗುರುಗಳ ಕಾಲುಗಳಡಿಯಲ್ಲಿ ಸರದಾರರು ಕುಳಿತಿದ್ದರು. ಅತ್ಯಂತ ಮುಖಿತರಾಗಿ ಮ್ಲಾನವದನರಾಗಿದ್ದರವರು. ಅವರು ನನ್ನನ್ನು ಮೇಲಕ್ಕೆಳಕೊಂಡರು, ಅಲ್ಲಿ ನಮ್ಮ ಅತ್ಯಂತ ಪ್ರೀತಿಯ ಬಾಪು ಒರಗಿದ್ದ. ಮೋರೆಯೊಂದೇ ತೆರೆದಿದ್ದಿತು. ಜೀವಂತ ಇದ್ದಾಗಿನಂತೆ ಮರಣದಲ್ಲಿಯೂ ಶಾಂತತೆ ಸ್ಫುರಿಸುತಿದ್ದಿತು. ಮರಣದ ಬಿಳಿ ಛಾಯೆಯನ್ನು ನಾನು ನೋಡಲಿಲ್ಲ. ಆದರೆ ಅದೇ ಹಿಂದಿನ ಸ್ವಾಗತದ ಮುಗುಳ್ನಗೆ ಇದ್ದಿರಬೇಕೆಂದು ನಾನು ಎಣಿಸಿದೆ. ಅತ್ಯಂತ ದುಃಖಿತಳಾಗಿ ನಾನು ನನ್ನ ಹಣೆಯನ್ನು ಅವರ ಎದೆಯ ಮೇಲೆ ಇಟ್ಟೆನು. ಹಿಂದಿನಂತೆ ಅವರ ಆ ಪ್ರೀತಿಯ ಕೈ ನನ್ನ ಬೆನ್ನ ಮೇಲೆ ಮತ್ತು ಗಲ್ಲದ ಮೇಲೆ ಬರಬಹುದೆಂದು ನಾನು ಎಣಿಸಿದ್ದೆ. ನನ್ನ ಹತ್ತರ ಅಭಾ ಮತ್ತು ಮನು ನಿಂತುಕೊಂಡಿದ್ದರು. 'ಇದೀಗ ನೀವು ಕೆಳಗಿಳಿಯತಕ್ಕದ್ದು' ಎಂದು ಯಾರೋ ಒಬ್ಬರು ಕೂಗಿದರು. ಪಂಡಿತ ನೆಹರು ಇವರು ನಮ್ಮನ್ನೆಲ್ಲ ಕೆಳಗಿಳಿಸಿಕೊಂಡರು. ಅವರು ಅತ್ಯಂತ ದುಃಖಿತ ವದನರಾಗಿ ಬಾಪುವಿನ ತಲೆದಿಂಬಿಗೆ ನಿಂತುಕೊಂಡರು. ಮೆರವಣಿಗೆ ಹೊರಟಿತು.

ನಾವು ಸ್ಮಶಾನ ಮುಟ್ಟಿದೆವು. ಸ್ವಲ್ಪ ಪ್ರಾರ್ಥನೆ ಮಾಡಿದೆವು. ಆನಂತರ ಅವರ ಶವದ ಮೇಲೆ ಗಂಧದ ಕಟ್ಟಿಗೆಗಳನ್ನು ಒಟ್ಟಲು ಪ್ರಾರಂಭಿಸಿದರು. ನಾವೆಲ್ಲ ನಮ್ಮ ಕೊನೆಯ ಸ್ಮರಣಾಪ ಮಾಡಿದೆವು. ನಾನು ಬಿಕ್ಕಿಬಿಕ್ಕಿ ಅಳಹತ್ತಿದೆನು. ಬಾಪು ಕ್ಷಮಿಸು. ನಮ್ಮ ದೋಷಗಳನ್ನೆಲ್ಲ ಕ್ಷಮಿಸು ತಪ್ಪು ತಡಿಗಳನ್ನೆಲ್ಲ ಹೊಟ್ಟೆಯೊಳಗಿಗೆ ಹಾಕಿಕೋ' ಎಂದೆಂದು. ನಾನು ಆ ಸ್ಥಾನದಿಂದ ದೂರಹೋಗಿ ಕೆಳಗೆ ಕುಳಿತುಕೊಂಡನು. ನನಗೆ ಏನೂ ತಾ ಣದಂತಾಯಿತು.

ರಾತ್ರಿಯಲ್ಲಿ ಗಾಂಧೀಜಿಯ ಚಿತ್ರಪಟದಿಂದಿಗೆ ಕುಳಿತುಂಡುಬಿಳಿಗಿ ಧ್ಯಾನ ಮಗ್ನಳಾದೆ. 'ಜ್ಯೋತಿನಂದಿಕಿ,ಸುಖಲೆಲ್ಲ ಕತ್ತಲೆ ಕವಿದಿದೆ,' ಎಂದು ಪಂಡಿತ ನೆಹರು ಇವರು ಆಕಾಶವಾಣಿ ಭಾಷಣದಲ್ಲಿ ಹೇಳಿದರು. ಆದರೆ ಕೂಡಲೆ ಅವರು ತಪ್ಪು ತಿದ್ದಿಕೊಳ್ಳುತ್ತ 'ಇಲ್ಲ, ಜ್ಯೋತಿ ಬೆಳಗುತಿದೆ ಮತ್ತು ಇನ್ನು ಮುಂದೆಯೂ ಸಾವಿರಾರು ವರ್ಷಗಳವರೆಗೆ ಹಾಗೆಯೇ ಪ್ರಜ್ವಲಿಸುವದು' ಎಂದು ಅದಕ್ಕೆ ಜೋಡಿಸಿದರು. ಬಾಪೂಜಿ ಬದುಕಿರುವರು ಮತ್ತು ಕ್ರಿಸ್ತ ಬುದ್ಧರಂತೆ ಎಂದೆಂದಿಗೂ ಅಮರರಾಗಿ ಉಳಿಯುವರು. ಅವರೆಲ್ಲ ಪ್ರೇಮ ಸಂದೇಶವನ್ನು ಕಲಿಸಿರುವರು. ಆದರೆ ಇಂಥ ಯಾರೊಬ್ಬರಿಗೆ ವಾಸ್ತ ಏಸು ಆಗಿರಲಿ ಸಮಾಜದ ನಿಯಮವು ಆಗಿರುವದೆಂಬುದನ್ನು ಅವರು ಜಗತ್ತಿಗೆಲ್ಲ ತೋರಿಸಿಕೊಟ್ಟರು.

ಕ್ರೈಸ್ತನು ಜೀವಂತ ಇರುವಾಗ ಅವನ ಅನುಯಾಯಿಗಳಲ್ಲಿ ಯಾವನು ಅಸ್ಥೈರ್ಯದು ಶಕ್ತಿ ಸಾವರ್ಧ್ಯವನ್ನು ಪ್ರದರ್ಶಿಸಿದ್ದನು? ಕ್ರೈಸ್ತನ ಪುನರಾಗಮನಾನಂತರವೇ ಪರಮಾತ್ಮನು ಅವನ ಸಂದೇಶವನ್ನು ಜನಕ್ಕೆಲ್ಲ ಬೀರುವ ಶಕ್ತಿಯನ್ನು ಅವನ ಶಿಷ್ಯರಿಗೆ ದಯಪಾಲಿಸಿದನು' ಎಂದು ಗಾಂಧೀಜಿ ಹೇಳಿದ್ದುಜ್ಞಾಪಕಕ್ಕೆ ಬಂತು. ಗಾಂಧೀಜಿಯ ಭೂಪಚಿತ್ರ ಡಿಮಂಗೆ ಕುಳಿತು ವಿಚಾರ ಮಾಡುತ್ತಿದ್ದಂತೆ ನನಗೆ ಇವೆಲ್ಲ ವಿಚಾರಗಳು ಸುಳಿಯ ಹತ್ತಿದವು. ಗಾಂಧಿಯವರು ತುಳಿತು ಕಾರ್ಯ ಮಾಡುತ್ತಿದ್ದ ಸ್ಥಳದಲ್ಲಿಯೇ ಈ ಭೂಪಚಿತ್ರವನ್ನಿಟಲಾಗಿದೆ. ಪ್ರಾಚೀನ ಪುಣ್ಯಪ್ರಭಾವದಿಂದ ಗಾಂಧೀಜಿಯ ಪಾದಕಮಲಗಳ ಕುಡಿಯಲ್ಲಿ ಕುಳಿತು ಅವರ ಸನ್ನಿಧಿಯಲ್ಲಿ ತಲಪ ಮಾಡುವ ಭಾಗ್ಯ ಒದಗಿದ್ದ ನನ್ನ ಬ್ಬಿಗೆ ಆ ಪ್ರೇಷ್ಠ ಗುರುವಿನ ಉಪದೇಶದಂತೆ ನಡೆಯುವ ಶಕ್ತಿ ಸಾಮರ್ಥ್ಯಗಳನ್ನು ಪರಮಾತ್ಮನು ಕರುಣಿಯಿಂದ ದಯಪಾಲಿಸಲಿ. ಆ ಸ್ಫೋಮದ, ಸಮಾಧಾನದ ನುಡಿಗಳನ್ನು ಇನ್ನು ಮುಂದೆ ಕೇಳಲಾರೆವೆಂಬ ವಿಚಾರ ಸುಳಿದ ಕೂಡಲೆ ಕಣ್ಣೀರು ಸುರಿಯಹತ್ತುವವು. ಯಾವನ ಕೈ ಬೆನ್ನ ಮೇಲೆ ಬೀಳುವದರಿಂದ ಹೆಚ್ಚಿನ ಶಕ್ತಿ ಬಂದಂತಾಗಿ ಭಾರವೆಲ್ಲ ಇಳಿದಂತಾಗುತ್ತಿದ್ದಿತೋ ಅಂಥ ಕೈ ಇನ್ನು ಮುಂದೆ ನಮ್ಮ ಮೇಲೆ ಬೀಳಲಾರದು. ಆದರೆ ನಾವು ನಮ್ಮ ಭಾವನೆಗಳನ್ನೆಲ್ಲ ಅವುಗಳಿಂದ ಉದ್ರೇಕಿಸಿಕೊಳ್ಳಬಾರದು. ನವಗಾದ ಹಾನಿಯಿಂದುಂಟಾದ ದುಃಖವು ಕಾರ್ಯರೂಪದಲ್ಲಿ ಪರ್ಯವಸಾನ ಹೊಂದಲಿಕ್ಕೆ ಬೇಕು. ಅವರು ಜೀವಂತ ಇರುವಾಗ ನಾವು ತಡವರಿಸುತ್ತ ಹೆಜ್ಜೆ ಇಡುತ್ತಿದ್ದೆವು. ಆದರೆ ಇನ್ನು ಮುಂದೆ ಅತ್ಯಂತ ದಾರ್ಢ್ಯದಿಂದ ಮತ್ತು ನಿರ್ಧಾರದಿಂದ ಹೆಜ್ಜೆ ಇಡುವ ಸಾಮರ್ಥ್ಯ ನಮ್ಮಲ್ಲಿ ಬರಲಿ ಎಂದು ನಾವೆಲ್ಲ ಪ್ರಾರ್ಥಿಸುವಾ

ನನ್ನೆದೆಯೊಳಗೇ ನಾನೊಂದು ಪ್ರತಿಜ್ಞೆ ಮಾಡಿಯನ್ನು ಕೇಳುತ್ತೇನೆ, 'ಇಲ್ಲ, ಆ ಶಕ್ತಿಯಲ್ಲ ಆತ ಬಹಿದ್ದಾನೆ ಮತ್ತು ಅದೇ ಹಳೆಯ, ಮಧುರ, ಪಿನ್ನ ಮುಗುಳ್ನಗೆಯಿಂದ ನಮ್ಮ ಕಾರ್ಯಕ್ರಮಗಳನ್ನು ಕಾದುನೋಡುತ್ತಿದ್ದಾನೆ.


ನಿಮಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಎಲ್ಲಿಗೆ ಹೋಗಬೇಕು?

## ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಸೂಚನೆ ಇಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸರ್ಕ್ಯುಲೇಟರಿಗಳು.

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಆಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

**ಕೂಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಕ್ರಮಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ರೀವ ಸಾತಿ 3,30,268-1-8, ವಸೂಲಾದ ಕ್ಷೇಪಸಿಧಿ 2,36,454-0-3, ಸೇವಿಂಗ್ ಬ್ಯಾಂಕ್ ಡಿವಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಗನ್ನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ತೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಧಾರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆಜಾನ್ಸ್.

**ಎಂಪೈರ್ ಆಫ್ ಇಂಡಿಯಾ**

**ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | |
|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸೈಪ್ಯ ಸಂಗತಿಗಳು. | ಒಟ್ಟು ಆದಾಯ .... | 1,07,09,000 ರೂಪಾಯಿ |
| | ಚಾಲ್ತಿಯಿರುವ ವಿಮೆ .... | 17,74,52,000 ,, |
| | ಆಸ್ತಿ .... .... | 6,67,60,000 ,, |
| | ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು .... | 8,83,62,000 ,, |

ಆಂಗ ಕಛೇರಿ: ವಿಜಿನ್ಸ್ ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಶಿವಾಜಿನಗರ, ಬೆಂಗಳೂರು. ಏಜೆಂಟರನ್ನು ಆರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೆ.


Edited, Printed and Published by P. I. Belliappa at 'Kodagu' Press Mercara, for 'Kodagu' Ltd.

Reg. No. B. 1880.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ಕಾರೀಕು ೫೦-೭-೧೯೬೪ನೇ ಶುಕ್ರವಾರ | ಸಂಚಿಕೆ ೩೮

## ಕಾಶ್ಮೀರದ ಪ್ರಶ್ನೆ.

### ಪಂಡಿತ್ ನೆಹರೂರವರ ಅಭಿಪ್ರಾಯ.

ತಾರೀಖು ೧೫ ರಲ್ಲಿ ಜಮ್ಮು ಪ್ರದೇಶದಲ್ಲಿ ಸೇರಿದ್ದ ಬಹಿರಂಗ ಸಭೆಯಷ್ಟು ದೊಡ್ಡ ಸಭೆ ಹಿಂದೆಂದೂ ಆ ಪ್ರಾಂತ್ಯದಲ್ಲಿ ಸೇರಿರಲಿಲ್ಲ. ಪ್ರಧಾನಿ ಪಂಡಿತ್ ನೆಹರೂರವರು ಈ ಸಭೆಯ ಸ್ವಾದ್ಧೇತಿನಿ ಪೂರ್ತನಾಡುತ್ತಾ, ಭಾರತವು ಸಲ್ಲಿಸಿದ ದೂರನ್ನು ಸೆಕ್ಯೂರಿಟಿ ಕೌನ್ಸಿಲ್ (ಸಂಯುಕ್ತ ರಾಷ್ಟ್ರ ಸಭೆ) ಯವರೀಕ ಪರಿಶೀಲಿಸುತ್ತಿದೆ ಎಂಬ ವಿಚಾರದಲ್ಲಿ ತನ್ನ ಆಶ್ಚರ್ಯ ಮತ್ತು ನಿರಾಶೆಯನ್ನು ವ್ಯಕ್ತಪಡಿಸಿದರು.

ಪಂಡಿತ್ ಜವಾಹರರು ಬಹಿರಂಗ ಸಭೆಯಲ್ಲಿ ಪೂರ್ತನಾಡುತ್ತಾ, ಭಾರತೀಯ ಸೇನೆಗಳು ಕಾಶ್ಮೀರಿಗಳ ಸೇವಕರಂತೆ ರಕ್ಷಣೆಯೊಡುವುದಾಗಿ ತಿಳಿಸಿದರು.

'ಕಾಶ್ಮೀರದ ಮೇಲೆ ನಡೆಯುತ್ತಿರುವ ಆಕ್ರಮಣವನ್ನಲ್ಲಿ ಕೆನ್ನೆ ಕೈವಕ್ಕ ವೇನೋ ಇಲ್ಲವೆಂದು ಪಾಕೀಸ್ತಾನ್ ಸರ್ಕಾರ ಹೇಳುತ್ತಿದೆ. ಆದರೆ ಕಾಶ್ಮೀರದ ಮೇಲೆ ಆಕ್ರಮಣ ನಡಸಿರುವವರು ಗುಡ್ಡಗಾಡಿನವರೋ, ಪಠಾಣರೋ, ಅಥವಾ ಪಾಕೀಸ್ತಾನಿಗಳೋ, ಅವರು ಯಾರೇ ಆಗಲಿ ಪಾಕೀಸ್ತಾನದಿಂದ ಬರುತ್ತಿರುವರೆಂಬುವು ನಿರ್ವಿವಾದ ಸೂತ್ರ' ಎಂದು ಪಂಡಿತ್ ನೆಹರೂರವರು ತಿಳಿಸಿದರು.

'ಸೆಕ್ಯೂರಿಟಿ ಕೌನ್ಸಿಲ್ಲಿನ ನಮ್ಮ ದೂರು ಚರ್ಚೆಗೆ ಬಂದ ಸಂಬಂಧದಲ್ಲಿ ಪಾಕೀಸ್ತಾನ್ ಪ್ರತಿನಿಧಿಯು ಇಂಡಿಯಾ ಮತ್ತು ಪಾಕೀಸ್ತಾನಗಳಿಗೆ ಇನ್ನೂ ಅನೇಕ ಮಾನ ಸ್ಥಾಪಗಳಿವೆ ಎಂದು ಹೇಳಿ ಅನೇಕ ಅಂಶ ಬದ್ಧ ವಿಷಯಗಳನ್ನೆಲ್ಲಾ ಸೆಕ್ಯೂರಿಟಿ ಕೌನ್ಸಿಲಿನ ಮುಂದೆ ಎತ್ತಿದರು.' ಎಂದ ಪಂಡಿತರು ಹೇಳಿದರಲ್ಲದೆ ಸೆಕ್ಯೂರಿಟಿ ಕೌನ್ಸಿಲಿನ ಸದಸ್ಯ ರಾಷ್ಟ್ರಗಳು ಹೇಗೆ ಅಧಿಕಾರವನ್ನು ಕೇಯದ ಒಲಿಗೆ ಬದ್ಧರಿಬೇಕೆಂಬುದನ್ನು ವಿವರಿಸಿದರು.

'ನಾವು ಸಭೆಯು ಮುಂದೆ ಮಂಡಿಸಿದ್ದ ದೂರನ್ನು ನಿಸ್ಪೃಷ್ಟವಾಗಿ ಮತ್ತು ನೇರವಾಗಿ ಬಗಹರಿಸಲು ಪ್ರಯತ್ನಿಸಿದೆ ನಮ್ಮ ಸ್ಥಾನವೈಖರಿಗಳ ಪ್ರಸ್ಪಷ್ಟ ಧೋರಣೆಯು 'ಪಾರ್ದರ್ಶಕ' ಬಲೆಗೆ ಬಿದ್ದಿದೆ ಎಂದು ಪಂಡಿತ್ ನೆಹರೂರವರು ತಮ್ಮ ಭಾಷಣದಲ್ಲಿ ತಿಳಿಸಿದರು.

'ಇದೆಲ್ಲವೆಂದರೆ ಪ್ರತಿಪಕ್ಷಣ್ಣ ತೆರೆ ಮರೆಯಾಗಿದೆ ಕಾಶ್ಮೀರದ ಸಮಸ್ಯೆಯು ಈಗ ಕೇವಲ ಕಾಶ್ಮೀರಿಗಳ ಪ್ರಶ್ನೆ ಮಾತ್ರವಾಗಿ ಉಳಿದಿಲ್ಲ. ಇದು ಇಂಡಿಯಾ ದೇಶದ ಪ್ರಶ್ನೆ; ಜಿಸ್ಟೆಂಬರ್ ವಿಶ್ವದ ಪಮಸ್ಯೆಯಾಗಿ ಹೋಗಿದೆ.

ಕಾಶ್ಮೀರದಲ್ಲಿ ನಾವೇನು ಮಾಡಿದ್ದೇವು ದಾದರೂ ಅದನ್ನು ಕೇವಲ ಸಂವಿಧಾನ ನಿಷ್ಪತ್ತೆಯೆಂಬ ಅಧಿಕಾರದ ಮೇಲೆ ಮಾಡಿದ್ದೇವೆ. ಇದರಲ್ಲಿ ಭಾರತದ ಯಾವ ವಿಷಯವನ್ನೂ ಗೋಪ್ಯವಾಗಿಟ್ಟಿಲ್ಲ.

ನಾವು ಕೈಗೊಂಡ ಪ್ರತಿಯೊಂದು ಕಾರ್ಯಕ್ರಮವನ್ನೂ ನಾವು ಸತ್ಯ ಮತ್ತು ಪ್ರತಿಬಿಂಬದಂತಿದ್ದ ಮಹಾತ್ಮಾ ಗಾಂಧಿಯವರ ಅನುಮತಿಯನ್ನು ಪಡೆದೇ ಮಾಡಿದ್ದೇವೆ' ಎಂದು ಪಂಡಿತ್ ನೆಹರೂರವರು ಹೇಳಿದರು. ಮತ್ತು ಗಾಂಧೀಜಿಯವರ ಕೊಲೆಯನ್ನು ಸೃಷ್ಟಿಸಿದ ಕೃತಿಕೋಲಿಪಾತಕನನ್ನು ಜೀವಾ ಜೀವಂತವಾಗಿ ಖಂಡಿಸಿದರು.

ಗಾಂಧೀಜಿಯವರ ಕೊಲೆ ಸಮಾಚಾರ ಕೇಳಿ ಕೆಲವರು ನಿಟ್ಟು ಹೊಡೆದರಂತೆ. ಇಂತಹ ಜನರಿಗೆ ನಾನು ಅಧಿಕ ದಿನಗಳಿರುವವರೆಗೆ ತಲೆ ಎತ್ತಲು ಅವಕಾಶ ಕೊಡಲಾರೆ ಬಾಪೂಜಿಯವರ ನಿಧನದ ಬಗ್ಗೆ ಸಂತೋಷಪಟ್ಟಿರುವ ಯಾರು ಒಬ್ಬ ವ್ಯಕ್ತಿಯೇ ಆಗಲಿ ಅವನು ಭಾರತೀಯನಲ್ಲವೆಂದೇ ನನ್ನ ನಂಬಿಕೆ. ಅವನು ಆರ್. ಎಸ್. ಎಸ್ ಗೆ ಸೇರಿದವನೇ ಆಗಲಿ ಅಥವಾ ಬೇರಾವ ಪಕ್ಷಕ್ಕೇ ಸೇರಿದವನಾಗಲೀ ಒಟ್ಟಿಗೆ ಭಾರತೀಯನಲ್ಲ. ಇಂಥ ಸ್ಥಳವನ್ನು ಕೆಡಿಸಲಾಗದು. ಅವರು ಸನಾತನವಾಗಿರಬೇಕೆ, ಇಲ್ಲವೆ ಜಾತಿ ಪ್ರಶ್ನೆಯನ್ನು ಸಿನಿಮಮೂಡಬೇಕು, ಭಾರತದಲ್ಲಿ ನಮ್ಮೊಡನೆ ಇರಲು ಬಾಳಲು ಅವರು ತೊಡಲಾಗದು' ಎಂದು ತಿಳಿಸಿದ ಪ್ರಧಾನಿಯವರು ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

## ಕಾಂಗ್ರೆಸು ವಿಸರ್ಜನೆ ಸಂಸ್ಥೆಯಾಗಲಿ.

ಮಹಾತ್ಮಾ ಗಾಂಧಿಯವರು ತಯಾರಿಸಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಹೊಸ ಘಟನೆಯ ಕರಡನ್ನು ಕಾಂಗ್ರೆಸ್ ಕಾರ್ಯದರ್ಶಿ ಆಚಾರ್ಯ ಜೆ. ಬಿ. ಕೃಪಲಾನಿಯವರು ಪ್ರಕಟಿಸಿರುವರು. ಇದು ಮಹಾತ್ಮರ ಕೊನೆಯ ಲೇಖನವಾಗಿದೆಯೆಂಬ ನೆಲೆಯಲ್ಲಿ ಶ್ರೀ ಕೃಪಲಾನಿಯವರು ಆಕರವಿಸಿ ಹೀಗೆನ್ನುತ್ತಾರೆ

'ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕಾಗಿ ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ ಸಂಸ್ಥೆಯಲ್ಲಿ ಇತ್ತೀಚೆಗೆ ಅಭಿವೃದ್ಧಿಗೊಂಡಿದ್ದ ಜನಪ್ರಿಯತೆಯನ್ನು ಇನ್ನೂ ಉಪಯೋಗಿಸಿಕೊಳ್ಳಲು ಭಯಪಟ್ಟರು. ಅಂತೆಯೇ ಕಾಂಗ್ರೆಸ್ ಸ್ವರೂಪವನ್ನು ಬದಲಾಯಿಸಿದರು. ಅಧಿಕಾರದಲ್ಲಿ ಆಸಕ್ತರಾದ ಎಂದಿಗೂ ಹೋಗಲಿಲ್ಲ. ಅಧಿಕಾರ ಮತ್ತು ಜನಪ್ರಿಯತೆಯ ನೈತಿಕ ಪಟ್ಟವನ್ನು ಏನಿಸಲು ಕಾಂಗ್ರೆಸಿನ ಘಟನೆಯನ್ನು ಒಟ್ಟಿಗೇ ರಚಿಸಿದರು. ಈಗ ಅಲ್ಲಿ ಕಾಂಗ್ರೆಸಿನಲ್ಲಿಯ ಹಾಲಿ ಸದಸ್ಯತನ ತೆಗೆಸಿ ಅದನ್ನು ಪ್ರಭಾವಿ ಸಂಸ್ಥೆಯಾಗಿ ಮಾಡಿ ನಿಸ್ವಾರ್ಥಿಯಿಂದ ಜನತೆಯ ಸೇವಲು ಬಲು ಅದನ್ನು ಉಪೆಗೊಳಿಸುವ ಉಪಾಯವಿದೆ ಇದನ್ನು ರಚಿಸಿರುವರು.

ಗಾಂಧೀಜಿಯ ಸೂಚನೆಗಳು ಹೀಗಿನ

ಭಾರತವಿಂದು ಇಬ್ಭಾಗವಾಗಿದ್ದರೂ ಹಿಂದೂ ರಾಷ್ಟ್ರೀಯ ಕಾಂಗ್ರೆಸು ಕೆಂಡು ಹಿಡಿದ ಉಪಾಯಗಳಿಂದಲೇ ತನ್ನ ಸ್ವಾತಂತ್ರ್ಯವನ್ನು. ಸದ್ಯವು ಅಂದರೆ ಪ್ರಚಾರಾತ್ಮಕ ಹೋರಾಟ, ಅಡಳಿತ ಯಂತ್ರವಾಡಲಾಂಗ್ರೆಸು ತಾಗ ತನ್ನ ಪ್ರಯೋಜನವನ್ನು ಕಳೆದುಕೊಂಡಿದೆ. ಆದರೆ ತನ್ನ ಪಟ್ಟಣಗಳಿಗಿಂತ ಭಿನ್ನವಾದ ದೊಡ್ಡ ಲಕ್ಷ್ಯ ಹೆಸರಿಗೆ ಸಾಮಾಜಿಕ, ನೈತಿಕ, ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವುದು ಗಳಿಸಬೇಕಾಗಿದೆ. ಅದಕ್ಕಾಗಿ ಕಾಂಗ್ರೆಸು ಪ್ರಜಾಸೇವಕ ಸಂಸ್ಥೆಯಾಗಬೇಕಾಗಿದೆ. ಪ್ರಜಾಸಾಮಾನ್ಯರಿಗೆ ಸಾಧಿಸುವಲ್ಲಿ ಭಾರತದಲ್ಲಿ ನೈತಿಕ ಶಕ್ತಿಗಿಂತ ಶಸ್ತ್ರಾಗಾರಕ್ಕೆ ಶಕ್ತಿಯು ಕೈ ಮೇಲಾಗಿದ್ದು ಪರಸ್ಪರ ಸಂಶಯವಿಲ್ಲ ಇವೆಲ್ಲಾ ಜಾತೀಯ ಪಕ್ಷ ಸಂಗಡಗಳ ಅನುಚಿತ ಸ್ವಾರ್ಥಿಯ ಗಾಳಿ ಬೀಸಿದಂತೆ ದಕ್ಷತೆ ವಹಿಸಬೇಕು. ಆದ್ದರಿಂದ ಅ ಭಾ. ಕಾ. ಸಮಿತಿಯು ಈಗಿನ ಕಾಂಗ್ರೆಸ್ಸನ್ನು ವಿಸರ್ಜಿಸಿ ಈ ಕೆಳಗಿನ ಪಟ್ಟಗಳ ಗೊಳಗಾಗಿ ಲೋಕಸೇವಕ ಸಂಘವೆಂಬ ಹೊಸ ಸಂಘವನ್ನು ಸ್ಥಾಪಿಸಬೇಕು. ಆ ಹೊಸ ಸಂಸ್ಥೆಯ ನಿಯಮಗಳನ್ನು ಕಾಲಕ್ಕೆ ತಕ್ಕಂತೆ ಬದಲಿಸಬಹುದು.

ಹಳ್ಳಿಗಳಲ್ಲಿ ವಾಸಿಸುವ ಇಲ್ಲವೆ ಹಳ್ಳಿಗಳ ಹಿತ ಚಿಂತಿಸುವ ಐದರ ಪ್ರೌಢ ಪುರುಷರು ಇಲ್ಲವೆ ಸ್ತ್ರೀಯರ ಪಂಚಾಯಿತಿಯು ಇಂದು ಘಟಿಸಬೇಕಿರುತ್ತದೆ. ಇಂಥ ಎರಡು ಪಂಚಾಯಿತಿಗಳು ಸೇರಿ ತಮ್ಮೊಳಗಿಂದ ಒಬ್ಬ ಧುರೀಣನನ್ನು ಆಯ್ದು ಕಾರ್ಯಕ್ಷಮ ಪಕ್ಷವೆನ್ನಿಸಬಹುದು. ಇಂಥ ನೂರು ಪಂಚಾಯಿತಿಗಳು ರಚಿತವಾದಾಗ ಅವುಗಳು ತಮ್ಮ ಪ್ರಥಮ ಪ್ರೌಢಿಮೆಯ ಮುಖಂಡರನ್ನು ಆರಿಸಿಕೊಳ್ಳಬೇಕು ಮತ್ತೆ ಒಬ್ಬ ದ್ವಿತೀಯ ಪ್ರೌಢಿಮೆ ಮುಖಂಡನನ್ನಾರಿಸಬೇಕು ಮತ್ತು ಪ್ರಥಮ ಪ್ರೌಢಿಮೆಯ ೫೦ ಜನರು ಈ ದ್ವಿತೀಯ ಪ್ರೌಢಿಮೆಯ ಮುಖಂಡನ ಕೈ ಕೆಳಗೆ ಕೆಲಸ ಮಾಡತಕ್ಕದ್ದು. ಹೀಗೆ ಇನ್ನೂರು ಪಂಚಾಯಿತಿಗಳ ಗುಂಪಿನಂತೆ ಇಡೀ ಭಾರತದ ಸುಮಾರು ಪಂಚಾಯಿತಿಗಳು ಸ್ಥಾಪಿತವಾಗಬೇಕು. ಮೊದಲನೇ ಗುಂಪು ತನ್ನ ದ್ವಿತೀಯ ಶ್ರೇಣಿಯ ಮುಖಂಡರನ್ನು ಆರಿಸಿಕೊಂಡ ರೀತಿಯಲ್ಲಿಯೇ ಉಳಿದ ಗುಂಪುಗಳು ತಮ್ಮ ದ್ವಿತೀಯ ಶ್ರೇಣಿಯ ಮುಖಂಡರನ್ನು ಆರಿಸಿಕೊಳ್ಳಬೇಕು. ಈ ದ್ವಿತೀಯ ಶ್ರೇಣಿಯ ಮುಖಂಡರು ತಮಗೆ ಅವಶ್ಯವೆನಿಸಿದಾಗ ಒಬ್ಬ ನಾಯಕನನ್ನು ಆರಿಸಿಕೊಳ್ಳಬಹುದು. ಈ ನಾಯಕನು ಮುಖಂಡರ ಅನುಗ್ರಹವಿರುವ ತನಕ ಎಲ್ಲ ಗುಂಪುಗಳ ಮೇಲಧಿಕಾರವನ್ನು ವಹಿಸಿಕೊಳ್ಳಬಲ್ಲನು.

ಈಗ ಪ್ರಾಂತಗಳು, ಜಿಲ್ಲೆಗಳ ರಚನೆ ಆಗದಿರುವಾಗ ಸೇವಕರು ಈ ಗುಂಪುಗಳನ್ನು ಪ್ರಾಂತವಾರು, ಜಿಲ್ಲವಾರು ವಿಭಜಿಸುವ ಪ್ರಯತ್ನವೂಡಿಲ್ಲ. ಹೀಗೆ ಸ್ಥಾಪಿತವಾಗುವ ಗುಂಪುಗಳ ಕಾರ್ಯಕ್ಷೇತ್ರವು ಸ್ಥಳೀಯ ಭಿನ್ನತೆಯನ್ನು ಗಮನಿಸಬೇಕು. ಈ ರೀತಿಯ ಯೋಜನೆಗಳು ತಮ್ಮ ಅಖಂಡ ಭಾರತಕ್ಕೆ ಸಲ್ಲಿಸುವ ನಿಸ್ವಾರ್ಥ ಸೇವೆಯಿಂದ ಅವುಗಳಿಗೆ ಅಧಿಕಾರ ದೊರೆಯುವುದನ್ನೂ ಗಮನಿಸಬೇಕು.

ಪ್ರತಿಯೊಬ್ಬ ಕಾರ್ಯಕರ್ತನೂ ಸರಳ ಜೀವನ ಅಭ್ಯಾಸಿಯಾಗಬೇಕು. ಈ ಖಾದಿ ಮತ್ತು ಗ್ರಾಮೋದ್ಯೋಗ ಸಂಘದಿಂದ ಬಟ್ಟೆ ಪಡೆದಿರಬೇಕು. ಒಟ್ಟಿನ ಸ್ವತಂತ್ರ ಸೂತ್ರದಲ್ಲಿನಿಂದ ತಯಾರಿಸಿದ್ದಾಗಿರಬೇಕು. ಮದ್ಯ ಪ್ರಮುಖ ಪದಾರ್ಥಗಳನ್ನು ಅವು ಸೇವಿಸಬಾರದು. ಇವನು ಹಿಂದೆ ಪಡೆದಿರುವ ಆಸ್ತಿ ಇಲ್ಲವೆ ಪೂರ್ವಜರ ಆಸ್ತಿಯ

# ಕೊಡಗು

ತಾ. ೨೦-೨-೧೯೪೮ನೇ ಶುಕ್ರವಾರ


## ಆತ್ಮಶುದ್ಧಿ.

'ವಾಲ್ಮೀಕಿಯು ತಪೋವನದಲ್ಲಿ ವೇಡನೊಬ್ಬನು ಪ್ರೇಮದ ಚಿನ್ನಾಟದಲ್ಲಿ ತೊಡಗಿದ್ದ ಕ್ರೌಂಚ ಪಕ್ಷಿಗಳಲ್ಲಿ ಗಂಡು ಪಕ್ಷಿಗೆ ಬಾಣಬಿಟ್ಟು ಕೊಂದ ದೃಶ್ಯದಿಂದ ಯಾವ ರೀತಿ ವಾಲ್ಮೀಕಿಯ ನಾಲಿಗೆಯಲ್ಲಿ ಸಾಹಿತ್ಯದೇವಿಯು ಉದಯಿಸಿ ಆ ನಂತರ ಜಗತ್ತಿಗೇ ಆದರ್ಶವಾದ ರಾಮಾಯಣವು ಆತನಿಂದ ಬರೆಯಲ್ಪಟ್ಟಿತೋ ಅದೇ ರೀತಿ ಚಾತಕ ಪಕ್ಷಿಯಂತೆ ಭಾರತೀಯರ ಹಿತಾಹಿತಗಳನ್ನು ಲಕ್ಷಿಸಿ ನೋಡುತ್ತಿದ್ದ ಮಹಾತ್ಮರ ಕೊಲೆಯಿಂದ ಪ್ರತಿಯೊಬ್ಬ ಭಾರತೀಯನ ಹೃದಯ ದಲ್ಲಿಯೂ ಪ್ರೇಮ, ಸತ್ಯ, ಅಹಿಂಸೆಗಳು ಉಕ್ಕಿ ಬರಲಿ. ಪ್ರತಿಯೊಬ್ಬನೂ ಆಧುನಿಕ ವಾಲ್ಮೀಕಿಯಾಗಿ ನವಭಾರತದ ರಚನೆ ಮಾಡಲಿ. ಭವ್ಯಭರತಖಂಡದ ರಾಜ್ಯಭಾರ ನನ್ನನ್ನು ಜಗತ್ತು ತಲ್ಲೀನನಾಗಿಸುವಂತೆ ಹಾಡಲಿ.'

ಪಶ್ಚಿಮ ಪಂಜಾಬಿನ ಗವರ್ನರರಿಂದ ಚಕ್ರವರ್ತಿ ರಾಜಗೋಪಾಲಾಚಾರಿಯರು ನುಡಿದ ಈ ಸೂಕ್ತ ಪ್ರತಿಯೊಬ್ಬನೂ ಗಮನಿಸಿತಕ್ಕದ್ದಾದ್ದು. ಮಹಾತ್ಮರ ನಿಧನದ ನಂತರ ಬೃಹದ್ಭಾರತವನ್ನು ಕಟ್ಟುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನ ನೆಯಲಿದೆ. ಕೇಂದ್ರ ಸರಕಾರವು ಕೇಂದ್ರಾಣಬದ್ಧವಾಗಿ ದುಡಿಯಲು ನಿಂತಿದೆ. ದೇಶದಲ್ಲಿ ಕೋಮುವಾರು ಸಂಸ್ಥೆ, ಕೋಮುವಾರು ಭಾವನೆಯ ಕೊಳೆಯನ್ನು ತೊಳೆಯಲು ಕಂಕಣಬದ್ಧವಾಗಿದೆ. ನಾನು, ನನ್ನವರು ಎಂಬ ಸಂಕೀರ್ಣತೆಯೇ ತುಂಬಿ ಅಖಂಡ ಭರತಖಂಡದ ಸುಂದರ ವದನವನ್ನು ಕುರೂಪಗೊಳಿಸಿದೆ. ಕೇಂದ್ರ ಸರಕಾರವು ದೇಶದಲ್ಲಿ ಕೋಮುವಾರು ಸಂಸ್ಥೆಗಳು ಇರಕೂಡದೆಂದು ಖಡ್ಗಾಯ ಶಾಸನವು ಚಾರಿಯಲ್ಲಿ ತಂದಿದೆ. ಆದರಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘ, ಮುಸ್ಲಿಂ ನೇರನಲ್ ಗಾರ್ಡ್ಸ್, ಕಾಕ್ಸಾರ್ ದಳವೆಲ್ಲವೂ ಅಕ್ರಮಸಂಘಟಿಗಳೆಂದು ಸಾರಲ್ಪಟ್ಟಿವೆ. ಇವುಗಳಿಂದ ಕಾರ್ಯಸಫಲವಾದಂತಾಗದು. ಕೇಂದ್ರ ಸರಕಾರದ ಈ ಆಶಯಕ್ಕೆ ಸರ್ವರೂ ಸಹಾಯವಿತ್ತು ಕೋಮುವಾರು ಸಂಕೀರ್ಣತೆಯನ್ನು ಬಿಟ್ಟು ವಿಶಾಲದೃಷ್ಟಿ ತಳೆಯಬೇಕು.

ಇಂದು ಕಾಂಗ್ರೆಸ್ಸು ತನ್ನ ಹಿಂದಿನ ಘನ ಪೀಠದಿಂದ ಕೆಳಗಳಿದಿದ್ದರೆ ಅದಕ್ಕಲ್ಲಿರುವ ಕೋಮುವಾರು, ಮತ್ತು ಅಧಿಕಾರ ಲಾಲಸಿ ಸ್ವಾರ್ಥಿಗಳಿಂದಾಗಿದೆ. ಈ ವಿಚಾರ ಗಾಂಧೀಜಿಯವರಿಗೂ ಮನವರಿಕೆಯಾಗಿತ್ತು. ಆದ್ದರಿಂದಲೇ ಕಾಂಗ್ರೆಸ್ಸಿನ ಶುದ್ಧೀಕರಣದ ಒಗ್ಗೆ ಅವರು ಹೊಸ ಯೋಜನೆ ಸೂಚಿಸಿರುವದಾಗಿದೆ. ಮಹಾತ್ಮರು ಜೀವಂತವಿರುವಾಗ ಅವರ ತತ್ವಗಳನ್ನು ಗಾಳಿಗೆಳೆದು ವರ್ತಿಸಿದ ನಾವು ಇ ನ್ನಾದರೂ ಸ್ವಸ್ಥ ಸಂಕೀರ್ಣತೆಯನ್ನು ಬಿಡಬೇಕು ನಮ್ಮ ಕೋಮುವಾರು ಭಾವನೆಸ್ವಸ್ಥ ಸಂಕೀರ್ಣತೆ, ಸ್ವಾರ್ಥತೆ, ಅಧಿಕಾರ ಲಾಲಸೆಗಳ ಕೊಳೆಯನ್ನು ತೊಳೆಯಲು ಮಹಾತ್ಮರು ತಮ್ಮ ಪವಿತ್ರ ರಕ್ತವನ್ನೇ ಚೆಲ್ಲಿದ್ದಾರೆ. ಈ ರಕ್ತಪಾತದಿಂದಲೂ ನಮ್ಮ ಹೃದಯ ಪರಿವರ್ತನೆಯಾಗುವದಿಲ್ಲವೆಂದರೆ ಭಾರತದ ಭವಿಷ್ಯವು ಅಂಧಕಾರ ಮಯವಾಗಿದೆಯೆನ್ನಬೇಕು.

ಕಾಂಗ್ರೆಸು ತನ್ನ ತ್ಯಾಗದಿಂದಲೇ ಭಾರತದ ಏಕಮೇವ ಜನಾನುರಾಗಿ ಸಂಸ್ಥೆಯಾಗಿದೆ. ಜನ ಹಿತಕ್ಕಾಗಿ ಕಾಂಗ್ರೆಸಿಗರು ಆತ್ಮ ತ್ಯಾಗ ಮಾಡಿ ಸಂಸ್ಥೆಯನ್ನು ಬೆಳೆಸಿದ್ದಲ್ಲದೆ ದೇಶದ ಕೀರ್ತಿಗೂ ಕಳಶ ಇಟ್ಟಿದ್ದಾರೆ. ಸ್ವಾತಂತ್ರ್ಯ ಬಂದು ಅದು ಸರ್ವರ ಹಕ್ಕಾಗಬೇಕಾದ ಈ ಸಮಯದಲ್ಲಿ ಜನರು ತಮ್ಮ ಈ ವರೆಗಿನ ತ್ಯಾಗ, ಸೇವೆಗಳನ್ನು ಮುಂದೆ ಮಾಡಿ ಸ್ವಾರ್ಥಕ್ಕೆ ಳೆಯುವುದು ತರವಲ್ಲ. ಈ ಸ್ವಾರ್ಥತೆ ಗಾಂಧೀಜಿಯನ್ನು ಬಲಿ ತೆಗೆದುಕೊಂಡಿದೆ. ತಾನ್ಮಾದರೂ ಜನತೆ ಕಣ್ತೆರೆಯಬೇಕು. ರಾಜಾಜಿಯವರ ಆಶಯವ ಭವ್ಯ ಭಾರತ ಖಂಡವು ರಚನೆಯಾಗಬೇಕಾದರೆ ಗಾಂಧೀಜಿಯವರ ವಾಣಿ ಕೋಟಿ ಕಂಠಗಳಲ್ಲಿ ಪ್ರತಿಧ್ವನಿಸಬೇಕು. ಅವರ ಕರ್ಮ ಕೋಟಿ ಹಸ್ತಗಳ ಕರ್ಮವಾಗಬೇಕು. ಅವರ ಹೃದಯ ವೈಶಾಲ್ಯ ಕೋಟಿ ಹೃದಯಗಳಲ್ಲಿ ಬೆಳಗಬೇಕು. ಆಂತರ್ಯಾಮಿಯಾಗಿ ತನ್ನ ಆತ್ಮವನ್ನು ಜಯಿಸಿದವನು ಆವ ರೋಂದಿಗೆ ಅನುಸಂಧಾನ ಪ್ರಜೆಯನ್ನು ಹೊಗಿರುವವರನ್ನು ಜಯಿಸಲಾರ; ಹೊರಗಿರುವರ ಮೇಲೆ ತನ್ನ ಪ್ರಭಾವವನ್ನು ಬೀರಲಾರ. ಆದ್ದರಿಂದ ಗುಂಡಿಗೆ ಹೊರಟಿನ್ನಿದ ಮಹಾತ್ಮರ ರಕ್ತವು ನಮ್ಮ ಆತ್ಮ ಶುದ್ಧಿಗಾಗಿ ನ್ನು ಮಾಡಲಿ. ಅವರ ಚಿತಾ ಭಸ್ಮವು ಆತ್ಮ ಲಲಾಟದಲ್ಲಿ ಶೋಭಿಸಿ ಕರ್ತವ್ಯ ಪಥದಲ್ಲಿ ಮುನ್ನಡೆಸಲಿ.

## ವರ್ತಮಾನ.

ಮಡಿಕೇರಿ ಮಹಿಳಾ ಸಹಕಾರದ ಸಮಾಜದ ಆಶ್ರಯದಲ್ಲಿ ಕಸ್ತೂರ್ಬಾ ವಿನಾಚರಣೆಯು ಈ ಕಾರ್ಯಕ್ರಮ ತಿ ರಲ್ಲು ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನಡೆಯುವದು. ವೈಕುಂಠಿನ ಶ್ರೀಮತಿ ಯಶೋಧರಿ ದಾಸಪ್ಪನವರು ಅಧ್ಯಾಸನ ವಹಿಸುವರು. ಸರ್ವರಿಗೂ ಆಮಂತ್ರಣವಿದೆ.

ಸಿದ್ದಾಪುರ ಪೇಪರ್‌ಪೇಟೆ ಬಾಳ್ಕೋಡು ರಸ್ತೆಯಲ್ಲಿ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀ. ಅಗರ ಬೋರಯ್ಯನವರನ್ನು ಅವರ ಜೊತೆಯಲ್ಲಿದ್ದವರು ಕೊಲೆಮಾಡಿ ಅವರಲ್ಲಿದ್ದ ಸುಮಾರು ಇಪ್ಪತ್ತಾರು ರೂಪಾಯಿಗಳನ್ನು ಅಪಹರಿಸಿರುವರೆಂದೂ, ಗಾಡಿಯವನಿಗೂ ಜಖಂ ಮಾಡಿರುವರೆಂದೂ, ಅಪರಾಧಿಗಳನ್ನು ದಸ್ತಗಿರಿ ಮಾಡಲಾಗಿದೆಯೆಂದೂ ತಿಳಿಯು ಬರುತ್ತದೆ.

ಕಳೆದ ಶುಕ್ರವಾರ ಮಡಿಕೇರಿಯಲ್ಲಿ ನಡೆದ ಹರಾಜಿನಲ್ಲಿ ಸಾರಾಯಿ ಅಂಗಡಿಗಳು ರೂ ೨೫,೬೯೧ (ಕಳೆದ ವರ್ಷಕ್ಕಿಂತಾ ೭೫೦ ಕಡಿಮೆ) ಬೀರ್ ಅಂಗಡಿಗಳು ರೂ. ೧೮,೫೧೦ (ಕಳೆದ ವರ್ಷಕ್ಕಿಂತಾ ರೂ. ೬,೦೫೫ ಹೆಚ್ಚು) ಮಡಿಕೇರಿ ತಾಲೋಕು ಗಾಂಜಾ ಅಂಗಡಿ ರೂಪಾಯಿ ೧೧,೦೬೦ (ಕಳೆದ ವರ್ಷಕ್ಕಿಂತ ರೂ. ೬,೪೬೦ ಹೆಚ್ಚು), ಮಡಿಕೇರಿ ತಾಲೋಕು ಸೇಂದಿ ಅಂಗಡಿಗಳು ರೂ. ೨೯,೬೬೦ (ಕಳೆದ ವರ್ಷಕ್ಕಿಂತಾ ರೂ. ೧,೦೬೦ ಕಡಿಮೆ) ಕ್ಕೆ ಹೋಗಿರುವವೆಂದೂ ಒಟ್ಟಿಗೆ ಕಳೆದ ವರ್ಷಕ್ಕಿಂತಾ ರೂ. ೧೧,೬೫೫ ಹೆಚ್ಚಿಗೆ ಸಿಕ್ಕಿದೆಯೆಂದೂ ತಿಳಿಯ ಬಂದಿದೆ.

ವೀರಾಜಪೇಟೆ ಶ್ರೀ ತಾವೇರಿ ಆಶ್ರಮದಲ್ಲಿ ಮಹಾತ್ಮರ ನಿಧನದ ದಿನದಿಂದ ಗುಂದಿನಗಳ ವರೆಗೆ ಪ್ರತಿದಿನ ಪ್ರಾರ್ಥನೆ, ಗೀತಾ, ಕೋರಾನ್, ಬೈಬಲ್ ಪಠನ, ಭಾಷಣಗಳಿಂದ ಆಚರಿಸಲಾಯಿತು. ಗಾಂಧೀಜಿಯವರು ಮೃತರಾದ ನೆನಪಿಗಾಗಿ ಮುಂದಿನ ಪ್ರತಿ ಶುಕ್ರವಾರ ಸಮೂಹಿಕ ಪ್ರಾರ್ಥನೆಯ ಏರ್ಪಾಡು ಮಾಡಲಾಗಿದೆಯಂತೆ.

ಮಹಾತ್ಮಗಾಂಧೀಜಿಯವರ ನಿಧನದ ಕಾರಣ ಮುಂದೂಡಲ್ಪಟ್ಟ ಮಡಿಕೇರಿ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೨೬ರ ಸಾಯಂ ಕಾಲ ೫.೩೦ ಗಂಟೆಗೆ ನಡೆಯವದು.

ಹತ್ತಾರೆಗಳಲ್ಲಿ ಕುಡಿದು ಮತ್ತರಾಗಿದ್ದ ಯೋಧರೋ ಸೂರ ಯನೂ ಬ್ಬ ಕುದುರೆಯನ್ನು ತಾ ರಾಗಲ್ಲಿ ಕಾರಣಾಂತರದಿಂದ ಹೊಡೆದು ಜಖಂ ಆಗಿ ವೀರಾಜಪೇಟೆ ಆಸ್ಪತ್ರೆಗೆ ಸಾಗಿಸಲ್ಪಟ್ಟನೆಯು ಮಾರುದಿನ ವ್ಯತಿಳಾದಳೆಂದು ವರ್ತಮಾನ.

## ಆಸ್ತಿ ಮಾರಾಟಕ್ಕಿದೆ.

ಸುಂಟಿಕೊಪ್ಪಕ್ಕೆ 21 ಮೈಲು ದೂರ ವಿರುವ ಆತ್ತೂರು ನೆಲ್ಲೂರು ಗ್ರಾಮದಲ್ಲಿ 400 ಬಿಟ್ಟಿ ನೀರಾವರಿ ಭೂಮಿಯೂ, 7 ಏಕಿ ಪಸಲಿಗೆ ಬರಲಿರುವ ಮತ್ತು ಆಣೆಪಸಲು ಬರುವ ಕಿತ್ತಳೆ ತೆ ಟ್ಟವೂ 8 ಎಕ್ರೆ ಖಾಪಿ, ಕಿತ್ತಳೆ ನೈಸರ್ಗಿಕ ಕೃಷಿಯಾಗಿರುವ ಜಾತಿ ಸುರಗಳಿರುವ ಕಾಡು ಭೂಮಿ ಮನೆಯಲು ಅನುಕೂಲವಿರುವ 1½ ಏಕ್ರೆ ಜಾಗವೂ ಇದೆ. ರಾಜಾರಸ್ತೆಯಿಂದ ಆಸ್ತಿ ಮಧ್ಯದ ವರೆಗೂ ½ ಮೈಲು ದೂರವಿದ್ದು ಗಾಡಿ ಓಡಿಹೋಗುವ ರಸ್ತೆ ಇರುತ್ತೆ. 3 ಒಕ್ಕಲುಗಳಿರಲು 3 ಮನೆಗಳಿದ್ದು ಒಂದು ದೊಡ್ಡ ಕೊಟ್ಟಿಗೆಯೂ ಇರುತ್ತೆ. ದನ ಮೇಯಲು ಫಾರೆಸ್ಟ್ ಪೈಸಾರಿಯೂ ಇದೆ. ಇವಕ್ಕನುಸಾರವಾಗಿ ಸುಂಟಿಕೊಪ್ಪ ಪ್ಲಾನಿನಲ್ಲಿ ತಿಂಗಳೊಂದರ 38 ರೂ. ಬಾಡಿಗೆ ಬರುವ 2 ಮನೆಗಳೂ ಇದ್ದು ವ್ಯಾಪಾರಕ್ಕೂ ಆಸ್ತಿ ರೂಪಿತಕ್ಕೂ ಅನುಕೂಲವಿದೆ.

ಇವುಗಳ ಬೆಲೆ 20,000 ರೂಪಾಯಿಗಳು ಅಥವಾ ಇದರ ಸಮೀಪದ ಬೆಲೆಗೆ ಕೊಡಲ್ಪಡುವುದು. ಖಾಯಿಷ್ದಾರರು ಕೆಳಗಿನ ಅಡ್ರೆಸ್ಸಿನಲ್ಲಿ ಪತ್ರಮೂಲಕವಾಗಲೀ ಖುದ್ದಾಗಲಿ ವಿಚಾರಿಸಬಹುದು.

X
*C/o Manager*
*Kodagu Press*
*Mercara.*

## DEPARTMENT OF AGRICULTURE, MERCARA, COORG.

Applications are invited for the post of one laboratory Assistant to work in the Agricultural Laboratory to be opened shortly at Mercara. The post is teuable for a period of three years at the first instance and is likely to continue thereafter. Scale of pay: Rs. 100-5-200 P. M. with dearness allowance in addition to pay. The scale is likely to be revised on the up-ward side according to Pay Commission's recommendations. Qualifications: Graduates in Agriculture with experience in Mycological and Entomological techniques. Knowledge in pests and diseases would be an additional qualification. Age: below 30 years, relaxable to persons who are already in Government service. Persons may have to appear for interview at their own expense at Mercara, if it is considered necessary. Last date for receipt of application is 29-2-1948.

**B. S. Varada Rajan,**
*Agricultural Officer, Coorg.*


## ರಿಕ್ರೂಟಿಂಗ್ ಪ್ರೋಗ್ರಾಂ.

— 37 ಕೊಡಗು ಆಂಟಿ ಟ್ಯಾಂಕ್ ರಿಜಿಮೆಂಟ್ —

| ತಾರೀಕು. | ಸ್ಥಳ, ತಾಲೂ. | ಸಮಯ. | ಸ್ಥಳ. |
|---|---|---|---|
| 25—2—48 | ವೀರಾಜಪೇಟೆ | 11 A. M. | ಸಿವಿಲ್ ಆಸ್ಪತ್ರೆ |
| 26—2—48 | ಮೂರ್ನಾಡು | ,, | ,, |
| 27—2—48 | ಮಡಿಕೇರಿ | ,, | ,, |
| 28—2—48 | ನಾಪೋಕ್ಲು | 12 A. M. | ನಾಪೋಕ್ಲು ಸೇತುವೆ ಬಳಿ |
| 29—2—48 | ಗೋಣಿಕೊಪ್ಪಲು | 11 A. M. | ಸಿವಿಲ್ ಆಸ್ಪತ್ರೆ |
| 1—3—48 | ಹುದಿಕೇರಿ | ,, | ,, |
| 1—3—48 | ಪೊನ್ನಂಪೇಟೆ | 3 P. M. | ನಾಡ ಖಚೇರಿ |
| 2—3—48 | ಭಾಗಮಂಡಲ | 11 A. M. | ಆಸ್ಪತ್ರೆ |
| 2—3—48 | ತಲಕಾವೇರಿ | 3 P. M. | ಕೋ-ಆಪರೇಟಿವ್ ಕಟ್ಟಡ |
| 3—3—48 | ನಾಪೋಕ್ಲು | 11 A. M. | ಆಸ್ಪತ್ರೆ |
| 6—3—48 | ಸೋಮವಾರಪೇಟೆ | 11 A. M. | ಆಸ್ಪತ್ರೆ |
| 7—3—48 | ಶನಿವಾರಸಂತೆ | 11 A. M. | ಆಸ್ಪತ್ರೆ |
| 8—3—48 | ಕುಶಾಲನಗರ | 12 A. M. | ನಾಡ ಖಚೇರಿ |

2-1

**Capt. K. K. AIYANNA,**
*Unit Recruiting Officer.*

# ಗಾಂಧಿ ಜೀವನದ ರಸಮಯ ಸನ್ನಿವೇಶಗಳು.

ಲೇ:—'ಗುಪ್ತ', ಮಡಿಕೇರಿ

ಸತ್ಯಾಗ್ರಹಾಶ್ರಮ ಸಬರಮತಿಯಲ್ಲಿ ಸಾಯಂಕಾಲ ಪ್ರಾರ್ಥನೆ ನಡೆಯಿತ್ತು. ಎಲ್ಲರೂ ಪ್ರಾರ್ಥನೆಯಲ್ಲಿ ತನ್ಮಯರಾಗಿದ್ದರು. ವಹಿಕ್ಕರ, ಕಣ್ಮುಚ್ಚಿ ಬಾಪೂಜೀ ಏನಂತೆ ಕುಗೊಳಿಸುತ್ತಿದ್ದರು. ಆಶ್ರಮದ ಶಿಷ್ಯವರ್ಗವೆಲ್ಲವೂ ಕಣ್ಮುಚ್ಚಿ ಧ್ಯಾನದಲ್ಲಿ ಮಗ್ನವಾಗಿತ್ತು. ರಾಮನಾಮದ ಓಂಕಾರ ಧ್ವನಿಯು ಜೇಂಕರಿಸುತ್ತಿತ್ತು. ಅಲ್ಲೇ ಹತ್ತಿರ ಚಿನ್ನಾಟವಾಡುತ್ತಿದ್ದ ಎರಡು ನಾಯಿಗಳೆಲ್ಲ ಬಂದು ಗಾಂಧೀಜಿಯವರ ಹತ್ತಿರ ಬಂದು ಅವರನ್ನು ಪೊಸ ತೊಡಗಿತು. ಅವರ ಮುಖವನ್ನು ನಾಲ್ಕೈದು ಬಾರಿ ನೆಕ್ಕಿತು. ಮಹಾತ್ಮರಿಗೂ ಅವರ ಸುತ್ತಿದ್ದವರಿಗೂ ಈ ಸಂಗತಿ ತಿಳಿದಿರಲೇ ಇಲ್ಲ. ನೋಡಿಯ ಮೇಲೆ ನಾಯಿಯ ನಾಲಿಗೆಯ ನೀರು ಇನ್ನೂ ಆರಿರಲಿಲ್ಲ ಸ್ಥಿತಪ್ರಜ್ಞನಂತೆ ಕೂತ ಮಹಾತ್ಮರು ಸಮಾಧಿಸ್ಥರಾಗಿದ್ದರು. ಅವರಿಗೆ ಶರೀರದ ಗೋಚರವಿರಲಿಲ್ಲ.

* * *

ಗಾಂಧೀಜಿ ಕರುಳಿನ ಜೇನೆಯಿಂದ ತಾಸಿಗೆ ಹಿಡಿದಿದ್ದರು. ವೈದ್ಯರು ಸರ್ವಥಾ ಅವಲಾಗಿ ನಿರೀಕ್ಷಿಸಿದ್ದರು. ಹಾಲೊಂದೇ ಅವರಿಗೆ ಕೊಡಬಹುದಾದ ಆಹಾರವಾಗಿತ್ತು. ಆದರೆ ಗಾಂಧೀಜಿ ಹಿಂದೂದೇಶದ ಬಡ್ಡಿ ಪನಗಳ ಬಗ್ಗೆ ಜನರು ತೋರಿಸುವ ಕರುಣಾರಹಿತ ವಿಧಾನವನ್ನು ನಿಷೇಧಿಸಿ ಹಾಲು ಕುಡಿಯುವದಿಲ್ಲವೆಂದು ಪ್ರತಿಜ್ಞೆ ಮಾಡಿದ್ದರು. ಹಾಲು ಕುಡಿಯದೆ ಅನ್ನ ಜೀವ ಉಳಿಯುವಂತಿರಲಿಲ್ಲ. ಅವರ ಬಾಳಿನ ಹೊಳೆ ಬತ್ತುತ್ತಾ ಬರುತ್ತಿತ್ತು. ಗಳಿಗೆ ಗಳಿಗೆ ಸಾವಿನ ಸಮೀಪಕ್ಕೆ ಜಾರುತ್ತಿದ್ದರು. ಕಸ್ತೂರ್ಬಾ ಗಾಂಧಿಯವರ ವ್ಯಸನಕ್ಕೆ ಪಾರವಿರಲಿಲ್ಲ. ಮಹಾತ್ಮರು ತಾನು ಸಾಯುವದಾಗಿಯೇ ಸ್ನೇಹಿತರಿಗೆ ಕಡೇ ಪತ್ರ ಬರೆಸಿದ್ದರು. 'ನೂರು ಕೊಂದರೆ ಕೊಡುವ ಅಪರಾಧದ ಶರೀರ ಹೋಗುವದಾದರೆ ಹೋಗಲಿ; ಹಾಲಿನಿಂದ ಮಾತ್ರ ಅದನ್ನು ಉಳಿಸಬಹುದಾದರೆ ಇದಕ್ಕಾಗಿ ಪ್ರತಿಜ್ಞೆ ಮುರಿಯುವದಿಲ್ಲ' ಎಂದು ನಿರ್ಧಾರ ಮಾಡಿದ್ದರು. 'ಕಡೆಗೆ ಕಸ್ತೂರ್ಬಾ ದಾರಿ ಹುಡುಕಿದಳ! ನೀವು ಪ್ರತಿಜ್ಞೆ ಮಾಡಿದ್ದು ಹಸುವಿನ ಹಾಲು ಕುಡಿಯುವದಿಲ್ಲ ವೆಂದು. ಅಡಿನ ಹಾಲು ನಿಷೇಧವಲ್ಲತಾನೆ? ಅದನ್ನು ತೆಗೆದುಕೊಳ್ಳಿ. ನಿಮ್ಮ ಪ್ರತಿಜ್ಞೆಗೆ ಭಂಗಬರುವದಿಲ್ಲ. ಅವಳ ಮತುಳೇಕಿದೆ. ಅಂದಿನಿಂದ ಅಡಿನ ಹಾಲು ಆಹಾರವಾಯಿತು.'

* * *

ಒಮ್ಮೆ ಗಾಂಧೀಜಿಯವರ ಪ್ರಿಯ ಶಿಷ್ಯೆ ಮಿಲ್ಲಿಗ್ರಾಮ್ ಪೋಲಕ್ ತೀರ್ಥಳು 'ಸಾವಿನ ಬಳಿಕ ಮುಂದೇನು?' 'ಪಶ್ಚ ಮೇಲೇನಾಗುವದೆಂದು ಹುಡುಕುವದು ಹೊತ್ತು ಹಾಳು ಮಾಡಿದ ಹಾಗೆ' ಎಂದರು ಗಾಂಧೀಜಿ. ಆಕೆ ಪುನಹ ಕೇಳಿದಳು. 'ಅದರೆ ಕೆಲವರಿಗೆ ಅದು ವ್ಯರ್ಥ ತಾಲಹ ಹುಡುಕಿಸುವದಿಲ್ಲ. ಇತಿಗಿಂತಾ ಹೆಚ್ಚಾಗಿ ಸಾವಿನ ಪರದೆಯಾಚೆ ಏನಿದೆಯೋ ನೋಡಬೇಕೆಂಬ ಆಸಕ್ತಿ ಅವರಿಗೆ.'

'ಇದ್ದೀತು, ಆದರೂ ತನ್ನ ಈಗಿನ ಬಾಳು, ಸುತ್ತಲಿರುವ ಜೀವಿಗಳಿಗೆ ಸುಖ ಕೊಡುವ ಪನ್ಯೆ ಇವೆ' ಮಾಡಬೇಕಾದ ಕೆಲಸ. ಸಾವಿನ ಬಗ್ಗೆ ಯೋಚಿಸಲೇ ಬಾರದು ಸಾವು ಅಂದ್ರೆ ದೊಡ್ಡ ವಿಷಯವಲ್ಲ' ಎಂದರು ಗಾಂಧೀಜಿ.

* * *

ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಸ್ತ್ರೀಯರೂ ಭಾಗವಹಿಸುವ ಸಂದೇಶವನ್ನು ಬಾಪು ಕೊಟ್ಟರು. ಆಗ ಕಸ್ತೂರ್ಬಾರಿಗೆ ತೀವ್ರ ಜ್ವರ. ಮೈಯೆಲ್ಲಿ ಈ ವಿಚಾರ ಒಂದೂ ಮಾತಾಡಲಿಲ್ಲ ಕಸ್ತೂರ್ಬಾಗೆ ವ್ಯಸನವಾಯಿತು. ಗಾಂಧೀಜಿಯನ್ನು ಕೇಳಿದರು. 'ನಾನೇನು ದೇಶಕ್ಕೆ ಸೇವೆಮಾಡಲು ಅಯೋಗ್ಯಳೇ? ನನ್ನನ್ನು ಸತ್ಯಾಗ್ರಹಕ್ಕೆ ಆವ್ವಾನಿಸುವ ಮಾತಾಡಬೇಲ್ಲವೇಕ?' ಗಾಂಧೀಜಿ ಎಂದರು. 'ನಿನಗೆ ಮನಸ್ಸಿನಲ್ಲಿ ಹಾಗೆನಿಸುತ್ತಿದ್ದರೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಭ್ಯಂತರವಿಲ್ಲ. ಆದರೆ ಸತ್ಯಾಗ್ರಹ ಮಂಳೆನ ಹಾಸಿಗೆ. ನೂರಾರು ಕಷ್ಟ, ಅಪಮಾನಗಳನ್ನು, ಅನುಭವಿಸಬೇಕಾಗುತ್ತದೆ.' ನನ್ನ ಒತ್ತಾಯದಿಂದ ನೀನು ಚಳವಳಿಕ್ಕೆ ಸೇರಬಾರದು ಕಸ್ತೂರ್ಬಾ ಸತ್ಯಾಗ್ರಹ ಚಳವಳವಲ್ಲಿ ಧುಮುಕಿದರು. ಜೈಲಿಗೆ ಹೋದರು. ಅವರಿಗೆ ಜೈಲಿನ ಆಹಾರ ತಿನ್ನಲಾಗುತ್ತಿರಲಿಲ್ಲ. ಜೈಲಿನಲ್ಲಿ ಒಣಗಿ ಕೃಶರಾಗಿದ್ದರು. ಅವಧಿ ಪೂರ್ತಿಸಿದ ನಂತರ ಜೈಲಿನಿಂದ ಅವರ ಬಿಡುಗಡೆಯ ಸಮಯಕ್ಕೆ ಗಾಂಧೀಜಿ ಎದುರ್ಗೊಳ್ಳಲು ಹೋಗಿದ್ದರು. ಅವರು ಮಾಡಿದ ಕೆಲಸವನ್ನು ಗಾಂಧೀಜಿ ಹೊಗಳುತ್ತಿದ್ದಾಗ ಕಸ್ತೂರ್ಬಾರ ಕಣ್ಣಲ್ಲಿ ಎಂಥಾ ಪ್ರೇಮ ಮಯ ನಾಚಿಕೆ ತಂಬಿತ್ತು!

* * *

ಭಾರತದ ಹಿರಿಯ ರಾಜಕಾರಿಣಿ ಗೋಪಾಲ ಕೃಷ್ಣ ಗೋಖಲೆ ಆಫ್ರಿಕಾಕ್ಕೆ ಹೋಗಿದ್ದರು. ಅವರು ಅಲ್ಲಿದ್ದಾಗ ಗಾಂಧೀಜಿಯೇ ಅವರ ವೇಲ್ವಿಚಾರಣೆ ನೋಡುತ್ತಿದ್ದರು. ಗೋಖಲೆಯವರು ಬಹು ಮುತ್ಸದ್ದಿ ವ್ಯಾಧಿಯಿಂದ ನರಳುತ್ತಿದ್ದರು. ಗಾಂಧೀಜಿಯೇ ಎಚ್ಚರಿಕೆಯಿಂದ ಅವರಿಗೆ ಅಡಿಗೆ ಮಾಡುತ್ತಿದ್ದರು. ಅದಿನ್ನಾವ ನಳಪಾಕವೂ ಅಲ್ಲ. ಅಲೂಗಡ್ಡೆ ಪಲ್ಯ; ಅಲೂಗೆ ಡ್ಡೆಯನ್ನು ತೆಳ್ಳಗೆ ಹೆಚ್ಚಿ ಬೆಂಕಯಲ್ಲಿ ತೀರಾ ಕರಿ ಕಾಗದದಂತೆ ಸುಟ್ಟು ಕೊಡುವದು. ಇವನ್ನು ಮಾಡಲು ಎಷ್ಟು ಎಚ್ಚರ ಗಾಂಧೀಜಿಯವರದು. ತನ್ನ ಬಟ್ಟೆಯ ವಿಚಾರದಲ್ಲಿ ಗೋಖಲೆ ಬಹು ಎಚ್ಚರ. ಮಡಿಕೆಯಲ್ಲಿ ಸ್ವಲ್ಪ ಸುಕ್ಕಾದರೂ ಪುಳಿಯವಾದಂತೆ ಮಾಡುತ್ತಿದ್ದರು. ಒಮ್ಮೆ ಅವರ ರೇಶ್ಮೆ ಶಾಲನ್ನು ಇಸ್ತ್ರಿ ಮಾಡಬೇಕಾಗಿ ಬಂತು. ಹತ್ತಿರ ಅಗಸರಾರೂ ಇರಲಿಲ್ಲ. ಗಾಂಧೀಜಿಯವರು ತಾನು ಮಾಡುವದಾಗಿ ಹೇಳಿದರು. 'ರಾಜಕೀಯ ವಿಚಾರದಲ್ಲಿ ನಿಪ್ಣತ್ತು ತಂಬುಬಲ್ಲೆ. ಆದರೆ ಈ ಕೆಲಸದಲ್ಲಿ ಹೇಗೆ?' ಎಂದು ಗೋಖಲೆ ಹಾಸ್ಯಮಾಡಿದರು. ಗಾಂಧೀಜಿ ಇಸ್ತ್ರಿ ಮಾಡಿಕೊಟ್ಟರು. ಅವರ ಚಮತ್ಕೃತಿಯನ್ನು ಗೋಖಲೆ ಹೊಗಳಿದರು

* * *

ಇಂದಿನೇ ಇಸವಿ. ಗಾಂಧೀಜಿ ಆಫ್ರಿಕಾದಿಂದ ಇಂಗ್ಲೆಂಡಿಗೆ ಹೋಗಿದ್ದರು. ಮುಖಕ್ಷೌರ ಮಾಡಿಸಿಕೊಂಡಾಗ ಕ್ಷೌರಿಕನು ಇವರ ತಲೆ ಕೂದಲು ನೋಡಿ ತೈಲ ಹಾಕಬೇಕು ಎಂದ ಗಾಂಧೀಜಿ ಯಾವ ದೋ ವಿಚಾರದಲ್ಲಿ ಮಗ್ನರಾಗಿದ್ದು ಗಮನಿಸಲಿಲ್ಲ. ಒಂದು ಸೀಸೆ ತೈಲ ನಿಮ್ಮ ಕೋಣೆಗೆ ಕಳುಹಿಸುತ್ತೇನೆ ಎಂದು ಅತನು ನುಡಿದ. ಗಾಂಧೀಜಿ 'ಹೂಂ' ಎಂದು ಬಿಟ್ಟರು. ನಾಲ್ಕೈದು ದಿನ ಕಳೆದ ನಂತರ ಕ್ಷೌರಿಕನು ಈ ತೈಲದ ಬಿಲ್ಲನ್ನು ಕೊಟ್ಟನು. ಗಾಂಧೀಜಿ ಅದನ್ನು ನೋಡಿಯೂ ಕೂಡ ಇರಲಿಲ್ಲ. ಎರಡು ಪೌಂಡು ಬಿಲ್ಲ್ ಸಂದಾಯಮಾಡಿದರು. ಹಿಂತಿರುಗಿದಾಗ ಅದನ್ನು ಅವರು ತಂದು ತಮ್ಮೊಡನಿದ್ದ ಮಿಲ್ಲಿಗ್ರಾಮ್ ಪೋಲಕ್‌ರಿಗೆ ಕೊಟ್ಟರು. 'ಎರಡು ಪೌಂಡು ಕೊಟ್ಟಿದ್ದೇನೆ. ನಿನ್ನ ಉಪಯೋಗಕ್ಕೆ ಬರಬಹುದು' ಎಂದರು. ಆಕೆಗೆ ಆಶ್ಚರ್ಯ. ಗಾಂಧೀಜಿ ಎಂದೂ ಹಾಗೆ ಉಡುಗರೆ ಕೊಡುವವರಲ್ಲ. ಕಡೆಗೆ ಕಥೆ ಹೇಳಿದರು. ದುಡ್ಡು ಸುಲಿಗೆಯು ಮಾಡಿರಿಯನ್ನು ವಿವರಿಸಿದರು.

* * *

ದಕ್ಷಿಣ ಆಫ್ರಿಕಾದಲ್ಲಿ ಸರಕಾರವು ಏಶ್ಯಾಟಿಕ್ ಬಿಲ್ಲೊಂದನ್ನು ತಂದು ಅಲ್ಲಿರುವ ಹಿಂದೀಯರು ಏಶ್ಯಾಟಿಕ್ ಖಚೇರಿಯಲ್ಲಿ ತಮ್ಮ ಹೆಬ್ಬೆಟ್ಟಿನ ಸಹಿಹಾಕಿ ರಿಜಿಸ್ಟರು ಮಾಡಿಸಿಕೊಳ್ಳಬೇಕೆಂದು ಖಾನೂನು ನೂಡಿತು. ಹಿಂದೀಯರು ಇದಕ್ಕೆ ವಿರುದ್ಧ ಸತ್ಯಾಗ್ರಹ ಮಾಡಿದರು. ಕಡೆಗೆ ಒಪ್ಪಂದವಾಗಿ ಖಾನೂನನ್ನು ವಾಪಾಸು ತೆಗೆದುಕೊಳ್ಳುವಂತೆಯೂ ಹಿಂದೀಯರು ತಮ್ಮ ಸ್ವಇಚ್ಛೆಯಿಂದ ರಿಜಿಸ್ಟರು ಮಾಡಿಸಿಕೊಳ್ಳುವಂತೆಯೂ ಶಿರ್ಮಾನವಾಯಿತು. ಗಾಂಧೀಜಿಯವರು ತಮ್ಮ ಹೆಬ್ಬೆರಳ ಗುರುತನ್ನು ಮೊದಲು ಕೊಡಬೇಕೆಂದು ನಿಶ್ಚಯಿಸಿದ್ದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಕೆಲವರಿಗೆ ಈ ಒಪ್ಪಂದ ಪತಿಕೋರಲಿಲ್ಲ. ಗಾಂಧೀಜಿಯವರ ಮೇಲೆ ಸಿಟ್ಟುಬಂತು. ಗಾಂಧೀಜಿಯವರು ತಮ್ಮ ಸಹಿಕೊಡಲು ಏಶ್ಯಾಟಿಕ್ ಖಚೇರಿಗೆ ಹೋಗುತ್ತಿದ್ದಾಗ ಗಾಂಧೀಜಿಯವರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಎರಡು ಪಠಾಣರು ಗಾಂಧೀಜಿಯವರನ್ನು ತಡೆದು ಹೊಡೆದರು ಗಾಂಧೀಜಿಯವರು ಮೂರ್ಛೆತರಾಗಿ 'ಹಾರಾಮ, ಹಾರಾಮ' ಎನ್ನುತ್ತಾ ಬಿದ್ದರು. ಹತ್ತಿರದಲ್ಲಿದ್ದ ಕೃಷ್ಟಿಯ.ಸ್ ಪಾದ್ರಿ ಮಿ. ಡೋಕ್ ಎಂಬವರು ಇವರನ್ನು ಮನೆಗೆ ತೆಗೆದುಕೊಂಡು ಹೋಗಿ ಶಿಶ್ರೂಷೆ ಮಾಡಿದರು. ಗಾಂಧೀಜಿಯವರು ಈ ಪರಿಸ್ಥಿತಿಯಲ್ಲಿಯೇ ರಿಜಿಸ್ಟರು ಮಾಡುವ ಅಧಿಕಾರಿಯಹ್ನು ಕರೆಸಿ ಅಲ್ಲೇ ತನ್ನ ಹೆಬ್ಬೆರಳ ಗುರುತು ಕೊಟ್ಟರು. ಡೋಕರ ಮಗಳು ಗಾಂಧೀಜಿಯ ಆಪ್ತಕಿ ಮಾಡುತ್ತಾ ನ್ಯೂನ್ಯರ 'ಕರುಣಾಳು ಬಾ ಬೆಳಕೆ' ಹಾಡನ್ನು ಹಾಡುತ್ತಿದ್ದಳು. ಈ ಅಪರಿಮಿತ ಶಾಂತಿಯ ಕೈಯು ಮಹಾತ್ಮರನ್ನು ಕೆಲವೇ ದಿನಗಳಲ್ಲಿ ಬದುಕಿಸಿತು.

* * *

ಮಿಲ್ಲಿಗ್ರಾಮ್ ಜೈಲಿನಿಂದ ಬಂದಾಗ ಬಹು ಸೊರಗಿ ಹೋಗಿದ್ದಳು. ಅವಳ ಮಗವು ನೊಲೆಕಂಡಿಯುತ್ತಿದ್ದ ಕಾರಣ ಆಕೆಗೆ ಇನ್ನಷ್ಟು ಕಸ್ಟವಾಗಿತ್ತು. ಮಗುವನ್ನು ನೊಲೆ ಬಿಡಿಸಲು ಮಾಡಿದ ಪ್ರಯತ್ನವೆಲ್ಲ ನಿಷ್ಫಲವಾಯಿತು. ಮಿಲ್ಲಿಗೆ ನಿದ್ರೆಬರದ ರೋಗ (Insomnia) ಸಾರಂಭವಾಗಿತ್ತು. ಆಕೆ ಬದುಕುವ ಆಸೆ ಬಿಟ್ಟಿದ್ದಳು. ಮಗುವು ಬೇರೆ ಯಾರ ಹತ್ತಿರವೂ ಹೋಗುತ್ತಿರಲಿಲ್ಲ. 'ಮಗುವನ್ನು ನನ್ನ ವಶಕ್ಕೆ ಕೊಡವೆ ಏನು?' ಗಾಂಧೀಜಿ ಒಂದು ದಿನ ಕೇಳಿದರು. 'ಮಗುವನ್ನು ನೀವು ಹೇಗೆ ಸಂತೈಸುವಿರಿ?' ಮಿಲ್ಲಿಯು ಕೇಳಿದಳು. 'ನನ್ನ ಕೈಗೆ ಕೊಡು, ನಾನು ಮೊಲೆಯುಣ್ಣುವದನ್ನು ಬಿಡಿಸುತ್ತೇನೆ. ನನ್ನ ಹತ್ತಿರವೇ ಮಲಗಿಸಿಕೊಳ್ಳುತ್ತೇನೆ.' ಎಂದು ಗಾಂಧೀಜಿ ಹೇಳಿದರು. ಮಿಲ್ಲಿಯು ಒಪ್ಪಿದಳು. ಗಾಂಧೀಜಿ ಕೆಲಸದಿಂದ ರಾತ್ರಿ ಮನೆಗೆ ಬಂದವರೇ ಮಗುವನ್ನು ಎತ್ತಿಕೊಂಡು ಹೋಗಿ ನೆಲದ ಮೇಲೆ ಹಾಸಿಗೆ ಹಾಸಿಕೊಂಡು ಪಕ್ಕದಲ್ಲಿ ಮಗುವನ್ನು ಮಲಗಿಸಿಕೊಂಡರು. ಮಗುವಿಗೆ ಬಾಯಾರಿಕೆ ಆದರೆ ಇರಲಿ ಎಂದು ಸ್ವಲ್ಪ ನೀರಿಟ್ಟುಕೊಂಡಿದ್ದರು. ಮಗು ಅಳಲಿಲ್ಲ. ನಿದ್ರೆ ಮಾಡಿತು. ಎರಡು ವಾರ ಹೀಗೆ ನಡೆಯಿತು. ಮಗುವು ನೊಲೆಯು ಅಭ್ಯಾಸವನ್ನು ಬಿಟ್ಟಿತು.

* * *

ಕಸ್ತೂರ್ಬಾರವರಿಗೆ ರಕ್ತಕ್ಷಯ ರೋಗ ಪ್ರಾರಂಭವಾಗಿತ್ತು. ಗಾಂಧೀಜಿ ಜೊಹಾನ್ಸ್‌ಬರ್ಗಿನಲ್ಲಿದ್ದರು. ಕಸ್ತೂರ್ಬಾ ಫೀನಿಕ್ಸ್ ಆಶ್ರಮದಲ್ಲಿ. ಕಸ್ತೂರ್ಬಾ ಕೊನೆಯುಸಿರಾಡುವ ವಿಷಘಟ್ಟಕ್ಕೆ ಬಂದು ನುಟ್ಟಿದ್ದರು. ಡಾಕ್ಟರು ಏನೇನೋ ಔಷಧಿಕೊಟ್ಟರು. ಪರಿಸ್ಥಿತಿ ಸುಧಾರಿಸಲಿಲ್ಲ ಗಾಂಧೀಜಿಗೆ ತಿಳಿಸಲೆಂದು ಯತ್ನಿಸಲಾಯಿತು. 'ತವರಿಗೆ ಕಷ್ಟಕೊಡಬೇಡಿ ರೆಂದು ಕಸ್ತೂರ್ಬಾ ಮೊಳೆ ಹೋದರು. ಗಾಂಧೀಜಿಗೆ ತಂತಿ ಮೂಲಕ ಅರುವಿಕೆ ಕೊಡಲಾಯಿತು. ಗಾಂಧೀಜಿಯವರು ಬಂದರು. ಆಕೆಯ ಶಿಶ್ರೂಷೆಗೆ ತೊಡಗಿದರು. ಒಂದು ಸಲ ಸ್ವಲ್ಪ ಎಚ್ಚರವಾದಾಗ, 'ನನ್ನಲ್ಲಿ ಪೂರ್ತಾ ನೆಂಬ ಕೆ ಇದೆಯೇ ನಿನಗೆ?' ಎಂದು ಬಾಪು ಆಕೆಯನ್ನು ಕೇಳಿದರು. ಬ 'ಹೂಂ' ಎಂದರು. 'ಹಾಗಾದರೆ ನಾನೇ ಔಷಧಿತೊಡುತ್ತೇನೆ ತೆಗೆದುಕೊಳ್ಳುವೆಯಾ?' ಎಂದು ಕೇಳಿದರು. ಬಾ. ಅದಕ್ಕೂ ಒಪ್ಪಿದರು. ಗಾಂಧೀಜಿ ವೈದ್ಯರು ತೊಟ್ಟು ಔಷ

# ಕೊಲೆಯ ಒಳಸಂಚಿನ ಕಥೆ.

["ಬ್ಲಿಟ್ಜ್" ಪತ್ರಿಕೆಯ ಲೇಖನಾಧಾರದಿಂದ"]

ಯಿಯ ದಾದರಿನಲ್ಲಿರುವ ಎರಡುಮಹಡಿಯ ಒಂದು ಕಟ್ಟಡದಲ್ಲಿ ಈ ಮಂತ್ರಾಲೋಚನೆಗಳು ನಡೆದವೆನ್ನಲಾಗಿದೆ. ಈ ಭವನದ ಮೇಲೆ ಹಿಂದೂದೇಶಕ್ಕೆ ಸ್ವಾತಂತ್ರ್ಯಬಂದ ಅಗಷ್ಟ ೧೫ ರಂದೂ ಕಾಂಗ್ರೆಸ್ ಧ್ವಜವೇರಿಲ್ಲ! ಬದಲು ಹಿಂದೂ ದೇಶದ ವಿಭಜನೆಯ ವಿಷಾದವನ್ನು ಸೂಚಿಸಲು ಅಂದು ಕಪ್ಪು ಧ್ವಜಾರೋಹಣವಾಯಿತಂತೆ. ಆದರೆ ಮಹಾತ್ಮರ ಕೊಲೆಯ ನಂತರ ಪ್ರಥಮ ಬಾರಿಗೆ ರಾಷ್ಟ್ರೀಯ ಧ್ವಜ ಹಾರಲ್ಪಟ್ಟಿರುವದಂತೆ! ಈ ಮನೆಯಲ್ಲಿಯೇ ಮಹಾತ್ಮರ ಕೊಲೆಯ ಸಿದ್ಧತೆ ನಡೆಯಿತಂತೆ! ಈ ಮನುಷ್ಯ ಹಿಂದೂ ಮಹಾಸಭೆಯ ಪೂಜ್ಯ ಕಛ್ಚೆಪ್ಪ ವಿನಾಯಕ ದಾಮೋದರ ಸಾವರ್ಕರ್‌ರಾಗಿದ್ದಾಗಿದೆ ಇವರ ಸ್ನೇಹಿತ ದಿಕ್ಷಿತ ರಂದು ಪೊಲೀಸರು ಪತ್ತೆಗಿಂ ಮಾಡಿ ಈ ಮನೆಗೆ ಬೀಗ ಹಾಕಿರುವರು

ಪೊಲೀಸರ ಪರಿಶೋಧನೆಯಿಂದ ತಿಳಿದುಬಂದ ವಿಚಾರಗಳು ಹೀಗಿವೆ. ಈ ಒಳಸಂಚುಗಾರರಲ್ಲಿ ಪ್ರಮುಖ ಪಾತ್ರಧಾರಿಗಳಾಗಿರುವವರು ಗಳು ನಂದಿ ಇವರಲ್ಲಿ ಒಬ್ಬ ಜನರ ದಸ್ಸಗಿರಿಯಾಗಿದೆ ಇವರು ತಮ್ಮ ಯೋಜನೆಯಂತೆ ಪ್ರಥಮ ವ ಹಾತ್ಮಾ ಗಾಂಧಿ, ಜವಾಹರ್‌ಲಾಲ್ ನೆಹರೂ, ಮೌಲಾನಾ ಅಬ್ದುಲ್ ಕಲಾಂ ಮೊದಲಾದ ಕಾಂಗ್ರೆಸ್ ಮುಂದಾಳುಗಳನ್ನು ಕೊಲೆಮಾಡಿ ಹಿಂದೂದೇಶದ ಅಧಿಕಾರ ರಥವನ್ನು ತಾವು ನಡೆಸುವ ವಿಚಾರವಿತ್ತು. ಈ ಸಿದ್ಧತೆ ಹಲವು ದಿನಗಳಿಗೆ ಮೊದಲೇ ಪೂನಾ, ಬೊಂಬಾಯಿಗಳಲ್ಲಿ ನಡೆದಿತ್ತಂತೆ

ಮಹಾತ್ಮರ ಕೊಲೆಯನ್ನು ಹಿಂದೂ ಮಹಾಸಭೆಯ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸೇರಿದವರು ಮಾಡಿದರೆ ಇದರಿಂದ ದೇಶದಲ್ಲಿ ಅಶಿಸ್ತ ಪರಿಣಾಮ ಉಂಟಾಗುವದೆಂದು ಇವರಿಗೆ ತಿಳಿದಿತ್ತಂ ಆದ್ದರಿಂದ ಹೊಣೆಬಿಸಿನ ಒಂದ ಯೋಗ್ಯ ನಿರಾಶ್ರಿತನೊಬ್ಬನನ್ನು ಇವರು ಹುಡು ಕಿದರು ಜನವರಿ ತಿಂಗಳ ಪ್ರಾರಂಭದಲ್ಲಿ ಬಾಂಬೆಯಿಂದ ತಪ್ಪಿಸಿಕೊಂಡು ಬಂದಿರುವ ಮದನಲಾಲ್ ಎಂಬ ನಿರಾಶ್ರಿತನನ್ನು ಇವರು ಹುಡುಕಿ ಕಂಡುಬಿಡಿದರು. ಇವನು ಆಕಯ ವನ್ನು ಅನುಸರಿಸಿ ತಿಳಿಸಿದರು ಪ್ರಾರಂಭದಲ್ಲಿ ಇವರಿಗೆ ಮಹಾತ್ಮರ ಮೇಲಿರುವ ಭಕ್ತಿಯ ದೃಷ್ಟಿಯಿಂದ ಕೊಲೆಯ ಸಿದ್ಧತೆ ಅವರಿಗೆ ಇಷ್ಟವಿರಲಿಲ್ಲ ಬದಲು ಅವರಿಗೆ ಬೆದರಿಕೆ ಹಾಕಿ ಅವರಿಂದ ಕೆಲವು ಮುಂದಾಳುಗಳ ಹಠಾತ್ತಾಗಿ ರಾಜೀನಾಮೆ ಕೊಡಿಸಿ ಅಧಿಕಾರ ರಥವನ್ನು ತಾವು ನಡೆಸುವ ವಿಚಾರವಿತ್ತು. ಈ ಸಿದ್ಧತೆ ಹಲವು ದಿನಗಳಿಗೆ ಮೊದಲೇ ಪೂನಾ, ಬೊಂಬಾಯಿಗಳಲ್ಲಿ ನಡೆದಿತ್ತಂತೆ

ಮಹಾತ್ಮರ ಕೊಲೆಯನ್ನು ಹಿಂದೂ ಮಹಾಸಭೆಯ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸೇರಿದವರು ಮಾಡಿದರೆ ಇದರಿಂದ ದೇಶದಲ್ಲಿ ಅಶಿಸ್ತ ಪರಿಣಾಮ ಉಂಟಾಗುವದೆಂದು ಇವರಿಗೆ ತಿಳಿದಿತ್ತಂ ಆದ್ದರಿಂದ ಹೊಣೆಬಿಸಿನ ಒಂದ ಯೋಗ್ಯ ನಿರಾಶ್ರಿತನೊಬ್ಬನನ್ನು ಇವರು ಹುಡು ಕಿದರು ಜನವರಿ ತಿಂಗಳ ಪ್ರಾರಂಭದಲ್ಲಿ ಬಾಂಬೆಯಿಂದ ತಪ್ಪಿಸಿಕೊಂಡು ಬಂದಿರುವ ಮದನಲಾಲ್ ಎಂಬ ನಿರಾಶ್ರಿತನನ್ನು ಇವರು ಹುಡುಕಿ ಕಂಡುಬಿಡಿದರು. ಇವನು ಆಕಯ ವನ್ನು ಅನುಸರಿಸಿ ತಿಳಿಸಿದರು ಪ್ರಾರಂಭದಲ್ಲಿ ಇವರಿಗೆ ಮಹಾತ್ಮರ ಮೇಲಿರುವ ಭಕ್ತಿಯ ದೃಷ್ಟಿಯಿಂದ ಕೊಲೆಯ ಸಿದ್ಧತೆ ಅವರಿಗೆ ಇಷ್ಟವಿರಲಿಲ್ಲ ಬದಲು ಅವರಿಗೆ ಬೆದರಿಕೆ ಹಾಕಿ ಅವರಿಂದ ಕೆಲವು ಮುಂದಾಳುಗಳ ಹಠಾತ್ತಾಗಿ ರಾಜೀನಾಮೆ ಕೊಡಿಸಿ ಅಧಿಕಾರ ರಥವನ್ನು ತಾವು ನಡೆಸುವ ವಿಚಾರವಿತ್ತು. ಈ ಸಿದ್ಧತೆ ಹಲವು ದಿನಗಳಿಗೆ ಮೊದಲೇ ಪೂನಾ, ಬೊಂಬಾಯಿಗಳಲ್ಲಿ ನಡೆದಿತ್ತಂತೆ

ಮದನಲಾಲ್ ಮತ್ತು ಗಾಡ್ಸೆ ಇವರು ಮೊದಲು ಬಿರ್ಲಾ ಭವನದ ಹಿಂಬಾಗಿಲಿನಿಂದ ಪ್ರವೇಶಿಸಿ ಗಾಂಧಿಜಿಯವರನ್ನು ಅವರ ಕೋಣೆಯಲ್ಲಿಯೇ ಕೊಲೆಮಾಡಬೇಕೆಂದು ಆಲೋಚಿಸಿದ್ದರಂತೆ ಆದರಿಂತಿ ಅವರು ಬಿರ್ಲಾಭವನಕ್ಕೆ ಹೋಗಿದ್ದರಂತೆ ಆದರೆ ಬಿರ್ಲಾ ಭವನದ ಹೂತೋಟದ ಬೇಲಿಯು ಇವರನ್ನು ಕಂಡು ಪ್ರಶ್ನಿಸಿದ್ದು ಆ ಆಗ ಇವರು ಗಾಂಧೀಜಿಯವರ ಪ್ರಾರ್ಥನಾ ಸಭೆಗೆ ತೆರಳುವ ವಿಚಾರವನ್ನು ತಿಳಿಸಿದರಂತೆ ಆದರೆ ಬಿರ್ಲಾ ಭವನದ ಹೂತೋಟದ ಬೇಲಿಯು ಇವರನ್ನು ಕಂಡು ಪ್ರಶ್ನಿಸಿದ್ದು ಆ ಆಗ ಇವರು ಗಾಂಧೀಜಿಯವರ ಪ್ರಾರ್ಥನಾ ಸಭೆಗೆ ತೆರಳುವ ವಿಚಾರವನ್ನು ತಿಳಿಸಿದರಂತೆ

ಮದನಲಾಲ್ ಮತ್ತು ಗಾಡ್ಸೆ ಇವರು ಮೊದಲು ಬಿರ್ಲಾ ಭವನದ ಹಿಂಬಾಗಿಲಿನಿಂದ ಪ್ರವೇಶಿಸಿ ಗಾಂಧಿಜಿಯವರನ್ನು ಅವರ ಕೋಣೆಯಲ್ಲಿಯೇ ಕೊಲೆಮಾಡಬೇಕೆಂದು ಆಲೋಚಿಸಿದ್ದರಂತೆ ಆದರಿಂತಿ ಅವರು ಬಿರ್ಲಾಭವನಕ್ಕೆ ಹೋಗಿದ್

# ಕೊಡಗಿನ ಕಂಬನಿ.

### ಟಿ. ಶೆಟ್ಟಿಗೇರಿ

ತಾರೀಕು ೩೧-೧-೧೮ಳ ರಲ್ಲಿ ಮಹಾತ್ಮರ ದೇಹವಿಸರ್ಜನೆಯನ್ನು ಕೇಳಿಕೊಂಡನೆಯೇ ಟಿ. ಶೆಟ್ಟಿಗೇರಿ ಶಾಲೆ ಮುಚ್ಚಿ ವಿದ್ಯಾರ್ಥಿಗಳೂ ಸಾರ್ವಜನಿಕರೂ ಶೋಕ ಭರಿತರಾಗಿ ಸಭೆ ಸೇರಿದರು. ಏದು ನಿಮಿಷ ಮೌನ ಪ್ರಾರ್ಥನೆ ಮಾಡಲಾಯಿತು. ತಾ. ೧೫ ರಲ್ಲಿ ಶೆಟ್ಟಿಗೇರಿ, ತಾವಳಗೇರಿ, ನೆಲ್ಯಹಲೆ ಗ್ರಾಮಗಳ ಹೆಂಗಸರು, ಮಕ್ಕಳು ಗಂಡಸರು ಕಿಕ್ಕಿರಿದು ಸೇರಿ ಮಹಾತ್ಮರ ಭಾವಚಿತ್ರ, ಅರ್ಧ ಏರಿಸಿದ ಧ್ವಜದೊಂದಿಗೆ ಲಕ್ಷ್ಮಣತೀರ್ಥ ನದಿಗೆ ಮೌನ ಮೆರವಣಿಗೆ ಮಾಡಿ ಹೊಳೆಯಲ್ಲಿ ಪುಷ್ಪಾರ್ಚನೆ ನಡಸಲಾಯಿತು. ನಂತರ ಸಭೆಸೇರಿ ಕಲಿಯುಗದ ಅವತಾರ ಪುರುಷರ ವಿಚಾರ ಶ್ರೀಗಳಾದ ಎಸ್. ಎಸ್. ಪೂವಯ್ಯ, ತಡಿಯಂಡಮದ ತಿಮ್ಮಯ್ಯ, ಕುಪ್ಪುಡೀರ ಮೊದಮ್ಮಯ್ಯ ಇವರು ಭಾಷಣಮಾಡಿದರು. ಭಗವದ್ಗೀತೆ, ರಾಮಾಯಣ ಪಠಣಗಳಾದವು.

### ಕೆಂಬಂಗಾಲ.

ತಾ. ೧೫ ರಲ್ಲಿ ಮಹಾತ್ಮರ ಅಸ್ಥಿವಿಸರ್ಜನಾ ಕಾರ್ಯವನ್ನು ಕೆಂಬಂಗಾಲ ಗ್ರಾಮಸ್ಥರು ನಡೆಸಿದರು. ಬೆಳಿಗ್ಗೆ ಹಿಂದೂ ಸಂಪ್ರದಾಯ, ಹರಿಜನ ಎಲ್ಲರೂ ಸೇರಿ ಮೆರವಣಿಗೆಯು ಸಂತರ ಸೂಜ ನಡೆಸಲಾಯಿತು. ಮಧ್ಯಾಹ್ನಿ ಹೊಳಿಗೆ ಪರನವಾಯಿತು. ಶಾಲಾ ವೈದಾನದಲ್ಲಿ ಪ್ರಾರ್ಥನೆಯು ನಂತರ ಸಭೆ ನಡೆಯಿತ. ಸಧ್ಯಾಹ್ನ ಜನರಿಗೆ ಪಾಯಸ ಹಾಗು ಪಂಕ್ತಿ ಭೋಜನವನ್ನು ಕೊಡಲಾಯಿತು. ಹರಿಕಥೆಯಿಂದ ಕಾರ್ಯಕ್ರಮ ಮುಕ್ತಾಯವಾಯಿತು.

### ಕುಟ್ಟ

ಇಲ್ಲಿ ಶ್ರೀ ಕೊಗಂದ ಬೆಳ್ಳಿಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಕೆಂತೆರ ಕಾಳಪ್ಪ ಮತ್ತು ಮುಚ್ಚಮಾಡ ಪೆಮ್ಮಯ್ಯ ಇತ್ಯಾದಿಗಳು ಮಹಾತ್ಮರ ಗುಣಗಾನ ಮಾಡಿದರು. ಮಹಾತ್ಮರ ಚಿತಾಭಸ್ಮವನ್ನು ರಾಮತೀರ್ಥ ನದಿಯಲ್ಲಿ ವಿಸರ್ಜಿಸಲಾಯಿತ.. ಸಭಾ ಪ್ರಾರಂಭದ ಕಾಲಕ್ಕೆ ಕುರಾನ್, ಬೈಬಲ್ ಪಠನವಾದವು. ಬತಜನರಿಗೆ ಅಕ್ಕಿ ಮತ್ತು ಅನ್ನದಾನ ನಡೆಯಿತು.

### ಸಾರಾಣಿ

ಇಲ್ಲಿಯ ಶಾಲಾ ವೈದಾನದಲ್ಲಿ ಸುತ್ತು ಮುತ್ತಲಿನ ಆರು ಗ್ರಾಮಗಳ ಜನರು ಶ್ರೀ ಬಿದ್ದಂದ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದರು. ಪ್ರಧಮತಃ ಬಲ ಮುರಿಯಲ್ಲಿ ಕಾವೇರಿ ಹೊಳೆಯಲ್ಲಿ ಪುಷ್ಪಾರ್ಚನವಿಧಿ ನಡೆಸಲಾಯಿತು. ಸಭೆಯು ಪ್ರಾರ್ಥನೆ, ಕುರಾನ್, ಬೈಬಲ್ ಪಠನದ ನಂತರ ಪ್ರಾರಂಭವಾಯಿತು ಪ್ರಪಂಚಕ್ಕೆ ಬೆಳಕುಕೊಟ್ಟ ಮಹಾತ್ಮರ ಗುಣಗಾನ ಮಾಡಿ ನರರೂಪ ಮಹಾತ್ಮರ ತತ್ವಗಳನ್ನು ಅನುಸರಿಸುವ ಪ್ರತಿಜ್ಞೆ ಮಾಡಿದರು. ಮಹಾತ್ಮರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೌನ ಪ್ರಾರ್ಥನೆ ಮಾಡಲಾಯಿತು

### ವೀರಾಜಪೇಟೆ.

ಪೂಜ್ಯ ಬಾಪೂಜಿಯವರ ಅಸ್ಥಿವಿಸರ್ಜನಾ ವಿಧಿಯು ಯಶಸ್ವಿ ನಡೆಯಿತು. ಹೆಳಗ್ಗೆ ಪ್ರಭಾತಭೇರಿಯ ನಂತರ ಸಾರ್ವಜನಿಕ ರಾಮಭಜನೆ ನಡೆಯಿತು. ಸಭೆ ಸೇರಿ ಕುರಾನ್, ಬೈಬಲ್, ಗೀತಾ ಪಠನ ವಾಯಿತು. ದೇವಸ್ಥಾನಗಳಲ್ಲಿ ಪೂಜೆ ನಡೆಯಲಾಯಿತು. ಹಲವು ಭಾಷಣಗಳ ವ್ಯವಸ್ಥಾಗಿತ್ತು. ದರಿದ್ರನಾರಾಯಣರಿಗೆ ಅನ್ನ ಸಂತರ್ಪಣೆಯಿಂದ ಕಾರ್ಯಕ್ರಮ ಮುಕ್ತಾಯವಾಯಿತು

### ಮಡಿಕೇರಿ

ಮಡಿಕೇರಿಯ ಮುಸಲ್ಮಾನರೆಲ್ಲರೂ ತಾರೀಕು ೧೫-೨-೧೮ ನೇ ಮಧ್ಯಾಹ್ನ ೧೫ ಗಂಟೆಗೆ ಇಲ್ಲಿಯ ಎರಡು ಮಸೀದಿಗಳಲ್ಲೂ ಸೇರಿ ಮಹಾತ್ಮರ ನಿಧನದಿಂದ ತಮಗುಂಟಾದ ಸಂತಾಪವನ್ನು ಸೂಚಿಸಿ, ಮಹಾತ್ಮರ ಪರಿತ್ರಾತ್ಮಕ್ಕೆ ಸದಾಶಾಂತಿಯನ್ನು ಬಯಸಿದರು. ಅವರ ವಿಮಲ ಕೃತ್ಯಗಳನ್ನು ಅನುಸರಿಸಿ ನಡೆಯುವಂತೆ ಮುಸಲ್ಮಾನರನ್ನು ಅನುಗ್ರಹಿಸಲು ಭಗವಂತನನ್ನು ಪ್ರಾರ್ಥಿಸಲಾಯಿತು.

### ಕಡಂಗಮುರುರೂರು.

ಈ ಗ್ರಾಮಸ್ಥರೂ, ಶಾಲಾ ವಿದ್ಯಾರ್ಥಿಗಳೂ, ಹಾಡಿಜನರೂ ಕವನೂರು ಸೇತುವೆಯ ವರೆಗೆ ಮೆರವಣಿಗೆ ನಡೆಸಿ ಅಲ್ಲಿ ಪೂಜಾವಿಧಿ ಪೂರೈಸಿ ಪುನಹ ಗ್ರಾಮದೇವನ್ನಾಸ್ಥಕ್ಕೆ ಬಂದು ಪ್ರಾರ್ಥನೆ ಶಾಲಾ ವೈದಾನದಲ್ಲಿ ಸಭೆ ಸೇರಲಾಯಿತು. ಶ್ರೀಮಾನ್ ಬಂಡ್ಯಕಂಡ ಅಪ್ಪಯ್ಯನವರು ಅಧ್ಯಕ್ಷರಾಗಿದ್ದರು. ಶ್ರೀ. ಕುಯಿಮಂಡ ಕಾರ್ಯಯ್ಯನವರು ಭಾಷಣ ಮಾಡಿದರು. ನೆರೆದ ಎಲ್ಲಾ ಮಹಿಷಿಯರಿಗೂ ಅನ್ನಸಂತರ್ಪಣೆ ಮಾಡಲಾಯಿತು. ಗಾಂಧೀಜಿಯವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ ಕಾರ್ಯಕ್ರಮ ಮುಕ್ತಾಯವಾಯಿತು.

### ಶ್ರೀಮಂಗಲ.

ರಷ್ಟ್ರಿಯ ಧ್ವಜ, ಮಹಾತ್ಮರ ಭಾವಚಿತ್ರಮೊದಲಿನ ಅಭ್ಯುದಯಸ್ಥರೂ, ಸಾರ್ವಜನಿಕರೂ ಸೇರುವಲ್ಲಿಗೆ ಮಾಡಿಗ ನಂತರ ಶಾಲೆಯ ಬಳಿ ಪ್ರಾರ್ಥನೆ ದಿ. ಪಿಸೋಜನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಗಳಾದ ಕೆ. ಎಂ. ಗಣಪತಿ, ಬಿ. ಪಿ. ಕೊರಗಪ್ಪ, ಮುತ್ತು ಎ. ಎಂ ತಿಮ್ಮಯ್ಯನವರು ಪ್ರಾರ್ಥನೆಗಳನ್ನು ಮಾಡಿದರು. ನಂತರ ಶ್ರೀಗಳಾದ ಯು. ಸಿ ದೇವಯ್ಯ, ಕೆ. ಎಸ್. ಕಾರ್ಯಪ್ಪ, ಕೆ. ಬಿ. ಕಾರ್ಯಪ್ಪ, ಮುಚ್ಚಡ್ತೊಡ ನೇದಪ್ಪ ಮೊದಲಾದವರು ಭಾಷಣ ಮಾಡಿದರು. 'ರಾಮಧುನ್' ನೊಡನೆ ಕಾರ್ಯಕ್ರಮ ಮುಕ್ತಾಯಗೊಂಡಿತು.

### ಜೇಂಗೂರು.

ಈ ಗ್ರಾಮಸ್ಥರು ತಾ. ೮-೨-೧೮ ರಲ್ಲಿ ಸೇರಿ ಶ್ರೀ. ಕಟ್ಟಿಮಾಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಶ್ರೀ. ಪಟ್ಟಮಾಡ ಪೊನ್ನಪ್ಪನವರು ಮಹಾತ್ಮರ ಗುಣಕವನ ಮಾಡಿದ ನಂತರ ಅವರ ಆತ್ಮಕ್ಕೆ ಶಾಂತಿಯನ್ನೂ, ಕುಟುಂಬಕ್ಕೆ ದುಃಖ ಸಹನಾಶಕ್ತಿಯನ್ನೂ ಕೊಡುವಂತೆ ಪ್ರಾರ್ಥಿಸಿ ಅವಸರಿಂದ ಶಾಂತಿ ಕಳಿಸಿಕೊಡಲಾಯಿತು.

ತಾ. ೧೫ ರಲ್ಲಿ ಜೇಂಗೂರು, ಕೊಟ್ಟೂರು, ಕೊಳಗದಾಳು ಗ್ರಾಮಸ್ಥರು ಕೊಟ್ಟೂರು ಶಾಲಾ ಬಳಿ ಸೇರಿದ್ದರು. ಮಡಿಕೇರಿಯಿಂದ ಭಾಗಮಂಡಲ್ಕೆ ಟೂರ್ಸ್ ಕಮಿಷನರ ಕಾರಿನಲ್ಲಿ ಬರುವ ಮಹಾತ್ಮರ ಚಿತಾಭಸ್ಮವನ್ನು ಅಲ್ಲಿಂದ ಕೊಟ್ಟೂರಿಗೆ ತಂದು 'ಹಾ ರಾಮ್' ದುಃಖಸೂಚಕದಿಂದ ಸ್ವಾಗತಿಸಿ ಹೂಮಾಲೆ ಹಾಕಿದರು. 'ರಾಮಧುನ್' ಹಾಡಲ್ಪಟ್ಟಿತು. ಅವರ ಕಾರನ್ನು ಬೇಳ್ಕೊಡಲಾಯಿತು. ನಂತರ ಪ್ರತಿ ಗ್ರಾಮಸ್ಥರು ಅವರವರ ಗ್ರಾಮಗಳಿಗೆ ಸುರವಣಿಗೆ ಹೋಗಿ ಸಭೆ ಸೇರಿ ಮಹಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಆ ನಂತರ ಬೇಂಗೂರಿನವರು ಕಾವೇರಿ ಹೊಳೆಗೂ, ಕೊಟ್ಟೂರು ಮತ್ತು ಕೊಳಗದಾಳಿನವರು ಅಲ್ಲಿಯು ಹತ್ತಿರದ ಹೊಳೆಗೂ ಹೋಗಿ ಗೀತಾಪಠಣ, ರಾಮಭಜನೆ, ನಡೆಸಿ ಮಕ್ಕಳಿಗೆ ಪ್ರಸಾದ ಹಂಚಿ ತಾವು ಕೈಕೊಂಡಿದ್ದ ಉಪವಾಸದ ಪಾರಣೆಯನ್ನು ಮಾಡಿದರು.

### ರಾಮಪುರ

ಬೆಳಿಗ್ಗೆ ೯.೩೦ ರ ವರೆಗೆ ರಾಮಭಜನೆಯಿಂದ ಮಹಾತ್ಮರಿಗೆ ತಿಲತರ್ಪಣ ಕೊಡಲಾಯಿತು. ಮೆರವಣಿಗೆಯ ನಂತರ ರಾಮಲಿಂಗೇಶ್ವರ ದೇವಸ್ಥಾನದ ಬಳಿ ಸಭೆ ನಡೆಯಿತು. ಮಹಾತ್ಮರ ಆತ್ಮಕ್ಕೆ ಶಾಂತಿ ಬಯಸಿ ಮೌನ ಪ್ರಾರ್ಥನೆ ನಡೆಸಿದ ನಂತರ ಗೀತಾ, ಬೈಬಲ್, ಕುರಾನ್ ಪಠನವಾಯಿತು. ಶ್ರೀಗಳಾದ ಕೆ. ಐಯ್ಯಣ್ಣ, ನಂಬೀಶನ್, ಕೆ. ಸಿ. ನಂಜಪ್ಪ, ಮುಖ್ಯಶಾರ್ದೂನಸ್ಥ, ನೊಡಲಾದವರು ಭಾಷಣ ಮಾಡಿದರು. ಸಾಯಂಕಾಲ ದರಿದ್ರನಾರಾಯಣರಿಗೆ ಅನ್ನದಾನ ಮಾಡಲಾಯಿತು.

### ಹೊದವಾಡ

ಮೂರ್ನಾಡು, ನಾಪೋಕ್ಲು ರಸ್ತೆಬಳಿಯ ಬೊಳಿಬಾಣೆ ಎಂಬಲ್ಲಿ ಹಿಂದೂ ಮುಸ್ಲಿಮರೆಲ್ಲ ಸೇರಿದರು. ಮಹಾತ್ಮರ ಆತ್ಮಕ್ಕೆ ಶಾಂತಿ ಬಯಸಿ ಪ್ರಾರ್ಥಿಸಲಾಯಿತು. ಶ್ರೀ ಚೌರಿರ ಅಂಣಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಚೌರಿರ ಜೋಯಪ್ಪ, ಎಂ. ಎಂ. ಮಮ್ಮುಂಞ ಇವರು ಮಹಾತ್ಮರ ಜೀವನ ಕಥೆಯನ್ನು ಹೇಳಿದರು. ಅನ್ನ ಸಂತರ್ಪಣೆಯ ನಂತರ ಸಭೆ ಮುಕ್ತಾಯವಾಯಿತು.

### ಫ್ರೇಜರ್‌ಪೇಟೆ

ಮೆರವಣಿಗೆಯ ನಂತರ ಕಾವೇರಿ ಹೊಳೆಯ ಪಕ್ಕದಲ್ಲಿ ಸಭೆಸೇರಿ ಕುರಾನ್, ಬೈಬಲ್ ಗೀತಾ ಪಠನ ನಡೆಸಲಾಯಿತು ಗಾಂಧೀಜಿಯವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ ಪ್ರಾರ್ಥಿಸಲಾಯಿತು. ಈ ಸಂಬಂಧ ತಾರೀಕು ೧೫ ರಲ್ಲಿ ಸುಮಾರು ೬೦೦ ಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

### ಸೋಮವಾರಪೇಟೆ.

ತಾಲೂಕು ಬೀಟಿಯಿಂದ ಕಟ್ಟುಹಬ್ಬಂದಿ ಮೆರವಣಿಗೆ ಹೊರಟಿತ್ತ. ಹತ್ತಿರದ ಕೊಳೆಯಲ್ಲಿ ಪೂಜೆ, ತರ್ಪಣ ನಡೆದ ನಂತರ ಸಾರ್ವಜನಿಕ ಸಭೆಯ ಶ್ರೀ ಸಿ. ಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನೆರೆಯಿತು. ಬೈಬಲ್, ಕೊರಾನ್, ಗೀತಾ ಪಠನವಾದ ನಂತರ ಭಾಷಣಗಳಾದವು. ಗಾಂಧೀಜಿಯವರ ಸ್ಮಾರಕವಾಗಿ ಸೋಮವಾರಪೇಟೆಯಲ್ಲಿ ಗಾಂಧಿ ಮಂದಿರ ಒಂದನ್ನು ಕಟ್ಟುವ ನಿರ್ಧಾರ ಮಾಡಿ ಧನ ಸಂಗ್ರಹಕ್ಕೆ ಒಂದು ಸಮಿತಿಯನ್ನು ನೇಮಿಸಲಾಯಿತು. ಸುಮಾರು ೧೫೦೦ ರೂಪಾಯಿಗೆ ಮಹಾತ್ಮರ ಚಿತಾಭಸ್ಮವನ್ನು ಅಲ್ಲಿಂದ ಕೊಡಗಿನ ಕಂಬನಿ

ಗೆ ಅನ್ನ ಸಂತರ್ಪಣೆ ಮಾಡಲಾಯಿತು. ಮಹಮ್ಮದಿಯರು ತಮ್ಮ ವತಿಯಿಂದ ನೆರೆದವರೆಲ್ಲರಿಗೆ ಪಾನಕ ವಿತರಿಸಿದ್ದರು.

### ಕುತ್ತುನಾಡು

ಕುತ್ತುನಾಡಿನವರು ಶಾಲಾ ಬಳಿ ವೈದಾನದಲ್ಲಿ ನೆರೆದರು. ಶಾಲಾ ಬಾಲಕ, ಅಧ್ಯಾಪಕರೂ ಸಾರ್ವಜನಿಕರು ಮೆರವಣಿಗೆಯಿಂದ ಗ್ರಾಮ ದೇವಸ್ಥಾನಕ್ಕೆ ಹೋಗಿ ಪೂಜೆ ಪ್ರಾರ್ಥನೆ ನಡೆಸಿದ ನಂತರ ಪುನಹ ವೈದಾನದಲ್ಲಿ ಶಾಲಾ ಹತ್ತಿರ ಮೂರ್ಪರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತು. ಶ್ರೀ ಕಾಳೇಂಗಡ ಐಯ್ಯಪ್ಪ, ಬೆಟ್ಟಚೂಡ ಸುಬ್ಬಯ್ಯ, ಅಪ್ಪಂಡೆರಂಡ ಚಂಗಪ್ಪ ಮೊದಲಾದವರು ಭಾಷಣ ಮಾಡಿದರು. ಗಾಂಧೀಜಿಯವರ ಆತ್ಮಕ್ಕೆ ಶಾಂತಿ ಬಯಸಿ ಸಭೆ ಮುಕ್ತಾಯವಾಯಿತು.

### ಕೊತ್ತನಳ್ಳಿ

ಕೊತ್ತನಳ್ಳಿ ಗ್ರಾಮದವರು ಶಾಲಾ ಬಳಿ ಶ್ರೀ ಎಸ್. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ನಡೆಸಿದರು. ಶ್ರೀ ಬಿ. ಎಸ್. ಸೀತಾರಾಮಯ್ಯ, ಡಿ. ಕೆ. ಪೊನ್ನಪ್ಪ, ಕೆ. ಎಸ್. ಕಾಟ್ಟಪ್ಪ, ಎಚ್. ನಿಂಗಪ್ಪ, ಡಿ. ಎಂ. ದೇವಯ್ಯ ಮೊದಲಾದವರು ಭಾಷಣ ಮಾಡಿದರು. ಗಾಂಧೀಜಿಯವರ ಆತ್ಮಕ್ಕೆ ಶಾಂತಿ ದೊರೆಯುವೇ ಕಾದರೆ ಅವರ ತತ್ವವನ್ನು ಪ್ರತಿಯೊಬ್ಬನೂ ಶಕ್ತ್ಯಾನುಸಾರ ಪಾಲಿಸುವ ಪ್ರತಿಜ್ಞೆ ಮಾಡಿ ವಿಸರ್ಜನೆ ಮುಕ್ತಾಯವಾಯಿತು.

### ಚೆಂಬೆಬೆಳ್ಳೂರು

ಗ್ರಾಮದ ಸಹಕಾರ ಕಟ್ಟಡದಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ಪ್ರಾರ್ಥನೆ, ಭಜನೆ, ಪವಿತ್ರ ಗ್ರಂಥ ಪಠನೆಯಾಯಿತು. ಶ್ರೀ ಚೆಂಬಾಂಡ ಪೂವಪ್ಪನವರು ಗಾಂಧೀಜಿಯ ಜೀವನ ಚರಿತ್ರೆಯನ್ನು ವಿವರಿಸಿದರು. ದೇವಸ್ಥಾನದಲ್ಲಿ ಪೂಜೆ ನಡೆಸಿ ಹರಿಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಬಾಪೂವಿನ ಆತ್ಮಕ್ಕೆ ಶಾಂತಿಯನ್ನು ಬಯಸಲಾಯಿತು.

### ಕೊಟ್ಟ್ಯೋಳಿ

ಈ ಗ್ರಾಮಸ್ಥರು ಹರಿಜನಕೇರಿಗಾಗಿ ಮೆರವಣಿಗೆ ನಡೆಸಿ ಶ್ರೀ ಕೋದಾಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆನೆರೆಯಿಕು. ಶ್ರೀಗಳಾದ ಕೆ. ಎಂ. ರಾಮಯ್ಯ, ಕೆ. ಆರ್. ವಾಸುದೇವಯ್ಯ, ಎ. ಐಯ್ಯಪ್ಪ, ಸಿ. ಎಸ್. ಜವ್ವಾಜಿ, ಸಿ. ಬಿಂದಪ್ಪ, ಕೆ. ಎ. ರವೀಂದ್ರ, ಸಿ. ಎಸ್. ತಿಮ್ಮಯ್ಯ, ಎ ಚಿಂಗಪ್ಪ ಮೊದಲಾದವರು ಭಾಷಣ ಮಾಡಿದರು ನಂತರ ಅನ್ನ ಸಂತರ್ಪಣೆಯಾಯಿತು.

---

## "ಗ್ರೇಂಡ್ ಓಪನಿಂಗ್"

ಇದೇ ತಾರೀಕು 6-2-18 ರಲ್ಲು ವೀರರಾಜಪೇಟೆ ದೊಡ್ಡಟ್ಟಿ ಚೌಕದ ಬಳಿ ಹೊಸದಾಗಿ ಒಂದು ಟಿಂಗಡಿಯನ್ನು ತೆರೆದಿರುತ್ತೇನೆ. ಈ ಅಂಗಡಿಯಲ್ಲಿ ಹೆಜ್ಜೆ ಬಾಳಿಕೆ ಬರಬಹುದಾದ ಕಟ್ಟೇರಿ ಮತ್ತು ನಾವರಪ್ಪಿ ವಗೈರೆಗಳು ಕಮ್ಮಿ ವರಕ್ಕಲ್ಲು ದೊರೆಯುತ್ತವೆ. ದಯವಿಟ್ಟು ಒಂದಾವೃತ್ತಿ ಬಂದು ಪರೀಕ್ಷಿಸಿದಲ್ಲು ತಿಳಿಯಬಹುದು.

ಮೆಸರ್ಸ್ ಮನ್ನಾ ಸ್ಟೋರ್ಸ್,
ವೀರರಾಜಪೇಟೆ.

# "ಅಲೌಕಿಕ ಮೃತ್ಯುಪತ್ರ"

[ಕಾಲಕಿಳ]

ನಾನು ಮೋಹನದಾಸ್ ಕರಮ್ ಚಂದ್ ಗಾಂಧೀ. ವಯಸ್ಸು ೭೮. ವಾಸಸ್ಥಳ ಸೇವಾಗ್ರಾಮ. ಸದ್ಯ ಇರುವದು ದಿಲ್ಲಿ. ನನ್ನ ಈ ಮೃತ್ಯು ಪತ್ರವನ್ನು ಬರೆದಿಡಲು ಇಚ್ಛಿಸುತ್ತೇನೆ. ಇಂದು ಸಾಯಂಕಾಲ ಪ್ರಾರ್ಥನೆಯಲ್ಲಿ ನಡೆದ ಬಾಂಬು ಸ್ಫೋಟನದಿಂದ ನನ್ನ ಅಂತಕಾಲವು ಸಮೀಪಿಸಿರುವ ಎಚ್ಚರಿಕೆಯನ್ನು ಪರಮಾತ್ಮನು ಕೊಟ್ಟಿರುವನೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಮೃತ್ಯು ಪತ್ರ ಬರೆದಿಡುವ ಅವಶ್ಯಕತೆ ನನಗಿಗ ಈಗಲೇ ಕಂಡು ಬರುತ್ತದೆ. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ನಾನು ಹಲವಾರು ಸಾರಿ ಮರಣ ಬಾಳುವೆನೆಂಬ ಮತ್ತು ಕೊನೆಯ ವರೆಗೆ ನನ್ನ ಕೈಯಲ್ಲಾದ ಜನತಾ ಜನಾರ್ದನನ ಸೇವೆ ಮಾಡುವೆನೆಂಬ ಮಾತು ನುಡಿದಿದ್ದನು. ಆದರೆ ಇತ್ತೀಚೆಗೆ ದೇಶದಲ್ಲಿ ಸಂಭವಿಸಿದ ಘಟನೆಗಳಿಂದ ನನ್ನ ಜೀವನವು ಇನ್ನು ಮುಂದೆ ಸಾಕಷ್ಟು ಉಪಯುಕ್ತವಾಗಲಾರದೆಂಬ ಸಂದೇಹವು ನನಗುಂಟಾಗುತ್ತಿದೆ. ನನ್ನ ನೇರಿಲಿರುವ ಜನತೆಯು ಪ್ರೇಮವೇನೂ ಎಳ್ಳಷ್ಟೂ ಕಡಿಮೆಯಾಗಿಲ್ಲವೆಂಬುದನ್ನು ನಾನು ಧೃಢವಾಗಿ ಕಂಡು ಕೊಂಡಿದ್ದೇನೆ. ಅದರೂ ಹಿಂದೂ ಸ್ಥಾನವು ಇಬ್ಭಾಗಿಸಲ್ಪಟ್ಟದ್ದರಿಂದ ಹಾಗೂ ಅನಂತರದ ಅನೇಕ ಅನಾಹುತಗಳಿಂದ ನಾವು ಕಲ್ಪಿಸಿದ ಸ್ವಾತಂತ್ರ್ಯವು ಈ ಸ್ವರೂಪದ್ದಿದ್ದಿಲ್ಲವೆಂದು ಪೆಜ್ಜೆ ಪೆಜ್ಜೆಗೆ ನನಗೆ ನಿಸಹತ್ತಿದೆ. ಶಾಂತಿ ಮತ್ತು ಅಹಿಂಸೆಗಳ ವೃಕ್ಷವನ್ನು ಜಲಸಿಂಚನದಿಂದ ಬೆಳೆಸಲು ಕಳೆದ ಅರ್ಧ ಶತಮಾನದಲ್ಲಿ ಅಫ್ಘಾನಿಕೆ ಮತ್ತು ಹಿಂದೂಸ್ಥಾನಗಳಲ್ಲಿ ಮಾಡಿದ ನನ್ನ ಪ್ರಯತ್ನಗಳಿಗೆ ಇತ್ತೀಚೆಗೆ ಇವಿಯಾದ ಫಲಗಳು ಉಂಟಾಗುವದರ ಬದಲಾಗಿ ಆ ವೃಕ್ಷವು ಒಣಗಹತ್ತಿದಂತೆ ಕಂಡುಬರಲಾರಂಭಿಸಿದೆ. ನನ್ನ ಹಿಂದೀ ಅನುಯಾಯಿಗಳಲ್ಲಿಯೇ ಪಲವರು ಹಿಂದಿನ ಮಾರ್ಗಕ್ರಮಣವನ್ನು ಬಿಟ್ಟು ವರ್ತಿಸಹತ್ತಿರುವರೆಂಬ ಮತ್ತ ಆಪರ ಕೃತಿಗಳಿಂದ ಮಹಾ ಸಂಸ್ಥೆಗೆ ಕಂದು ಬರುವ ಲಕ್ಷಣಗಳು ಕಾಣಿಸಹತ್ತಿವೆ. ಇಂಥ ಪರಿಸ್ಥಿತಿಯಲ್ಲಿ ನನ್ನ ಜೀವನವು ಜನತೆಗೆ ನಿಶ್ಚಿಂತವಾಗಿ ಉಪಯುಕ್ತವಾಗಲಾರದೆಂಬುದರ ಬಗ್ಗೆ ನನಗೆ ಸೂಚನೆ ಹತ್ತಿದ್ದಾಗಿದೆ.

ನಾನು ನನ್ನ ಜೀವನದಲ್ಲಿ ಹಿಂದು ಸ್ಥಾನದ ಸಮಸ್ಯೆ ನಾಲ್ವತ್ತು ಕೋಟಿ ಜನಾಂಗವನ್ನ ನನ್ನ ಒಂಥ ಭಗಿನಿಯಂತೆ ಮಕ್ಕಳಂತೆ ತಿಳಿದ್ದೇನೆ. ನಾನು ಮಾಡಿಟ್ಟಿರುವ ಎಲ್ಲ ಆಸ್ತಿಯು ಇವರಲ್ಲಿ ಸವನಾಗಿ ಹಂಚಿ ಹೋಗಬೇಕೆಂದು ನನ್ನ ಬಯಕೆ. ಆದನ್ನೇ ನಾನು ಈ ಮೃತ್ಯು ಪತ್ರದ ಮುಖಾಂತರ ದೃಢಪಡಿಸುತ್ತೇನೆ. ನನ್ನ ಆಸ್ತಿ ಎಂದರೆ ಸ್ಯ, ಲಿಖನ, ರಂಕಿ, ಬಂಧುಪ್ರೇಮ, ಆತ್ಮೀಯ ಮತ್ತು ತ್ಯಾಗ. ಈ ಆಸ್ತಿಯನ್ನು ನನ್ನಜೀವಮಾನದಲ್ಲಿ ಉಪಭೋಗಿಸಲು ಪ್ರಯತ್ನಿಸಿಟ್ಟಿನು. ಈ ಪ್ರಯತ್ನಗಳಲ್ಲಿ ನನಗೆ ಸಾಕಷ್ಟು ಯಶ ದೊರೆಯದಿದ್ದರೂ ನಾನು ಮನಸಾ ಯತ್ನಿಸಿದ್ದೇನೆಂಬುದೇ ನನಗೆಂದು ಸಮಾಧಾನವಾಗಿದೆ. ನನ್ನ ಬಂಧು ಭಗಿನಿಯರಿಗೂ ಮಿತ್ರ ಮಿತ್ರೆಯರಿಗೂ ಈ ನನ್ನ ಆಸ್ತಿಯ ನಿಜವಾದ ಉಪಯೋಗವನ್ನು ಈ ನನ್ನ ಜೀವಮಾನದಲ್ಲಿ ಮಾಡಿಕೊಡುವುದು ನನ್ನ ಯತ್ನಿಸಿದ್ದುಯಿತು. ನನ್ನ ತೀರುವ ಯ ಈ ನನ್ನ ಇಡುಗಂಟನ್ನು ಆದರು ಸಂಪೂರ್ಣವಾಗಿ ಉಪಭೋಗಿಸಲು ಸಾಧ್ಯವಾಗಲಿಲ್ಲವೆಂಬುದೇ ನನ್ನ ಹಿರಿಯಾಸೆ.

ಕಳೆದ ಕಾಲು ಶತಮಾನದಲ್ಲಿ ಲಕ್ಷಾನು ಲಕ್ಷ ಜನರು ನನ್ನನ್ನು ಹಿಂಬಾಲಿಸಿದರೆ. ತಂಡಿಯು ಮೂಸಿ ಕೇಳುವಂತೆ ನನ್ನ ಮಾತುಗಳನ್ನು ಮನ್ನಿಸಿದರು. ಆದರೆ ಇತ್ತೀಚೆಗೆ ನನ್ನ ಜೀಳಕೆಗಳ ಬಗ್ಗೆ ಆ ನೇಕರಿಗೆ ಅನ್ಯಮನಸ್ಕತೆ ಕಂಡು ಬಹುತ್ವದೆ. ನನ್ನ ಅಂಯಿಗಳಲ್ಲಿಯೇ ಅನೇಕರು ಶೋಷಕ ಸುಧಾರಣೆಗಳಿಗೆ, ಲೌಕಿಕ ಸಂಬಂಧಪತ್ರಗಳಿಗೆ ಜೆಟ್ಟಿನ ಪ್ರಾಧಾನ್ಯ ಕೊಡಲಾರಂಭಿಸಿದ್ದಾರೆ. ಅಂಥ ಪರನ್ನ ನಾನು ಈ ನನ್ನ ವೃತ್ಯು ಪತ್ರದ ಮುಖಾಂತರ ಕೇಳಿ ಕೊಳ್ಳುವದೇನೆಂದರೆ ಅಂಧವಾಗಿ ತತ್ಕ್ಷಣಾಂತರ್ದೃಷ್ಟಿಯಿಂದ ತಮ್ಮನ್ನೇ ವಿಚಾರಿಸಿಕೊಳ್ಳಬೇಕು. ಹಿಂದಿನವರನ್ನು ಸ್ಮರಿಸಿ ತಮ್ಮಲ್ಲಿ ಯಾವ ವ್ಯತ್ಯಾಸವಿದೆಯೆಂಬುದನ್ನು ಸೂಕ್ಷ್ಮವಾಗಿ ಪರೀಕ್ಷಿಸಬೇಕು. ಅಂದರೆ ಅವರಿಗೆ ನಾನು ಮಾಡಿಟ್ಟಿರುವ ಮೇಲ್ಮಾಣಿಸಿದ ಸತ್ಯ, ಅಹಿಂಸೆ ಮೊದಲಾದ ಆಸ್ತಿಗಳ ಮಹತ್ವವನ್ನು ಸೂಕ್ಷ್ಮವಾಗಿ ಪರೀಕ್ಷಿಸಬೇಕು.

ಕಳೆದ ಆಗಸ್ಟ್ ೧೫ನೇ ದಿನ ಹಿಂದೂ ಸ್ಥಾನವು ಸ್ವತಂತ್ರವಾಯಿತೆಂದು ಘೋಷಿಸಲಾಯಿತು. ಗವರ್ನರರಲ್ಲಿ ನಾನೂ ಸಾಬರಮತಿಯನ್ನು ಬಿಡುವಾಗ ಸ್ವರಾಜ್ಯ ಸಿಗುವ ವರೆಗೆ ಬಾಲಾರನೆಂದು ಹೇಳಿ ಸೇವಾಗ್ರಾಮಕ್ಕೆ ಪ್ರಯಾಣ ಬೆಳೆಸಿದೆ. ಆಗಸ್ಟ್ ೧೫ಕ್ಕೆ ಸ್ವರಾಜ್ಯ ಸಿಕ್ಕಾಗಲೂ ನಾನು ಸಾಬರಮತಿಗೆ ಹೋಗಲಿಲ್ಲ. ಏಕಂದರೆ ಗವರ್ನರ್ ರಲ್ಲಿ ನಾವು ಬಯಸಿದ ಸ್ವರಾಜ್ಯ ಮತ್ತು ನೆಮಗಿಂದು ಪ್ರತ್ಯಕ್ಷ ಲಭಿಸಿದ ಸ್ವರಾಜ್ಯ ಇವುಗಳ ಬಹಳ ವ್ಯತ್ಯಾಸವಿದೆ. ಬ್ರಿಟಿಷರೇನೋ ಹಿಂದು ಸ್ಥಾನ ಬಿಟ್ಟು ತೊಲಗಿದರು. ಆದರೆ ಅವರು ತೊಲಗುವಿಕೆಯಿಂದ ಹಿಂದಿನ ಮತ್ತು ಇಂದಿನ ಪರಿಸ್ಥಿತಿಗಳಲ್ಲಿ ಎಳ್ಳಷ್ಟೂ ಹೆಚ್ಚು ಕಡಿಮೆ ಯಾಗಿಲ್ಲ. ನಾವು ಇಟ್ಟಿಸಿದ ಸ್ವರಾಜ್ಯವು ಪ್ರತಿಯೊಬ್ಬನೂ ಸುಖದಿಂದ ತಿಂದುಂಡು ಇರಬೇಕಂಬ ಪರಿಸ್ಥಿತಿಯನ್ನುಂಟು ಮಾಡುವದಿದ್ದರು. ಆದರೆ ರಾಮರಾಜ್ಯ. ಎಲ್ಲರೂ ಸರಿಗೆ ಅನ್ನ ಅನಾಥ ಧೃಢೋ ಜ್ಜೀವನ ಪರಿಸ್ಥಿತಿಯನ್ನು ಸ್ವಾತಂತ್ರ್ಯ ಸಿಕ್ಕಿ ತೆಂದು ಹೇಳುವಲ್ಲಿ ಹುರುಳಿಲ್ಲ.

ನನ್ನ ಅನೇಕ ಉಪವಾಸಗಳಲ್ಲಿ ಜಾತೀಯ ಸೌಹಾರ್ದತೆಯ ಸಾಧನದವುಗಳೇ ಹೆಚ್ಚು. ನನ್ನ ಸಾಧನೆಯಲ್ಲಿ ಉಪವಾಸವಾದರೂ ಅಷ್ಟಕ್ಕಾಗಿಯೇ ಇದ್ದಿತು. ನನ್ನ ಜೀವಮಾನದಲ್ಲಿ ಜಾತೀಯತೆಯ ನಿರ್ಮೂಲನವಾಗಲು ಬದು ನನ್ನ ಬಲಿದಾನದಿಂದಲೇ ಆಗಬೇಕೆಂದು. ಆತ ಸಂಕಲ್ಪ ಇದ್ದರೂ ಫಲಪ್ರದ . ನನ್ನ ಆಗಲಿಕೆಯು ಪೂರ್ಣಪ್ರಮಾಣದ ಸ್ವಾತಂತ್ರ್ಯ ಹಿಂದೂ ಸ್ಥಾನ. ಲ್ಲಿರುವಾಗ ಮಹಾ ಭೆಯ ಮುಂದಿನ ಸ್ವರೂಪವು ದಾರೂ ಅದರ ಕಾರ್ಯಸ್ವೀಕೃತಿಗೆ ನಿ ಬೇಕೆಂಬ ದನ್ನು ನಾನು ಕೊನೆಯುಂದಾಗಿ ಹೇಳಲು ಬಯಸುತ್ತೇನೆ ಈ ರೀತಿಯ ಸಂಸ್ಥೆಯ ಸೇವಕರಾಗಲಿಚ್ಛಿಸುವವರು ಇನ್ನೂ ಮುಂದಾದರೂ ಕಳೆದ ಹತ್ತಾರು ವರ್ಷಗಳಲ್ಲಿ ಅವರಿಗೆ ಅಂಟಿಕೊಂಡ ಅಧಿಕಾರಲಾಲಸೆಯನ್ನು ಬಿಟ್ಟು ಅನಂತ ಜನತಾ ಜನಾರ್ದನನ ಸೇವಕರಾಗಲೀ.

ರಾಷ್ಟ್ರೀಯ ಮಹಾ ಸಭೆಯು ಜನಸಾಮಾನ್ಯರ್ಕ ವಿಶೇಷವಾಗಿ ಲಕ್ಷಾಂತರ ಹಳ್ಳಿಗಳಲ್ಲಿರುವ ವರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಶಿಕ್ಷಣಕ್ಕೆ ಉನ್ನತಿಗಾಗಿ ಬಡಿಯಬೇಕು. ಈ ಜಿಲ್ಲೆಯ ಕ್ಷೇತ್ರದಲ್ಲಿ ಲವಣ ಸೇವೆಯು ಇನ್ನೂ ಸಾಕು. ಅದನ್ನು ನಿರ್ಭಯವಾಗಿ ಲೂ ಅವುಗು ನಾನು. ಈ ನೂಲುಳಿಕೆ ಬಿಡುತ್ತಿರುವ ಮೇಲ್ಕಾಣಿಸಿದ ಸತ್ಯ, ಅಹಿಂಸೆ ಆಸ್ತೇಯ ಮೊದಲಾದ ಆಸ್ತಿಗಳನ್ನು ಸಯೋಗಿಸಿಕೊಂಡು ತಮ್ಮ ಜೀವನ ಪಥದಲ್ಲಿ ಸಾಗಬೇಕೆಂದು ನಾನು ಈ ಮೃತ್ಯು ಪತ್ರದ ಮುಖಾಂತರ ನನ್ನ ಕೊನೆಯ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತೇನೆ.

**ಮೋಹನದಾಸ್ ಕರಮ್‌ಚಂದ್ ಗಾಂಧಿ.**

ದಿಲ್ಲಿ, ತಾ. ೨೦-೧-೧೯೪೮.

'ಜೈಹಿಂದ್' ಪತ್ರಿಕೆಯಿಂದ.


ಏನು ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಸೂರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಪಾಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8395)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರ್ ಆದದ್ದು. (1921ರಲ್ಲಿ ಸ್ಥಾಪನೆಯಾದದ್ದು)

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಒಂದ ರೇವನಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,154-0-3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲ್ಪಡುವದಿಲ್ಲವೆ, ಠೇವಣಿಟ್ಟವರಿಗೆ ಅವರ ಡಿಪಾಜಿಟ್ಟಿನ ಅಧಾರದ ಮೇಲೆ 90% ಸಾಲವನ್ನು ಕೊಡಲಾಗುತ್ತದೆ. ಸಾಲವು ಶೇವನಾತಿಯನ್ನು ತಾ. 1-12-46ರಂದು ಕೊಡಿಸಲ್ಪಡುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಜಿಲ್ಲೆಗಳಿಗೆ ಶೇಕಡ 0-8-0 ಬಡ್ಡಿ ಕೊಡಲಾಗುತ್ತದೆ. ಚಿನ್ನ, ಬೆಳ್ಳಿ ಒಡವೆಗಳ ಮೇಲೆ ಸಾಲ ಕೊಡಲಾಗುವುದು. ಪರ್ಮನೆಂಟ್ ರಿಜಿಸ್ಟ್ರಾರರು ಲಕ್ಷ್ಯ ಕೊಡಿಸೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಸಾ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಸ್ವಾಧೀನ ಮತ್ತು ಸಭಾಧ್ಯಕ್ಷ.

ಎಂಪೈರ್ ಆಫ್ ಇಂಡಿಯಾ

**ಲೈಫ್ ಎಷ್ಯೂರೆನ್ಸ್ ಕಂಪನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ವಿಷಯಗಳು: | ಒಟ್ಟು ಆದಾಯ | .... | 1,07,09,000 ರೂಪಾಯಿ |
| | ಚಾಲ್ತಿಯಿರುವ ವಿಮೆ | .... | 17,71,52,000 ,, |
| | ಆಸ್ತಿ | .... | 6,67,60,000 ,, |
| | ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು | .... | 8,83,82,000 ,, |

ಆಂಗ ಕಛೇರಿ: ದಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್ಸ್, ಕಂಪೇಗೌಡಂಸ್ಟ್ರೀ, ಬೆಂಗಳೂರು.

ಏಜೆನ್ಸಿ: ಅರ್ಜಿಗಳನ್ನು ಸ್ವಾಗತಿಸಿದ

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೆ.


Edited, Printed and Published by P. T. Bollajpa at 'Kodagu Press Meterara, for 'Kodagu' Ltd

Reg. No. B. 1800.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ತಾರೀಕು ೩೭-೭-೧೯೬೮ನೇ ಶುಕ್ರವಾರ | ಸಂಚಿಕೆ ೩೯

## ವಿಧಾಯಕ ನಿಷ್ಕಾಮ ಕರ್ಮ

### ಗಾಂಧೀಜಿಗೆ ಶಾಂತಿ ಕೊಡಬಲ್ಲುದು.

— ಲೇ:—'ಗಗನೇಶ', ಮಡಿಕೇರಿ —

ಎರಡು ಪ್ರತಿಜ್ಞೆಗಳು.

೧೯೬೭ನೇ ಇಸವಿಯ ಜನವರಿ ೩೦ ಮತ್ತು ೩೧ನ್ನು ನೆನೆಯಿರಿ. ಎಂಥಾ ಭಯಾನಕ ಚಿತ್ರ. ಭರತ ಖಂಡದ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮರ ತೆರೆದ ಎದೆಗೆ ಗುಂಡು ಹಾಕಿದ ದಿನಗಳವು. ಸ್ವತಂತ್ರ ಭಾರತದ ರಾಜಧಾನಿ ದೆಲ್ಲಿಯಲ್ಲಿ ರಾತ್ರಿಸಿನ ಹತ್ಯವಾದ ಭೀಭತ್ಸ ದೃಶ್ಯ. ಈ ದೃಶ್ಯ ಭೀಕರ ಭಾಯೆಯು ಇಡೀ ಜಗತ್ತನ್ನು ಅವರಿಸಿ ಜಗಜ್ಜೀವನವು ಅಂಧಾಕಾರಮಯವಾಯಿತು. ಈ ಅಂಧಾಕಾರಮಯ ವಾತಾವರಣದಲ್ಲಿ ಕಣ್ಣೀರಿಡುತ್ತಾ ಭಾರತೀಯರು ಪ್ರತಿಜ್ಞೆ ಕೈಕೊಂಡಿರುಂದರು. ಬಾಪುವಿನ ಸಂದೇಶವನ್ನು ಶಿರಸಾವಹಿಸಿ ಕರ್ಮಮಾಡುವೆವೆಂದು. ೧೯೬೮ನೇ ಜನವರಿ ೩೦ರಲ್ಲಿ ನಾವು ಮಾಡಿದ ಪ್ರತಿಜ್ಞೆಯು ನಮ್ಮನ್ನು ಸ್ವಾತಂತ್ರ್ಯಪೂರ್ವ ಸ್ವರ್ಗಕ್ಕೆ ಮುಟ್ಟಿಸಿತು. ೧೯೬೮ನೇ ಜನವರಿ ೩೦ರಲ್ಲಿ ನಾವು ಮಾಡಿದ ಪ್ರತಿಜ್ಞೆಯು ನಮ್ಮನ್ನು ಯಾವ ಗುರಿಗೆ ಮುಟ್ಟಿಸೀತೆಂಬುದನ್ನು ಭವಿಷ್ಯವು ಹೇಳಬೇಕಿದೆ. ಅದರ ಫಲಾಫಲಗಳು ಪ್ರತಿಜ್ಞೆ, ತೆಗೆದುಕೊಂಡವರ ಹೃದಯದ ಬಲಾಬಲದಮೇಲೆ ನಿಂತಿದೆ.

ಆತ್ಮದ ಕೊಲೆ

ತಾರೀಕು ೩೦ ರಂದು ಗಾಡ್ಸೆಯು ಹಾಕಿದ ಗುಂಡಿನಿಂದ ಮಹಾತ್ಮರ ಕೊಲೆಯಾಯಿತೆಂದು ದೇಳುವುದು ತಪ್ಪು. ಆ ಕ್ಷಿಂಧಾ ನೊದಲೇ ಮಹಾತ್ಮರ ಕೊಲೆಯನ್ನು ನಾವು ಮಾಡಿರುವೆವು. ಮಹಾತ್ಮರ ಆತ್ಮಕ್ಕೆ ಪ್ರಥಮ ಗುಂಡು ಬಿಹಾರಿನಲ್ಲಿ ಬಿತ್ತು. ಸಹಸ್ರಾರು ಮುಸಲ್ಮಾನರನ್ನು ಕೊಲೆಮಾಡಿದ ದಾರುಣಾದೃಶ್ಯವು ಪ್ರಥಮ ಗುಂಡಾಯಿತು. ಗಾಂಧಿಯವರ ಅನುಯಾಯಿಗಳೆಂದು ಖಾದಿ ಟೊಪ್ಪಿ ಹಾಕಿದವರ ಕೈಯೇ ರಕ್ತರಂಜಿತವಾದದ್ದನ್ನು ನೋಡಿ ಮಹಾತ್ಮರ ಆತ್ಮವು ಎಷ್ಟೀ ತ ಸಂಕಟಕ್ಕೊಳಗಾಯಿತು. ಮಹಾತ್ಮರ ಆತ್ಮಕ್ಕೆ ಎರಡನೇ ಗುಂಡು ಗಡಮಂ ಶ್ವೇಶ್ವರದಲ್ಲಿ ಬಿತ್ತು. ಯಾವ ರಾಷ್ಟ್ರೀಯ ಮುಸಲ್ಮಾನರು ಲೀಗಿನವರನ್ನು ವಿರೋಧಿಸಿ ತಮ್ಮ ಜೀವವನ್ನೆ ಪಣವಾಗಿಟ್ಟು ಕಾಂಗ್ರೆಸಿನೊಡನೆ ಸಹಕರಿಸಿದರೋ ಅಂಥಾ ಮುಸ್ಲಿಮರನ್ನು ಸಹಸ್ರಗಟ್ಟಲೆಯಾಗಿ ಕೂಲೆಮಾಡಿದ ದುರಂತವು ಎರಡನೇ ಗುಂಡಾಯಿತು. ಮೂರನೆಯದಾಗಿ ದೆಲ್ಲಿಯಲ್ಲಿದ್ದ ಐದುಲಕ್ಷ ಮುಸಲ್ಮಾನರಲ್ಲಿ ಕೇವಲ ಒಂದುಲಕ್ಷ ಮಾತ್ರ ಇಂದು ಅಲ್ಲಿ ಇರುವಂತಾಗಿ ಉಳಿದವರು ಪಾಕಿಸ್ತಾನಕ್ಕೆ ಹೋಗಬೇಕಾಗಿಯೂ, ಕೆಲವರು ಮೃತ್ಯು ಮುಖವಾಗಬೇಕಾಗಿಯೂ ಬಂದುದು ಅವರ ಆತ್ಮಕ್ಕೆ ಮೂರನೇ ಗುಂಡಾಯಿತು. ಮುಸ್ಲಿಮರ ಮಸೀದಿಗಳು, ಪ್ರಾರ್ಥನಾ ಗೃಹಗಳು ಹಿಂದೂಗಳ ಆರಾಧನಾಧಾಮಗಳಾಗಿ ಮಾರ್ಪಟ್ಟದ್ದು ಅವರ ಹೃದಯಕ್ಕೆ ಬಹು ವೇದನೆಯನ್ನುಂಟುಮಾಡಿತು. ಈ ಗಂಡುಗಳ ಪರಂಪರೆಯಿಂದ ಹತ್ಯ ಜೀವಿಗಳಾಗಿರುವವರ್ಕಿಂಧಾ ಜೀವತ್ಯಾಗ ಮಾಡುವುದು ಹಿತಕರವು ಹೆನ್ನಿಯಿಸಿ ಸಿದರನ್ನು ಅವರು ಕೈಕಚ್ಚಬೇಕಾಯಿತು.

ಈ ಉಪವಾಸದ ಕಾಲಕ್ಕೆ 'ಗಾಂಧಿ ಸತ್ತರೆಬಿಳ್ಳೆಂಬ' ಎಂಗರೆಯೊ ಜನರಿದ್ದಾರೆ ನೆನಪಿದೆ ಮಾಂಕ್? ಬುದ್ಧಿವಂತ ಪತ್ರಕಾರ್ತರು ಮಹಿಕೇರಿಯಲ್ಲಿ ಈ ಮಾತು ಹೇಳಿದವರಿದ್ದಾರೆ! ಇವರೋ ಭವಿಷ್ಯ ನೆಮೆ ಕ್ರಮ ರಚಿಸಿದೆ. 'ಗಾಂಧಿಯನ್ನ ಕೊಂದರೆ ಒಳ್ಳೆದು' ಎಂದು ಮೂರ್ಖಾಟ್ಟ ಈ ಭಾವನೆಯೇ ಗಾಂಧೀಗೆ ರೂಪುಗೊಟ್ಟಿತು. ಮಹಾತ್ಮರ ಎಡಗಡೆಯಲ್ಲಿ ಬಿತ್ತ. 'ಹೇ ರಾಮ' ಎಂದಾಗ ಗಾಂಧಿಜಿಯವರು ಸೊಗಿಕೊಂಡದ್ದಲ್ಲ; ಗಾಂಧಿಜಿಯವರ ಹೃದಯಾಂತರ್ಲಿದ್ದ ಭಗವಂತನು ಗುಂಡಿನಿಂದ ನೊಂದು ಅವರ ಬಾಯಿಯ ಮೂಲಕ ಹೊರಗೆ ಬಿಟ್ಟ ಉದ್ಗಾರವಿದು! ಈ ಲೋಕದಲ್ಲಿ ದೇವರೆಲ್ಲಿದ್ದಾನೆ? ಧರ್ಮ ನೀತಿ ಎಲ್ಲಿದೆ?

ಮೃತ್ಯುವಿನ ನಂತರ.

ಮೃತ್ಯುವಿನ ನಂತರದ ದೃಶ್ಯವು ನೋಡತಕ್ಕಂಥಾದ್ದಾಗಿದ್ದಿತು. ಪ್ರತಿ ಕಣ ಕಣಲ್ಲಿಯೂ ನೀರಿನ ಪ್ರವಾಹವಿತ್ತು. ಇದೆಲ್ಲ ರುದ್ಧ ನೊಂದ ಹೃದಯದ ಕಣ್ಣೀರು ಎಂದು ಹೇಳುವವರಾರು? ಅಂದು 'ಮಹಾತ್ಮರು ಸತ್ತರೆ ಭರತ ಖಂಡಕ್ಕೆ ಹಿಂತಿಂದವರು. ಇಂದು ಕಣ್ಣೀರುಹಾಕುವ ಸೋಗನ್ನೇಕೆ ಹಾಕಿರುವರು? ಈ ಅಭಿನಯ ಕಶ್ರದ್ಧಾರೆಯಿಂದ ಯಾವ ಹೃದಯ ನಿರ್ಮಲವಾ ನೀತು? ಇದೇ ಅಲ್ಲ; ಗಾಂಧೀಜಿಯವರ ಕೊಲೆಯಾದನಂತರದ ದೃಶ್ಯವೆ ಭಿನ್ನವಾದುದು. ಗಾಂಧಿ ತತ್ವದ ಕೊಲೆ ಮಾಡುತ್ತಿರುವವರು ಅವರ ಚಿತಾ ಭಸ್ಮಕ್ಕಾಗಿ ನುಗ್ಗಾಟ ನಡೆಸಿದರು. ಗಾಂಧೀಜಿಯ ಹೆಸರು ಅಗದಿದ್ದವರು ಚಿತಾಭಸ್ಮದೆಡೆ ಪುರೋಹಿತರಾಗಿ ಕುಳಿತ್ತಿದ್ದರು. ಇದೆಲ್ಲಾ ನಿಜವಾದ ಹೃದಯ ಪರಿವರ್ತನೆಯ ಕಾರಣವೆಂದಾದರೆ ಗಾಂಧೀಜಿ ನಿಜವಾಗಿಯೂ ಸಾಯಲಿಲ್ಲ. ಆದರೆ ಇದು ಹೃದಯ ಪರಿವರ್ತನೆಯ ಪ್ರಭಾವವೆಂದು ಧೈರ್ಯವಾಗಿ ಹೇಳಬಲ್ಲವರಾರು? ಹೃದಯ ಪರಿವರ್ತನೆಯೋದ್ದರೆ ಗಾಂಧೀಜಿ ಶ್ರದ್ಧಾವೇದಿಕೆಯಲ್ಲಿ ಕೋಮುವಾರು ವಿಕೃತಿಯೆಂದು ಸಾರಿದವರು ಪುನಹ ತಮ್ಮ ಹಳೆಯ ಕೌಮಿನ ನೀತಿಯನ್ನು ಅನುಸರಿಸುತ್ತಿದ್ದರೆ 'ಹ ಬ ಪು' ಎಂದು ಕಣ್ಣಿಂಧಿ ವಿಡಿಸಿದವರು ಹಿಂದಿನಂತೆ ಸ್ವಾರ್ಥರಾಜ ಕೀಯಕ್ಕಾಗಿ ಕೈಯಿಕ್ಕುತ್ತಿದ್ದರೇ? 'ನಿನ್ನ ತ ಕೃತ್ಯಗಳನ್ನು ನಾನು ಕಾಣುತ್ತಿದ್ದೇನೆ ನಿನ್ನ ನೂಡದೆ ಬಿಟ್ಟವ ನಾನಲ್ಲ' ಎಂದು ಮಾಡುವೆನೆಂದು ಪ್ರತಿಜ್ಞೆ ಮಾಡಿರುವ ಬಹ ಜನರ ಸಲಿಗೆಯ ಪ್ರಿಯನಿಂದ ನಿರಕರಿಸಲ್ಪಟ್ಟಿದ್ದರೇ? ದೇವರಲ್ಲಿ ನಿಜ ಭಾವದಿಂದ ಪ್ರಾರ್ಥಿಸಿದ್ದರೆ ಈ ಆತ್ಮವಂಚಕರಿಂದ ಈ ದೌರ್ಭಾಗ್ಯ ಭರತ ಖಂಡಕ್ಕೆ ಎಲ್ಲಿಯ ಬರ?

ಮಹಾ ಬಲಿ.

ಭರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾ ಶಕ್ತಿ ಸಂದನ್ನು ಬೈಪಿಸರನ್ನು ಎದುರಿಸುವಾಗ ಗಾಂಧೀಜಿಯವರಿಗೆ ತಮ್ಮ ರಕ್ತದ ನ ಮೊದಲ ಪ್ರಸಂಗ ಬರಲಿಲ್ಲ. ಅಹಿಂಸಯಿಂದಲೇ ಸರ್ವಾಭೀಷ್ಟವೂ ಸಫಲವಾಯಿತು. ಆದರೆ ಸ್ವತಂತ್ರ ಭಾರತದ ಪರಮಪವಿತ್ರ ಧರ್ಮಾಂಧರಿಗೆ, ಸಂಪ್ರದಾಯವಾದಿಗಳಿಗೆ ಒಲಿಸೀತೆಯಲ್ಲಿ ರಕ್ತದಾನ ಮಾಡಬೇಕಾಗಿ ಬಂತು. ಇಡೀ ಮಾನವ ಗಣವು ಪವಿತ್ರವೆನ್ನುತ್ತಾ ಪ್ರೇಮ ರಕ್ತವನ್ನು ದ ನಮಾಡಬೇಕಾಗಿ ಬಂತು. ಎಂಥಾ ಘೋರ ಕರ್ಮ ರಾಷ್ಟ್ರಪಿತನ ದಾಯವೇ ಸನ್ನ, ಧರ್ಮಿಕ ಉನ್ಮಾದ ಸೂಯೆಗಳನ್ನು ಕೊಲೆಮಾಡಲು ದೇಶಕ್ಕೆ ಸನ್ನ ಸೂಲೆಮಾತೆ ಭೂಮಿಕೆ ಸರ್ವಶಲ್ಲಿ ಬಂಲಿ.

ಸರಸ್ವತಿಗೆ ಕಲಂಕ.

ಗಾಂಧೀಜಿಯವರ ಹತ್ಯೆಯ ಸಂತಾಪ ವೇದನೆಗಳು ಹೊರಟಿಸ್ಸು ಹತ್ಯೆಯಿಸ್ಸವರಿಬ್ಬರು ಹೇಳಲಿ. 'ಗಾಂಧೀಜಿಯವರನ್ನು ಒಬ್ಬ ಪತ್ರಿಕಾ ಸಂಪಾದಕರು ಕೊಂದದ್ದಾಗಿದೆ.' ಹತ್ತಿರದಲ್ಲಿದ್ದ ಮತ್ತೊಬ್ಬರು ಹೇಳಿದರು. 'ಸಂಪಾದಕರೆಲ್ಲ ಸಾಧ್ಯಂಣ ನೀವರೆ!' ಈ ಮಾತು ಕಠಿಣವೂತೆ. ಆದರೂ ಆದರಲ್ಲಿ ಸತ್ಯತೆ ಇದೆ. ಸಂಪಾದಕ ವೃಂದದಲ್ಲಿ ಎಷ್ಟು ಜನರು ಧೈರ್ಯದಿಂದ ತಾವು ಕೋಮುವಾರು ತತ್ವಪ್ರಚೋದನೆಗೆ ಸಹಾಯಮಾಡಿಲ್ಲವೆಂದು ಹೇಳಬಲ್ಲರು? ಎಷ್ಟು ಜನರು ಸಂಪ್ರದಾಯವಾದವನ್ನು ಸಂಘರ್ಷಿಸಿಲ್ಲವೆಂದು ದೇಳಬಲ್ಲರು? ಇಂದೂ ಕೂಡ, ಗಾಂಧೀಜಿಯವರ ಹತ್ಯವಾದ ನಂತರವು ಪತ್ರಿಕೆಗಳನ್ನು ನೋಡಿರಿ! ಎಷ್ಟು ಪತ್ರಿಕೆಗಳು ಹಿಂದೂನಂತೆಯೇ ಕೋಮುವಾರು ವಿಷವನ್ನು ಕಾರುತ್ತಿಲ್ಲ? ಇದು ನಿಜವಾಗಿಯೂ ಸರಸ್ವತಿಯ ಮುಖಕ್ಕೆ ಕಲಂಕ ವ್ಯಾಯವಾಡುದು. ದೇವದ ಶಾಂತಿಗೆ ಹಾನಿಕಾರಕವಾದುದು. ಮಾನವ ಹಿತ ಚಿಂತನೆಗೆ ಮಾರಕವಾದುದು.

ಕ್ರಿಯೆಬೇಕು.

ಪಂಡಿತ ಜವಾಹರ್‌ಲಾಲ್ ನೆಹರೂರವರು, 'ತಪ್ಪು ಒಬ್ಬ ವ್ಯಕ್ತಿಯದಲ್ಲ; ಅದು ನಮ್ಮೆಲ್ಲರದು' ಎಂದು ಹೇಳಿದಾಗ ಸತ್ಯವನ್ನೇ ಹೇಳಿದರು. ಇಡೀ ಜಗತ್ತಿನ ನಿಧಿಗಳಲ್ಲಿ ಶ್ರೇಷ್ಠವಾದ ಬಾಪುವನ್ನು ಇಟ್ಟುಕೊಳ್ಳಲು ಅಯೋಗ್ಯರಾದ ನಾವೆಲ್ಲರೂ ಅಪ್ಪಟ ಅಪರಾಧಿಗಳು. ಪ್ರಥಮ ನಾವು ಅವರ ಆತ್ಮವನ್ನು ಕಾಲಡಿಯಲ್ಲಿ ತುಳಿದು ಸುಂದರ ಭೌತಿಕ ಶರೀರವನ್ನು ಭಸ್ಮಮಾಡಿದೆವು. ಗಾಂಧೀಜಿಯವರು:—

ರಘುಪತಿ ರಾಘವ ರಾಜಾರಾಂ।
ಪತಿತ ಪಾವನ ಸೀತಾರಾಂ.
ಸ್ವರ್ಣಲಲ್ಲಾ ತೇರೆ ನಾಮಂ
ಸಬ ಕೋ ಸನ್ಮತಿ ದೇ ಭಗವಾನ್॥

ಎಂದು ಭಗವಂತನಲ್ಲಿ ನಮ್ಮ ತಪ್ಪಿಗಾಗಿ ಪೊರೆಯಿಡುತ್ತಾ ಪರಿ ಇಳಿಯಸ್ಸಿನಲ್ಲಿ ನವಖಾಲಿಯಲ್ಲಿ ಪ್ರತಿ ಮನೆಯನ್ನೂ ಪಾದಯಾತ್ರೆಯಿಂದಾಗಿ ಸುತ್ತುತ್ತಿದ್ದಾಗ ಅವರ ಕೊಲೆಯೂಗಲಿಲ್ಲ ನುಸಲ್ಮಾನದು ಅವರ ಕೊಲೆ ಮಾಡಲಿಲ್ಲ. ಇವರ ಕೊಲೆಯು ಪೊಲೀಸರಿಂದಲೂ, ಸಿ. ಐ. ಡಿ. ಇರುಸ್ಸ ವರ್ಯವನ್ನೆ ಇರುವ ದೆಲ್ಲಿಯಲ್ಲಿ ನಡೆಯಿತು. ನಮ್ಮ ಸರಕಾರದ ಕಣ್ಮುಂದೆಯೇ ನಡೆಯಿತ. ದೆಲ್ಲಿಯೂ ನಮ್ಮ ರಾಜಧಾನಿಯೇ? ಅದು ಭೂರತೀಯರಿಂದ ಪ್ರಭೂಮಿ. ಕೊಪ್ಪುಕೋಟೆಯು ನೋಡಿ ಮಾತ್ರ ಕೆಂಪಲ್ಲಿ ಇಡೀ ದೆಲ್ಲಿಯು ರಕ್ತಸಿಂಚಿತವಾಗಿದೆ; ಅಪವಿತ್ರವಾಗಿದೆ. ದೆಲ್ಲಿದುಷ್ಟ ಚೆಲ್ಲಲ್ಪಟ್ಟ ವ ಹಾತ್ಮರ ರಕ್ತಿಂದ ಮಹಾಭಾರತವು ರಚಿತವಾಗಲಾರದು. ಗಾಂಧೀಜಿಯವರ ಮಹಾತ್ಮೆಯನ್ನು ಹೊಗಳುವದರಿಂದ, ಇಲ್ಲಿನೇ ನಮ್ಮ ತಪ್ಪನ್ನು ಒಪ್ಪಿಕೊಳ್ಳುವದರಿಂದ ಭರತಖಂಡವು ಉದ್ಧಾರವಾಗದು. ಗಾಂಧೀಜಿಯವರ ಆತ್ಮಕ್ಕೆ ವಿಧಾಯಕ ಕರ್ಮ-ಕ್ರಿಯೆಯನ್ನು ಆಶಿಸುತ್ತಿದೆ. ನಿಷ್ಕಾಮವು ಶ್ರೇಯಸ್ಸು ನಿಷ್ಕಾಮವು ಶ್ರೇಯಸ್ಸು.

ದೇವರಿಗೆ ಅಸೂಯೆ.

ಮಹಾತ್ಮರು ಮೂವತ್ತ ಪವಿತ್ರಿಯನ್ನು ಮೀರಿ ದೇವರ ಸಾಮೀಪ್ಯವನ್ನು ಸೇರಿದ್ದರು. ಜನತೆಯು ದೇವರನ್ನು ಮರೆತು ಗಾಂಧೀಜಿಯನ್ನೇ ದೇವರೆಂದು ಪೂಜಿಸುವ ಸ್ಥಿತಿ ಬಂದಿತ್ತು. ದೇವರೊಡನೆ ಈ ರೀತಿ ಪೈಪೋಟಿಗೆ ಹೊರಟ ಗಾಂಧೀಜಿಯವರ ಮೇಲೆ ದೇವರಿಗೆ ಅಸೂಯೆಯಾಗದೆ ಬೇಕು! ಆದ್ದರಿಂದ ದೇವರ ಪ್ರೇರಣೆಯಿಂದ ನ ದೂರ್ವಾನೆಂಬ ಪಿಶಾಚಿಯು ಈ ಯ ಗಪ್ರೇವನನ್ನು ಕೊಲೆಮಾಡಿತು. ಬರುವ ಶತಮಾನಗಳ ವರೆಗೆ ಯಾರೂ ತಮ್ಮ ಮಕ್ಕಳಿಗೆ 'ನಾಥೂರಾಮ'ನೆಂದು ಹೆಸರಿಡದಿರಲಿ. ಇಂಥಾ 'ನಾಥೂರಾಮ'ರಿಗೆ ಯಾವ ಮತೆಯೂ ಜನ್ಮನೀಯದಿರಲಿ. ಪ್ರತ್ಯಕ್ಷ ದೇವರಾಗಿದ್ದ ಮಹಾತ್ಮರು ಸಾರಿದ ತತ್ವ ಸಿದ್ಧಾಂತಗಳು ಬೇಕೆಂದು ಜಗತ್ತಿಗೆ ಶಾಶ್ವತ ಶಾಂತಿ ಪ್ರೇರಕ ಶಕ್ತಿಯಾಗಿ ಬೆಳಗಲಿ.

# ಕೊಡಗು

ತಾ. ೨೭-೩-೧೯೪೮ ರ ಶುಕ್ರವಾರ

## ಎ. ಐ. ಸಿ. ಸಿ. ನಿರ್ಣಯ.

ಆಮಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ನವದೇಹಲಿಯಲ್ಲಿ ತಾರೀಕು ೨೧-೩೨ ರಲ್ಲಿ ನಡೆದು ಮಾಡಿದ ತೀರ್ಮಾನಗಳಲ್ಲಿ ಗಾಂಧೀಜಿಯವರ ಹತ್ಯೆಕ್ಕೆ ಸಂತಾಪವನ್ನು ಮತ್ತು ನಾಚಿಕೆಯನ್ನು ವ್ಯಕ್ತಮಾಡುವದು ಪ್ರಥಮದಾಗಿತ್ತು. ನಂತರ ಅವರು ಮಾಡಿದ ತೀರ್ಮಾನಗಳಲ್ಲಿ ಎರಡು ಅತೀ ಪ್ರಾಮುಖ್ಯವಾದುವುಗಳು. ಕಾಂಗ್ರೆಸ್ ಸಂಸ್ಥೆಯ ಭವಿಷ್ಯದ ಬಗ್ಗೆ ಮಾಡಿದ ರಠಾವು ಹೀಗಿದೆ. 'ಕಾಂಗ್ರೆಸ್ ಸಂಸ್ಥೆಯನ್ನು ಪರಿಶುದ್ಧಗೊಳಿಸಲು ಎಲ್ಲಾ ಕಾಂಗ್ರೆಸ್ ಸದಸ್ಯರು ಯತ್ನಿಸಬೇಕು. ಇದರಿಂದ ಕಾಂಗ್ರೆಸ್ ಸದಸ್ಯರ ಸಂಖ್ಯೆ ಕಡಿಮೆಯಾದರೂ ಚಿಂತೆಯಿಲ್ಲ. ಪ್ರತಿಯೊಬ್ಬ ಕಾಂಗ್ರೆಸ್ಸಿನವನೂ ತನ್ನ ಆತ್ಮಪರೀಕ್ಷೆ ಮಾಡಿಕೊಂಡು, ಮಹಾ ತ್ಯಾಗ ಬಲದಿಂದ ಕಟ್ಟಿರುವ ಈ ಮಹಾಸಂಸ್ಥೆಯನ್ನು ಬಲಪಡಿಸಿ ಗಾಂಧೀಜಿಯು ತೋರಿಸಿರುವ ನುಟ್ಟಕ್ಕೆ ತರಲು ಶ್ರಮಿಸಬೇಕು' ಈ ತೀರ್ಮಾನವು ಬಹು ಪ್ರಾಮುಖ್ಯವಾದುದು. ಕಾಂಗ್ರೆಸು ಅಧಿಕಾರ ಸ್ವೀಕರಿಸಿದಂದಿನಿಂದಲೇ ತನ್ನ ಪಾವಿತ್ರ್ಯವನ್ನು ಕಳಕೊಳ್ಳುತ್ತಾ ಬಂದಿದೆ. ಸ್ವಾತಂತ್ರ್ಯ ಸಂಗ್ರಾಮವು ಕೊನೆಗೊಂಡು ಭರತಖಂಡವು ಸ್ವತಂತ್ರವಾದಂದಿನಿಂದ ಕಾಂಗ್ರೆಸು ಹದಗೆಟ್ಟಿದೆ. ಹಿಂದೆ ದೇಶಕ್ಕಾಗಿ, ಜನಹಿತಕ್ಕಾಗಿ ತ್ಯಾಗಮಾಡಿದವರಲ್ಲಿ ಬಹು ಜನರು ಅಧಿಕಾರ, ಗೌರವಗಳ ಮೋಹಕ್ಕೆ ಮರುಳಾಗಿ ಕಾಂಗ್ರೆಸ್ ಸಂಸ್ಥೆಯ ಘನತೆ ಗೌರವಗಳು ಕನಿಷ್ಟ ಆಂತಸ್ತಿಗೆ ತಲಪಿನೆ. ಇಂಥಾ ಪರಿಸ್ಥಿತಿಯಲ್ಲಿ ಕಾಂಗ್ರೆಸನ್ನು ಪರಿಶುದ್ಧಗೊಳಿಸುವದು ಅತ್ಯವಶ್ಯ. ಗಾಂಧೀಜಿಯವರ ಆಶಯದಂತೆ ಕಾಂಗ್ರೆಸ್ಸು ಕೇವಲ ಜನಸೇವಕರ ಸಂಸ್ಥೆಯಾಗಿ 'ಲೋಕಸೇವಾ' ಸಂಸ್ಥೆ ಎನ್ನಿಸಿಕೊಳ್ಳಬೇಕು. ಅಧಿಕಾರಕ್ಕೆ, ಗೌರವಕ್ಕೆ ಆಶೆಪಡುವವರು ಕಾಂಗ್ರೆಸ್ಸಿನಿಂದ ಹೊರಗೆ ಉಳಿಯುವಂತಾಗಬೇಕು. ಕಾಂಗ್ರೆಸು ಇಂದು ಅಧಿಕಾರ ವಹಿಸಿದೆ. ಸರಕಾರದ ಕಡಿವಾಣವನ್ನು ಹಿಡಿದಿದೆ. ಇಂಥಾ ಜವಾಬ್ದಾರಿಯ ಸಂದರ್ಭದಲ್ಲಿ ಅವರ ಮೇಲೆ ಅಪಾರ ಹಗಲೂ ಇರುಳಿನಲೆಗಳೂ ಬರುವದು ಅನಿವಾರ್ಯ. ಇವುಗಳಿಂದ ಉಳಿದು ತನ್ನ ಜನಾನುರಾಗವನ್ನು ಅದು ಉಳಿಸಿಕೊಳ್ಳಬೇಕಾದರೆ ಅದು ಕೇವಲ ಸೇವಾತತ್ಪರ ಸಂಸ್ಥೆಯಾಗಲೇಬೇಕು. ಈ ದೃಷ್ಟಿಯಿಂದ ಅಧಿಕಾರ, ಪ್ರತಿಷ್ಠೆ, ಗೌರವಗಳ ಆಶೆ ಇರುವವರು ಕಾಂಗ್ರೆಸ್ಸನ್ನು ತ್ಯಜಿಸಿ ಸ್ವಾತಂತ್ರ್ಯಗಳಿಸಿಕೊಟ್ಟ ಕಾಂಗ್ರೆಸ್ಸನ್ನು ಉಳಿಸಬೇಕು.

ಎರಡನೇ ಮುಖ್ಯ ಠರಾವು ಕೋಮುವಾರು ಭಿನ್ನಾಭಿಪ್ರಾಯಗಳಿಗೆ ಸಂಬಂಧಿಸಿದುದು. ಅದು ಹೀಗಿದೆ. 'ಮುಖ್ಯವಾಗಿ ಕಾಂಗ್ರೆಸ್ಸಿನವರೂ ಸಾಮಾನ್ಯವಾಗಿ ಸಮಸ್ತ ಪ್ರಜೆಗಳೂ ಕೋಮುವಾರು ವಿಷವಾತಾವರಣವನ್ನು ತಡೆಗಟ್ಟಲು ಸರ್ವ ಪ್ರಯತ್ನವನ್ನು ಮಾಡಬೇಕು. ಇಷ್ಟಾದಿದ್ದರೂ ಅದರಿಂದ ದೇಶದ ಸ್ವಾತಂತ್ರ್ಯವೇ ನಾಶವಾಗಿ ಹೋಗಬಹುದು'. ಕೋಮುವಾರು ಭಾವನೆಯು ಎಷ್ಟರ ಮಟ್ಟಿಗೆ ದೇಶಕ್ಕೆ ಹಾನಿಕಾರಿ ಎಂಬದನ್ನು ಸದ್ಯದ ಭರತಖಂಡದ ಸ್ಥಿತಿಯೇ ಎತ್ತಿ ತೋರಿಸುತ್ತಿದೆ. ಕೇಂದ್ರ ಸರಕಾರವು ಕೋಮುವಾರು ಭಾವನೆಯನ್ನು ಹತ್ತಿಕ್ಕಲು ತಕ್ಕ ಶ್ರಮ ವಹಿಸಿದೆ. ಕಾಂಗ್ರೆಸು ಕೋಮುವಾರು ಸಂಸ್ಥೆಯಲ್ಲದಿದ್ದರೂ ಅದರಲ್ಲಿ ಕೋಮುವಾರು ಭಾವನೆಯ ಜನರಿದ್ದಾರೆಂಬುದು ಹಲವು ಭಾರಿ ವ್ಯಕ್ತವಾಗಿದೆ. ಕೋಮುವಾರು ಭಾವನೆಯ ಜನರಿರುವವರೆಗೆ ಕಾಂಗ್ರೆಸು ಶಕ್ತಿಸಂಪನ್ನ ದೇಶೋದ್ಧಾರಕ ಸಂಸ್ಥೆಯಾಗಲಾರದು. ಭರತಖಂಡವು ಯೂನಿಯನ್ ಕೋಮಿಗೂ ಸೇರದ, ಪ್ರಜಾಪ್ರಭುತ್ವಾನುಸಾರಿಯಾದ ರಾಷ್ಟ್ರವಾಗಬೇಕು. ಈ ರಾಷ್ಟ್ರದಲ್ಲಿ ಎಲ್ಲರಿಗೂ ಸಮಾನ ರೀತಿಯ ಹಕ್ಕು ಬಾಧ್ಯತೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರೆಯಬೇಕಾದರೆ ಅಧಿಕಾರ ಹೊತ್ತ ಕಾಂಗ್ರೆಸು ಕೋಮುವಾರು ಭಾವನೆಯಿಂದ ನಿರ್ಲಿಪ್ತವಿರಬೇಕು. ಕಾಂಗ್ರೆಸಿನ ಈ ನಿರ್ಣಯಗಳನ್ನು ಪ್ರತಿಯೊಬ್ಬನೂ ಶಿರಸಾವಹಿಸಿ ಜನತೆಯ ಆಶಾಚೆನ್ನೆಯೊದ, ಅಭಯದಾಯಕವಾದ ಸರಿಶುದ್ಧ ಕಾಂಗ್ರೆಸ್ಸನ್ನು ರಚಿಸಲು ಸಹಕಾರಿಗಳಾಗಬೇಕು.

## ವರ್ತಮಾನ.

ಹಿಂದೀ ಪ್ರವೇತಿಕಾ ಪರೀಕ್ಷೆಗೆ ಕೂತುಕೊಳ್ಳುವವರು ಈ ವರೆಗೆ ಮೈಸೂರು ಯೂ ಮಂಗಳೂರಿಗೆ ಹೋಗಬೇಕಿತ್ತು. ಆದರೆ ಕಳೆದ ಪರೀಕ್ಷೆಯಿಂದ ಮಡಿಕೇರಿಯಲ್ಲಿ ಈ ಪರೀಕ್ಷೆಯ ಕೇಂದ್ರವಾಗಿದೆ.

ಮಹಾತ್ಮಾಗಾಂಧೀಜಿಯವರ ನಿಧನದ ಬಗ್ಗೆ ಕೊಡಗು ಸರಕಾರವು ಕಳುಹಿಸಿದ ಸಂತಾಪ ಸೂಚನೆಗೆ ಉತ್ತರವಾಗಿ ಕೇಂದ್ರ ಸರಕಾರದ ಗೃಹ ಇಲಾಖೆಯಿಂದ 'ಮಹಾತ್ಮಗಾಂಧಿಯವರ ಮರಣದ ಬಗ್ಗೆ ನೀವು ವ್ಯಕ್ತಮಾಡಿದ ಸಂತಾಪಕ್ಕೆ ತುಂಬಾ ವಂದನೆ. ಅದನ್ನು ಕಳುಹಿಸುವದರಲ್ಲಿ ನೀವು ತೋರಿದ ದಯಾ ಭಾವನೆಯನ್ನು ಇಂಡಿಯಾ ಸರಕಾರವು ಮೆಚ್ಚುತ್ತದೆ' ಎಂಬ ತಂತಿ ಬಂದಿದೆ.

ಕೊಡಗು ಕೇಂದ್ರ ನಿರಾಶ್ರಿತ ಫಂಡಿನ ಸಮಿತಿಯ ಬಗ್ಗೆ ಹಣವನ್ನು ಉಪಕೇಂದ್ರಗಳಿಂದ ಸ್ವೀಕರಿಸಲು ಮತ್ತು ಕೇಂದ್ರ ಸಮಿತಿಯ ಆಶಯದಂತೆ ವಿತರಣೆ ಮಾಡಲು ಟ್ರೆಜರಿ ಅಫೀಸರಾದ ಶ್ರೀ ಕೆ. ಪಿ. ಕುಟ್ಟಪ್ಪನವರಿಗೆ ಅಧಿಕಾರ ಕೊಡಲಾಗಿದೆ.

ಹುರಿ, ಅವಲಕ್ಕಿ ಮೊದಲಾದುವನ್ನು ಮಾಡಲು ಮತ್ತು ಮಾರಲು ಇದ್ದ ನಿರ್ಬಂಧವನ್ನು ತಾರೀಕು ೧೫-೩-೪೮ರಿಂದ ತೆಗೆದು ಹಾಕಲಾಗಿದೆ.

ತಾರೀಕು ೨೦-೩-೪೮ರಲ್ಲಿ ವಿರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಕಾರ್ಯಾನಂತರ ಹೊಡೆದಾಟವಾಯಿತೆಂದೂ ಈ ಸಂಬಂಧ ೧೩ ಜನ ವಿದ್ಯಾರ್ಥಿಗಳನ್ನು ಮುಂದಿನ ಆಜ್ಞೆಯು ವರೆಗೆ 'ಸಸ್ಪೆಂಡ್' ಮಾಡಿರುವರೆಂದೂ, ವಿದ್ಯಾರ್ಥಿಗಳು ಜಿಲ್ಲಾ ವಿದ್ಯಾಧಿಕಾರಿಗೆ ಈ ವಿಚಾರವನ್ನು ಸರಿಯಾಗಿ ವಿಚಾರಿಸಬೇಕೆಂದು ಅಫೀಲು ಮಾಡಿರುವರೆಂದೂ ವರ್ತಮಾನ.

ಕೊಡಗು ಕೇಂದ್ರ ನಿರಾಶ್ರಿತರ ಫಂಡ್ ಕಮಿಟಿಯ ಮೀಟಿಂಗು ಈ ದಿನ ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಡಿಯತ್ತುನಾಡಿನ ಶ್ರೀ ಮಲೆದೇವರ ಮತ್ತು ನಾಡಿನವರ ಸಾರ್ವಜನಿಕ ಮೀಟಿಂಗು ಈ ತಾ. ೨೯ನೇ ಆದಿತ್ಯವಾರ ಪೆಬ್ಬಟ್ಟಾಣಿ ಮಂದಿನಲ್ಲಿ ಸದರಿ ನಾಡಿನ ಸಂಸ್ಥೆಯ ಪ್ರೆಸಿಡೆಂಟರ ಮತ್ತು ನಾಡು ತಕ್ಕರುಗಳ ಕೋರಿಕೆ ಮೇರೆ ನಡೆಯುವುದು.

ವೀರಾಜಪೇಟೆ ಹೈಸ್ಕೂಲಿನ ವಾರ್ಷಿಕ ಉತ್ಸವನವು ಈ ತಾ. ೨೦ ರಲ್ಲು ಶ್ರೀ ಪಿ ಐ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಲಾ ಹಾಲ್‌ನಲ್ಲಿ ರಾತ್ರಿ 'ದಾನಶೂರಕರ್ಣ'ನೆಂಬ ಕನ್ನಡ ನಾಟಕವು ವಿದ್ಯಾರ್ಥಿಗಳಿಂದ ಮನೋರಂಜಕವಾಗಿ ಅಭಿನಯಿಸಲ್ಪಟ್ಟಿತು. ಜನರು ಕಿಕ್ಕಿರಿದು ನೆರೆದಿದ್ದರು.

ಕೊಡಗು ಪ್ರಾಂತೀಕ ಎಗ್ರಿಕಲ್ಚರಲ್ ಎಡ್ವಯಸರಿ ಬೋರ್ಡಿನ ಮೀಟಿಂಗು ಈ ತಾ. ೩೦ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಚೀಫ್ ಕಮಿಷನರವರು ಈ ತಾ. ೩೧ರಲ್ಲಿ ಕೊಡಗಿನ ಎಲ್ಲಾ ಗಜೆಟೆಡ್ ಉದ್ಯೋಗಸ್ಥರನ್ನು ಕರೆಸಿ ತನ್ನ ಆಫೀಸಿನಲ್ಲಿ ಒಂದು ಮೀಟಿಂಗು ನಡಿಸಿದರಾಗಿ ತಿಳಿಯಬರುತ್ತದೆ.

## ಚಿತಾಭಸ್ಮ ವಿಸರ್ಜನೆ.

ಮೂಡಯಮುಡಿ.

ತಾರೀಕು ೧೭-೩-೪೮ ರಲ್ಲಿ ಮಹಾತ್ಮರ ಚಿತಾಭಸ್ಮ ವಿಸರ್ಜನೆ ಸಮಾರಂಭವನ್ನು ಮೂಡಯಮುಡಿ, ಭೆನಗಾಲ, ಬಾಳಾಜಿ ಗ್ರಾಮಸ್ಥರು ಮೂಡಯಮುಡಿ ಶಾಲಾ ಬಳಿ ಸಭೆಸೇರಿ ನಡೆಸಿದರು. ಮೆರವಣಿಗೆ, ಪ್ರಾರ್ಥನೆ, ಅನ್ನದಾನ, ಭಾಷಣಗಳಿಂದ ಯಶಸ್ವಿಯಾಗಿ ಜರಗಿತು.

## ಗೋಣಿಕೊಪ್ಪ.

ತಾರೀಕು ೧೧ ರಲ್ಲಿ ಮಹಾತ್ಮರ ಚಿತಾಭಸ್ಮವು ಇಲ್ಲಿಗೆ ತಲಪಿತು. ಎಲ್ಲರ ದರ್ಶನಕ್ಕೆ ಅನುವಾಗುವಂತೆ ಇದನ್ನು ಮೆರವಣಿಗೆ ಮಾಡಿ ಪೊನ್ನಂಪೇಟೆ ತಾರೆ ದಾಶ್ರಮಕ್ಕೆ ಕೊಯ್ದೊಯಲಾಯಿತು. ತಾ. ೧೨ ರಲ್ಲಿ ಮಹಾತ್ಮರ ಭಾವಚಿತ್ರದೊಡನೆ ಪೂಜೆ, ಪ್ರಾರ್ಥನೆ, ಮೆರವಣಿಗೆಗಳಾದವು. ಪೊನ್ನಂಪೇಟೆಯಿಂದ ತೆಗೆದುಕೊಂಡು ಬಂದ ಚಿತಾಭಸ್ಮದ ಮೆರವಣಿಗೆಯನ್ನು ವೀರಾಜಪೇಟೆಯಲ್ಲೂ ಮಾಡಲಾಯಿತು. ನಂತರ ಅದನ್ನು ಕಾವೇರಿಗೆ ತೆಗೆದುಕೊಂಡು ಹೋಗಲಾಯಿತು. ಸಾಯಂಕಾಲ ೫ ಗಂಟೆಗೆ ಶ್ರೀ. ಕೊಂಗಂಡ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಎಂ. ಎಂ. ನಂಜುಂಡ, ಟಿ. ಪಿ. ಸುಬ್ಬಯ್ಯ, ಎ. ಎಸ್ ಚಿಣ್ಣಪ್ಪ ಇವರುಗಳು ಭಾಷಣ ಮಾಡಿದರು. ಮೌನ ಪ್ರಾರ್ಥನೆಯಿಂದ ಅವರ ಆತ್ಮಕ್ಕೆ ಶಾಂತಿಯನ್ನು ಬಯಸಲಾಯಿತು.

### ಕಡಿಯತ್ತೂರು

ಈ ಗ್ರಾಮಸ್ಥರು ಗ್ರಾಮದ ಭಗವತಿ ದೇವಸ್ಥಾನದಲ್ಲಿ ಸಭೆ ಸೇರಿದರು. ಶ್ರೀ ಬಿ. ಕೃಷ್ಣಯ್ಯನವರು ಪ್ರಾರ್ಥನೆ ಮಾಡಿದರು. ಶ್ರೀ. ಕೆ ಕೃಷ್ಣಪ್ಪ, ದೇವಯ್ಯ, ಮತ್ತು ಐಯ್ಯಪ್ಪನವರು ಭಾಷಣ ಮಾಡಿದರು. ಊಟೋಪಚಾರದ ನಂತರ ಸಭೆ ಮುಕ್ತಾಯ ಗೊಂಡಿತು.

### ಪಾತೂರು.

ಪಾತೂರು, ಕೆಂಗಳ್ತಡ ಬೈಗೋಡು, ಕುಂದ, ಕೈತೇರಿ, ಕಳಕಾಡ್ಮಾಡು ಮತ್ತು ಈಚೂರು ಗ್ರಾಮಸ್ಥರು, ಪಾತೂರು ಶಾಲಾ ವಿದ್ಯಾರ್ಥಿ, ಉಪಧ್ಯಾಯರೂ ಶಾಲಾ ಬಳಿ ಮೆರವಣಿಗೆಯ ನಂತರ ಶ್ರೀ. ಕೊತ್ಕಂಡ ಬಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಶ್ರೀ. ಕೆ. ಬಿ. ಪೊನ್ನಪ್ಪ, ವಿ. ಎಸ್. ರಾಮಯ್ಯ, ಎಚ್. ಬಿ. ಅಣ್ಣಯ್ಯ, ಎಚ್. ಬಿ. ಸಿದ್ದಯ್ಯ, ಎಂ. ಎಸ್ ಕಾರ್ಯಪ್ಪ, ಕೆ. ಎಂ. ಅಚ್ಚಪ್ಪ, ಎಸ್. ಎ. ದೇವಯ್ಯ ಮೊದಲಾದವರು ಭಾಷಣ ಮಾಡಿದರು. ನಂತರ ಬಾಪುವಿನ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ ಪ್ರಾರ್ಥಿಸಿ ತಮ್ಮ ಸಂತಾಪವನ್ನು ದೇವದಾಸ್ ಗಾಂಧಿಯವರಿಗೂ, ಜವಾಹರ್‌ಲಾಲರಿಗೂ ತಿಳಿಸಿದರು.


## ರಿಕ್ರೂಟಿಂಗ್ ಪ್ರೋಗಾಂ.

— 37 ಕೊಡಗು ಅಂಟಿ ಟ್ಯಾಂಕ್ ಬಿಡಿನಿಮೆಂಟ್ —

| ತಾರೀಕು. | ಸ್ಥಳ, ರಾತ್ರಿ. | ಸಮಯ. | ಸ್ಥಳ. |
|---|---|---|---|
| 25—2—48 | ವೀರಾಜಪೇಟೆ | 11 A. M. | ಸಿವಿಲ್ ಆಸ್ಪತ್ರೆ |
| 26—2—48 | ಮೂರ್ನಾಡು | ,, | ,, |
| 27—2—48 | ಮಡಿಕೇರಿ | ,, | ,, |
| 28—2—48 | ಸೂದಾಪುರ | 12 A. M. | ಸೂದಾಪುರ ಸೇತುವೆ ಬಳಿ |
| 29—2—48 | ಗೋಣಿಕೊಪ್ಪಲು | 11 A. M. | ಸಿವಿಲ್ ಆಸ್ಪತ್ರೆ |
| 1—3—48 | ಹುದಿಕೇರಿ | ,, | ,, |
| 1—3—48 | ಪೊನ್ನಂಪೇಟೆ | 3 P. M. | ನಾಡ್ ಖಚೇರಿ |
| 2—3—48 | ಭಾಗಮಂಡ್ಲ | 11 A. M. | ಆಸ್ಪತ್ರೆ |
| 2—3—48 | ಕಾರ್ಮಂದ | 3 P. M. | ಕೋ-ಆಪರೇಟಿವ್ ಕಟ್ಟಡ |
| 3—3—48 | ನಾಪೋಕ್ಲು | 11 A. M. | ಆಸ್ಪತ್ರೆ |
| 6—3—48 | ಶನಿವಾರಸಂತೆ | 11 A. M. | ಆಸ್ಪತ್ರೆ |
| 7—3—48 | ಕೊಡ್ಲಿಪೇಟೆ | 12 A. M. | ನಾಡ್ ಖಚೇರಿ |
| 8—3—48 | ಸೋಮವಾರಪೇಟೆ | 11 A. M. | ಆಸ್ಪತ್ರೆ |

2-2

Capt. K. K. AIYANNA,
*Unit Recruiting Officer.*

# ॥ ಗಾಂಧಿ ಜೀವನದ ಕೆಲವು ರಸಮಯ ಸನ್ನಿವೇಶಗಳು ॥

— ಲೇ:—'ಗುಪ್ತ', ನುಡಿಕೇರಿ —

ಸಬರಮತಿ ಆಶ್ರಮ ಸ್ಥಾಪನೆ ನೂರಿ ಒಂದು ವರ್ಷವಾಗಿತ್ತು. ಹರಿಜನ ಕುಟುಂಬವೊಂದು ಆಶ್ರಮದಲ್ಲಿ ಬಂದಿರಲು ಇಚ್ಛಿಸುತ್ತದೆಂದು ಠಕ್ಕರ್ ಬಾಪಾರವರು ಗಾಂಧೀಜಿಗೆ ಬರೆದರು. ಆಶ್ರಮದ ನಿಯಮ ಪಾಲಿಸ ವದಾದರೆ ಬಂದಿರಲು ಅಡ್ಡಿಯಿಲ್ಲವೆಂದು ಗಾಂಧೀಜಿ ತಿಳಿಸಿದರು. ದೂಧಾಭಾಯಿ ಅವರ ಪತ್ನಿ ದಾಸಿಬಹನ್ (ಹರಿಜನ ದಂಪತಿಗಳ ಹೆಸರು) ಬಂದು ಆಶ್ರಮವನ್ನು ಸೇರಿದರು ಇದರಿಂದ ಸನಾತನ ಧರ್ಮವಲಂಬಿಗಳಾದ ಕೆಲವರು ಆಶ್ರಮಕ್ಕೆ ತಮ್ಮ ಸಹಾಯ ಹೊಡುವದನ್ನು ನಿಲ್ಲಿಸಿದರ ಆಶ್ರಮದ ಹೇನೇಜರಾಗಿದ್ದ ಶ್ರೀ ಮಗನಲಾಲ್ ಗಾಂಧಿಯವರು ಕೇವಲ ಒಂದು ತಿಂಗಳ ಆಶ್ರಮ ಜೀವನಕ್ಕೆ ಸಾಕಷ್ಟು ಹಣವಿದೆಯೆಂದು ಗಾಂಧೀಜಿಗೆ ತಿಳಿಸಿದ್ದರು ಗಾಂಧೀಜಿಯವರು ಆಶ್ರಮವನ್ನು ವಿಸರ್ಜಿಸಿ ಹರಿಜನಕೇರಿಯಲ್ಲಿರುವಂತೆಯೂ ಅವಶ್ಯಬಿದ್ದರೆ ಭಿಕ್ಷಾಟನೆಯಲ್ಲಿ ಜೀವಿಸುವಂತೆಯೂ ನಿರ್ಧರಿಸಿದ್ದರು ಆ ವರೆಗೆ ಆಶ್ರಮಕ್ಕೆ ಧನ ಧಾನ್ಯ ಸಹಾಯ ಮಾಡುತ್ತಿದ್ದವರು ಆಶ್ರಮದ ವೆಬ್‌ಸೈಟ್ ದೋಷ ರೋಹಣೆಗೆ ತೊಡಗಿದ್ದರು ಒಂದು ದಿನ ಆಶ್ರಮದ ಎದುರು ಕಾರೊಂದು ಬಂದು ನಿಂತಿತು ಶ್ರೀಮಂತ ವ್ಯಾಪಾರಿಯೊಬ್ಬರು 'ಗಾಂಧಿಯವರಿದ್ದಾರೆಯೇ?' ಎಂದು ಕೇಳಿದರು ಗಾಂಧಿಯವರು ಬಂದೊಡನೆಯೇ 'ನಿಮ್ಮ ಆಶ್ರಮಕ್ಕೆ ಪ್ರಲ್ಪ ಧನ ಸಹಾಯ ಮಾಡಬೇಕೆಂದಿರವೆನ , ಸ್ವೀಕರಿಸುವಿರಾ?" ಎಂದು ಕೇಳಿದರು. ಗಾಂಧೀಜಿಯವರು ಆಶ್ರಮದ ಪರಿಸ್ಥಿತಿಯನ್ನು ವಿವರಿಸಿ ಧನ ಸಹಾಯ ಮಾಡುವದಾದರೆ ಆನಂದದಿಂದ ಸ್ವೀಕರಿಸುವದಾಗಿ ಹೇಳಿದರು ಮೂರನೆ ದಿನ ನಿಶ್ಚಿತ ಸಮಯಕ್ಕೆ ಕಾರು ಬಂತು ವ್ಯಾಪಾರಿಯು ಗಾಂಧೀಜಿಯವರ ಕೈಯಲ್ಲಿ ೧೫,೦೦೦ ರೂಪಾಯಿಗಳನ್ನು ಕೊಟ್ಟು ಹೊರಟು ಹೋದರು ಸಬರಮತಿ ಆಶ್ರಮವು ಚಿರವಾಗಿ ನಿಲ್ಲುವಂತಾಯಿತು

* * *

ಮಹಾತ್ಮರು ಪೂನಕ್ಕೆ ಹೋಗುತ್ತಿದ್ದರು ಬರ್ವಾಸ್ ಸ್ಟೇಶನ್‌ನಲ್ಲಿ ರೈಲು ಹತ್ತಬೇಕಿತ್ತು ಅವರು ಮೂರನೆ ದರ್ಜೆಯಲ್ಲೇ ಪ್ರಯಾಣ ಮಾಡುತ್ತಿದ್ದರು ೧೯೧೫ ನೇ ಇಸವಿ ಆಗ ಅವರು ಇನ್ನೂ ಮಹಾತ್ಮರಾಗಿರಲಿಲ್ಲ ಅವರ ಹೆಸರು ಕೇಳಿದ್ದರೂ ಅವರ ಪರಿಚಯ ಹೆಚ್ಚು ಜನರಿಗಿರಲಿಲ್ಲ ಟಿಕೇಟಿಗಾಗಿ ಕ್ಯಾದರು ಅದರೆ ಜನರ ನುಗ್ಗಾಟದಲ್ಲಿ ಇವರಿಗೆ ಟಿಕೇಟ್ ದೊರೆಯುವದು ಹೇಗೆ? ಕಡೆಗೆ ಒಬ್ಬ ವ್ಯಕ್ತಿಯು ಇವರಿಗೆ ರೈಲ್‌ನಲ್ಲಿ ಸ್ಥಳ ಮಾಡಿಕೊಡುವದಾಗಿಯೂ ಅದಕ್ಕೆ ಹನ್ನೆರಡಾಣೆ ಭಕ್ಷೀಸ್ ಕೊಡಬೇಕಾಗಿಯೂ ಒಪ್ಪಂದವಾಯಿತು ರೈಲು ಹೊರಡುವ ಸಮಯವಾಗಿತ್ತು. ಎಷ್ಟು ಹುಡುಕಿದರೂ ಅವರಿಗೆ ಸ್ಥಳ ದೊರಕಲಿಲ್ಲ ಆಗ ಮಹಾತ್ಮರು ಗಾಂಧೀಜಿಯವರನ್ನು ಎತ್ತಿ ತಿಜೋರಿಯೊಳಗಿನಿಂದ ಒಳಕ್ಕೆ ತುಗ್ಗಿಸಿದನು ಗಾಂಧೀಜಿಯವರು ಭಕ್ಷೀಸು ಕೊಟ್ಟರು ಗಾಡಿ ಹೊಂಟಿತ ಗಾಂಧೀಜಿಗೆ ಅಲ್ಲಿ ಕೂರಲು ಸ್ಥಳವಿರಲಿಲ್ಲ ಯಾರೂ ಸ್ಥಳ ಕೊಡಲೂ ತಯಾರಿರಲಿಲ್ಲ ಕೆಲವರು ಇವರನ್ನು ದುರುಗುಟ್ಟಿ ನೋಡುತ್ತಿದ್ದರು. ಮತಾಂತರದ ಗಾಂಧಿಯವರು ಇಡೀ ರೈಲ್ವೆಯನ್ನು ನಿಂತೇ ಕಳೆದರು ಈ ಕಷ್ಟವನ್ನು ನೋಡುತ್ತಿದ್ದ ಒಬ್ಬರು ಗಾಂಧೀಜಿಯವರ ಪರಿಚಯ ಕೇಳಿದರು ಗಾಂಧಿಯ ಹೆಸರು ಕೇಳಿ ಎಲ್ಲರೂ ನಾಚಿಕೆ ಪಟ್ಟರು ಕೂತುಕೊಳ್ಳುವಂತೆ ಆಗ್ರಹ ಮಾಡಿದರು'

* * *

ದಕ್ಷಿಣ ಆಫ್ರಿಕಾದ ಸತ್ಯಾಗ್ರಹದಲ್ಲಿ ಜೈಲು ವಾಸವನ್ನು ಸ್ತ್ರೀಯರೂ ಅನುಭವಿಸಿದರು ಅವರಲ್ಲಿ ೧೯ ವಯಸ್ಸಿನ ವಾಲಿ ಅಮ್ಮ ಎಂಬ ಯುವತಿಯು ಆಗ ತಾನೆ ಜೈಲಿನಿಂದ ಬಿಡ ಗಡೆಯಾಗಿದ್ದಳು ಜೈಲಿನ ಕಾರಿಣ್ಯದಲ್ಲಿ ಸೂರಗಿ ಹೋಗಿದ್ದ ಈ ಕೆ ಖಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದಿದ್ದಳು ಗಾಂಧೀಜಿಯವರು ಆಕೆಯ ಸ್ಥಿತಿಯನ್ನು ನೋಡಿ ಗ ಬರಿಗೂಡರು 'ಜೈಲಿಗೆ ಹೋಗಿ ಈ ಸ್ಥಿತಿಯಾದ-ದಕ್ಕೆ ವಿಷಾದವಿದೆಯೇ ಕಂಗೀ?" ಗಾಂಧೀಜಿಯವರು ಕೇಳಿದರು. ಆಕೆ ಹೇಳಿದಳು 'ವ್ಯಸನವೇಕೆ? ಪುನಹ ಅವರು ನನ್ನನ್ನು ದಸ್ತಗಿರಿ ನೂಡುವದಾದರೆ ಈ ಕ್ಷಣ ಪುನಹ ಹೋಗಲು ತಯಾರಿರುವೆನು' ಗಾಂಧೀಜಿಯವರು ಕೇಳಿದರು, 'ಇವರಿಂದ ನೀನು ಮೃತಳಾದರೆ?" 'ಒಳ್ಳೆದೆ ಆಗುವದು ದೇಶಕ್ಕಾಗಿ ಮೃತಳಾಗುವದು ಯಾರಿಗೆ ಬೇಡ' ಎಂದಳು. ಈ ಸಂಭಾಷಣೆಯನಂತರ ಕೆಲವು ದಿನಗಳಲ್ಲಿ ಆಕೆ ಅದೇ ರೋಗದಿಂದ ಮೃತ್ಯುವಶಳಾದಳು ಆಕೆಯ ಶರೀರ ನಾಶವಾಯಿತು ಆಕೆಯು ತನ್ನ ಅಮರ ಕೀರ್ತಿಯನ್ನು ಚಿರಸ್ಥಾಯಿ ಮಾಡಿದಳು.

* * *

ಗಾಂಧೀಜಿಗೆ ಆಗ ಹನ್ನೆರಡು ಹದಿಮೂರು ವರ್ಷ ವಯಸ್ಸು ಕೆಲವು ಹುಡುಗರೊಂದಿಗೆ ಸೇರಿ ಕೆಟ್ಟಭ್ಯಾಸ ಕಲಿತರು ಹಿರಿಯರು ಸೇದಿ ಬಿಸಾಡಿದ ಸಿಗರೇಟು, ಬೀಡಿ ತುಂಡುಗಳನ್ನು ಹೆಕ್ಕಿ ಸೇದುವ ಪ್ರಯತ್ನ ಕ್ರಮಶಃ ಇದು ಬೆಳೆಯಿತು ಹಿರಿಯರ ಜೇಬಿನಿಂದ ದುಡ್ಡು ಉಡಾಯಿಸುವ ಆಕೆಯೂ ಆಯಿತು ಯಾವಾಗಲೂ ದುಡ್ಡು ಇವರಿಗೆ ಎಲ್ಲಿಂದ ದೊರೆಯಬೇಕು ಈ ಸಂಗತಿಗಳಿಗೆ ಒಟ್ಟು ಸುಮಾರು ರೂ ೫೫ ಸಾಲವಾಯಿತು ಈ ಸಾಲವನ್ನು ತೀರಿಸುವದೆಂತು? ಗಾಂಧೀಜಿಯವರ ಅಂಜಾನ ಕೈಯಲ್ಲಿ ಚಿನ್ನದ ಬಳೆಯೊಂದಿತ್ತು ಅದನ್ನು ಮಾರಿ ಸಾಲ ತೀರಿಸಿದರು ಅದರ ನಂತರ ಗಾಂಧೀಜಿಗೆ ತಮ್ಮ ತಪ್ಪಿನ ಅರಿವಾಯಿತು. ಹೀಗೆ ತಾವು ದಾರಿತಪ್ಪಿ ಹೋಗುತ್ತಿರುವೆನೆಂಬುದೂ ಗೊತ್ತಾಯಿತು ತಮ್ಮ ತಪ್ಪುಗಳನ್ನೆಲ್ಲಾ ಬರೆದು ತಂದೆಯವರ ಹಸ್ತದಲ್ಲಿರಿಸಿ ಅದಕ್ಕೆ ತಕ್ಕ ಶಿಕ್ಷೆ ಕೊಡಬೇಕೆಂದು ಬೇಡಿದರು ಆಗ ತಂದೆಯವರೂ ಸ್ವಲ್ಪ ಹೊತ್ತು ಸ್ತಬ್ಧರಾಗಿದ್ದರು ಪತ್ರವನ್ನು ಒದ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯಿತು ಮಗನನ್ನು ಸ್ನೇಹದೃಷ್ಟಿಯಿಂದ ನೋಡಿದರು ಮಗನ ಸತ್ಯಪ್ರಿಯತೆಗೆ ನುಚ್ಚಿದರು ಈ ಪ್ರೇಮಮಯ ಅಶ್ರುಬಿಂದುಗಳೆ ಮುಂದೆ ಗಾಂಧೀಜಿಯನ್ನು ಸತ್ಯನಿಷ್ಠನನ್ನಾಗಿ ಮಾಡಿದವು

* * *

೧೯೬೬ ನೇ ಇಸವಿ ಗಾಂಧೀಜಿಯವರು ಸ್ವದೇಶಕ್ಕೆ ಆಸ್ಪ್ರಿಕಾದಿಂದ ಕೆಲವು ದಿನಗಳ ಬಗ್ಗೆ ಹೊರಟ್ಟಿದ್ದರು ಜಿಲ್ಲೆಯ ಜನರೆಲ್ಲರೂ ಅವರು ಮಾಡಿದ ಸಂಗಾಗಿ ಅವರಿಗೆ ಬೀಳ್ಕೊಡುಗೆ ಉಡುಗರೆಗಳನ್ನು ಕೊಟ್ಟಿದ್ದರ ವಜ್ರ, ಮುತ್ತು ರತ್ನಗಳು, ಚಿನ್ನವೆ ಬಡವಗಳು ಹೇರಳವಾಗಿದ್ದವು ಈ ರಾಶಿಯನ್ನು ನೋಡಿ ಗಾಂಧೀಜಿಯವರ ಎದೆ ಒಡದುಕೊಳ್ಳಲು ರಂಭಿಸಿತ್ತು ಕೂಡಲೆ ಇಡೀ ಆಲೋಚಿಸಿದರು, 'ಈ ಒಡವೆ ವಸ್ತುಗಳನ್ನು ನಾನು ನನ್ನ ಸ್ವಂತಕ್ಕಾಗಿ ಸ್ವೀಕರಿಸಬಹುದೆ? ನಾನು ಮಾಡಿದ ಸೇವೆಗಾಗಿ ಬಂದ ಉಡುಗರೆಗಳವು ಇದು ನನಗೆ ಸೇರಿದರೆ ನನ್ನದು ಸ್ವಾರ್ಥಜೀವನವಾಗುತ್ತದೆ ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ನನ್ನ ಸೇವೆಯನ್ನು ಮೂರಿಂತಾಗುತ್ತದೆ ಆದ್ದರಿಂದ ಇದು ಸಾರ್ವಜನಿಕರಿಗೇ ಸೇರಬೇಕು ನನ್ನ ಸೇವೆ ಮಾಡಲು ಅನುವಾಡಿಕೊಟ್ಟ ಜನತೆಗೆ ಸಂತಬೇಕೆಂದು ನಿಶ್ಚಯ ಮಾಡಿದರು ಮರುದಿನ ಕಸ್ತೂರ್ಬಾರೊಡನೆ ಈ ಪ್ರತಿಜ್ಞಾಪತ್ರವನ್ನು ತಿದರು ಕಸ್ತೂರ್ಬಾ ಹೇಳಿದರು, ಇದನ್ನು ಕೂಡುವ ಅಗತ್ಯವಿಲ್ಲ 'ಇವು ನಮ್ಮ ಮಕ್ಕಳ ಇಲ್ಲವೆ ಸೊಸೆಯರ ಉಪಯೋಗಕ್ಕೆ ಬರುತ್ತವೆ ಆದ್ದರಿಂದ ನಮ್ಮ ಸೇವೆಯ ಫಲವಾಗಿ ಬಂದಿರುವ ಇವು ನಮ್ಮಲ್ಲೇ ಇರಲಿ' ಗಾಂಧೀಜಿಯವರು ತಮ್ಮ ನಿರ್ಣಯವನ್ನು ತಿಳಿಸಿದರು 'ಸೊಸೆಯರಿಗೆ ಆಭರಣ ಬೇಕಿಲ್ಲ ಗುಣಬೇಕಾದುದು ಒಂದು ವೇಳೆ ಆಭರಣಬೇಕಾದರೂ ಮಾಡಿಸಲು ನಾನಿದ್ದೇನ ಇವನ್ನು ಉಪಯೋಗಿಸಕೂಡದು' ಕಸ್ತೂರ್ಬಾ ಹೇಳಿದರು 'ನೀವು ಕಂಡಂತೆ ಮಾಡಿ ಆದರೆ ಆ ಚಿನ್ನದ ಸರ ನನಗಾಗಿ ಕೂಟ್ಟದ್ದು—ಅದರ ಮೇಲೆ ನಿಮ್ಮ ಕೈ ಒರಬಾರದು. ಅದು ನನ್ನದು' ಗಾಂಧೀಜಿಯವರು ಬಹು ಪ್ರಯಾಸದಿಂದ ಕಸ್ತೂರ್ಬಾರನ್ನು ಒಪ್ಪಿಸಿದರು ಈ ಪ್ರಕಾರವೆಗೆ ಒಂದು ಟ್ರಸ್ಟ್ ಮಾಡಿ ಇದನ್ನು ಆಫ್ರಿಕಾದ ಸಾರ್ವಜನಿಕರ ಉಪಯೋಗಕ್ಕೆ ಏನು ಯೋಗಿಸುವ ಏರ್ಪಾಡು ಮಾಡಿದರು ಕ್ರಮಶಃ ಕಸ್ತೂರ್ಬಾರವರೂ ಗಾಂಧೀಜಿಯ ನಿರ್ಣಯದ ಸತ್ಯತೆಯನ್ನು ಕಂಡರು 'ನೀವೆ ಮಾಡಲಿಚ್ಛಿಸುವವರು ಸಾರ್ವಜನಿಕ ಉಡುಗರೆಯೇ ಆಗಲಿ, ನಿಧಿಯೇ ಆಗಲಿ, ಅದರಿಂದ ಒಂದು ತೊಟ್ಟು ಯನ್ನೂ ಪಟ್ಟಬಾರದು' ಎಂಬುದು ಅವರ ಅಭಿಮತ

* * *

೧೯೩೧ರಲ್ಲಿ ಪೋರ್ಟ್‌ಸ್ಮೌತ್ ಎಂ ಒಲ್ಲಿ ಸಸ್ಯಾಹಾರಿಗಳ ಸಮ್ಮೇಳನ ಒಂದು ಆಯಿತು ಆಗ ಗಾಂಧೀಜಿಯವರು ಲಂಡನ್‌ನಲ್ಲಿದ್ದರು ಸಮ್ಮೇಳನಕ್ಕೆ ಒಬ್ಬ ಮಿತ್ರರೂಡನೆ ಇವರೂ ಹೋದರು ಆವರು ಗಾಂಧೀಜಿಯವರನ್ನು ರಾತ್ರಿ ಉಳಿಯಲು ಒಂದು ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಊಟದ ನಂತರ ಮನೆಯ ಗೃಹಿಣಿ ಮಾತ್ರವರು 'ಇಸ್ಪೇಟ್' ಆಡಲು ಕುಳಿತರು ಆಟದ ಪಂಥೈತ ಮೊತ್ತವೂ ನಡೆಯುತ್ತಿತ್ತು ಕ್ರಮಶಃ ಇದು ಅಶ್ಲೀಲ ರೂಪು ಧಾರಣೆ ಮಾಡಿತು. ಗಾಂಧೀಜಿಯವರ ಸ್ನೇಹಿತರು ಇದರಲ್ಲಿ ನಿಪುಣರಿದ್ದರು ಗಾಂಧೀಜಿಯವರು ಈ ಮೋಸಗಳೆಲ್ಲ ಭಾಗತೆಗೆದು ಕೂಡರು. ಈ ವಿನೋದ ಮೊತ್ತು ಕ್ರಿಯೆಯ ಪರಿಹಿಡಿಯಿತು 'ಇಸ್ಪೇಟ್' ಒಂದಡ ಇಡಬಾಕಾಗಿ ಒಂತು ಇಸ್ಪೇಟಲ್ಲಿ ಲಿಸ್ಟ್' ಹಿತಕ ಹೃದಯದಲ್ಲಿ ದೃಷ ವಣಿ ಪ್ರತಿಧ್ವನಿಸಿಜಿಂದರು ಹೇಳಿದರು 'ನಿನು ಈ ಪಹಕಲಸ ಮಾಡುವವ? ನಿನಗ ಇಲ್ಲಿ ಕಲಸವಿಲ್ಲ ಹೋಗು ಇಲ್ಲಿಂದ' ಈ ಮಾತುಗಳಿಂದ ಗಾಂಧೀಜಿಗೆ ಪ್ರಜ್ಞೆ ಒಂತು ದರ್ಮದ ದಾರಿ ಹೂಳೆಯಿತ್ತು ತಾಯಿಗೆ ಕೊಟ್ಟ ಪ್ರತಿಜ್ಞೆ ನೆನಪಾಯಿತು ನಡುಗುತ್ತಾ ರವ್ಮ ಕೋಣೆಗೆ ಬಂದರು

* * *

ಗಾಂಧೀಜಿ ಹೈಸ್ಕೂಲಿಗೆ ಸೇರಿದ ಪ್ರಥಮ ವರ್ಷ ಶಾಲಾ ಇನ್ಸ್‌ಪೆಕ್ಟರು ಬಂದಿದ್ದರು ವಿದ್ಯಾರ್ಥಿಗಳಿಂದ ಉಕ್ತ ಲೇಖನ ಬರೆಸುತ್ತಿದ್ದರು ಅವರು ಕೂಟ್ಟ ಶಬ್ದಗಳಲ್ಲಿ 'ಕೆಟ್ಟಲ್' ಎಂಬುದೊಂದು ಗಾಂಧೀಜಿಯವರು ಅದನ್ನು ತಪ್ಪಾಗಿ ಬರೆದಿದ್ದರು ಇದನ್ನು ನೋಡಿದ ಅಧ್ಯಾಪಕರು ಗಾಂಧೀಜಿಯ ಕಾಲನ್ನು ಹೆಬ್ಬೆಟ್ಟಿನಿಂದ ಚಿವುಟಿ ಮುಂದಿರುವ ಬಾಲಕನು ಬರೆದುದನ್ನು ನೋಡಿ ಒರೆಯುವಂತೆ ಸಂಜ್ಞೆ ಮೂಲಕ ತಿಳಿಸಿದರು ಗಾಂಧೀಜಿಯವರಿಗೆ ಇದು ಒಪ್ಪಲಿಲ್ಲ ಎಲ್ಲ ಹುಡುಗರೂ ಸರಿಯಾಗಿ ಒರೆದಿದ್ದರು ಗಾಂಧೀಜಿಯವರದು ಮಾತ್ರ ತಪ್ಪು. ನಂತರ ಅಧ್ಯಾಪಕರು ಈ ವಿಚಾರವಾಗಿ ಅವರ ಮುಚ್ಚಾತ್ಮಕತನವನ್ನು ಹೇಳಿದರೆ ಆದರೆ ಅದರಿಂದ ಅವರ ನನ್ನಿನ ಮೇಲೆ ಯಾವ ಪ್ರಭಾವವೂ ಆಗಲಿಲ್ಲ ತನ್ನೊಬ್ಬರನ್ನು ನೋಡಿ ಬರೆದುಕೊಳ್ಳುವ ಆತ್ಮವಂಚನೆಯ ವೃತ್ತಿ ಅವರ ಮನಸ್ಸಿಗೆ ಸರಿದೊರಲಿಲ್ಲ

---


## ಜಾಗ ಮಾರಾಟಕ್ಕಿದೆ.

ಬೆಟ್ಟಕೇರಿ ಗ್ರಾಮದಲ್ಲಿ ಮತ್ತು ಕನ್ನಡ ಬೆಟ್ಟದಲ್ಲಿ ಸುಮಾರು 120 ಎಕರೆ ಉತ್ತಮ ಜಾಗ ಮಾರಾಟಕ್ಕಿದೆ ಖಾಯಸ್ದಾರರು ಈ ಶತ್ತಿಗೆ ಬರೆದರೆ ಆಲೋಚಿಸಲಾಗುವುದು

'X'

3-2 C/o ಮೇನೇಜರು.
'ಕೊಡಗು' ಮಡಿಕೇರಿ.

# ಪತ್ರವ್ಯವಹಾರಗಳು.

## ಸೋಮವಾರಪೇಟೆ ಶಾಲೆ.

ತಾ. 28-1-48 ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಮಕ್ಕಳ ತಂದೆ'ಯೆಂಬವರು ತಾ. 19-12-47 ರ 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ 'ಸೋಮವಾರಪೇಟೆ ಸ್ಕೂಲ್ ಡೇ'ಯೆಂಬ ಶಿರೋನಾಮೆಯ ಬಾತ್ಮಿಯ ಮೇಲೆ ಆಧಾರರಹಿತ ಟೀಕೆ ಮಾಡಿರುವರು.

ಅಯ್ಯಾ 'ಮಕ್ಕಳ ತಂದೆಯೇ' ನನ್ನ ಬಾತ್ಮಿಯಲ್ಲಿ ಹೈಸ್ಕೂಲ್ ಹಾಗೂ ಹೈ. ಎ. ಶಾಲೆಗಳಲ್ಲಿ ಭಿನ್ನತೆಯೇ ಪರ್ಪಡಿಸಿರುವುದಾಗಿ ಉಲ್ಲೇಖಿಸಿರುವಿರಿ. ಇನೆರಡು ಶಾಲೆಗಳು ನನ್ನ ಶಾಲೆಗಳಾಗಿರುವುದರಿಂದ ಇದಕ್ಕೆ ನನ್ನ ಬಾತ್ಮಿಯಲ್ಲಿ ಅವಕಾಶವೇ ಇಲ್ಲ. ಹಿಂದಿರುವ ಜನಾಂಗವು ಮುಂದೆ ಬಂದು ಮುಂದಿರುವ ಜನಾಂಗವನ್ನು ಅಧಿಕಾರದಿಂದ ಉರುಳಿಸದಿರಲು ಎಂದು ನನ್ನ ಬಾತ್ಮಿಯಲ್ಲಿರುವುದಾಗಿ ಬರೆದಿರುವಿರಿ. ಪಾಪ, ಮಕ್ಕಳ ತಂದೆಯೂದ ನಿಮಗೆ ದೃಷ್ಟಿ ಮಂದವಿರಬಹುದು! ಕನ್ನಡಿಯಿಟ್ಟು ಇನ್ನೊಮ್ಮೆ ನನ್ನ ಬಾತ್ಮಿಯನ್ನು ಓದಿದರೆ ಅದರಲ್ಲಿ 'ಅಧಿಕಾರ'ವೆಂಬ ಶಬ್ದವೇ ಇಲ್ಲವೆಂಬುದು ನಿಮಗೆ ಗೊತ್ತಾಗುವುದು. ಶಾಲಾ ಉತ್ಸವಕ್ಕೆ ಕರೆ ಸಲಿಲ್ಲವೆಂದು ನನ್ನ ಬಾತ್ಮಿಯಲ್ಲಿರುವುದಾಗಿ ಬರೆದಿರುವಿರಿ. ಆದರೆ ಸಂವಾದಕರು ನೀವಲ್ಲ ತಾನೆ? ಹಾಗಿದ್ದರೆ ಇಲ್ಲದ ಕಬ್ಬ 'ಕರೆಸಲಿಲ್ಲ'ವೆಂದು ಸೇರಿಸಿಯೇ ಬಿಡುತ್ತಿದ್ದಿರಿ!

ಸರಕಾರನವರು ಶಾಲೆಯ ವಿಷಯದಲ್ಲಿ ಸಾರ್ವಜನಿಕರಿಗಿರುವ ಅಸಮಾಧಾನವನ್ನು ಪರಿಹರಿಸಿದವ್ದಲ್ಲು ಶಾಲಾ ಉತ್ಸವದಲ್ಲಿ ಭಾಗವಹಿಸುವುದಿಲ್ಲವಾಗಿ ಹದಿನೈದು ದಿವಸಕ್ಕೆ ಮುಂಚಿತವಾಗಿ ತಿಳಿಸಿ, ಮಾಡಿದ್ದಲ್ಲದೆ ನಿಮ್ಮ ಹಾಗೆ ಪರದೆಯ ಹಿನ್ನೆಲೆಯಲ್ಲಿ ನಿಂತು ನಾಟ್ಯವಾಡಲಿಲ್ಲ. ಹೈ. ಎ. ಶಾಲೆಯ ಅಧಿಕಾರಿಗಳ ಮೇಲೆ ಪಿತೂರಿ ನಡೆಸಿಯೆಂದು ನಿಮ್ಮ ಆಡಂಬರದ ಬರವಣಿಗೆಯಲ್ಲಿ ಸೇರಿಸಿರುವಿರಿ. ನ್ಯಾಯವಾದ ಸಂಗತಿಗಳನ್ನು ಆಧಾರಸಮೇತ ಸರಕಾರದ ಮುಂದಿಟ್ಟದಕ್ಕೆ ನೀವು ಪಿತೂರಿಯೆಂದರೆ ನ್ಯಾಯಕ್ಕೂ ಸತ್ಯಕ್ಕೂ ಮತ್ತು ಪಿತೂರಿಗೂ ಇರುವ ತಾರತಮ್ಯವನ್ನು ತಿಳಿದುಕೊಳ್ಳುವಷ್ಟು ಪರಿಜ್ಞಾನ ನಿಮಗಿಲ್ಲವೆಂದರೆ ತಪ್ಪಾಗಲಾರದು.

ಹೈ. ಎ. ಶಾಲೆಯ ಹೆಡ್ಮಾಸ್ಟರವರು ಇಲ್ಲಿಗೆ ಬಂದದ್ದು ಮೂರನೆಯ ಸಾರಿಯೆಂದು ಹೇಳುವಿರಿ. ನಿಜ, ಇವರನ್ನು ಮೂರು ಸಾರಿ ಇಲ್ಲಿಗೆ ಕಳುಹಿಸಿರುವ ಗುಟ್ಟು 'ಮಕ್ಕಳ ತಂದೆ'ಯಾದ ನಿಮಗೆ ತಿಳಿಯದಿದ್ದರೆ ಮಕ್ಕಳ ಅಜ್ಞಾನಾದ ನನಗೆ ಕೆಲವು ಮಟ್ಟಿಗೆ ತಿಳಿದಿದೆ. ಇವರು ಮೊದಲು ಇಲ್ಲಿಗೆ ಡಿ. ಬಿ. ಶಾಲೆಯಿಂದ ಅಸಿಸ್ಟಾಂಟ್ ಮಾಸ್ಟರಾಗಿ ಬಂದು ಕಾರಣಾಂತರದಿಂದ ಆಗಿದ್ದ ಹೆಡ್ಮಾಸ್ಟರನ್ನು ಕೆಳಗೆ ತಳ್ಳಿಸಿ ತಾವು ಏರಿದ್ದು! ಅರುನೂರು ಹುಡುಗರಿಗೆ ಮೇಲ್ಚಿಟ್ಟು ವ್ಯಾಸಂಗಮಾಡುತ್ತಿರುವ ಯೂನ ಹೈ. ಎ. ಶಾಲೆಯಲ್ಲಿ ಎಲಿಮೆಂಟರಿ ಟ್ರೈನಿಂಗ್ ಆದ ಹೆಡ್ಮಾಸ್ಟರು ಇರುಪರೆಂದು ತೋರಿಸಿಕೊಡುವಿರಾ? ಇವರು ಬಂದ ನಂತರ ಶಾಲಾ ಅಭಿವೃದ್ಧಿಯಾಯಿತೆಂದು ಹೇಳುವಿರಿ. ಯಾವ ರೀತಿಯಲ್ಲಿ ಅಭಿವೃದ್ಧಿಯಾಗಿದೆಯೆಂದು ವಿವರಿಸಲು ಯಾಕೆ ಮರೆತಿರಿ? ಕಳೆದ ವರ್ಷ 3 ನೇ ಫಾರ್ಮಿನಲ್ಲಿ 48 ರಲ್ಲು ಬರೇ 18 ಹುಡುಗರು ಪಾಸಾಗಲು ಕಾರಣವೇನು? ಕಳೆದ ವರ್ಷ ಚೀಫ್ ಕಮಿಷನರವರು ಶಾಲೆಯನ್ನು ಸಂದರ್ಶಿಸಿದಾಗ ಶಾಲೆಯ ಕೆಲಸವು ತೃಪ್ತಿಕರವಲ್ಲವಾದ್ದರಿಂದ ಹೈಸ್ಕೂಲ್ ಹೆಡ್ಮಾಸ್ಟರವರ ಸ್ವಾಧೀನಕ್ಕೆ ಬಿಡುವುದುತ್ಕಮವೆಂದು ಪರಿಶೀಲನಾ ಪುಸ್ತಕದಲ್ಲಿ ಬರೆದಿರುವುದು ನಿಮಗೆ ವೇದ್ಯವಿದೆಯೇ? ಗುಟ್ಟು ಬೇರೆಯಿರುವಾಗ ಮುಚ್ಚು, ಮರೆಮಾಡಲು ಯತ್ನಿಸುವೀರೇಕೆ? ಕಳೆದ ವರ್ಷ ಶಾಲೆಯಲ್ಲಿ ಸ್ಥಳದ ಅಭಾವ ವಿದ್ದುದರಿಂದ ಚೀಫ್ ಕಮಿಷನರ ಹುಕುಂ ಮೇರೆ ಒಂದು ಸೆಡ್ಡ್ ಕಟ್ಟಿಸಲು ಸಾರ್ವಜನಿಕರ 300 ರೂಪಾಯಿ ಮತ್ತು 600 ಕಂತೆ ಹುಲ್ಲು ಕೊಟ್ಟದ್ದನ್ನು ಮನಸ್ಸೋಚ್ಛೆ ಖರ್ಚುಮಾಡಿ ಸೆಡ್ ಪೂರ್ತಿ ಕಟ್ಟಿಸದೆಯೂ ಕೇಳದಾಗ್ಯೂಕೂಡ ಖರ್ಚಿನ ತಪಶೀಲ್ ಪಟ್ಟಿಯನ್ನು ಕೊಡದೆಯೂ ಸೌದೆಕೊಟ್ಟಿಗೆಗಿಂತಲೂ ಕಡೆಯಾಗಿ ಕಟ್ಟಿಸಿದ ಪೆಡ್ಡಿನಲ್ಲಿ ಕ್ಲಾಸ್ ಇಡಲು ಆಯೋಗ್ಯವೆಂದು ಸರಕಾರದವರು ತೀರ್ಮಾನಿಸಿ, ಕೊಡಲೊಪ್ಪಿದ 100 ರೂಪಾಯಿಗಳನ್ನು ಇಲ್ಲದಂತೆಯೂ ಸಾರ್ವಜನಿಕರ ಹಣಕ್ಕೆ ಪ್ರತಿಫಲವಿಲ್ಲದಂತೆಯೂ ಮಾಡಿದ್ದು ಶಾಲಾ ಅಭಿವೃದ್ಧಿ ಕೆಲಸವೆನ್ನುವಿರಾ?

ಹೈಸ್ಕೂಲಾದ ನಂತರ ವಾತಾವರಣವು ಕೆಡಿಡಿದೆಯೆನ್ನುವಿರಿ. ಇದು ನಿಮ್ಮ ಸ್ವಪ್ನದ ಕಲ್ಪನೆ. ನಿಮಗೇಕೆ ಹೈಸ್ಕೂಲಿನ ಮೇಲೆ ದ್ವೇಷಾಸೂಯೆ? ಹೈಸ್ಕೂಲ್ ಸ್ಥಾಪನೆಗೆ ಅಡ್ಡಿ ಆತಂಕಗಳನ್ನೊಡ್ಡಿದವರ ಸೈಕೆ ನೀವೂ ಒಬ್ಬರಿರಬಹುದು. ಈಗ ವೈಕ್ತವಾಯಿತು!

ಅಧಿಕಾರಿಗಳೊಡನೆ ಗುಪ್ತ ಭೇಟಿ ನಡೆಸಿ ಅಧಿಕಾರಿಗಳ ಮನಸ್ಸನ್ನು ಕೆಡಿಸಿ ವರ್ಗ ಮಾಡಿಸಲು ಪ್ರಯತ್ನಪಟ್ಟಿರುವುದಾಗಿ ಹೇಳುವಿರಿ. ಗುಪ್ತ ಭೇಟಿಯೆಂದರೆ ಅಧಿಕಾರಿಗಳಿಗೆ ಲಂಚಕೊಟ್ಟು ಕತ್ತಲೆಕೋಣೆಯಲ್ಲಿ ಸಿಸುಮಾತಾಡಿರುವರೆಂದು ತಿಳಿದಿದ್ದರೆ ಅದು ನಿಮ್ಮ ಅಜ್ಞಾನದ ಕಲ್ಪನೆಯೇ ಸರಿ. ಅಧಿಕಾರಿಗಳು ಜನರ ಮಾತಿಗೆ ಮರುಳಾಗಿ ಮನಸ್ಸನ್ನು ಕೆಡಿಸಿಕೊಳ್ಳಲು ನಿಮ್ಮಷ್ಟು ಅವಿವೇಕಿಗಳಲ್ಲವೆಂದರೆ ಅತಿಶಯೋಕ್ತಿಯೂಗಲಾರದು. ಮಾಜಿ ಎಂ. ಎಲ್. ಸಿ. ಶ್ರೀ. ಚಾಂಪ್ಲು ಶಾಳಪ್ಪನವರ ಶಾಲದಿಂದಲೂ ಪದೇ ಪದೇ ಈ ಶಾಲೆಗೆ ಒಬ್ಬ ಎಲ್. ಟಿ. ಪಾಸಾದವರನ್ನು ಹೆಡ್ಮಾಸ್ಟರಾಗಿ ನೇಮಕಮಾಡಬೇಕಾಗಿ ಕೌನ್ಸಿಲಿನ ಮೂಲಕ ಸರಕಾರದ ಅವಗಾಹನೆಗೆ ತರುತ್ತಿರುವಾಗ ಎಲಿಮೆಂಟರಿ ತರಬೇತಾದವರನ್ನು ಎತ್ತಿಹಿಡಿಯುತ್ತಿರುವ ನೀವು 'ಮಕ್ಕಳ ತಂದೆ'ಯೇ?

ಬಾತ್ಮಿಯಲ್ಲಿ ಶಾಲೆಗೆ ಸಂಬಂಧಪಟ್ಟ ಅನೇಕ ವಿಷಯಗಳು ಅಡಕವಾಗಿರುವುದರಿಂದ ಶಾಲೆಯಲ್ಲಿ ಕೆಲಸ ಮಾಡುವವರು ಬರೆದಿರಬೇಕು. ಅಥವಾ ಇದರಲ್ಲಿ ಅವರ ಕೈವಾಡವಿರಬೇಕು ಎಂದು ಬರೆದಿರುವಿರಿ. ಕುರುಡನು ಲೋಕವೆಲ್ಲ ಕತ್ತಲೆಯೆಂದು ತಿಳಿಯುವಂತೆ ನಿಮಗೆ ಶಾಲೆಯಲ್ಲಿ ನಡೆಯುತ್ತಿರುವ ಸಂಗತಿ ತಿಳಿಯದಿದ್ದ ಯೂ ತಿಳಿದುಕೊಳ್ಳುವ ಶಕ್ತಿಯಿಲ್ಲದ ಮಾತ್ರಕ್ಕೆ ಬೇರೆಯವರು ತನ್ನಂತೆಯೆಂದು ತಿಳಿದು ಅರೋಪಗಳನ್ನು ಯಾವುದೂ ತಿಳಿಯದ ಬಡ ಉಪಾಧ್ಯಾಯರ ಮೇಲೆ ಹಾಕುವುದು ನಿಮಗೆ ಭೂಷಣವೆನಿಸದು. ಇದರಿಂದಾಗಿ ಶಾಲೆಯಲ್ಲಿ ಪಾರ್ಟಿಬಂಗಡಗಳುಂಟೆಂದು ನಿಮ್ಮ ಸಮರ್ಥನೆಯನ್ನಿತ್ತಿರುವಿರಿ. 'ಶಾಲೆಯಲ್ಲಿರುವ ಕೆಲವರು ಕರಕುರಿಗಳಾದರೆ' ಎಂದಿರುವಿರಿ, ಸರಿ. ಕುರಿ ಮೇಯಿಸುವ ಕುರುಬನು ನ್ಯಾಯತೀರ್ಮತೆಯನ್ನು ತೋರಿ ಎಲ್ಲಾ ಕುರಿಗಳನ್ನು ಶತ್ರು ಮೂನರೀತಿಯಿಂದ ಕಾಣದೆ ಕುರುಬನೇ ತೋಳಿನಾಗಿ ಬಾರ್ಪಟ್ಟು ಕೆಲವು ಕುರಿಗಳನ್ನು ಕೊಲ್ಲಲು ಯತ್ನಿಸಿದರೆ ಅಂತಹ ಕುರಿಗಳ ಪಾಡೇನು? ಕುರುಬನ ತಪ್ಪಿಗೆ ಕುರಿಗಳಗಲ್ಲ ದಂಡನೆ, ಶಿಸ್ತಿನ ಕುರುಬನನ್ನು ನೇಮಿಸುವುದೇ ಬುದ್ದಿವಂತಿಕೆ.

ಅಯ್ಯಾ ಮಕ್ಕಳ ತಂದೆಯವರೇ, ನಿಮ್ಮ ಸರಿಯಾದ ಹೆಸರನ್ನು ತಿಳಿಸಿದರೆ ಶಾಲೆಯ ಅನೇಕ ಸಂಗತಿಗಳನ್ನು ನಿಮ್ಮ ತಿಳುವಳಿಕೆಗೆ ತರಬಹುದು. ಇನ್ನಾದರೂ ಅಪಪ್ರಚಾರಕ್ಕೆ ಕೈಹಾಕದೆ ಶಾಲೆಯ ಏಳ್ಗೆಗೆ ಶ್ರಮವಹಿಸಿ ವಿದ್ಯೆಯಲ್ಲಿ ಹಿಂದಿರುವ ನಾಡನ್ನು ಮುಂದೆ ತರಲು ಪ್ರಯತ್ನಪಡಿ. ನಿಮ್ಮಿಂದಾಗದ ಸಕ್ಷ ಪ್ರಯತ್ನಪಡುವವರ ದಾರಿಗೆ ಮುಳ್ಳುಹಾಕಬೇಡಿ.

ಶಾಲೆಯ ಹಿತಚಿಂತಕ.

## ನಿರಾಶ್ರಿತರು.

ಈ ನಾಮಧೇಯವನ್ನು ಧರಿಸಿಕೊಂಡು ಕೆಲವು ಸ್ತ್ರೀಯರು ನಮ್ಮ ದೇಶದ ಪಟ್ಟಣಗಳಲ್ಲಿ ತಿರುಗಾಡಿ ಊರಿನ ಕಡೆ ಕಾಲು ಹಾಕಿರುವರು. ಮಾತಾಡುವಾಗ ನಾಲ್ಕು ಅಕ್ಷರ ಇಂಗ್ಲಿಷಿನಲ್ಲಿ ಆರಂಭಿಸಿ ಆ ಮೇಲೆ ಮುರುಕು ಹಿಂದುಸ್ಥಾನಿಯಲ್ಲಿ ಮಾತಾಡುವರು. ಅವರು ಅಧಿಕೃತ 'ನಿರಾಶ್ರಿತರು' ಅಲ್ಲವೆಂದು ನಾನು ತಿಳಿಯುವೆನು. ಕೆಲವು ವರುಷಗಳಿಗೆ ಹಿಂದೆ ಕ್ಷಾಮ ರಾಜ್ಯದಿಂದ ಬಂದವರೆಂದು ಊರೂರು ತಿರುಗುತ್ತಿದ್ದ ಮಹಾರಾಷ್ಟ್ರದೇಶದವರೆಂದು ನನ್ನ ಭಾವನೆ. ಇವರು ಹಿಂದೂ ಮನೆಗಳಲ್ಲಿ ಹೋಗಿ ಮುಸಲ್ಮಾನರನ್ನೂ ದೂಷಿಸಿ, ಮುಸಲ್ಮಾನರ ಮನೆಗಳಲ್ಲಿ ಹೋಗಿ ಹಿಂದುಗಳನ್ನು ದೂಷಿಸಿ ಅನರ್ಥಮಾಡುತ್ತಿರುವರು.

ಈ ರೀತಿ ಜನರು ಸ್ವಶಂತ್ರವಾಗಿ ಭಿಕ್ಷೆ ಎತ್ತ ಬಿಟ್ಟರೆ ಕೊಲೆ ದರೋಡೆಗಳು ಆಗುವದೆಂಬುದಕ್ಕೆ ಸಂಶಯವಿಲ್ಲ. ಇದಕ್ಕೆ ಸಮ್ಮಂಧಪಟ್ಟ ಅಧಿಕಾರಿಗಳು ತಕ್ಕ ವ್ಯವಸ್ಥೆ ಮಾಡಬೇಕೆಂದು ವಿನಯ ಪೂರ್ವಕವಾಗಿ ಕೋರುವೆನು.

ಸರಸ್ವತಿ.

## ರೈತನ ಕಷ್ಟ.

ವರ್ಷಂಪ್ರತಿಯೂ ಪರದೇಶದ ಜಾನುವಾರುಗಳನ್ನು ನಂಬಿ ನಿಂತಿರುವ ರೈತರಿಗೆ ಈ ಗಇನ್ನೊಂದುಕಡೆ ಪಟ್ಟು ಬೀಳತೊಡಗಿದೆ. ಕಳೆದ ಯುದ್ಧಕ್ಕೆ ಹೋಗಿ ನಿವೃತ್ತರಾಗಿ ಬಂದ ಯೋಧರಿಗೆ ಸರಕಾರದಿಂದ ಗಂ ಏಕೈ ಜಮೀನು ಕೊಡುವ ಕಾನೂನು ಮೇರೆ ಈಗ ಕೊಡಗಿನ ಕೆಲವು ಭಾಗಗಳಲ್ಲಿ ಸರ್ವೆಯಾಗುತ್ತಿದೆ. ಇದು ಸಹಜವಾಗಿ ಕೊಡಬೇಕಾದದ್ದೆ! ಹಾಗೆಯೇ ದೇಶ ಪ್ರೇಮದಿಂದ ದೇಶದ ಹಣ ತೆಗೆದುಕೊಳ್ಳದೆ ಸ್ವಂತ ಖರ್ಚಿನಿಂದ ಎಲ್ಲವನ್ನು ಕಳಕೊಂಡು ಹೋರಾಡಿದ ಕಾಂಗ್ರೆಸು ಯೋಧರಿಗೂ ಸಲ್ಲ ತಕ್ಕದ್ದು! ಇವೆರಡನ್ನು ಕೊಡುವಾಗ ಹಸುಗಳನ್ನು ಕಡಿದು ಹುಲಿಗಳಿಗೆ ಮೇವಿಕ್ಕಿದಂತೆ ಮಾಡಬಾರದು. ರೈತರಾದ ನಮ್ಮ ದನಗಳಿಗೆ ಆಶ್ರಯ ಕೊಡುವ, ಊರಿನ ಮಧ್ಯೆ ದನ ಮೇಯುತ್ತಿರುವ ಸೈಸಾರಿ ಏರೊ, ಹೆಚ್ಚೋ ಅಥವಾ ಇಪ್ಪತ್ತೊ ಏಕರೆ ಇರುವ ಜಾಗವನ್ನು ರೈತರ ಹವಾಲಮ್ಮ ಕೇಳದೆ ಅವರಿಗೆ ಕೊಟ್ಟು ರೈತಾವಳಿಯ ಗೋಕಾಯಿಗಳಿಗೆ ಇನ್ನೆಷ್ಟು ವಿಪತ್ತನ್ನು ತಂದೊಡ್ಡ ಬಾರದಾಗಿ ನನ್ನ ಕೋರಿಕೆ.

'ತೊಂದರೆಗೀಡಾದ ರೈತ'

## ಪೊನ್ನಂಪೇಟೆ.

ಪೊನ್ನಂಪೇಟೆ ಗ್ರಾಮ ಪಂಚಾಯ್ತಿ ಚುನಾವಣೆಯಾದನಂತರ ಗ್ರಾಮ ಪಂಚಾಯ್ತಿ ಏರ್ಪಡೆಗಳಿಗೆ ಮಹತ್ತರವಾದ ಬದಲಾವಣೆಯಾಗಿದೆ. ರಾತ್ರಿಬೀದಿಯಲ್ಲು ಪಟ್ಟಣಿಗರ ಉಪಯೋಗಕ್ಕಾಗಿ ಇಡುವ ದೀಪಗಳು ಮಿಲ್ಟ್ರಿ ಪೇರಿ ಮಾಡಲು ಉಪಯೋಗವಾಗುತ್ತಿವೆಯೋ ಎಂಬಂತೆ ಕಾಣೆಯೊಗುತ್ತಿವೆ. ಕಳೆದ ತಿಂಗಳಿಲ್ಲಿ ಎಣ್ಣೆ ಮೂರಾಟದವರಿಂದ ನಾಲ್ಕು ಟಿನ್ ಎಣ್ಣೆ ಕೊಂಡುಕೊಂಡಿರುವುದು ನನಗೆ ಗೊತ್ತಿರುವದಾದರೂ ಆ ಕೃಷ್ಣ ಪಕ್ಷದಲ್ಲು ಎಣ್ಣೆಯಿಲ್ಲವೆಂದು ದೀಪ ಒಚ್ಚದೆ ಬೀದಿ ಕಗ್ಗತ್ತಲಾಗಿದ್ದುದು ಪಟ್ಟಣಿಗರ ದುರ್ದೈವವಲ್ಲದೆ ಬೇರೇನು? ಪಂಚಾಯ್ತಿ ಆಫೀಸಿನ ಗುಮಾಸ್ತರು ಈ ವರೆಗೆ ಪ್ರತಿ ವರ್ಷ ರಜಪಡೆದು ಬೇಸಿಗೆಯಲ್ಲು ಭತ್ತ ವ್ಯಾಪಾರ ಮಾಡುತ್ತಿದ್ದರು. ಈ ವರುಷ ಹೊಸ ಅಧ್ಯಕ್ಷರ ಕೃಪೆಯಿಂದಲೋ ಏನೋ ರಜಪಡೆಯದೇನೆ ಮಾಡುವಂತಾಗಿದೆ. ಇನ್ನಾದರೂ ವೇಜವಾಬ್ದಾರಿಯಿಂದ ವರ್ತಿಸದೆ ಶಿಸ್ತಿನಿಂದ ಊರಿನ ಕಾರುಭಾರುಗಳಲ್ಲಿ ಕೊಂಚ ನಿಗಾ ತೆಗೆದುಕೊಂಡು ಊರವರ ಶೋದರೆಯನ್ನು ಹೋಗಲಾಡಿಸಲು ಪ್ರಯತ್ನ ಮಾಡಬೇಕೆಂದು ಕೋರಿಕೆ. 'ಪಟ್ಟಣಿಗ'

## ಸುಂಟಿಕೊಪ್ಪ.

ಸುಂಟಿಕೊಪ್ಪಕ್ಕಾಗಿ ಮಡಿಕೇರಿಗೆ ಎರಡು ಮೂರು ಬಸ್ಸುಗಳು ಬರುತ್ತವೆ. ಈ ಮೂರು ಬಸ್ಸುಗಳಲ್ಲಿ ಹೊರತ್ತು ಸೀಟು ಸಿಕ್ಕದೆ ಸುಂಟಿಕೊಪ್ಪದ ಜನರು ಪಡುವ ಕಷ್ಟವನ್ನು ದೇವರೇ ಪರಿಹರಿಸಬೇಕು. ಬೆಳಿಗೆ 7 ಗಂಟೆಗೆ ಬಸ್ಸು ಅಳ್ಳಿಸಿಗೆ ಬಂ

ದು ಕೂತವರು 12 ಗಂಟೆಯವರೆಗೆ ಇದ್ದು ಮರಳಿ ನಿರಾಶರಾಗಿ ಮನೆಗೆ ತೆರಳುತ್ತಾರೆ. ಈ ಕಷ್ಟವನ್ನು ನಮ್ಮ ಸರಕಾರದವರು ನೋಡದೆ ಹೋದರೆ ನಾವು ಇನ್ನು ಯಾರಿಗೆ ಪುಕಾರು ಮಾಡುವುದು? ಕಳೆದ ವರುಷ ಮೇ ತಿಂಗಳಲ್ಲಿ ಪೋಲಿಸ್ ಸುಪರಿಂಟೆಂಡೆಂಟರವರು ಸುಂಟಿಕೊಪ್ಪಕ್ಕೆ ಬಂದಿದ್ದಾಗ ಬಸ್ಸಿಗೆ ಕಾದಿದ್ದ ಜನರು ತಮ್ಮ ಗೋಳನ್ನು ಆರಿಕೆ ಪೂಡಿಕೊಂಡರು. ಕದ್ರಿ ಸಂಗ್ತಿ ಕಣ್ಣಾರೆ ಕಂಡು ಅವರು ಅದಿಕಾವೇರಿ ಬಸ್ಸೊಂದು ನಡಿಕೇರಿಯಿಂದ ಸುಂಟಿಕೊಪ್ಪದವರೆಗೆ ಹೋಗಿ ಬರುವಂತೆ ಹುಕುಂ ಮಾಡಿದ್ದರು. ಈಗ 3, 4 ತಿಂಗಳಿಂದ ಆ ಬಸ್ಸೂ ಬರುವುದಿಲ್ಲ. ಕಾಯಿಲೆಯವರು, ಹೆಂಗಸರು ಮತ್ತು ಮಕ್ಕಳು ಪಡುವ ಕಷ್ಟ ಹೇಳತೀರದು. ಆದ್ದರಿಂದ ನಮ್ಮ ಮೇಲೆ ಕರುಣೆ ಇಟ್ಟು ಸುಂಟಿಕೊಪ್ಪಕ್ಕೆ ಒಂದು ಬಸ್ಸಿನ ವ್ಯವಸ್ಥೆ ಮಾಡಬೇಕಾಗಿ ಸರಕಾರದವರಲ್ಲಿ ವಿನಂತಿ.

'ಪ್ರಯಾಣಿಕ'

## ಜುನಾಗಡದ ರೆಫರೆಂಡಂ.

ಜುನಾಗಡದಲ್ಲಿ ನಡೆದ 'ರೆಫರೆಂಡಂ' ಫಲಿತಾಂಶ ಹೊರಬಿದ್ದಿದೆ. ಜುನಘಡ ಸಂಸ್ಥಾನ ಇಂಡಿಯನ್ ಯುನಿಯನ್ನಿಗೆ ಸೇರಬೇಕೆಂದು ಅಲ್ಲಿಯ ಜನ ತಮ್ಮ ಅಭಿಪ್ರಾಯವನ್ನು ನ್ಯಕ್ತಪಡಿಸಿದ್ದಾರೆ. ಈ 'ರೆಫರೆಂಡಂ' (ಜನಾಭಿಪ್ರಾಯ ಸಂಗ್ರಹ) ಪ್ರಕಾರ ಇಂಡಿಯನ್ ಯೂನಿಯನ್‌ಗೆ ತಮ್ಮ ಸಂಸ್ಥಾನ ಸೇರಬೇಕೆಂದು ೧೯೫,೭೭೯ ಜನರೂ, ಪಾಕಿಸ್ತಾನಕ್ಕೆ ಸೇರಬೇಕೆಂದು ೯೧ ಜನರೂ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಪ್ರತಿಯೊಂದು ಪೋಲಿಂಗ್ ಬೂತಿನ ಮೇಲ್ಪಿಚಾರಣೆಯನ್ನು ನೋಡಿಕೊಳ್ಳಲು ಹಿಂದುಗಳು ಮತ್ತು ಮುಸ್ಲಿಮರ ಸಮಾಯುಕ್ತ ಸಮಿತಿಗಳು ರಚಿತವಾಗಿದ್ದವು ಮತದಾನವು ಬಹು ರಹಸ್ಯವಾಗಿ ನಡೆಯಿತೆಂಬುದೆಲ್ಲದೆ ಎಲ್ಲರಿಗೂ ಮತದಾನದ ಸಂಪೂರ್ಣ ಅಧಿಕಾರ ಕೊಡಲಾಗಿತ್ತು.

## ಹೊಸ ವಿಮಾನ ನಿಲ್ದಾಣಗಳು.

ಭಾರತದಲ್ಲಿ ಇರುವ ವಿಮಾನ ನಿಲ್ದಾಣಗಳ ಬಗ್ಗೆಯ ಒಂದು ಪ್ರಶ್ನೆಗೆ ಕಮ್ಯೂನಿಕೇಷನ್ ಖಾತೆಯ ರಾಜ್ಯ ಸಚಿವರಾದ ರಾಜಕುಮಾರಿ ಅಮೃತ್ ಕೌರ್‌ರವರು ಈ ಕೆಳಕಂಡಂತೆ ಉತ್ತರ ಕೊಟ್ಟಿದ್ದಾರೆ. ಭಾರತದಲ್ಲಿ ಈಗಾಗಲೇ ಮೂರು ಭಾರಿ ವಿಮಾನ ನಿಲ್ದಾಣಗಳಿವೆ; ಇವು ಮೂರು ಮೇಲ್ದರ್ಜೆ ವಿಮಾನ ನಿಲ್ದಾಣಗಳು. ಅಂತರಾಷ್ಟ್ರೀಯ ಮಟ್ಟಕ್ಕೆ ಸೇರಿದುವು ಇನ್ನು ೬ ಹಿರಿಯ ವಿಮಾನ ನಿಲ್ದಾಣಗಳು ೨೦ ಸಣ್ಣಪ್ರಮಾಣದ ವಿಮಾನ ನಿಲ್ದಾಣಗಳು, ಅಲ್ಲದೆ ಇನ್ನೂ ಅನೇಕ 'ಲ್ಯಾಂಡಿಂಗ್ ಸ್ಟ್ರಿಪ್ಸ್' ಇವೆ ಇತ್ತೀಚೆ ಅಖಿಲದೇಶಗಳ ಹೊಸ ನಿವಿಲ್ ವಿಮಾನ ನಿಲ್ದಾಣಗಳನ್ನು ನಿರ್ಮಿಸಬೇಕೆಂಬ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಜಬ್ಬಲ್ಪೂರ್, ಅಲಿಪುರ್, ಬರಾಮ್‌ಪುರ, ಕಲ್ಲಿಕೋಟೆ, ಕಡಲೂರು, ಡೆರಾಡೂನ್, ಹುಬ್ಬಳ್ಳಿ, ಮಂಗಳೂರು, ನೆಲ್ಲೂರು, ಉದಕಮಂಡಲ, ಸೇಲಂ, ರತ್ನಗಿರಿ, ಸೂರತ್, ಸೌಗರ್-ಈ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುವುದು ಎಂದೂ ಸಚಿವ ರಾಜಕುಮಾರಿ ಅಮೃತ್ ಕೌರ್‌ರವರು ತಿಳಿಸಿದರು.

## ಶಾಂತಿ ಸಂದೇಶ.

(ಶ್ರೀ ಕೆ. ಎಂ. ಮುನ್ಷಿಯವರ ಕವನ)

ದೇವ ಪಿಪಾಸಿಕೆ ಕಾಶಿ
ಬಡವರ ದೇವ ಕಾಶಿಕ ಸೇವೆ
ಎಂಬುದು ಜೈನಿಕ ಗಾಸಿಜಿಯ ಪದ ।

ಸತ್ಯದ ಸೂತ್ರದೆ ಅತಿಥಿಕ ಪೂಜೆ
ಅಹಿಂಸಾ ಪಥದಲಿ ಪರಮೋಧರ್ಮ ।
ರಾಷ್ಟ್ರದ ಸೇವೆಯೆ ನಿಜವಿಕ ಕರ್ಮ ।
ಬಡಜನತೆಯಿದ್ದಾರೆ ಬಾಪಿಕ ವ್ಯಾಧಿಯೆ ಬೀಜ

ಶಾಂತಿ ಶಾಂತಿಯೆಲ್ಲಿ ಕ್ರಾಂತಿಯು ಬೀಳ್
ಇಹಿಕಾರ್ಥ ನಿಶ್ಕಾಮನ ತ್ಯಾಗ
ಇಂದ್ರಿಯಾಣಂ ಜಯಸಿದ ಬೈರಾಗ
ಸ್ವತಂತ್ರ ಸಮರದ ಅಧಿನಾಯಕ ನೇತ

ಅಲ್ಲಾ ಕೃಷ್ಣ ಬುದ್ಧ ಏಸು
ಒಬ್ಬನೆ ಸಾರಿದ ತೋರಿದ ಮಾರ್ಗ
ಈ ಯುಗಪುರುಷ ಪಥದಪಥಸ್ಥ
ಅಂತೆಯ್ದುಕು ಕೀರ್ತಿಯಸಾಂತ ಜೀವ ।

ಸತ್ಯ ಸಖನೆ ದಯ ಮೂರ್ತಿ ಗಾಂಧಿ ।
ಅಹಿಂಸೆ ಶಾಂತಿ ಸ್ವೇಚ್ಛಾಸಂಜ್ಞಿ ಗಾಂಧಿ ।
ನೀತಿ ನಿಯಮದಾ ನಿಮಿತ್ತ ಗಾಂಧಿ
ನ್ಯಾಯ ನಿಷ್ಠಾ ಸರ್ವಜ್ಞ ಗಾಂಧಿಗೆ ಜೀವ ।

ಭಾರತ ಖಂಡಕ ಮುಕ್ತಿಯ ಗಾಂಧಿ ।
ಜಕ್ಕಮಮ್ಮ ಸಂತೋಷಿಸಿ ಗಾಂಧಿ ।
ಹಿಂಸೆಗೆ ಬಲ್ಯಾದಾದ ಹರಿ ಗಾಂಧಿ
ಗಾಂಧಿಗಾಂಧಿ ಸುಯಂ ಜಗದಧಿವಂದ್ಯಗೆ ಜೀವ ।

ಸತ್ಯಂದೇವ ಸಂಜೀವನಿ ।
ನಿರತನ ಪೃತಿ ಸುಜಾತಕೆಯು ।
ನಿಶ್ಚಿಂತೆಗೆ ಭಯ ಇಲ್ಲದೆಲ್ಲೆ
ಸಾಶ್ವೆಯ ಪಾಪ ಮಾಗುವಿದ ಭೂಮಿ ಜೀವ ।

ಅನುಪಮ ಗಾಯಂ ಜಗತ್ಪ್ರೇರಿಯಂತು ।
ಯುಗಪುರುಷಗೆ ಕಂಬನಿ ತುಯಿತು ।
ಜಗವುಳಿಗುವುದು ಪ ಯಾವಂಪ್ರಿಯಂ ।
ಶೋಕಾಕಾಗಿರಿ ಸಕಲಿಯ ನಿಮ್ಮೆ ಜೀವ ।

## ರಾಷ್ಟ್ರಕ್ಕೆ ಬೆಳಕು ತೋರಿರಿ.

ಅಧ್ಯಾತ್ಮ ಗುರುಗಳಾದ ಡಾ. ಭಗವಾನ್‌ದಾಸ್, ಶ್ರೀ ಅರವಿಂದಘೋಷ್ ಮತ್ತು ರಮಣ ಮಹರ್ಷಿ ಇವರನ್ನು ಕುರಿತು-ಮಹಾತ್ಮ ಗಾಂಧಿಯವರಿಲ್ಲದ ಈ ದುರ್ದಿನಗಳಲ್ಲಿ ತಾವಾದರೂ ಈ ರಾಷ್ಟ್ರಕ್ಕೆ ಬೆಳಕು ತೋರಬೇಕೆಂದು ಶ್ರೀ ಜಯಪ್ರಕಾಶ್ ನಾರಾಯಣರವರು ತಿಳಿಸಿದ್ದಾರೆ.

## "ಗ್ರೇಂಡ್ ಓಪನಿಂಗ್"

ಇದೇ ತಾರೀಕು 6-2-48 ರಲ್ಲು ವೀರರಾಜನೇಟೆ ದೊಡ್ಡಟ್ಟಿ ಚೌಕದ ಬಳಿ ಹೊಸದಾಗಿ ಒಂದು ಅಂಗಡಿಯನ್ನು ತೆರೆದಿರುತ್ತೇನೆ. ಈ ಅಂಗಡಿಯಲ್ಲಿ ಹೆಚ್ಚು ಬಾಳಿಕೆ ಬರಬಹುದಾದ ಕಟ್ಟೇರಿ ಮತ್ತು ಸಾದರಕ್ಕೆ ವಸ್ತ್ರಗಳು ಕನ್ನಿ ದರದಲ್ಲು ದೊರೆಯುತ್ತವೆ. ದಯವಿಟ್ಟು ಒಂದಾವೃತ್ತಿ ಬಂದು ಪರೀಕ್ಷಿಸಿದಲ್ಲು ತಿಳಿಯಬಹುದು.

ಸೆಸರ್ ಮನ್ನಾ ಸ್ಟೋರ್ಸ್,
4-2 ವೀರರಾಜನೇಟೆ.

## ನೋಟೀಸು.

ಬೆಂತುಗ ಮಜಲ್ಲಿರುವ ಗುಜ್ಜೆಹಿಳ್ಳು ಖಾತೆ ರಾಮೈಯ್ಯ ಭಟ್ಟರವರ ಮಗ ಕೃಷ್ಣಯ್ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಈ ಮೇಲ್ಕಂಡ ರಾಮೈಯ್ಯ ಭಟ್ಟರ ಸ್ವತ್ತುಗಳಾದ ಭೂಮಿ ಮತ್ತು ಹಂಚು ಹಾಕಿದ ಮನೆಯನ್ನು ನನ್ನ ಅಣ್ಣ ಗಣಪೈಯ್ಯನು ಪರಭಾರೆ ಮಾಡುವುದಾಗಿ ತಿಳಿಯಬಂತ್ತೇನೆ ಯಾರಾದರು ಈ ಮೇಲ್ಕಂಡ ಸೊತ್ತುಗಳನ್ನು ಗಣಪೈಯ್ಯನಿಂದ ಗಿ ವಿ. ಭೋಗ್ಯ ಕಯಸಾಧನ ಪೈಕೆ ಬರೆಸಿಕೊಂಡರೆ ನಿಂಧುವಾಗತಕ್ಕದ್ದಲ್ಲ ಎಂಬುದಾಗಿ ಈ ಮೂಲಕ ತಿಳಿಯಪಡಿಸೋಕಾಗಿದೆ.

ಬೆಂತುಗ್ಗಾವ್ ಜಿ. ಆರ್ ಕೃಷ್ಣಯ್ಯ.
27-2-48

## ಬೇಕಾಗಿದೆ.

ಮೀದು ಬರಹ ಗೊತ್ತಿರುವವರೆಗೆ ಮಿಲಿಟರಿಯಲ್ಲಿ ನಾನಾರೀತಿಯ ಟೆಕ್ನಿಕಲ್ ಟ್ರೇನಿಂಗಿಗೂ ಮತ್ತು ಇನ್‌ಫೆಂಟ್ರಿಗೂ ಸೇರಲು ಇರಾದೆ ಇರುವವರು ಮ. ರಾ ಶ್ರೀ ಎ. ಎ ಮಂದಣ್ಣನವರನ್ನು ಈ ಕೆಳಗಿನ ಸ್ಥಳಗಳಲ್ಲಿನ ಓ. ಟಿ. ಗಳಲ್ಲಿ ನಮೂದಿಸಿರುತಾರೀಕುಗಳಲ್ಲಿ ನೇರಾಗಿ ವಿಚಾರಣೆಗೆ ತಿಳಿದುಕೊಳ್ಳಬಹುದು.

| | |
|---|---|
| ಭಾನುವಾರದಿಂದ ಮುಂದೆ ತಿಂಗಳು | ರಲ್ಲಿ |
| ಸೋಮವಾರಪೇಟೆ | 8 |
| ವೀರಾಜಪೇಟೆ, | 10 |
| ನಾಪೋಕ್ಲು, | 12 |
| ಪೊನ್ನಂಪೇಟೆ, | 14 |
| ಮಡಿಕೇರಿ, | 16, 17 & 18 |
| ಪುತ್ತೂರು, | 20 |
| ಮಂಗಳೂರು, | 22, 23, 24 |
| ಉಡುಪಿ, | 26 |
| ಬಂಟ್ವಾಳ. | 28 & 29 |


## Small-Savings Scheme of the Government of India.

## ಇಂಡಿಯೂ ಸರಕಾರದ ಚಿಕ್ಕ ಉಳುವರಿ ಯೋಜನೆ.

### ನೀವು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಂಡುಕೊಂಡಿರುವಿರಾ?

ನಿಮ್ಮ ವ್ಯಾಪಾರ ಉದ್ಯಮಗಳು ಕಡಿಮೆಯಾದರೆ ರೋಗಾಪತ್ತುಗಳು ಬಂದರೆ ಜಪ್ತಿನಾ ನಿಮ್ಮ ಮಕ್ಕಳ ವಿದ್ಯೆ ನಂದ ವೆ ಗೈರಿಕೆಗೆ ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯವನ್ನು ಹೇಗೆ ಭದ್ರಪಡಿಸಿರುವಿರಿ?

**ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ನಿಮ್ಮ ಭವಿಷ್ಯವನ್ನು ಭದ್ರಪಡಿಸುವುವು**

ನೀವು ನಿಮ್ಮ ಆಥವಾ ನಿಮ್ಮ ಕುಟುಂಬದ ಪ್ರತಿಯೊಬ್ಬ ಮೆಂಬರನ ಹೆಸರಿನಲ್ಲಿಯೂ ರೂಪಾಯಿ ೧೦೦ ರಿಂದ ರೂ. 15,000 ವೆಲೆಯ ಸರ್ಟಿಫಿಕೇಟುಗಳನ್ನು ಪೋಸ್ಟಾಫೀಸಿನಿಂದಾಗಲಿ ಸರಕಾರದ ಏಜೆಂಟರ ಏಜೆನ್ಸಿಯಾಂತರವಾಗಲಿ ಕೊಂಡು ಕೊಳ್ಳಬಹುದು.

ನೀವು 1 ರೂಪಾಯಿಯಿಂದ 5 ಆಣೆಯ ಹಾಗೂ 1 ಆಣೆಯ ಕಿನ್ಮತ್ತಿನ ನೇವಿಂಗ್ಸ್ ಸ್ಟ್ಯಾಂಪುಗಳನ್ನು ಸಹ ಕೊಂಡುಕೊಳ್ಳಬಹುದು. ಮತ್ತು ಉಳಿತಾಯ ಮಾಡಿದ ಸ್ಟ್ಯಾಂಪುಗಳ ಬೆಲೆಯು ೫ ರೂಪಾಯಿಯಾದಾಗ, ಅವುಗಳನ್ನು ಕೊಟ್ಟು ಅವುಗಳ ಬದಲಾಗಿ ಒಂದು ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಪಡೆಯಬಹುದು.

18 ತಿಂಗಳ ನಂತರ ಸರಕಾರವನ್ನು ನಿಮ್ಮ ಹಣವನ್ನು ಬಡ್ಡಿ ಸಮೇತ ಯಾವಾಗ ಬೇಕಾದರೂ ಮರುಪಾವತಿ ಮಾಡುವರು. 12 ವರುಷಗಳ ವರೆಗೆ ತೆಗೆದುಕೊಳ್ಳದಿದ್ದರೆ ನಿಮ್ಮ ಹಣಕ್ಕೆ ವರುಷ 1ಕ್ಕೆ 100ಕ್ಕೆ 4½ ರೂ ಬಡ್ಡಿದೊರೆಯುತ್ತೆ. ಅಂದರೆ ಪ್ರತಿ 100 ರೂಪಾಯಿ 150 ಆಗುತ್ತೆ. ಆದಾಯ ತೆರಿಗೆಯಿಲ್ಲ. ಚಿನ್ನಕ್ಕಿಂತಲು ಉತ್ತಮ. ಬೆಂಕಿಯು, ಕಳ್ಳರ ಭಯವಿಲ್ಲ. ಸರ್ಟಿಫಿಕೇಟುಗಳು ಅಕಸ್ಮಾತ್ ನಾಶವಾಗಿ ಹೋದರೆ ಹೊಸ ಪ್ರತಿಗಳನ್ನು ಪಡೆಯಬಹುದು.

**ನಮ್ಮ ಪ್ರಧಾನ ಮಂತ್ರಿ ಮಾನ್ಯ ಪಂಡಿತ ನೆಹರೂರವರು ಹೇಳುವುದೇನೆಂದರೆ:-**

**"ಈ ಮುಂಜೆ ಸರಕಾರದವರು ಹೊರಡಿಸಿದ ಯೋಜನೆಯಲ್ಲಿಯೂ ಸಾರ್ವಜನಿಕರಿಗೆ ಅಪನಂಬಿಕೆಯಿತ್ತು. ಆದಕ್ಕೆ ಕಾರಣವೂ ಇತ್ತು. ಇನ್ನು ಅಂಥಾ ಅಪನಂಬಿಕೆಗೆ ಎಡೆಯಿಲ್ಲ. ಪ್ರತಿಯೊಬ್ಬನೂ ಚಿಕ್ಕ ಉಳಿತಾಯದ ಸಂಸ್ಥೆಗೆ ಸೇರಿ ಸಾಧ್ಯವಾದಷ್ಟು ಹಣ ಉಳಿಸಿರಿ. ಇದುವರೆ ಉಳಿಸಿದವರಿಗೆ ಮತ್ತು ನಮ್ಮ ಜನಾಂಗದ ಅಭಿವೃದ್ಧಿಗೂ, ನಮ್ಮ ಮಾತೃಭೂಮಿಯ ಪುನರ್ರಚನೆಗೂ ಸಹಾಯವಾಗುವುದು."**

**ಇಂದಿನಿಂದಲೇ ಪ್ರಯತ್ನಿಸಿರಿ. ಉಳಿತಾಯದ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.**

**ಕೊಡಗು ಸರಕಾರದ ಪ್ರಕಟಣೆ**

# ಭಾಷಾವಾರು ಪ್ರಾಂತ ರಚನೆ.

ಲೇ-ಕನ್ನಡಿಗ, ಕೊಡಗು

ಭಾಷಾವಾರು ಪ್ರಾಂತರಚನೆಯ ತತ್ವವನ್ನು ಬ್ರಿಟಿಷ್ ಸರಕಾರವೇ ಒಪ್ಪಿತ್ತು. ಅದಕ್ಕಾಗಿಯೇ ತಮಿಳುನಾಡಿನ ತ್ರಿಚಿನಾಪಳ್ಳಿ, ಆಂಧ್ರದ ಬೆಝವಾಡ, ಏಕ್ಯ ಕೇರಳದ ಕೊಚ್ಚಿನ್, ತ್ರಿವೆಂಡರಂ ಮತ್ತು ವಿಶಾಲ ಕರ್ನಾಟಕದ ಮೈಸೂರು ಗಳನ್ನು ಅದು ಕೇಂದ್ರಗಳಾಗಿ ಕಂಡಿತ್ತು. ಕಾಂಗ್ರೆಸು ಭಾಷಾವಾರು ಪ್ರಾಂತರಚನಾ ತತ್ವವನ್ನು ಈ ಮೊದಲೇ ಒಪ್ಪಿದೆ. ಈಗಿನ ಕೇಂದ್ರ ಸರಕಾರವಾದರೂ ಈ ತತ್ವವನ್ನು ಗಾಳಿಗೆಸೆಯುವ ಯೋಚನೆಯಲ್ಲಿಲ್ಲ. ಪ್ರಾಂತಗಳು ಕೂಗಿಕೊಳ್ಳದಿದ್ದರೂ ಕ್ರಮಶಃ ಜನಾಭಿಪ್ರಾಯದಂತೆ ಅದನ್ನು ಜಾರಿಗ ತಂದೇ ತರುತ್ತದೆ. ಇದಕ್ಕಾಗಿಯೇ ರಾಜ್ಯಪುನರ್ ಸಮಿತಿಯಲ್ಲಿ ತಕ್ಕ ವ್ಯವಸ್ಥೆಗಳೂ ಆಗುತ್ತಿವೆ, ಮುಂದೆಯೂ ಆಗಲಿದೆ.

ಆದರೆ ಭಾಷಾ ನೆಲೆಯಾರು ಪ್ರಾಂತರಚನೆಯ ವಿರುದ್ಧ ಇಂದು ಕೇಂದ್ರ ಸರಕಾರವಾಗಲೀ, ಕಾಂಗ್ರೆಸು, ಮಂತ್ರಿತರ ಹಲವಾಗಲೀ ಮಾತೆತ್ತಿಲ್ಲಿಗ್ಗರೆ ಭಾಷಾವಾರು ತತ್ವವನ್ನು ಕೆಡೆಗಣಿಸಿ ಬಿಲ್ಲ, ಬದಲು ಭಾರತದ ವಿಷಮ ಪರಿಸ್ಥಿತಿಯ ಈ ಸಂದಿಗ್ಧ ಸಮಯದಲ್ಲಿ ಅದನ್ನೇ ಸರ್ವಸ್ವವೆಂದು ಎತ್ತಿ ಕೂಗಿಕೂಳ್ಳುವವರ ಸಂಕೀರ್ಣ ನೀತಿಗಾಗಿ ಹಿಂದೂದೇಶದ ಇಂದಿನ ಪರಿಸ್ಥಿತಿಯನ್ನು ನಾನು ಚಿತ್ರಿಸಬೇಕಿಲ್ಲ. ಉತ್ತರ ಹಿಂದೂಸ್ಥಾನವು ಕೂಡಾ ಯಿಯಲ್ಲಿ ಕೂಳ್ಳುದಿವಂತೆ ನಿರಾಶ್ರಿತ ಸಮಸ್ಯೆ, ಕೋಮು ವಾರು ಭೂತದ ಹಾನಳಿಯಿಂದ ಪರಿತಪಿಸುತ್ತಿದೆ. ಇದನ್ನು ನಿರ್ವಹಿಸುವುದೇ ಕೇಂದ್ರ ಸರಕಾರಕ್ಕೆ ಹೆತ್ತು ಹೆಸ್ಸೆರಡಾಗಿದೆ. ಈ ಮಹಾ ಸಮಸ್ಯೆಗಳ ಮಧ್ಯೆ ಭಾಷಾವಾರು ಪ್ರಾಂತದ ಸವ ನ್ಯೆಯನ್ನು ಮಂಡೊಡ್ಡುವದು ಎಂಥಾ ಹಿತವಲ್ಲಿ ಭಾಷಾವಾರು ಪ್ರಾಂತರಚನೆಯ ತತ್ವವನ್ನು ಎಲ್ಲರೂ ಒಪ್ಪಿದರೂ ಪ್ರಾಂತರಚನೆಯೊಗುವಾಗ ಚರ್ಚೆ, ಬಲಾಕ್ಕರ, ಪರ್ವತೆ, ರಕ್ತಪಾತಗಳೂ ಆಗಬಹುದು. ಪಂಜಾಬಿನ ವಿಭಜನೆಯ ಒಂದು ವಿಶಾಡೇ ಇದೀ ಇಂಚಿ ಬಿನ ಜನತೆಯನ್ನು ನಾಶಮಾಡಿತು. ಮಿಲಿಯೋತರ ಜನರು ಸಾಯಬೇಕಾಯಿತು. ಆ ಉದಾಹರಣೆ ಕಣ್ಣಿಗೆ ಕಟ್ಟದಂತಿದ್ದು ಈ ಭಾಷಾ ಪ್ರಾಂತರಚನೆಯನ್ನು ಈ ಕಾಲದ ಸಮಯದಲ್ಲಿ ಎತ್ತಿ ತೀರ್ಮಾನಿಸಲಿಕ್ಕೆಸಬಹುದು ಹಾಸಿ ಕಾರಕವಾದುದು.

ಕಳೆದ ಇಷ್ಟು ವರ್ಷಗಳೆಂದಲೂ ಆಂಧ್ರರು ಪ್ರತ್ಯೇಕ ಪ್ರಾಂತಕ್ಕಾಗಿ ಹೋರಾಡುತ್ತಿದ್ದಾರೆ. ಅವರ ಪ್ರಯತ್ನವು ಫಲಕಾರಿಯಾಗುವ ಬಿಹ್ನೆಯೂ ಕಂಡು ಬರುತ್ತಿದೆ. ಪಂಡಿತ ಜವಹರಲಾಲ್ ನೆಹರೂ ರವರು ಆಂಧ್ರ ವ್ಯಾಕರವಾಗುವದೆಂದು ಹೇಳಿದ್ದರು. ಆಂಧ್ರ ಪ್ರಾಂತದ ಆಸ್ತಿತ್ವವನ್ನು ಮುಂಬರುವ ರಾಜ್ಯಪುನರ್ಘಟನೆಯಲ್ಲಿ ಸಾರಿಸಲಾಗದೆಯೆಂಬ ವರ್ತಮಾನವಿತ್ತು. ಆದರೆ ಇತ್ತಲಾಗಿ ಅದನ್ನು ತೆಗೆದು ಹಾಕಲು ಗಿದಯುಂಡೂ ಭಾಷಾವಾರು ಪ್ರಾಂತರಚನೆಯು ವಿಜಯ ರಾಜ್ಯಪುನರ್ಘಟನೆಯಲ್ಲಿಲ್ಲವೆಂದು ತಿಳಿದು ಒಂದಿದ ಆಂಧ್ರರಿಂದ ಭಾಷಾವಾರು ಪ್ರಾಂತರಚನೆಯಾಗಬೇಕೆಂದು ಕೇಂದ್ರ ಸರಕಾರವಾಗಲೀ ರಾಷ್ಟ್ರಜೆಟ್ ನಾ ಸಭೆಯಾಗಲೀ ಸಮ್ಮತಿಯೆಂದಿಲ್ಲವೆಂದು ಗೂಡಾಗ್ರಹ ಮಾಡಿದ್ದಾರೆ. ಆಂಧ್ರರ ಈ ಪ್ರಯತ್ನಕ್ಕೆ ತಮಿಳರಲ್ಲಿ ಪೆರ್ಜನಯ್ಯಾ ನಾಡಯ್ತಿದೆ ಎನ್ನಬಹುದು. ಪದ್ರವ ಮಾಡಿಗಾಗಬೇಕೆಂದು ಆಂಧ್ರರು ಹೇಳುತ್ತಾ ಚರಿತ್ರೆಯ ಸಕ್ಷ್ಯ ಕೊಡುತ್ತಿದ್ದಾರೆ, ಮದ್ರಾಸಿನಲ್ಲಿ ಇಂದು ತಮಿಳರು ಹೆಚ್ಚಿರುವುದಕ್ಕೆ ಕಾರಣ ಅವರು ತಮಗೆ ಸೇರಬೇಕಾದ ತಮಿಳರು ಕೂಗಾಡುತ್ತಿದ್ದರೆ ಪ್ರತ್ಯೇಕ ಪ್ರಾಂತ ತಮಗೆ ಗಬೇಕೆಂದು ಪ್ರದೇಶ ಕೂಗಬಿಟ್ಟಿಸಿವರು ಅಧ್ಯರು. ಅನ್ಯ ಕೂಗನ್ನು ನಿಲ್ಲಿಸಲು ಅದಕ್ಕೆ ವಿರುದ್ಧವಾಗಿ ದ್ರವಿಡಸ್ಥಾನದ ಕೂಗನ್ನು ಕಲವು ತಮಿಳರ, ಕನ್ನಡಿಗರು, ಒಂಧ್ರರು, ಎಂಬಲೆಯೂ ಅದವರು ಸೇರಿ ಎಬ್ಬಿಸಿದರು. ದ್ರವಿಡಸ್ಥಾನದ ಕೂಗು ಅಗಲಿಕ್ಕೆ ಅವಕಾಶವಿಲ್ಲದಿರುವುದರಿಂದ ಅದರ ಬದಲು ತಮಿಳ ನಾಡಿನ, ಕೇರಳ ಪ್ರಾಂತದ ಮತ್ತೆ ವಿಶಾಲ ಕರ್ನಾಟಕದ ಕೂಗು ಇದ ತನಗೆ ನ್ಯಾಯವಾಗಿ ಸಂಬಂಧಿಸುವ ಘಗಗಳನ್ನಷ್ಟೆ ಸೇರಿಸಿಕೊಂಡು ಪ್ರಾಂತ ರಚಿಸಿಕೊಳ್ಳಬಹುದಲ್ಲವೆ? ಆದರೆ ಯಾವ ಗಲಭೆಗೂ ಕಾರಣವಿಲ್ಲ. ಆದರೆ ಈ ನವ ಪ್ರಾಂತ ನಿರ್ಮಾಪಕರಲ್ಲಿ ರಾಜ್ಯ ವಿಸ್ತರಣಾಲಲಸ ಹುಟ್ಟಿರಿಸಬಹುದು. ಪರಿಣಾಮವಾಗಿ ಸಮಷ್ಟಿರಾಷ್ಟ್ರೀಯ ಭಾವೈಕ್ಯತೆಗೆ ಕಾರಣ ಇಡಲ್ಲದ ಭೌಗೋಳಿಕ ಛಿದ್ರತೆಯಿಂದಲೂ ಇದು ಕೆಟ್ಟ ಸಮಸ್ಯೆಯಾಗಿದೆ. ಉದಾಹರಣೆಗೆ ಗಿ ತಮಿಳು ನಾಡಿನ ವಧ್ಯದಲ್ಲಿರುವ ಂಜೃಷ ಳಿಂದಲ್ಲಿ ಹೆಚ್ಚಜನರು ತಿಳಿಗು ಮಾತಿಡವರು. ಭಾಷಾಕತ್ವದಂತೆ ಇದನ್ನು ಯಾವ ಪ್ರಾಂತಕ್ಕೆ ಸೇರಿಸುವರು? ಇದು ತಮಿಳು ನಾಡಿನ ವಧ್ಯದಲ್ಲಿ ಆಂಧ್ರರ ದ್ವೀಪವಾಗಿರಲು ಸಾಧ್ಯವೇ? ತಮಿಳರ ಮಹಾ ಕವಿಯಾದ ತಿರುವಳ್ಳುವಾರರ ಮದ್ರಾಸಿನಲ್ಲಿದ್ದ ನೆಂದು ಮದ್ರಾಸು ತಮಗೆ ಬೇಕೆಂದೂ, ತ್ಯಾಗರಾಜರು ತೆಲುಗು ಮಾತಾಡುವವರಾಗಿದ್ದು ತಂಜಾವೂರಿನಲ್ಲಿದ್ದ ಕಾರಣ ಅದು ಆಂಧ್ರಕ್ಕೆ ಬೇಕೆಂದೂ ವಾದಮಾಡಲಾದೀತೇ? ಈ ಭಾಷಾವಾರು ಪ್ರಾಂತರಚನೆಗೆ ಕೆದವರು ಪೂರ್ಣಸ್ಥಾನದ ನೀತಿಯನ್ನು ಅನುಸರಿಸುತ್ತಿರುವದು ವಿಷದದ ಸಂಗತಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಬಹುತೇಯ ಸಂಸಾನಗಳು ಆಗಿರುವಂತೆ ಇರುವವರೆಗೆ ಭಾಷಾವಾರು ಪ್ರಾಂತರಚನೆಯು ಅಸಾಧ್ಯವಂದೇ ಹೇಳಬೇಕಾಗಿ ಕೊಚ್ಚಿನ್ ಮತ್ತು ತಿರುವಾಂಕೂರುಗಳ ಕೇರಳಕ್ಯ ಸೇರಬಹುದೆಂದೂ ವ್ಯಸಾರು ಕನ್ನಡ ಪ್ರಾಂತದಲ್ಲಿ ಅಡಕವಾ ಗಬಹುದೆಂದೂ (ವ್ಯಸೂರು ಪ್ರತ್ಯೇಕವಿರುವ ಪ್ರಯತ್ನ ನಡೆದಿದ) ಹೇಳಬಹುದು. ಆದರೆ ಕನ್ನಡ, ಆಂಧ್ರ, ತಮಿಳ ಮೊದಲಾದ ಜಾಗಗಳ ವಿಕೇಕರಣದಿಂದ ರೂಪಿತವಾಗಿರುವ ಹೈದರಾಬಾದನ್ನು ಒಡಮು ಹಂಚುವವರು? ನೈಜಾಂ ಕರ್ನಾಟಕದ ಲಕ್ಷಾಂತರ ಕನ್ನಡಿಗರನ್ನು ಬಿಟ್ಟು ಕನ್ನಡ ಪ್ರಾಂತ ಯೂ ಭಾಷಾ ತತ್ವದ ಮೇಲೆ ರೂಪಿಗೊಂಡೀತೆ? ಗಡಿಯ ವಿಚಾರದಲ್ಲಿ ಆಂಧ್ರ ಮಿಳರಿಗೆ ಮಾತ್ರವಲ್ಲ, ಆಂಧ್ರ ಕನ್ನಡಿಗರಿಗೆ, ಕನ್ನಡ ಮಹಾರಾಷ್ಟ್ರರಿಗೆ, ಕನ್ನಡ ತೀರಳದವರಿಗೆ ಈ ರೀತಿ ಘರ್ಷಣೆ ಇದ ಏಕ ಭಾವ ಆಡುತ್ತಿರುವ ಭಿಂಗಗಳೂ ಕೂಡ ಒಂದು ಆದಳತಕ್ಕೆ ಒಪ್ಪುವ ಬಿಹ್ನೆಗಳೂ ಕಂಡು ಬರುತ್ತಿಲ್ಲ. ವಿಶಾಲ ಕರ್ನಾಟಕ್ಕೆ ಮೈಸೂರು ಸೀಮೆಯ ಅಯ್ಯಂಬಿಲ್ಲ. ಕೊಡಗು ಪ್ರತ್ಯೇಕವಿರಲು ಪ್ರಯತ್ನಿಸುತ್ತಿದೆ. ದಕ್ಷಿಣ ಕನ್ನಡದವರೂ ಭಾಷಾವಾರು ಪ್ರಾಂತ ಕೇಳ್ಳಲು ಉತ್ಸಾಹರಾಗಿಲ್ಲ. ಹೀಗಿರುವಾಗ ಭಾಷಾವಾರು ಪ್ರಾಂತರಚನೆಯೂ ಯಾವದೇ ಪನೂನು ಯೂ ಘಟನೆಯಿಂದ ಆಗಲಾರದು. ರಾಜಕೀಯ ಪರಿಣಾಮದಿಂದ ವಿಶೇಚನೆ ವಿನಿಮಯಗಳಾಗಬೇಕು. ಸರಹದ್ದು ನಿರ್ಣಯವು ಎಷ್ಟು ಭಾಗಗಳ ಒಪ್ಪಿಗೆಯಿಂದಾಗಬೇಕು ಈ ವರಿಗೆ ನಾವು ಭಾಷಾವಾರು ತತ್ವಕ್ಕನುಗುಣವ ಪ್ರಾಂತಗಳಲ್ಲಿಪ ಸಿದ್ದೇವೆಂದೆ ಇದ್ದು ಕಲವು ಸಮಯ ಕಾಯಲು ಸಾಧ್ಯವಿಲ್ಲವೇ? ಕನ್ನಡ ಪ್ರಾಂತರಚನೆಯಾಗುವದರಲ್ಲಿ ಸಂಶಯ ವಿಲ್ಲ. ಆದರೆ ಒಂದೇ ಆಡಳಿತದಿಂದ ಇಡೀ ಕರ್ನಾಟಕ ಪ್ರಾಂತ ಆಳಲ್ಪಟ್ಟೆಂತೆಂದು ಹೇಳಲಿರುವದಿಲ್ಲ. ನಾಲ್ಕಾರು ಆಡಳಿತ ಘಟಕಗಳಿಂದ ಕೂಡಿದ 'ಫೆಡರೇಶನ್' ಆಗಬಹುದು. ಆದಕ್ಕಾಗಿ ಕನ್ನಡ ಸಂಸ್ಥೆಗಳು ಪ್ರತ್ಯೇಕವಾಗಿ ಕೂಗಿಕೊಂಡಂತೆ ಸತ್ಯಗ್ರಹವೂ ಅವಶ್ಯವಿಲ್ಲ. ಹೆಚ್ಚಾಲಸ್ಸೂ ಉಪಾಯಗಳ ನಿಧಿಯೂ ಬೇಕಿಲ್ಲ. ರಾಜ್ಯಪುನರ್ಘಟನೆಯಲ್ಲಿದ್ದ ಆಂಧ್ರ ಪ್ರಾಂತದ ವಿಚಾರವನ್ನು ತೆಗೆದುಹಾಕಿದ್ದರಿಂದ ಎಲ್ಲಾ ಭಾಷಾ ಪ್ರಾಂತಗಳನ್ನು ಒಂದೇ ಸಮಯದಲ್ಲಿ ಕರುನ ಯೋಚನೆಯಿಂದ ಆಗಬೇಕು. ಯಾಕೆಂದರೆ ಒಂದನ್ನು ಬಿಟ್ಟು ಒಂದರ ಗಣನೆ ಸಾಧ್ಯವಿಲ್ಲ. ಪರಸ್ಪರ ಸಂಬಂಧ ಆ ರೀತಿಯಲ್ಲಿದೆ. ಆದ್ದರಿಂದ ಕೇಂದ್ರ ಸರಕಾರವು ಕಾರ್ಯಬಾಹುಳ್ಯದಿಂದ ಬಗ್ಗಿ ಬಸವಳಿದಿರುವಾಗ ಈ ಸಮಸ್ಯೆಯನ್ನು ಮಂಡೆ ಮಾಡುವದು ವಿವೇಕವಲ್ಲ.

---


ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ ಬಾ ನಂ. 337, ಮದ್ರಾಸು 2

ಬೋಂಬೆ ಲೈಫ್ ಬಿಲ್ಡಿಂಗ್, ಪೊ ಬಾ ನಂ 1, ಉಡುಪಿ

(ಟೆಲಿಫೋನ್ ನ 8393)

ಇತರ ಆಫೀಸುಗಳು —ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟ್, ಮಂಗಳೂರು, ಮಧುರ, ಮತ್ತು ಬೊಂಬಯಿ.

**ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಿಂಗಾದದ್ದು (1921ನೇ ಸಂ ತಾರೀಕಿ

ವಸೂಲಾದ ಶೇರು ಬಾಬಲಗು ರೂ 1,33,740, ರಿಸರ್ವ ಒಂದ ರೇವ ಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0 3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೀನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಸು ರೇವಣಾತಿಯನ್ನು ತಾ 1-12-46ರಿಂದ ಹೊಂದಿಕೊಳ್ಳುವಂತಾಗುವುದು ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ವರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ 1-12-46

ಎಂ ಎಸ್ ಸೋಮಯ್ಯ, ಗೌ ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M L C ಪ್ರೆಸಿಡೆಂಟ್ ಪ್ರತಿನಿಧಿ

**ಎಂಪೈರ್ ಆಫ್ ಇಂಡಿಯಾ**

**ಲೈಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವ | ಒಟ್ಟು ಆದಾಯ | 1,07,09,000 | ರೂಂಡಿ |
| ರದಿಯಲ್ಲಿನ ಕೆಲವು | ಚಾಲ್ತಿಯಿರುವ ವಿಮಾ | 17,74,52,000 | ,, |
| ಪ್ರಸ್ತ ಸಂಗತಿಗಳು | ಆಸ್ತಿ | 6,67,60,000 | ,, |
| ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | | 8,83,62,000 | ,, |

ಆಂಗ ಕಛೇರಿ ಏಜೆನ್ಸಿ ಪ್ರಧಾನ ಕಛೇರಿ

ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು — ಆರ್ಜಗಳನ್ನು ಸ್ವಾಗತಿಸಿದೆ — ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ



Edited, Printed and Published by P. I. Belliappa at 'Kodagu Press, Mercara, for 'Kodagu' Ltd

Reg. No. M. 1550.
'KODAGU' MERCARA, (Coorg).

# ಕೊಡಗು

ಸಂವಾದಕರು—ಪಿ. ಎ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ಕಾರೀಕು ೫-೩-೧೯೪೪ನೇ ಶುಕ್ರವಾರ | ಸಂಚಿಕೆ ೪೦

## ॥ ಬೋರಯ್ಯನ ದಿನಚರಿ ॥

ಇಷ್ಟು ದಿನ ಕುಯಿಲು ಕೆಲಸ. ನಂತರ ಒಕ್ಕಲು ಕೆಲಸ. ಇವುಗಳ ಮಧ್ಯ ಲೇಖನಿ ಸುಟ್ಟಲು ಅನುವೇ ದೊರೆಯುಲಿಲ್ಲ. ದಿನಚರಿಯಲ್ಲಿ ಬರೆಯಬೇಕಿದ್ದ ಅನೇಕ ಘಟನೆಗಳು ದಾಟಿಹೋದವು ಒಕ್ಕಲು ಕೆಲಸ ಮುಗಿದಿದೆ. ಆದರೆ ಬೆಳೆಬಂದ ಈ ಕಾಲದಲ್ಲಿ ಬೋರಯ್ಯನಿಗೆ ಸಂತೋಷವಿಲ್ಲ. ಒಂದನೆ ಕಾರಣ ಈ ವರ್ಷ ಒತ್ತಬಹು ಕಡಿಮೆ. ಅರ್ಧಕರ್ಧ ಕಡಿಮೆ. ಊಟ, ಮನೆ ಖರ್ಚಿಗೇ ಕಷ್ಟ. ಈ ವರ್ಷ ಬೋರಯ್ಯನ ಬಾಳು ನಾಯಿ ಬಾಳು!

ಇನ್ನೊಂದು ಜೋರು. ಬೋರಯ್ಯನ ಸರ್ವಸ್ವವಾಗಿದ್ದ ಚಾಪುವಿನ ತೋಲ್. ಬೋರಯ್ಯನ ಹೃದಯವು ವ್ಯಸನಘಾತದಿಂದ ಬಗ್ಗಿದೆ. ನಾಗರೀಕರೆಂಬ ನಗರದಲ್ಲಿ ವಾಸಿಸುವ ಜನ ರಾಜಕೀಯ, ಧರ್ಮ, ಮೊದಲಾದುವುಗಳ ಹೆಸರಿನಲ್ಲಿ ಪಾರ್ಟಿ, ಪಕ್ಷಕಟ್ಟಿ ಈ ರೀತಿಯ ಅಕೃತ್ಯಮಾಡಿದಾಗ ಬೋರಯ್ಯನಿಗೆ ಜಿಗುಪ್ಸೆ ಹಿಡಿಸಿದೆ. ಬೋರಯ್ಯನ ಪ್ರೇಮವನ್ನು ಅನಾಥರನ್ನಾಗಿ ಮಾಡಿದ ನಗರದ ನಾಗರೀಕರಿಗೆ ಧಿಕ್ಕಾರವಿರಲಿ!

ಚಾಪುವಿನ ಮರಣ ವಾರ್ತೆಯನ್ನು ಕೇಳಿ ಕೈನಡುಗಿದವು. ಕಾಲುಗಳು ನಿಲ್ಲಲಾರದಾದವು. ಬಾಯಲ್ಲಿ ಮಾತು ಹೊರಡದಾಯಿತು. ಕಣ್ಣು ಮಬ್ಬು ಛಾರಾಪ್ರವಾಹವಾಗಿ ಅಶ್ರುವನ್ನು ಚೆಲ್ಲಲು ಕೆಲಸ ಮಾಡಿತ್ತು. ಗದ್ದೆ ಕೆಲಸ ಹೇಗೆ ಮಾಡಬಲ್ಲೆನು? ಈ ದಾರುಣ ವಾರ್ತೆಯನ್ನು ವಿಷದವಾಗಿ ತಿಳಿಯಲು ಪೇಟೆಗೆ ಬಂದನು. ಕಾರೀಕು ಜಿಗಿ, ಮಡಿಕೇರಿ ಮೌನ ಧರಿಸಿತ್ತು. ಪ್ರತಿಯೊಬ್ಬರ ಮುಖದಲ್ಲಿಯೂ ವ್ಯಸನದ ಚಿಹ್ನೆ. ಅಂಗಡಿಗಳೆಲ್ಲಿಯೂ ಮುಚ್ಚಲ್ಪಟ್ಟಿದ್ದವು. ಚಾಪುವಿನ ಯೋಗದ ದೇಖು ಪಟ್ಟವರಿಗೂ ಇದೆ ಅನಿಸಿತು!

ಮೆರವಣಿಗೆಯಲ್ಲಿ ಭಾಗವಹಿಸಿದೆ. ಮಡಿಕೇರಿ ಎಂದೂ ಕಾಣದ ಜನಸಂದಣಿ ನೆರೆದಿತ್ತು. ಪ್ರಾರ್ಥನಾ ಸೇವೆ ನೆರವೇರಿತು. ಪ್ರಾರ್ಥನೆಯಾಯಿತು. ಆದರೆ ಆ ಪ್ರಾರ್ಥನೆ ನನ್ನ ಹೃದಯಕ್ಕೆ ಶಾಂತಿಯನ್ನು, ಶಾಂತಿಯನ್ನು ಕೊಡಲಿಲ್ಲ. ನಿನಗೂ ಹದಗಳಂತೆ ಹಾಹುಗಳು ಕೇಳುತ್ತಿದ್ದವು! ಮನೆಗೆ ಹಿಂತಿರುಗಿದೆ. ನಷ್ಟ ಕೆಲಸದಲ್ಲಿ ತೊಡಗಿದೆ.

ತಾರೀಕು ೧೧. ಗಾಂಧೀಜಿಯವರ ಚಿತ ಭಸ್ಮ ಈ ದಿನ ಬರುವದೆಂದರು. ಕಾದು ಬೋರಯ್ಯನ ಪೂರ್ಣ ಸ್ವಾಗತಕ್ಕೆ ಧುಮುಕಿಸಿದೆ. ನಾಲ್ಕು ಗಂಟೆಯ ಸಮಯಕ್ಕೆ ಜನರು 'ಬೋಂ' ಎಂಗ್ಲೆಯನ ತ್ತಿರ ನೆರೆದಿದ್ದರು. ನಾನೂ ಜೊತೆಕೂತೆ. ಜನಸಂದಣಿಯನ್ನ ನೋಡಿದೆ. ರಾಮಭಜನೆಯೊಗುತ್ತಿತ್ತು. ಎಲ್ಲ ತರ ಜನರೂ ಬಂದಿದ್ದರು. ಸರಕಾರಿ ಅಧಿಕಾರಿಗಳಿದ್ದರು. ಮುಸಲ್ಮಾನರಿದ್ದರು. ಕ್ರಿಸ್ತರಿದ್ದರು. ಹರಿಜನರೂ ಇದ್ದರು. ಎಲ್ಲರ ಬಾಯಿಯಿಂದಲೂ 'ರಘುಪತಿ ರಾಘವ ರಾಜಾರಾಂ.'

ಪಕ್ಕದಲ್ಲೇ ಕಳಿಪರ್ಸನ್ನ ಒತ್ತವನ್ನು ಗಾಡಿಗೆ ಹೇರಿಸಿ ಕಾಪು ಕಾರರೂ 'ಸಬ್‌ಕೂ ಸನ್ಮತಿ ದೇ ಭಗವಾನ್' ಹಾಡುತ್ತಿದ್ದರು. ಬಟ್ಟೆ ಕಂಟ್ರೋಲ್ ಇದ್ದಾಗ ನನ್ನಿಂದಲೇ ಗಜಕ್ಕೆ ಎಂಟಾಣೆಯ ಬಟ್ಟೆಗೆ ಒಂದೂಕಾಲು ರೂಪಾಯಿ ತೆಗೆದವರೂ ಭಜನೆಯಲ್ಲಿ ಧ್ವನಿಕೂಡಿಸಿದ್ದರು. ಆಫೀಸಿಗೆ ಹೋದರೆ ಕರ್ತವ್ಯಲ್ಲಿ ದರ್ಪದಿಂದ ನಡಿಯುವ ಅಧಿಕಾರಿಗಳೂ, ಬಡವರ ಸುಲಿಗೆಯಿಂದ ಬೊಜ್ಜು ಬೆಳೆಸಿದ ದೊಡ್ಡವರೂ ಸಮಾನಸ್ಕಂಧರಂತೆ ರಸ್ತೆಯಲ್ಲಿ ನೆಲದಲ್ಲಿ ಕೂತು ಹಾಡುತ್ತಿದ್ದರು. ಮಹಾತ್ಮಾ ನಿನಗೆ ಜಯವಾಯಿತು. ಸಹಾಜದ ವಿರುದ್ಧಗ್ಗಗಳನ್ನು ಸರಿಪಡಿಸಿ ನಿನ್ನ ಮರಣದ ಕಾಲಕ್ಕಾದರೂ ಸರ್ವರೂ ಸಮಾನರಾಗಿ ನೆಲದಲ್ಲಿ ಏಕೋ ರೀತಿಯಿಂದ ಕೂತು ಪ್ರಾರ್ಥಿಸುವಂತೆ ಮಾಡಿದ ನೀನು ನಿಜಯಿಯು!

ಇದು ಕ್ಷಣಕಾಲ ಮಾತ್ರ. ಭಕ್ತವನ್ನು ಹೊತ್ತ ಕಾರು ಬಂದಿತು. ನೂಕು ನುಗ್ಗಾಟ ಪ್ರಾರಂಭವಾಯಿತು ಪಲ್ಲಕ್ಕಿಗೆ ಚಿತಾಭಸ್ಮವನ್ನಿಡಲು 'ದೊಡ್ಡವರೇ' ಬೇಕಾಯಿತು! ಪಲ್ಲಕ್ಕಿ ಹೊರುವವರಿಗಂತೂ ಪೈಪೋಟಿ! ಮೆರವಣಿಗೆ ಹೊರಟಿತು. ಕೋಟೆಯಲ್ಲಿ ರಾಜ ಮರ್ಯಾದೆಯ ಸ್ವಾಗತವಿತ್ತು. ದರ್ಶನಕ್ಕಾಗಿ ಇಡಲಾಯಿತು.

ತಾರೀಕು ೧೫. ವಿಚಿತ್ರ ಬದಲಾವಣೆಗಳು ಈ ಮಧ್ಯೆ ನಡೆದಿದ್ದವು. ಊಟಲ್ಲದೆ ಹೊರಗೆ ಕಾಲಿಡದವರು ಜುಬ್ಬ ಹಂಚಿ ಹಾಕಿ ಬರಿಗಾಲಿನಿಂದ ಬಂದಿದ್ದಾರೆ. ಕಾಲು ಹಾಕುವದು ಕಷಟ. ಸನ್ಯಾಸಿಗಳ ಸೋಗಿನ ವೇಶವನ್ನುತ್ತಿದ್ದವರು ಕಾಲು ಹಾಕಿ ಪೂಜಾರಿಗಳಂತೆ ನಿಂತಿದ್ದಾರೆ. ನನಗೆ ಗಾಂಧಿ ಚಿತಾಭಸ್ಮದ ದರ್ಶನ ದೊರೆತಿರಲಿಲ್ಲ. ಜನತೆಯು ನೂಕಿನುಗ್ಗಾಟದಲ್ಲಿ ಜೋರಯ್ಯನಾದ ನನಗೆ ದರ್ಶನ ಸಾಧ್ಯವೇ? ಆದ್ದರಿಂದ ಬೆಳಿಗ್ಗೆ ಆರು ಗಂಟೆಗೆ ದರ್ಶನಕ್ಕೆಂದು ಹೊರಟೆ. ಮಡಿಕೇರಿಯು ಶೀತಲ ತಂಗಾಳಿ ಬೀಸುತಿತ್ತು. ಪೂರ್ವ ದಿಗಂತದಲ್ಲಿ ಸೂರ್ಯದೇವನು ಆಗ ಮನವನ್ನು ಸ್ವಾಗತಿಸಿ ಹಕ್ಕಿಗಳು ಅಲಾಪನೆಗೆ ತೊಡಗಿದ್ದವು. ಪೂರ್ವ ದಿಶಾರಿವಣಿಯು ಬೆಳ್ಳಿಯ ಪತ್ರಲನನ್ನುಟ್ಟು ಸಜ್ಜುಗೊಳ್ಳುತ್ತಿದ್ದಳು. ಕೋಟೆಯ ಆದರಣದಲ್ಲಿ ಪ್ರಭಾತದ ಪ್ರಶಾಂತತೆ ಹಬ್ಬಿತ್ತು. ಈ ಮನಸರಾಶಿಯಲ್ಲಿ ಕೋಪ ಲಾಭಗೂ ಪಜ್ರಕಾರದಿಂದ ಕಳಬರುತಿತ್ತು. 'ರಘುಪತಿ ರಾಘವ ರಾಜಾರಾಂ ಪತಿತಪಾವನ ಸೀತಾರಾಂ' ಜನರಲ್ಲಿ ನಿನ್ನೆಯ ಗದಿಬಿಡಿ ಇರಲಿಲ್ಲ. ಎಲ್ಲ ಮೌನ, ಗಂಭೀರ.

ಗಾಂಧಿಜಿಯವರ ಭಾವ ಚಿತ್ರವೊಂದು ಸರ್ವಲಂಕೃತವಾಗಿ ಸೊಡಗಿನ ಶರ ನಸಭಾ ಆವರಣದಲ್ಲಿ ಅಳವಡಿಸಿತ್ತು. ಅದರ ಎಂದೆಚಿತ ಭಸ್ಮವಿತ ದೀದವು ಪ್ರಕ ಶವಾಗಿ ಅಂಥ ಶಿತ್ವ ವರ್ಣಸ್ಫೋರಣವುದೆನಿಸಿದರು. ಭಾವ ಪಚಿತ್ರವು ನಗುತ್ತಿರುವಂತೆ ನನಗೆ ಕಂಡಿತು. ಬಂತ್ತು ಗಿರುವನೆಂಬ ಬೋರಯ್ಯನ ಕಂಗ್ಲಿಕೆಯನ್ನು ಕಂಡ ಬಾಪುವಿನ ಭಾವ ಚಿತ್ರ ಸಕ್ಕಿರಬೇಕು 'ರೈತ' ಎಂಬ ರಬ್ಬುವಿರುವಂಗೆಗೆ ಬಾಪುವಿಗೆ ಸಾಸ್ಟಿಲ್ಲ ಕಣ್ಣಿನಲ್ಲಿ ಸೂಕ್ಷ್ಮರು. ಬೋಗಳು ಹುರಿದು ಪತ್ತ ನನ್ನ ಶಿರವನ್ನು ಹಿಡಿದು ಮೈ ಬಿಗಿದಿತ್ತು. 'ಸಬ್‌ಕೂ ಸನ್ಮತಿ ದೇ ಭಗವಾನ್' ಎಂಬ ಧ್ವನಿ ಶ್ರುತಿಶ್ವನಿಸಿತ್ತು

ಮಡಿಕೇರಿಯಲ್ಲಿ ಕೈವರ, ಬ್ರಾಹ್ಮಣರು, ಕೊಡವರ, ಗೌಡಗಳು, ಕ್ರಿಶ್ಚಿಯನರು ಎಲ್ಲಾ ಜಾತಿಯವರೂ ಇದ್ದಾರೆ. ವಿಷಾತ್ಮಾ ಚಿತ ಭಸ್ಮವನ್ನು ನೆಟ್ಟಿ ಬಾರಿಯ. ಕೋಲನಮ್ಮನ ಎಡಗರದಲ್ಲಿ ನಿಂತಿದ್ದವರೂ ಇವರಲ್ಲಿದ್ದರು. ಓ ಹಿಂದೂ ಸಮಾಜವೇ ಇಂಥಾ ಮಡಿಸಂತರಿಂದಲೇ, ಇಂಥಾ ನಿಷ್ಕಾಮಿಕರಿರುವವರೆಗೆ ನಿನಗೆ ಉನ್ನತಿ ಎಲ್ಲಿ?

ಮೆರವಣಿಗೆ ಹೊರಟಿತು. ಮಡಿಕೇರಿಯ ಸರ್ವರೂ ಭಾಗಿಗಳಾಗಿದ್ದರೆಂದರೆ ಅತ್ಯುಕ್ತಿಯಲ್ಲ. ರಾಜಾ ಸೀಟಿನಲ್ಲಿ ಬೃಹತ್ ಸಭೆ ಸೇರಿತ್ತು. ಪ್ರಾರ್ಥನೆಯಾಯಿತು. ಪವಿತ್ರ ಭಾಗವುಂದಲಕ್ಕೆ ಹೋಗುವ ಗೊಂದಲ ಪ್ರಾರಂಭವಾಯಿತು. 'ಚಿತಾಭಸ್ಮ ನಮ್ಮ ಕಾರಿನಲ್ಲಿ ಇಡಲ್ಪಡಲಿ. ಆದರೆ ಅದನ್ನು ಬಂದನರು ಬರುವುದು ನೋಡುವೆಂದು ಕೆಲವರು. ಇತ್ತ ನಾಲ್ಕು ಬಸ್ಸಿನಲ್ಲಿ ನಾನು ನಾನೆಂದು ವೈಪೋಟಿ, ಘರ್ಷಣೆ. ಎಲ್ಲವೂ ಅಹಿಂಸಾ ಮೂರ್ತಿ, ಸರ್ವ ಸಮನ್ವಯಾಚಾರ್ಯ ಗಾಂಧೀಜಿಯ ಹೆಸರಿನಲ್ಲಿ!

ಮಧ್ಯಾಹ್ನ ೧೨ ಗಂಟೆಗೆ ದರಿದ್ರನಾರಾಯಣರಿಗೆ ಅನ್ನದಾನದ ವಿರ್ಪಾಡಾಗಿತ್ತು. ನೂರಾರು ಜನರು ಬಂದಿದ್ದರು. ತಮಗೆ ಊಟ ಯಾರು ಹಾಕುತ್ತಿದ್ದಾರೆಂಬುದು ಅವರಿಗೆ ಗೊತ್ತಿಲ್ಲ. ಗಾಂಧಿಯವರ ಹೆಸರಿನಲ್ಲಿ ಎಂದವರಿಗೆ ಗೊತ್ತು. ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಬಂದಿದ್ದರು. ಎಷ್ಟೋ ದಿನಗಳಿಂದ ತೃಪ್ತಿಕರವಾದ ಊಟ ಮಾಡದ ಇವರ ಮುಖದಲ್ಲಿ ಒಂದು ಆಶಾಪೂರ್ವಕ ದೃಷ್ಟಿ. ಅನೇಕ ದಿನಗಳಿಂದ ಖಾಯಂ ಕಾಣದವರು ಅದನ್ನೇ ಉಂಡರು! ಹೆಚ್ಚು ಊಟ ಮಾಡಬೇಕೆಂಬ ಕಣ್ಣಾಸೆ. ಹೊಟ್ಟೆ ಅದಕ್ಕೆ ಸಮ್ಮತಿಸಿದಾಗ. ಅನೇಕರ ಎಲೆಗಳಲ್ಲಿ ಅನ್ನ ಹಾಗೆಯೇ ಉಳಿಯಿತು. ಈ ಸಂದರ್ಭದಲ್ಲಿ ನಾನು ಕಂಡ ಎರಡು ದೃಶ್ಯಗಳನ್ನು ಒರೆಯದಿದ್ದರೆ ನನ್ನ ದಿನಚರಿ ಪೂರ್ಣವೆನಿಸದು

(೧) ಮುಸಲ್ಮಾನ ಭಗಿನಿಯೊಬ್ಬಳ ಬಹು ಬಡಪೆ. ಊಟಕ್ಕೆ ಬರಬೇಕೆಂಬ ಇಚ್ಛೆ. ಆದರೆ ಇಷ್ಟು ಜನರ ಮಧ್ಯೆ ಬರಲಾರಳು. ತನ್ನ ಮುದ್ದಾರು ಹೆಣ್ಣು ಮಕ್ಕಳ ಬಾಲಕಿಯನ್ನು ಕಳುಹಿಸಿದ್ದಳು. ಬಾಲಕಿಯು ಸಂತೋಷದಿಂದ ಊಟ ಮಾಡುತ್ತಿದ್ದಳು. ತಾಯಿಗಾಗಿ ಮನೆಗೆ ಅನ್ನ ತೆಗೆದುಕೊಂಡು ಹೋಗಬೇಕೆಂದು ಆಕೆಯ ಬಯಕೆ. ಎಲೆಯಲ್ಲಿ ಅನ್ನವನ್ನು ಹಾಗೆಯೇ ಇಟ್ಟು ಕೊಂಡಿದ್ದಳು. ಎಲ್ಲರು ಏಳುವಾಗ ಆಕೆಯೂ ಎದ್ದಳು. ಆದನ್ನು ಕಟ್ಟಿಕೊಂಡರೆ ಜನ ಏನೆಂದಾರೋ ಎಂಬ ಭಯ. ಕಡೆಗೆ ಒಬ್ಬರು ಕಟ್ಟಿ ಕೊಳ್ಳಲು ಬೆಳೆದರು. ಬಾಲಕಿ ತೆಗೆದು ಕೊಂಡು ಹೋದಳು.

(೨) ಮಡಿಕೇರಿಯಲ್ಲಿ ಸನ್ನ ಗುರ್ತಿನ ಹುದುಕಲಸುವೆಯಬ್ಬರಿದ್ದರು. ತನ್ನ ಬಾಲ್ಯದಿಂದ ತಮ್ಮ ಸಂಸಾರವನ್ನು ಸಂಸಿದವರು ನಾಲ್ಕು ತಿಂಗಳ ಹಿಂದೆ ತೀರಿಹೋಗಿದ್ದರಾದರು. ಅವರ ವಿಧವೆ ಹೆಂಡತಿಯು ಬಾದಿದ್ದಳು. ಸಂಗುಜೆಯಾಗಿ, ಗೌರವದಿಂದ ಜೀವಿಸುತ್ತಿದ್ದಾಕೆ ಇಂದು ಬಿರವರ ಗಣನೆಯಲ್ಲಿ ಬಡಿಮೆ ಹೊಟ್ಟೆಹೊರೆಯು ಬೇಕಾಗಿದೆ. ತನ್ನ ಇಬ್ಬರು ಮಕ್ಕಳನ್ನು ಸಾಕಬೇಕಿದೆ. ಆಕೆ ಸಂತೋಷದಿಂದ ಬಂದು ದರಿದ್ರನಾರಾಯಣರ ಮಧ್ಯೆ ಕೂತಾಗ ನನ್ನ ಎದೆಗೆ ಶೂಲ ಬಿಟ್ಟಂತಾಯಿತು. ಊಟವಾದ ಮೇಲೆ ಮಕ್ಕಳಿಗೆಂದು ಅನ್ನ ಬೇಡಿದಳು. ಭೋಜನಕ್ಕಿಂಥಾ ಹೆಚ್ಚು ಜನರು ಬಂದಕಾರಣ ಅನ್ನ ಮುಗಿದಿತ್ತು. ನಿರಾಶೆಯಿಂದ ಹಿಂತಿರುಗಿದಳು.

ಇದನ್ನು ಓದಿದಾಗ ವಾಚಕರು ಇದು ಬಗ್ಗೆ, ರಾಯಲ್ಸೀಮೆ, ಮಲಬಾರಿನ ಕಥೆಯೆಂದು ನೆನೆಯದಿರಲಿ. ಸಂಪನ್ನನಾಡೆನ್ನುವ ಕೊಡಗಿನ ರಾಜಧಾನಿ ಮಡಿಕೇರಿಯ ಕರುಣ ಕಥೆ ಇದು. ದೀನ, ದರಿದ್ರ, ದುಃಖಿತರು ಕೊಡಗಿನಲ್ಲಿ ಸಾವಿರಾರು ಮಂದಿ ಇದ್ದಾರೆ. ಈ ದೀನ ದರಿದ್ರರ ಹಿತಕ್ಕಾಗಿ ದುಡಿಯುವ ನಿರ್ಧಾರವನ್ನು ಇನ್ನಾದರೂ ನಮ್ಮ ಸುಧಾರಕರು ನೂಡಿದರೆ ಗಾಂಧೀಜಿಯವರಿಗೆ ಚಿರವಾದ ಸ್ಮಾರಕ ರಚಿಸಿದಂತೆ.

ಸಾಯಂಕಾಲ ೫ ಗಂಟೆಗೆ ರಾಣಾಸೀಟಿನಲ್ಲಿ ಬಹಿರಂಗ ಸಭೆಯು ನಿರ್ಧಾರವಾಗಿತ್ತು. ಜನರು ಕಿಕ್ಕಿರಿದು ನೆರೆದಿದ್ದರು. ಭಾಷಣಗಳಾಗ ತೊಡಗಿದವು. ಒಬ್ಬರು ಬಂದರು. ಪುರೋಹಿತರಂತೆ ಹೇಳಿದರು. 'ಹೇ ಗಾಂಧಿ, ಕೊಡಗಿನವರ ಪರ, ಎಲೆ ಹಿಂದೂ ದೇಶದವರ ಪರ ನಿನಗೆ ಭರವಸೆ ಕೊಡುತ್ತೇನೆ. ನಿನ್ನ ತತ್ವಗಳನ್ನು ಪರಿವಾಲಿಸುವೆನೆಂದು' ನನಗಾಶ್ಚರ್ಯವಾಯಿತು. ಅವನವನ ಮಟ್ಟಿಗೆ ಭರವಸೆ ಹೇಳುವದೇ ಕಷ್ಟ. ಪ್ರತಿಜ್ಞೆ ಮಾಡಿದು

(೬ನೇ ಪುಟ ನೋಡಿ)

# ಕೊ ಡ ಗು

ತಾ. ೫-೩-೧೯೪೮ರಲ್ಲೇ ಶುಕ್ರವಾರ


## ಗಾಂಧೀಜಿಯ ನಂತರ.

ಮಹಾತ್ಮಾಗಾಂಧೀಜಿಯವರು ದೇಶದ ಜವಾಬ್ದಾರಿಯನ್ನು ಹೊತ್ತು ಕಾರ್ಯನಿರ್ವಹಿಸುತ್ತಿದ್ದಾಗ 'ಮುಂದೇನು' ಎಂಬ ಆಲೋಚನೆ ಯಾರೂ ಮಾಡುವ ಅಗತ್ಯವಿರಲಿಲ್ಲ. ಮಹಾತ್ಮರು ಸ್ಥಿತಿಯೊಂದು ವಿಚಾರದಲ್ಲಿಯೂ ತಮ್ಮ ಸ್ಪಷ್ಟಿಕರೂಪದ, ಚೆ ತನಯುತ ಮಾರ್ಗದರ್ಶಿತ್ವದಿಂದ ನ ಮ್ಮನ್ನು ಮುನ್ನಡೆಸುತ್ತಿದ್ದರು. ಆದರೆ ಗಾಂಧೀಜಿಯನ್ನು ಕಳಕೊಂಡು ಅನಾಥರಾಗಿರುವ ಈ ಸಂದರ್ಭದಲ್ಲಿ 'ಮುಂದೇನು' ಎಂಬ ಪ್ರಶ್ನೆಯೊಬ್ಬನ ಮುಂದೆ ಇದೆ. ಭಿನ್ನಖಂಡಪನ್ನು ಕೈ ಹಿಡಿದು ನಡೆಸುವ ಶಕ್ತಿ ಯಾವನು ಎಂಬುದನ್ನು ತಿಳಿದು ವರ್ತಿಸಬೇಕಾಗಿದೆ. ಆ ಮೇರಿಕಾದ ಶ್ರೀಮತಿ ಪರ್ಲ್‌ಬಕ್‌ರವರು ಹೇಳಿದಂತೆ, ಗಾಂಧೀಜಿಯು ವಿಯೋಗದ ಅಂಧಾಕಾರವಲ್ಲಿ ನೆಹರುಗಳೇ ಒಂದು ಆಶಾಕಿರಣ. ನೆಹರೂರವರು ಭಾರತವನ್ನು ಮುನ್ನಡೆಸಲು ಸಮರ್ಥರಾಗಿ.

ಇಂದು ದೇಶವಲ್ಲಿ ತಲೆಯೆತ್ತಿರುವ ಶಕ್ತಿಗಳ ತಲೆನೆ ನಾಡಿ ಅವುಗಳಲ್ಲಿ ಹಿತವಾಗುವನ್ನು ಆರಿಸಿ ಆಳ್ಕೆ ಚಾಲನೆ ಕೊಡುವದು ನಮ್ಮ ಕರ್ತವ್ಯ. ಹಿಂದೂ ದೇಶದ ರಾಜಕೀಯದಲ್ಲಿ ನಾನಾ ಶಕ್ತಿಗಳು ಸ್ಪರ್ಧೆಗಿಳಿದಿವೆ. ಹಿಂದೂ ಮಹಾ ಸಭೆಯು ಮಹಾತ್ಮರ ಕೊಲೆಯ ಮಹಾ ಪಾತಕವನ್ನು ಹೊತ್ತ ನ ರವಾಯಿತು. ಅದು ಭಾರತದಲ್ಲಿ ಮುಂದೆ ತಲೆಯೆತ್ತಿ ನಡೆಯುವಲಾರದು. ಹಿಂದೂದೇಶದ ಮುಸ್ಲಿಂ ಲೀಗೂ ಕೂಡ ಸಮರ್ಥಿಸುವಾಗದೇ ಕು. ಮೊನ್ನೆ ಗುಜರಾತಿಯಲ್ಲಿ ನಡೆಸಮುಸ್ಲಿಂ ಸಮ್ಮೇಳನದಲ್ಲಿ ರಾಷ್ಟ್ರೀಯವಾದಿ ಮುಯುದ್ ಕಿಡ್ವಲ್ಲಾ ಪ್ರೆಲ್ರಿಯವರು ಈ ಬಗ್ಗೆ ಸ್ಪಷ್ಟ ನುಡಿಗಳನ್ನು ಹೇಳಿದ್ದಾರೆ. ಹಿಂದೂದೇಶದಲ್ಲಿ ಮುಸ್ಲಿಂಲೀಗು ಅಸ್ತಿತ್ವ ದಲ್ಲಿರಬಾರದು. ಮುಸ್ಲಿಂ ಲೀಗಿನ ಮೇಲೆ ವಿಶ್ವಾಸನಿರುವವರು ಪಾಕಿಸ್ತಾನಕ್ಕೆ ಹೋಗುವದು ಹಿತ ಎಂದವರು ಘೋಷಿಸಿದ್ದಾರೆ. ಇನ್ನುಳಿದ ಕೋಮುವಾರು ಯಾವ ಪಂಗಡವೂ ಭಾರತದ ರಾಜಕೀಯ ರಂಗದಲ್ಲಿ ಪ್ರಭಾವಯುತವಾಗಿ ಕಲೆ ಎತ್ತಿ ಕೆಲಸ ಮಾಡಲಾರದು. 'ಕಮ್ಯೂನಿಸಂ' ತತ್ವವು ರಷ್ಯಾದಲ್ಲಿ ಯಶಸ್ವಿ (?) ಯಾಗಿ ಕೆಲಸ ಮಾಡುತ್ತಿರಬಹುದು. ಭೌತಿಕ ವಿಚಾರಗಳಿಗೇ ಹೆಚ್ಚಿನ ಬೆಲೆ ಕೊಡುತ್ತಿರುವ ಯೂರೋಪಿನಲ್ಲಿ ಸ್ವಾಗತ ಪಡೆಯಬಹುದು. ಆದರೆ ಭಾರತದಲ್ಲಿ ಭೌತಿಕ ವಿಚಾರಗಳಿಗಿಂತಾ ಧಾರ್ಮಿಕ, ನೈತಿಕ ವಿಚಾರಗಳಿಗೆ ಹೆಚ್ಚಿನ ಮಾನ್ಯತೆ ಇದೆ. ಹಿಂದೂದೇಶದಲ್ಲಿ ಪಾಶ್ಚಿಮಾತ್ಯ ವಿದ್ಯಾಭ್ಯಾಸ ಮಾಡಿ ಸ್ವದೇಶದಲ್ಲಿ ಪರದೇಶಿಯರಂತಿರುವ ಪಧ ವೀಧರರು ಹೆಚ್ಚಾಗಿ ಈ ಪಕ್ಷಕ್ಕೆ ಸೇರಿರುವದೇ ಇದಕ್ಕೆ ನಿದರ್ಶನ. ಆದ್ದರಿಂದ 'ಕಮ್ಯೂನಿಷ್ಟ್' ಪಕ್ಷವು ರಾಜಕೀಯ ಅಧಿಕಾರವನ್ನು ಪಡೆಯುವದು ದೂರದ ಮಾತು.

ಇನ್ನುಳಿದ ಕಾಂಗ್ರೆಸು ಮತ್ತು ಸಮಾಜವಾದಿ ಪಕ್ಷಗಳಲ್ಲಿ ತಿಕ್ಕಾಟ ಬರಬಹುದು. ಸಮಾಜವಾದಿ ಪಕ್ಷವು ಕಾಂಗ್ರೆಸ್ ಮತ್ತು 'ಕಮ್ಯೂನಿಷ್ಟ್' ತತ್ವಗಳ ಸಮ್ಮಿಶ್ರಣವೆನ್ನಬಹುದು. ಆದರೆ ಧ್ಯೇಯ 'ಕಮ್ಯೂನಿಷ್ಟ್'ರ ಧ್ಯೇಯವೆ. ಆದರೆ ಆದನ್ನು ಸಾಧಿಸುವ ಮಾರ್ಗ ಕಾಂಗ್ರೆಸಿನದು. 'ಕೆಲಸ ಮಾಡುವ ಕೈಗೆ ಊಟ ಮಾಡುವ ಹಕ್ಕಿರಬಾರದು' ಎಂಬುದೇ ಇವರ ತತ್ವವಾದರೂ ಹಾಗೆ ಮಾಡುತ್ತಿರುವ ಬಂಡವಾಳಗಾರರನ್ನು ಮುಟ್ಟಲಾಕುವದು ಇವರಿಗೆ ಬೇಕಿಲ್ಲ. ಹೆಚ್ಚು ಮೇಲೇರಿರುವವರನ್ನು ಕೆಳಗಿಳಿಸಿ, ಕೆಳಗೆ ಬಿದ್ದವರನ್ನು ಮೇಲಕ್ಕೆತ್ತಿ ಜಾತಿ, ಮತ, ಧರ್ಮ, ಧನಿಕ, ಬಡವರೆಂಬ ಬೇಧವಿಲ್ಲದ ಸಮನ್ವಯ ಸಮಾಜವನ್ನು ಕಟ್ಟುವ ಸುಗಮ ಮಾರ್ಗ ಇವರದು. ಭರತಖಂಡದಲ್ಲಿ ಇವರ ಪ್ರಭಾವ ಪ್ರಮಾಣ ಹೆಚ್ಚಾಗಬಹುದು.

ಪಕ್ಷಾತೀತ ಕಾಂಗ್ರೆಸಿಗೂ, ಸಮಾಜವಾದಿಗಳಿಗೂ ಹೆಚ್ಚಿನ ಅಂತರವಿಲ್ಲ ಕಾಂಗ್ರೆಸ್ಸು, ಸಮಾಜವಾದಿಗಳ ಸ್ಥಾಯವನ್ನೂ ಳಗೊಂಡಿದೆ. ಆದರೆ ಕಾಂಗ್ರೆಸಿನ ಹೆಜ್ಜೆ ಬಹು ನಿಧಾನದ ಹೆಜ್ಜೆ. ಈ ಮಂದಗ ಮನವೇ ಸಮಾಜವಾದಿಗಳನ್ನು ಬೇರಿರಿಸಲು ಕಾರಣ.

ಭರತಖಂಡದ ಹಿತವಾಗಬೇಕಾದರೆ ಆದು ಈ ಎರಡರ ಸಮ್ಮಿಲನದಿಂದ ಮಾತ್ರ ಸಾಧ್ಯ. ಕಾಂಗ್ರೆಸ್ಸಿನ ಹಳೆ ರಕ್ಕ ನಿರ್ಮಲವಿದ್ದಿರಬಹುದು. ಆದರೆ ಅನೇಕ ವರ್ಷಗಳ ಪರಿಶ್ರಮದಿಂದ, ಇತ್ತಲಾಗಿ ನೊರೆತ ಅಧಿಕಾರದಿಂದ ಆ ರಕ್ತದಲ್ಲಿ ಕಲಂಕ ಕಲ್ಮಶಗಳು ತೋರಿಬರುತ್ತಿವೆ. ಆವನ್ನು ಶುದ್ಧಿಗೊಳಿಸಿ ಹೊಸ ರಕ್ತಸಂಚಾರಕ್ಕೆಡೆ ಕೊಡಬೇಕು. ಸಮಾಜವಾದಿಗಳೂ, ಕಾಂಗ್ರೆಸ್ಸಿನ ಹಳೆ ವರ್ಗವೂ ಒಂದಾಗಿ ಕಾರ್ಯಪ್ರವೃತ್ತರಾಗಬೇಕು.

ಈ ದೃಷ್ಟಿಯಿಂದಲೇ ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸ್ಸಿನ ಶುದ್ಧೀಕರಣಕ್ಕಾಗಿ ತಮ್ಮ ಅಮೂಲ್ಯ ಹೊಸ ಯೋಜನೆಯನ್ನು ತಯಾರಿಸಿ ಕೊಟ್ಟಿದ್ದಾರೆ. ಆದರಲ್ಲಿ ಸಮ್ಮಿಳಿತರಾಗಿ ಕೆಲಸ ಮಾಡಲು ಸಮಾಜವಾದಿಗಳೂ ಹಿಂಜರಿಯರು. ಏಕೆಂದರೆ ಗಾಂಧಿ ಕಲ್ಪಿತ ಕಾಂಗ್ರೆಸ್ಸು ಮಜೂರರ ಮತ್ತು ರೈತರ ಅಧಿವಾಯದಲ್ಲಿ ಕಟ್ಟಲ್ಪಡತಕ್ಕಂಥಾದ್ದು. ಇದೇ ಗಾಂಧೀಜಿಯವರ ಸ್ಮಾರಕವಾಗಲಿ. ಅವನ್ನು ಚಾರಿಯಲ್ಲಿ ತಂದು ಅದರಂತೆ ಕೆಲಸ ಮಾಡಿ ಗಾಂಧೀಜಿಯ ಆಶಯವನ್ನು ನೆನವೇರಿಸುವಾ.

ಆಧುನಿಕ ಭಾರತವನ್ನು ಕಟ್ಟಿದ ಬಾಲಗಂಗಾಧರ ತಿಲಕರು ಪರಂಧಾಮವನ್ನೈದಿದಾಗ ನೂಡಿದಂತೆ ಈಗಲೂ ಗಾಂಧಿ ಸ್ಮಾರಕಗಳಿಗಾಗಿ ಹಣ ಸಂಗ್ರಹಿಸಲಾಗುತ್ತಿದೆ. ತಿಲಕರಿಗೆ ಕಟ್ಟಿದ ಸ್ಮಾರಕಗಳು ಯಾವ ರೀತಿ ಇಂದು ಮರೆತು ಹೋಗಿರುವವೋ ಅದೇ ರೀತಿ ಗಾಂಧಿ ಸ್ಮಾರಕಗಳೂ ಕ್ರಮಶಃ ಮರೆತು ಹೋಗುವನು ಸ್ವಾಭಾವಿಕ. ಆದ್ದರಿಂದ ಸ್ಮಾರಕವು ಜೀವಿತ ಜನರ ಹೃದಯದಲ್ಲಾಗಬೇಕು. ಆದಕ್ಕೆ ಆವರು ರೂಪರೇಷೆ ಹಾಕಿಕೊಟ್ಟಂತೆ ಪರಿಶುದ್ಧ ಕಾಂಗ್ರೆಸನ್ನು ಕಟ್ಟಿ ಸಮಾಜವಾದಿಗಳ ಸಹಕಾರ ಪಡೆದು ಮುನ್ನಡೆಯುವದೇ ಪ್ರತಿಯೊಬ್ಬನ ಕರ್ತವ್ಯ.

## ವರ್ತಮಾನ.

೧೯೪೮-೪೯ನೇ ಸಾಲಿನ ಕಾಫಿಯ ಬೆಲೆಯನ್ನು ಫಿಕ್ಸು ಮಾಡುವದಿಂದ ಈ ಸಾಲಿನ ತಮ್ಮ ಕಾಫಿಯನ್ನು ಪೊದಲೇ ಪೂರಿಲೆಕ್ಕ ಕೊಡಿಸಿಕೊಂಡಿರಬಹುದಾದ ಮತ್ತು ಮೂರಲಿಕ್ಕಿರುವ ಪ್ಲಾಂಟರುಗಳು ತಮ್ಮ ಎಜೆಂಟರಲ್ಲಿ ತಮ್ಮ ಪೂರ್ವ ಪರಿಚಿತ ಹಾಜರಿ-ಪಡಿಸಿ ಹೆಚ್ಚಿನ ಬೆಲೆಯನ್ನು ಪಡೆಯಬಹುದೆಂದು ಕಾಫಿ ಕಾಂಟ್ರೊಲ್ ಬೋರ್ಡಿನ ಚೇರ್ಮನ್ ಇನ್ ನೆಕ್ಟರು ತಿಳಿಸುತ್ತಾರೆ

ತಾರೀಕು ೧೫ ರಲ್ಲಿ ಪೊನ್ನಂಪೇಟೆಯಲ್ಲಿ ಗಾಂಧೀಶ್ರದ್ಧಾವಿಧಿಯನ್ನು ಯಶಸ್ವಿಯಾಗಿ ಜರಗಿಸಿದರು. ಪೊನ್ನಂಪೇಟೆಯಲ್ಲಿಗಾಂಧಿ ಸ್ಮಾರಕ ಭವನನಿರ್ಮಾಣವನ್ನು ಕಟ್ಟಲು ನಿಶ್ಚಯಿಸಿ ಅವಶ್ಯಕ್ಕೆ ವಿಧಿಸಿಂಗ್ರಹಿಸಲು ಶ್ರೀಗಳಾದ ಏನರ್ ಬುಲ್, ಕುಪ್ಪಂಡ ಮೂಚಯ್ಯ, ಮುರುವಂಡ ಮಾಚಯ್ಯ, ಕೂತಂಡ ಪೂವಯ್ಯ, ಕುಟ್ಟಂಡ ಪೂನಯ್ಯ, ಆಲ್ಬರ್ಟ್ ವಾಸ್, ಓ ಒಬ್ಬಲ್ಲಾಕಾಕ, ಕಾಡ್ಯಮಾಡ ತಿಮ್ಮಯ್ಯ, ಕುಟ್ಟಂಡ ಕುಟ್ಟಪ್ಪ, ಹರಿಜನ ಕನ್ನ ಇವರಿಂದ ಕೂಡಿದ ಒಂದು ಸಮಿತಿಯನ್ನು ಆರಿಸಲಾಯಿತು.

ಚಿಕ್ಕಮಗಳೂರಿನಲ್ಲಿ ಶ್ರೀ. ಅಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಪುಲಿಯಂಡ ಜೆ. ಮುತ್ತಪ್ಪನವರನ್ನು ಮೈಸೂರು ಸಂಸ್ಥಾನದ ವಯಸ್ಕರ ವಿದ್ಯಾಪ್ರಚಾರ ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿಗಳಾಗಿ ನೇಮಿಸಿರುವರು.

ತಾರೀಕು ೫೫-೩-೪೮ರಲ್ಲಿ ಕೋಕೇರಿ ಗ್ರಾಮದ ಶ್ರೀ. ಮಚ್ಚಂಡ ಅಚ್ಚಮ್ಮ ಮತ್ತು ಸುಬ್ಬಯ್ಯ ಇವರುಗಳ ಹುಲ್ಲು ಮುಂಡಕ್ಕೆ ಬೆಂಕಿ ಬಿತ್ತೆಂದೂ ಹತ್ತಿರದ ಮನೆಗಳೂ ಬೆಂದು ಹೋಗುವ ಸಂದರ್ಭ ವಿತ್ತೆಂದೂ ಆದರೆ ನೆರೆಹೊರೆಯ ಹೆಂಗಸರು, ಮಕ್ಕಳು, ಗಂಡಸರು ಸಜಕರಿಸಿ ವಿಸ್ಪಯತ್ನಮಾಡಿ ಬೆಂಕಿಯನ್ನು ನಂದಿಸಿ ಮನೆಗಳನ್ನು ಉಳಿಸಿದರೆಂದೂ ತಿಳಿಯಬರುತ್ತದೆ.

ತಾರೀಕು ೨೮-೩-೪೮ರಲ್ಲಿ ಹಾತೂರು ಒಕ್ಕಲಿಗರ ಸಭೆಯೊಂದು ಶ್ರೀ. ಎಚ್. ಬಿ. ಅಣ್ಣಾಜ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮಹಾತ್ಮಾಗಾಂಧೀಜಿಯವರ ಅತ್ಯಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥಿಸಲಾಯಿತು.

ಗೋಣಿಕೊಪ್ಪಲು ಜಾತ್ರೆಯಾರಂಭ ಜಾತ್ರೆ ಮತ್ತು ವಸ್ತು ಪ್ರದರ್ಶನವು ಬರುವ ಏಪ್ರಿಲ್ ತಾರೀಕು ೮ರಲ್ಲಿ ಪ್ರಾರಂಭವಾಗಿ ೧೫ರ ವರೆಗೆ ನಡೆಯುವದು.

ಈ ತಾರೀಕು ೧೫ ರಲ್ಲಿ ಶ್ರೀ. ಕಾವೇರಿ ಆಶ್ರಮದಲ್ಲಿ ಶ್ರೀ. ರಂಗಕೃಷ್ಣ ಜಯಂತಿ ಉತ್ಸವವು ನಡೆಯುವದು. ಶ್ರೀಗಳಾದ ಕೇಳಪಂಡ ಉಚ್ಚಪ್ಪ ಮತ್ತು ಪಳಂಗಂಡ ಅಪ್ಪಯ್ಯನವರುಗಳ ಭಾಷಣ ಮಾಡಲಿರುವರು.

ತಾರೀಕು ೩೦-೪-೪೮ನೇ ಸಾಯಂಕಾಲ ಕೊಡಗು ಜಮೀನ್ದಾರರ ಸಂಘದ ಎದುರುಗಡೆ ವೈದ್ಯನಾಥಪುರಿಯ ಮಂಗಳಾರತಿಯ ಸುಪ್ರಸಿದ್ಧ ವಾಗ್ಮಿಗಳಾದ ಶ್ರೀ ನಾರಾಯಣ ಕಿಲ್ಲೆಗಳವರು 'ಮಹಾತ್ಮಾಗಾಂಧೀಜಿಯವರ ಹತ್ಯೆ' ಯ ವಿಚಾರ ಭಾಷಣ ಮಾಡಿದರು.

ಕೂಡಿಗೆ ಚೀಫ್ ಫಾರೆಸ್ಟ್ ಆಫೀಸರಾದ ಶ್ರೀ ಚಿನ್ನಿರ ಕ. ಕಾಳಪ್ಪನವರನ್ನು ಸೇಲಂ ಸರ್ಕಲಿನ ಕನ್ಸರ್ವೇಟರಾಗಿ ನೇಮಿಸಿರುವರೆಂದು ವಾರ್ತೆ.

ಬರುವ ಏಪ್ರಿಲ್ ತಿಂಗಳಿಂದ ಪೊನ್ನಂಪೇಟೆ, ನಾಪೋಕ್ಲು ಮತ್ತು ಸೋಮವಾರಪೇಟೆ ಹೈಸ್ಕೂಲುಗಳ ಆಡಳಿತವನ್ನು ಸರಕಾರವು ವಹಿಸಿಕೊಳ್ಳಲಿದೆಯೆಂದು ವರ್ತಮಾನ.

ರಜಪೂತ ರಿಜಿಮೆಂಟಿನಲ್ಲಿ ಲೆಫ್ಟನೆಂಟರಾಗಿದ್ದ ಶ್ರೀ ಪಟ್ಟಚೆರವಂಡ ಪಿ. ದೇವಯ್ಯನವರು ಕಾಶ್ಮೀರ ಕದನದಲ್ಲಿ ತಾರೀಕು ೧೬-೨-೪೮ರಲ್ಲಿ ಕೊಲ್ಲಲ್ಪಟ್ಟಿರುವರೆಂದು ತಿಳಿಯಬಂದಿದೆ.


ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

### ವಿನಂತಿ.

ತಾ. 5-4-48ರಲ್ಲಿ ವೀರಾಜಪೇಟೆ ಹೈಸ್ಕೂಲಿನಲ್ಲಿ ನಡೆಯುವ ಸಹಕಾರ ಸಮ್ಮೇಳನದ ಚೆಂದ ರಿ. 7-0-0ನ್ನು ತಾ. 20-3-48ರ ಒಳಗೆ ತಪ್ಪದೆ ಆಯಾಯ ಸರ್ಕಲ್ ಸುಪರ್‌ವೈಜರುಗಳಿಗೆ ಪಾವತಿ ಮಾಡಿ ರಶೀದಿ ಪಡೆಯಬೇಕಾಗಿಯೂ ಸಮ್ಮೇಳನದಲ್ಲಿ ಪ್ರದರ್ಶಿಸಲಿರುವ ವ್ಯವಸಾಯ ಉತ್ಪತ್ತಿಗಳು ನೈಸರ್ಗಿಕಸಾಮಾನು ವಸ್ತುಗಳನ್ನು ತಾ. 4-4-48ರ ಒಳಗೆ ತಲಪಿಸಬೇಕಾಗಿಯೂ ವಿನಂತಿ.

ಎಂ. ಎಸ್. ಸೋಮಯ್ಯ,
(ಗೌರವ ಕಾರ್ಯದರ್ಶಿ)



### "ಗ್ರೇಂಡ್ ಓಪನಿಂಗ್"

ಇದೇ ತಾರೀಕು 6-2-48 ರಲ್ಲು ವೀರರಾಜಪೇಟೆ ಟೌನ್ ಪೋಸ್ಟ್ ಆಫೀಸಿನ ಬಳಿ ಹೊಸದಾಗಿ ಒಂದು ಅಂಗಡಿಯನ್ನು ತೆರೆದಿರುತ್ತೇನೆ. ಈ ಅಂಗಡಿಯಲ್ಲಿ ಹೆಚ್ಚು ಬಾಳಿಕೆ ಬರಬಹುದಾದ ಕಟ್ಟೀರಿ ಮತ್ತು ಪಾದರಕ್ಷೆ ವಸ್ತುಗಳು ಕಮ್ಮಿ ದರದಲ್ಲು ದೊರೆಯುತ್ತವೆ. ದಯವಿಟ್ಟು ಒಂದಾವೃತ್ತಿ ಬಂದು ಪರೀಕ್ಷಿಸಿದಲ್ಲು ತಿಳಿಯಬಹುದು.

ಮೆಸರ್ಸ್ ಮನ್ನಾ ಸ್ಟೋರ್ಸ್,
4-3 ವೀರರಾಜಪೇಟೆ.



### ಜಾಗ ಮಾರಾಟಕ್ಕಿದೆ.

ಬೆಟ್ಟಗೇರಿ ಗ್ರಾಮದಲ್ಲಿ ಮತ್ತು ಕನ್ನಡ ಬೆಟ್ಟದಲ್ಲಿ ಸುಮಾರು 120 ಎಕರೆ ಉತ್ತಮ ಜಾಗ ಮಾರಾಟಕ್ಕಿದೆ. ಖರೀದಿಯಸ್ತರು ಈ ಪತ್ರಿಕೆಗೆ ಬರೆದರೆ ವಿಚಾರಿಸಲಾಗುವುದು.

'X'
3-3 C/o. ಮೇನೇಜರರು,
'ಕೊಡಗು' ಮಡಿಕೇರಿ.

# ಹಿಂದುಸ್ಥಾನದ ಹೊಸ ಘಟನೆ

ಸ್ವತಂತ್ರ ಹಿಂದೂಸ್ಥಾನದ ಘಟನೆಯ ಕರಡು ಸಿದ್ಧಪಡಿಸಲು ಘಟನಾ ಸಮಿತಿಯು ನೇಮಿಸಿಗ ಉಡ ಸಮಿತಿಯು ಸಿದ್ಧಪಡಿಸಿದ ಹಿಂದುಸ್ಥಾನದ ಕರಡು ಘಟನೆಯು ಘಟನಾ ಸಮಿತಿಯ ಅಧ್ಯಕ್ಷರಿಗೆ ಒಪ್ಪಿಸಲ್ಪಟ್ಟ ತರುವಾಯ ತಾರೀಕಿಗ ಪ್ರಸಿದ್ಧಿಪಡಿಸಲ್ಪಟ್ಟಿದೆ ಅದರಲ್ಲಿ ೧೮ ವಿಭಾಗಗಳನ್ನು ಮಾಡಿದ್ದು ೩೫೫ ಕಲಮುಗಳು ಮತ್ತು ೮ ಪರಿಶಿಷ್ಟಗಳು ಇವೆ

ಡಾ ಬಿ ಆರ್ ಅಂಬೇಡಕರರು ಉಪ ಸಮಿತಿಯ ಅಧ್ಯಕ್ಷರಾಗಿದ್ದರು ಎನ್ ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಕೆ ಎಂ ಮುನ್ಷಿ, ಎನ್ ಮಾಧವರಾವ್, ಡಿ ಪಿ ಖೈತಾನ್ ಮತ್ತು ಸಖ್ಯದ ಮಹಮ್ಮದ ಸಾದುಲ್ಲಾ ಇವರು ಸದಸ್ಯರಾಗಿದ್ದರು. ಘಟನಾ ಸಮಿತಿಯು ಕರೆದ ಜನವರಿಯಲ್ಲಿ ಸ್ವೀಕರಿಸುವ ಧ್ಯೇಯನಿರೂಪಣೆ ಗೊತ್ತುವಳಿಯನ್ನು ಈ ಕರಡು ಅನುಸರಿಸಿದೆ ಹಿಂದುಸ್ಥಾನವನ್ನು ಸಾರ್ವಭೌಮ ಲೋಕಸತ್ತಾತ್ಮಕ ಪ್ರಜಾರಾಜ್ಯವನ್ನಾಗಿ ಘೋಷಿಸಲು ಹಾಗೂ ಅವರ ಎಲ್ಲ ನಾಗರಿಕರಿಗೆ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ ಅಭಿಪ್ರಾಯ ಶ್ರದ್ಧೆ ಮತ ಹಾಗು ಪ್ರಜಾ ಸ್ವಾತಂತ್ರ್ಯವನ್ನು ಸಮಾನ ಸ್ಥಾನವೂನ ಹಾಗೂ ಸಂಧಿಯನ್ನು ದೊರಕಿಸಿ ಕೊಡಲು ಮತ್ತು ವೈಯಕ್ತಿಕ ಗೌರವದ ಹಾಗೂ ರಾಷ್ಟ್ರದ ಐಕ್ಯದಅಶ್ವಾಸನಕೊಟ್ಟುಅವರಲ್ಲಿ ಸರ್ವವಿಧ ಭಾಂಧ್ಯವ ಬೆಳೆಸುವ ಆವಕಾವನ್ನು ಇವರಲ್ಲಿ ಕಲ್ಪಿಸಿ ಕೊಡಲಾಗಿದೆ

ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ಹೇಳಿತ್ತಾ, ಪರಿಶಿಷ್ಟದಲ್ಲಿ ಮಾತ್ರ ಪ್ರತ್ಯೇಕ ಪ್ರಾಂತದ ಉಲ್ಲೇಖ ಮಾಡಿದರೆ ಹೊಸ ಘಟನೆಯು ಪ್ರಾರಂಭದಿಂದ ಅದು ಬರುವದಿಲ್ಲೆಂದು ಸಮಿತಿಯ ಅಭಿಪ್ರಾಯ ವಾಗಿದ್ದು, ಹೊಸ ಘಟನೆಯ ಪ್ರಾರಂಭದಿಂದ ಹೊಸ ೦ ಷ್ಟವು ಲಸ್ತಿತ್ವದಲ್ಲಿ ಬರಬೇಕಾದರೆ ಸದ್ಯದ ಘಟನೆಯು ಮೇರೆಗೆ ಕೂಡಲೆ ಪ್ರಾಯಸ್ತಿಕ ಉಪಾಯ ಗಳನ್ನು ಕೈಕೊಳ್ಳಬೇಕಾಗುವದೆಂದು ಅದು ಅಭಿಪ್ರಾಯಪಟ್ಟಿದೆ ಆಂಧ್ರ ಪ್ರಾಂತದ ಸಂಬಂಧದಲ್ಲಿಯಷ್ಟೇ ಅಲ್ಲದೆ ಉಳಿದ ಭಾಷ ನುಗುಣ ಪ್ರದೇಶಗಳ ಸಂಬಂಧದಲ್ಲಿಯೂ ಯಾವತ್ತು ವಿಷಯಗಳ ವಿಚಾರ ಮಾಡಲು ಒಂದು ಸಮಿತಿಯನ್ನ ನೇಮಿಸತಕ್ಕದ್ದೆಂದು ಈ ಸಮಿತಿಯು ಸೂಚಿಸುತ್ತದೆ ಮತ್ತು ೧೯೫೦ನೆಯ ಇಸ್ವಿಯ ಕಾಯಿದೆಯ ಮೇರೆಗೆ ಯಾವದಾದರೂ ಹೊಸ ರಾಷ್ಟ್ರವನ್ನು ರಚಿಸಲು ಹಾಗೂ ಘಟನೆಯಲ್ಲಿ ಕೊನೆಯದಾಗಿ ಸ್ವೀಕರಿಸಲ್ಪಡುವ ನೊದಲು ಕರಡಿನ ಪರಿಶಿಷ್ಟದಲ್ಲಿ ಅದನ್ನು ಕಾಣಿಸಲು ಸಮಿತಿಯು ಸೂಚಿಸಬಯಸುತ್ತಿದ್ದರೆ ಹಾಗೆ ಮಾಡಲು ಅನುಕೂಲವಾಗುವಂತೆ ಸಕಾಲದಲ್ಲಿ ವರದಿಮಾಡಲು ಅದಕ್ಕೆ ಸಲಹೆ ಕೊಡಬೇಕೆಂದೂ ತಿಳಿಸಿದೆ

### ಒಕ್ಕೂಟದ ಅಧ್ಯಕ್ಷರು

ಹಿಂದುಸ್ತಾನವನ್ನು ರಾಷ್ಟ್ರಗಳ ಒಕ್ಕೂಟ ಎಂದು ಕರೆಯಲಾಗಿದೆ ಈ ಒಕ್ಕೂಟದ ವರಿಷ್ಟನೇ ಹಿಂದೂಸ್ಥಾನದ ಅಧ್ಯಕ್ಷನು ಎಲ್ಲ ಅಧಿಕಾರ ಇವನಲ್ಲಿ ಕೇಂದ್ರೀಯಗೊಂಡಿದೆ ಹೊಣಗಾರ ಮಂತ್ರಿಗಳ ಸಲಹೆ ಪ್ರಕಾರ ತನ್ನು ಅವನ್ನು ನಿರ್ವಹಿಸುವನು ಅವನು ಪಾರ್ಲಿಮೆಂಟಿನ ಎರಡೂ ಗೃಹಗಳ ಸದಸ್ಯರು ಮತ್ತು ರಾಷ್ಟ್ರಗಳ ಶಾಸನ ಸಭೆಗಳ ಲೋಕ ನಿರ್ಮಿಸಿರಿಂದ ಕೂಡಿದ ಚುನಾವಣೆಗೆ ನಿಲ್ಲಬಲ್ಲನು ಅವನ ಪದವಿಗ್ರಹಣ ಮಾಡಿಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅವನ ಪಾರ್ಲಿಮೆಂಟಿನ ಕೆಳಗಿನ ಸದನಕ್ಕೆ ಆರಿಸಲ್ಪಡಲು ಅರ್ಹತೆಯುಳ್ಳವನಿರಬೇಕು ಅವನು ಘಟನೆಯನ್ನು ಮೀರಿ ನಡೆದರೆ ಅವನನ್ನು ವಿಚಾರಣೆಗೆ ಗುರಿ ಮಾಡಬಹುದು ಉಪಾಧ್ಯಕ್ಷನು ಕೌನ್ಸಿಲ್ ಆಫ್ ಸ್ಟೇಟಿನ ಎಕ್ಸ ಆಫಿಸಿಯೋ ಅಧ್ಯಕ್ಷನಾಗುವನು ಮತ್ತು ಪಾರ್ಲಿಮೆಂಟಿನ ಎರಡೂ ಗೃಹಗಳ ಸಂಯುಕ್ತ ಸಭೆಯಲ್ಲಿ ಸಾಮಾನ್ಯನಿಗುಣ ಪ್ರಾತಿನಿಧ್ಯ ಪದ್ಧತಿಯಿಂದ ತಲೆಗೊಂದರಂತೆ ಮತ್ತು ಬನಲಿಸಬರುವಂತಿರುವ ಮತದ ನದಿಂದ ಅವನು ಆರಿಸಲ್ಪಡುವನು ಅವನ ಅಧಿಕಾರದ ಅವಧಿ ೫ ವರ್ಷ

### ಮಂತ್ರಿ ಮಂಡಲ

ಮಂತ್ರಿ ಮಂಡಲಕ್ಕೆ ಮುಖ್ಯ ಮಂತ್ರಿ ವರಿಷ್ಠನು ಅಧ್ಯಕ್ಷನಿಗೆ ಸಹಾಯ ಸಲಹೆ ಕೂಡ ಮಂಡಲದ ಕರ್ತವ್ಯ. ಪ್ರಜಾ ಸಭೆಗೆ ಅವು ಸಾಮೂಹಿಕವಾಗಿ ಹೊಣೆಗಾರವಿರುವದು

ಒಕ್ಕೂಟ ಪಾರ್ಲಿಮೆಂಟು ಅಧ್ಯಕ್ಷ ಹಾಗೂ ಪ್ರಜಾ ಸಭೆಗಳಿಂದ ಯುಕ್ತವಾಗಿರತಕ್ಕದ್ದು ಆವರಿಂದ ಜನರನ್ನು ಆ ವೈಜ್ಞಾನಿಕರು ಸಾಹಿತ್ಯ ಕಲೆ ವಿಜ್ಞಾನ ಮೊದಲಾದವುಗಳ ಪ್ರತಿನಿಧಿಗಳೆಂದು ನೇಮಕ ಮಾಡತಕ್ಕದ್ದು ಉಳಿದವರನ್ನು ರಾಷ್ಟ್ರಗಳು ಆರಿಸುವವು ಪ್ರಜಾ ಸಭೆಯು ೫೦೦ಕ್ಕಿಂತ ಹೆಚ್ಚು ಪ್ರತಿನಿಧಿಗಳಿಂದ ಕೂಡಿರತಕ್ಕದ್ದಲ್ಲ ಕೌನ್ಸಿಲ್ ಆಫ್ ಸ್ಟೇಟು ವಿಸರ್ಜಿಸಲ್ಪಡುವುದಿಲ್ಲ ಪ್ರತಿ ಎರಡು ವರ್ಷಕ್ಕೆ ಸದಸ್ಯರಲ್ಲಿ ಸಮಾರು ೧/೩ರಿಷ್ಟ ಜನರು ನಿವೃತ್ತರಾಗುವರು ಪ್ರಜಾ ಸಭೆಯು ಅವಧಿಗ ವರ್ಷದ್ದಿದ್ದು ಅದರ ನಂತರ ಅದು ವಿಸರ್ಜಿಸಲ್ಪಡುವದು ಆದರೆ ಯಾವದೇ ಕರಣ ಪ್ರಸಂಗದಲ್ಲಿ ಅವರ ಅವಧಿಯನ್ನು ಒಂದು ವರ್ಷಕ್ಕೀಂತ ಹೆಚ್ಚಿಲ್ಲದ್ದಷ್ಟು ಬೆಳೆಸಲು ವ್ಯವಸ್ಥ ಮಾಡಲಾಗಿದೆ

### ವರಿಷ್ಠ ನ್ಯಾಯಾಸನ

ಹಿಂದೂಸ್ಥಾನದಲ್ಲಿ ವರಿಷ್ಠ ನ್ಯಾಯಾಸನವೊಂದನ್ನು ಸ್ಥಾಪಿಸಲಾಗುವದು ಅದರಲ್ಲಿ ಒಬ್ಬ ವರಿಷ್ಠ ನ್ಯಾಯಾಧೀಶ ಮತ್ತು ೨೫ಕ್ಕಿಂತ ಕಡಿಮೆಯಿಲ್ಲದಷ್ಟು ನ್ಯಾಯಾಧೀಶರಿರತಕ್ಕದ್ದು ಹೊಸ ಖಟ್ಲೆಗಳ ವಿಚಾರಣೆ, ಆಪೀಲುಗಳ ವಿಚಾರಣೆ, ಒಕ್ಕೂಟ ಮತ್ತು ಘಟಕ ಇಲ್ಲವೆ ಘಟಕಗಳ ನಡುವಿನ ಖಟ್ಲೆಗಳ ವಿಚಾರಣೆ ಮೊದಲಾದುವುಗಳನ್ನು ಈ ವರಿಷ್ಠ ನ್ಯಾಯಾಸನವು ಮಾಡಬಲ್ಲದು. ೧೯೫೦ನೇ ಇಸ್ವಿಯ ಕಾನೂನಿನಲ್ಲಿಯಂತೆ ಆಡಿಬರ್ ಜನರಲ್ಲರ ನೇಮಕದ ವ್ಯವಸ್ಥೆಯೂ ಆಗಿದೆ

### ಪ್ರಾಂತಗಳ ಆಡಳಿತ

ಪ್ರತಿಯೊಂದು ಪ್ರಾಂತದಲ್ಲಿ ಒಬ್ಬ ಗವರ್ನರು ಇರತಕ್ಕದ್ದು ಕಾರ್ಯಕಾರಿ ಅಧಿಕಾರ ಅವನದು ಗವರ್ನರರು (೧) ಅಯಾ ಪ್ರಾಂತದಲ್ಲಿಯು ಸಾಮಾನ್ಯ ಮತದಾರ ಅಧಿಕ ರವಿದ್ದವನಿಂದ ನೇರವಾಗಿ ಆರಿಸಲ್ಪಡಬೇಕು ಇಲ್ಲವೆ (೨) ಕಾಯದೆ ಮಂಡಲದಿಂದ ಆರಿಸಲ್ಪಟ್ಟ ನಾಲ್ಕರಲ್ಲಿ ಅಧ್ಯಕ್ಷರಿಂದ ಒಬ್ಬರನ್ನು ಆರಿಸಬೇಕೆಂದು ಸಮಿತಿಯು ಸೂಚಿಸಿದ್ದಾರೆ ಇವರ ಅಧಿಕಾರ ವಧಿ ೫ ವರ್ಷ ಕಲವು ವಿಷಯಗಳನ್ನು ಬಿಟ್ಟು ಉಳಿದ ವಿಷಯಗಳಲ್ಲಿಲ್ಲ ಗವರ್ನರರು ಮಂತ್ರಿಮಂಡಳದ ಸಲಹೆಯಂತೆ ನಡಸಬೇಕು ೫ ವಾರಕ್ಕಿಂತ ಹೆಚ್ಚು ಅವಧಿಯ ವರೆಗೆ ಘಟನಾನ್ಯೂನತೆಯ ಉಡತನವನ್ನು ಗವರ್ನರನ ತಡೆಹಿಡಿಯಲಾರನು ಪ್ರಾಂತಗಳಿಗೆ ಮಂತ್ರಿಮಂಡಳವಿರುವದು ಮುಖ್ಯಸ್ಥ ಮಂತ್ರಿ ಅವಕ್ಕೆ ಮುಖ್ಯಸ್ಥ ಗವರ್ನರ ಪಕ್ಷ ಕಾಯದೆ ಮಂಡಳಗಳು ಕಾಯ್ದ ವಿಧಾಯಕ ಕಾರ್ಯನಡಸುವವು ಕಲವು ಪ್ರಾಂತಗಳಲ್ಲಿ ಒಂದು, ಕಲವುಗಳಲ್ಲಿ ಎರಡು ಕಾಯದೆ ಮಂಡಳಗಳಿವೆ ಶ್ರೇಷ್ಠ ಮತದಾನ ಪದ್ಧತಿಯನ್ವಯ ಕಾಯ್ದ ಮಂಡಳಗಳಿಗೆ ಸದಸ್ಯರ ಆಯ್ಕೆಯಾಗತಕ್ಕದ್ದು ಅದರಲ್ಲಿ ೬೦ ಕ್ಕಿಂತ ಕಡಿಮೆ ಸಂಖ್ಯೆ ೫೦೦ ಕ್ಕಿಂತ ಹೆಚ್ಚು ಸದಸ್ಯರಿರಕೂಡದು ವಿಧಿಸಂಡಳದ ಸದಸ್ಯರಲ್ಲಿ ಅರ್ಧದಷ್ಟು ವ್ಯಸಾಯದ ತಳಹದಿಯ ಮೇಲೆ ೧೩ ಜನರು ಶಾಸನ ಸಭೆಯ ಸದಸ್ಯರಿಂದ ಆರಿಸಲ್ಪಟ್ಟು ಉಳಿದವರನ್ನು ಗವರ್ನರರು ನಾಮಿನೇಟು ಕು ಶಾಸನ ಸಭೆಯು ಜೀವನಾವಧಿ ೫ ವರ್ಷ ವಿಧಿಮಂಡಳದ೧೩ನೆಷ್ಟು ಸದಸ್ಯರು ಪ್ರತಿವರ್ಷ ನಿವೃತ್ತರಾಗತಕ್ಕದ್ದು

### ಜೇಫ್ ಕಮಿಷನರ ಪ್ರಾಂತಗಳು

ಚೀಫ್ ಕಮಿಷನರ್ ಪ್ರಾಂತಗಳ ಆಡಳಿತವನ್ನು ಚೀಫ್ ಕಮಿಷನರು, ಲೆ ಗವರ್ನರ್ ಇಲ್ಲವೇ ಗವರ್ನರರ ಇಲ್ಲವೇ ನೆರೆ ಸಂಸ್ಥಾನದ ರಾಜರ ಮೂಲಕ ನಡೆಸುವ ವ್ಯವಸ್ಥೆ ಇದೆ ಒಂದು ಭಾಗದ ವಿಷಯದಲ್ಲಿಯೂ ರೀತಿಯ ವ್ಯವಸ್ಥೆ ಮಾಡಬೇಕೆಂಬುದು ಯೂನಿಯನ್ ಪೆಸಿಡೆಂಟರಿಗೆ ಬಿಡಲ್ಪಟ್ಟಿದೆ ಇವರು ಈ ವಿಚಾರದಲ್ಲಿ ಮಿತ್ರಿತರ ಸಂಗತಿಗಳಲ್ಲುಂತೆ ಜವಾಬ್ದಾರಿಯುತ ಮಂತ್ರಿಗಳ ಸಲಹೆಯಂತೆ ವರ್ತಿಸತಕ್ಕದ್ದು ಸ್ಥಳೀಯ ನ್ಯಾಯ ಕಾಶನ ಸಭೆಗಳನ್ನು ಏರ್ಪಡಿಸುವದು ಇಲ್ಲವೇ ಸಲಹೆಗಾರರ ಮಂಡಳಿಯನ್ನು ರಚಿಸಲು, ಅವರ ಅಧಿಕಾರ ಮೊದಲಾದುವನ್ನು ನಿರ್ಣಯಿಸುವದು ಪ್ರಸಿಡೆಂಟರಿಗೆ ಕೂಡಿದೆ

### ಅಲ್ಪಸಂಖ್ಯಾಕರ ರಕ್ಷಣೆ

ಮುಸಲ್ಮಾನ, ದಲಿತವರ್ಗ ಗುಡ್ಡಗಾಡು ಜನರು, ಹಿಂದೀ ಕ್ರಿಶ್ಚನರ (ಮಂಬಯಿ ಮದ್ರಾಸ ಸ್ಥಾನಗಳಲ್ಲಸ್ಟೇ) ಇವರಿಗಾಗಿ ಕಾಯದೆ ಮಂಡಳಗಳಲ್ಲಿ ಮುಂದಿನ ಹತ್ತು ವರ್ಷಗಳ ವರೆಗೆ ಸ್ಥಳಗಳನ್ನು ಕಾಯ್ದಿಡಲಾಗಿದೆ ನೌಕರಿ ಮತ್ತು ಶೈಕ್ಷಣಿಕ ಧನಸಹಾಯ ಈ ವಿಷಯಗಳಲ್ಲಿ ಆಂಗ್ಲೋ ಇಂಡಿಯನರಿಗೆ ಸವಲತ್ತುಗಳನ್ನು ಕೊಡಲಾಗಿದೆ ಒಕ್ಕೂಟ ಮತ್ತು ರಾಷ್ಟ್ರಗಳಲ್ಲಿ ಅಲ್ಪ ಸಂಖ್ಯಾಕರ ಹಿತರಕ್ಷಣೆಯ ಬಗ್ಗೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸುವ ವ್ಯವಸ್ಥೆಯಿದೆ ಅಲ್ಲದೆ ಹಿಂದುಳಿದ ವರ್ಗಗಳ ಪರಿಸ್ಥಿತಿಯನ್ನು ಪರಿಶೀಲಿಸಲು ಮಂಡಳಿಯನ್ನು ನೇಮಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ.

## ಪಾಕಿಸ್ಥಾನದ ಆಯವ್ಯಯ.

ಪಾಕಿಸ್ತಾನ ಸರಕಾರದ ೧೯೪೮-೪೯ನೇ ವರ್ಷದ ಆಯವ್ಯಯವು ಈ ರೀತಿ ಇದೆ. ೬೯೫೬ ಕೋಟಿ ಆದಾಯ ೧೯೪೮-೪೯ರಲ್ಲಿ ಬರಬಹುದೆಂದು ಅಂದಾಜು ಮಾಡಲಾಗಿದೆ ಖರ್ಚು ೬೯೬೮ ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ಪಾಕಿಸ್ತಾನದ ಖರ್ಚು ಆದಾಯವನ್ನು ೧೦೧೨ ಕೋಟಿ ಮೀರುವದು ಈ ಕೊರತೆಯನ್ನು ಭರ್ತಿಮಾಡಲು ಹೊರಗೆ ಕಳುಹಿಸುವ ಹತ್ತಿಬೀಜ, ತೊಗಲು ಮೊದಲಾದುವುಗಳ ಮೇಲೆ ಶೇಕಡ ೧೨ ರಂತೆ ತೆರಿಗೆಯನ್ನೂ, ಹೊರಗಿನಿಂದ ಬರುವ ಸಕ್ಕರೆಗೆ ಹಂಡ್ರೆಡ್‌ವೇಟಿಗೆ ರೂ ೩೦ ರಂತೆಯೂ, ಮೂವಕ ವಾಸಿಯುಗಳಿಗೆ ಪೂಕಡ ೪೦ ರಂತೆಯೂ, ಸಿಮೆಂಟ್ಗೆ ಗಲಸಿಗ ಒಂದಣೆ, ವೆಂಟಾಂ ಸ್ಪಿರಿಟ್ ಗ ಗೆಲಸಿಗೆ ಹತ್ತೆರಡಣೆ, ಹೊಗೆಸೊಪ್ಪಿಗೆ ಪೌಂಡಿಗೆ ಮೂರಾಣೆ, ವಿರಿಸಲಾಗುವುದು ಪೋಸ್ಟ್‌ಕಾರ್ಡಿಗೆ ಒಂಭತ್ತೂಕಾಸು, ಏರ್ ಮೈಲ್, ಪೋಸ್ಟಲ್ ಪೌಕೆಟ್‌ಗಳ ದರ ವಿರಿಸಲಾಗುವದು ಈ ರೀತಿಯ ಹೊಸ ಕಂದಾಯದಿಂದ ಒಟ್ಟು ಆದಾಯ ೧೦೧೨ ಕೋಟಿ ಬರುವದೆಂದೂ ಆದ್ದರಿಂದ ವರ್ಷಾಂತ್ಯದಲ್ಲಿ ೫ ಲಕ್ಷ ರೂಪಾಯಿ ಉಳುವರಿಯಾಗುವದೆಂದೂ ಅಂದಾಜು ಮಾಡಲಾಗಿದೆ

## ಬೇಕಾಗಿದೆ.

ಓದು ಬರಹ ಗೊತ್ತಿರುವವರಿಗೆ ವಿಲಿಟರಿಯಲ್ಲಿ ನಾನಾತರಹದ ಟೆಕ್ನಿಕಲ್ ಟ್ರೇನಿಂಗಿಗೂ ಮತ್ತು ಇನ್ ಫೆಂಟ್ರಿಗೂ ಸೇರಲು ಇಂದಿಗೆ ಇರುವವರು ಮಡಿಕೇರಿ ಶ್ರೀ ಎ ಎ ಮಂದಣ್ಣನವರನ್ನ ಈ ಕೆಳಗಿನ ಸ್ಥಳಗಳಲ್ಲಿನ ಟೆ ಬಿ ಗಳಲ್ಲಿ ನಮೂದಿಸಿರು ತಾರೀಕುಗಳಲ್ಲಿ ನೋಡಿ ವಿಚಾರಗಳನ್ನು ತಿಳಿದುಕೊಳ್ಳಬಹುದು

| | |
|---|---|
| ಶನಿವಾರಸಂತೆ ಪೋಲೀಸ್ ಠಿಂಗಳು ೯ ರಲ್ಲಿ | |
| ಸೋಮವಾರಪೇಟೆ, | 8 |
| ವೀರಾಜಪೇಟೆ, | 10 |
| ನಾಪೋಕ್ಲು, | 12 |
| ಪೊನ್ನಂಪೇಟೆ, | 14 |
| ಮಡಿಕೇರಿ, | 16, 17 & 18 |
| ಪುತ್ತೂರು, | 20 |
| ಮಂಗಳೂರು, | 22, 23, 24 |
| ಉಡುಪಿ, | 26 |
| ಕುಂದಾಪುರ. | 28 & 29 |

# ಟೀ, ಕಾಫಿ ಸುಂಕ ಹೆಚ್ಚಿತು.

ಸ್ವತಂತ್ರ ಭಾರತದ ಪ್ರಥಮ ಪೂರ್ಣಾವಧಿ ಸಂವತ್ಸರದ ಆಯವ್ಯಯವನ್ನು ಹಣಕಾಸಿನ ಸಚಿವರಾದ ಶ್ರೀ. ಆರ್. ಕೆ. ಷಣ್ಮುಗಂಚೆಟ್ಟಿಯವರು ತಾ. ೨೮ ರಲ್ಲಿ ಕೇಂದ್ರ ರಾಜ್ಯ ಶಾಸನ ಸಭೆಯಲ್ಲಿ ಮಂಡಿಸಿದರು.

ಆಯವ್ಯಯದಲ್ಲಿ ಒಟ್ಟು ೨೭ ಕೋಟಿ ರೂಪಾಯಿಗಳಷ್ಟು ಖೋತಾ ಬೀಳುವುದೆಂದು ಅವರು ತಿಳಿಸಿದರು.

ಇಂದಿನ ಸುಂಕ ಸಾರಿಗೆಗಳ ಮಟ್ಟದಲ್ಲಿ ಒಟ್ಟು ೨೪೦ ಕೋಟಿ ರೂಪಾಯಿಗಳ ಆದಾಯವೂ, ಸುಮಾರು ೨೫೭ ಕೋಟಿ ರೂಪಾಯಿಗಳ ಖರ್ಚೂ ನಮೂದಾಗಿದೆ.

ಹಣ ಕಾಸಿನ ಸಚಿವರು ಆದಾಯದ ಮುಖ್ಯಾಂಶಗಳನ್ನು ಸದಸ್ಯರ ಅವಗಾಹನೆಗೆ ತಂದು, ಪ್ರಸಕ್ತ ಸಾಲಿನಲ್ಲಿ ಕಸ್ಟಮ್ಸ್ ಬಾಬಿನಿಂದ ೮೨ ಕೋಟಿ, ಕೇಂದ್ರ ಎಕ್ಸೈಜ್‌ನಿಂದ ೩೪ ಕೋಟಿ, ಅಧಿಕ ಲಾಭ ತೆರಿಗೆ; ವ್ಯಾಪಾರ ತೆರಿಗೆ ಒಳಗೊಂಡ ವರಮಾನದ ತೆರಿಗೆಯ ಮೂಲಕ ೧೩೮ ಕೋಟಿ ಆದಾಯ ಬರುವುದೆಂದು ಹೇಳಿದರು.

ವರಮಾನದ ತೆರಿಗೆಯ ಬಾಬಿನಲ್ಲಿ ಕೇಂದ್ರವು ೪೨ ಕೋಟಿ ೩೭ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟುಕೊಂಡು, ೩೭ ಕೋಟಿ ೮೧ ಲಕ್ಷ ರೂಪಾಯಿಗಳನ್ನು ಪ್ರಾಂತ್ಯಗಳಿಗೆ ಕೊಡುವುದೆಂದು ಹೇಳಿದರು.

ಅಂಚೆ ಮತ್ತು ತಂತಿ ಇಲಾಖೆಯಿಂದ ೨೬ ಕೋಟಿ ೨೦ ಲಕ್ಷ ರೂ. ಗಳು ಬರುವುದೆಂದು ಹೇಳಿದರು.

### ಖರ್ಚಿನ ಅಂದಾಜು.

೨೫೭ ಕೋಟಿ ರೂಪಾಯಿಗಳ ಖರ್ಚಿನ ವೆಚ್ಚದಲ್ಲಿ ಸುಮಾರು ೧೨೧ ಕೋಟಿ ರೂಪಾಯಿಗಳನ್ನು ರಕ್ಷಣೆಯ ಖರ್ಚಿಗೆ ವಿನಿಯೋಗಿಸಲಾಗುವುದು.

ಸುಮಾರು ೧೩೬ ಕೋಟಿ ರೂಪಾಯಿಗಳನ್ನು ಸಿವಿಲ್ ಬಾಬುಗಳಿಗೆ ಖರ್ಚು ಮಾಡಲಾಗುವುದು.

### ಹೊಸ ತೆರಿಗೆಗಳು.

ಪ್ರಸಕ್ತ ಸಾಲಿನಲ್ಲಿ ಒದಗಿರುವ ೨೪ ಕೋಟಿ ೫೯ ಲಕ್ಷ ರೂಪಾಯಿಗಳ ಖೋತಾ ಮೊಬಲಗುಗಳನ್ನು ಅರು ಕೋಟಿ ೫೨ ಲಕ್ಷಗಳಿಗೆ ಇಳಿಸಲಾಗುವುದು. ಇದಕ್ಕಾಗಿ ಹೊಸತೆರಿಗೆಗಳನ್ನು ಹಾಕಲಾಗುವದು.

ಎಣ್ಣೆ ಬೀಜಗಳ ಮೇಲೆ ಟನ್ ಒಂದಕ್ಕೆ ೮೦ ರೂಪಾಯಿಗಳಂತೆ ರಫ್ತಿನ ಸುಂಕ.

ವನಸ್ಪತಿಗಳ ಮೇಲೆ ೧೫೦ ರೂಪಾಯಿನಂತೆ ರಫ್ತಿನ ಸುಂಕ.

ನ್ಯೂಸ್‌ಪ್ರಿಂಟ್ ಮೇಲೆ ಟನ್ ಒಂದಕ್ಕೆ ೨೦ ರೂಪಾಯಿನಂತೆ ಸುಂಕ.

ಮೋಟಾರ್ ಕಾರುಗಳ ಆಮದಿನ ಮೇಲೆ ಹೆಚ್ಚಿನ ಸುಂಕ.

ಇಂಗ್ಲೆಂಡಿನಿಂದ ಆಮದಾಗುವ ಮೋಟಾರುಗಳಿಗೆ ಶೇಕಡಾ ಏಳುವರೆಯಂತೆ ರಿಯಾಯಿತಿ.

ಹೊರ ದೇಶದ ಕಂಪೆನಿಗಳ ಮೇಲಿನ ಕಾರ್ಪೊರೇಷನ್ ತೆರಿಗೆಯನ್ನು ಎರಡಾನೆಯಿಂದ ಮೂರಾನೆಗೆ ಹೆಚ್ಚಿಸಿದ್ದಾರೆ.

ವ್ಯಾಪಾರ ಲಾಭದ ತೆರಿಗೆಯನ್ನು ಶೇಕಡಾ ಹದಿನಾರು ಮೂರನೇ ಎರಡು ಭಾಗಗಳಿಂದ ಶೇಕಡ ೧೦೦ಕ್ಕೆ ಇಳಿಸಲಾಗಿದೆ.

ಸೂಪರ್ ಟ್ಯಾಕ್ಸಿನ ಅಧಿಕಾಂಶವನ್ನು ಮೂರೂವರೆ ಲಕ್ಷ ರೂಪಾಯಿಗಳ ಗೇರಿಸಿದೆ.

ಸೂಪರ್ ಟ್ಯಾಕ್ಸನ್ನು ವಿಧಿಸುವಾಗ ಲಾಭವನ್ನು ಹಂಚಿದರೆ ಏದಾನಿಯೆಂತೆಯೂ, ಹಂಚದಿದ್ದರೆ ನಾಲ್ಕಾನೆಯಂತೆಯೂ ಸುಂಕ ವಿಧಿಸಲಾಗುವದು.

೨೫ ಸಾವಿರ ರೂಪಾಯಿಗಳಿಗಿಂತ ಕಡಿಮೆ ವರಮಾನ ಬರುವ ಕಂಪೆನಿಗಳ ಮೇಲೆ ಈಗಿರುವುದಕ್ಕೆ ಅರ್ಧದಷ್ಟು ತೆರಿಗೆಯನ್ನು ವಿಧಿಸಲಾಗುವುದು.

ಸಿಗರೇಟುಗಳು ಕಾರ್ಖಾನೆಯನ್ನು ಬಿಟ್ಟ ಮೇಲೆ ಅವುಗಳ ಮೂರಾಟದ ಬೆಲೆಯ ಮೇಲೆ ಶೇಕಡ ೨೫ ರಷ್ಟು ಸುಂಕ ಹಾಕಲಾಗುವುದು.

ಕೆಲವು ತುಂಬಾಕುಗಳ ಮೇಲೆ ಪೌಂಡ್ ಒಂದಕ್ಕೆ ೧೨ ಆಣೆಯಂತೆ ಸುಂಕ ವಿಧಿಸಲಾಗುವುದು.

### ದೇಶದ ಆರ್ಥಿಕ ಸ್ಥಿತಿ.

ದೇಶದ ಆರ್ಥಿಕ ಸ್ಥಿತಿಯನ್ನು ಹಣ ಕಾಸಿನ ಸಚಿವರು ವಿವರಿಸುತ್ತಾ, 'ಯುದ್ಧ ಮುಗಿದು ಮೂರು ವರ್ಷಗಳಾಗುತ್ತಾ ಬಂದರೂ ಹಣದ ಉಬ್ಬರದ ಬಾಧೆ ಇನ್ನೂ ಇದೆ. ಭಾರತಕ್ಕೆ ವಿಭಜನೆಯಿಂದಲೂ ನಿರಾಶ್ರಿತರ ಸಮಸ್ಯೆಗಳಿಂದಲೂ, ಕಾಶ್ಮೀರದ ಘಟನೆಗಳಿಂದಲೂ ತೊಂದರೆಗಳುದ್ಭವಿಸಿವೆ. ಪದಾರ್ಥಗಳ ಅಧಿಕ ಬೆಲೆ ಇಳಿದಿಲ್ಲ. ಪ್ರಾಂತ್ಯಗಳಿಗೆ ೧೭೦ರಿಂದ ಹಿಡಿದು ೧೫೦ ಕೋಟಿ ರೂಪಾಯಿಗಳ ವರೆಗೂ ಯುದ್ಧಾನಂತರ ಯೋಜನೆಗಳ ಖರ್ಚಿಗಾಗಿ ಹಣ ಕೊಡಲಾಗುವುದು' ಎಂದರು.

ಹೊಸ ಸುಂಕ ಸಾರಿಗೆಗಳಲ್ಲಿ ಮೋಟಾರುಗಳ ಆಮದು ಸುಂಕವು ಪ್ರಾಮುಖ್ಯತೆ ವಹಿಸಿದೆ. ಇದನ್ನು ಶೇಕಡ ೪೦ ರಿಂದ ೫೦ ಕ್ಕೆ ಹೆಚ್ಚಿಸಲಾಗಿದೆ.

ಟೀ ಕಾಫೀ ಮತ್ತು ಸಿಗರೇಟುಗಳ ಮೇಲೆ ಹೆಚ್ಚಿನ ಎಕ್ಸೈಜ್ ತೆರಿಗೆ ವಿಧಿಸಲಾಗಿದೆ.

ಸಿಗರೇಟ್, ಚೆಟ್ಟಿ ಮತ್ತು ತಂಬಾಕಿನ ಮೇಲಿನ ತೆರಿಗೆಯಿಂದ ೬೨ ಲಕ್ಷ ರೂಪಾಯಿಗಳ ಆದಾಯ ಬರುವುದು.

ಟೀ ಮತ್ತು ಕಾಫೀ ಎಕ್ಸೈಜ್ ಸುಂಕದಿಂದ ೨ ಕೋಟಿ ೧೦ ಲಕ್ಷ ರೂಪಾಯಿಗಳು ಬರುವುದು.

## ಗುಟ್ಟು ಪಡೆಯುವ ಪ್ರಯತ್ನ.

ಮಹಾತ್ಮರನ್ನು ಕೊಲೆಗೈದ್ದ ನಾಥೂರಾಮನ ಮೇಲೆ ಮೊನಸೀಕ ತಜ್ಞರು ಮೊನಸೀಕ ಉಪಚಾರವನ್ನು ನಡೆಸಿದ್ದಾರೆಂದು ತಿಳಿದುಬರುತ್ತದೆ: ಜನತಾ ನಾಯಕರನ್ನು ಸಂಹರಿಸಲು ದೇಶದಲ್ಲಿ ನಡೆದ ಕಾರಸ್ಥಾನವನ್ನು ಅವನಿಂದ ಹೊರಗೆ ಡಹುವಂತೆ ನೋಡುವುದೇ ಈ ಯತ್ನದ ಉದ್ದೇಶ.

ಸ್ವಲ್ಪ ಸಮಯದ ವರೆಗೆ ಗೋಡ್ಸೆಯು ತಾನು ಅತ್ಯಂತ ನ್ಯಾಯವಾದ ಕೆಲಸ ಮಾಡಿದೆನೆಂಬ ಭ್ರಾಂತಿಗೆ ಒಳಗಾಗಿದ್ದನು. ಆದ್ದರಿಂದವನು ಒಳಸಂಚಿನ ರಹಸ್ಯವನ್ನು ಬಹಿರಂಗಪಡಿಸಲಿಲ್ಲ. ಅವನಿಗೆ ಹಿಂಸೆಕೊಟ್ಟು ರಹಸ್ಯಗಳನ್ನು ಹೊರಗೆಡಹುವುದು ಅಸಾಧ್ಯವೆಂದು ಅಧಿಕಾರಿಗಳಿಗೆ ಮನವರಿಕೆಯಾಯಿತು. ಆದ್ದರಿಂದವನ ಮನಸ್ಸಿನ ಮೇಲೆ ಪರಿಣಾಮ ಮಾಡಲು ಪ್ರಾರಂಭಿಸಲಾಗಿದೆ.

ಗಾಂಧೀಜಿಯು ಕೊಲೆಯು ಆದಿಂತಹ ಭೀಕರ ಪ್ರಮಾದವೆಂಬುದನ್ನು ಅವನ ಹೃದಯಕ್ಕೆ ಮುಟ್ಟಿಸಲು ಪ್ರಾರಂಭಿಸಿದರು. ದೇಶವಿದೇಶಗಳಲ್ಲಿ ಕೊಲೆಯ ಪ್ರತಿಕ್ರಿಯೆಯು ಏನಾಯಿತೆಂದು ತಿಳಿಯಲು ಅವನಿಗೆ ರೇಡಿಯೊವನ್ನೊದಗಿಸಲಾಯಿತು. ಮುಖ್ಯ ವರ್ತಮಾನ ಪತ್ರಿಕೆಗಳನ್ನು ಕೊಡಲಾಯಿತು. ಮಹಾತ್ಮರ ಮರಣದಿಂದ ಜನರು ಎಂತಹ ದುಃಖಕ್ಕೀಡಾದ್ದರಲ್ಲಿ ಮುಳುಗುಮುಳುಗಿ ಎದ್ದರೆಂದು ಅವನ ಮನಸ್ಸಿಗೆ ಹೊಳೆಯಲೆಂದು ಅವನಿಗೆ ರಾಷ್ಟ್ರಪಿತನ ಪ್ರಚಂಡ ಸ್ಮಶಾನಯಾತ್ರೆಯನ್ನು ತೋರಿಸಲಾಯಿತು.

ಗೋಡ್ಸೆಯು ಮನೋರಂಗವನ್ನು ಅಭ್ಯಾಸಿಸಲು ಕಲ್ಕತ್ತೆಯಿಂದ ಓರ್ವ ಮಾನಸೀಕ ತಜ್ಞನನ್ನು ಕರೆಸಿ ಅವನ ಹತ್ತಿರ ಇಡಲಾಗಿದೆ. ಗೋಡ್ಸೆಯ ಮೆದುಳಿನಲ್ಲಿಯ ತರಂಗಗಳನ್ನು ನಮೂದಿಸಲು ಒಂದು ಯಂತ್ರವನ್ನು ಉಪಯೋಗಿಸುತ್ತಿದ್ದಾರೆ. ಇವುಗಳ ಪರಿಣಾಮವು ಜೈನಾಗಿರುತ್ತಿದ್ದು ಕೊಲೆಗಡುಕನ ಮನಸ್ಥಿತಿಯು ಹಾದಿಗೆ ಬರುತ್ತಿದೆಯೆಂದು ಹೇಳಲಾಗುತ್ತಿದೆ.

ಅವನು ಅತೀ ಮಹತ್ವದ ಸಂಗತಿಗಳನ್ನು ಹೇಳುತ್ತಿದ್ದಾನಂತೆ. ಅವನಿಗೀಗ ಪಶ್ಚಾತ್ತಾಪವಾಗಲು ಆರಂಭವಾಗಿದೆ. ರಾಷ್ಟ್ರದ ಅಮೂಲ್ಯ ಜೀವವನ್ನು ಅಪಹರಿಸಿ ತಾನು ಎಂತಹ ಅನಾಹುತವನ್ನು ಮಾಡಿದೆನೆಂದು ಉತ್ತರ ಹಿಂದೂಸ್ಥಾನದ ಒಂದು ಪತ್ರಿಕೆಯಲ್ಲಿ ಬಂದ ಸುದ್ದಿ ನಿಜವಾಗಬಹುದು. ಆದರೆ ಅವನಿಗೆ ಕೊಲೆಯಪರಾಧದ ಬಗ್ಗೆ ಕ್ಷಮೆ ಮಾಡಲಾಗುವುದಿಲ್ಲ ಒಳಸಂಚಿನಲ್ಲಿ ಅಂಗವಿದ್ದ ಆರೋಪದ ಬಗ್ಗೆ ಕ್ಷಮೆ ಕೊಡಲಾಗುವುದು.

## GREAT FATHER.

Where art thou O! Bapu?
Fond hope of many nations, art thou dead?
Your life was gentle; and the elements
So mixed in you that Nature might stand up
And say to the whole world 'He was our Initiator'.
Strong or steadfast, weak or passionate,
Glad or reluctant, you went forth
Leaving your memory fresh in the minds of your youths
The haunting thoughts of thee awake;
Great Father, the things you did,
The words you said, will linger on for ever!

*Miss. PONS, (Mercara)*

## ಮಡಿಕೇರಿ ಗುಡ್ಡದ ಮೇಲೆ.

(ಶ್ರೀ ಬೆಂಡ್ರೆಯವರ 'ಭೃಂಗದ ಚಿಣ್ಮರಿ ಬಂತು ಕಲ್ಪನಾ ವಿಲಾಸ' ಎಂಬಂತೆ)

ಮಡಿಕೇರಿ ಗುಡ್ಡದ ಮೇಲೆ ನಿಂತು ನೋಡಿದಾಗಾ
ಮಿತಿಮೀರಿ ಸಂತಸ ಉಕ್ಕಿಉಕ್ಕಿ ಹರಿಯಲಾಗಾ
ಭಾವನಾ ತರಂಗವೆನ್ನ ಮನದಿ ಮೂಡಿದಾಗಾ
ಇರವಿರದೆ ನುಡಿವೇರಿ ತನ್ನನ್ನು ತಾನೆ ಮರೆತಾಗಾ ||೧||

ಚಳಿಯಂಗಳಿ ಮೈಯ ಬಡಿಯತೊಡ್ಡು ಮೂಳೆಮೂಸಾ
ಬೇಂದ್ರೆ ಕವಿಯ ಮಾತುಕಡ್ಡು ಜಳಸಿದಂಥಪ್ಯಾಸಾ
ಮಿಂಡ ಮೊಯವಾಗುತಿತ್ತು ಒಂದು ಮಂದಹಾಸಾ
ಪ್ರಕೃತಿ ದೇವಿ ಹಸುರು ಸೀರೆ ಉಟ್ಟ ಅಟ್ಟಹಾಸಾ ||೨||

ಪ್ರಕೃತಿ ರಮಣಿ ತಲೆಯಬಾಚಿ ಹೂವ ಮುಡಿದ ನೋಟಾ
ನಲಿವ ತರುಣಿ ಬಣ್ಣಬಣ್ಣ ರವಿಕೆ ತೊಟ್ಟ ನೋಟಾ
ಹರೆಯ ಯುವತಿ ನಗುತ ನಗುತ ನೃತ್ಯವಾಡಿದಾಟ
ಚೆಲುವೆ ಚಿಗುರಿ ಸ್ವರ್ಗ ಸೌಖ್ಯಕೊಡುವೆ ನಿನ್ನ ಕೂಟಾ ||೩||

ಉಲಿವ ಗಿಳಿಯೆ ನಿನ್ನ ಚೆಲುವ ತೋರು ಹಾರಿ ದೇಗಾ
ಚಿರಿಪ ಪಕ್ಷಿ ನಿನ್ನ ನಲ್ಮೆ ಹಾಡ ಹಾಡುರಾಗಾ
ಪಟ್ಟಿ ಪಟ್ಟಿ ಗದ್ದೆ ಹೊಲದ ನೋಟ ನೋಡಿದಾಗಾ
ಬೇಸಿಗಾಳಿ ಮುತ್ತನೊಂದು ಕೊಟ್ಟು ಹೋಗುವಂಗಾ ||೪||

ಬಾಲನೊಬ್ಬ ದನವ ಕಾಯ್ವ ಕೊಳಲ ಗಾನದಿಂಪೂ
ತರುವ ತೂರಿ ಬರುವ ಗಾಳಿಯಂತು ಬಹಳ ತಂಪೂ
ಬಣ್ಣಾ ಬಣ್ಣಾ ತೊಗಲಲ್ಲಿ ತೋರಿಬರುವ ಕಂಪೂ
ಶಿವನು ಗೌರಿಯೊಡನೆ ನಾಟ್ಯವಾಡಿದಂಥ ಸೊಂಪೂ ||೫||

ಜಾ. ಪ ಸುಂದರರಾವ್.

# ಶಾಲೆಗಳಲ್ಲಿ ಶಿಸ್ತು ಮತ್ತು ದಕ್ಷತೆ.

'೧೯೪೭ನೇ ಇಸವಿಯ ಪ್ರಚಂಡ ರಾಜಕೀಯ ಆಂದೋಲನದ ನಂತರ ಶಾಲೆಗಳಲ್ಲಿ ಶಿಸ್ತಿಲ್ಲ; ವಿದ್ಯಾರ್ಥಿಗಳು ದಾರಿತಪ್ಪಿ ನಡೆಯುತ್ತಿದ್ದಾರೆ' ವಿದ್ಯಾರ್ಥಿಗಳ ಮೇಲೆ ರಾಜಕೀಯ ಕೆಲಸಗಾರರು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ' ಈ ರೀತಿಯ ಧಾಟಿಯಲ್ಲಿ ಮಡಿಕೇರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ತಮ್ಮ ಶಾಲಾ ಒಕ್ಕೂಟದ ವಿಚಾರಣಾ ಸಭೆಯ ಪ್ರಾರಂಭ (೨೬–೨–೪೮) ರಲ್ಲಿ ಭಾಷಣ ಮಾಡಿದರು. ವಿದ್ಯಾರ್ಥಿಗಳ ಅವಿಧೇಯತೆ ಶಾಲೆಗಳಲ್ಲಿ ಶಿಸ್ತಿನ ಶೈಥಿಲ್ಯದ ಕಾರಣವನ್ನು ಹೇಳುವುದು ಅಸಂಬದ್ಧವೆಂಬುದಾಗಿ ಇದು ಸಾಮಾನ್ಯರ್ಗೂ ವಿಚಾರವಾದ್ದರಿಂದ ಪತ್ರಿಕಾ ಸಂವಾದಕರು ಅಶ್ಚರ್ಯ ಪಡದೆ ಬಹಿರಂಗ ಅಲೋಚನೆಗೆ ಗಿಸಿದೆ

'೧೯೪೭ನೇ ಇಸವಿಯಿಂದ ಶಾಲೆಗಳಲ್ಲಿ ಹಾಳಾಗಿದೆಯೆಂಬುದು ತಪ್ಪು ಭಾರತದಲ್ಲಿ ಆಂದೋಲನದಲ್ಲಿ ಭಾಗವಹಿಸಿದ್ದವರು ಕೇವಲ ಮಡಿಕೇರಿ ಹೈಸ್ಕೂಲಿನ ವಿದ್ಯಾರ್ಥಿಗಳು ಮಾತ್ರವಲ್ಲ ಮುಖ್ಯೋಪಾಧ್ಯಾಯರ ಮಾತಿನಲ್ಲಿ ಶಕ್ತ್ಯಾಂಶವಿರಲಿಲ್ಲ ಎಲ್ಲಾ ಶಾಲೆಗಳಲ್ಲೂ ಮಡಿಕೇರಿ ಶಾಲೆಯಂತೆ ಡಂಗುರವಾಗಬೇಕೆಂತ್ತು ಆದರೆ ಹಾಗೆ ಆಗ್ಲಿಲ್ಲ ಬದಲು ಮಡಿಕೇರಿ ಶಾಲೆಯಲ್ಲೇ ಕಳೆದ ಒಂದೆರಡು ವರ್ಷಗಳಿಂದ ಈ ಕೋಲಾಹಲ ಕೇಳಿಬರುತ್ತಿದ್ದುದೆಂದರೆ ಇದಕ್ಕೆ ಕಾರಣ ಬೇರೆಲ್ಲಿಯೋ ಅಸಲಾಗಿರಬೇಕು ಪ್ರಸ್ತುತ ಮಡಿಕೇರಿ ಸಂಬಂಧಿಸಿ ಹೈಸ್ಕೂಲಿಗೆ ಸಂಬಂಧಪಟ್ಟು ಕೆಲವು ವಿಚಾರಗಳನ್ನು ಒರೆಗೆ ಹಚ್ಚುವುದು ಅಗತ್ಯವಿದೆ

ಶಾಲೆಯಲ್ಲಿ ಶಿಸ್ತು ಸುಳಿಯಬೇಕಾದರೆ ಅದರ ಪ್ರಥಮ ಜವಾಬ್ದಾರಿ ಅಧ್ಯಾಪಕರದ್ದೆಂಬುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ ಮಡಿಕೇರಿ ಶಾಲೆಯು ಕಳೆದ ಎರಡು ವರ್ಷಗಳಿಂದ ಗಲಾಟೆ ಗಡಿಬಿಡಿಯಲ್ಲಿದ್ದರೆ ಅದರಲ್ಲಿ ಶಾಲಾ ಆಡಳಿತ ಮಂಡಲಿಯ ಜವಾಬ್ದಾರಿ ಹೊತ್ತವರ ತಪ್ಪಿಲ್ಲವೆಂದು ಹೇಳಲು ಬರಲಾರದೆಲ್ಲಾ? ವಿದ್ಯಾರ್ಥಿಗಳಿಗೆ 'ಪ್ರಾಲಿಫೆಟ್' ಕೊಟ್ಟು ಶಾಲೆಯ ಎಚ್ಚರಿಕೆ ನೋಟಿಸು ಅವರಲ್ಲಿಮೆಗಳಿಂತ್ರಿಸುವಂಥ ರೀತಿಯಲ್ಲಿ ಒಬ್ಬೊಬ್ಬರಿಗೆ ಜವಾಬ್ದಾರಿಕೊಟ್ಟಿದ್ದರೆ ಇದು ಯುಕ್ತವಾಗಿದ್ದು ಆದರೆ ಅದರೊಂದಿಗೆ ಈ ಮಂತ್ರಿಮಂಡಳದ ತೀರ್ಮಾನಗಳ ಮೇಲೆ ಆಡಳಿತ ಮಂಡಲಿಯ ಜವಾಬ್ದಾರಿ ಹೊತವರು ತಮ್ಮ 'ವೀಟೋ' ಅಧಿಕಾರ ಚಲಾಯಿಸಿದ್ದಾರೆ! ಮೊನ್ನೆ ಸಿಕ್ಕಳೊಳಗೆ ಆದ ಹೊಡೆದಾಟಕ್ಕೆ ಈ ವ್ಯವಸ್ಥೆಯ ಅಧಿಕಾರ ಚಲನೆಯೂ ಒಂದು ಕಾರಣವಲ್ಲವೇ? ಅಧ್ಯಾಪಕರು ನಮ್ಮಲ್ಲಿ ಬುದ್ಧಿಯ ಮಾತುಗಳಿಂದ ಸಭೆಯಲ್ಲಿ ಕಚ್ಚುವದನ್ನು ಬಿಟ್ಟು ತಮಗೆ ಬೇಡವಾದವರ ಮುಖವನ್ನೂ ಕೂಡ ನೋಡದ 'ಗೆಟ್ ಔಟ್' ಹೃಯೋಗವನ್ನು ಅನುಸರಿಸಿದ್ದಲ್ಲೂ, ಸಂಗೀತ ಕುರ್ಚಿ ವೇದಿಕೆಯ ಪ್ಲಾನು ಕೂಡುವುದಾದರೆ ಶಾಲೆಯು ಶಿಸ್ತಿಗೆ ಇದು ಹೇಗೆ ಸಹಕಾರಿಯಾದೀತು? ಮುಖ್ಯೋಪಾಧ್ಯಾಯರು ಈ ಮೊದಲು ಒಂದು ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳನ್ನು ಶಾಲೆಯಿಂದ ತತ್ಕಾಲ ವಜಾ (Suspend) ಮಾಡಿದ್ದಾಗ ಈ ವಿದ್ಯಾರ್ಥಿಗಳನ್ನು ಕೂಡಿಕೊಂಡು ಅವರ ಪೋಷಕರು ಮುಖ್ಯೋಪಾಧ್ಯಾಯರ ಮನೆಗೆ ರಾತ್ರಿ ಹೋದಾಗ, ಹುಕ್ಕಳು ತನ್ನ ತಪ್ಪನ್ನು ಒಪ್ಪಿಕೊಂಡ ನಂತರ, 'ನಿಮ್ಮಕ್ಕೇ ನಿಮ್ಮನ್ನು ಕ್ಷಮಿಸಿದ್ದೇನೆ ನಾಳೆಯಿಂದ ಶಾಲೆಗೆ ಬರಬಹುದೆಂಬರ್ಥದ ನೂರು ಹೇಳಿ ಮೂರಾಣಿ ದಿನ ತನ್ನ ಸಿಟ್ಟಂದಿಯವರು ಅದಕ್ಕೆ ವಿರುದ್ಧವೆಂದು ಕಣ್ಣು ಮೂಕನ್ನೇ ಮುರಿದು ವರ್ತಿಸಿದರೆ ಇದು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಹೆಚ್ಚಿಸಬಹುದೇ? ಸೊನ್ನೆ ನಡೆದ ದುರಂತದಲ್ಲಿ 'ಸ್ಪೈಂಡ್' ಮಾಡಲ್ಪಟ್ಟ ವಿದ್ಯಾರ್ಥಿಗಳಿಗೆ ಅರ್ಧ ಹಜಾರ ಸೆಟ್ಟು ದಾಕಿ ಶಾಲೆಗೆ ಸೇರಿಸಿಕೊಳ್ಳಬೇಕೆಂದು ಆದಿಕಾರಿಯೊಬ್ಬರು ಹೇಳಿದ್ದಾಗ–ಹೊರಗಿನವರು ಶಾಲಾ ಆಂತರಿಕ ಆಡಳಿತದ ವಿಚಾರದಲ್ಲಿ ಕೈಹಾಕಬಾರದು; ಸ್ಕೂಲ್ ವೈನಲ್ ವಿದ್ಯಾರ್ಥಿಗಳಿಗೆ ದಂಡಿಕ ದಂಡನೆ ಕೊಡಕೂಡದು–ಎಂಬ ನಿಯಮಗಳನ್ನು ಅಧ್ಯಾಪಕರು ಎತ್ತಿ ತೋರಿಸಿದ್ದಾರೆಂದು ವಾರ್ತೆ ಇಗು ನಿಜವಾದರೆ ಈ ಪೂರ್ವಲು ಈ ನಿಯಮಪೆಟ್ಟಿತ್ತು? ಸ್ಕೂಲ್ ವೈನಲ್ ತರಗತಿಯ ವಿದ್ಯಾರ್ಥಿಗಳಿಗೆ ತರ್ಪ ಪಡಿಸಿನಂತೆ ಪಟ್ಟಿ ಮಾಡಿಸಿ ನಿಗದಿಪಡಿಸಿಲ್ಲವೇ? 'ಕೊಡಗಿನವರು ವಿದ್ಯಾರ್ಥಿಗಳನ್ನೆ ಹಿರಿಯೋಗಿಸಿಕೊಳ್ಳಲಿದ್ದಾರೆಯೆ ತಪ್ಪಿ ಅಧ್ಯಾಪಕರು ವಿದ್ಯಾರ್ಥಿಗಳ ಅನುರಾಗವನ್ನು ಪಡೆಯಲು ಅವರ ಮಾರ್ಗದರ್ಶಿಯನ್ನು ಬಿಟ್ಟರೆ ಬಿಷ್ಟು ಮಾಡಿಕೇರಿ ಶಾಲೆಯ ಶಿಸ್ತಿನ ಬಗ್ಗೆ ಅಪಾರ ಗೌರವವಿರುವ ಹಿರಿಯ ವಿದ್ಯಾರ್ಥಿಗಳು ಸಂಘಟಿಸಿ ಶಾಲೆಯ ಶಿಸ್ತಿಗೆ ಭಂಗ ಬರದಂತೆ ಕಾಪಾಡಲು ಪ್ರಯತ್ನಿಸಬಹುದು

ಶಾಲೆಯಲ್ಲಿ ಶಿಸ್ತು ಸುಳಿಯಬೇಕಾದರೆ ಅದರ ಪ್ರಥಮ ಜವಾಬ್ದಾರಿ ಅಧ್ಯಾಪಕರದ್ದೆಂಬುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ ಮಡಿಕೇರಿ ಶಾಲೆಯು ಕಳೆದ ಎರಡು ವರ್ಷಗಳಿಂದ ಗಲಾಟೆ ಗಡಿಬಿಡಿಯಲ್ಲಿದ್ದರೆ ಅದರಲ್ಲಿ ಶಾಲಾ ಆಡಳಿತ ಮಂಡಲಿಯ ಜವಾಬ್ದಾರಿ ಹೊತ್ತವರ ತಪ್ಪಿಲ್ಲವೆಂದು ಹೇಳಲು ಬರಲಾರದೆಲ್ಲಾ? ವಿದ್ಯಾರ್ಥಿಗಳಿಗೆ 'ಪ್ರಾಲಿಫೆಟ್' ಕೊಟ್ಟು ಶಾಲೆಯ ಎಚ್ಚರಿಕೆ ನೋಟಿಸು ಅವರಲ್ಲಿಮೆಗಳಿಂತ್ರಿಸುವಂಥ ರೀತಿಯಲ್ಲಿ ಒಬ್ಬೊಬ್ಬರಿಗೆ ಜವಾಬ್ದಾರಿಕೊಟ್ಟಿದ್ದರೆ ಇದು ಯುಕ್ತವಾಗಿದ್ದು ಆದರೆ ಅದರೊಂದಿಗೆ ಈ ಮಂತ್ರಿಮಂಡಳದ ತೀರ್ಮಾನಗಳ ಮೇಲೆ ಆಡಳಿತ ಮಂಡಲಿಯ ಜವಾಬ್ದಾರಿ ಹೊತವರು ತಮ್ಮ 'ವೀಟೋ' ಅಧಿಕಾರ ಚಲಾಯಿಸಿದ್ದಾರೆ! ಮೊನ್ನೆ ಸಿಕ್ಕಳೊಳಗೆ ಆದ ಹೊಡೆದಾಟಕ್ಕೆ ಈ ವ್ಯವಸ್ಥೆಯ ಅಧಿಕಾರ ಚಲನೆಯೂ ಒಂದು ಕಾರಣವಲ್ಲವೇ? ಅಧ್ಯಾಪಕರು ನಮ್ಮಲ್ಲಿ ಬುದ್ಧಿಯ ಮಾತುಗಳಿಂದ ಸಭೆಯಲ್ಲಿ ಕಚ್ಚುವದನ್ನು ಬಿಟ್ಟು ತಮಗೆ ಬೇಡವಾದವರ ಮುಖವನ್ನೂ ಕೂಡ ನೋಡದ 'ಗೆಟ್ ಔಟ್' ಹೃಯೋಗವನ್ನು ಅನುಸರಿಸಿದ್ದಲ್ಲೂ, ಸಂಗೀತ ಕುರ್ಚಿ ವೇದಿಕೆಯ ಪ್ಲಾನು ಕೂಡುವುದಾದರೆ ಶಾಲೆಯು ಶಿಸ್ತಿಗೆ ಇದು ಹೇಗೆ ಸಹಕಾರಿಯಾದೀತು? ಮುಖ್ಯೋಪಾಧ್ಯಾಯರು ಈ ಮೊದಲು ಒಂದು ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳನ್ನು ಶಾಲೆಯಿಂದ ತತ್ಕಾಲ ವಜಾ (Suspend) ಮಾಡಿದ್ದಾಗ ಈ ವಿದ್ಯಾರ್ಥಿಗಳನ್ನು ಕೂಡಿಕೊಂಡು ಅವರ ಪೋಷಕರು ಮುಖ್ಯೋಪಾಧ್ಯಾಯರ ಮನೆಗೆ ರಾತ್ರಿ ಹೋದಾಗ, ಹುಕ್ಕಳು ತನ್ನ ತಪ್ಪನ್ನು ಒಪ್ಪಿಕೊಂಡ ನಂತರ, 'ನಿಮ್ಮಕ್ಕೇ ನಿಮ್ಮನ್ನು ಕ್ಷಮಿಸಿದ್ದೇನೆ ನಾಳೆಯಿಂದ ಶಾಲೆಗೆ ಬರಬಹುದೆಂಬರ್ಥದ ನೂರು ಹೇಳಿ ಮೂರಾಣಿ ದಿನ ತನ್ನ ಸಿಟ್ಟಂದಿಯವರು ಅದಕ್ಕೆ ವಿರುದ್ಧವೆಂದು ಕಣ್ಣು ಮೂಕನ್ನೇ ಮುರಿದು ವರ್ತಿಸಿದರೆ ಇದು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಹೆಚ್ಚಿಸಬಹುದೇ? ಸೊನ್ನೆ ನಡೆದ ದುರಂತದಲ್ಲಿ 'ಸ್ಪೈಂಡ್' ಮಾಡಲ್ಪಟ್ಟ ವಿದ್ಯಾರ್ಥಿಗಳಿಗೆ ಅರ್ಧ ಹಜಾರ ಸೆಟ್ಟು ದಾಕಿ ಶಾಲೆಗೆ ಸೇರಿಸಿಕೊಳ್ಳಬೇಕೆಂದು ಆದಿಕಾರಿಯೊಬ್ಬರು ಹೇಳಿದ್ದಾಗ–ಹೊರಗಿನವರು ಶಾಲಾ ಆಂತರಿಕ ಆಡಳಿತದ ವಿಚಾರದಲ್ಲಿ ಕೈಹಾಕಬಾರದು; ಸ್ಕೂಲ್ ವೈನಲ್ ವಿದ್ಯಾರ್ಥಿಗಳಿಗೆ ದಂಡಿಕ ದಂಡನೆ ಕೊಡಕೂಡದು–ಎಂಬ ನಿಯಮಗಳನ್ನು ಅಧ್ಯಾಪಕರು ಎತ್ತಿ ತೋರಿಸಿದ್ದಾರೆಂದು ವಾರ್ತೆ ಇಗು ನಿಜವಾದರೆ ಈ ಪೂರ್ವಲು ಈ ನಿಯಮಪೆಟ್ಟಿತ್ತು? ಸ್ಕೂಲ್ ವೈನಲ್ ತರಗತಿಯ ವಿದ್ಯಾರ್ಥಿಗಳಿಗೆ ತರ್ಪ ಪಡಿಸಿನಂತೆ ಪಟ್ಟಿ ಮಾಡಿಸಿ ನಿಗದಿಪಡಿಸಿಲ್ಲವೇ? 'ಕೊಡಗಿನವರು ವಿದ್ಯಾರ್ಥಿಗಳನ್ನೆ ಹಿರಿಯೋಗಿಸಿಕೊಳ್ಳಲಿದ್ದಾರೆಯೆ ತಪ್ಪಿ ಅಧ್ಯಾಪಕರು ವಿದ್ಯಾರ್ಥಿಗಳ ಅನುರಾಗವನ್ನು ಪಡೆಯಲು ಅವರ ಮಾರ್ಗದರ್ಶಿಯನ್ನು ಬಿಟ್ಟರೆ ಬಿಷ್ಟು ಮಾಡಿಕೇರಿ ಶಾಲೆಯ ಶಿಸ್ತಿನ ಬಗ್ಗೆ ಅಪಾರ ಗೌರವವಿರುವ ಹಿರಿಯ ವಿದ್ಯಾರ್ಥಿಗಳು ಸಂಘಟಿಸಿ ಶಾಲೆಯ ಶಿಸ್ತಿಗೆ ಭಂಗ ಬರದಂತೆ ಕಾಪಾಡಲು ಪ್ರಯತ್ನಿಸಬಹುದು

### ಅಧ್ಯಾಪಕ ಮನೋಭಾವನೆ

ಅಧ್ಯಾಪಕರು ವಿದ್ಯಾರ್ಥಿಗಳನ್ನು ನೋಡುವ ದೃಷ್ಟಿಯಲ್ಲಿ ಬದಲಾವಣೆ ತರಬೇಕು. ತಿರಸ್ಕಾರ ಭಾವನೆಯಿಂದ ಶಿಕ್ಷಕನಾಗಲಿ ಎಲ್ಲಿಗೂ ಎಂದಿಗೂ ನಿಯಂತ್ರಣ ಭಾವನೆಯಿಂದ ಕಣ್ಣು ಜನಂಗದಲ್ಲಿ ನೋಡುವ ಶಿಕ್ಷಕನಾಗಲಿ ವಿದ್ಯಾರ್ಥಿಗಳ ಪ್ರೀತಿಯನ್ನು ಪಡೆಯಲಾರ. ವಿದ್ಯಾರ್ಥಿಗಳು ಶಿಕ್ಷಕರನ್ನು ಪ್ರೀತಿಸಲಿಕ್ಕಿಲ್ಲ ಶಿಕ್ಷಕರು ವಿದ್ಯಾರ್ಥಿಗಳ ಅಭಿಮಾನವನ್ನು ಪಡೆಯಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳು ಶಿಕ್ಷಕರಿಂದ ಪ್ರೀತಿಯನ್ನು ಬಯಸುವಂತೆ ಶಿಕ್ಷಕರೂ ವಿದ್ಯಾರ್ಥಿಗಳಿಂದ ಪ್ರೀತಿಯನ್ನು ಬಯಸಬೇಕು. ಶಿಕ್ಷಕರು ವಿದ್ಯಾರ್ಥಿಗಳ ಶತ್ರುಗಳಲ್ಲ. ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಪ್ರಯತ್ನಿಸುವವರು ಅಂತೂ ಇವರ ಸಹಾಯ ಪಡೆದು ಜ್ಞಾನವೆಳೆಸಬೇಕು ಶಾಲೆ ಎಂದರೆ ಜೈಲು, ಅಧ್ಯಾಪಕರೆಂದರೆ ವಾರ್ಡರುಗಳು ವಿದ್ಯಾರ್ಥಿಗಳೇ ಕೈದಿಗಳು ಎಂಬ ಭಾವನೆ ಇನ್ನಾದರೂ ತೊಲಗಬೇಕು. ಶಾಲೆ ನಮ್ಮದು ಅಧ್ಯಾಪಕರು ನಮ್ಮವರು ವಿದ್ಯಾರ್ಥಿಗಳೆಲ್ಲರೂ ಒಂದೇ ಬಳಗದವರು. ಈ ಭಾವನೆ ಬರಬೇಕು. 'ಮಡಿಕೇರಿ ಹೈಸ್ಕೂಲ್ ಹೆಸರು ಪಡದಂಥಾದು ಅ ನೇಕಾನೇಕ ಮಹಾವ್ಯಕ್ತಿಗಳನ್ನು ಒಯೂರಿಸಿದ ಪವಿತ್ರ ಶಾಲೆ ಈಗ ಅದು ರಣರಂಗವಾಗಿದೆ' ಎಂದು ಹೇಳುವಾಗ ಸ್ವತ ನವಿಗುತ್ತಿದೆ ಪರದಾಸ್ಯತೆಯಲ್ಲಿ, ತಿರುಳಿಲ್ಲದ ವಿದ್ಯೆಯನ್ನು ಕಲಿಯುತ್ತಿದ್ದಾಗ ಈ ಶಾಲೆಯು ಕೊಡಗಿಗೆ ಗೌರವಸ್ಥಾನಮಾನವ ವ್ಯಕ್ತಿಗಳನ್ನು ತಯೂರಿಸಿದ್ದರೆ ಸ್ವತಂತ್ರ ಭಾರತದಲ್ಲಿ ಮುಂದೆ ಬರಬಹುದಾದ ಪ್ರತಿಭಾವಂತರಲ್ಲಿ ಇನ್ನಷ್ಟು ಹೆಚ್ಚಿನ ಘನ ವ್ಯಕ್ತಿಗಳನ್ನು ಇದು ತಯೂರಿಸಲಾರದೆ? ಈವಾಗ ಬೇಕಾದರೆ ವಿದ್ಯಾರ್ಥಿಗಳಲ್ಲಿ ಶಿಸ್ತು ಬೇಕು, ಸಭೆಯನಬೇಕು. ತಾವು ವಿದ್ಯಾರ್ಥಿಗಳಾಬ ವಿಶಾಲ ಪ್ರತಿಕ್ಷಣವನ್ನು ಸಭೆಯಲ್ಲಿ ಹೊಯಿಸಿತ್ತಿರಬೇಕು. ಶಾಲೆಯ ಒಂದು ವಸ್ತು ಹಾಳಾದರೆ ತನ್ನ ವಸ್ತು ಹಾಳಾದಂತೆ ವ್ಯಸನವಾಗಬೇಕು ಅಧ್ಯಾಪಕರಾಗ ಅವರ ಸಂಬಂಧವೆ ವಿದ್ಯಾರ್ಥಿಗಳೆಲ್ಲಾ ಅವಿಭಾಜ್ಯವೆಂದು ಅಂಥಯು ಪಂತ ಗಬೇಕು. ನಿಜಕ್ಕೂ ಶಾಲೆ ನಮ್ಮದು ನಾವು ಸ್ವತಂತ್ರರು

ಸಾರ್ವಜನಿಕರು

ರೈತನಿಗೆ ಅತೀ ಹತ್ತಿರದ ಮತ್ತೊಂದು ಇಲಾಖೆಯಾದ ಜಾನುವಾರು ಇಲಾಖೆಯವರು ೯೦೦೦ ದನಗಳಿಗೆ ದಾಸು ಹಾಕಿರಬಹುದು. ಸರಕಾರಿ ಮೆಂಬರರು ಹೇಳಿದಂತೆ ದೊಡ್ಡ ರೋಗವನ್ನು ಕೊಡಗಿನಿಂದ ಓಡಿಸಿರಬಹುದು ಆದರೆ ಎಂದಿನಂತೆ ದನಗಳಿಗಾಗಿ ಕೊಡಗಿನ ಲಕ್ಷಾಂತರ ರೂಪಾಯಿ ಹೊರಗೆ ಹೋಗುತ್ತಿಲ್ಲವೇ? ಈ ಇಲಾಖೆಯವರು ತಮ್ಮ ಪೋಸ್ಟಾಫಿಸಿಲೆತ್ತಿಸುವ ಸಿಂಧೀ, ಗಿರ್ ಜಾತಿಯ ದನಗಳಿಂದ ಬಡರೈತನಿಗಾದ ಲಾಭವಾದೀತು? ನಾಡಿನವನ್ನೇ ಕ್ರಯ ಕೈಕೊಂಡುಕೊಳ್ಳಲು ಶಕ್ತಿ ಇಲ್ಲದ ರೈತನಿಗೆ ಸಿಂಧಿ ದನಗಳನ್ನು ಪಡೆಯುವ ಚೈತನ್ಯ ವೆಲ್ಲಿದೆ? ಈ ಇಲಾಖೆಯವರು ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಇವರು ಏರ್ಪಡಿಸಿದ ಈ 'ನಾಮ್ ಕೇ ವಾಸ್ತೆ' ಪ್ರದರ್ಶನಗಳಿಂದ ಹಳ್ಳಿಯ ರೈತನಿಗಾದ ಲಾಭವೇನು? ಯಾವದೋ ತೋಟದಲ್ಲಿಯೂ ಇಲ್ಲವೇ ಶ್ರೀಮಂತರ ದನಗಳಿಗೆ ಈ ಬಹುಮಾನ ದೊರೆಯುವವು. ಈ ಪ್ರದರ್ಶನಗಳಾಗುವವೆಂದು ಬಡ ರೈತನಿಗೆ ತಿಳಿಯುವದೇ ಕಷ್ಟ. ಈ ರೀತಿಯ ಕಾರ್ಯಕ್ರಮಗಳಿಂದ ಕೊಡಗಿನ ಗೋಕಾಯಿಗಳು ಉತ್ತಮಗೊಳ್ಳವು. ಕೊಡಗಿನ ನಾಡುದನದ ತಳಿಯನ್ನೇ ಉತ್ತಮಗೊಳಿಸಿ ರೈತನ ನೆರವಿಗೆ ಬರಬೇಕಲ್ಲದೆ ಸಿಂಧಿ, ಇಲ್ಲವೇ ಬೇರೆ ಜಾತಿಯ ದನಗಳಿಂದ ಬಡ ರೈತನಿಗೆ ಲಾಭವಾಗದು.

ಯುದ್ಧೋತ್ತರ ಪುನರ್ರಚನೆಯು ಯೋಜನೆಯು ಎಲ್ಲರ ರೀತಿಗೆ ಗುರಿಯಾದ ಸಂಗತಿಯಾಗಿದೆ. ಕಳೆದ ವರ್ಷ ಈ ಯೋಜನೆಗಳನ್ನು ಜಾರಿಯಲ್ಲಿ ತರಲೆಂದು ೧೯ ಲಕ್ಷದ ವರೆಗೆ ಹಣವಿಟ್ಟು ಕೇವಲ ಮೂರು ಲಕ್ಷದ ವರೆಗೆ ಖರ್ಚು ಮಾಡಲಾಗಿದೆಯಂತೆ! ಈ ವರ್ಷ ಸುಮಾರು ೧೮ ಲಕ್ಷ ವಿರಿಸಿದ್ದಾರೆ. ಎಷ್ಟು ಖರ್ಚಾಗುವದೋ ತಿಳಿಯದು. ಕೂಲಿ ದೊರೆಯುವದಿಲ್ಲ; ಅದ್ದರಿಂದಲೇ ಈ ಯೋಜನೆಗಳು ಜಾರಿಯಲ್ಲಿ ಬಾರದಿರಲು ಕಾರಣವೆಂದು ಸರಕಾರದ ವಾದ. ಇದು ಹಾಸ್ಯಾಸ್ಪದ ವಾದವಾದುದು. ನಮ್ಮ ಕಣ್ಣು ಮುಂದೆ ಖಾಸಗಿ ವ್ಯಕ್ತಿಗಳು ಮಹಾ ಮಹಾ ಕಟ್ಟಡ ಕಟ್ಟಿದ್ದಾರೆ. ಅವುಗಳಿಗೆ ಅವರಿಗೆ ಕೂಲಿಗಳು ದೊರೆತ್ತಿದ್ದಾರೆ. ಸಾಮಾನ್ಯ ದೊರೆತಿದೆ. ಒಂದು ಸರಕಾರಕ್ಕೆ ಇದು ಒದಗುವದಿಲ್ಲವೆಂದರೆ ಹಾಸ್ಯಾಸ್ಪದವಲ್ಲದೆ ನು ಶ್ಚೇನು? ಸರಕಾರದ ಈ ನೀತಿ ಬಹುಜನರಲ್ಲಿ ನಿರಾಶೆಯನ್ನುಂಟು ಮಾಡಿದೆ.

ಕೇಂದ್ರ ಸರಕಾರದ ಯೋಜನೆಯೂದ ಮಲೇರಿಯಾ ನಿವಾರಣಾ 'ಯೂನಿಟ್ಟಿ'ನ ಕೆಲಸವನ್ನು ಎಲ್ಲಾ ಸದಸ್ಯರೂ ಹೊಗಳಿದ್ದಾರೆ. ಅದು ಖಾಯಂ ಆಗ ಬೇಕು. ಎಂದು ಆಶಿಸಿದ್ದಾರೆ. ಕೊಡಗಿನಿಂದ ಮಲೇರಿಯಾವ ಹಾವಳಿಯುಕತ್ಕೊಗೆಯಲ್ಲಬ್ಬಟ್ಟರೆ ಇದರಷ್ಟು ವಾಸಕ್ಕೆ ಯೋಗ್ಯವಾದ ಪ್ರದೇಶ ಅಪರೂಪವೆನ್ನಬಹುದು. ಸ್ಥಳೀಯ ಸರಕಾರವು ಈ ಇಲಾಖೆಯನ್ನು ಖಾಯಂಗೊಳಿಸಿ ಪ್ರತಿ ಗ್ರಾಮಗಳಲ್ಲಿಯೂ ಇವರ ಕೆಲಸ ಸಾಂಗವಾಗಿ ನಡೆಯುವಂತೆ ಏರ್ಪಡಿಸಬೇಕು.

ತೋಡಗು ಸರಕಾರದ ಆರ್ಥಿಕ ಸ್ಥಿತಿ ಚೆನ್ನಾಗಿದೆ. ಆದರೆ ಈ ರೀತಿಯಲ್ಲಿ ಹಣ ಸಂಗ್ರಹಿಸಿಟ್ಟು ಸೊಳ್ಳೆಪರೂ ರಾಷ್ಟ್ರಹಿತ ದೃಷ್ಟಿಯಿಂದ ಯೋಗ್ಯವಲ್ಲ ಯುದ್ಧ ಕಾಲದಲ್ಲಿ ಸಾಮಾನುಗಳ ಬೆಲೆ ಹೆಚ್ಚು, ಕೆಲಸಗಾರರು ದೊರೆಯುವದು ಕಷ್ಟವೆಂದು ಹೇಳುವದು ಸಂಪ್ರದಾಯವಾಗಿತ್ತಾದರೂ ಇನ್ನೂ ಇದೇ ರಾಗ ಹಾಡುತ್ತಿರುವದು ಯುಕ್ತವಲ್ಲ. ಯುದ್ಧದ ಸಮಯದಲ್ಲೇ ಯುದ್ಧೋತ್ತರ ಯೋಜನೆಗಳನ್ನು ತಯಾರಿಸಿ ಸರಕಾರದಲ್ಲಿ ಹಣವಿಟ್ಟಿದ್ದರೂ ಸಾಲ ಎತ್ತಿ ತನ್ನ ಯೋಜನೆಗಳನ್ನು ಜಾರಿಯಲ್ಲಿ ತಂದ, ತರುತ್ತಿರುವ ಸರಕಾರಗಳಿವೆ. ಹಾಗಿರುವಾಗ ಇನ್ನೂ ಈ ವಿಚಾರದಲ್ಲಿ ಆಸ್ಥೆ ವಹಿಸದಿರುವದು ಶೋಚನೀಯ.

## ಮರ್ತಮನ.

ಕೊಡಗಿನ ಚೀಫ್ ಕಮಿಷನರಾಗಿದ್ದ ದಿ. ಬ ಕೆ. ಚಂಗಪ್ಪನವರು ನಿನ್ನೆ ತೀರಿಕೊಂಡ ಕಾರಣ ತಾರೀಕು ೫-೪-೪೪ರಲ್ಲಿ ನಡೆಯುವ ಪದವಿಮೂರನೇ ಕೊಡಗು ಪ್ರಾಂತೀಯ ಸಹಕಾರ ಸಮ್ಮೇಳನವನ್ನು ಈಗಿನ ಚೀಫ್ ಕಮಿಷನರಾದ ದಿ. ಬ. ಸಿ ತಿರು ನೆಂಕಟ ಮೊದಲಿಯೂರವರು ತೆರೆಯುವರು.

ತಾರೀಕು ೨೬-೩-೪೪ನೇ ಶನಿವಾರ ಸಾಯಂಕಾಲ ೫½ ಗಂಟೆಗೆ ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ವಿದ್ವಾನ್ ನಾರಾಯಣ ಶಾಸ್ತ್ರಿಗಳ ಸಂಗೀತ ಕಚೇರಿಯು ನಡೆಯುವದು.

ಮಡಿಕೇರಿ ನಾಡು ಇಬ್ಬಿವಳವಾಡಿ ಗ್ರಾಮದ ಶ್ರೀ ಧರ್ಮಕಾಳಿ ಹಬ್ಬವು ತಾ. ೨೪ರಲ್ಲಿ ನಡೆಯುವದು. ಆ ಸಂದರ್ಭದಲ್ಲಿ ಜೊಳಕಾಟ್, ಪೀಲಿಯಾಟ್, ಕೊಂಬಾಟ್ ಮೊದಲಾದ ನೃತ್ಯಗಳನ್ನು ಏರ್ಪಡಿಸಿರುವರಂತೆ.

ಕೊಡಗಿನ ಆ ವ್ಯವಸಾಯ ಅಧಿಕಾರಿಯಾಗಿ ಶ್ರೀ ಮಂಡಂಡ ಪೊನ್ನಪ್ಪನವರನ್ನು ನೇಮಿಸಿರುವದಾಗಿ ವಾರ್ತೆ.

ಬೆಂಗಳೂರು ಕೊಡಗು ಸಂಘದವರು ತಾ. ೨೮-೩-೪೪ರಲ್ಲಿ ಡಾ. ಸಿ. ಕೆ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಕೊಡಗಿನ ಭವಿಷ್ಯದ ವಿಚಾರ ಸಾರ್ವಜನಿಕ ಚರ್ಚೆ ನಡೆಸಿ ಕೊಡಗು ಪ್ರತ್ಯೇಕವಾಗಿಯೇ ಇರಬೇಕೆಂದು ತೀರ್ಮಾನಿಸಿರುವರು. ಶ್ರೀಗಳಾದ ವಿ. ನೂಪಯ್ಯ, ಕೆ. ವಿ. ನಾಣಯ್ಯ, ಪಿ. ಸಿ. ಕರುಂಬಯ್ಯ, ಕೆ. ಚಿಣಪ್ಪ, ಬಿ. ಎಂ. ಚಂಗಪ್ಪ ಮುಂತಾದವರು ಕೊಡಗು ಪ್ರತ್ಯೇಕವಿರಬೇಕೆಂದೂ, ಶ್ರೀಗಳಾದ ಬಿ. ಜೆ ಅಚ್ಚುಯ್ಯ, ಸಿ ನೂಚಿಯ್ಯ, ಮಿಸ್. ಸಿ ಸುಬ್ಬಯ್ಯ ಮೊದಲಾದವರು ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಬೇಕೆಂದೂ ಮಾತಾಡಿದರು.

ಅಖಿಲ ಕೊಡಗು ವಿದ್ಯಾರ್ಥಿ ಕಾಂಗ್ರೆಸ್ಸಿನ ತೃತೀಯ ಸಮ್ಮೇಳನವನ್ನು ಮೇ. ತಾರೀಕು ೨ನೇ ವಾರದಲ್ಲಿ ವೀರಾಜಪೇಟೆಯಲ್ಲಿ ನಡೆಸಲು ಅಖಿಲ ಕೊಡಗು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದೆ.

ಸೈಕಾರಿನಿಂದ ದನಗಳನ್ನು ತರಲು ಇದ್ದ ನಿರ್ಬಂಧ ಆಜ್ಞೆಯನ್ನು ಮೈಸೂರು ಸರಕಾರವು ರದ್ದು ಮಾಡಿದೆ.

ಕುಟ್ಟದ ಫೆಯಿತ್ ಎಸ್ಟೇಟಿನಲ್ಲಿದ್ದ ಶ್ರೀ ಕೊಂಗಂಡ ಸಿ. ಬೆಳ್ಳಪ್ಪನವರು ತಾ. ೨೪ರಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವದಾಗಿ ತಿಳಿದು ಬಂದಿದೆ.


## FOR SALE.

20 Acres of Coffee and 10 acres of Cardamom with 38 acres of wooded jungle, of which 6 acres are fit for paddy cultivation in Margodu Village, Mercara Nad. It is about 1½ miles from 5/6 of Mercara-Siddapur road and served with a good road. Rupees 20,000 or any reasonable offer.

'X'

2-2 C/o. MANAGER,
'Kodagu' Mercara.



ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯಸವರು

# ಪತ್ರವ್ಯವಹಾರಗಳು.

## ಗಾಂಧಿ ಸ್ಮಾರಕ.

ಮಹಾತ್ಮ ಗಾಂಧಿಜೀಯವರ ಸ್ಮಾರಕಕ್ಕಾಗಿ ಎಲ್ಲಾ ದೇಶಗಳಲ್ಲಿ ಲವು ವಿಧಗಳ ಕಾರ್ಯಕ್ರಮಗಳು ನಡೆದುತ್ತಾ ಇವೆ. ಯಾವ ಮಹಾತ್ಮರ ಪವಿತ್ರ ಪಾದಗಳು ನಮ್ಮ ದೇಶವನ್ನು ಸಹ ಪಾವನಗೊಳಿಸಿರುವ ಸ್ಥೋ ಅಂಥಾ ಪುಣ್ಯಾತ್ಮರುಗಳ ಸ್ಮಾರಕಕ್ಕಾಗಿ ನಾವು ಸಹ ಯಾವದಾದರೂ ಒಂದು ವಿಧದ ಸ್ಮಾರಕ ಕಾರ್ಯಕ್ರಮವನ್ನು ಕೈಕೊಳ್ಳುವದು ನಮ್ಮ ಧರ್ಮ ಮತ್ತು ಕರ್ತವ್ಯವಾಗಿದೆ. ಆದ್ದರಿಂದ ನಾನು ಈ ಕೆಳಗಿನ ಪ್ರಾರ್ಥನಾಕ್ರಮವನ್ನು ದೇಶದವರ ಅವಗಾಹನೆಗೆ ತರುವಂತಿದ್ದೇನೆ.

1. ನಮ್ಮ ದೇಶದ ಸಿದ್ಧಪ್ರದೇಶದಲ್ಲಿ 40 ಯಾ 50 ಎಕರೆ ಜಾಗವನ್ನು ಪಡೆದು ಅದರ ಸುತ್ತಲೂ ಬತ್ತೇರಿಕಟ್ಟೆ ಅದರ ಮಧ್ಯದಲ್ಲಿ ಒಂದು ದರೆ ತೆಗೆದು ಆ ಕೆರೆಯ ಮಧ್ಯದಲ್ಲಿ ಮಹಾತ್ಮರಿಯವರ ಶಿಲಾಪ್ರತಿಮೆಯನ್ನು ನಿರ್ಮಿಸಿ ಬಿಡುವದು

2 ಜಾಗೆ ಸ್ವಾಧೀನ ಪ್ರದೇಶ ಸ್ಥಳವನ್ನು ಗಾಂಧಿ ಸ್ಮಾರಕ ಸಮಿತಿಯವರಿಗೆ ಬಿಟ್ಟುಕೊಡಬೇಕಾಗಿ ಪ್ರಾರ್ಥಿಸಿದ ಮೇಲೆ ಆ ಸ್ಥಳವನ್ನು ಸಮಿತಿಯವರಿಗೆ ಒಪ್ಪಿಸಿ ಬಿಡುವದು.

3 ಸಾರ್ವಜನಿಕರು ಜಾಗ ಕಾಡುಮರಗಳನ್ನು ತೆಗೆದು ಬೆರೆ ಉದ್ಯೋಗಕ್ಕೆ ಉಪಯೋಗಿಸದಂತೆ ಎಚ್ಚರಿಕೆಗಳನ್ನು ಸಹ ಪಡಿಸುವದು. ಅಲ್ಲಿ ಹೂವು, ತೋಟಗಳನ್ನೆ ಬೆಳೆಸುವದು.

4 ಗಾಂಧಿ ತತ್ವಗಳನ್ನು ಕಾರ್ಯರೂಪಕ್ಕೆ ತರುವದಕ್ಕಾಗಿ ಆಯಾ ಜಿಲ್ಲೆಯಲ್ಲಿ ಆಯಾ ಜಿಲ್ಲೆಯವರಿಂದ ದೇಶಸೇವೆಯನ್ನೇ ತಮ್ಮ ಗುರಿಯಾಗಿಟ್ಟು ಜೀವನವನ್ನು ಸಾಗಿಸಬೇಕೆಂದು ತೀರ್ಮಾನಮಾಡಿಕೊಂಡ ಪುರುಷರು ಮತ್ತು ಸ್ತ್ರೀಯರು ತಪೋವನದಲ್ಲಿ ಸಣ್ಣ ಸಣ್ಣ ಕುಟೀರಗಳನ್ನು ಕಟ್ಟಿಕೊಂಡು ಅವರವರ ಖರ್ಚಿನಲ್ಲಿಯೇ ವಾಸಮಾಡುವದು. ಅಲ್ಲಿ ಗಾಂಧೀಜಿಯವರ ಜೀವನ ಧ್ಯೇಯವನ್ನು ಬೋಧಿಸುವ ವಿಚಾರ ಮಾಡಿ ಆಯಸ್ಸು ಗಾಂಧಿ ತತ್ವಾನುಯಾಯಿಗಳನ್ನು ತಯಾರಿಸುವದು.

5. ಮಹಾತ್ಮಾಜೀಯವರ ಜನ್ಮೋತ್ಸವ ದಿನಸವನ್ನಾಗಲೀ, ಅವರು ನಮ್ಮ ದೇಶಕ್ಕೆ ಸಾದಾರ್ಪಣಮಾಡಿದ ದಿವಸವನ್ನಾಗಲೀ ಅಥವಾ ಅವರು ದೇಹತ್ಯಾಗಮಾಡಿದ ದಿವಸವನ್ನಾಗಲೀ ಪ್ರತಿ ಸರ್ವಪೂ ಗಾಂಧಿ ದಿನಾಚರಣೆಯೊಗಿ 7 ದಿವಸಗಳ ವರೆಗೆ ತಪೋವನದಲ್ಲಿ ಆಚರಿಸಿ ಅಖಂಡ ರಾಮಭಜನೆಯನ್ನು ಮಾಡುವದು.

(a) ನೂಲುವ ಸ್ಪರ್ಧೆ, ಚಾಪುವಾಗಗಳ ಪ್ರದರ್ಶನ, ವಸ್ತುಗಳ ಪ್ರದರ್ಶನವನ್ನೆರಿ ಪ್ರದರ್ಶನಗಳನ್ನು ಮಾಡುವದು.

(b) ದೇಶದ ಆಡಳಿತ ವಿಷಯವಾಗಿ, ದೇಶದ ಜನರ ಆರೋಗ್ಯದ ವಿಷಯವಾಗಿ, ಸಾಮಾಜಿಕ ಏಳಿಗೆಯ ವಿಷಯವಾಗಿ ಮತ್ತು ಇತರ ವಿಷಯಗಳ ಕುರಿತು ಉಪನ್ಯಾಸಗಳಿಗೆ ವಿರ್ಪಾಟು ಮಾಡುವದು.

ಈ ವಿಷಯವನ್ನು ದೇಶದ ಆಡಳಿತೆ ನಡಿಸುವ ಸುಬ್ಯಾಧಿಕಾರಿಗಳು, ದೇಶದ ಮಂದಾಳುಗಳು ಮತ್ತು ದೇಶದ ಎಲ್ಲಾ ಜನಾಂಗದವರೂ ಸೇರಿ ಕೂಲಂಕಶವಾಗಿ ವಿಚಾರಿಸಿ ಒಂದು ಶ್ರೇಷ್ಠ ತರವಾದ ತೀರ್ಮಾನಕ್ಕೆ ಬರಬೇಕಾಗಿ ನನ್ನ ಅತಿ ವಿನಯಪೂರ್ವಕವಾದ ವಿಜ್ಞಾಪನೆ.

'ಗಾಂಧಿ ಭಕ್ತ.'

## ಗಾಂಧೀಜಿಯು ಹೆಸರಿನಲ್ಲಿ.

ಮಹಾತ್ಮಾಗಾಂಧಿಜೀಯವರು ಸಿಧನರಾದರು. ಅದಕ್ಕಾಗಿ ಸಂತಾಪಸೂಚಿಸಿನ ವೆಲ್ಲರೂ ಟಿಕ್ಕಿವು. ಆವರ ತತ್ವಗಳನ್ನು ಸಾಧ್ಯವಾದಷ್ಟು ಆಚರಣೆಯಲ್ಲಿ ತರುವ ವೆಂದು ಕಣ್ಣೀರು ಮಿಡಿಯುತ್ತಾ ಪ್ರತಿಜ್ಞೆ ಮಾಡಿದೆವು ಆದರೆ ಎಂದು ದೊಡ್ಡದಲ್ಲಿ ನಡೆಯುಸ್ತಿರುವದೇನು? ಕೊಡಗಿನಲ್ಲಿ ಇಷ್ಟು ಮಂದಿಯೆಯ ಗಾಂಧಿ ಎಲ್ಲಾ ಸೂಚಿದಿದರೂ ಮದುವೆಗೆ ಂಖಾ ಕಾಯಿ ಶುಭವೆಂದು ಹೇಳಿದಂತೆ ಈ ಹುದುವೆಯ ಹೆಸರಿನಲ್ಲಿ ಆಗುವ ಅರ್ಥಿಕ ನಾಶವನ್ನು ಇನ್ನಾದರೂ ತಡೆಗಟ್ಟಬೇಡವೇ? ಇನ್ನೆನ್ನು ಜನತೆಯಲ್ಲಿ ಬೇಷಭೂಷಣಾ. ನಗನಾಣ್ಯದ ನೋಹ ಕಡಿಮೆಯಾಗಲಿಲ್ಲವೇ? ಸಾಬೂಹ ಕವಿವನನ್ನು ಅಭಿನಂದಿಸಲೂ, ಹೆಚ್ಚು ಜೀಲೆಯ ಸೀರೆ ಉಟ್ಟವಳು ಉತ್ತಮಳೆಂದೂ ಬೆಲೆ ಕಟ್ಟುವ ಕಾಲವಿರುತ್ತಿತ್ತು. ಆದರೆ ಪಂಚೆ ಜಬ್ಬಾ ತೊಟ್ಟಂಥಾ ಸಭ್ಯನಾಗಿ ಅಹಿಂಸೆಯೂ, ಶೀಲ ಖದಿ ಸೀರೆಯಿಂದ ಉತ್ತಮಳಾಗಿರಬಹುದೆಂದೂ ಮಹಾತ್ಮರು ತೋರಿಸಿಕೊಟ್ಟಿದ್ದಾರೆ ಫನತೆ, ಮರ್ಯಾದೆ. ಪವಿತ್ರತೆ ಪೂಜಾತಾತನಲ್ಲಿ ಬದಲು ಹೃದಯದಲ್ಲಿ ಆದ್ದರಿಂದ ಪೂಜ್ಯ ಮಹಾತ್ಮರ ಹೆಸರಿನಿಂದಲಾದರೂ ಸಾವಿರಾರು ರೂಪಾಯಿಗಳನ್ನ ಬಟ್ಟೆಗಾಗಿ ಸುರಿಯುವದನ್ನು ನಿಲ್ಲಿಸಬೇಕು. ಹೆಸ್ಸಾರು ರೂಪಾಯಿಗಳನ್ನು ಸಾಲದೂಡಿ ನಗಮಾಡಿಸುವದನ್ನು ನಿಲ್ಲಿಸಬೇಕು.

ಕೊಡಗಿನ ಮದುವೆ ಉತ್ಸವಗಳಲ್ಲಿ ಒಂದು ರೀತಿಯ ಸರಳತೆ ಇದ್ದ ಕಾಲ ವೊಂದಿತ್ತು. ಮದುವೆಗಳಿಗೆ ಮೊದಲ ಸಾಸಿಯಿಗಳನ್ನು ಸೇರಿಸದ ಸಮಯ ವಿತ್ತು. ಆದರೆ ಇತ್ತಲಾಗಿ ಅಡಂಬರವಿಲ್ಲದ ಮದುವೆಗಳೇ ಇಲ್ಲ. ಸೇಂದಿ, ಸಾರಾಯಿಗಳಲ್ಲದೆ ಶುಭಕೋಭನ ಉತ್ಸವಗಳೇ ಇಲ್ಲ ಗಾಂಧೀಜಿಯವರು ಇದಕ್ಕಾಗಿ ಶ್ರಮಿಸಿ, ತಮ್ಮ ಬಾಳನ್ನು ಸಮರ್ಪಣ ಉದ್ಧಾರಗ ವೇದಿಕೆಯಲ್ಲಿ ತೇದು ಅವರಂತಾದರು. ಇನ್ನಾದರೂ ನಾವು ಕಣ್ಮರೆಯ ಬೇಡವೇ? ಕೊಡಗಿನ ಮಹಿಳೆಯರು ಮತ್ತು ಮಹನೀಯರು ಈ ವಿಚಾರ ನಿಗವಹಿಸಿ ವರ್ತಿಸುವರೇ? ಹಾಗೆ ಮಾಡಿದ್ದಾದರೆ ಗಾಂಧೀಜಿಯವರಿಗೆ ಅಮರ ಸ್ಮಾರಕ ರಚಿಸಿದಂತಾಗುವದು. ಕೊಡಗು ನಾಡು ಸುಖ, ಶಾಂತಿ, ಸಂಪತ್ತಿನ ಬೀಡಾಗುವದು.

ಇದರ ಜವಾಬ್ದಾರಿ ಹೆಚ್ಚಾಗಿ ವಿದ್ಯಾವಂತರ ಮೇಲೆ ಇದೆ. ಧನಿಕರ ಮೇಲಿದೆ. ಆದ್ದರಿಂದ ಮಹಾತ್ಮಗಾಂಧೀಜೀ ಋಣದ ಹೆಸರಿನಲ್ಲಿ ಈ ಅನಾಚಾರವನ್ನು ನಿಲ್ಲಿಸಬೇಕು. ಗಾಂಧೀಜಿಯವರಿಗಾಗಿ ಕಣ್ಣೀರು ಹಾಕಿದ ನಾವು ಇಷ್ಟ ಮಾಡಲಾರೆವೇ?

'ಪ್ರತಿಜ್ಞಾಬದ್ಧ.'

## ಶನಿವಾರ ಸಂತೆಗೆ ಬಸ್.

ಮಡಿಕೇರಿಯಿಂದ ಮಡಿಕೇರಿ, ಮೈಸೂರು, ಬೆಂಗಳೂರು ಮೈಸಿಗೆ ಬಸ್ಸುಗಳು ಶನಿವಾರಸಂತೆ ಮಾರ್ಗವಾಗಿ ಹೋಗುತ್ತಿರುವುದು ಸರಿಯಷ್ಟೆ. ಆದರೆ ಶನಿವಾರಸಂತೆಗೆ ಹೋಗುವವರಿಗೆ ಓಬ್ಬರು ಸೌಟ್ಸರ್ಸ್, ಫ್ರೀ ಪ್ಯಾಸೆಂಜರ್ಸ್ ಸಿಗುವುದೇ ಇಲ್ಲ. ಅವರು ಶನಿವಾರಸಂತೆಗೆ ಹೋಗುವವರಿಗೆ ಓಬ್ಬರು ಸೌಟ್ಸರ್ಸ್, ಫ್ರೀ ಪ್ಯಾಸೆಂಜರ್ಸ್ ಸಿಗುವುದೇ ಇಲ್ಲ. ಅವರು ಶನಿವಾರಸಂತೆಯಿಂದ ಸೋಮವಾರಪೇಟೆಗೆ ಹೋಗಬೇಕಾದರೆ ಸರಿಯಾದ ಜನರಿಗೆ ಸಿಗುವುದಿಲ್ಲ. ಎರಡು ಬಸ್ಸುಗಳು ಕೊಡ್ಲಿಪೇಟೆಯಲ್ಲಿ ಹಬ್ಬ ಮಾಡುವುದರಿಂದ ಅಲ್ಲಿನ ಜನರಿಗೆ ಬಂಬಾ ಅನುಕೂಲವಾಗಿದೆ. ಆದರೆ ಶನಿವಾರಸಂತೆಯವರಿಗೆ ಅಷ್ಟೇ ಅನಾನುಕೂಲವಾಗಿದೆ. ಆದ್ದರಿಂದ ಶನಿವಾರ ಸಂತೆಯಲ್ಲಿ ಒಂದು ಬಸ್ಸು ನಿಲ್ಲುವಂತೆ ಮಾಡಿಕೊಡಬೇಕೆಂದು ಇಲ್ಲಿಯ ಪುರವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ನೇದ್ಯಮಾಡಿಕೊಂಡಲ್ಲು ಪೆಟ್ರೋಲ್ ದೊರೆಯುವುದು ಕಷ್ಟವೆನ್ನುತ್ತಾರೆ. ಆದ್ದರಿಂದ ಕೊಡ್ಲಿಪೇಟೆಯಲ್ಲಿ ಹೋಗಿ ನಿಲ್ಲುವ ಎರಡು ಬಸ್ಸುಗಳಲ್ಲಿ ಒಂದನ್ನು ಶನಿವಾರ ಸಂತೆಯಲ್ಲಿ ನಿಲ್ಲುವಂತೆ ಮಾಡಿದರೆ ಅಷ್ಟಾದರೂ ಉಪಕಾರ ಮಾಡಿದಂತಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕೇಳಿಕೆಯನ್ನು ಸಲ್ಲಿಸಿ ಕೊಡುವರೇ?

B. K. S.

## ಕಾಲೇಜು.

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ ಕರಾಚಾಯ ವ್ಯವಸಾಯ, ಕೈಗಾರಿಕೆ ಬೆಳೆ ಮೊದಲಾದುವುಗಳಲ್ಲಿ ಒಂದು ಹೊಸ ಹುರುಪು ಹುಟ್ಟಿ ಎಲ್ಲಾ ಜನರನ್ನು ಆಲೋಚನೆಮಾಡುವಂತೆ ಮಾಡಿದೆ.

ನಮ್ಮ ಪುಟ್ಟ ಕೊಡಗಿನಲ್ಲಿ ಜನಜಾಗೃತಿಯಾಗಿ ಜನರೇ ತೆರಿದಿದ್ದ ಮೂರು ಹೈಸ್ಕೂಲುಗಳನ್ನು ಸರಕಾರವರು ನಡೆಸಲು ಈಗ ಒಪ್ಪಿದರು. ಕ್ರೈಸ್ತ ಮಿಷನಿನವರು ಮಡಿಕೇರಿಯಲ್ಲಿ ಒಂದು ಹೈಸ್ಕೂಲು ತೆರೆದಿರುವರು ವೀರಾಜಪೇಟೆಯಲ್ಲಿ ಒಂದು ತೆರೆಯಲಿರುವರು.

ದೇಶದಲ್ಲಿ ಜಿಲ್ಲಾ ಬೋರ್ಡಿನವರಿಂದಲೇ ನಡೆಯಲ್ಪಡುವ ಹೈಯರ್ ಎಲಿಮೆಂಟರಿ ಶಾಲೆಗಳು 20 ಕ್ಕೆ ಸಮೀಪ ಇವೆ. ಜನಜಾಗೃತಿಯು ಹೆಚ್ಚುತ್ತಿರುವುದರಿಂದ ಇನ್ನು ಐದು ವರ್ಷಗಳಲ್ಲಿ ಬಹುತ್ವ ಹೈಯರ್ ಎಲಿಮೆಂಟರಿ ಶಾಲೆಗಳಾಗುವುದು. ಜನಜಾಗೃತಿಯು ಹೆಚ್ಚುತ್ತಿರುವಂತೆ ಜಿಲ್ಲಾ ಬೋರ್ಡಿನವರಾಗಲೀ ಮಾಸಿಗ ಜನರಾಗಲೀ ಇನ್ನೂ ಎರಡು ಹೈಸ್ಕೂಲುಗಳನ್ನು ತೆರೆಯುವರು. ಈಗಲೇ ಆ ಪ್ರಯತ್ನಗಳಾಗುತ್ತಿವೆ. ಹೈಸ್ಕೂಲು ಹೆಚ್ಚು ಬೇಕೆನ್ನುವುದಕ್ಕೆ ಮಡಿಕೇರಿ, ವೀರಾಜಪೇಟೆಯಲ್ಲಿ ಮಿಷನರಿಗಳು ಹೊಸ ಹೈಸ್ಕೂಲು ತೆರೆಯುವ ವಿಚಾರಮಾಡುತ್ತಿರುವುದೇ ನಿದರ್ಶನ. ಸೋಮವಾರಪೇಟೆ ಒಂದರಲ್ಲಿಯೇ ಉಳಿದ ಎಲ್ಲಾ ಹೈಸ್ಕೂಲುಗಳಲ್ಲೂ ಪ್ರತಿ ತರಗತಿಯಲ್ಲಿ ಎರಡೆರಡು ಸೆಕ್ಷನ್‌ಗಳಿವೆ ಈ ರೀತಿ ಇರುವುದರಿಂದ ಮೂರ್ನಾರ್ದು, ಹುದಿಕೇರಿ, ಆಸ್ಪತ್ರಿ, ಪಾರಾಣೆಗಳಲ್ಲಿಕ್ರಮೇಣ ಹೈಸ್ಕೂಲುಗಳಾಗಲೇಬೇಕು. ಈ ನಾಲ್ಕು ಹೈಸ್ಕೂಲುಗಳಲ್ಲಿ ವರ್ಷಕ್ಕೆ ಏಂ ಮಕ್ಕಳಿಗೆ ಕಡಿಮೆ ಇಲ್ಲದೆ ಸ್ಕೂಲ್‌ಫೈನಲ್ ತರಗತಿಯಲ್ಲಿ ತೇರ್ಗಡೆ ಹೊಂದಬಹುದು.

ಮುಂದೆ ವಿದ್ಯಾಭಿವೃದ್ಧಿಯ ತಕ್ಷಣವು ಅನಿವಾರ್ಯವಾಗಿ ಬರುವದು, ಆಗ ಹೆಚ್ಚಿನ ಶಾಲೆಗಳಾಗುವವು. ಹೀಗೂ ಕೊಡಗಿನಲ್ಲಿ ಸ್ಕೂಲ್‌ಫೈನಲ್ ಪಾಸಾಗಿ ಒಂದು ಕಾಲೇಜಿಗೆ ಸೇರಿಕೆಯಿ ವಿದ್ಯಾರ್ಥಿಗಳು ದೊರೆಯುವರೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಆದರೆ ಕೊಡಗಿನಲ್ಲಿ ಕಾಲೇಜೆಲ್ಲಿದೆ? ಆಗುವ ಭರವಸೆ ಎಲ್ಲಿದೆ? ವೆರ್ನ್ಸ್ಟೆ ಜೋಫ್ ಶಿವಿಷಸರವರು ನ್ಯಾಯಪಥಯಕ ಸಭೆಯ ಆರಂಭ ಭಾಷಣದಲ್ಲಿ ಈ ವಿಚಾರ ಹೇಳಿದ ವಾಕುಗಳನ್ನು ದೇಶದ ಮಹನೀಯರೆಲ್ಲರೂ ಗಮನಕ್ಕೆ ತೆಗೆದುಕೊಳ್ಳಬೇಕು. ಹೈಸ್ಕೂಲುಗಳ ಸಂಖ್ಯೆ ಹೆಚ್ಚಿ ನಮ್ಮ ದೇಶದ ಮಕ್ಕಳಿಗೆ ಹೊರಗಿನ ಕಾಲೇಜುಗಳಲ್ಲಿ ಸ್ಥಳಸಿಕ್ಕುವುದು ಕಷ್ಟವಾಗಿದೆ. ಲೆಕ್ಕ ಮತ್ತು ವಿಜ್ಞಾನ ಶಾಸ್ತ್ರವನ್ನು ಐಚ್ಛಿಕವಾಗಿ ತೆಗೆದುಕೊಳ್ಳೋಣವೆಂದರೆ ಅವ್ಯವಸ್ಥೆಯೇ ಇಲ್ಲ. ಸೇಂಟ್ ಫಿಲೋಮಿನ ಮಿಶನಿನವರಿಗೆ ಕೊಡಗಿನಲ್ಲಿ ಕಾಲೇಜು ಸ್ಥಾಪಿಸುವ ಅನುಮತಿಯನ್ನು ಇಂಡಿಯಾ ಸರಕಾರದವರು ಕೊಟ್ಟಿರುವರಂತೆ. ಆದರೆ ಅವರು ಈಗ ಹೆಚ್ಚು ಹಣ ಬೇಕೆಂದೂ ಹಳೆಯ ಒಪ್ಪಂದದಂತೆ ಜವಾಬ್ದಾರಿ ವಹಿಸಲು ಸಾಧ್ಯವಿಲ್ಲವೆಂದೂ ಹೇಳಿದುವರಂತೆ. ಇದು ನಿಜವಾದರೆ ದೇಶಕ್ಕೆ ಇದರಿಂದ ಕುಭವೇ ಆಯಿತು. ಯಾವದೇ ಕೋಮುವಾರು ಧ್ಯೇಯಗೊಳಗಾಗದ ಸಾರ್ವತ್ರಿಕ ಪ್ರಜಾರಾಜ್ಯವನ್ನು ಕಟ್ಟಲು ಹೊರಟ ಸ್ವತಂತ್ರ ಭಾರತದ ಒಂದು ಘಟನೆವಾಗಿರುವ ಕೊಡಗಿನಲ್ಲಿ ಧ್ರಾಫ ವಿದ್ಯಾಧ್ಯಾಸವು ಒಂದು ಕೋಮಿನವರಾದ ಕ್ರೈಸ್ತಿಯನ್ ಮಿಶನರಿಗಳ ಕೈಯಲ್ಲಿರುವದು ಮಂಡಿತಾ ಹಿತಕಲ್ಲ. ಈ ಮೊದಲೊಮ್ಮೆ ಪ್ರಯತ್ನ ನಡೆದಿದ್ದಂತೆ ಕೆಲವರು ಸೇರಿ ಖಾಸಗಿಯಾಗಿ ಕಾಲೇಜು ನಡಿಸಲು ಪ್ರಯತ್ನಿಸುವರೂ ಸರಿಯಲ್ಲ. ಕೊಡಗಿನವರಿಗೆ ಅತ್ಯವಶ್ಯವಾಗಿ ಬೇಕಿರುವ ಕಾಲೇಜನ್ನು ಬರುವ ಜುಲೈಯಿಂದಲೇ ತೆರೆಯುವಂತೆ ಕೊಡಗು ಸರಕಾರವು ಕಾರ್ಯೋನ್ಮುಖವಾಗಬೇಕು. ಹೊಸ ಚೀಫ್ ಕಮಿಷನರು ಈ ವಿಚಾರ ಶ್ರದ್ಧೆಯಿಂದ ತಮ್ಮ ಕೇರ್‌ದಿಯು ಕೊಡಗು ವಿದ್ಯಾಚರಿತ್ರೆಯಲ್ಲಿ ಚಿರಸ್ಥಾಯಿಯಾಗುವಂತೆ ಮಾಡಬೇಕಾಗಿ ಜರಿಕೆ ಜನರು ಕಾಲೇಜಿಗಾಗಿ ರೀತಿ ಕೂಗಿಕೊಳ್ಳುತ್ತಿರುವಾಗ ಅವರ ಕೂಗಿಗೆ ಕಿವಿಗೊಡಬೇಕಾದುದು ಜನ ಸರಕಾರದ ಆದ್ಯ ಕರ್ತವ್ಯ. ಸರಕಾರವು ಕಾಲೇಜು ಸ್ಥಾಪಿಸಿದರೆ ಅದು ಜನರೆಲ್ಲರ ಸಂಸ್ಥೆಯೂ ಗುವದು.

'ವಿದ್ಯಾಪ್ರೇಮಿ.'

# ಕೊಡಗು ನ್ಯಾಯವಿಧಾಯಕ ಸಭೆ.

## ಠರಾವುಗಳು.

ನ್ಯಾಯ.ಶಾಸನ ಸಭೆಯು ಬಜೆಟ್ ವಿಷಯಂಗೆ ತಾ. ೧೫ ರಿಂದ ೧೭ ರ ವರೆಗೆ ನಡೆಯಿತು. ಈ ಸಭೆಯಲ್ಲಿ ಚರ್ಚಿಸಲ್ಪಟ್ಟು ಪಾಸಾದ, ಹಿಂದೆ ತೆಗೆದುಕೊಂಡ ಠರಾವುಗಳನ್ನು ಈ ಕೆಳಗೆ ಕೊಡಲಾಗಿದೆ.

೧. ಸ್ಪೆಶ್ಯಲ್‌ಡ್ಯೂಟಿ ಸುಬೇದಾರರೊಬ್ಬರನ್ನು ನೇಮಿಸುವ ದೃಷ್ಟಿಯಿಂದ ಓ. ಭೂಕಂದಾಯ ವಿಭಾಗದಿಂದ ಒಂದು ರೂಪಾಯಿ ಬೋತ್ತ ಮಾಡಬೇಕೆಂಬ ಠರಾವನ್ನು ಶ್ರೀ. ಎನ್. ಸೋಮಣ್ಣನವರು ಸೂಚಿಸಿದರು ಠರಾವು ಪಾಸಾಯಿತು

೨. ಖಾಸಗಿ ಉಪಯೋಗಕ್ಕಿರುವ ಮರಗಳನ್ನು ಸೀಲ್ ಮಾಡುವ ಅಧಿಕಾರವನ್ನು ಪಾರುಪತ್ತೆಗಾರರಿಗೂ ಕೊಡಬೇಕು ಎಂಬ ಖೋತಾ ರ ವನ್ನು ಫೈನಾನ್ಸ್ ಮೆಂಬರರ ಭರವಸೆಯ ಮೇರೆ ಶ್ರೀ ಎನ್. ಸೋಮಣ್ಣನವರು ಹಿಂತೆಗೆದು ಕೊಂಡರು.

೩ ತೆಂಗಿನಗಳ ಮೇಲಿನ ಸೀನಿಯರೇಜ್ ದರವನ್ನು ಶೇಕಡ ೫೦ ರಷ್ಟು ಕಡಿಮೆ ಮಾಡಲು ೭ ಎ ಭೂಕಂದಾಯ ವಿಭಾಗದಿಂದ ಒಂದು ರೂಪಾಯಿ ಬೋತ್ತ ಮಾಡಬೇಕೆಂಬ ಠರಾವನ್ನು ಶ್ರೀ. ಎನ್. ಸೋಮಣ್ಣನವರು ವಾಪಾಸು ತೆಗೆದುಕೊಂಡರು.

೪. ನೂರು ವಿಶೇಷಗಳಿಗಿಂತಾ ಹೆಚ್ಚಿರುವ ಖಾಸಗಿ ಜಾಗಗಳಲ್ಲಿನ ತೆಂಗಿನಕಾಯಿ ಕತ್ತರಿಸಿ ತೆಗೆಯುವ ಅಧಿಕಾರವನ್ನು ಪರವಾನಿಕೇದಾರರಿಗೆ ಸಾಕಷ್ಟು ಪರಿಹಾರಕೊಟ್ಟು ಸರಕಾರ ವಹಿಸಿಕೊಳ್ಳುವ ವಿಷಯದಿಂಗಿ ೧೦ ಎ ಫಾರೆಸ್ಟ್ ಖರ್ಚಿನಿಂದ ಒಂದು ರೂಪಾಯಿ ಕಡಿಮೆ ಮಾಡಬೇಕೆಂಬ ಠರಾವನ್ನು ಶ್ರೀ. ಎನ್. ಸೋಮಣ್ಣನವರು ವಾಪಾಸು ತೆಗೆದುಕೊಂಡರು.

೫ ಕೊಡಗು ಟ್ರಾಫಿಕ್ ಬೋರ್ಡಿಗೆ ಉತ್ತರ ಕೊಡಗಿನಿಂದ ಒಬ್ಬ ಹೆಚ್ಚಿನ ಸದಸ್ಯರನ್ನು ನೇಮಕಮಾಡಬೇಕು ಈ ಬಗ್ಗೆ ೧೭ ನೋಟ್ ರ ವಾಹನಗಳ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಕೆ. ಎಂ. ದೇವಯ್ಯನವರ ಠರಾವು ಪಾಸಾಯಿತು.

೬. ಲಕ್ಷ್ಮಣತೀರ್ಥ ನೀರಾವರಿ ಯೋಜನೆಯನ್ನು ಶಿಫ್ರವಾಗಿ ರಿಯಲ್ಲಿ ತರುವ ದೃಷ್ಟಿಯಿಂದ ೧೫ ನೀರಾವರಿ ಯೋಜನಾ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

೭ ಮುಂಬರುವ ಮಳೆಗಾಲದ ಮೊದಲು ಹಾರಂಗಿ ನೀರಾವರಿ ಯೋಜನೆಯ ಬಗ್ಗೆ ಪರಿಶೀಲನೆಯನ್ನು ಪೂರ್ತಿಮಾಡಬೇಕು. ಈ ಬಗ್ಗೆ ೧೫ ನೀರಾವರಿ ಯೋಜನೆ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಎಚ್. ಟಿ ಮುತ್ತಣ್ಣನವರ ಠರಾವು ಪಾಸಾಯಿತು.

೮. ಕೇಶವಿಂಗ್ ಇಲಾಖೆಯ ಹೊಗಾಮಿ ಸಿಬ್ಬಂದಿಯನ್ನು ತೆಗೆದುಹಾಕಬೇಕು. ಈ ಬಗ್ಗೆ ೨೫ ಸಾಮಾನ್ಯ ಆಡಳಿತ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಪಿ. ಎಂ. ನಾಣಮ್ಮಯ್ಯನವರ ಠರಾವನ್ನು ಶ್ರೀ ಎನ್. ಸೋಮಣ್ಣನವರು ವಾಪಾಸು ತೆಗೆದುಕೊಂಡರು.

೯. ಕೊಡಗು ಸಾಲಸಿವಾರಣಾ ಬೋರ್ಡಿನ ಕೆಲಸವು ಮುಂದರಿಯುವಂತೆ ಈಗಿನಂತೆ ಅವನ್ನು ಇಡುವ ಬಗ್ಗೆ ೨೫ ಸಾರ್ವಾಜ್ಯ ಆಡಳಿತ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕು ಎಂಬ ಠರಾವನ್ನು ಚರ್ಚೆಯ ನಂತರ ಶ್ರೀ. ಕೆ. ಕೆ. ಬೆಳ್ಯಪ್ಪನವರು ವಾಪಾಸು ತೆಗೆದು ಕೊಂಡರು

೧೦. ಕೋರ್ಟಿಗೆ ಹಾಜರಾಗುವ ಸಾಕ್ಷಿಗಳ ಬತ್ಯವನ್ನು ರೂ. ೩ ವಂತ್ತು ೨ ರಂತೆ ನಿಶ್ಚಯಿಸಬೇಕು, ಈ ಬಗ್ಗೆ ೨೭ ಸಿ. ನ್ಯಾಯೋಡಳಿತ ಖರ್ಚಿನಿಂ ರೂ. ಒಂದು ಕಡಿಮೆ ಮಾಡಬೇಕೆಂಬ ಠರಾವಿನ ಬಗ್ಗೆ ಈ ಮೊದಲೆ ರೂ. ೨ ಮತ್ತು ೧ ರಂತೆ ನಿಶ್ಚಯವಾಗಿದೆಯೂ ಕಾರಣ ಶ್ರೀ ಎನ್. ಸೋಮಣ್ಣನವರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು.

೧೧ 'ಹೊಸದಾಗಿ ಸ್ಥಾಪಿತವಾದ ಮೂರು ಹೈಸ್ಕೂಲುಗಳ ಆಡಳಿತವನ್ನು ಸರಕಾರ ವಹಿಸಿಕೊಳ್ಳಬೇಕು'. ಇವುಗಳನ್ನು ತಾ. ೧-೪-೪೮ರಿಂದ ವಹಿಸಿಕೊಳ್ಳಲು ಸರಕಾರವು ಒಪ್ಪಿರುವ ಕಾರಣ ಶ್ರೀ. ಪಿ. ಎಂ. ನಾಣಮ್ಮಯ್ಯನವರ ಠರಾವು ಹಿಂತೆಗೆದುಕೊಳ್ಳಲ್ಪಟ್ಟಿತು. ಇದೇ ರೀತಿಯ ಠರಾವು ಕಳಹಿಸಿದ್ದ ಶ್ರೀ. ಎಚ್. ಟಿ. ಮುತ್ತಣ್ಣನವರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು.

೧೨. ಹುದಿಕೇರಿಯಲ್ಲಿ ಹೈಸ್ಕೂಲೊಂದನ್ನು ಸ್ಥಾಪಿಸುವ ದೃಷ್ಟಿಯಿಂದ ೩೭ ವಿದ್ಯಾಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಪಿ. ಎಂ. ನಾಣಮ್ಮಯ್ಯನವರ ಠರಾವು ಪಾಸಾಯಿತು

೧೩ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಖಡ್ಡಾಯ ಸೈನಿಕ ಶಿಕ್ಷಣ ಕೊಡವ ಏರ್ಪಾಡು ಮಾಡಲು ೩೭ ವಿದ್ಯಾಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಕೆ. ಕೆ ಬೆಳ್ಯಪ್ಪನವರ ಠರಾವು ವಿದ್ಯಾಮೆಂಬರರ ಸಲಹೆಯಂತೆ ವಾಪಾಸು ತೆಗೆದ. ಕೊಳ್ಳಲ್ಪಟ್ಟಿತು.

೧೪ ಕೊಡಗಿನ ಎಲ್ಲಾ ಸೆಕೆಂಡರಿ ಶಾಲೆಗಳಲ್ಲಿ ಹಿಂದೀ ಅಧ್ಯಾಪಕರನ್ನು ನೇಮಿಸಬೇಕು ಈ ಬಗ್ಗೆ ೩೭ ವಿದ್ಯಾಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಪಿ ಐ ಬೆಳ್ಯಪ್ಪನವರ ಠರಾವು ಪಾಸಾಯಿತು.

೧೫. ಮಡಿಕೇರಿ ಸೆಂಟ್ರಲ್ ಹೈಸ್ಕೂಲಿಗೆ ಒಬ್ಬ ಹಿಂದೀ ಅಧ್ಯಾಪಕರನ್ನು ನೇಮಿಸಬೇಕೆಂಬ ತಮ್ಮ ಠರಾವನ್ನು ಶ್ರೀ ಎನ್. ಸೋಮಂಣನವರು ವಾಪಾಸು ತೆಗೆದುಕೊಂಡರು

೧೬ ವೀರಾಜಪೇಟೆ ಹೈಸ್ಕೂಲಿಗೆ ಯೋಗ್ಯ ಮೂಹಿತಿ ಇರುವ ಹಿಂದೀ ಅಧ್ಯಾಪಕರನ್ನು ನೇವಿ ಸಬೇಕೆಂಬ ತಮ್ಮ ಠರಾವನ್ನು ಶ್ರೀ ಎನ್. ಸೋಮಂಣನವರು ವಾಪಾಸು ತೆಗೆದುಕೊಂಡರು.

೧೭. ಸೋಮವಾರಪೇಟೆ ಹೈಯರ್ ಎಲಿಮೆಂಟರಿ ಶಾಲೆಯು ಮುಖ್ಯೋಪಧ್ಯಾಯರ ವರ್ಗದ ಅಜ್ಜೆಯನ್ನು ಶೀಘ್ರವೆ ಜಾರಿಗೆ ತರಬೇಕೆಂಬ ತಮ್ಮ ಠರಾವನ್ನು ಶ್ರೀ ಎಚ್. ಟಿ ಮುತ್ತಣ್ಣನವರು ವಿದ್ಯಾ ಮೆಂಬರರ ಭರವಸೆ ಮೇರೆ ವಾಪಾಸು ತೆಗೆದುಕೊಂಡರು.

೧೮ ಕಲ್ಲೋಡು ಶಾಲೆಯ ಕಟ್ಟಡ ರಿಪೇರಿಗೆ ರೂ. ೨,೦೦೦ವನ್ನು ೩೭ ವಿದ್ಯಾ ಖರ್ಚಿನಲ್ಲಿ ಹೆಚ್ಚಿಸಿ ಇದಕ್ಕೆ ಅನುಗುಣವಾಗಿ ಮೊತ್ತವನ್ನು ೧೦-ಫಾರೆಸ್ಟ್ ಖರ್ಚಿನಿಂದ ಕಡಿಮೆ ಮಾಡುವದು ಎಂಬ ಶ್ರೀ ಕೆ. ಕೆ. ಬೆಳ್ಯಪ್ಪನವರ ಠರಾವು ಪಾಸಾಯಿತು.

೧೯. ಗೋಣಿಕೊಪ್ಪಲಿನ ಆಸ್ಪತ್ರೆಯ ಈಗಿನ ವಾರ್ಡನ್ನು ಊಟದ ವ್ಯವಸ್ಥೆ ಇರುವ 'ಇನ್ ಪೇಶಂಟ್' ವಾರ್ಡಾಗಿ ಮಾಡಲು ೩೪ ವೈದ್ಯ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಎಚ್. ಬಿ. ಅಂಣಯ್ಯನವರ ಠರಾವು ಪಾಸಾಯಿತು.

೨೦. ಸುಂಟಿಕೊಪ್ಪ ಆಸ್ಪತ್ರೆಗೆ 'ಇನ್ ಪೇಶಂಟ್' ವಾರ್ಡ್‌ಗಾಗಿ ಊಟ ವ್ಯವಸ್ಥೆಯಿಂಗ ೩೪ ವಿದ್ಯಾಖರ್ಚಿನಿಂದ ರೂಪಾಯಿ ಒಂದು ಬೋತ್ತ ಮಾಡಬೇಕೆಂಬ ಶ್ರೀ ಪಿ. ಎಂ. ನಾಣಮ್ಮಯ್ಯನವರ ಠರಾವನ್ನು ಫೈನಾನ್ಸ್ ಮೆಂಬರರ ಭರವಸೆ ಮೇರೆ ವಾಪಾಸು ತೆಗೆದು ಕೊಳ್ಳಲಾಯಿತು.

೨೧. ಹುದಿಕೇರಿಯಲ್ಲಿಯ ಹಂಗಾಮಿ ಆಸ್ಪತ್ರೆಯನ್ನು ಖಾಯಂ ಮಾಡುವ ಬಗ್ಗೆ ೩೪ ವೈದ್ಯ ಇಲಾಖಾ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಪಿ ಎಂ. ನಾಣಮ್ಮಯ್ಯನವರ ಠರಾವು ಹಿಂತೆಗೆದು ಕೊಳ್ಳಲ್ಪಟ್ಟಿತು.

೨೩. ಭಾಗಮಂಡಲದಲ್ಲಿ ಎಲೋಪಥಿಕ್ ಆಸ್ಪತ್ರೆಯೊಂದನ್ನು ತೆರೆಯುವ ದೃಷ್ಟಿಯಿಂದ ೩೧ ವಿದ್ಯಾ ಇಲಾಖಾ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಎನ್. ಸೋಮಂಣನವರ ಠರಾವು ಪಾಸಾಯಿತು.

೨೪. ತತ್ಕಾಲಿಕವಾಗಿರುವ ಕೊಡಗು ಮಲೇರಿಯಾ ಯೂನಿಟ್ಟನ್ನು ಖಾಯಂ ಮಾಡಬೇಕು. ಈ ಬಗ್ಗೆ ೭೯ ಸಾರ್ವಜನಿಕ ಆರೋಗ್ಯ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕು ಎಂಬ ಶ್ರೀ ಎನ್. ಸೋಮಂಣನವರ ಠರಾವು ಪಾಸಾಯಿತು.

೨೫. ಮಡಿಕೇರಿಯಲ್ಲಿ ವರ್ಷವಿಡೀ ಒಳ್ಳೆ ಹಾಲು ದೊರೆಯುವಂತೆ ಏರ್ಪಾಡು ಮಾಡಲು ೪೧ ಪೆಟ್ರೋನರಿ ಇಲಾಖಾ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಕೆ. ಪಿ. ಅಪ್ಪಯ್ಯನವರ ಠರಾವು ಆದಿನ ಗೈರ್ಹಾಜರಾದ್ದರಿಂದ ಚರ್ಚಿಸಲ್ಪಡಲಿಲ್ಲ.

೨೬. ಸೋಮವಾರಪೇಟೆ ಶಿಶುವಿಹಾರಕ್ಕೆ ರೂ. ೫,೦೦೦ ಕೊಡುವಂತೆ ೪೭ ಸಹಕಾರ ಇಲಾಖಾ ಖರ್ಚನ್ನು ಹೆಚ್ಚಿಸಿ ೧೦ ಫಾರೆಸ್ಟ್ ಖರ್ಚಿನಿಂದ ರೂ. ೫,೦೦೦ ಕಡಿಮೆ ಮಾಡಬೇಕೆಂಬ ಠರಾವು ಸರಕಾರಿ ಮೆಂಬರರ ಭರವಸೆ ಮೇರೆ ಹಿಂತೆಗೆದ್ದು ಕೊಳ್ಳಲ್ಪಟ್ಟಿತು.

೨೭. ಗೋಣಿಕೊಪ್ಪಲು ಪ್ರಾಥಮಿಕ ಶಾಲಾ ಕಟ್ಟಡದ ಬಡಾವಣೆಗಾಗಿ ೫೦ ಸಿವಿಲ್ ವರ್ಕ್ಸ್ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ ಎಚ್. ಬಿ. ಅಂಣಯ್ಯನವರ ಠರಾವು ಪಾಸಾಯಿತು.

೨೮. ಕೆಟ್ಟಗೇರಿ-ಮರೆನಾಡು ರಸ್ತೆಗೆ ಕಲ್ಲುಹಾಕಿ ಉತ್ತಮಗೊಳಿಸುವ ದೃಷ್ಟಿಯಿಂದ ೫೦ ಸಿವಿಲ್ ವರ್ಕ್ಸ್ ಖರ್ಚಿನಿಂದ ರೂ. ಒಂದು ಕಡಿಮೆಮಾಡಬೇಕು ಎಂಬ ಠರಾವನ್ನು ಸರಕಾರಿ ಮೆಂಬರರ ಭರವಸೆ ಮೇರೆ ಶ್ರೀ ಪಿ. ಎಂ. ನಾಣಮಯ್ಯನವರು ವಾಪಾಸು ತೆಗೆದುಕೊಂಡರು.

೨೯. ಸೋಮವಾರಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಬಡಾವಣೆ ಮಾಡಲು ಬೇಕಾದ ಹಣವನ್ನು ೫೦ ಸಿವಿಲ್ ವರ್ಕ್ಸ್ ಖರ್ಚಿನಿಂದ ರೂ. ಒಂದು ಬೋತ್ತ ಮಾಡಿ ಒದಗಿಸ ಬೇಕೆಂಬ ಶ್ರೀ ಎಚ್. ಟಿ ಮುತ್ತಣ್ಣನವರ ಠರಾವಿಗೆ ಸರಕಾರಿ ಮೆಂಬರರು ತಕ್ಕ ಭರವಸೆ ಕೊಟ್ಟ ಕಾರಣ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

೩೦ ಕೌನ್ಸಿಲು ಸದಸ್ಯರಿಗೆ ಕೊಡಗು ಗಜೆಟ್ಟು, ಪ್ರೆಸ್ ಪ್ರಕಟಣೆ ಮತ್ತಿತರ ಸರಕಾರಿ ಜಾಹೀರ್‌ನಾಮೆಗಳು ದೊರೆಯುವ ಏರ್ಪಾಡು ಮಾಡುವ ದೃಷ್ಟಿಯಿಂದ ೫೬ ಸ್ಟೇಷನರಿ ಮತ್ತು ಪ್ರಿಂಟಿಂಗ್ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕು ಎಂಬ ಠರಾವನ್ನು ಶ್ರೀ ಕೆ. ಕೆ. ಬೆಳ್ಯಪ್ಪನವರು ಸರಕಾರಿ ಮೆಂಬರರ ಭರವಸೆಯೇ ವಾಪಾಸು ತೆಗೆದುಕೊಂಡರು.

೩೧. ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ರಿಜಿಸ್ಟರುಗಳಲ್ಲಿ ಎಲ್ಲಿ 'ಜಾತಿ' ಮತ್ತು 'ಮತ' ಎಂಬ ಕಲಂಗಳಿವೆಯೋ ಅವನ್ನು ತೆಗೆದುಹಾಕುವ ಬಗ್ಗೆ ೫೬ ಸ್ಟೇಷನರಿ ಮತ್ತು ಪ್ರಿಂಟಿಂಗ್ ಖರ್ಚಿನಿಂದ ರೂ ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಎನ್. ಸೋಮಣ್ಣನವರ ಠರಾವು ಪಾಸಾಯಿತು.

೩೨. ಕೊಡಗಿನ ಉಳುವರಿ ಭತ್ತದಲ್ಲಿ ಕೆಲವಂಶವನ್ನು ಮಲಬಾರಿಗೆ ಕೊಡುವ ದೃಷ್ಟಿಯಿಂದ ೫೭ ಇತರ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಪಿ. ಐ. ಬೆಳ್ಯಪ್ಪನವರ ಠರಾವು ಪಾಸಾಯಿತು.

೩೩ ವಡಿಕೇರಿಯಿಂದ ಸುಂಟಿಕೊಪ್ಪಕ್ಕೆ ಬೆಳಗ್ಗೆ ಒಂದು, ಮಧ್ಯಾಹ್ನದ ಮೇಲೆ ಒಂದು ಹೀಗೆ ಎರಡು ಬಸ್ ಟ್ರಿಪ್‌ಗಳನ್ನು ಕೊಡುವ ದೃಷ್ಟಿಯಿಂದ ೬೪ ಸಿವಿಲ್ ಡಿಫೆನ್ಸ್ ಖರ್ಚಿನಿಂದ ರೂ. ಒಂದು ಕಡಿಮೆ ಮಾಡಬೇಕೆಂಬ ಶ್ರೀ. ಕೆ. ಎಂ. ದೇವಯ್ಯನವರ ಠರಾವು ಪಾಸಾಯಿತು.

(೫ ನೇ ಪುಟಕ್ಕೆ ಸಾಗಿದೆ.)

# ಉರಿ ಆರಿಸಲು ಎಣ್ಣೆ ಸಂಗ್ರಹ

'ಇತ್ತ ರಶಿಯಾವೂ ಅತ್ತ ಅಮೇರಿಕವೂ, ಜಗತ್ತಿಗೇ ಉರಿಹತ್ತಬಹುದೆಂದೂ ಅದಕ್ಕಾಗಿಯೇ ಆ ಉರಿಯನ್ನು ಆರಿಸಲು ಎಣ್ಣೆಯನ್ನು ಸಂಗ್ರಹಿಸುತ್ತಿದ್ದೇವೆ' ಎಂದೂ ಹೇಳುತ್ತಲಿವೆಯಂತೆ!

"ಅಮೇರಿಕೆಯಿಂದ ಇಡೀ ಯುರೋಪವೇ ಹಾಳಾಗಿ ಹೋಗುತ್ತಲಿದೆ. ಆಸೇರಿಕೆಯ ಸಾಹುಕಾರಿಕೆಯ ಪಾಶದಲ್ಲಿ ಸಿಕ್ಕು ಪಶ್ಚಿಮ ಯುರೋಪದ ದೇಶಗಳು ಉಸಿರು ಗಟ್ಟಿ ಗುರುಗುಟ್ಟುತ್ತಲಿವೆ. ಮಾರ್ಶಲ್ ಯೋಜನೆಯನ್ನು ಸ್ವೀಕರಿಸಿ ವುದೆಂದರೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ, ಪ್ರಜಾಪ್ರಭುತ್ವಕ್ಕೆ ನಾವೇ ಗೋರಿಯನ್ನು ಕಟ್ಟಿದಂತೆ. ನಮ್ಮ ದೇಶದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಇವುಗಳ ನಾಶಕ್ಕಾಗಿ ಅಮೇರಿಕೆ ಹೊಂಚು ಕಟ್ಟಿ ಧನದ ಮೋಹವೆರಚಿ ಅದನ್ನು ಮರೆಸಲು ಯತ್ನಿಸುತ್ತಿದೆ ಅಮೇರಿಕೆಯ ಈ ನೀತಿಯಿಂದ ಜಗತ್ತಿಗೇ ಗಂಡಾಂತರ ಉಂಟು. ಮೂರನೆಯ ಮಹಾಯುದ್ಧಕ್ಕಾಗಿ ಅಮೇರಿಕೆ ತನ್ನ ಬಗಲು ಗೂಸಾದ ಇಂಗ್ಲೆಂಡದೊಡನೆ ಕೂಡಿಕೊಂಡು ಕಾಲು ಕೆದರುತ್ತಲಿದೆ. ಯುರೋಪದಲ್ಲಿ ಅಮೇರಿಕೆಯ ಸಾಹುಕಾರಿಕೆಯ ಕೈವಾಡ ನಡೆಯದಂತೆ ಮಾಡಿದರೇನೇ ಜಗತ್ತಿಗೆ ಕ್ಷೇಮ. ಇಲ್ಲದಿದ್ದರೆ ಜಗತ್ತಿನಲ್ಲಿ ಅಶಾಂತಿಯುಂಟಾಗುವುದು. ಬರಬರುತ್ತ ಈ ಅಮೇರಿಕನ್ ಸಾಹುಕಾರೀ ಪಾಶ ಇಡಿ ಜಗತ್ತಿನ ನರಳಬೇಕಾಗುವುದು. ಆ ದೃಷ್ಟಿಂದ ಇವರ ಬಗ್ಗೆ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗಿದೆ ಕಮ್ಯೂನಿಸಂ ತಪ್ಪು ಸರ್ವ ಸಮಾನತೆಪದ ಹಾಗೂ ಸರ್ವ ಸಾಮಾನ್ಯರಿಗೂ ಸುಖ ಶಾಂತಿಗಳನ್ನು ತರುವುದಾಗಿದೆ. ಅದರ ಪ್ರಚಾರ ಬೆಳವಣಿಗೆಗಳಿಂದಲೇ ಜಗತ್ತಿಗೆ ಹಿತ. ಜಗತ್ತಿನಲ್ಲಿ ಶಾಶ್ವತ ಶಾಂತಿಯುಂಟಾಗಬೇಕಾದರೆ ಜಗದ ತುಂಬ ಕಮ್ಯೂನಿಸಂ ಪ್ರಸಾರವಾಗಿ, ಸರ್ವ ಸ್ವಾತಂತ್ರ್ಯ ಸರ್ವ ಸಮಾನತ್ವಗಳು ನೆಲೆಗೊಂಡು ಮೆರೆಯಬೇಕು.

ಈ ಕಮ್ಯೂನಿಸಂ ಪ್ರಚಾರದಲ್ಲಿ ಅರ್ಥಾತ್ ಜಗತ್ ಕ್ರಾಂತಿ ಪ್ರಚಾರದಲ್ಲಿ ಅಮೇರಿಕೆಯೂ ಕೂಡಿಕೊಳ್ಳ ಬಯಸಿದರೆ ನಮಗೆ ಬಹಳ ಆನಂದವಾಗುವುದು'

'ಏನೇ ಆಗಲಿ, ಈ ಕಮ್ಯೂನಿಸಂ ಪ್ರಚಾರ ಅಥವಾ ಜಗತ್ ಕ್ರಾಂತಿಗಾಗಿ ನಾವು ಸಾಕಷ್ಟು ಸೈನ್ಯ ಸಂಗ್ರಹ, ನೌಕೋಲು, ವಿಮಾನು, ಬಾಂಬು, ಮದ್ದು, ಗುಂಡು ಮೊದಲಾದುವುಗಳನ್ನು ಯಥೇಚ್ಛವಾಗಿ ಸಂಗ್ರಹಿಸಬೇಕಲ್ಲದೆ ರಶಿಯಾದ ಪ್ರತಿಯೊಬ್ಬ ಯುವಕನಿಗೂ ಯುವತಿಗೂ ಯುದ್ಧ ಶಿಕ್ಷಣ ಕೊಟ್ಟು ಸಿದ್ಧಪಡಿಸಬೇಕು. ನನಗೇನೂ ಯುದ್ಧ ಮಾಡುವ ಆಸಕ್ತಿಯಿಲ್ಲ. ಯುದ್ಧದಿಂದ ಎಂತಹ ಹಾನಿ ಎಂಬ ಮಾತು ಕಳೆದ ಎರಡು ಜಾಗತಿಕ ಮಹಾಯುದ್ಧಗಳಿಂದ ನಮಗೂ ಜಗತ್ತಿಗೂ ಗೊತ್ತೇ ಆಗಿದೆ. ಆದರೆ ಜಗತ್ತು ಸಾಹುಕಾರೀ ಪಾಶದಲ್ಲಿ ಸಿಕ್ಕಿ ಸಂಕಟ ಪಡುತ್ತ ಅಶಾಂತಿಗೆ ಕುಮ್ಮಾಗಬಾರದು. ಅಸಿ ವಾರ್ಹವಾಗಿ ನಾವು ಈ ಸಿದ್ಧತೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಜಗತ್ತಿನ ಶಾಂತಿ ಕಾಯುವವರಲ್ಲ ರಶಿಯಾದ ಹೊಣೆ ಬಹಳವಾಗಿದೆ. ಯುರೋಪ ಮತ್ತು ಏಶಿಯಾ ಎರಡೂ ಖಂಡಗಳಲ್ಲಿ ಹಬ್ಬಿದ ಬೃಹತ್ ರಾಷ್ಟ್ರವಿದು. ಜಗತ್ತಿನಲ್ಲಿ ಹೀಗೆ ಎರಡು ಖಂಡಗಳಲ್ಲಿ ಹಬ್ಬಿದ ರಾಷ್ಟ್ರ ಇನ್ನೊಂದಿಲ್ಲ. ಆದ್ದರಿಂದ ಈ ವಿಶ್ವಶಾಂತಿಯ ಹೊಣೆ ನಮ್ಮ ಮೇಲೆಯೇ ಇರುವುದು ಸ್ವಾಭಾವಿಕವಾದದ್ದು. ಆದಕ್ಕಾಗಿಯೇ ರಶಿಯಾದ ಪ್ರತಿಯೊಬ್ಬನೂ ಯುದ್ಧ ಸಿದ್ಧತೆಯನ್ನು ಮಾಡಿಕೊಳ್ಳ ಬೇಕಲ್ಲದೆ ಯುರೋಪದ ಇತರ ದೇಶಗಳು ಬಡತನದ ಭೂತಕ್ಕೆ ಬಲಿಯಾಗಿ ನರಳುತಿದ್ದರೂ, ಅಲ್ಲಿ ಅಮೇರಿಕೆ ಬಂದು ಹಣದ ಆಸೆ ಅವಿಷಗಳನ್ನು ತೋರಿಸಿ ಅವುಗಳ ನೈತಿಕ ಸ್ವಾತಂತ್ರ್ಯವನ್ನು ಹರಣ ಮಾಡುವುದನ್ನೂ ನಾವು ಸಹಿಸಲಾರೆವು ಇವನ್ನು ತಪ್ಪಿಗಟ್ಟಿದ್ದಿದ್ದರೆ ಜಗತ್ತಿನ ಶಾಂತಿಗೇ ಗಂಡಾಂತರ!'

ಇದು ಬಿಚ್ಚು ಮನದಿಂದ ಹೇಳಿದ ರಶಿಯಾದ ವಾದ.

'ರಶಿಯಾವು ಇಡೀ ಪಶ್ಚಿಮ ಯುರೋಪನ್ನೇ ಪಾದಾಕ್ರಾಂತ ಮಾಡಲು ಹೊಣಗುತ್ತಿದೆಯಲ್ಲದೆ ಪೂರ್ವಕ್ಕೂ ಚೀನದಲ್ಲಿ ತನ್ನ ಕೈವಾಡವನ್ನು ನಡೆಸಿ ಆ ಕ್ರಾಂತಿಯನ್ನು ಹುಟ್ಟಿಸಿ ಅಲ್ಲಿ ಭಯಂಕರ ಯಾದವೀ ಯುದ್ಧವನ್ನೇ, ನಡೆಸಿಬಿಟ್ಟಿದೆ ಚೀನದ ಪೂರ್ವ ಮುಖಾಂತರವಾಗಿಯೂ ಯುರೋಪದ ಪಶ್ಚಿಮ ಮುಖಾಂತರವಾಗಿಯೂ, ತನ್ನ ಕಮ್ಯೂನಿಸ್ಟ್ ತತ್ವಗಳಂದ, ರಾಜಕಾರಣವಲ್ಲಿ ತನ್ನ ಕೈವಾಡ ನಡೆಸಿ ತನ್ನಾಳಕ ಅನೇಕರನ್ನು ಎಮರಿಸಲು ಪ್ರಯತ್ನಿಸುತ್ತಲಿದೆ. ಇದರಿಂದ ಜಾಗತಿಕ ಶಾಂತಿಗೆ ಭಯಂಕರ ಗಂಡಾಂತರ ಪ್ರಾಪ್ತವಾಗುವುದಲ್ಲದೆ, ಇಟಲಿ, ಗ್ರೀಸ್, ಟರ್ಕಿಸ್ತಾನ ಕೆಯೂ ಮೊದಲಾದೆಡೆಗಳಲ್ಲಿ ಈಗಾಗಲೇ ಅದು ನಡೆಸಿದ ಕೃತ್ಯಗಳಿಂದ ಈ ಮಾತಿನ ಸತ್ಯತೆಯು ಪ್ರತೀತಿಗೆ ಬಾರುವಂತಿದೆ. ಎರಡನೆಯ ಯುದ್ಧ ರಾಷ್ಟ್ರದ ವಿಶ್ಲೇಷಣೆಯನ್ನೂ ಅದು ಸಹನ ಮಾಡುವಂತಿಲ್ಲ. ಪ್ರತಿಯೊಂದರಲ್ಲಿಯೂ ತನ್ನದೇ ಮೂಗು ಮೇಲು ಮಾಡಲು ಪ್ರಯತ್ನಪಡುತ್ತಲಿದೆ. ಇದರಿಂದ ಉಳಿದ ಪಶ್ಚಿಮ ರಾಷ್ಟ್ರಗಳ ಆಂತರಿಕ ಶಾಂತಿಗೆ ಭಂಗಬರುವ ಸಂಭವ ಬಹಳವಿದೆ ಆದ್ದರಿಂದ ಅಮೇರಿಕೆ ಇದರಲ್ಲಿ ಆನಿವಾರ್ಯವಾಗಿ ಕೈಹಾಕಲೇ ಬೇಕಾಗಿದೆ. ಅದಕ್ಕಾಗಿ ಅಮೇರಿಕೆಯಲ್ಲಿ ಕಡ್ಡಾಯ ಸೈನ್ಯ ಶಿಕ್ಷಣ, ಯುದ್ಧ ಸಾಮಾಗ್ರಿಗಳ ಸಂಗ್ರಹ ನಡೆಯಲೇಬೇಕು. ಇವೆಲ್ಲ ಜಾಗತಿಕ ಶಾಂತಿಗಾಗಿಯೇ ಆಗಬೇಕಾದ ವಿಷಯ. ಇಲ್ಲದಿದ್ದಾರೆ ಬಂಲಿರುವ ಜಾಗತಿಕ ಮಹಾಯುದ್ಧಕ್ಕಾಗಿ ನಾವು ಇದಕ್ಕೂ ಹೆಚ್ಚಿನ ಬೆಲೆಯನ್ನು ತೆರಬೇಕಾದೀತು.'

ಇದು ಅಮೇರಿಕೆಯ ಆಂತರಿಕ ದನಿಯ ವಾದ.

ಈ ರೀತಿ ಇವೆರಡೂ ಪ್ರಮುಖ ದೇಶಗಳು ಕ್ರಾಂತಿಗಾಗಿ ಯುದ್ಧ ಸಿದ್ಧತೆ ನಡೆಸಿದ್ದು. ಉರಿ ಆರಿಸಲು ಎಣ್ಣೆ ಸಂಗ್ರಹ ಮಾಡಿದಂತೆಯೇ ಎಂದು ಹೇಳಬಹುದು. ಈ ಗೆರಡು ಜಾಗತಿಕ ಮಹಾಯುದ್ಧಗಳ ಕಷ್ಟ ನಷ್ಟಗಳನ್ನು ಇನ್ನ ಭವಿಸಿಯೂ ಈರೀತಿಯ ನಡವಳಿಕೆ ಇಟ್ಟುಕೊಳ್ಳುವುದು ನಿಜವಾಗಿಯೂ ವ್ಯಸನಾಸ್ಪದ ಸೂತೇ ಸರಿ.

'ಜೈಹಿಂದ್'

---

(ನಾಲ್ಕನೇ ಪುಟದಿಂದ ಸಾಗಿದ್ದು)

ಒಳ 'ಈ ಪ್ರಾಂತವನ್ನು ಬೇರೆ ದೊಡ್ಡ ಪ್ರಾಂತದೊಡನೆ ಸೇರಿಸುವ ಪ್ರಸಂಗ ಬಂದಾಗ ಇಲ್ಲಿಯ ಜನಾಭಿಪ್ರಾಯವನ್ನು ತೆಗೆಯಲು ತಕ್ಕ ವಿಧಾನವು ಮಾಡಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವಂತೆ ಈ ಸಭೆಯು ನಿರ್ಣಯ ಮಾಡುತ್ತದೆ' ಎಂಬ ಠರಾವನ್ನು ಶ್ರೀ. ಸಿ. ಎಸ್. ನಾಣಯ್ಯನವರು ವಾಚಾಳ್ ತೆಗೆದು ಕೊಂಡರು.

೩ಗ 'ಹೆಚ್ಚಿನ ಟೆಂಬರ್ ಸುಬೆದಾರ್ ರೊಬ್ಬರನ್ನು ನೇಮಿಸಬೇಕು' ಎಂಬ ತಮ್ಮ ಠರಾವನ್ನು ಶ್ರೀ. ಪಿ ಎಂ ನಾಣಯ್ಯನವರು ವಾಚಾಳ್ ತೆಗೆದು ಕೊಂಡರು.

೩೬. 'ಪೊನ್ನಂಪೇಟೆ ಟವಾಲು ಆಫೀಸಿನಲ್ಲಿ ಟೆಲಿಗ್ರಾಫ್ ವ್ಯವಸ್ಥೆ ನಡಾಯಿಸಲು ಪೋಸ್ಟ್‌ಮಾಸ್ಟರ್ ಜನರಲ್ ನನ್ನು ಇಲ್ಲಸೇ ಇಂಡಿಯಾ ಸರಕಾರವನ್ನು ಕೇಳಲು ಈ ಸಭೆಯು ಸೂಚಿಸುತ್ತದೆ' ಎಂಬ ಶ್ರೀ. ಕೆ. ಕೆ. ಬೆಳ್ಯಪ್ಪನವರ ಠರಾವನ್ನು ಸರಕಾರಿ ಮೆಂಬರರ ಭುವಸೆ ಮೇರೆ ಸೂಚಕರು ಹಿಂತೆಗೆದುಕೊಂಡರು.

೩೭. ಕಳೆದ ಐವತ್ತು ವರ್ಷಗಳಿಂದ ಕೊಡಗಿನ ಬೆಳ್ಳಿ ಕವಿಸರಾಗಿ ಮತ್ತು ನ್ಯಾಯಶಾಸನ ಸಭೆಯ ಆಧ್ಯಕ್ಷರಾಗಿ ಸೇವೆ ಸಲ್ಲಿಸಿದ ದಿ. ಬ. ಕೆ. ಚಿಂಗಪ್ಪನವರನ್ನು ನೆನಸಿ ಅವರ ಸೇವೆಯನ್ನು ಪ್ರಶಂಸಿಸುವ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

### ಸೂಚನೆಗಳು.

ಕೊಡಗಿನ ಕೋರ್ಟುಗಳಿಗೆ ಸಂಬಂಧಿಸಿದ ಜಾನೂನುಗಳನ್ನು ತಿದ್ದಿ, ಸಂಘಟಿಸುವ ನ್ಯಾಯಿಯಂದ ಒಂದು ಮಸೂದೆಯನ್ನು ಸ್ಯಾಯು ಇಲಾಖೆಯ ಸಚಿವರಾದ ಶ್ರೀ. ಎನ್. ಮುದ್ದಪ್ಪನವರು ಮಂಡಿಸಿದರು. ಮಸೂದೆಯು ಪಾಸಾಯಿತು.

೧೯೪೦ ರ ಕೊಡಗು ಶಾಲಾನಿಬಂಧನಾ ಚಾಯಿದೆಯನ್ನು ತಿದ್ದಿಪಡಿಮಾಡಲು ಅನುವಾಗುವ ಮಸೂದೆಯನ್ನು ಶೈನಾನ್ಸ್ ಮೆಂಬರರಾದ ರಾ. ಬ. ಕೆ. ಟಿ. ಉತ್ತಪ್ಪನವರು ಮಂಡಿಸಿದರು. ಮಸೂದೆಯು ಪಾಸಾಯಿತು.

---

## Small-Savings Scheme of the Government of India.

## ಇಂಡಿಯಾ ಸರಕಾರದ ಚಿಕ್ಕ ಉಳುವರಿ ಯೋಜನೆ

## ನೀವು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಂಡುಕೊಂಡಿರುವಿರಾ?

ನಿಮ್ಮ ವ್ಯಾಪಾರ ಉದ್ಯೋಗಗಳು ಕಡಿಮೆಯಾದರೆ ರೋಗಾಪತ್ತುಗಳು ಬಂದರೆ ಆಥವಾ ನಿಮ್ಮ ಮುಕ್ಕಳ ವಿದ್ಯೆ ಮುದುವೆ ವಗೈರೆಗೆ ನಿಮ್ಮ ಮತ್ತು ನಿಮ್ಮ ಕುಟುಂಬದ ಭವಿಷ್ಯವನ್ನು ಹೇಗೆ ಭದ್ರಪಡಿಸಿರುವಿರಿ?

ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ನಿಮ್ಮ ಭವಿಷ್ಯವನ್ನು ಭದ್ರಪಡಿಸುವುವು.

ನೀವು ನಿಮ್ಮ ಆಧವಾ ನಿಮ್ಮ ಕುಟುಂಬದ ಪ್ರತಿಯೊಬ್ಬ ಮೆಂಬರನ ಹೆಸರಿನ ಮೇಲಾಗಿ ರೂಪಾಯಿ. ೧೫೦೦ ರ ವರೆಗೂ ರೂ. 15,000/- ಬೆಲೆಯ ಸರ್ಟಿಫಿಕೇಟುಗಳನ್ನು ಪೋಸ್ಟಾಫೀಸಿನಿಂದಾಗಲಿ ಸರಕಾರದ ಏಜೆಂಟರ ಮುಖಾಂತರವಾಗಲಿ ಕೊಂಡು ಕೊಳ್ಳಬಹುದು.

ನೀವು 1 ರೂಪಾಯಿಯಿಂದ ಆಣೆಯ ಹಾಗೂ 4 ಆಣೆಯ ಕಿಮ್ಮತ್ತಿನ ಸೇವಿಂಗ್ಸ್ ಸ್ಟಾಂಪುಗಳನ್ನು ಸಹ ಕೊಂಡುಕೊಳ್ಳಬಹುದು. ಮುತ್ತು ಉಳಿತಾಯ ಮಾಡಿದ ಸ್ಟಾಂಪುಗಳ ಬೆಲೆಯು ೫ ರೂಪಾಯಿಯಾದಾಗ, ಅವುಗಳನ್ನು ಕೊಟ್ಟು ಅವುಗಳ ಬದಲಾಗಿ ಒಂದು ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಪಡೆಯಬಹುದು.

18 ತಿಂಗಳ ನಂತರ ಸರಕಾರದವರು ನಿಮ್ಮ ಹಣವನ್ನು ಬಡ್ಡಿ ಸಮೇತ ಯಾವಾಗ ಬೇಕಾದರೂ ವಾಪಸು ಕೊಡುವರು. 12 ವರುಷಗಳ ವರೆಗೆ ತೆಗೆದುಕೊಳ್ಳದಿದ್ದರೆ ನಿಮ್ಮ ಹಣಕ್ಕೆ ವರುಷ 1ಕ್ಕೆ 100ಕ್ಕೆ 4½ ರೂ. ಬಡ್ಡಿದೊರೆಯುತ್ತೆ. ಅದರಿಂದ ಪ್ರತಿ 100 ರೂಪಾಯಿಗೆ 150 ಆಗುತ್ತೆ. ಆದುದು ತೆರಿಗೆಯಿಲ್ಲ. ಚಿನ್ನಕ್ಕಿಂತಲು ಉತ್ತಮ. ಬೇಕೆಯ, ಕಳ್ಳರ ಭಯವಿಲ್ಲ. ಸರ್ಟಿಫಿಕೇಟುಗಳು ಆಕಸ್ಮಾತ್ ನಾಶವಾಗಿ ಹೋದರೆ ಹೊಸ ಪ್ರತಿಗಳನ್ನು ಪಡೆಯಬಹುದು.

ನಮ್ಮ ಪ್ರಧಾನ ಮಂತ್ರಿ ಪೂಜ್ಯ ಪಂಡಿತ ನೆಹರೂರವರು ಹೇಳಿರುವುದೇನೆಂದರೆ:-

"ಈ ಮುಂಚೆ ಸರಕಾರದವರು ಹೊರಡಿಸಿದ ಯಾವುದೇ ಯೋಜನೆಯಲ್ಲಿಯೂ ಸ್ವಾರ್ವಜನಿಕರಿಗೆ ಅಷ್ಟೊಂದು ಆಸಕ್ತಿ ಕಾರಣವೂ ಇತ್ತು. ಇನ್ನು ಅಂಥಾ ಅವಸರಂಬಿಕೆಗೆ ಎಡೆಯಿಲ್ಲ. ಪ್ರತಿಯೊಬ್ಬನೂ ಚಿಕ್ಕ ಉಳಿತಾಯದ ಸಂಸ್ಥೆಗೆ ಸೇರಿ ಪಾಧ್ಯವಾದಷ್ಟು ಹಣ ಉಳಿಸಿರಿ. ಇದರಿಂದ ಉಳಿಸಿದವರ ಮತ್ತು ನಮ್ಮ ಜನತಾಂಗದ ಅಭಿವೃದ್ಧಿಗೂ, ನಮ್ಮ ಮಾತೃಭೂಮಿಯ ಪುನರ್ರಚನೆಗೂ ಸಹಾಯವಾಗುವುದು."

ಇಂದಿನಿಂದಲೇ ಪ್ರಯತ್ನಿಸಿರಿ. ಉಳಿತಾಯದ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

**ಕೊಡಗು ಸರಕಾರದ ಪ್ರಕಟಣೆ.**

# "ಸರ್ವೋದಯ ಸಮಾಜ"

ನೊನ್ನೆ ಮೊನ್ನೆ, ಭಾರತೀಯರು ಪವಿತ್ರ ಸ್ಥಾನವೆಂದು ಗೌರವಿಸುತ್ತಿರುವ, ವರ್ಧಾದಲ್ಲಿ ವಿಧಾಯಕ ಕಾರ್ಯಕರ್ತರ ಸಭೆಯೊಂದು ಸೇರಿ ಅಪೂರ್ವ ಗೊತ್ತುವಳಿಯೊಂದನ್ನು ಸ್ವೀಕರಿಸಲಾಗಿದೆ. ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ಅವಲಂಬಿಸಿದ, ಜಾತೀಯತೆಯ ಸೋಂಕಿಲ್ಲದ, ಆರ್ಥಿಕ ಶೋಷಣೆಗೆ ಆಸ್ಪದ ಕೊಡದಿರುವಂತಹ, ವೈಯುಕ್ತಿಕ ಮತ್ತು ಸಾಮುದಾಯಿಕ ಸರ್ವತೋಮುಖ ಪ್ರಗತಿಗೆ ಅನುಕೂಲವುಳ್ಳ ಸಮಾಜ ರಚನೆಯೇ ಭಾವೀ ಸರ್ವೋದಯ ಸಮಾಜ ಧ್ಯೇಯವೆಂದು ಆ ಗೊತ್ತುವಳಿಯಲ್ಲಿ ಹೇಳಲಾಗಿದೆ. ಈ ಸಮಾಜದ ಧ್ಯೇಯವನ್ನು ಇಪ್ಪತ್ತೈದು ವಿಧವಾಗಿ ಸಾಧಿಸ ಬಹುದೆಂದೂ, ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಖಾದಿ, ಗ್ರಾಮೋದ್ಯೋಗ, ನಯೀತಾಲೀಮು, ಸಮಾಜದಲ್ಲಿ ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನಾಧಿಕಾರ, ದೇಶೀಭಾಷಾ ಪ್ರಚಾರ, ಸಂಕುಚಿತ ಪ್ರಾಂತೀಯ ಭಾವನೆಯ ಉಚ್ಚಾಟನೆ, ಹಿಂದೂಸ್ತಾನೀ ಪ್ರಚಾರ, ಆರ್ಥಿಕ ಸಮತೆ, ಕೂಲಿಕಾರ ಸಂಘಟನೆ, ಹಿಂದುಳಿದ ವರ್ಗದವರ ಸೇವೆ, ವಿದ್ಯಾರ್ಥಿಗಳ ಸಂಘಟನೆ, ಕುಷ್ಠರೋಗ ನಿವಾರಣೆ, ಗೋ ಸಂರಕ್ಷಣೆ, ಮುಂತಾಗಿ ಈ ಗೊತ್ತುವಳಿಯಲ್ಲಿ ನಿರ್ದೇಶಿಸಲ್ಪಟ್ಟ ಯಾವ ಕಾರ್ಯವನ್ನು ವಹಿಸಲಿಚ್ಛಿಸುವವರೂ, ಈ ಸಮಾಜದ ಸದಸ್ಯರಾಗಬಹುದು. ಇಪ್ಪತ್ತೈದು ಪರಸ್ಪರ ಸಂಬಂಧವನ್ನು ಸಮನ್ವಿಸಿಕೊಳಿಸುವುದಕ್ಕಾಗಿ, ಪ್ರತಿ ವರ್ಷವೂ ಜನವರಿ ೩೦ನೆಯ ದಿನಾಂಕದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಈ ಸಮಾಜದ ಸಮ್ಮೇಳನವನ್ನು ಕೂಡುವುದು. ಸಮಾಜವು ಸಲಹೆಗಳನ್ನು ನೀಡುವ ಕೆಲಸವನ್ನು ಮಾತ್ರ ಮಾಡಬಲ್ಲದು. ಈ ಸಮಾಜವನ್ನು ಸಂಘಟಿಸುವ ಬಗ್ಗೆ ಒಂದು ಸಭೆಯನ್ನು ಕರೆಯಲು ಆಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ. ಮತ್ತು ಶ್ರೀ ಕಿಶೋರಿಲಾಲ ಮಶ್ರುವಾಲಾ ಅವರಿಗೆ ಅಧಿಕಾರ. ಕೊಡಲಾಗಿದೆ

ಹಿಂದೆ ಕಾಪಾಲಿ, ವೈದಿಕ, ಸನಾತನ ಮೊದಲಾದ ಮತ ಧರ್ಮಗಳು ಕೇವಲ ಅಂಧಶ್ರದ್ಧೆಯಿಂದ, ಹಿಂಸಾಚಾರ ನಡೆಸುವುದು, ವಿಚಾರಕ್ಕೆ ಆಸ್ಪದವಿರದ ಆಣತಿಗಳನ್ನು ಹೇರುವುದು ಮೊದಲಾದ ಕಾರ್ಯಗಳು ಶಿಖರದಲ್ಲಿ ನೆರೆಯುತ್ತಿದ್ದಾಗ, ಭಗವಾನ್ ಬುದ್ಧನು ಅಹಿಂಸಾಮಯವಾದ, ಮತ್ತು ವಿಚಾರ ಸ್ವಾತಂತ್ರ್ಯವುಳ್ಳ ಒಂದು ಹೊಸ ಸಮಾಜನನ್ನು ಕಟ್ಟಲು ಪ್ರಯತ್ನಿಸಿ ಬೌದ್ಧ ಧರ್ಮವೆಂಬ ಹೊಸ ಧರ್ಮವನ್ನೇ ಸ್ಥಾಪಿಸಿದ್ದು, ಈ ಪ್ರಸಂಗದಲ್ಲಿ ನೆನಪಾಗದೆ ಇರದು. ಭಗವಾನ್ ಬುದ್ಧನಂತೆಯೇ, ಅಹಿಂಸೆ ತ್ಯಾಗ ಸತ್ಯಗಳ ಅಂತಿಮ ಜ್ಞಾನ ಸಾಕ್ಷಾತ್ಕಾರಕ್ಕಾಗಿ, ಅಮರಣಯತ್ನಿಸಿದ ಪರಮ ಪೂಜ್ಯ ಬಾಪೂಜಿಯವರ ಸಮಿಪವರ್ತಿ ಅನುಯಾಯಿಗಳು ಅವರ ಮರಣಾನಂತರವಾದರೂ ಈಗ ಈ ಬಗೆಯಿಂದ ಕಾರ್ಯ ಪ್ರವೃತ್ತರಾದದ್ದು ನಿಜವಾಗಿಯೂ ಅಭಿನಂದನೀಯವಾಗಿದೆ.

ಈ ಸರ್ವೋದಯ ಸಮಾಜದ ಧ್ಯೇಯ ಘೋರಣೆಗಳೇನೋ, ಅತ್ಯಂತ ಉಚ್ಚವಾದವುಗಳೂ, ಮಾನವೀಯ ಜೀವನವನ್ನು ಆತ್ಯಂತಿಕ ಸುಖದ ಮಟ್ಟಿಗೆ ಒಯ್ದು ನಿಲ್ಲಿಸುವಂಥವೂ ಆಗಿವೆಯೆಂಬ ಮಾತಿನಲ್ಲಿ ಸ್ವಲ್ಪವಾದರೂ ಭಿನ್ನಾಭಿಪ್ರಾಯ ಬರುವಂತಿಲ್ಲ ಆದರೆ ಅವುಗಳನ್ನು ಹೇಗೆ ಕಾರ್ಯಕಾರಿ ಮಾಡಬೇಕೆಂಬದೂ, ಸರ್ವಸಾಮಾನ್ಯರಿಗೂ ಆಚರಿಸಲು ಬರುವಂತೆ ಅವುಗಳನ್ನು ಹೇಗೆ ಪ್ರಸಾರ ಮಾಡಬೇಕೆಂಬುದೂ ಮುಖ್ಯ ವಿಷಯವಾಗಿದೆ. ಈ ಬಗ್ಗೆ ಈಗಾಗಲೇ ಶ್ರೀ ವಿನೋಬಾ ಭಾವೆ, ಪಂಡಿತ ಜವಾಹರಲಾಲ ನೊದಲಾದವರು ಅನೇಕ ಬಗೆಯ ಸಂಶಯಗಳನ್ನು ಎತ್ತಿದ್ದಾರೆ. ಆಚಾರ್ಯ ವಿನೋಬಾರವರು 'ಭಿನ್ನ ಭಿನ್ನ ವಿಚಾರ ಪ್ರಣಾಲಿಗಳಲ್ಲದೆ ಒಂದೇ ವಿಚಾರ ಪ್ರಣಾಲಿಯ ರಾಷ್ಟ್ರವನ್ನು ಕಲ್ಪಿಸುವುದು ಸಾಧ್ಯವೆ? ಜಾತೀಯತೆ, ಪ್ರಾಂತೀಯತೆ ಮುಂತಾದ ಅನೇಕ ರೂಪಗಳಲ್ಲಿ ಪ್ರಬಲಿತವಾಗುತ್ತಲಿರುವ ಈ ಮತಾಂಧತೆಯನ್ನು ಎಸ್ಟರ ಮಟ್ಟಿಗೆ ನಿರ್ಮೂಲನಗೊಳಿಸಬಹುದು? ಎನ್ನೋ ಭಿನ್ನಾಭಿಪ್ರಾಯಗಳಿದ್ದರೂ ಉಚ್ಚ ಧ್ಯೇಯ ಸಾಧನೆಗಾಗಿ, ಅಹಿಂಸಾ ಮಾರ್ಗವನ್ನವಲಂಬಿಸ ಬೇಕಲ್ಲದೆ ಬೇರೆ ಸಾಧನೆಗಳನ್ನು ಉಪಯೋಗಿಸಬಾರದೆಂಬ ಬಗೆಯದೂ ಒನ್ಮತವಾಗುವುದು ಸಾಧ್ಯವೆ? ಎಂಬ ಪ್ರಶ್ನೆಗಳನ್ನು ನನ್ನ ತಲೆಯನ್ನು ತಿನ್ನತೊಡಗಿದೆ. ಮಹಾತ್ಮರು ಹೇಳಿದ ವಿಷಯ ಪದ್ಧತಿಯ ಬಗ್ಗೆಯೂ ನನಗೆ ಸಂಶಯ ನಿವಾರಣೆಯಾಗಿಲ್ಲ. ಈ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ವಿಚಾರಿಸಿ ನಿರ್ಣಯಕ್ಕೆ ಬರುವುದು ಒಳಿತು' ಎಂದು ಹೇಳಿದ್ದಾರೆ. ಬಳಿಕ ಪಂಡಿತ ಜವಾಹರಲಾಲರಾದರೂ, ಇದೇ ರೀತಿಯಾಗಿ 'ವೈನೋ ಬಾಜೀಯವರ ಪ್ರಶ್ನೆಗಳಲ್ಲಿ ತಥ್ಯವಿದೆ. ಈಗ ಕೆಲ ತಿಂಗಳುಗಳಿಂದ ನಡೆದ ಅತ್ಯಾಚಾರಗಳಲ್ಲಿ ಜನರ ಮನಸ್ಸಾದರೂ ಎತ್ತು ತೊಡಗಿತು? ಅಹಿಂಸೆಯಿಂದ ರಾಷ್ಟ್ರವನ್ನು ರಕ್ಷಿಸುವುದೆಂತು? ನಾವು ಯುದ್ಧವನ್ನು ವಿರೋಧಿಸುತ್ತಿದ್ದರೂ ಸಹ ಮಂತ್ರಿಯೊಬ್ಬ ಮೂಲಕ ಯುದ್ಧ ಸಿದ್ಧತೆಯು ಬಗ್ಗೆ ಮಾತನಾಡಲೇ ಬೇಕಾಗುತ್ತದೆ. ಕೆಟ್ಟ ಸಾಧನಗಳನ್ನು ಉಪಯೋಗಿಸಿದಲ್ಲಿ ಅನಿಷ್ಟ ಪರಿಣಾಮಗಳು ಕಟ್ಟಿಟ್ಟಂತೆಯೇ ಸರಿ. ತನ್ನ ಅವಶ್ಯಕತೆಗಿಂತ ಹೆಚ್ಚಿನದನ್ನು ಯಾರೂ ಸಂಗ್ರಹಿಸಬಾರದೆಂಬದನ್ನೂ ನಾನು ಒಪ್ಪುತ್ತೇನೆ. ಆದರೆ ಅದನ್ನು ನಿರ್ಣಯಿಸುವವರಾರು?' ಕೇಳಿದ್ದಾರೆ

ಈ ಮೂರು ಮತ್ತು ವಿಚಾರ ಪ್ರಣಾಲಿಯಲ್ಲಿ ವ್ಯಾವಹಾರಿಕ ಸತ್ಯತೆ ತುಂಬಿ ತುಳುಕುತ್ತಲಿದೆ. ಸತ್ಯ, ಅಹಿಂಸೆ, ತಾನು ಸರಿಯಾಗಿ ಬಾಳುವುದಲ್ಲದೆ ಉಳಿದವರನ್ನೂ ಸರಿಯಾಗಿ ಬಾಳಗೊಡಬೇಕು. ಮೊದಲಾದ ತತ್ವಗಳು ಬಹಳ ಒಳ್ಳೆಯವು. ಮತ್ತು ಬಹಳ ಸರಳವಾಗಿ ಕಾಣುವಂತವು. ಆದರೆ ಆಚರಿಸಲಿಕ್ಕೆ ಅಷ್ಟೇ ಕಠಿಣತಮವಾಗಿ ತೋರುವುವು. ಈ ಸತ್ಯಾಚರಣೆಯ ಬಗ್ಗೆ ಅಜ್ಜಯ ಕಾಲದ ಕತೆಯೊಂದು ಬಹಳ ಮಾರ್ಮಿಕವಾಗಿದೆ. ಆ ಕತೆ ಹೀಗಿದೆ- ಸತ್ಯಾಚರಣೆಯಲ್ಲದೆ ಇನ್ನೇನನ್ನೂ ಉಜ್ಜರಿಸೆನೆಂದು ವ್ರತ ಹಿಡಿದಿದ್ದ ಒಬ್ಬ ಮಹಾನ್ ಭಾವನಿದ್ದ. ಒಂದು ದಿನ ರಾತ್ರಿ ಕೆಲವು ಕೊಲೆಗಡಕರು ಅವನ ನೆರೆ ಮನೆಯನ್ನು ಹೊಕ್ಕು ಇದ್ದ ಬಿದ್ದದ್ದನ್ನೆಲ್ಲ ದೋಚಿಕೊಂಡು ಆ ಮನೆಯೊಡೆಯನನ್ನು ಕೊಲೆ ಮಾಡಬೇಕೆಂದು ಬೆನ್ನಟ್ಟಿದರು. ಆ ಮನೆಯೊಡೆಯನು ಪ್ರಾಣಉಳಿಸಿಕ್ಕಾಳ್ಳಲು ಧಾವಿಸಿ ಓಡಿ ಬಂದು ಈ ಮಹಾನುಭಾವನ ಮನೆ ಹೊಕ್ಕನು. ಕೊಲೆಗಡಕರು ಅವನನ್ನು ಕಾಣದೆ ಈ ಮಹಾನುಭಾವನನ್ನು 'ಇತ್ತ ಕಡೆಯೂ ಬಂದಿದ್ದರೇ?' ಎಂದು ವಿಚಾರಿಸಿದರು. ಆಗ ಅವನು ಏನು ಹೇಳಬೇಕು? ಸತ್ಯವನ್ನು ಹೇಳಿದರೆ ನೆರೆ ಮನೆಯವನ ಹತ್ಯೆಗೆ ಕಾರಣ. ಸುಳ್ಳಾಡಲೂ ಉಸುರುವಂತಿಲ್ಲ. ಈ ಪರಿಸ್ಥಿತಿಯಲ್ಲಿ ಅವನು ಯಾವ ಮಾರ್ಗವನ್ನು ಅನುಸರಿಸಬೇಕು?

ಇದರಂತೆಯೇ ಅಹಿಂಸೆಯ ಬಗೆಯೂ ಇದೇ ಮಾತು ಉದ್ಭವಿಸಬಹುದು. ಈ ಎಲ್ಲ ತತ್ವಜ್ಞಾನಿಗಳು, ಸ್ವೋದ್ಧಾರ, ಸ್ವಜನೋದ್ಧಾರ, ಸ್ವದೇಶೋದ್ಧಾರ ಮೊದಲಾದ ಕಾರ್ಯಗಳಲ್ಲಿ ಕೂಡ ಅಂತಃ ಉಪಯೋಗ ಬೀಳಬಹುದಲ್ಲವೆ ಈ ಮಸ್ಟ್ ಮತ್ತು ಅಸ್ಯಾಮಾಣಿಕ ಸ್ಪರ್ಧೆಗೆ ಜಗತ್ತಿನಲ್ಲಿ ಪರಾಜ್ಯವಣ್ಣ, ಪರರಿಂದ ಒಮಗವ ಪೀಡೆ, ಪರರ ಸೀಚುವ್ಯತ್ತಿಯಿಂದ ಆಗುವ ಹಾನಿ ಮೊದಲಾದುವುಗಳಿಂದ ಸಂರಕ್ಷಣ ಮಾಡಿಕೊಳ್ಳಲು ಅಸಾಧ್ಯವೆಂತಲೇ ಹೇಳಬಹುದು. ಪ್ರತ್ಯಕ್ಷ ಸತ್ಯ ಹಾಗೂ ಅಹಿಂಸೆಗಳ ಮೂರ್ತಿಯೇ ಆಗಿದ್ದ ಪೂಜ್ಯ ಬಾಪೂಜಿಯವರೂ, ಸ್ವದೇಶೀಯ ನೊಬ್ಬನ ಗುಂಡಿಗೆ ಬಲಿಯಾಗಿ ಪ್ರಾಣ ಕಳೆದುಕೊಳ್ಳಬೇಕಾಯಿತು.

ಮೌಲಾನಾ ಆಜಾದರು ಹೇಳಿದಂತೆ, ಮಹಾತ್ಮರು ತೋರಿಸಿದ ಸ್ವರ್ಗವೊಂದೇ ಹಿಂದಿಯರಿಗೆ ಹಿಡಿದ ಜಾಡ್ಯನನ್ನು ಬಿಡಿಸಲು ಉಪಾಯವೆಂದಂತೆ ಸತ್ಯ ಅಹಿಂಸೆಗಳಿಂದ ಸರ್ವತೋಮುಖ ಪ್ರಗತಿಯನ್ನು ಪ್ರತಿಯೊಬ್ಬನೂ ಸಾಧಿಸಬರುವ 'ಸರ್ವೋದಯ ಸಮಾಜ' ನಿಜವಾಗಿಯೂ ಸರ್ವರ ಉದಯವಾದ ಸಮಾಜವಾಗಿ ಜಗತ್ತಿಗೇ ಆದರ್ಶವಾಗುವಂತೆ ಭವ್ಯ ನಾಡಿನ ಧುರೀಣರಿಲ್ಲಗೂ, ಇಟ್ಟ ಈ ಹೆಜ್ಜೆ ಅಪೂರ್ವವೂ ಅದ್ಭುತವೂ ಆದ ಪ್ರಗತಿಯನ್ನು ಸಾಧಿಸುವೆದೆಂಬದರಲ್ಲಿ ಸಂದೇಹವಿರದು.

'ಜೈಹಿಂದ್'


ವಿನು ನೂಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ ನಂ. 1, ಉಡುಪಿ.

(ಟೆಲಿಫೋನ್ ನಂ 3498)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಪಣ್ಡುನೆ, ಮತ್ತು ಬೊಂಬಾಯಿ.

**ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ರೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟಾರರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M L C. ಪ್ರೆಸಿಡೆಂಟ್ ಮತ್ತು ಖಜಾಂಚಿ.

**ಎಂಪೈರ್ ಆಫ್ ಇಂಡಿಯಾ**

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಾರಸ್ಯ ಸಂಗತಿಗಳು.

ಒಟ್ಟು ಆದಾಯ .... 1,07,09,000 ರೂಪಾಯಿ
ಚಾಲ್ತಿಯಿರುವ ವಿಮೆ .... 17,74,52,000 ,,
ಆಸ್ತಿ .... 6,67,60,000 ,,
ಕಂಪೆನಿಯ ಅದಿಯಲ್ಲಿ ಕೊಟ್ಟ ಕ್ಲೈಮುಗಳು .... 8,83,62,000 ,,

ಆಂಗ ಕಛೇರಿ: ಪರ್ಸನಲ್ ಬೋರ್ಡ್ ಬಿಲ್ಡಿಂಗ್, ಶೇಷಾದ್ರಿ ರೋಡ್ಸ್, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೆ.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೬ | ತಾರೀಖು ೧೬-೪-೧೯೪೬ನೇ ಶುಕ್ರವಾರ | ಸಂಚಿಕೆ ೪೫

## ಕರ್ನಾಟಕ ಪ್ರಾಂತ ರಚನೆ.

### ಲೇಃ—"ಕನ್ನಡಿಗ" ಕೊಡಗು.

ಲೇಖನಾಂಕ ೧

ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ೧೯೨೮ರಲ್ಲಿ ನೆಹರು ಸಮಿತಿಯು ಒಪ್ಪಿಕ್ಕು ಅಂದಿನಿಂದ ಭಾಷಾವಾರು ಪ್ರಾಂತ ರಚನೆಯ ತತ್ವವು ಪ್ರಜೋದನೆಗೊಂಡಿದೆ. ವಿವಿಧ ಭಾಷೆಯ ಜನರಲ್ಲಿ ತಮ್ಮದೇ ಪ್ರತ್ಯೇಕ ಪ್ರಾಂತಗಳ ಹಂಬಲವೇರಿ ಬಾಷಾವಾರು ಪ್ರಾಂತರಚನೆಯ ಕಾರ್ಯಕ್ಕೆ ನೆಹರೂಜಿಯವರ ದೊರೆತನದ ಕಾಂಗ್ರೆಸ್ ಸರ್ಕಾರವು ಕೈಹಾಕಿತು. ಇದರಂತೆ ಕರ್ನಾಟಕ ಪ್ರಾಂತ ರಚನೆಯು ಕೆಲವು ಕಳೆದ ೨೦ ವರ್ಷಗಳಿಂದ ಕೇಳಿ ಬರತೊಡಗಿದೆ. ಭಾಷಾವಾರು ಪ್ರಾಂತ ರಚನಾ ಕಾರ್ಯದಲ್ಲಿ ಕರ್ನಾಟಕ ಪ್ರಾಂತ ರಚನೆಯು ಸ್ವಲ್ಪ ಜಟಿಲವಾದ ಸಮಸ್ಯೆ ಬೇರೆ ಪ್ರಾಂತಗಳಲ್ಲಿಲ್ಲ. ಈಗ ರಚನೆಯಾಗಬೇಕೆಂದು ಪ್ರಯತ್ನಿಸುತ್ತಿರುವ ಕರ್ನಾಟಕವು ಹಿಂದೊಮ್ಮೆ ವಿವಿಧ ಆಡಳಿತಗಳಲ್ಲಿ ಹಂಚಿ ಹೋಗಿದೆ. ಬೊಂಬಾಯಿ ಪ್ರಾಂತದ ಒಡಳಿತದಲ್ಲಿ ಬೆಳಗಾಂ, ಬಿಜಾಪುರ, ಧಾರವಾಡ, ಉತ್ತರ ಕರ್ನಾಟಕಗಳು, ಮದ್ರಾಸ್ ಪ್ರಾಂತದಲ್ಲಿ ಬಳ್ಳಾರಿ, ದ ಕನ್ನಡ, ಜನಂತಪುರ ಸೇಲಂ, ಕೊಯಮುತ್ತೂರು ಮೊದಲಾದವು, ಸ್ವತಂತ್ರ ಒಡಳಿತದಲ್ಲಿ ಕೊಡಗು, ಮೈಸೂರು, ರಾಮದುರ್ಗ ಮೊದಲಾದ ಸಂಸ್ಥಾನಗಳು, ಹೈದರಾಬಾದಿನಲ್ಲಿ ಗುಲ್ಬರ್ಗಾ, ರಾಯಚೂರ್ ಮೊದಲಾದುವು ಸೇರಿ ಹೋಗಿವೆ. ಇವುಗಳೆಲ್ಲವನ್ನೂ ಒಂದೇ ಆಡಳಿತದಲ್ಲಿ ವಿಕೇಂದ್ರೀಕರಿಸಿ ಕರ್ನಾಟಕ ಪ್ರಾಂತರಚನೆಯು ಹೊಂಗನಸನ್ನು ಕಾಣಲಾಗಿದೆ. ಈ ಕನಸಿನಂತೆ ರಾಜ್ಯ ರಚನೆ ಯಾದರೆ ಈ ಏಕೀಕೃತ ಕರ್ನಾಟಕವು ೧೪೫ ಮೈಲುಗಳ ಉದ್ದ ೩೫೦ ಮೈಲುಗಳ ಅಗಲದ ಸುಮಾರು ೬೮,೫೦೦ ಚದರ ಮೈಲು ವಿಸ್ತೀರ್ಣದ ದೇಶವಾಗಿ ಒಂದು ಕೋಟಿ ತೊಂಬತ್ತು ಲಕ್ಷ ಜನ ಬಲ ಹೊಂದ್ದಾಗಿ ೨೦ ಕೋಟಿ ವಾರ್ಷಿಕ ಪರಮಾನ ಉಳ್ಳದ್ದಾಗುವದು. ಆದರೆ ಹತ್ತೊಂಬತ್ತು ಆಡಳಿತಗಳಗೊಳಗಾದ ಈ ಭಾಗಗಳು ಒಂದು ಗೂಡುವ ಸಾಧ್ಯತೆ ಇದೆಯೋ ಎಂಬುದನ್ನು ಪರಿಶೀಲಿಸಬೇಕು. ಕಳೆದ ತಾ. ೧೫ರಲ್ಲಿ ಧಾರವಾಡದಲ್ಲಿ ಸೇರಿದ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯು ಕರ್ನಾಟಕ ಪ್ರಾಂತದ ಗಡಿ ನಿರ್ಣಯ ಮಾಡಲು ಒಂದು ಸಮಿತಿಯನ್ನು ನೇಮಿಸಿದೆ. ಇದರಿಂದ ಕಾರ್ಯ ಸಫಲವಾಯಿತೆ ಎಂಬುದನ್ನು ವಿಮರ್ಶಿಸ ಬೇಕಿದೆ. ದಾವಣಗೆರೆಯ ಶ್ರೀ ಹನುಮಂತರಾಯರು "ಕರ್ನಾಟಕಕ್ಕೆ ಮೈಸೂರನ್ನು ಸೇರಿಸಿದ್ದೇಕೆ?" ಎಂಬ ತಮ್ಮ ಪ್ರಶ್ನೆಯಲ್ಲಿ ಈ ವಿಚಾರವನ್ನು ಬರೆಯುತ್ತಾ, "ಪ್ರಾಂತರಚನಾ ಕಾರ್ಯದ ಉದ್ದೇಶವು ಭಾಷಾವಾರು ಅನುಕೂಲತೆಗಳಿಂದ ಆಡಳಿತ ಸೌಕರ್ಯವನ್ನು ಹೆಚ್ಚಿಸುವುದಾಗಿದೆ. ಆದರೆ ಭಾಷಾವಾರು ತತ್ವಕ್ಕೆ ಪ್ರಾಂತ ರಚನೆಯನ್ನು ಈಗ ಕೈಗೊಂಡರೆ ಭಾರತ ಖಂಡಕ್ಕೆ ಮಹಾ ಗಂಡಾಂತರವಿದೆ ಎಂಬುದರಲ್ಲಿ ಸಂಶಯವಿಲ್ಲ. ಈಗ ನೆಲೆಯಾಗಿರುವ ಕೆಲವು ರಿಗಳನ್ನು ನೋಡಿದರೂ ಇದು ಸ್ಪಷ್ಟವಾಗುತ್ತಿದೆ. ಹಿಂದೂಸ್ಥಾನದವರನ್ನು ಭಾಷೆಯಾಗಿ ಹಿಂದೂಸ್ಥಾನಿಯು ಒಪ್ಪಲ್ಪಟ್ಟಿದ್ದರೂ ತಮಿಳರಿಗೆ ಇದು ಬೇಕಿಲ್ಲ. ಕನ್ನಡಿಗರೂ ಇದರ ಬಗ್ಗೆ ಹೆಚ್ಚು ಆಸಕ್ತಿಯ ವಿಷಯ ತೋರಿಸಿಲ್ಲ. ಪ್ರಾಂತೀಯ ಸಂಕುಚಿತ ಭಾವನೆಯು ಹಿಂದೂದೇಶವನ್ನು ಹಿಂದುಗಿ ಬಾರದಲ್ಲಿ ಬೆಳ್ಳಿದ ಇದೇ ಭಾವನೆಯು ಪ್ರಾಂತ ರಚನೆಯೊಡನೆ ಪರಸ್ಪರ ಪ್ರಾಂತಗಳಲ್ಲಿ ಬಾಂಧವ್ಯ ಉಳಿಯುವ ಭರವಸೆ ಎಲ್ಲಿ? ಪ್ರಾಂತೀಯ ಭಾವನೆಯು ಇನ್ನೆಷ್ಟು ಜೆಟ್ಟಿಗಿ ಹಿಂದೂದೇಶವು ಹಲವಾರು ದೇಶಗಳಾಗಿ ವಿಂಗಡಿಸಲ್ಪಟ್ಟ ನಿರ್ಜೀವವಾಗುವುದಲ್ಲವೇ?

ಯಾವ ತತ್ವದ ಮೇರೆ ಪ್ರಾಂತಗಳನ್ನು ವಿಂಗಡಿಸಲು ಸಾಧ್ಯ? ಕೇವಲ ಭಾಷೆಯ ದೃಷ್ಟಿಯಿಂದ ಮಾಡುವದೇ? ಚಾರಿತ್ರಿಕ ದೃಷ್ಟಿಯಿಂದಲೇ? ಆಡಳಿತದ ಅನುಕೂಲತೆಯ ದೃಷ್ಟಿಯಿಂದಲೇ? ಭಾಷೆಯ ದೃಷ್ಟಿಯಿಂದ ಎನ್ನುವದಾದರೆ ಭೌಗೋಳಿಕ ರೂಪರೇಷೆಯಂತೆ ಸಂಬಂಧಿಸಿದ ದೂರವಿರುವ ಭಾಗಗಳನ್ನು ಹೇಗೆ ಒಂದೇ ಆಡಳಿತದಲ್ಲಿ ತರಲು ಸಾಧ್ಯ? ಸುತ್ತಲೂ ತಮಿಳು ಮಾತಾಡುವ ಮಧ್ಯೆ ತೆಲುಗು ಮಾತಾಡುವವರ ಬಹು ಮತವಿರುವ ಜಿಲ್ಲೆಗಳನ್ನು ಎಲ್ಲಿಗೆ ಸೇರಿಸ ಲಾಗುವದು? ಸುತ್ತಲೂ ಕನ್ನಡವಿದ್ದು ಮಧ್ಯೆ ಮರಾಠಿ ಮಾತಾಡುವ ಜನರೇ ಇರುವ ಭಾಗವನ್ನು ಯಾವ ಭಾಗಕ್ಕೆ ನೇರಿಸುವದು? ಹಿಂದೊಮ್ಮೆ ಆಂಧ್ರರದ್ದಾಗಿದ್ದು ಇಂದು ತಮಿಳು ಬಹುಮತವಿರುವ ಮದ್ರಾಸಿನಂಥಾ ಪಟ್ಟಣಗಳನ್ನು ಎಲ್ಲಿಗೆ ಸೇರಿಸುವದು? ಈ ಪ್ರಶ್ನೆಗಳ ತೀರ್ಮಾನವು ಶಾಂತ ರೀತಿಯಿಂದ ಹೇಗೆ ಆಗಲು ಸಾಧ್ಯ? ಒಂದು ಜಿಲ್ಲೆಯ ನಾಲ್ಕು ಗ್ರಾಮಗಳಲ್ಲಿ ಎಲ್ಲರೂ ಕನ್ನಡಿಗರಿರಬಹುದು. ಉಳಿದ ಹತ್ತು ಗ್ರಾಮಗಳಲ್ಲಿ ಆಂಧ್ರರು ಇರಬಹುದು. ಸಮಗ್ರ ಜಿಲ್ಲೆಯ ದೃಷ್ಟಿಯಿಂದ ಕನ್ನಡಿಗರು ಅಲ್ಪ ಸಂಖ್ಯಾಕರು. ಹೀಗಾದರೆ ಈ ಕನ್ನಡ ಮಾತಾಡುವ ಗ್ರಾಮಗಳು ಆಂಧ್ರ ಪ್ರಾಂತದಲ್ಲೇ ಉಳಿಯಬೇಕೆ? ಕನ್ನಡ ಮತ್ತು ಮರಾಠಿ, ಕನ್ನಡ ಮತ್ತು ತೆಲುಗು ಈ ರೀತಿ ಭಾಷೆಗಳ ಸಮ್ಮಿಶ್ರಣದಿಂದ ಹೊಸ ಭಾಷೆ ಉದಯವಾಗಿ ಅದನ್ನಾಡುತಿರುವವರನ್ನು ಯಾವ ಭಾಗಕ್ಕೆ ಸೇರಿಸಲಾಗುವದು? ಪಾಕಿಸ್ಥಾನ ಹಿಂದೂಸ್ಥಾನದಲ್ಲಾದಂತೆ ಕನ್ನಡ ಮಾತಾಡುವವರನ್ನು ಕರ್ನಾಟಕ, ತಮಿಳು, ತೆಲುಗು ಮತ ಮಾಡುವವರ್ಗ ತಮ್ಮ ತಮ್ಮ ಆಯಾಯ ಭಾಗಕ್ಕೂ ಕಳುಹಿಸಲಾಗುವದೇನು? ಹಾಗಾಗುವದಾದರೆ ಪಾಕಿಸ್ಥಾನದ ಕೊಡುಗೆಯಂತಾದ ವಿಪ್ರವಾಹಾಂತೆ ಇದು ಸಾರ್ವತ್ರಿಕ ದೇಶವನ್ನು ನಿರ್ನಾಮ ಮಾಡುವದೇ? ಕೃಷ್ಣದೇವರಾಯನ ಕಾಲದಲ್ಲಿ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ್ದ ಕನ್ನಡನಾಡಿನ ಭಾಗಗಳಲ್ಲಿ ಹಲವು ಆಂಧ್ರರು, ಹಲವು ತಮಿಳರ ಕೈಯಲ್ಲಿದ್ದು ತೆಲುಗು ತಮಿಳರೇ ಬಹುಮತದಿಂದ ಆಳ್ವಿಕೆಯಲ್ಲಿದ್ದಾರೆ. ಇವು ಕನ್ನಡ ಪ್ರಾಂತದ ಭಾಗಗಳಾಗುವದೇಕು?

ಈ ಪ್ರಶ್ನೆಗಳು ಯಾವ ಗಡಿ ನಿರ್ಣಯ ಸಮಿತಿಯಿಂದಲೂ ತೀರ್ಮಾನಿಯಿಂದ ಬಗೆಹರಿಯುವಲ್ಲವು. ಕೊಡಗು ತಾನು ಕನ್ನಡಿಗನೆ ಸೇರಬೆ ಈ ವರೆಗಿದ್ದಂತೆ ಪ್ರತ್ಯೇಕವಾಗಿಯೇ ಇರುವದಾಗಿ ಸ್ವರವೆತ್ತಿರುವಾಗ ಗತಿಷ್ಣುವಾಗಿ ಸಮಿತಿಯಿಂದ ಇದರ ನಿರ್ಣಯ ಮಾಡಲು ಸಾಧ್ಯವೆ? ಇದಕ್ಕಿಂತ ಮೊದಲೆ ಕೊಲಂಬಿಯಾ ಜಿಲ್ಲೆಯ ಜನರು ಪ್ರತ್ಯೇಕ ಪ್ರಾಂತಕ್ಕಾಗಿ ಬೇಡಿಕೆ ಸಲ್ಲಿಸಿದ್ದಾರೆ. ಇವೆಲ್ಲವನ್ನು ಪರಿಗಣಿಸಿ ಕರ್ನಾಟಕ ಪ್ರಾಂತ ರಚನೆಯು ಸಾಧ್ಯವಾಗುವದೇನು?

ಈಗ ಹುಟ್ಟಿಕೊಂಡಿರುವ ಅಡಚಣೆಗಳಿಗೆ ಅಲ್ಪಸ್ವಲ್ಪ ಭಾಗಗಳು ಒಂದು ಅಡಳಿತದ ಕೆಳಗೆ ಏಕವಾಗಿ ಕೂಡುವದು ಸಾಧ್ಯವೇ? ಅವಲೋಕಿಸೋಣ? ಎಂಬ ವಿಚಾರಗಳನ್ನು ಕುರಿತು ಮುಂದೆ ಲೇಖನಗಳನ್ನು ಸಂಪಾದಕರು ಸ್ಥಳ ದಯವಾಲಿಸಿದಲ್ಲಿ ಕ್ರಮವಾಗಿ ಕೊಡಲಾಗುವದು. ಬರುವ ವಾರ 'ಕರ್ನಾಟಕ ಏಕೀಕರಣಾಸ್ಪೃಹೆ—ಸೈದ್ಧಾಂತಿಕ ಸ್ಥಾನ' ಈ ವಿಚಾರ ಬರೆಯಲಾಗುವದು.

---

### ನೋಟೀಸು.

ಟ್ರಾಪಿಕಲ್ ಇನ್ಶೂರೆನ್ಸ್ ಕಂಪನಿ, ಹೊಸ ಡಿಪ್ಪೋ, ಇದರಲ್ಲಿ ಹೊನ್ನಂಪೇಟೆ ಮುದ್ದು ಭಾಷಾಂತರಿಸಿ ಮಾಲೀಕರಾದ ಶ್ರೀ. ಎಂ. ಬಿ. ಮುತ್ತಣ್ಣನವರು ಪಡೆದುಕೊಂಡ ವಿಷಯ ತಿಳಿಸಿ ನಂ ತಿಂಗಿ ಕಾಫೆಯಾಗಿದೆಯೆಂದು ಉತ್ಸಾಹಕರ ನೋಟೀಸು ಕೊಡಲಾಗಿದೆ. ಈ ಬಗ್ಗೆ ಈ ತಾರೀಖಿನಿಂದ ಒಂದು ತಿಂಗಳೊಳಗೆ ಯಾರಿಂದಲೂ ಯಾವದೇ ವಿರೋಧವು ಈ ಕೆಳಗಿನ ವಿಳಾಸಕ್ಕೆ ಬಾರದಿದ್ದಲ್ಲಿ ಈ ಪಾಲಿಸಿಯ ದ್ವಿಪ್ರತಿಯೊಂದನ್ನು ಕೊಡಲಾಗುವದು.

(ಸಹಿ) ರಂಕರಲಾಲ್,
ಮೇನೇಜಿಂಗ್ ಡೈರೆಕ್ಟರು,
ಟ್ರಾಪಿಕಲ್ ಇನ್ಶೂರೆನ್ಸ್ ಕಂಪನಿ.
ಪೊ. ಬಾ. ನಂ. ೭೧,
ಕೊಡಡೆಲ್ಲಿ.

---

ವೀರಾಜಪೇಟೆಗೆ 'ಕೊಡಗು' ವಿಜೇಟರು:
ಶ್ರೀ ಕೆ. ಎಂ. ಸುಬ್ರಾಯನವರು

# ಕೊಡಗು

ತಾ. ೧೬-೪-೧೯೪೪ನೇ ಶುಕ್ರವಾರ

## ಸಹಕಾರಿ ಪರಿಷತ್ತು.

ಅಖಿಲ ಕೊಡಗು ಹದಿಮೂರನೆ ಸಹಕಾರಿ ಪರಿಷತ್ತು ಈ ತಾರೀಕು ೨೦ರಲ್ಲಿ ವೀರಾಜಪೇಟೆಯಲ್ಲಿ ಜಯಪ್ರದವಾಗಿ ನಡೆಯಿತು. ಸಹಕಾರ ರಂಗದಲ್ಲಿ ಹಲವು ವರ್ಷಗಳ ಅನುಭವ ಪಡೆದು ಹಿಂದೂಸ್ಥಾನ ; ಸಹಕಾರಿಗಳಲ್ಲಿ ಒಬ್ಬ ಮುಖ್ಯ ತಜ್ಞರೆನಿಸಿಕೊಂಡ ಮದ್ರಾಸು ಸಹಕಾರ ಸಂಘಗಳ ರಿಜಿಸ್ಟ್ರಾರವರಾದ ಶ್ರೀ. ರಾಯನ್ನಾರವರು ಅಧ್ಯಕ್ಷತೆ ವಹಿಸಿದ್ದರು. ಇವರ ಭಾಷಣವಲ್ಲಿ-ಕೊಡಗಿನಲ್ಲಿ ಸಹಕಾರ ಚಳವಳವು ಸರ್ವತೋಮುಖವಾಗಿ ಗ್ರಾಮಗಳಲ್ಲಿ ಹಬ್ಬಿದೆ; ಇಷ್ಟಿಯು ಕೆತ್ತಳೆ ಸಹಕಾರ ಸಂಘ, ಜೇನುಮೇಣ ಸಹಕಾರ ಸಂಘ, ಸಹಕಾರಿ ಮಾರ್ಕೆಟಿಂಗ್ ಸ್ಟೋರುಗಳೇ ಮುಂತಾದವು ಭಾರತದ ಇತರ ಪ್ರದೇಶಗಳ ಸಹಕಾರ ಸಂಸ್ಥೆಗಳನ್ನು ಮೀರಿಸಿವೆ. ಇದಾದರೂ ಇಲ್ಲಿನವು ಬರೆ ಹತ್ತು ಸಹಕಾರಿ ಇನ್ಸ್‌ಪೆಕ್ಟರುಗಳ ಮತ್ತು ಇಲ್ಲಿರುವ ಉತ್ಕೃಷ್ಟವಾದ ಉನ್ನೇಗಸ್ಥರಲ್ಲದ ಇತರ ಸಹಕಾರಿಗಳ ಸಹಾಯದಿಂದ ರಿಜಿಸ್ಟ್ರಾರವರು ಮಾಡಿದ ಕಾರ್ಯವಾಗಿದೆ. ಮದ್ರಾಸಿನ ಸಹಕಾರಿ ಸಿಬ್ಬಂದಿಯೊಂದಿಗೆ ಈ ಸಂಖ್ಯೆಯನ್ನು ಹೋಲಿಸಿದರೆ ಇದು ಬಹು ಕಡಿಮೆಯಾಗಿದೆ. ಸಹಕಾರ ಚಳವಳದ ಮಟ್ಟಿಗೆ ಹೊರಗಿನವರು ಕೊಡಗಿನಿಂದ ತುಂಬಾ ಕಲಿಯಲಿಕ್ಕಿದೆ–ಎಂದು ಹೇಳಿದ ಮಾತುಗಳು ಕೊಡಗಿನ ಸಹಕಾರ ಚಳವಳದ ಕೀರ್ತಿಮನ್ನು ಹೆಚ್ಚಿಸಿವೆ ಎಂಬುದರಲ್ಲಿ ಸಂಶಯವಿಲ್ಲ. ವಿಶಾಲವಾದ ನಮ್ಮ ನೆರೆಪ್ರಾಂತವಾದ ಮದ್ರಾಸಿನ ಸಹಕಾರ ಇಲಾಖೆಯ ಮುಖ್ಯ ಉದ್ಯೋಗಸ್ಥರ ಈ ಅಭಿಪ್ರಾಯಕ್ಕೆ ನಮ್ಮ ಸರಕಾರದವರು ಹಾಗೂ ಜನತೆಯು ತುಂಬಾ ಗಮನವನ್ನೀಯಬೇಕಾಗಿದೆ. ಕೊಡಗಿನಲ್ಲಿರುವ ಕೆತ್ತಳೆ ಸಂಘ, ಜೇನುಮೇಣ ಸಂಘಗಳಂಥಾವು ಮೊದಲು ಸಂಸ್ಥೆಗಳಾಗಿವೆಯೆಂದು ಈ ಮೊದಲು ಕೊಡಗಿಗೆ ಆಗಮಿಸಿದ ಹಿಂದೂದೇಶದ ಮುಖ್ಯ ಉದ್ಯೋಗಸ್ಥರೂ, ಸಹಕಾರದಲ್ಲಿ ನಿರತ ಮುಖ್ಯಸ್ಥರೂ ಅಂದಿದ್ದರು. ಈ ಪರಿಷತ್ತಿನ ಅಧ್ಯಕ್ಷರೂ ಅಂದರು ಈ ರೀತಿಯ ಪ್ರಶಂಶೆಯ ನುಡಿಗಳಿಗೆ ಮಂದೆ ಅನ್ನಿಸಿಕೊಳ್ಳುವಂಥಾ ದೊಡ್ಡ ಜವಾಬ್ದಾರಿಯು ಇಲ್ಲಿಯ ಸಹಕಾರಿಗಳ ಮೇಲಿವೆಯೆಂಬುದನ್ನು ಅರಿಯಲು ಮರೆಯಬಾರದು.

ಸಹಕಾರ ಚಳವಳವು ಇಲ್ಲಿ ಇಷ್ಟು ಪ್ರಗತಿದಾಯಕವಾಗಿರಲು ಸಂಬಂಧಪಟ್ಟ ಉದ್ಯೋಗಸ್ಥರ ಮತ್ತು ಉದ್ಯೋಗಸ್ಥರಲ್ಲದ ಕೆಲಸಗಾರರ ಪರಸ್ಪರ ವಿಶ್ವಾಸದ ಕಾರ್ಯಕಲಾಪಗಳು ಒಂದು ಮುಖ್ಯ ಕಾರಣವಾಗಿದೆ. ದೇಶದ ರಾಜಕೀಯ ಪರಿಸ್ಥಿತಿಯು ಯಾವ ರೀತಿಯದೇ ಇದ್ದರೂ ಸಹಕಾರಿಗಳಲ್ಲಿ ಪರಸ್ಪರ ವಿಶ್ವಾಸ, ಸಮ್ಮಿಳಿತ ಕೆಲಸ ಕಾರ್ಯಗಳು ಪಡೆದು ಬಂದುದರಿಂದ ಕೊಡಗಿನಲ್ಲಿ ಸಹಕಾರವು ಇಂದಿನ ಮಟ್ಟಕ್ಕೇರಿದೆ ಎಂಬುದರಲ್ಲಿ ಸಂಶಯವಿಲ್ಲ.

ಸಹಕಾರಿ ಇಲಾಖೆಯ ಸಿಬ್ಬಂದಿಯ ಸಂಖ್ಯೆಯ ಕೊರತೆಯನ್ನು ಪರಿಷತ್ತಿನ ಉದ್ಘಾಟನೆಯನ್ನು ಮಾಡಿದ ಹೊಸ ಚೀಫ್ ಕಮಿಶನರವರು ಒಪ್ಪಿ ಆ ಕೊರತೆಯನ್ನು ಹೋಗಲಾಡಿಸಲು ತನ್ನ ಸಹಾಯವನ್ನೀಯುವೆನೆಂದು ಅಂದಿರುವರೆಂದು ಅಧ್ಯಕ್ಷರು ಸಿಬ್ಬಂದಿಯ ವಿಚಾರದ ಒಂದು ಠರಾವು ಚರ್ಚಿಸ್ಪಡುವ ಸಮಯಕ್ಕೆ ಹೇಳಿದರು. ಆದ್ದರಿಂದ ಕೊಡಗಿನ ಮುಖ್ಯಾಧಿಕಾರಿಗಳು ಈ ಕೊರತೆಯನ್ನು ಬೇಗನೆ ಹೋಗಲಾಡಿಸಿ ಸಹಕಾರಿ ಚಳವಳದ ಬೆಳವಣಿಗೆಗೆ ಸಹಾಯ ಮಾಡುವರಾಗಿ ಅಶಿಸುತ್ತೇವೆ

ಸಹಕಾರಿ ಮಾರ್ಕೆಟಿಂಗ್ ಸಂಘಗಳಿಗೂ, ದವಸ ಭಂಡಾರಗಳಿಗೂ ಬೇಕಾದ ದಾಸ್ತಾನು ಮನೆಗಳಿಗೆ ಸರಕಾರದಿಂದ ಬೇಕಷ್ಟು ಬಡ್ಡಿರಹಿತ ಉಚಿತ ಧನ ಸಹಾಯ ಕೊಡಬೇಕಾದುದು, ಪ್ರಾಂತೀಕ ಸಹಕಾರಿ ಬ್ಯಾಂಕಿನ ಮೂಲಕ ಕೈತರ ಸಾಲ ನಿವಾರಣೆ ಬಗ್ಗೆ ದೀರ್ಘ ಕಂತಿನ ಸಾಲಕೊಡುವ ವಿಷಯಾದು, ಕೆತ್ತಳೆ ರಸವನ್ನು ಶಾಸ್ತ್ರೀಯ ರೀತಿಯಲ್ಲಿ ತೆಗೆದು ಮೂರಾಟಕ್ಕೆ ಕೊಡುವ ವಿಷಯಾದುಗಳನ್ನು ಕುರಿತ ಠರಾವುಗಳು ಮುಖ್ಯವಾಗಿ ಮುಖ್ಯ ಠರಾವುಗಳಲ್ಲಿ ಕೆಲವಾಗಿವೆ. ಇವುಗಳಲ್ಲಿಪ್ಪೂ ಯಂತ್ರೋತ್ಪಾದನೆಯಲ್ಲಿ ಅಡಕವಾಗಿವೆಯೆಂದು ಅಧಿಕಾರಿಗಳು ತೃಪ್ತಿಪಟ್ಟುಕೊಳ್ಳುವುದರಲ್ಲಿ ಪ್ರಯೋಜನವಿಲ್ಲ. ಇತರ ಹಲವು ವಿಚಾರಗಳೆಂತೆ ಇವುಗಳನ್ನು ಬಲೇ ಕಾಗದದ ಯೋಜನೆಯಲ್ಲಿ ಇಡುವದರಿಂದ ಜನತೆಯು ಕೋರಿಕೆಯನ್ನು ನೆರವೇರಿಸಿದಂತಾಗುವದಿಲ್ಲ. ಇವುಗಳನ್ನು ಕೈಗಡಲೇ ಜಾರಿಗೆ ತರುವಂಥಾ ಪ್ರಯತ್ನವನ್ನು ನಡೆಸಬೇಕು. ಶೀಘ್ರದಲ್ಲಿ ಇವು ಕಾರ್ಯರೂಪಕ್ಕೆ ಬಂದದ್ದಾದರೆ ಕೇಂದ್ರ ಸರಕಾರದಿಂದಲೂ ಕೂಡ ಇವುಗಳಿಗೆ ಹೆಚ್ಚಿನ ಸಹಾಯವು ದೊರೆಯುವ ಸಂಭವವಿದೆ. ಆದ್ದರಿಂದ ಸರಕಾರದವರು ಮತ್ತು ಉದ್ಯೋಗಸ್ಥರೆಲ್ಲರೂ ಸಹಕಾರಿಗಳು ತಮ್ಮತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಯತ್ನಿಸುವರಾಗಿ ಅಶಿಸುತ್ತೇವೆ.

## ವರ್ತಮಾನ.

'ದಿ. ಕಾರ್ಗ್ ಎಂಪೀರಿಯೇಷನ್ ಆಫ್ ಕಾಮರ್ಸಿ'ನ ವಾರ್ಷಿಕ ಮಹಾಸಭೆಯು ಏಪ್ರಿಲ್ ತಾರೀಕು ೪ನೇ ಶನಿವಾರ ಬೆಳಿಗ್ಗೆ ಗಂಟೆ ೧೦ಕ್ಕೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯುವದು.

ಶ್ರೀರಾಮಕೃಷ್ಣ ಪರಮಹಂಸರವರ ೧೪೫ನೇ ಜಯಂತಿಯು ಮತ್ತು ಪೊನ್ನಂಪೇಟೆ ಧರ್ಮಪ್ರತ್ರಿಯ ಪ್ರಥಮ ವರ್ಷೋತ್ಸವವು ತಾರೀಕು ೨೪ರಲ್ಲಿ ಕೊಡಗಿನ ಚೀಫ್ ಕಮಿಸನರಾದ ದಿವಾನ್ ಬಹದೂರ್ ಸಿ. ಟಿ. ಮೊದಲಿಯರವರ ಅಧ್ಯಕ್ಷತೆಯಲ್ಲಿ ಜರಗುವದು.

ಬೇಸಿಗೆ ವಿದ್ಯಾರ್ಥರಬೇಕಿಗೆ ಕೊಡಗು ಸರಕಾರದವರು ಶ್ರೀಗಳಾದ ಪೆನ್ಮಂಡ ಮುದ್ದಪ್ಪ ಮತ್ತು ಎಸ್. ಎಸ್. ಕೃಷ್ಣ ರಾವ್ ಇವರನ್ನು ಅಲ್ಲಿಗಾಗಿ ಕಳುಹಿಸಿದ್ದಾರೆ

ಶನಿವಾರಸಂತೆ ಹೋಬಳಿಯ ಹರಿಜನರ ಸಮ್ಮೇಳನವು ತಾರೀಕು ೨೬-೪-೪೪ರಲ್ಲಿ ಶನಿವಾರಸಂತೆಯಲ್ಲಿ ಕೊಡಗು ಜಿಲ್ಲಾ ನ್ಯಾಯಾಧಿಕಾರಿ ಶ್ರೀ. ಎನ್. ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು

ರೆಡ್‌ಕ್ರಾಸ್ ಸಂಸ್ಥೆಯ ಆಶ್ರಯದಲ್ಲಿ ಶಿಶುಗಳ ಪ್ರದರ್ಶನವು ಮಡಿಕೇರಿ ಹೈಸ್ಕೂಲ್ ಆವರಣದಲ್ಲಿ ಈ ದಿನ ನಡೆಯಿತು

ಕೊತಗಿನ ಆ ಕಮಿಸನರೂ, ಜಿಲ್ಲಾ ಮೇಜಸ್ಟ್ರೇಟರೂ ಆದ ರಾ. ಬ. ಕೆ. ಟಿ. ಉತ್ತಪ್ಪನವರು ಡೆಲ್ಲಿಯಲ್ಲಿ ನಡೆಪ 'ಇಂಡಸ್ಟ್ರಿಯಲ್ ಮತ್ತು ಲೇಬರ್' ಸಮ್ಮೇಳನಕ್ಕೆ ಕಳೆದ ತಾರೀಕು ೨೭ರಲ್ಲಿ ಹೋಗಿದ್ದವರು ತಾ ೧೦೦೪ಲ್ಲಿ ಬಂದಿರುವರು.

ತಾ. ೬-೪-೪೪ರ ಬೆಳಿಗ್ಗೆ ಚೀಫ್ ಕಮಿಶನರಾದ ದಿ. ಬ ಸಿ. ಟಿ ಮೊದಲಿಯಾರವರು ಸತ್ರ ಸಚೆಲರಿ ಪರಿಷತ್ತಿನ ಅಧ್ಯಕ್ಷೆಸ್ಥಾನವನ್ನು ಬಾಡಿದ್ದ ಶ್ರೀ ರಾಯನ್ನಾರವರು ವೀರಾಜಪೇಟೆ ಮಹಿಳಾ ಸಹಕಾರ ಸಂಘದ ಕಟ್ಟಡದಲ್ಲಿ ಸಹಕಾರಿ ಇಲಾಖೆಯ ಉದ್ಯೋಗಸ್ಥರು ಮತ್ತು ಗೌರವ ಕಲಸಗಾರರಿಗೆ ಉಪಯುಕ್ತವಾದ ಸಲಹೆಗಳನ್ನು ಕೊಡಿದ ಭಾಷಣವಿತ್ತರು.

ತಾ. ೧೦ರಲ್ಲಿ ಗೋಣಿಕೊಪ್ಪಲಿನಲ್ಲಿ ನಡೆದ ದನಗಳ ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಚೀಫ್ ಕಮಿಶನರು ಬಹುಮಾನ ವಿತರಣೆ ಮಾಡಿದರು.

ಹೊಸ ಚೀಫ್ ಕಮಿಷನರು 'ಕೇಂಪ್' ಹೋದ ಕಡೆಗಳಲ್ಲೆಲ್ಲಾ ಹರಿಜನರ ಕೇರಿಗಳನ್ನು ಸಂದರ್ಶಿಸಿ ಅವರ ಹಾಲ್ ಹವಾಲುಗಳನ್ನು ವಿಚಾರಿಸಿ ತೊಳ್ಳುತ್ತಿರುವರೆಂದು ತಿಳಿಯಬರುತ್ತದೆ.

ಕಲವು ದಿನಗಳ ಹಿಂದೆ ದೇಶದ ಹಲವು ಭಾಗಗಳನ್ನು ಬಿದ್ದ ಮಳೆಯು ಸಾಲದೆ ಮುಂದಿನ ಕಾಫಿ ಫಸಲು ಆಸ್ಟೆಂದು ಉತ್ತಮವಾಗಿಲ್ಲವೆಂದು ತಿಳಿಯಬರುತ್ತದೆ. ಅಲ್ಲದೆ ಕೆತ್ತಳೆ ಫಸಲಿಗೂ ಈ ಮಳೆ ಉತ್ಸೇಜಕವಾಗಿಲ್ಲ.

### ತಿದ್ದುಪಡಿ.

ಕಳೆದ ವಾರ ಪ್ರಕಟವಾದ ಪ್ರಾಂತೀಕ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಪಟ್ಟಿಯಲ್ಲಿ ಶ್ರೀ ಹೆಚ್. ಟಿ. ಮುತ್ತಣ್ಣನವರ ಹೆಸರು ಎರಡು ಸಾರಿ ತಪ್ಪಾಗಿ ಪ್ರಿಂಟಾಗಿದೆ. ಅದರಲ್ಲಿ ಒಬ್ಬ ಡೈರೆಕ್ಟರಾದ ಶ್ರೀ ಅಜ್ಜಿಕುಟ್ಟಿರ ಪೊನ್ನಪ್ಪನವರ ಹೆಸರು ಬಿಟ್ಟು ಹೋದದ್ದಕ್ಕೆ ವ್ಯಸನಪಡುತ್ತೇವೆ. ಸಂ.]

## ಗುಪ್ತ ದಳದ ನಾಜಿ ಕಾರ್ಯಕ್ರಮ.

ಹೈದರಾಬಾದಿನ ಇತ್ತೆಹಾದುಲ್ ಮುಸ್ಲಿಂ ಸಂಸ್ಥೆಯು ತನ್ನ ಗೂಢಚಾರರನ್ನು ಮುಂಬಯಿ, ಮದ್ರಾಸ್, ಬೇರಾರ್, ಉತ್ತರ ಸರ್ಕಾರ, ಗೋವಾ ಮಿತ್ರರ ಗಡಿಸ್ಪದೇಶಗಳಿಗೆ ಕಳುಹಿಸಿದೆಯೆಂಬ ಸುದ್ದಿ ತಾ. ೧೩ರಲ್ಲಿ ತಿಳಿಯಬಂದಿದೆ. ಈ ಗೂಢಚಾರರಿಗೆ ಧನ ಸಹಾಯ ಬಹಳವಿದೆಯೆಂದೂ ಇವರಿಗೆಲ್ಲಾ ನಾಜಿತತ್ವದ ರೀತಿಯಲ್ಲಿ ಇತ್ತೆಹಾದ್ ಸಂಸ್ಥೆಯು ತೀವ್ರ ಶಿಕ್ಷಣ ಕೊಟ್ಟಿದೆಯೆಂದೂ ಗೊತ್ತಾಗಿದೆ.

ಭಾರತ ಯೂನಿಯನ್‌ನಿನ ವಿವಿಧ ಕೇಂದ್ರಗಳಿಗೆ ಹೋಗಿ ಸೇರಿ ಅಲ್ಲೆಲ್ಲಾ ಪಂಚಮವಳಗಳನ್ನು ಸ್ಥಾಪಿಸುವುದು. ಆ ಕ್ಷೇತ್ರಗಳ ಮಿಲಿಟರಿ ಬಲದ ಚಲನವಲನಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಇತ್ತೆಹಾದ್ ಸಂಸ್ಥೆಗೆ ಗುಪ್ತವಾಗಿ ವರದಿ ಕಳುಹಿಸುವುದು ಮತ್ತು ಹೈದರಾಬಾದಿನ ಪರವಾಗಿ ಪ್ರಚಾರ ಕೈಗೊಳ್ಳುವುದು

ಈ ಕಾರ್ಯಕ್ರಮವನ್ನು ನಿರ್ವಹಿಸಬೇಕೆಂದು ಇತ್ತೆಹಾದ್ ಸಂಸ್ಥೆಯು ಈ ಗೂಢಚಾರರಿಗೆ ಆಜ್ಞಾಪಿಸಿದೆಯೆಂದು ಗೊತ್ತಾಗಿದೆ. ಈ ಕಾರ್ಯಕ್ರಮ ಜಾರಿಗೆ ಸ್ಥಳೀಯವಾಗಲು ತಕ್ಕ ವ್ಯವಸ್ಥೆಮಾಡಲು ಈ ಗುಪ್ತಚಾರರಿಗೆ ಪೂರ್ಣ ಅಧಿಕಾರ ಕೊಡಲಾಗಿದೆಯೆಂದೂ, ಇವರು ಭಾರತ ಯೂನಿಯನ್ನಿನಲ್ಲಿ ಹಿಟ್ಲರ್ ಕಾಲದ 'ಸ್ಟಾರಂ ಟ್ರೂಪರ್'ಗಳು ನಡೆಸುತ್ತಿದ್ದಂತೆ ದುರ್ವರ್ತನೆಯಲ್ಲಿ ತೊಡಗಬೇಕೆಂದೂ ಇವರಿಗೆ ತಿಳಿಸಲಾಗಿದೆ.

ಈ ಗುಪ್ತಚಾರರಲ್ಲಿ ಅನೇಕರು ಭಾರತದ ವಿವಿಧ ಪ್ರಾಂತಗಳಿಂದ ಹೈದರಾಬಾದಿಗೆ ಬಂದು ಉಸ್ಮಾನಿಯಾ ವಿಶ್ವ ವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದವರೆಂದು ಗೊತ್ತಾಗಿದೆ. ಇವರೆಲ್ಲಾ ಸ್ವಸ್ಥಳಕ್ಕೆ ಹಿಂತಿರುಗಿದ ಮೇಲೆ ಅಲ್ಲಿ ಪಂಚಮ ದಳವನ್ನು ರಚಿಸಬೇಕೆಂದು ಇತ್ತೆಹಾದ್ ಆಜ್ಞಾಪಿಸಿದೆಯೆಂದು ಗೊತ್ತಾಗಿದೆ.

ಕಳೆದ ವಿಶ್ವಯುದ್ಧದ ಕಾಲದಲ್ಲಿ ಜರ್ಮನಿಯಲ್ಲಿ ನಾಜೀ ಶತ್ರದ ರೀತಿಯಲ್ಲಿ ಶಿಕ್ಷಣ ಪಡೆದ ಅನೇಕ ಮುಸ್ಲಿಮರು ಹೈದರಾಬಾದಿಗೆ ಬಂದು ಇತ್ತೇಹಾದಿನ ಈ ಒಳಸಂಚಿನ ಸೂತ್ರಧಾರಿಗಳಾಗಿದಾರೆಂದು ಗೊತ್ತಾಗಿದೆ.

## ಗಾಂಧೀಜಿಯವರ ಜೀವನ ಚರಿತ್ರೆ.

ಪಂಡಿತ ಜವಾಹರ್‌ಲಾಲ್ ನೆಹರೂರವರು ಗಾಂಧೀಜಿಯವರ ಜೀವನ ಚರಿತ್ರೆ ಬರೆಯುತ್ತಿದ್ದಾರೆಂದು ಗೊತ್ತಾಗಿದೆ.

# ಹೈದರಾಬಾದಿನ ನೈಜಾಮರು.

ಜಗತ್ತಿನ ಸರ್ವ ಪ್ರಥಮ ಶ್ರೀಮಂತ ಹೈದರಾಬಾದ್ ನಿಝಾಮರಾಗಿರುವ ಉಸ್ಮಾನರವರು, ಇಂಗ್ಲೆಂಡ್ ಮತ್ತು ಸ್ಯಾಟ್ಲೆಂಡ್ ಕೂಡಿದಷ್ಟು ವಿಸ್ತಾರವಾದ ಸಂಸ್ಥಾನವನ್ನು ಆಳುತ್ತಿರುವ ಸಿರಂಕುಶ ಪ್ರಭುವಾಗಿರುತ್ತಾರೆ. ಅವರ ಸ್ವಂತ ವೆಚ್ಚಗಳಿಗಾಗಿ ವಾರಕ್ಕೆ ಬರೇ ರೂ. ೬೦ ಖರ್ಚ ಮಾಡುತ್ತಾರೆ.

ಇಂಡಿಯದ ಸಂಸ್ಥಾನಗಳಲ್ಲಿ ಹೈದರಾಬಾದು ಅತೀ ದೊಡ್ಡದು. ಅದರ ಪ್ರಭುವಿಗೆ ೧೭,೦೦೦,೦೦೦ ಪ್ರಜೆಗಳ ಜೀವನ ಮರಣಗಳ ಮೇಲಿನ ಪೂರ್ಣಾಧಿಕಾರವಿದೆ. ಅವರ ಸ್ವಂತ ಕಛೇರ್ಸ್ ಇದೆ. ಬ್ರಿಟಿಷ್ ಇಂಡಿಯದಿಂದ ಆಮದಾಗುವ ವಸ್ತುಗಳ ಮೇಲೆ, ವಸ್ತುವಿನ ಮೌಲ್ಯದ ಸೇಕಡಾ ಹನ್ನೆರಡು ಸುಂಕಹಾಕುತಿದ್ದಾರೆ. ತಮ್ಮ ಸೈನ್ಯವನ್ನಿಟ್ಟುಕೊಂಡಿದ್ದಾರೆ. ಅಂಚೆ ಚೀಟಿ, ಕಚ್ಚುಹಾಕುತ್ತಿದ್ದಾರೆ. ರೈಲು ನಡಿಸುತ್ತಿದ್ದಾರೆ. ಅವರ ನೋಟುಗಳೂ ಇವೆ.

ವಜ್ರ ಕೆತ್ತಿದ ಮುಂಡಾಸು, ಜರತಾರಿಯ ನವರತ್ನಗಳಿಂದ ಝಗಝಗಿಸುವ ಸಿಲುವಂಗಿ, ಮುತ್ತಿನ ಗುಂಡಿಗಳ—ಇದರಿಂದಲೂ ಕೃಪಣನಾಗಿರುವವನನ್ನು ಚಿತ್ರಿಸಿ ಕೊಳ್ಳಬೇಡಿ. ಅವರು ಬಹಳ ಲಜ್ಜಾಸ್ವಭಾವದವರು; ಜಿಗರ ಹಳಬ. ಮನೆಯಲ್ಲಿ ಹೊಲಿದ ಜಂಗಿ ಹಾಕಿಕೊಳ್ಳುತಿದ್ದಾರೆ; ಹಳೇ ಪಾದರಕ್ಷೆಗಳಲ್ಲೆ ಇದ್ದಾರೆ. ಇಂಡಿಯದ ಪೌಂಡಿಯು ಎಂದೋ ತೆಗೆದು ಬೆಸುಡಬೇಕಿದ್ದಂತಹ ಹಳೆ ಮುಂಡಾಸನ್ನಿಟ್ಟುಕೊಂಡಿರುತ್ತಾರೆ. ಇಂಡಿಯದ ಅತಿ ಚುರುಕು ಮೆದುಳಿನವೆಲ್ಲೊಂದು ಅವರ ಆಹಣೆಯ ಹಿಂದೆ, ದಿನದ ಇಪ್ಪತ್ತನಾಲ್ಕು ತಾಸೂ ಕೆಲಸ ಮಾಡುತ್ತಿದೆ. ಅವರು, ಇಂಡಿಯದ ಹಾಗೂ ಜಗತ್ತಿನ ಎಲ್ಲ ವಿಷಯ ವಿದ್ಯಮಾನಗಳನ್ನೂ ಬಲ್ಲರು. ಫಕ್ಕನೆ ನಿಮಗೆ, ಆ ವಿಷಯವಾಗಿ ಪ್ರಶ್ನೆಗಳ ಸುರಿಮಳೆಯನ್ನೆ ಕರೆಯಲೂ ಸಾಕು—ಇಂಗ್ಲಿಷಿನಲ್ಲೆ.!

ತನ್ನ ಹಿರಿಯರಂತೆ ಅವರೂ ಅಚ್ಚು ಮೆಚ್ಚಲ್ಮನವ. ಅವರ ಹಿರಿಯರನ್ನು ಮಹಮ್ಮದನ ಪೂರ್ವ ಅಬುಬಕರ ತವಕ ಕೋಧಿಸಲಾಗಿದೆ. ಉಸ್ಮಾನರ (ನಿಝಾಮರ) ತಂದೆ ನವಾಬರಾಗಿದ್ದರು. ಅವರು (ತಂದೆ) ಅನೇಕ ಮೇಲೂ ರೋಲ್ಸ್ ರೊಯ್ಸ್ ಕಾರುಗಳಲ್ಲೂ ಸವಾರಿಮಾಡಿದ್ದರು. ಮತ್ತು ತಮ್ಮ ಆಭರಣಗಳನ್ನು ಅಡಗಿಸಿಡುವ ಬದಲು ಬಹಿರಂಗವಾಗಿ ಧರಿಸಿಕೊಳ್ಳುತ್ತಿದ್ದರು; ಧರಿಸಲಾಗದುದನ್ನು ಚೀಲಗಳಲ್ಲಿಟ್ಟು ಹೊಲಿದು, ಅವನ್ನೆಯ ಮೆಟ್ಟಿಲುಗಳಾಗಿ ಉಪಯೋಗಿಸಿದ್ದರು! ಆ ನೇಕ ವರ್ಷ ಅವರಿಗೆ ಮಗು ಇರಲಿಲ್ಲ, ಕೊನೆಗೆ, ಅವರ ಪ್ರೀತಿಯ ಓರ್ವ ಹಿಂದೂ ಶಕ್ತಿಕೆಯು ಒಂದು ಗಂಡು ಮಗುವನ್ನು ಪ್ರಸವಿಸಲು, (ಉಸ್ಮಾನ), ತಪ್ಪಿ ಪುಟ್ಟಿಕ್ಕಿ ಬಾಧ್ಯಸ್ಥನಾದ ಪುತ್ರನಾಗಿ ಗುರುತಿಸಿದರು.

ತಂದೆಯ ಕಾಲಾನಂತರ ಉಸ್ಮಾನರು 'ಫಲೂಕನಾಮಾ' ಅರಮನೆಯನ್ನು ಮುಚ್ಚಬಿಟ್ಟು, ಹೈದರಾಬಾದ್ ನಗರದ ಗಡಿಯಲ್ಲಿ ಚಿಕ್ಕ ಬಂಗಲೆಗೆ ವರ್ಗಾಯಿಸಿಕೊಂಡರು. ಅವರ ಇಡೀ ಬಂಗಲೆಯು ಸುಮಾರು ಹನ್ನೆರಡು ಚಿಕ್ಕ ಸರಳ ಮನೆಗಳ ಒಂದು ಗುಂಪಾಗಿದೆ. ಸುತ್ತಲೂ ಎತ್ತರವಾದ ಗೋಡೆಯಿದೆ. ಪಟ್ಟಾಭಿಷೇಕವಾದಂದಿನಿಂದ ಈ ವರೆಗೆ ಅನಾರು, ತಮ್ಮ ಲಾಯದಲ್ಲಿದ್ದ ಆನೆಗಳನ್ನು ಉಪಯೋಗಿಸಿದ್ದಿಲ್ಲ ಹೊರಗೆ ಹೊರಡುವಾಗ ಉಸ್ಮಾನರು, ಅತಿ ವ್ಯಾಪಕವಾದ ಕಾಲವೂ ಒಂದು ಸ್ಟೋರ್ಡ್ ಕಾರನ್ನು ಉಪಯೋಗಿಸುತ್ತಾರೆ. ಅತಿಥಿಗಳಿಗೆ ಸತ್ಕಾರ ವಿವಿಧ ವಿನೋದಗಳನ್ನು ಕೊಡುವುದೆಂದರೆ, ಅತೀ ಆವಶ್ಯಕವಿದ್ದಾಗ ಮಾತ್ರ. ಒಮ್ಮೆ ಅವರು ತಮ್ಮ ಕೈಗೋಲನ್ನು (ಬೆತ್ತವನ್ನು) ಮುರಿದುಕೊಂಡರು.. ಯಾರೋ ಒಬ್ಬರು ಕೆಲವು ಬೆತ್ತಗಳನ್ನು ಕಳಿಸಿದಾಗ, ನಿಝಾಮ ಅವುಗಳೆಲ್ಲೊಂದನ್ನೂ ತೆಗೆಯದೆ, ತಮ್ಮ ಹಳೇ ಬೆತ್ತವೇ ಸಾಕೆಂದರು. ಅದು ಮುರಿದರೂ ಇನ್ನೂ ಒಂದೇ ತುಂಡಾಗಿಯೇ ಇದೆ. ಒಮ್ಮೆ ಲೇಡಿ ಲಿನ್ಲಿತ್‌ಗೌರವರು ಬರುವಂದು, ರೈಲ್ವೆ ನಿಲ್ದಾಣಕ್ಕೆ ಹೋದಾಗ, ಅದೇ ಬೆತ್ತವನ್ನೊರಿ ಕಾಮು ನಿಂತಿದ್ದರು; ಬೆತ್ತ ತುಂಡಾಗುವುದೋ ಎನಿಸುತ್ತಿತ್ತು.

'ಇದು ಬಹಳ ಅವಾಯಕಾರಿ' ಎಂದರು, ಲೇಡಿ ಲಿನ್ಲಿತ್‌ಗೌರವರು.

'ಅಹುದು; ಅದಕ್ಕೊಂದು ಉಂಗುರ ಹಾಕಿಸಬೇಕು' ಎಂದರು ನಿಝಾಮರು.

ನಿಝಾಮರ ವಾರ್ಷಿಕ ಆದಾಯ, ಪೈಸೆಗೆ ತೋರುತಿದ್ದಂತೆ ಸು೧೦,೦೦,೦೦೦ ರೂಪಾಯಿ ಅಥವಾ ಸು೭,೦೦,೦೦೦ ಡಾಲರುಗಳು. ತಾಜೆಕೆಯೊಂಗಿ ನೂರು ರೂಪಾಯಿಯಂತೆ ಒಬ್ಬೊಬ್ಬರಿಂದ ಬರುತ್ತಿದೆ. ನಿಝಾಮರ ತಂದೆ, ಈ ಹಣವನ್ನು ಮುಟ್ಟಿ, ತಿರುಗಿ ತಂದಾತನಿಗೇ ಕೊಡುತಿದ್ದರು; ಉಸ್ಮಾನರು ಅವನ್ನು ಇಟ್ಟುಕೊಳ್ಳುತ್ತಾರೆ.

ವರ್ಷದಲ್ಲಿ ನಾಲ್ಕು ಬಾರಿ, ನಿಝಾಮರು ಔತಣಕೂಡುವುದಿದೆ. ಇದಕ್ಕೆ ಸರಕಾರಿ ಖಜಾನೆಯ ಹಣ ಬರುತ್ತಿದೆ. ಈ ಸಂದರ್ಭಗಳಲ್ಲಿ, ನಿಝಾಮರು ತಮ್ಮ ಅಂಗಿಯ ಕೈ ಮೇಲಕ್ಕೆ ಸರಿಸಿ, ಪ್ರತಿಯೋರ್ವ ಅತಿಥಿಯ ಕೈಯಿಂದ ಬರುವ ಐದೈದು ನಾಣ್ಯಗಳನ್ನು ಶ್ವರಿತದಿಂದ ಕೈಗೆ ತೆಗೆದುಕೊಂಡು, ಬಳಿಯಲ್ಲಿ ನಿಂತಿರುವ ದೊಡ್ಡ ಥೈಲಿಗಳಲ್ಲಿ ತೆರೆದಿಟ್ಟಿರುವರಲ್ಲಿ ಹಾಕುತ್ತಿರುತ್ತಾರೆ; ಬೆಳಿಗೆ ಒಂದು ಥೈಲಿ—ಬಂಗಾರಕ್ಕೊಂದು ಥೈಲಿ ತೂಕದಿದೆ. ಇದಲ್ಲದೆ, ವಿಶೇಷ ತರದ ಸವಲತ್ತು ಮೊದಲಾದುವುಗಳಿಗಾಗಿ ಕೈಯೊಡ್ಡಿ ಬಂದವರ ಕಾಣಿಕೆಯು ವರ್ಷಕ್ಕೆ ಸು೫,೦೦,೦೦೦ ಡಾಲರುಗಳಷ್ಟಾಗುತ್ತದೆ.

ನಿಝಾಮರು ಸೇಳಿಕೆಯಂತೆ, ಅವರಿಗೆ ಒಂದು ತಿಂಗಳಿಗೆ ಇಪ್ಪತ್ತು ಡಾಲರಿಗಿಂತ ಹೆಚ್ಚಿನ ವೆಚ್ಚವಿಲ್ಲ. ಅವರ ಅರಮನೆಯ ಪರಿವಾರ, ಅಡಿಗೆ ಕೋಣೆ—ಎಲ್ಲವೂ ಸಾರ್ವಜನಿಕ ನಿಧಿಯಿಂದ ನಡೆಸಲ್ಪಡುತ್ತಿದೆ. ಅವರ ಅಲಂಕಾರಿಕ ದ್ರವ್ಯಗಳು, ಸಿಗರೇಟುಗಳು ಕೂಡ, ಊರಿನವರಿಂದ ಬರಬೇಕೆ ಅಳಿಲಿನಂತೆ ಒಟ್ಟು ಕೂಡಿಹಾಕಿದ್ದಾರೆ. ಅವರ ನೂರಮ್ಮಹಮೂರು ಸರ್ವಗಳ ಜೀವಮಾನದಲ್ಲಿ ಸು೬೦೦,೦೦೦,೦೦೦ ಡಾಲರುಗಳಷ್ಟು ಹಣ ಕೂಡಿ ಹಾಕಿದ್ದಾರೆ.

ಅವರ ಭಂಡಾರದಲ್ಲಿರುವುದರಲ್ಲಿ ಹೆಚ್ಚಿನವು ಆಭರಣಗಳು, ನವರತ್ನಗಳು. ಒಬ್ಬೆ ಒಬ್ಬ ವರಾಫನಿಗೆ, ಕೆಲವೊಂದು ದುರುಪ್ತಿಗಳ ಬಗ್ಗೆ ಕರೆಸಿದಾಗ, ಆ ವರಾಫನು ಅಂದಾಜು ಹಾಕಿದಂತೆ, ಸು೯೦,೦೦೦,೦೦೦ ಡಾಲರಿನಷ್ಟು ನವರತ್ನಾದಿಗಳನ್ನು ನೋಡಿದನು. ಜೆಕೋಬ್ಸ್ ಡೈಮಂಡ್ ಎಂಬ ಪ್ರಸಿದ್ಧ ವಜ್ರವು ಅವರಲ್ಲಿದೆ (ನಿಝಾಮರು ಇದನ್ನು ಪೇಪರ್ ವೈಟ್ ಆಗಿ ಉಪಯೋಗಿಸುತ್ತಾರೆ.) ಕೋಳಿ ಶಕ್ತಿ ಆಕಾರದ ಮೂರು ರತ್ನಗಳಿವೆ. ಅರಮನೆಯ ಎಲ್ಲ ಮಾಡುಗಳನ್ನು ಮುಚ್ಚುವಷ್ಟು ದೊಡ್ಡ ಚಾವೆ ತಯಾರಿಸಬರುವಷ್ಟು ಮುತ್ತುಗಳಿವೆ ಬಂಗಾರದ ಬಟ್ಟಲುಗಳು, ಚಮಚೆಗಳು, ಚಪ್ಪೆಗಳು—ಗಣಂ ಅತಿಥಿಗಳಿಗೆ ಬೇಕಾಗುವಷ್ಟು ಇವೆ. ಎಲ್ಲವೂ ಅಮಿಂಡವಾಗಿ ಬಂಗಾರದವು. ಬ್ರಿಟಿಷ್ ಅವರ ಬಕ್ಕಿಂಗ್ಹಾಮ್ ಅರಮನೆಯಲ್ಲಿ ಕೂಡ ಇಷ್ಟು ಇಲ್ಲವಂತೆ. ಅವರು ಇದೆನ್ನೆಲ್ಲಿ ಎರಡು ಮನೆಗಳಲ್ಲಿ ತುಂಬಿಟ್ಟಿದ್ದಾರೆ. ಬಂಗಾರದ ಗಟ್ಟಿಗಳೂ ಇವೆ.

ನಿಝಾಮರು ಒಮ್ಮೆಯೆ, ತಮ್ಮ ಕೆಲವು ಜನರಲ್ಲಿಗೆ ಹಣ್ಣುಗಳನ್ನು ಕಳಿಸುವುದುಂಟು. ಹಣ್ಣು ಕೊಂಡುಹೋದ ಹರಿವಾಣದಲ್ಲಿ (ಬಲೆ ಹೋಗಿ) ಹಣ ಬರುತ್ತದೆ, ಬರಲೇಬೇಕು.

ಮಧ್ಯಕಾಲಿನ ಶಾಲೆಯಗಾರನಂತಿದ್ದಾರೆ ಈ ನಿಝಾಮರು. ಇಂಡಿಯದ ಮಷ್ಕಿಲ್ಲಿಯೂ, ಈ ರೀತಿಯ ಒಡೆತನ ಇರಲಾರದು.

ಅವರ ವಿಷಯಕವಾದ ಕತೆಗಳನ್ನು ಅವರೇ ಕೇಳುವುದುಂಟು. ಆದರಿಂದ ಸು ವಿಕರಾಗುವುದಿಲ್ಲ, ಆನಂದಪಡುತ್ತಾರೆ.

ಉದಾಹರಣಾರ್ಥ: ಒಮ್ಮೆ ಅವರ ಒಬ್ಬ ಸೇವಕನು, ಇನ್ನೊಬ್ಬನೊಡನೆ ಹೀಗೆಂದನು. 'ಖಾವಂದರಿಗೆ ಒಂದು ಜರೂರ್ ವರದಿಮಾಡಬೇಕಿತ್ತು. ಆದರೆ, ಅವರು ನಿದ್ರಿಸುತಿದ್ದರು. ಎಬ್ಬಿಸಲು ಹೆದರಿಕೆಯಾಯಿತು.'

ಮತ್ತೊಬ್ಬನು ಅವಕ್ಕುತ್ತರವಿತ್ತನು: 'ಸುಲಭವಿತ್ತು; ನೀನು ಎರಡಾಣೆ ನಾಣ್ಯಗಳನ್ನು ತೆಗೆದು ಶಬ್ದ ಮಾಡಿದರೆ ಕೂತಲೇ ಏಳುತ್ತಿದ್ದರಲ್ಲ!'

'ಪ್ರಭಾತ.'

## ಹೈದರಾಬಾದ್ ಹೋರಾಟ.

ಹೈದರಾಬಾದಿನ ಜನತೆಯು ಉದ್ಧಾರಕ್ಕಾಗಿ ಇಂತಿಯೂ ಸರ್ಕಾರ ಕೂಡಲೇ ಸೂಕ್ತ ಮತ್ತು ಸಶಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆಯೆಂದು ಸರ್ವಜನವಾದ ಪಕ್ಷದ 'ಹೈದರಾಬಾದ್ ಹೋರಾಟದ ಮಿತಿ'ಯ ಅಧ್ಯಕ್ಷರಾದ ಶ್ರೀಮತಿ ಅರುಣಾ ಆಸಫ್ ಆಲಿ ಇವರು ತಿಳಿಸಿದ್ದಾರೆ. ಹೈದರಾಬಾದಿನ ಪರಿಸ್ಥಿತಿಯ ಬಗ್ಗೆ ಆಕೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿದಾಗ ಮೇಲೆ ಕಂಡಂತೆ ತಿಳಿಸಿದರು. ಹೈದರಾಬಾದ್ ಸರ್ಕಾರ 'ಸ್ಟ್ಯಾಂಡ್‌ಸ್ಟಿಲ್' ಒಪ್ಪಂದಂತೆ ನಡೆದುಕೊಂಡು ರಜಾಕಾರ ಸಂಸ್ಥೆಯನ್ನು ನಿರ್ಮೂಲ ಮಾಡಬೇಕು. ಇಲ್ಲವಿದ್ದರೆ ಭಾರತ ಸರ್ಕಾರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಎರಡೂ ಇಲ್ಲದಿದ್ದರೆ ಸರ್ವಜನವಾದ ಪಕ್ಷವು ಹೈದರಾಬಾದಿನ ಜನತೆಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಟ್ಟು ನಿಜಾಂ ಮತ್ತು ಇತರ ಪಾಸಿಗಿ ಸೈನ್ಯಗಳನ್ನು ಯಶಸ್ವಿಯಾಗಿ ಪ್ರತಿಭಟಿಸಲು ಸಹಾಯ ಮಾಡತ್ತದೆ ಎಂದುದಾಗಿಯೂ ಶ್ರೀಮತಿ ಆಸಫ್‌ಆಲಿ ತಿಳಿಸಿದರು.

ಶ್ರೀ ಜಯಪ್ರಕಾಶ್ ನಾರಾಯಣ್‌ರವರು ನಿಜಾಂ ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ, ಹೈದರಾಬಾದಿಗೆ ಪ್ರವೇಶಿಸುವುದಾಗಿಯೂ, ತಾವು ಕೂಡ ನಿಜಾಂ ಸರ್ಕಾರದ ಮೇಲೆ ದಂಗೆ ನಡೆಸಲು ಜನರ ನಾಯಕತ್ವವನ್ನು ವಹಿಸಿಕೊಳ್ಳುವುದಾಗಿಯೂ ಶ್ರೀಮತಿ ಆಸಫ್ ಆಲಿಯವರು ತಿಳಿಸಿದರು.

ತಾವು ಸೋಮವಾರ ನೆಹರೂ ಮತ್ತು ಕೆ. ಎಂ. ಮುನ್ಷಿಯವರೊಡನೆ ಮಾತುಕತೆ ನಡೆಸಿ ಇಂಡಿಯಾ ಸರ್ಕಾರ ಶೀಘ್ರವಾಗಿ ಒಂದು ನಿರ್ಧಾರಕ್ಕೆ ಬರದಿದ್ದರೆ ಸರ್ವಜನವಾದಿ ಪಕ್ಷವು ಹೈದರಾಬಾದ್ ಜನತೆಗಾಗಿ ಹೋರಾಟವನ್ನಾರಂಭಿಸುವುದೆಂದು ಅವರಿಗೆ ತಿಳಿಸುವುದಾಗಿಯೂ ಶ್ರೀಮತಿ ಆಸಫ್‌ಆಲಿ ಹೇಳಿದ್ದಾರೆ.

ವೃಥಾ ಮಾತುಕತೆಯಲ್ಲಿ ಕಾಲಕಳೆಯುವುದರಿಂದ ಇನ್ನೂ ಹೆಚ್ಚು ಕೆಂದರೆ ಯೂಗುವ ಸಂಭವವಿದೆ. ಮತ್ತೊಮ್ಮೆ ಭಾರತವಲ್ಲಿ ಮತೀಯ ಕಲಹವೊಂದಗುವ ಸಂಭವವಿದೆ ಎಂಬುದಾಗಿಯೂ ಅವರು ತಿಳಿಸಿದರು. ಆದಕಾರಣ ಇಂಡಿಯ ಸರ್ಕಾರ ಜನತೆಯ ಸ್ವಾತಂತ್ರ್ಯದ ಉದ್ಧಾರ ಮಾಡಬೇಕಾಗಿದೆ. ಹೈದರಾಬಾದಿನ ವಿಷಯದಲ್ಲಿ ತನ್ನ ನೀತಿಯನ್ನು ಅದು ಸಸ್ಪ ಪಡಿಸಬೇಕಾಗಿದೆ ಎಂದೂ ಅವರು ತಿಳಿಸಿದರು.


## ಅಂಗಡಿಮನೆ ಮೂರಾಟಕ್ಕಿದೆ

ಮಡಿಕೇರಿ ಟೌನ್‌ನಲ್ಲಿ ಬ್ಲಾಕ್ ನಂಬರ್ 4 ರೊಳಗಿರುವ ತಿಂಗಳೊಂದರ 30 ರೂಪಾಯಿಗಳು ಬಾಡಿಗೆ ಬರುವ ಪಿ. ವಿ. ಪೈ ಮತ್ತು ಕಂಪನಿ, ಫ್ಲೋರ್ಡ್ ಕಂಪೆನಿಯವರು ವಾಸವಿರುವ ಅಂಗಡಿ ಮನೆಗೆ ಬೆಲೆ ರೂ. 7,500 ರೂಪಾಯಿಗಳು, ಅಥವಾ ಇದರ ಸಮಿಪದ ಬೆಲೆಗೆ ಕೊಡಲ್ಪಡುವುದು. ಕೊಂಡು ಕೊಳ್ಳಲು ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸದವರಲ್ಲಿ ಖುದ್ದಾಗಲೀ ಪತ್ರ ಮೂಲಕವಾಗಲೀ ವ್ಯವಹಾರ ನಡಿಸಬಹುದು.

'K'
C/o. MANAGER,
'Kodagu' Mercara.

2-2

# ಕರ್ನಾಟಕಕ್ಕೆ ಅರಸು ಬೇಕೆ?

ಲೇ:–ವೀ. ಫ. ಕುಂಜಾರಗೇರಿ ಮಲೆ, ಕನ್ನಡ ಸಂಘ, ಶಿಗ್ಗಾಂವಿ.

ಜಗತ್ತು ದಿನ ದಿನಕ್ಕೆ ಗಳಿಗೆ ಗಳಿಗೆಗೆ ಬದಲಾಗುತ್ತ ನಡೆದಿದೆ. ಹಾಗೆ ನಮ್ಮ ಕರ್ನಾಟಕ ಏಕೀಕರಣದ ಬಣ್ಣವೂ ಬದಲಾಗುತ್ತಾ ನಡೆದಿದೆ. ಬರಹಗಾರರಾಗಲಿ, ಭಾಷಣಕಾರರಾಗಲಿ, ಅಧಿಕಾರಿಗಳಾಗಲಿ ಯಾವಾಗಲೂ ಒಂದೇ ಒಂದು ದೃಷ್ಟಿಯನ್ನಿಟ್ಟುಕೊಂಡಿರಬೇಕಾ. ಕಾಲಬಂದ ಹಾಗೆ ಬದಲಾಗುತ್ತ ನಡೆದರೆ ಕಾಲನ ದವಡೆಯಲ್ಲಿ ಸಿಕ್ಕು ಪುಡಿಯಾಗದೆ ಇರರು.

ಇದೀಗ ನಮ್ಮದೇ ಸರಕಾರ ಬಂದಿದೆ. ನಮ್ಮ ಸಮಸ್ಯೆಗಳೇನೆಂಬುದನ್ನು ತಿಳಿದು ಬಗೆಹರಿಸಿಕೊಳ್ಳಲು ಶಕ್ಯವಿದೆ. ಕನ್ನಡಿಗರ ಜೀವಾಳದ ಪ್ರಶ್ನೆಯೆಂದರೆ ಕರ್ನಾಟಕ ಏಕೀಕರಣ–ಪ್ರಾಂತೀಕರಣ.

ಉಕ್ಕಿ ಬರುತ್ತಿರುವ ಶುದ್ಧ ಶಾಸ್ತ್ರೀಯ ಮೃತವಾದ ಪ್ರಾಂತೀಯ ಭಾವನೆಯನ್ನು ತಡೆಯಲು ಯಾರಿಂದಲೂ ಅಶಕ್ಯ. ಸತ್ಯವಾಗಿಯೋ, ಅಸತ್ಯವಾಗಿಯೋ, ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಒಂದಲ್ಲ ಒಂದು ಬಗೆಯಿಂದ ಏಕೀಕರಣಕ್ಕೆ ಅಡ್ಡಿಯನ್ನೊಡ್ಡಿನ (ಒತ್ತಬಹುದಾದ) ಸ್ವಾರ್ಥಿಗಳ ಕಪಟನಾಟಕವೀಗ ಮುಂದುಬಿದ್ದು ಸತ್ಯರೂರ್ಯನ ಬೆಳಕು ನಿಚ್ಚಳವಾಗಿ ಮೂಡಬಹುದೆಂದಿದ್ದರೂ, ಆ ಬೆಳಕಿನಲ್ಲಿಯೇ ಮತ್ತೆ ಕಲರು ಕತ್ತಲೆಯೊಟನನ್ನು ಹೊಡಿದ್ದಾರೆ. ಜನತೆ ಎಚ್ಚತ್ತಿದೆ ಸಿಂಬುದರ ಅರಿವಿದ್ದೂ ಹೀಗೆ ಒತ್ತಾ ತ.–ಒಂದು ಬಗೆಯ ನೋಸದ ಕಾರ್ಯ ಡೆಯುವದೆಂದರೆ ಹಾಸ್ಯಾಸ್ಪದನಸ್ಪೇ ಅ ತ. ಚೋದ್ಯ!

### ಭಿನ್ನಾತ್ಮಕ ಅರಸು ಬೇಕೆ?

ಮೊನ್ನೆ (ದಿನಾಂಕ ೧೨) ಹುಬ್ಬಳ್ಳಿಯಲ್ಲಿ, ಕ. ಪ್ರಾಂ. ಕಾ. ಅಧಿವೇಶನ.ಗಳಾದ ಶ್ರೀಮಾನ್ ನಿಜಲಿಂಗಪ್ಪನವರು ನುಂಗುತಾರದ ಕೆಲವು ಕಹಿ ಗುಳಿಗೆಗಳನ್ನು ನಮ್ಮ ಹಿತದೃಷ್ಟಿಯಿಂದೆಂದು ನಮಗಿತ್ತಿದ್ದಾರೆ. ಸಂಸ್ಥಾನಗಳೆಲ್ಲ ವಿಲೀನವಾಗಬೇಕು; ಇ ಪ್ಪತ್ತೇಟು ರಾಜರುಗಳ ಆಸರೆಲ್ಲ ನಿರ್ನಾಮವಾಗಬೇಕೆಂದು, ಘೋಷಿಸಿ ಶ್ರೀಯುತರು ಮೈಸೂರು ಮಹಾರಾಜರು ಮಾತ್ರ ಅಖಂಡ ಕರ್ನಾಟಕದ ಭಿನ್ನಾತ್ಮಕ ಅಧಿಪತಿಗಳಾಗಬೇಕೆಂದು–ಮಾತ್ರ, ಇದು ನಿಮ್ಮಿಷ್ಟವೆಂದು–ಪರೋಕ್ಷದಿಂದ ಹೇಳಿದ್ದಾರೆ; ತಮ್ಮ ಸ್ವಾರ್ಥವನ್ನು ಸ್ಪಷ್ಟ ಪಡಿಸಿದ್ದಾರೆ. ಅಪಕ್ಷಪಾತದೆ ತನ್ನ ಮಾತಿನ್ನು ಮೈಸೂರಿನ ಬಂಡವಾಳಶಾಹಿಯೂದ ಶ್ರೀ ವೆಂಕೋಜರಾಯರೆಂಬುವರಿಂದ ಸಮರ್ಥನೆ ಮಾಡಿಸಿದ್ದಾರೆ. ನಾವು (ಮೈಸೂರವರು) ಒಳ್ಳೇ ಮೇಧಾವಿಗಳು, ಬುದ್ಧಿವಂತರು, ಹಾಗೆಲ್ಲ ವಿಚಾರ ಮಾಡದೆ ರಾಜರನ್ನು ಒಪ್ಪಿಬಿಟ್ಟು, ಆದ್ದರಿಂದ ನೀವೂ ಒಪ್ಪಿರಿ. ಇದರಿಂದ ನಿಮ್ಮ ಹಿತವೇ ಇದೆ–ಹಾಗೆ ಹೀಗೆ–ಎಂದೆಲ್ಲ ಅವರು ಮಾತನಾಡಿದ್ದಾರೆ. ಅವರ ಕಾಡು ವ್ಯಾಪಾರ ಕೈಗಾರಿಕೆ ಮೊದಲಾದ ಆರ್ಥಿಕ ವಿಷಯದಲ್ಲಿ ದುಂಡುಮಲಿಸುತೆ; ನಿರಿ ಸಂಪತ್ತು ಬೇಕಾದಷ್ಟು ಇದೆಯಂತೆ. ನಮ್ಮ ಹಿತಕ್ಕಾಗಿ ಅವರು ನಮ್ಮೊಡನೆ ಕೂಡುವರಂತೆ. ಇದು ಬೇಕಾಗಿದ್ದರೆ ನಾವು ರಾಜರನ್ನು ಒಪ್ಪಿ ಅವರೊಡನೆ ಕೂಡಿಕೊಳ್ಳಬೇಕಂತೆ! ಎಂಥ ಸರಳ ಸಾಮ್ಯ ವಿಚಾರ! ತಿಂಡಿಯು ಆರಿ ಹೆಚ್ಚಿ ಇಲಿಯನ್ನು ಬಲೆಯಲ್ಲಿ ಕೆಡಹುವ ಹಾವಿನಕೆ ಇದಲ್ಲವೇ?

ನಾನು ಮೈಸೂರು ಕನ್ನಡಿಗ, ಈ ಕಡೆಯ ವಿಚಾರ ಅಷ್ಟಾಗಿ ಗೊತ್ತಿಲ್ಲ;–ಎಂದು ಹೇಳುವ, ಕರ್ನಾಟಕದ ಮುಂದಾಳು ಶ್ರೀ. ನಿಜಲಿಂಗಪ್ಪನವರು, ನಮ್ಮಲ್ಲಿ ಎಲ್ಲ ಇದೆ, ನಿಮ್ಮಲ್ಲಿ ಇಲ್ಲ–ಎಂಬುದನ್ನು ಯಾವ ವಿಚಾರದ ಆಧಾರದ ಮೇಲೆ, ಯಾವ ದೃಷ್ಟಿಯಿಂದ ಹೇಳುತ್ತಾರೆ? ಇವರೆಲ್ಲ ಮೈಸೂರಿನಲ್ಲೊಂದು ಇಲ್ಲೊಂದು ಹೇಳ್ಕೆಲ್ಲಿದ್ದಾರೆಂದು ಈಗಾಗಲೇ ಅನೇಕ ಅರಿತ.ಸುಂತ ಮುಂದಾಳುಗಳು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಬಹು ಜನರಿಗೆ ಬೇಡವಾದ ಮಹಾರಾಜರನ್ನೂ, ಅವರ ಸೋಂಕೂ ಬೇಡ–ಎನ್ನುವಷ್ಟು ಮುಂದೆ ಹೋಗಿದ್ದಂಪ ಯೂನಿಯನ್ ಕನ್ನಡಿಗರ ಮೇಲೆ ಹೇರಲು ಒತ್ತಾಯ ತರುವದು, ಮೇಲೆ ನಿಮ್ಮಿಷ್ಟವೆಂದು ಹೇಳುವದು ಯಾವ ನೀತಿಯೋ ತಿಳಿಯದು! ಮೈಸೂರು ಕನ್ನಡ ಬಂಧುಗಳು, ತಮ್ಮ ಮೂಲಭೂತ ಹಕ್ಕಿಗಾಗಿ ಹೋರಾಟ, ರಕ್ತದೋಕುಳಿಯಾಟ ನಡೆಯಿಸದೆ ಗತ್ಯಂತರವಿಲ್ಲವಾದುದಕ್ಕೆ ಕಾರಣರಾದ ಮಹಾರಾಜರನ್ನು ಆವರ 'ದೊಡ್ಡ ಸಂಕುಚಿತ' ಮನಸ್ಸನ್ನು ಇಷ್ಟು ಬೇಗ ಅದು ಹೇಗೆ ಒಪ್ಪಿಕೊಂಡರೋ ತಿಳಿಯದಾಗಿದೆ. ಮುಖಂಡರೆನ್ನುವರ ಮಾತಂತೂ ತಿಳಿದಿದೆ. ಜನತೆಯ ವಿಚಾರವೇ ವಿಚಿತ್ರವಾಗಿದೆ. ನಿಜವಾಗಿಯೂ ಜನತೆ ಮಹಾರಾಜರನ್ನು ಒಪ್ಪಿಕೊಂಡಿರಲಾರದು; ಮನಸ್ಸನ್ನು ಪರಿವರ್ತಿಸಿಕೊಂಡಿರಲಾರದು. ಅವರಿಗೆ ಗೊತ್ತಿದೆ–ಬಂಧು, ಭಗಿನಿಯರ, ಮಕ್ಕಳು ಹೆಸುಳೆಯರ ತ್ಯಾಗ, ಬಲಿದಾನಗಳ ಇತಿಹಾಸ. ಆ ರಕ್ತದ ತೀವಿನ್ನೂ ಆರದಿರುವಾಗ ಇದಕ್ಕೆ ಕಾರಣರಾದ ಮಹಾರಾಜರನ್ನೂ, ಅವರ ಅನುಯಾಯಿಗಳನ್ನೂ ಹಿತಚಿಂತಕರೆಂದು ಒಪ್ಪುವುದು ಹೇಗೆ? ಹಿಂದೊಮ್ಮೆ ಮೈಸೂರಿನ ಒಂದು ಕವಿ ನಿಜಲಿಂಗಪ್ಪನವರು ಈ ಕುರಿತು ಮೊನಾಡುತ್ತಿದ್ದಾಗ ಜನಸ್ತೋಮ 'ಶೀಮ್ ಶೀಮ್' ಎಂದು ಕೂಗಿದ್ದು ಅವರ ಜ್ಞಾಪಕದಲ್ಲಿರಬಹುದು.

### ತಿಳುವಳಿಕೆಯಿಂದ ಮುನ್ನಡೆಯಬೇಕು.

ಮಹಾರಾಜರನ್ನು ಒಪ್ಪುವುದಾದರೆ ಮಾತ್ರ ಮೈಸೂರು, ಯೂನಿಯನ್ ಕರ್ನಾಟಕದಲ್ಲಿ ಕೂಡಬಹುದು–ಎಂದು ತಿಳಿಯುವದು ತಪ್ಪು. ಪ್ರಜಾಪ್ರಭುತ್ವದ ಈ ಕಾಲದಲ್ಲಿ ನಡುವಿನ ಓಡಾಡಿಗರ ಆಟ ನಡೆಯದು. ಮೂನವತೆಗೆ ಭೂಷಣ ಪ್ರಾಯವಾದ ಸ್ವಾತಂತ್ರ್ಯವನ್ನು, ಅರ್ಥಗರ್ಭಿತವಾದ ಸಿರಿ ಸೌಭಾಗ್ಯಕ್ಕಾಗಿ ಅರ್ಪಿಸುವಷ್ಟು ಕನ್ನಡಿಗರು ಅಜ್ಞರಲ್ಲವೆಂಬುದನ್ನು ಸ್ವಾತಂತ್ರ್ಯ ಇತಿಹಾಸವನ್ನರಿತ ವೈಕೂರ ನಾಯಕರು–ಮಹಾರಾಜರ ಬಾಲ ಬಡಕರು ಅರಿಯಲಿ. ಮೈಸೂರು ಮಹಾರಾಜರ ಸೊತ್ತಲ್ಲ, ಕರ್ನಾಟಕ, ಪ್ರಜೆಗಳದು. ಶ್ರೀಯುತರು ಹೇಳಿರುವಂತೆ ಮೈಸೂರು ಎಸ್ಟೇ ಮುಂದುವರಿದ–ಮುಂದುವರಿಯಬಹುದಾದ ನಾಡಾಗಿದ್ದರೂ ನಮಗಿರುವ ಇನ್ನಿತರ ಸೌಕರ್ಯಗಳು ಇಲ್ಲ. ನಮಗೊಂದು ರೀತಿಯದಿದ್ದರೆ ಅವರಿಗೊಂದಿದೆ. ಸ್ನೇಹ, ಸೌಹಾರ್ದ ಸ್ನೇಹಭಾವನೆಯಿಂದ ನಮ್ಮ ನಮ್ಮ ತೊಡಕನ್ನು ಬಿಡಿಸಿಕೊಳ್ಳಲು ಶಕ್ಯವಿರುವಾಗ ಯಾರೂ ನಡುವೆ ಬಂದು ಹದಗೆಡಿಸುವದು ಬೇಡ. ಬಲ್ಲದೆ ಈ ಆಟವೂ ನಡೆಯುದು ಕೇವಲ ಸ್ವಾರ್ಥದ ದೃಷ್ಟಿಯಿಂದ ಜನತೆಯ ನಿಜವಾದ ಸುಖಕ್ಕೆ ಆತಂಕವಾಗಬಹುದಾದ ರೀತಿಯ ಕೈಚಳಕ ಇನ್ನು ಸಾಕು. ಇಲ್ಲವಾದರೆ ಮುಖಂಡತ್ವಕ್ಕೆ ಮಂಗಳಾರತಿ ಎತ್ತಬೇಕಾದ ಪ್ರಸಂಗ ಬಂದೀತು.

'ನುಡಿ.'

## ರಷ್ಯಾದೊಡನೆ ವೈಮನಸು.

ಜರ್ಮನಿಯಲ್ಲಿ ಕಳೆದ ೧೦–೧೫ ದಿನಗಳಿಂದ ಒದಗಿರುವ ಪರಿಸ್ಥಿತಿ ಈಗಾಗಲೇ ಬ್ರಿಟನ್ ಅಮೇರಿಕಗಳಿಗೂ, ರಷ್ಯಕ್ಕೂ ಇರುವ ಭಿನ್ನಾಭಿಪ್ರಾಯ ವೈವನಸುಗಳನ್ನು ಹೆಚ್ಚಿಸಿದೆ. ಬರ್ಲಿನ್ನಿಗೂ ಪಶ್ಚಿಮ ಜರ್ಮನಿಗೂ ಇರುವ ರೈಲ್ವೆ ಸಂಚಾರ ವ್ಯವಸ್ಥೆಯ ಮೇಲೆ ರಷ್ಯನ್ ಮಿಲಿಟರಿ ಅಡಳಿತಾಧಿಕಾರಿಗಳು ಪ್ರತಿಬಂಧಕಗಳನ್ನು ಹಾಕಿದರು. ಪ್ರತಿಬಂಧಕದ ಫಲವಾಗಿ ಬರ್ಲಿನ್ನಿಗೆ ಹೊರಟಿದ್ದ ಬ್ರಿಟಿಷ್ ಮತ್ತು ಅಮೇರಿಕನ್ ರೈಲುಗಳು ದಾರಿಯಲ್ಲೇ ನಿಂತು ಹೋಗಬೇಕಾಯಿತು. ಈ ರೀತಿ ಪ್ರತಿಬಂಧಕಗಳನ್ನು ಹಾಕುವುದು ನ್ಯಾಯ ವಿರುದ್ಧವೆಂದು ಬ್ರಿಟನ್ ಮತ್ತು ಅಮೇರಿಕಗಳು ಪ್ರತಿಭಟಿಸಿವೆ.

ರಷ್ಯ ಇದಕ್ಕೆ ಪ್ರತ್ಯುತ್ತರವಾಗಿ ಬ್ರಿಟನ್ ಮತ್ತು ಅಮೇರಿಕಗಳ ಮೇಲೆ ಅಪಾದನೆಯನ್ನು ಹೊರಿಸಿ ಅವುಗಳು ಬರ್ಲಿನ್ನಿನ ಆಸ್ತಿಯನ್ನೆಲ್ಲ ಲೂಟಿ ಮಾಡಿವೆಯೆಂದು ವಾದಿಸುತ್ತಿದೆ. ಈ ವಾದ ವಿವಾದ ಒಂದು ಕಡೆ ನಡೆಯುತ್ತಿರುವಾಗ ಇನ್ನೊಂದು ಕಡೆ, ರಷ್ಯದವರು ಹಾಕಿದ ಹೊಸ ಪ್ರತಿಬಂಧಕಗಳ ಫಲವಾಗಿ ಉಂಟಾಗಿರುವ ಪರಿಸ್ಥಿತಿಯನ್ನು ಪರೀಲಿಸುವುದಕ್ಕೂ ಮಾತುಕತೆ ನಡೆಯುತ್ತಿದೆ.

ಪರಿಸ್ಥಿತಿ ಹೀಗಿರುವಾಗಲೇ ಇನ್ನೊಂದು ದುರಂತ ಬರ್ಲಿನ್ನಿನಲ್ಲಿ ನಡೆಯಿತು. ಬ್ರಿಟಿಷ್ ವಿಮಾನವೊಂದಕ್ಕೂ ರಷ್ಯ ವಿಮಾನವೊಂದಕ್ಕೂ ಬರ್ಲಿನ್ನಿನ ಬಳಿಯಲ್ಲಿ ಘರ್ಷಣೆಯೊದಗಿ ಎರಡು ವಿಮಾನಗಳೂ ನಾಶವಾದವು. ಬ್ರಿಟಿಷ್ ವಿಮಾನದಲ್ಲಿದ್ದ ೧೪ ಮಂದಿ ಸತ್ತರು. ಈ ವಿಮಾನ ಅಪಘಾತಕ್ಕೆ ಬ್ರಿಟಿಷ್ ವಿಮಾನ ಕಾರಣ ನೆಂದು ರಷ್ಯನರೂ, ರಷ್ಯನ್ ವಿಮಾನ ಕಾರಣವೆಂದು ಬ್ರಿಟಿಷರೂ ಅಪಾದನೆಮಾಡುತ್ತಿದ್ದಾರೆ. ರಷ್ಯದ ಅಧಿಕಾರಿಗಳು ಅಪಘಾತ ನಡೆದುದಕ್ಕಾಗಿ ವಿಷಾದವನ್ನೇನೋ ವ್ಯಕ್ತಪಡಿಸಿದ್ದಾರೆ.


## ಆಸ್ತಿ ಮಾರಾಟಕ್ಕಿದೆ.

ಮಡಿಕೇರಿಗೆ ಎಂಟು ಮೈಲು ದೂರದಲ್ಲಿ ವಳವಾಡಿ ಗ್ರಾಮದಲ್ಲಿ 300 ಬಟ್ಟೆ ನೀರಾವರಿ ಭೂಮಿಯೂ, ನೀರಿಗೆ ಯಾವ ತೊಂದರೆಯೂ ಇಲ್ಲದ 4 ಏಕರು ಮಾನಿ ಭೂಮಿಯೂ, ಅಂದಾಜು 3 ಏಕರು ಪಸಲು ಬರುವ ಕಿತ್ತಳೆ ತೋಟವೂ, 12 ಏಕರು ಕಾಫಿ ಮತ್ತು ಕಿತ್ತಳೆ ವ್ಯವಸಾಯಕ್ಕೆ ಲಾಯಕ್ಕಾದ ಜಾಗವೂ ಇದೆ. ರಾಜಾರಸ್ತೆಯಿಂದ ಮುಕ್ಕಾಲು ಮೈಲು ದೂರವಿದ್ದು ಗಾಡಿ ಹೋಗಲಿಕ್ಕೆ ರಸ್ತೆ ಇದೆ. ವಾಸಕ್ಕೆ ಮನೆಯೂ ಇದೆ. ಖರೀದಾರರು ಈ ಕೆಳಗಿನ ಅಡ್ರೆಸಿನಲ್ಲಿ ಪತ್ರ ಮೂಲಕವಾಗಲೀ, ಖುದ್ದಾಗಲೀ ವಿಚಾರಿಸಬಹುದು.

4–4 **B. K. Appiah,**
Glenmorgan Estate,
Glenmorgan P O.,
The Nilgiris.

## ಬೇಕಾಗಿದೆ.

ಎಸ್. ಎಸ್. ಎಲ್. ಸಿ. ಪಾಸಾಗಿದ್ದು ಕಾಫಿ ಕಿತ್ತಳೆತೋಟ ಕೆಲಸದ ಅನುಭವವಿರುವ ತೋಟದ ಮೇನೇಜರು ಬೇಕಿದ್ದಾರೆ ರೂ. ೫೦-೧೦/೧-೧೦೦ ದರದ ವೇತನ ಕೊಡಲಾಗುವದು. ಖರೀದಾರರು ಈ ವಿಳಾಸಕ್ಕೆ ಬರೆಯಿರಿ.

**M**
*C/o Manager*
*Kodagu Press*
*Mercara.*

## ಎಂಪೈರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. | ಒಟ್ಟು ಆದಾಯ | .... | 1,07,09,000 ರೂಪಾಯಿ |
| | ಚಾಲ್ತಿಯಿರುವ ವಿಮೆ | .... | 17,74,52,000 ,, |
| | ಆಸ್ತಿ | .... | 6,67,60,000 ,, |
| | ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು | .... | 8,83,62,000 ,, |

ಆಂಗ್ಲ ಆಫೀಸು: ಪ್ರಿನ್ಸಿಪ್ಸ್ ಚೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಆಫೀಸು: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಜೋಂಜೇ.

# ಕೋಮುವಾರು ಪ್ರಾತಿನಿಧಿತ್ವ.

ಸರಕಾರೀ ಅಧಿಕಾರ ಸ್ಥಾನಗಳಲ್ಲಿ ಕೆಲವನ್ನು ಕೆಲವು ಜಾತಿಗಳಿಗಾಗಿ ಕಾಯ್ದಿಡಬೇಕೆಂಬ ಒಂದು ಗೊತ್ತುವಳಿಯು ಬೋಂಬಾಯಿ ಶಾಸನ ಸಭೆಯಲ್ಲಿ ಮೊನ್ನೆ ಬಂದಿತ್ತು. ಅದಕ್ಕೆ ಉತ್ತರ ಕೊಡುತ್ತ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು "ಇಂತಹ ಮಾತನ್ನು ಕಾರ್ಯರೂಪದಲ್ಲಿ ತರುವುದು ಸಾಧ್ಯವಿಲ್ಲ. ಆದರಿಂದ ಆದಷ್ಟು ಶೀಘ್ರವಾಗಿ ಒಂದು ನಾಟಕದಂತಾಗುವದು. ನಿಜವಾದ ಅರ್ಹತೆಯುಳ್ಳ ಜನರಿಂದ ಮಾತ್ರ ಯೋಗ್ಯ ಆಡಳಿತವು ಸಾಧಿಸಬಲ್ಲದು. ಜಾತಿಗಳನ್ನು ನೋಡಿದರೆ ಅರ್ಹತೆಯ ಜನರು ಸಿಗುವದಿಲ್ಲ. ಹಿಂದುಳಿದವರಿಗೆ ಮತ್ತು ಹರಿಜನರಿಗೆ ಕೆಲವು ಮಟ್ಟಿಗೆ ಸ್ಥಳಗಳನ್ನು ಕಾಯ್ದಿಡುವ ಪ್ರಸಂಗವು ಇದ್ದೇ ಇದೆ. ನನ್ನಲ್ಲಿಯ ಜಾತೀಯತೆಯ ಭಾವನೆಯು ನಷ್ಟವನ್ನು ಹಾನಿಗೊಳಿಸಿದೆ. ಅವನ್ನು ವಿಶೇಷತಃ ಅಸ್ಪೃಶ್ಯತಾ ಭಾವನೆಯನ್ನು ಸಂಪೂರ್ಣ ನಾಶಮಾಡುವದೇ ಈ ಸರಕಾರದ ಆದ್ಯ ಕರ್ತವ್ಯವಾಗಿದೆ." ಮುಂತಾಗಿ ಹೇಳಿದರು. ಈ ಸ್ಪಷ್ಟೀಕರಣದ ಸಂತರ, ಆ ಗೊತ್ತುವಳಿಯನ್ನು ಕಾದ ಶ್ರೀ. ಕಲ್ಯಾಣಿ ಇವರು ಅವನ್ನು ಹಿಂದಕ್ಕೆ ತೆಗೆದು ಕೊಂಡರು.

ಮಧ್ಯಂತರ ಸರಕಾರದಲ್ಲಿಯೂ ಇದೇ ತರಹದ ಘೋಷಣೆಯನ್ನು ಇಂದು ಸ್ವೀಕರಿಸಬೇಕೆಂದು ನಿರ್ಧರಿಸಿದ್ದಾರೆ. ಕೇಂದ್ರ ಶಾಸನ ಸಮಿತಿಯಲ್ಲಿ ಕೂಡ "ಜಿ" ನಿರ್ದೇಶನವನ್ನು ಸರಕಾರೀ ಕಾರ್ಯಕ್ರಮಗಳಲ್ಲಿ ಮಾಡಬಾರದೆಂದು ನಿರ್ಧರಿಸಿದ್ದಾರೆ. ಇತ್ತ ಕಡೆಗಿನ ಸರಕಾರಿ ಕಾಗದ ಪತ್ರಗಳಲ್ಲಿ ಜಾತೀಯ ನಿರ್ದೇಶನವು ವಾಯ್ದವಾಗಹತ್ತಿದೆ. ಶೈಕ್ಷಣಿಕ ಕಾಯಿದೆಯವರ ಸ್ಪರ್ಧಾಟನೆಗಳಲ್ಲಿ ಕೆಡೆ ಲಂ ಇತ್ತೀಚೆಗೆ ಕಂಡು ಬರುವದಿಲ್ಲ. ಸರಕಾರಿ ಪಲಹೆಯು ಈ ಸಂಬಂಧವಾಗಿ ಸರ್ವ ವಿಭಾಗಗಳಿಗೆ ಹೋಗಿರಲು ಸಾಕು. ಅನಂತರ ಮೂಲಕವೇ ಈ ಪರಿಸ್ಥಿತಿಯು ಹುಟ್ಟಿದೆ.

ಜಾತೀಯ ಭಾವನೆಯನ್ನು ಹುಟ್ಟಿಸಿ ಆಳುವ ಧೋರಣೆಯನ್ನು ಬ್ರಿಟಿಷರು ಇಟ್ಟು ಕೊಂಡಿದ್ದರು ಅದರ ಫಲವಾಗಿ ಹಿಂದುಸ್ತಾನವು ಬಹಳ ಹಾನಿಯನ್ನು ಅನುಭವಿಸಿತ್ತು ಮತ್ತು ಇನ್ನೂ ಉಣ್ಣುತ್ತಿದೆ. ಒಂದು ಕಡೆಗೆ ಮಾತಾಡುವಾಗ್ಗೆ ಪಂ. ಜವಾಹರಲಾಲರವರು "ಈ ಭಾವನೆಯು ಮೂಲಕ ನಮ್ಮ ರಾಜಕರಣವು ಬಹಳ ಹಾನಿಗೊಂಡಿತು ಮಹಾತ್ಮಾ ಗಾಂಧಿಯವರಂತಹ ಆಪ್ತಶಕ್ತಿಯು ಮಗನಿರ್ಮಾಣಕ್ಕೆ ಬಲಿಕೊಡಬೇಕಾಯಿತು. ಆದ್ದರಿಂದ ಈ ಜಾತೀಯ ಭೂತವನ್ನು ನಾವು ಅಡಗಿಸಲೇ ಬೇಕು." ಎಂಬುದೇ ಮೊದಲಾಗಿ ಹೇಳಿದ್ದಾರೆ.

ಈ ಮಾತುಗಳು ಬಹಳ ಅವಶ್ಯವಾದವುಗಳೂ ಮತ್ತು ಮಹತ್ವದವೂ ಆಗಿರುವಷ್ಟೇ ನಿವಾರಣೆ ಮಾಡಲ್ಪಡುವದಕ್ಕೆ ಕಷ್ಟ ಸಾಧ್ಯವಾದವುಗಳಾಗಿವೆ. ಪ್ರತಿಯೊಬ್ಬರು ಇಂದು ಯಾವದೇ ವಿಷಯದಲ್ಲಿ ವಿಚಾರ ಮಾಡುವಾಗ್ಗೆ ಮೊದಲು ಜಾತಿಯು ಮುಂದೆ ಬಂದು ನಿಲ್ಲುತ್ತದೆ. ಆದರ ಬಗ್ಗೆ ಸಮಾಧಾನವಾದನಂತರವೇ ಉಳಿದ ವಿಷಯಗಳು ಗಮನಿಸಲ್ಪಡುತ್ತವೆ. ಆ ಮನುಷ್ಯನು ಎಷ್ಟೇ ಅರ್ಹತೆಯುಳ್ಳವನಾಗಿದ್ದರೂ ಅವನು ತಮಗೆ ಬೇಕಾದ ಜಾತಿಯವನಾಗಿರದಿದ್ದರೆ ಅವನ ಅರ್ಹತೆಯು ಕಣ್ಣಿಗೆ ಕಾಣುವದೇ ಇಲ್ಲ. ಹೀಗಾಗಿ ಪ್ರತಿ ಒಂದು ಜಾತಿಯವರು ಯಾವದೇ ವಿಷಯದಲ್ಲಿ ತಮ್ಮ ಜಾತಿಯವರಿಗೆ ಸಾಧ್ಯವಿದ್ದಷ್ಟು ಪ್ರಯೋಜನ ಮಾಡಿಕೊಡುವ ಪ್ರಯತ್ನಕ್ಕೆ ಇಂದು ಬಿದ್ದಾದ್ದಾರೆ. ಒಂದೇ ಜಾತಿಯವರಲ್ಲಿ ಆಸಬೇಕಾದ ಪ್ರಸಂಗ ಬಿದ್ದರೆ ಆಗ ಪಕ್ಷೆ ಸಂಗಡ ವಿಚಾರ ನಡೆಯುತ್ತದೆ!

ಒಟ್ಟಿನಲ್ಲಿ ನಾವು ಈ ಜಾತಿ, ಅಧಿಕಾರ ಲಾಲಸೆ ಇವುಗಳ ಹಿಡಿತದಲ್ಲಿ ಸಂಪೂರ್ಣವಾಗಿ ಸಿಕ್ಕಿ ಹೋಗಿದ್ದೇವೆ. ಇವರ ಕಾರಣದಿಂದ ನಮ್ಮ ಯಾವ ಕಾರ್ಯಗಳೂ ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ಆಗಲೆಲ್ಲವಾಗಿವೆ. ಎಲ್ಲ ಕಡೆಗೆ ಕಾರ್ಯಕ್ಷಮತೆಯು ಅಭಾವವೇ ಪೆಚ್ಚಾಗಿ ಕಂಡು ಬರುತ್ತಿದೆ. ಕಾಂಗ್ರೆಸಿನಂತಹ ಕೇವಲ ಸೇವಾ ಧೋರಣೆಯುಳ್ಳ ಸಂಸ್ಥೆಯಲ್ಲಿ ಕೂಡ ಈ ಪರಿಸ್ಥಿತಿಯಿಂದ ಭಯಂಕರವಾಗಿ ಉಳಿದ ಸಂಸ್ಥೆ ಸಂಘಗಳನ್ನು ನೆನೆಯಲಿಕ್ಕೇ ಬೇಡ.

ಕೇವಲ ಹೈದರಾಬಾದ್ರಾಜ್ಯವಾಗಲಿ ಮತ್ತು ನಿಜಾಮ್ಸೇವನಕರವಾದ ಅಲ್ಲಾಪೆ ಸರ್ವನಾಶಕ್ಕೆ ಕಾರಣವಾದ ಪರಿಸ್ಥಿತಿಯನ್ನು ಜಾತೀಯ ಭಾವನೆಯು ಹುಟ್ಟಿಸಿದುದರಿಂದ. ಅವನ್ನು ನಿವಾರಿಸಲು ವಿಶ್ವಪ್ರಯತ್ನ ಮಾಡಬೇಕೆಂಬ ಮಾತುಗಳು ಇಂದು ನಮ್ಮ ಬಾಯಿಯಿಂದ ಬರಲಿಕ್ಕಿವೆ. ಆದಕ್ಕೆ ಬೇಕಾದ ಪರಿಸ್ಥಿತಿಯು ಹುಟ್ಟಲ್ಪಡಬಹುದಿದೆ.

ಆದರೆ ಇನ್ನೂ ಹೃದಯದಲ್ಲಿಯ ಕೊರಗು ಮಾತ್ರ ನಿಮ್ಮಿಂದ ಹೋಗಿಲ್ಲ. ದೊಡ್ಡ ಘೋಷಣೆಯನ್ನು ಕೆಡಲು ಸಣ್ಣ ಘೋಷವು ಓಡಿಹೋಗಬಹುದಾದರೂ ಹಾಗೆ ಸಣ್ಣ ಘೋಷವು ಓಡಿಹೋಗಲಿ ಅದರಿಂದ ನಾವು ಹೊಂದುತ್ತಿರುವ ಪ್ರಯೋಜನವು ಕಲ್ಲಿದಂತಾಗುವುದಿಲ್ಲ? ಎಂದು ನಾವು ಚಿಡಪಡಿಸುವದೂ ಉಂಟು. ಕೇವಲ ಜಾತೀಯ ಅರ್ಹತೆಯಿಂದ ನನಗೆ ಸಿಗುತ್ತಿದ್ದ ಸೌಕರ್ಯಗಳು ಇನ್ನು ಮುಂದೆ ಸಿಗಲಿಕ್ಕಿಲ್ಲವೆಂದು ನಾವು ವ್ಯಕ್ತನಾಕ್ರೋಶವಾದ ದ್ದೂ ಉಂಟು ಆದ್ದೇ ಎಲ್ಲರೆ ಅರ್ಹತೆಯುಳ್ಳವರಿಗೆ ಅವು ಸಿಗುವವಲ್ಲ? ಎಂಬ ಬಗ್ಗೆ ಮಾತುಕತೆಯಾಗದೆ ಕೂಡ ಇರುವದಿಲ್ಲ.

ದ್ವಿವಿಧ ಮನೋಗತ್ಯಿಯಲ್ಲಿ ಇಂದು ನಾವು ಚರಪಡಿಸುತ್ತಿದ್ದೇವೆ. ಇದು ಪ್ರಯೋಜನವಲ್ಲ. ನಷ್ಟವೊಂದರಲ್ಲಿ ಒಂದು ಸುಖವಿದೆ, ಬಾನಾ ದಾಯವಿದೆ. ಹೆಚ್ಚಿನ ದುಃಖವನ್ನು ತಳ್ಳುವದಕ್ಕಾಗಿ ನಾವು ಸಣ್ಣ ದ ನಷ್ಟವನ್ನು ಸ್ವೀಕರಿಸಬೇಕಾಗುತ್ತದೆ.

ದೇಶವನ್ನೇ ಹಾಳುಮಾಡಿಬಿಡುವ ಜಾತೀಯತೆಯನ್ನು ನಿವಾರಿಸುವುದಕ್ಕೆ ಹೊರಟಾಗ ಅರ್ಹತೆಯುಳ್ಳವರು ಮುಂದೆ ಹೋಗಲಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆ ಅರ್ಹತೆಯನ್ನು ನಾವೂ ಸಂಪಾದಿಸಿ ಮುಂದೆ ನಾವೂ ಬರಲು ಯತ್ನಿಸಬೇಕಲ್ಲದೆ ಅರ್ಹತೆಯನ್ನು ಗಮನಿಸದ ಪ್ರಸಂಗವನ್ನೇ ಹುಟ್ಟಿಸುವುದು ಅದೂರ ದೃಷ್ಟಿಯ ಮಾತಾಗಿದೆ. ಒಂದೇ ತರಹದ ಅರ್ಹತೆಯು ಸರ್ವರಲ್ಲಿ ಇಲ್ಲದಿದ್ದರೆ ಬೇರೊಂದು ತರಹದ ಅರ್ಹತೆಯು ಆ ಯೂ ಜನರಲ್ಲಿ ಇದ್ದೇ ಇರುತ್ತದೆ ಈ ವಿವಿಧ ಅರ್ಹತೆಗಳ ಪ್ರಯೋಜನವನ್ನು ದೇಶಕಾರ್ಯಕ್ಕೆ ಒದಗಿಸಿಕೊಟ್ಟ ಆದನ್ನು ಇನ್ನೊನ್ನೆ ಮೇಲಕ್ಕೆತ್ತುವ ಕಾರ್ಯವನ್ನು ಇಂದು ನಾವು ಮಾಡಬೇಕಾಗಿದೆ.

ಅದಕ್ಕಾಗಿ ಜಾತೀಯ ಭಾವನೆ, ಸ್ಪರ್ಧಾಸಿದ್ಧ ಇವುಗಳ ಗದ್ದಲಕ್ಕೆ ಬೀಳದೆ ಸರ್ವರೂ ಭೇದರಹಿತವಾದ ರಾಷ್ಟ್ರೀಯ ದೃಷ್ಟಿಯುಳ್ಳ ಘೋರಣದಿಂದ ಮುಂದೆ ಸಾಗಿದರೆ ನಮ್ಮ ದೇಶದ ಭವಿಷ್ಯವು ಉಜ್ವಲವಾಗಬಲ್ಲದು.

'ಜೈಹಿಂದ್'.

## ಬೇಕಾಗಿದ್ದಾರೆ.

ಎಸ್. ಎಸ್. ಎಲ್. ಸಿ. ಪಾಸಾದವರು ಯಾ ಓದಿದವರು ಒಬ್ಬರು ಮಾರುಗೋಡು ಶಾಲೆಯ ಬಾಬತಿ ತೆರೆಯುವ ಆರನೇ ತರಗತಿಗೆ ಉಪಾಧ್ಯಾಯರಾಗಿ ಬೇಕಾಗಿದ್ದಾರೆ. ಮಾಸಿಕ ವೇತನ 40 ರಿಂದ ಪ್ರಾರಂಭಿಸಿ 50ಕ್ಕೆ ಏರಿಸಲಾಗುವುದು. ಪ್ರಾಮುಸುದಾರರು 26-4-48ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಅರ್ಜಿ ಹಾಕಬೇಕಷೆ. 2-5-48ರಲ್ಲಿ ಮರಗೋಡು ವಿಭಾಗದಲ್ಲಿ ಅರ್ಜಿದಾರರು ಹಾಜರಾಗಬೇಕು ಸದರಿ ವಿಷಯವಾಗಿ ಮಾತನಾಡಲಾಗುವುದು.

P. P. Annaiah,
*President,*
*School Extention Fund,*
*Maragodu,*
*Murnad post.*

1-1

## ನೋಟೀಸು.

ತಾರೀಕು ೧೫-೪-೪೮ರಲ್ಲಿ ವೀರಾಜಪೇಟೆಯಲ್ಲಿ ಕೆಲವು ಮೋಟಾರು ನೌಕರರು ಸೇರಿ. 'ಕೊಡಗು ಪ್ರಾಂತೀಯ ಮೋಟಾರು ನೌಕರರ ಸಂಘ'ವೊಂದನ್ನು ಸ್ಥಾಪಿಸಲಾಗಿದೆ. ಕೊಡಗಿನ ಪ್ರತಿಯೊಬ್ಬ ಮೋಟಾರು ನೌಕರನೂ ಸಂಘಟಿತ ಸಂಘದ ಏಳಿಗೆಗೆ ಪ್ರೋತ್ಸಾಹಿಸುವರೆಂಗಿ ನಂಬುತ್ತೇನೆ. ಸದಸ್ಯರಾಗಲು ಬಯಸುವ ಮೋಟಾರು ನೌಕರರು ತಮ್ಮ ಹೆಸರು ಮತ್ತು ಚಂದಾಹಣ ಒಂದು ರೂಪಾಯಿ ಮೇತ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳುಹಿಸಿಕೊಡುವುದು.

ಕೆ ವಂದಪ್ಪ,
ಕಾರ್ಯದರ್ಶಿ.
ಕೊಡಗು ಪ್ರಾಂತೀಕ ಮೋಟಾರು ನೌಕರರ ಸಂಘ, ವೀರಾಜಪೇಟೆ.

## THE COORG GENERAL INDUSTRIES Ltd
### H. O. Mercara.

Notice is hereby given pursuant to section 37 of the Indian companies Act, 1913 that the register of members of the company above named will be kept closed from the 27th day of April 1948 till the third day of May 1948 both inclusive.

*By order of the*
*Board of Directors,*
**K. K. Thimaya,**
*Managing Director.*

## FOR SALE.

A good strong house with electric lights and a fine drawing room and spacious other rooms with a out-hose and a well with fine water etc in the best locality of Mercara, very near Civil Hospital and Fort. Offers of Rs. 25000/- or near considered. Apply to.

X
*Co. "KODAGU"*
*Mercara.*

2-1

## ಹದಿಮೂರನೇ ಅಖಿಲ ಕೊಡಗು ಸದಸ್ಯಾ ಸಮ್ಮೇಳನ.

ಈ ಸಮ್ಮೇಳನವು ತಾ. 5-4-48ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷೆ ಸ್ಥಾನವನ್ನು ಮದರಾಸು ಪ್ರಾಂತೀಯ ಕಾಂಗ್ರೆಸ್ ಸಂಘಗಳ ರಿಜಿಸ್ಟ್ರಾರರಾದ ರಾಯಸಾಹೇಬರ್ ಜೆ. ಸಿ. ರಾಯುಸ್ಟಾರವರು ಅಲಂಕರಿಸಿದ್ದರು.

ಸುಮಾರು 2,000 ಸಹಕಾರಿಗಳು ಹಾಜರಿದ್ದರು. ಅಲ್ಲದೆ ಕೊಡಗಿನ ಜೇಷ್ಠ ಸಹಕಾರಿಗಳಾದ ಸಹಕಾರ ಸಂಘಗಳ ರಿಜಿಸ್ಟ್ರಾರವರೂ ಮತ್ತು ಇತರ ಹಲವು ಉದ್ಯೋಗಸ್ಥರೂ ಹಾಜರಿದ್ದರು. ಸಹಕಾರಧ್ವಜವನ್ನು ರಾ. ಸಾ. ಯನ್. ಸಿ. ಮುದ್ದಯ್ಯನವರು ಏರಿಸಿದರು.

ನಕ್ಷತ್ರಗಳ ಪ್ರದರ್ಶನವನ್ನು ಶ್ರೀ ಎ ಸಿ. ತಿಮ್ಮೆಯ್ಯ ಇವರು ತೆರೆದರು. ಪ್ರಾರ್ಥನೆಯ ನಂತರ ಸಮ್ಮೇಳನದ ಪ್ರಾರಂಭವಾಯಿತು. ಸಾರ್ವತ್ರಿಕ ಗಾಂಧಿಯವರ ಮರಣಕ್ಕಾಗಿ ಸಂತಾಪ ಸೂಚನೆಯನ್ನು ಶ್ರೀ ಕೆ. ಟಿ. ಪೆಮ್ಮಯ್ಯನವರು ಏಳಿಸಿ ಮುಂದಿಟ್ಟು, ಅವರ ಗೌರವಾರ್ಥ ರಜೆ ಘೋಷಿಸಿದನಂತರ ಅವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಸಭೆಯ ಪ್ರಾರಂಭದಲ್ಲಿ ಸ್ವಾಗತ ಸಮಿತಿಯ ಪರವಾಗಿ ಶ್ರೀ ಕೆ. ಸಿ. ಅಪ್ಪಯ್ಯನವರು ಸ್ವಾಗತ ಭಾಷಣವನ್ನು ಮಾಡಿದರು. ನಂತರ ಪರಿಷತ್ತಿನ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡಿದರು.

ಈ ಪತ್ರಿಕೆಯಲ್ಲಿ ಮಂಜೂರಾದ ಠರಾವುಗಳನ್ನು ಈ ಕೆಳಗೆ ಕೊಡಲಾಗಿದೆ.

1. ಸ್ಕೌಟ್ಸ್ ಮತ್ತು ಗರ್ಲ್‌ಗೈಡ್ಸ್ ಸಂಘಗಳ ಪ್ರಯೋಜನಾರ್ಥವಾಗಿ ಕಟ್ಟುವ ಗದ್ದುಗೆ ಮತ್ತು ಆಫೀಸು ಮನೆಗಳಿಗೂ ಮತ್ತು ಈಗ ಕಟ್ಟಲ್ಪಡುತ್ತಿರುವ ಪ್ರಾಂತೀಯ ಬ್ಯಾಂಕು ಮತ್ತು ಫೆಡರೇಶನ್ ಆಫೀಸು ಕಟ್ಟಡಗಳಿಗೂ ಪೂರ್ತಿ ಖರ್ಚನ್ನಲ್ಲಿ ಶೇಕಡ 75ರಷ್ಟನ್ನು ಕೇಂದ್ರ ಮತ್ತು ಸ್ಥಳೀಯ ಸರಕಾರದವರು ಮುಫತ್ತಾಗಿ ಕೊಡಬೇಕು.

2. ಮೂರಾಟೆ ನುತ್ತು ಸ್ಕೌರು ಸಂಘಗಳ ಕೇಂದ್ರ ಸಂಸ್ಥೆಯೂದ ಕೊಡಗು ಪ್ರಾಂತೀಯ ಮರ್ಕೆಂಟಿಂಗ್ ಫೆಡರೇಶನ್‌ನ ಕಾರು ಬಾರುಗಳನ್ನು ಇನ್ನೂ ಅಭಿವೃದ್ಧಿ ಪಡಿಸಲು ಮತ್ತು ಸುಲಲಿತವಾಗಿ ಕೆಲಸ ನಡೆಸಲು ಸರಕಾರದವರು ವರ್ಷ ಒಂದರ ರೂ. ಹತ್ತುಸಾವಿರ ಪ್ರಕಾರ ಗ್ರಾಂಟು ಕೊಡಬೇಕು.

3. ಈಗಿರುವ ಮರ್ಕೆಂಟಿಂಗ್ ಮತ್ತು ಸ್ಕೌರು ಸಂಘಗಳನ್ನು ಬೈತಾವಳ ಜನರಿಗೆ ಪೂರ್ತಿ ಸಹಾಯಕವಾಗುವ ರೀತಿ ನೂತನಪಡಿಸಿ ಅವು ಇನ್ನೂ ಹೆಚ್ಚಿನ ಅಭಿವೃದ್ಧಿಯಿಂದ ಕೆಲಸ ಮಾಡಲು ಅನುಕೂಲಿಸುವಂತೆ ತಾ. 1-7-48 ರಿಂದ 5 ವರ್ಷಗಳ ವರೆಗೆ ಈ ಸಂಸ್ಥೆಗಳ ಸಿಬ್ಬಂದಿ ಖರ್ಚಿನ ಅರ್ಧಭಾಗವನ್ನು ಸರಕಾರದವರು ಕೊಡಬೇಕು.

4. ಕೊಡಗು ಕಿತ್ತಳೆ ಮೂರಾಟೆ ಸಂಘದ ಆಶ್ರಯದಲ್ಲಿ ಪಣ್ಣುಗಳ ರಫ್ತನ್ನು ಶಾಸ್ತ್ರೀಯ ರೀತಿಯಲ್ಲಿ ತೆಗೆಯುವ ಒಂದು ಕಾರ್ಖಾನೆಯನ್ನು ತೆರೆಯಲು ಮತ್ತು ಶೀತ ಸಂಗ್ರಾಹಣಾಲಯದ ಸೌಲಭ್ಯವನ್ನು ಕಲ್ಪಿಸಿಕೊಡಲು ಸರಕಾರದವರು ತಕ್ಕ ಧನ ಸಹಾಯ ಕೊಡಬೇಕು.

5. ಕೊಡಗಿನಲ್ಲಿ ಈಗಾಗಲೇ ಸ್ಥಾಪನೆಯಾಗಿ ಕೆಲಸ ಮಾಡುತ್ತಿರುವ ಕೊಡಗು ಪ್ರಾಂತೀಯ ಸಹಕಾರಿ ಫೆಡರೇಶನ್ ಮತ್ತು ನಾನಾ ತರದ ಮರ್ಕೆಂಟಿಂಗ್ ಸಂಘಗಳ ಲೆಕ್ಕಗಳನ್ನು ಸ್ಪಾಟಿಕನ್ನು ಅಗಿಂದಾಗ್ಗೆ ಪರಿಶೀಲಿಸಲು ಅನುಕೂಲವಾಗುವಂತೆ ಸರಕಾರದವರು ಪ್ರತ್ಯೇಕ 5 ಇನ್ಸ್‌ಪೆಕ್ಟರುಗಳನ್ನು ನೇಮಿಸಬೇಕು.

6. ಇನ್ನೂ ಹೊಸದಾಗಿ ಕಟ್ಟಲಿರುವ ಗದ್ದುಗೆ ಮನೆಗಳಿಗೆ ಬೇಕಾಗುವ ಯೋಗ್ಯ ನಿವೇಶನ, ಮರ, ಮರಳು, ಕಲ್ಲು ಇತ್ಯಾದಿ ಸಾಮಾನುಗಳನ್ನು ಸರಕಾರವು ಕೊಡಬೇಕು.

7. ಕಿತ್ತಳೆ ಮರ್ಕೆಂಟಿಂಗ್ ಆರ್ಗನೈಜರುಗಳ ಕೆಲಸವನ್ನು ಇನ್ನೂ 10 ವರ್ಷಗಳ ವರೆಗೆ ಮುಂದರಿಸುವಂತೆ, ಇಂಡಿಯಾ ಸರಕಾರವನ್ನು ಕೇಳಿಕೊಳ್ಳುವುದು.

8. ಕೊಡಗು ಪ್ರಾಂತೀಕ ಬ್ಯಾಂಕಿನಲ್ಲಿ ದೀರ್ಘವಾಯಿದೆ ಸಾಲದ ಶಾಖೆಯೊಂದನ್ನು ತೆರೆದು ಜಾಗ್ರತೆ ಕೆಲಸ ಪ್ರಾರಂಭಿಸಲು ಅನುಕೂಲವಾಗುವಂತೆ ಸರಕಾರವು ಸಾಕಷ್ಟು ಧನ ಸಹಾಯ ಮತ್ತು ಇದಕ್ಕೆ ಬೇಕಾಗುವ ಕಡಿಮೆ ಪಕ್ಷ 5 ಇನ್ಸ್‌ಪೆಕ್ಟರುಗಳನ್ನು ನೇಮಿಸಬೇಕು.

9. ಹೆಚ್ಚಿನ ಸುರಕ್ಷೆಯನ್ನು ನೀಡುವ ಹೊಸ ಮಾದರಿಯ ಕೊಡಗು ಸಂಘಗಳ ಆಜವಾಯಿಸಿಕೆಯನ್ನು ಯುಕ್ತ ರೀತಿ ಕೈಕೊಳ್ಳಲಿಕ್ಕೂ ಅನುಕೂಲವಾಗುವಂತೆ ಸರಕಾರವು ವರ್ಷಂಪ್ರತಿ ಹತ್ತು ಸಾವಿರ ರೂಪಾಯಿಗಳಷ್ಟು ಧನಸಹಾಯವನ್ನು ನೀಡಬೇಕು.

10 ಗ್ರಾಮ ಸಹಕಾರ ಸಂಘದ ಸೆಂಬರುಗಳಿಗೆ ಅವರ ಮನೆ ಕೊಟ್ಟಿಗೆ ವಗೈರೆ ದುರಸ್ತು ಪಡಿಸಲು ಅವಶ್ಯವಿರುವ ಹಂಚು, ಸಿಮೆಂಟು ಕಬ್ಬಿಣ ವಗೈರೆ ಸಾಮಾನುಗಳನ್ನು ದೀರ್ಘವಾಯಿದೆ ಕಂತುಗಳಲ್ಲಿ ಮರುಪಾವತಿ ಮಾಡುವಂತೆ ಒದಗಿಸಲು ತಕ್ಕ ಉಪನಿಬಂಧನೆಗಳನ್ನು ತಯಾರಿಸಬೇಕೆಂದು ರಿಜಿಸ್ಟ್ರಾರವರನ್ನು ಕೇಳಿಕೊಳ್ಳಲಾಯಿತು.

11 ಕೊಡಗಿನಲ್ಲಿ ಕಾಲೇಜನ್ನು ಈ ವರ್ಷವೇ ಸರಕಾರದವರೇ ಸ್ಥಾಪಿಸಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುವುದು.

ಈ ಮೇಲ್ಕಂಡ ಗೊತ್ತುವಳಿಗಳನ್ನು ಸರ್ವ ಸಮ್ಮತದಿಂದ ಮಂಜೂರು ಮಾಡಲಾಯಿತು. ನಂತರ ಅಧ್ಯಕ್ಷರು ಉಪಸಂಹಾರ ಭಾಷಣವನ್ನಿತ್ತರು. ಅಧ್ಯಕ್ಷರಿಗೂ ಮತ್ತು ಇಸ್ಪಿತರರಿಗೂ ವಂದನೆಯಿಂದ ವಿಚರ್ಜನೆಯಾಯಿತು.

ಆ ಮೇಲೆ ಪಸ್ತು ಪ್ರದರ್ಶನದಲ್ಲಿ ಪಾರಿತೋಷಕವನ್ನು ಪಡೆದವರಿಗೆ ಬಹುಮಾನವನ್ನು ಶ್ರೀಮತಿ ಸಿ. ಟಿ. ಪೊವಲಿಯವರನ್ನು ಅಧ್ಯಕ್ಷೆಯಲ್ಲಿ ಕೊಡಲಾಯಿತು. ಪರಿಷತ್ತಿನ ನಂತರ ಕೂಡಿನರ ಕುಣಿತವನ್ನು ಪ್ರದರ್ಶಿಸಲಾಯಿತು. ಆ ಮೇಲೆ ಭಕ್ತ ತುಕಾರಾಮ ನಾಟಕವು ಶ್ರೀ ಕಾವೇರಿ ನಾಟಕ ಮಂಡಳಿಯವರಿಂದ ಅಭಿನಯಿಸಲ್ಪಟ್ಟಿತು.

## ಕೊಡಗು ಪ್ರಾಂತೀಕ ಬ್ಯಾಂಕಿನ ಮಹಾಸಭೆ.

ತಾ. 4-4-48ರಲ್ಲು ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ಮಹಾಸಭೆಯು ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಕೆ. ಪಿ ಅಪ್ಪಯ್ಯ ಯಂ. ಯಲ್. ಸಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಒಟ್ಟು 118 ಬಿಡು ಮೆಂಬರುಗಳೂ 188 ಸಂಘಗಳ ಪ್ರತಿನಿಧಿಗಳೂ ಹಾಜರಿದ್ದರು. ಪ್ರಾರ್ಥನೆಯಿಂದ ವಿಚಿಂಗನ್ನು ಪ್ರಾರಂಭಿಸಲಾಯಿತು. ಮಹಾತ್ಮ ಗಾಂಧಿಯವರ ನಿಧನಕ್ಕಾಗಿ ಸಂತಾಪ ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥಿಸಲಾಯಿತು.

ನಂದಿ ವರ್ಷದಲ್ಲಿ ಮೃತಪಟ್ಟ ಮೆಂಬರುಗಳ ಕುರಿತು ಸಂತಾಪ ಸೂಚನೆ ಮಾಡಿದ ಮೇಲೆ ಕಳೆದ ಮಹಾ ಸಭೆಯ ನಡವಳಿಕೆಯನ್ನು ಓದಿ ಮಂಜೂರು ಮಾಡಲಾಯಿತು. ನಂತರ ಆಡಿಟ್ ವರದಿ ಮತ್ತು ಡೈರೆಕ್ಟರುಗಳ ವರದಿಯ ಮೇಲೆ ಸ್ವಲ್ಪ ಚರ್ಚೆನಡೆದು, ಮಂಜೂರು ಮಾಡಲಾಯಿತು. ಮುಂದಿನ ವರ್ಷದ ಬಜೆಟ್ಟು ಮಂಜೂರು ಮಾಡಲ್ಪಟ್ಟಿತು. ಮಧ್ಯಾಹ್ನ ಊಟ ಮುಗಿದ ಮೇಲೆ ಡೈರೆಕ್ಟರುಗಳ ಚುನಾವಣೆಯು ನಡೆಯಿತು. (ಇದರ ಫಲಿತಾಂಶವು ಕಳೆದವಾರ ಪ್ರಕಟಿಸಲ್ಪಟ್ಟಿದೆ.) ಬ್ಯಾಂಕಿನ ಬೈಲಾಗಳಲ್ಲಿ ಮಾಡಬೇಕಿರುವ ತಿದ್ದುಪಡಿಗಳನ್ನು ಅಚ್ಚು ಹಾಕಿಸಿ ಮುಂದಾಗಿ ಮೆಂಬರುಗಳಿಗೆ ಕಳುಹಿಸಿ ನಂತರ ಬರುವ ಮಹಾ ಸಭೆಯಲ್ಲಿ ಜರ್ಚಿಸುವಂತೆ ತೀರ್ಮಾನಿಸಲಾಯಿತು.

### ಹೊಸ ಠರಾವುಗಳು.

1. ಮುಂದಿನ ವರ್ಷದ ಬ್ಯಾಂಕಿನ ಬೆಳ್ಳಿ ಮಹೋತ್ಸವ ಸಮಯದಲ್ಲಿ ಬ್ಯಾಂಕಿನ ಹೊಸ ಕಟ್ಟಡ ತೆರೆಯುವ ಸಮಯದಲ್ಲಿ ಬ್ಯಾಂಕಿಗೆ ಸಮ್ಮಂಧ ಪಡುವ ಸಕಲ ಪಹವಾಟುಗಳನ್ನು ನಡೆಯಿಸುವುದು.

2. ಬ್ಯಾಂಕಿನ ಧೀರ್ಘ ಕಂತಿನ ಸಾಲದ ಶಾಖೆಯನ್ನು ತೆರೆಯಲು ಅನುಕೂಲವಾಗುವಂತೆ ಇಂಡಿಯಾ ಸರಕಾರದಿಂದ 25ಲಕ್ಷ ರೂಪಾಯಿ ಸಾಲವನ್ನು ಶೇ 3 ರಂತೆ ತರಿಸಿಕೊಡಬೇಕೆಂತೆ ಈ ಸಮ್ಮೇಳನ ಸ್ಥಳೀಯ ಸರಕಾರದ ಮುಖೇನ ಕೇಳಿಕೊಳ್ಳುವುದು ಮತ್ತು ಇದನ್ನು ನಡಿಸಲು ಬೇಕಿರುವ 5 ಇನ್ಸ್‌ಪೆಕ್ಟರರನ್ನು ಕೊಡುವಂತೆ ಸರಕಾರಕ್ಕನ್ನು ಕೇಳಿಕೊಳ್ಳುವುದು.

3. ದೇಶದ ನಾಲ್ಕೈದು ಮುಖ್ಯ ಸ್ಥಳಗಳಲ್ಲಿ ಬೊನ್ಸ್ ಬ್ಯಾಂಕಾ ದೂ ರೂಲ್ ಬ್ಯಾಂಕುಗಳನ್ನು ಸ್ಥಾಪಿಸಿ ಪ್ರಾಂತೀಕ ಬ್ಯಾಂಕಿನ ಹಣ ರವಾನೆ ಕಲಸವನ್ನು ಸರಿಯಾಗಿ ನಡಿಸಲು ಬಕ್ಕ ವಿಸ್ತಾರು ಮಾಡಿ ಕೂಡಬೇಕಾಗಿ ಸಹಕಾರಿ ಸಂಘಗಳ ರಜಿಸ್ಟ್ರಾರವರನ್ನು ಕೇಳಿಕೊಳ್ಳುವುದು.

ಈ ಮೇಲ್ಕಂಡ ಠರಾವುಗಳು ಸರ್ವ ಸಮ್ಮತದಿಂದ ಮಂಜೂರು ಮಾಡಲ್ಪಟ್ಟವು

ಬ್ಯಾಂಕಿನ ಮಾಯಿ ಸಭೆಯಲ್ಲಿ ಚುನಾವಣೆಯು ಬ್ಯಾಲಬ್ ಸೆಂಬರುಗಳ ಅಭಿಪ್ರಾಯಕ್ಕೆ ಅನುಗುಣವಾಗಿ ಮುಂದಿನ ವರ್ಷ ಬದಲಾಯಿಸಬೇಕೆಂದು ಠರಾವನ್ನು ಸೂಚಕರಾದ ಶ್ರೀ ಕ. ಕೆ. ಬೆಳ್ಯಪ್ಪನವರೂ, ಬ್ಯಾಂಕಿನ ಗೌರವ ಕಾರ್ಯದರ್ಶಿಯವರ ಉದ್ಯೋಗವನ್ನು ವಹಿಸಿಕೊಂಡಿರುವ ಶ್ರೀ ಕೆ. ಜಿ ಕುಟ್ಟಪ್ಪನವರೂ ಅಭಿಪ್ರಾಯ ಪಟ್ಟರು. ಮೇಲ್ಕಂಡ ಠರಾವಿನ ಪ್ರಕಾರ ಕಲಸ ನಡಿಸಬೇಕು. ಬ್ಯಾಂಕಿನ ಡೈರೆಕ್ಟರುಗಳನ್ನು ಕಾಲಾನುಕಾಲಕ್ಕೆ ಆರಿಸುವುದನ್ನು ವಹಿಸಿಕೊಡಬೇಕು ಎಂಬ ಠರಾವುಗಳನ್ನು ಶ್ರೀ ಕ. ಜ ಕುಟ್ಟಪ್ಪನವರೂ ಜರ್ಜೆಯಾದ ನಂತರ ಮಾಡಿಸಿ ತೆಗದು ಕೊಂಡರು.

ಎರಡು ವರ್ಷ ಡೈರೆಕ್ಟರಾಗಿದ್ದವರು ಪುನಹ ಚುನಾವಣೆಗೆ ನಿಲ್ಲಬಾರದು ಎಂಬ ಠರಾವಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಸಾಕಷ್ಟು ಚರ್ಚೆಯಾಯಿತು. ಕೊನೆಗೆ ಈ ಠರಾವನ್ನು ಮುಂದಿನ ವರ್ಷಕ್ಕೆ ಮುಂದೂಡಲಾಯಿತು.

ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಕೆ. ಜಿ ಕುಟ್ಟಪ್ಪನವರು ಸಭೆಗೆ ಬಂದಿದ್ದ ಸರ್ವರಿಗೂ ವಂದನೆ ಅರ್ಪಿಸಿದ ನಂತರ ವಿಚರ್ಜನೆಯು ಸಾಯಂಕಾಲ 6 ಗಂಟೆಗೆ ಮುಕ್ತಾಯ ಗೊಂಡಿತು.

—


ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ಯಾಂಚಿನ ಸಕ್ರೆಟರಿಗಳು

**ದಿ ಜೋಂಪೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಪಾಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2

ಜೋಂಪೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

**ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.**

ಕಂಪನಿಯರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ಠೇವಣಾತಿ 3,30,263-1-8, ವಸೂಲಾದ ಕ್ಷೇಮನಿಧಿ 2,36,454-0-3. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ಠೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ಪರ್ಚೆಸ್ ಕ್ಯೂಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C ಪ್ರೆಸಿಡೆಂಟ್ ಮತ್ತು ಮೆನೆಜ್ಜಿಂಗ್.


Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪಸವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ತಾರೀಕು ೩೩-೪-೧೯೫೬ನೇ ಬುಧವಾರ | ಸಂಚಿಕೆ ೪೬

# ಕರ್ನಾಟಕ ಪ್ರಾಂತ ರಚನೆ.

ಲೇ:—'ಕನ್ನಡಿಗ', ಕೊಡಗು.

[ಲೇಖನಾಂಕ ೨.]

ಮೈಸೂರು ಪ್ರಾಂತ್ಯಕ!

೩೫ ಲಕ್ಷ ಜನಸಂಖ್ಯೆಯಿಂದ ಕೂಡಿ ೧೦ ಕೋಟಿ ರೂಪಾಯಿ ವರಮಾನವಿರುವ ಮೈಸೂರು ಮುಂದೆ ರಚನೆಯಾಗಬೇಕಿದ್ದ ಸಮಸ್ತ ಕರ್ನಾಟಕ ಪ್ರಾಂತದಲ್ಲಿ ಸೇರಿದ್ದರೆ ಉಳಿದ ರಾಜ್ಯಗಳ ಒಂದಾ ದರೂ ವಿಧವೆ ಹೆಂಗಸಿನಂತೆ ದೀನಭಿಕ್ಷುಗಳನ್ನು ಕಳಕೊಳ್ಳುವರು. ಪ್ರಸ್ತುತ ಮೈಸೂರನ್ನು ಬಿಟ್ಟ ಕರ್ನಾಟಕವು ಭೌಗೋಳಿಕ ದೃಷ್ಟಿಯಿಂದ ಬಹುಮಟ್ಟಿಗೆ ಅಸಮತೋಲವಾಗುವದು. ಉದ್ಯೋಗ ವಿಜ್ಞಾನ ಮುಂದಕ್ಕೆಟ್ಟು ಮೈಸೂರು ಕರ್ನಾಟಕ ಪ್ರಾಂತೀಕರಣದಲ್ಲಿ ಬಹು ಭಾಗವಾಗುವದೇ ಎಂಬುದನ್ನು ಈ ಲೇಖನದಲ್ಲಿ ಪರೀಕ್ಷಿಸುವ.

ಮೈಸೂರು ಕರ್ನಾಟಕದ ಒಂದು ಅಂಗವಾಗಿರಲು ತಯಾರಿಲ್ಲ. ಎಷ್ಟೆಲ್ಲ ದು ಲಕ್ಷ ಜನಸಂಖ್ಯೆ ಇರುವ ಮೈಸೂರಿನವರು, ವ್ಯಾಪಾರ ಮತ್ತು ವರ್ತಕರ ವಿಚಾರಗಳಲ್ಲಿ ಮೇಲ್ಮಟ್ಟದವರಾಗಿ ಸ್ವಯಂಪೂರ್ಣವಾಗಿ ತಮ್ಮ ಆದಾಯ ೧೦ ಕೋಟಿಯೊಡನೆ ೧೫ ಕೋಟಿ ಜನರಿರುವ ಆದರೆ ಕೇವಲ ೧೦ ಕೋಟಿ ಉತ್ಪತ್ತಿಯಿರುವ, ಔದ್ಯೋಗಿಕ ದೃಷ್ಟಿಯಿಂದ ಮುಂದುಳಿದ ಜಾಗವೊಡನೆ ಯಾವ ಪುರುಷಾರ್ಥಕ್ಕಾಗಿ ಸೇರಬೇಕೆಂಬುದೇ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ವಿವೇಚಿಸುತ್ತಾ ಮೈಸೂರಿನವರೇ ಆದ ದಾವಣಗೆರೆಯ ಶ್ರೀ. ಬಿ. ಜನಮಂ ತಪ್ಪನವರು ಹೀಗೆ ಬರೆಯುತ್ತಾರೆ.

'ಮೈಸೂರಿನವರು ಕರ್ನಾಟಕದ ಇತರ ಪ್ರಾಂತಗಳೊಡನೆ ಲೀನವಾದರೆ ಅವರು ತಮ್ಮ ರಾಜಕೀಯ ಹಕ್ಕು ಬಾಧ್ಯತೆಗಳನ್ನು ಕಳೆದುಕೊಳ್ಳುವರೆಂದು ರಾಜಕೀಯದಲ್ಲಿ ಹೊಸದಾಗಿ ಕಾಲಿಟ್ಟವರಿಗೂ ಅರ್ಥವಾಗುತ್ತದೆ. ವಯಸ್ಸು ಮತದಾನ ಪದ್ಧತಿಯಲ್ಲಿ ಅಲ್ಪ ಸಂಖ್ಯಾಕರು ಪರಿಸ್ಥಿತಿ ವಿಶೇಷಗಳಾಗಬಹುದೆಂದು ನಾವು ನಿಷ್ಪಕ್ಷವಾಗಿ ವಿಮರ್ಶಿಸಬೇಕು. ರಾಜಕೀಯ ಕ್ಷೇತ್ರದಲ್ಲಿ ಅವರು ಅಲ್ಪ ಸಂಖ್ಯಾಕರಾಗುವರು. ಶಾಸನ ಸಭೆಗಳಲ್ಲಿ ಅವರು ಅಲ್ಪ ಸಂಖ್ಯಾತರಾಗುವದರಿಂದ ಅವರ ರಾಜಕೀಯ ಹಾಗೂ ಆರ್ಥಿಕ ಹಿತಗಳು ಬಹು ಸಂಖ್ಯಾಕರ ಹಿತಾಹಿತಗಳನ್ನು ಅವಲಂಬಿಸಬೇಕಾಗುತ್ತದೆ. ಈ ಲೀನೀಕರಣದಿಂದ ಮೈಸೂರಿನ ಎಳ್ಳಿನಷ್ಟೂ ಕಳೆದುಕೊಳ್ಳಲಾರದು' ಇದು ಮೈಸೂರಿನ ಜನಾಭಿಪ್ರಾಯವನ್ನು ಪ್ರತಿನಿಧಿಸುವೆಯಾರ್ಜಿಸಿ. ಸಂವಿಧಾನ ವಿಷಯ. ಕರ್ನಾಟಕವಿಲ್ಲದೆ ಪ್ರಸ್ತುತ ಸಂವಿಧಾನದ ಶ್ರೀ ತೀರ್ಮಾನಗಳ ಪ್ರಕಾರ ಮೈಸೂರಿನವರು ಸಂಯುಕ್ತ ಭಾರತ ಸರ್ಕಾರದಲ್ಲಿ ಪಡೆಯುತ್ತಾ, 'ಮೊಲು ದೊಣ್ಣೆಯಿದ್ದರೆ ಕರ್ನಾಟಕ ಗಜಿಸಿದಾಗಲೆ. ಭಾಗ ಗಳಲು ಎಲ್ಲ ಕನ್ನಡಿಗರೂ ಎಲ್ಲ ಪ್ರಯತ್ನ ಮಾಡಬೇಕು' ಎಂದಿದ್ದಾರೆ. ಮೊದಲು ಕನ್ನಡದ ಇತರ ಭಾಗಗಳು ಒಂದಾದ ನಂತರ ಮೈಸೂರು ಈ 'ಕನ್ನಡ ಮಿನಿಯ' ನನ್ನು ಕೂಡಿಕೊಳ್ಳುವುದೆಂದು ಅವರ ಅಭಿಮತ. ಆದರೆ ಈ ಕಲ್ಪನೆ ಮೈಸೂರಿಗೆ ಜಾಬೆಂಬಲವಿಲ್ಲವೆನ್ನಬ ಹುದು. 'ಮೈಸೂರಿನಲ್ಲಿ ರಾಜಕೀಯ ಸಾಮಾಜಿಕ ಜೀವನ ವೈಜ್ಞಾನಿಕ ಸಂಸ್ಥೆಗಳು ಕಟ್ಟಡಗಳು ಆದ ಬಂಧ ವಿಧಾನವಿಲ್ಲಿ ಬೇರೆಲ್ಲು ಶಿಕ್ಷಣ ಮತ್ತು ಕೈಗಾರಿಕೋದ್ಯೋಗಗಳಲ್ಲಿ ಹೆಜ್ಜಾಣ ಪ್ರಗತಿಯನ್ನು ಸಾಧಿಸಿಲ್ಲ ಯಾವದೇ ತರದ ಲೀನೀಕರಣವು ಮೈಸೂರಿನ ಪ್ರಗತಿಗೆ ಆಪ್ಪೇನೂ ಹಿತಾವಹವಾಗುವದಿಲ್ಲ ಈ ಯೋಜನೆಯಿಂದ ಮೈಸೂರು ರಾಜಕೀಯವಾಗಿಯೂ ಆರ್ಥಿಕವಾಗಿಯೂ ನಷ್ಟಪಡೆಯಲಿದೆ. ಮೈಸೂರು ಅರಸರಾಗಲೀ, ಪ್ರಜೆಗಳಾಗಲೀ ಬಹು ಆಲೆಯಿಂದ ಆರ್ಜಿಸಿದ ವೈಯಕ್ತಿಕತೆಯನ್ನಾಗಲೀ, ವ್ಯಕ್ತಿತ್ವವನ್ನಾಗಲೀ ಲೀನೀಕರಣ ನೂಡಿಕೊಳ್ಳಲು ಇಚ್ಛಿಸುವದಿಲ್ಲ' ಎಂಬುದೇ ಮೈಸೂರಿನ ಜನಸಾಮಾನ್ಯರ ಅಭಿಪ್ರಾಯವಾಗಿದೆ.

### ಸಿಹಿ ಗುಳಿಗೆ.

ಮೈಸೂರಿನ ಈ ಪ್ರತ್ಯೇಕ ನಿಲ್ಲುವ ಧೋರಣೆಯನ್ನು ಕಂಡು ಏಕೀಕರಣವಾದಿಗಳು ಸಿಹಿ ಗುಳಿಗೆ ತಯಾರಿಕೆಗೆ ತೊಡಗಿರುವರು. ಮೈಸೂರನ್ನು ನಾನಾ ರೀತಿಯಿಂದ ಒಲಿಸುವ ಪ್ರಯತ್ನ ನಡೆದಿದೆ. ಕರ್ನಾಟಕ ಏಕೀಕರಣ ಸಮಿತಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್. ಮಂಗಳವೀಡರವರು 'ಮೈಸೂರನ್ನಳಿದು ಮಹಾ ಕರ್ನಾಟಕವಿಲ್ಲ' ಎಂದು 'ನಾಡಿ' ಪತ್ರಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ಮೈಸೂರಿಗೆ ಈ ಲಾಭವಿದೆ ಎಂದು ಬರೆದಿದ್ದಾರೆ, (೧) 'ಕೈಗಾರಿಕೆಗಳ ಕ್ಷೇತ್ರದಲ್ಲಿ ಮುಂದಿರುವ ಮೈಸೂರು ತನ್ನ ಬಂಡವಾಳವನ್ನು ತೊಡಗಿಸುವದಕ್ಕೆ ಇನ್ನೊಂದು ಕನ್ನಡ ಪ್ರದೇಶವು ಸಿದ್ಧವಿರುವದು (೨) ಹೊಸ ಸರಕಾರ ರಚಿಸುವಾಗ ತಕ್ಕ ಅಧಿಕಾರಿಗಳ ಪಡೆ ಬೇಕಾಗುವದು. ಮೈಸೂರು ಈಗಾಗಲೇ ಭಾರತದಲ್ಲಿ ಹಲವು ಕಡೆ ಸಮರ್ಥ ಅಧಿಕಾರಿಗಳನ್ನು ಕಳುಹಿಸಿ ಕನ್ನಡದ ಹೆಸರನ್ನು ಹೊಳಗಿಸಿದೆ. ಮಹಾ ಕರ್ನಾಟಕ ನಿರ್ಮಾಣದಲ್ಲಿ ಮೈಸೂರು ತನ್ನ ಆಡಳಿತ ಲಾಭವನ್ನು ಹೊಂದಬಹುದು. (೩) ಮೈಸೂರು ಸೇರಿದ ಮಹಾ ಕರ್ನಾಟಕವು ಭಾರತದ ಪ್ರಥಮ ಶ್ರೇಣಿಯ ಪ್ರಾಂತಗಳಲ್ಲೊಂದಾಗುವದು. ಇದು ಮೈಸೂರಿನವರಿಗೂ ಸ್ವಹಿತವೆಯಲ್ಲವೇ? (೪) ಮೈಸೂರಿನೊಳಗೊಂಡ ಕರ್ನಾಟಕ ಪ್ರಾಂತವಾದರೆ ಬೆಂಗಳೂರು ರಾಜಧಾನಿಯೂಗುವ ಸಂಭವ ಹೆಚ್ಚಿದೆ. ಇದರ ಪ್ರಯೋಜನ ಮೈಸೂರಿನವರಿಗೆಷ್ಟೆಂದು ವಿವರಿಸಬೇಕಾಗಿಲ್ಲ' ಈ ರೀತಿಯಲ್ಲಿ ಬರೆದಿರುವರು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣ ಸಮಾವೇಶದಲ್ಲಿ ಭಾಷಣ ಮಾಡುತ್ತಾ ಪ್ರಭಿಸಿದ್ದರಲ್ಲ 'ಮೈಸೂರಿನ ಜನರು ಸ್ವಇಚ್ಛೆಯಿಂದ ಕರ್ನಾಟಕದ ಗವರ್ನರರಾಗಿ ಹೆಸರು ಪಡೆಯಲಿಕ್ಕೆ ತಮ್ಮ ಸಿರಿವಂತಿಕೆಯನ್ನು ಕರ್ನಾಟಕದ ಸೇವೆಗೆ ಅರ್ಪಿಸಿದ್ದಾರೆ. ಇಂಥಾವರಿಗೆ ಮೈಸೂರು ಸಂಸ್ಥಾನವನ್ನು ಕನ್ನಡಿನ ಸಂಪತ್ತಿವೃದ್ಧಿಗಾಗಿ ಅರ್ಪಿಸಿ ಕೋರಿಸಿ ಪ್ರಜಾರಿ ನಡೆದಿದೆ. ಆದ್ದರಿಂದ ಕರ್ನಾಟಕ ಏಕೀಕರಣ ಪ್ರಯತ್ನವನ್ನೆ ಇನ್ನೂ ಜಟಿಲವಾಗಿಯೇ ಇದೆ. ಕರ್ನಾಟಕ ಏಕೀಕರಣ ಮಹಾ ಸಮಿತಿಯ ಅಧ್ಯಕ್ಷರಾದ ಶ್ರೀ. ಜನರಾಜ ಜೈನ್‌ರವರು ತಮ್ಮೊಂದು ಲೇಖನದಲ್ಲಿ ತಮ್ಮ ನಿರೀಕ್ಷೆಯನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. 'ಮೈಸೂರು ಹೊಸ ಕರ್ನಾಟಕ ಪ್ರಾಂತವಲ್ಲಿ ಸೇರಲಿ, ಸೇರದಿರಲಿ ಇತರ ಭಾಗಗಳನ್ನು ಒಂದುಗೂಡಿಸಲು ತೊಂದರೆ ಇಲ್ಲ. ಏನಿದ್ದರೂ ಕರ್ನಾಟಕ ಏಕೀಕರಣ ಕಾರ್ಯವನ್ನು ಮೈಸೂರಿನ ಸೋದರಿಕೆಗಾಗಿ ವಿಳಂಬಮೊದಲಾಗದು. ಮೈಸೂರು ಸ್ವತಂತ್ರ ಸಂಸ್ಥಾನವಾಗಿ ಉಳಿಯಲು ಬಲ್ಲಾದಾದರೆ ಕರ್ನಾಟಕದ ಇತರ ಭಾಗಗಳು ಒಮ್ಮೆಗೂಡಿ ಒಂದು ಸ್ವತಂತ್ರ ಪ್ರಾಂತವಾಗಲು ಬಲ್ಲುದು.'

ಒಟ್ಟಿಗೆ ಹೇಳುವದಾದರೆ ಮೈಸೂರು ಕರ್ನಾಟಕ ಏಕೀಕರಣಕ್ಕೆ ಒಪ್ಪದೇಕಿದ್ದರೆ ಕನ್ನಡಿಗರೆಲ್ಲರು ಮೈಸೂರು ಜನರನ್ನು ತಮ್ಮ 'ಅಳುವ ಮಹಾಸ್ವಾಮಿ'ಯಾಗಿ ಒಪ್ಪಬೇಕು! ಇಲ್ಲವೇ ಮೈಸೂರನ್ನು ಬಿಟ್ಟು ಇತರ ಭಾಗಗಳು ಒಂದಾಗಿ ಪ್ರಾಂತರಚನೆಯೊಗಬೇಕು. ಹೀಗಾದರೆ ಅಂದು ಕಂಡ ಹೊಂಗನಸಿನ ಕರ್ನಾಟಕ ಏಕೀಕರಣದ ಮಹಾಗೋಪುರವು ಮೈಸೂರಿನ 'ರಾಜಪಕ್ಷಿ'ಯಿಂದ ಹುಟ್ಟಿಯೊಗುವದು. ಇಲ್ಲವೇ ಮೈಸೂರು ಮಹಾರಾಜರ ಬೆಳ್ಗೊಡೆಯ ನೆರಳಿನಲ್ಲಿ ಸೇರುವದು. ೨೦ನೇ ಶತಮಾನದ ಪ್ರಜಾಪ್ರಭುತ್ವ ನೀತಿಗನುಗುಣ ಕನ್ನಡಿನವರು ವರ್ತಿಸುವ ಎದೆಗಾರಿಕೆ ತೋರದಿರೆ ಕರ್ನಾಟಕದ ಕ್ರಾಂತಿಯು ರಕ್ತರಂಜಿತ ಪಥದಲ್ಲಿ ನಡೆಯುವೇಕಾಗುವದು. ರಾಜರ ಗದ್ದುಗೆ ಮುಕುಟಗಳು ನೆಲವನ್ನು ಮುಟ್ಟಿಕ್ಕಬೇಕಾಗುವದು. ಆದರೆ ಇದು ದೂರದ ಮಾತು.

---

ಯೇ ಕನ್ನಡ ಸಾಹಿತ್ಯ ಪರಿಷತ್ತಿನ ಇಂದಿನ ಅಧ್ಯಕ್ಷರಾದ ಶ್ರೀ ಮಾಸಿ ವೆಂಕಟೇಶ ಐಯ್ಯಂಗಾರರು 'ಮೈಸೂರೇತರ ಕನ್ನಡಿಗರು ಕೆಲವರು ಮೈಸೂರಿನ ಅರಸರ ಮೂತನ್ನು ದೊಡ್ಡದು ಮಾಡಿ 'ಕನ್ಯೂಸಿಷ್ಟ್' ಕಲ್ಪನೆಯಿಂದ ಬಹುಶಃ ಮೋಸಿರಂಗಿನ ಮಗೆ ಅರಸರು ಬಂದ ಎನ್ನುತ್ತಾರೆ ಅರಸರು ಬೇಡ ಎನ್ನುವದು ನಿರಿಲ್ಲ! ಮೈಸೂರಿನ ಅರಸರು ಮೈಸೂರಿಗೆ ಅರಸಾಗಿ ಇತರ ಕರ್ನಾಟಕಕ್ಕೆ ಗವರ್ನರರಾಗಿ ಏಕೆ ಇರಬಾರದು?' ಎಂದು ಕೇಳಿದ್ದಾರೆ. ಈ ವಿಚಾರ ಮೈಸೂರಿನವರೇ ಆದ ನಿಜಲಿಂಗಪ್ಪನವರಿಗೂ ಇತರರಿಗೂ ತಿಳಿದೇ ಇದೆ. ಯಾವದೇ ರೀತಿಯಿಂದ ಮೈಸೂರು ರತ್ನ ಸಿಂಹಾಸನವನ್ನು ಉಳಿಸಿದ್ದರೆ ಮೈಸೂರು ಏಕೀಕರಣಕ್ಕೆ ಭಾಗಿಯಾಗುವ ಮೂಲ ಬಹು ದೂರ ಉಳಿಯುವದೆಂದು ಜನರಿಗೆ ಗೊತ್ತಿದೆ. ಆದ್ದರಿಂದಲೇ ಪ್ರಜಾಸ್ವಭುತ್ವ ತತ್ವದ ಕೊಲೆ ಮಾಡಿಯಾದರೂ ಮಹಾರಾಜರನ್ನು ಕರ್ನಾಟಕದ 'ಬಾಯಿಲ್' ಗವರ್ನರರಾಗಿ ಮಾಡುವ ಇವರ ಹಂಬಲ!

ಆದರೆ ಮೈಸೂರೇತರ ಕನ್ನಡಿಗರಿಗೆ ರಾಜರ ಬೆಳ್ಗೊಡೆಯ ಆಶ್ರಯ ಬೇಕಿಲ್ಲ. ಅವರು ಸ್ವಪ್ರಯತ್ನದಿಂದ ತಮ್ಮ ನಿರೋಧ ವಸಿಸಿದ್ದಾರೆ. ಇಂಥಾವರಿಗೆ ಮೈಸೂರು ಸಂಸ್ಥಾನ ಕನ್ನಡಿನ ಸಂಪತ್ತಿವೃದ್ಧಿಗಾಗಿ ಅರ್ಪಿಸಿ ಕೋರಿಸಿ ಪ್ರಜಾರಿ ನಡೆದಿದೆ. ಆದ್ದರಿಂದ ಕರ್ನಾಟಕ ಏಕೀಕರಣ ಪ್ರಯತ್ನವನ್ನೆ ಇನ್ನೂ ಜಟಿಲವಾಗಿಯೇ ಇದೆ. ಕರ್ನಾಟಕ ಏಕೀಕರಣ ಮಹಾ ಸಮಿತಿಯ ಅಧ್ಯಕ್ಷರಾದ ಶ್ರೀ. ಜನರಾಜ ಜೈನ್‌ರವರು ತಮ್ಮೊಂದು ಲೇಖನದಲ್ಲಿ ತಮ್ಮ ನಿರೀಕ್ಷೆಯನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. 'ಮೈಸೂರು ಹೊಸ ಕರ್ನಾಟಕ ಪ್ರಾಂತವಲ್ಲಿ ಸೇರಲಿ, ಸೇರದಿರಲಿ ಇತರ ಭಾಗಗಳನ್ನು ಒಂದುಗೂಡಿಸಲು ತೊಂದರೆ ಇಲ್ಲ. ಏನಿದ್ದರೂ ಕರ್ನಾಟಕ ಏಕೀಕರಣ ಕಾರ್ಯವನ್ನು ಮೈಸೂರಿನ ಸೋದರಿಕೆಗಾಗಿ ವಿಳಂಬಮೊದಲಾಗದು. ಮೈಸೂರು ಸ್ವತಂತ್ರ ಸಂಸ್ಥಾನವಾಗಿ ಉಳಿಯಲು ಬಲ್ಲಾದಾದರೆ ಕರ್ನಾಟಕದ ಇತರ ಭಾಗಗಳು ಒಮ್ಮೆಗೂಡಿ ಒಂದು ಸ್ವತಂತ್ರ ಪ್ರಾಂತವಾಗಲು ಬಲ್ಲುದು.'

ಒಟ್ಟಿಗೆ ಹೇಳುವದಾದರೆ ಮೈಸೂರು ಕರ್ನಾಟಕ ಏಕೀಕರಣಕ್ಕೆ ಒಪ್ಪದೇಕಿದ್ದರೆ ಕನ್ನಡಿಗರೆಲ್ಲರು ಮೈಸೂರು ಜನರನ್ನು ತಮ್ಮ 'ಅಳುವ ಮಹಾಸ್ವಾಮಿ'ಯಾಗಿ ಒಪ್ಪಬೇಕು! ಇಲ್ಲವೇ ಮೈಸೂರನ್ನು ಬಿಟ್ಟು ಇತರ ಭಾಗಗಳು ಒಂದಾಗಿ ಪ್ರಾಂತರಚನೆಯೊಗಬೇಕು. ಹೀಗಾದರೆ ಅಂದು ಕಂಡ ಹೊಂಗನಸಿನ ಕರ್ನಾಟಕ ಏಕೀಕರಣದ ಮಹಾಗೋಪುರವು ಮೈಸೂರಿನ 'ರಾಜಪಕ್ಷಿ'ಯಿಂದ ಹುಟ್ಟಿಯೊಗುವದು. ಇಲ್ಲವೇ ಮೈಸೂರು ಮಹಾರಾಜರ ಬೆಳ್ಗೊಡೆಯ ನೆರಳಿನಲ್ಲಿ ಸೇರುವದು. ೨೦ನೇ ಶತಮಾನದ ಪ್ರಜಾಪ್ರಭುತ್ವ ನೀತಿಗನುಗುಣ ಕನ್ನಡಿನವರು ವರ್ತಿಸುವ ಎದೆಗಾರಿಕೆ ತೋರದಿರೆ ಕರ್ನಾಟಕದ ಕ್ರಾಂತಿಯು ರಕ್ತರಂಜಿತ ಪಥದಲ್ಲಿ ನಡೆಯುವೇಕಾಗುವದು. ರಾಜರ ಗದ್ದುಗೆ ಮುಕುಟಗಳು ನೆಲವನ್ನು ಮುಟ್ಟಿಕ್ಕಬೇಕಾಗುವದು. ಆದರೆ ಇದು ದೂರದ ಮಾತು.

# ಕೊಡಗು

ತಾ ೨೩-೪-೧೯೪೮ನೇ ಶುಕ್ರವಾರ

## ರಾಜ್ಯಪುನರ್ರಚನೆಯೂ ಚೀಫ್ ಕಮಿಷನರ ಪ್ರಾಂತಗಳೂ.

ಈಗ ಪ್ರಕಟವಾಗಿರುವ ಕರಡು ರಾಜ್ಯಾಂಗದಲ್ಲಿ ಚೀಫ್ ಕಮಿಷನರ ಪ್ರಾಂತಗಳಿಗೆ ಸಂಬಂಧಿಸಿದ ಧೋರಣವನ್ನು ವಾಚಕರು ಅವಗಾಹನೆಗಾಗಿ ಬೇರೊಂದೆಡೆ ಕೊಡಲಾಗಿದೆ. ಸಮಗ್ರ ತೋರಿ ಬರುವಂತೆ ಈ ಸಂಬಂಧನೆಗಳಲ್ಲಿ ಕೆಲವು ನ್ಯೂನತೆಗಳಿವೆ

ಹಿಂದೂದೇಶಕ್ಕೆ ಹೊಸ ರಾಜ್ಯಪುನರ್ರಚನೆಯನ್ನು ತಯಾರಿಸುವ ದೃಷ್ಟಿಯಿಂದ ರಾಜ್ಯ ಪುನರ್ರಚನಾ ಸಭೆಯು ಕೆಲಸ ಪ್ರಾರಂಭಿಸಿಬಿಡಬೇಕೆಂಬ ಕೇಂದ್ರದ ರಾಜ್ಯಪುನರ್ರಚನೆಯ ಮೂಲತತ್ವಗಳನ್ನು ನಿರೂಪಿಸಿಲ ಕೇಂದ್ರ ಪರಿಷತ್ತು ಸಮಿತಿಯೊಂದನ್ನೂ, ಪ್ರಾಂತಗಳ ಮಾದರಿ ಪುನರ್ರಚನೆಯನ್ನು ರಚಿಸಲು ಹಿಂದ ಅಖಿಲಭಾರತೀಯ ರಾಜ್ಯಪುನರ್ರಚನಾ ಸಮಿತಿಯನ್ನೂ ಹೀಗೆ ಎರಡು ಸಮಿತಿಗಳನ್ನು ಆರಿಸಿತ. ಈ ಎರಡೂ ಸಮಿತಿಗಳು ಕೇಂದ್ರದ ಮೂಲ ಪ್ರಾಂತಭಾವೀ ರಾಜ್ಯಾಂಗಗಳ ರಚನೆಯ ಮೂಲತತ್ವಗಳನ್ನು ತಯಾರಿಸಿ ರಾಜ್ಯಪುನರ್ರಚನಾ ಸಭೆಗೆ ಒಪ್ಪಿಸಿವೆ ತ್ರಿವೇಂದ್ರಂ ಸಭೆಯಲ್ಲಿ ಚರ್ಚೆಯಾಗುತ್ತಿರುವ ಕೊಲ್ಲಕ್ಕೆ ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಆ ವರೆಗೆ ಯಾವುದೇ ಹೊಸ ರಚನೆಯ ವಿಚಾರ ತೋರಿ ಬಾರದ ಕಾರಣ ಈ ಪ್ರಾಂತಗಳ ಪ್ರತಿನಿಧಿಗಳ ಆಗ್ರಹದಂತೆ ಚೀಫ್ ಕಮಿಷನರ್ ಪ್ರಾಂತಗಳಿಗೆ ಯೂನಿಯನ್ ರೀತಿಯ ಘಟನೆಯನ್ನು ತಯಾರಿಸಬೇಕೆಂಬ ಮೂಲ ತತ್ವಗಳನ್ನು ನಿರೂಪಿಸಲು ಒಂದು ಸಮಿತಿಯನ್ನು ರಚಿಸಿದರು ಈ ಸಮಿತಿಯು ತನ್ನ ವರದಿಯನ್ನು ತಯಾರಿಸಿ ರಾಜ್ಯಪುನರ್ರಚನಾ ಸಮಿತಿಯು ಪ್ರಸಿಡೆಂಟರಿಗೆ ಕಳುಹಿಸಿದೆ. ಅದು ಮಾರುವ ಹಂತಕ್ಕೆ ಮೇ ತಾ ೧೫ರಿಂದ ಪ್ರಾರಂಭವಾಗುವ ರಾಜ್ಯಪುನರ್ರಚನಾ ಸಭೆಯ ಮುಂದ ಬರಲಿದೆ

ಈ ವೈರಾಜ್ಯಪುನರ್ರಚನೆಯಿಮುಂಚೆ ಬಂದ ಕೇಂದ್ರ ಮತ್ತು ಪ್ರಾಂತೀಕ ಮೂಲ ಪುನರ್ರಚನೆಗಳ ಮೂಲತತ್ವಗಳನ್ನು ತಿದ್ದುಪಡಿಯಿಂದ ಪರಿಷತ್ತಿನಲ್ಲಿ ಒಪ್ಪಿಸಿದ್ದಂದೋದೇಶವಭಾವೀ ರಾಜ್ಯಪುನರ್ರಚನೆಯನ್ನು ಆ ತಳಹದಿಯಿಂದ ರಚಿಸಲು 'ಡ್ರಾಫ್ಟಿಂಗ್' ಸಮಿತಿಯನ್ನು ಆರಿಸಿತ. ಈ ಸಮಿತಿಯು ರಾಜ್ಯಪುನರ್ರಚನಾಸಭೆಯು ಒಪ್ಪಿದ ಕೇಂದ್ರ ಮತ್ತು ಪ್ರಾಂತೀಯ ಘಟನೆಗಳನ್ನು ತಯಾರಿಸುವ ಅಧಿಕಾರವನ್ನು ಪಡೆದಿತ್ತು ಕಾರಣ ಇನ್ನೂ ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ನೇಮಿಸಲ್ಪಟ್ಟ ಸಮಿತಿಯ ವರದಿಯನ್ನು ರಾಜ್ಯಪುನರ್ರಚನಾ ಸಭೆಯು ಪರಿಶೀಲಿಸಿ ಅಂತಿಮ, ಈ 'ಡ್ರಾಫ್ಟಿಂಗ್' ಸಮಿತಿಯು ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿರುವುದು ಸಮಂಜಸವಲ್ಲ. ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ನೇಮಿಸಲ್ಪಟ್ಟ ಸಮಿತಿಯಿಂದ ಸೂಚಿತವಾದ ವರದಿಯನ್ನು ಪರಿಶೀಲಿಸಿ ರಾಜ್ಯಪುನರ್ರಚನಾ ಸಭೆಯು ಅವರ ಮೇಲೆ ಮಾಡಬಹುದಾದ ತಿದ್ದುಪಡಿಗಳ ನಂತರ 'ಡ್ರಾಫ್ಟಿಂಗ್' ಸಮಿತಿಯು ಈ ಪ್ರಾಂತಗಳ ಬಗ್ಗೆ ನಿಬಂಧನೆಗಳನ್ನು ತಯಾರಿಸಬೇಕಿತ್ತು ಈ ನ್ಯೂನತೆಯನ್ನು ರಾಜ್ಯಪುನರ್ರಚನಾ ಸಭೆಯು ಪ್ರತಿನಿಧಿಗಳು, ಹಾಗೂ ಸಭೆಯುವರು ಸರಿಪಡಿಸುವರಾಗಿ ಆಶಿಸುತ್ತೇವೆ

ಇನಲ್ಲಿ ಮೊದಲನೇ ನಿಬಂಧನೆಯಲ್ಲಿ ಚೀಫ್ ಕಮಿಷನರ್ ಯೂ ಲಿಪ್ಟನೆಂಟ್ ಗವರ್ನರರಿಂದ ಆಡಳಿತ ನಡಸಲ್ಪಡುವ ಯಾವುದೇ 'ಚೀಫ್' ಕಮಿಷನರ ಪ್ರಾಂತಕ್ಕೆ ಸ್ಥಳೀಯ ಶಾಸನ ಸಭೆ, ಸಲಹೆಗಾರರ ಸಮಿತಿ ಇಲ್ಲವೇ ಎರಡನ್ನೂ, ಯೋಗ್ಯ ಅಧಿಕಾರಗಳೊಡನೆ ಪ್ರೆಸಿಡೆಂಟರು ವಿಧಿಸಿಬಹುದೆಂದಿದೆ, ಆದರೆ ಖಂಡ (೧) ನಿಬಂಧನೆಯ ಅಡಿ ಇದೇ ಭಾಗಗಳು ಗವರ್ನರ್ ಯೂ ನೇರವಾಗಿ ರಾಜರಿಂದ ಆಳಲ್ಪಡುವ ದರೆಯೂ ಇದೇ ಸುಧಾರಣೆಯು ಮೂತಿಲ್ಲ ಬಂಧಾ ಸಂದರ್ಭದಲ್ಲಿ ಯಾವ ರೀತಿ ಆಡಳಿತ ನಡೆಯಬಹುದು ಎಂಬುದೂ ಸೂಚಿತವಾಗಿಲ್ಲ ಆದರೆ ಇದು ನಿಬಂಧನೆಗಳ ಕೆಳಗೆ ಕೊಟ್ಟ ಟಿಪ್ಪಣಿಯಲ್ಲಿ 'ಚೀಫ್' ಕಮಿಷನರ್ ಪ್ರಾಂತಗಳ ಸಮಿತಿಯು ವಿಸ್ತಾರವಾದ ಸಲಹೆಗಳನ್ನು ಪಟ್ಟನೆಯಲ್ಲಿ ತೋರಿವ ಅಸಹ್ಯಕತೆಯಿಲ್ಲ, ಆದರೆ ಇದು ವಿಚಾರಣೀಯ. ಘಟನಾ ಸಭೆಯು ಒಪ್ಪಿದರೆ ಸೈಸಿದಂತೆಯೇ ಅಪುಗಳನ್ನು ಜಾರಿಗೆ ತರುವ ಅಧಿಕಾರವು ಜನತೆಯಲ್ಲಿದೆಯೆಂಬುದೇಳಲ್ಪಟ್ಟಿದೆ. ಇದು ಒಂದಕ್ಕೊಂದು ವಿರುದ್ಧವಿರುವಂತೆ ತೋರುತ್ತದೆ ಏತಕ್ಕೆಂದರೆ ಈ ಮತ್ತು ಈ ನಿಬಂಧನೆಗಳಲ್ಲಿ ತೋರಿಸಿರುವಂತೆ ಸೈಸಿದೆಂಬರೆ ಯಾವ ರೀತಿ ಆಡಳಿತವಿರ್ಪಾಡು ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚಿಸಿರುವಲ್ಲಿ ಚೀಫ್ ಕಮಿಷನರ್ ಪ್ರಾಂತಕ್ಕೆ ನೇಮಿಸಿದ ಸಮಿತಿಯ ತಿದ್ದುಪಡಿಗಳನ್ನು ಪ್ರಜೆಗಳ ಅಭಿಪ್ರಾಯವನ್ನು ಸೂಚಿಸಲು ಅನುಕೂಲವಾಗುತ್ತಿತ್ತು ಆದರೂ ಕೂಡ ಈಗ ತಿಳಿದುಬಂದಿರುವ ಪುಟ್ಟಗೆ 'ಎಡ್‌ಹಾಕ್' ಸಮಿತಿಯು ಶಿಪಾರಸ್ಸುಗಳ ಮೇರೆ ಈ ಪ್ರಾಂತಗಳಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವ ಸಾಧ್ಯತೆ ಇರುವುದರಿಂದ ಇವುಗಳಿಗೆ ಜನತೆಯ ಬೆಂಬಲವು ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲ

ಕೊಡಗಿನ ಜನರು ಸ್ವರಾಜ್ಯದ ಹೋರಾಟಗಳಲ್ಲಿ ಬೇರೆ ಭಾಗದ ಪ್ರದೇಶಕ್ಕಿಂತ ಹಿಂದೆ ಬಿದ್ದಿರಲಿಲ್ಲ ಇತ್ತ ಭಾಗಗಳ ಜನತೆಯವರೂ ಸ್ವರಾಜ್ಯದ ಕನಸ್ಸನ್ನು ಸಂಪಾದಿಸಿರುವರು ಆದ್ದರಿಂದ ಸಮಾಜಾರಿಗಳನ್ನು ಏನಾಗಿಸ್ಸು ಮಾಡಿರುವ 'ಎಡ್‌ಹಾಕ್' ಸಮಿತಿಯು ಸಲಹೆಗಳನ್ನು ಹೊಂದಾಣಿಕೆಯೊಂದು ಜನತೆಯು ಈ ಬಗ್ಗೆ ಜಾಗ್ರತೆಯಿಲ್ಲದೆ ಇರಲಾಗದು.

## ವರ್ಗಾವಣೆ.

ಹೊಸ ಹೈಸ್ಕೂಲುಗಳನ್ನು ಸರಕಾರ ತೆರೆಯುತ್ತಿರುವುದರಿಂದ ಇವರಿಗೆ ಶ್ರೀ ರ ಮಟ್ಟಿರನ್ನ ಪೊನ್ನಂಪೇಟೆ ಹೈಸ್ಕೂಲಿಗೂ, ಶ್ರೀ ಪಟ್ಟಡ ಉತ್ತಪ್ಪನವರನ್ನು ನಾಪೋಕ್ಲು ಹೈಸ್ಕೂಲಿಗೂ, ಶ್ರೀ ಕಂಬಿರಂಡ ನಿತ್ತಣ್ಣನವರನ್ನು ಸೋಮವಾರಪೇಟೆ ಹೈಸ್ಕೂಲಿಗೂ ಮುಖ್ಯೋಪಾಧ್ಯಾಯರಾಗಿ ನೇಮಿಸಿರುವರು

ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಪಿ ಪಿ ಉತ್ತಯ್ಯನವರು ತಾರೀಕು ೧೬-೪-೪೮ರಿಂದ ನಾಲ್ಕು ತಿಂಗಳ ರಜೆಯಲ್ಲಿರುವುದರಿಂದ ಅವರ ಬದಲು ಜಿಲ್ಲಾ ವಿದ್ಯಾಧಿಕಾರಿಯಾಗಿ ಶ್ರೀ ಬಿ ಎಸ್ ಕಾಶಾಲಪ್ಪನವರನ್ನು ನೇಮಿಸಿರುವರು. ಈ ರಜಾ ಅವಧಿಯಲ್ಲಿ ಪೊನ್ನಂಪೇಟೆ ಹೈಸ್ಕೂಲಿನ ಕಾರ್ಯಾಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಶ್ರೀರಾಮ ಭಟ್ಟರು ಮಡಿಕೇರಿ ಹೈಸ್ಕೂಲು ಮುಖ್ಯೋಪಾಧ್ಯಾಯರಾಗಿಯೂ ಶ್ರೀ ಮಾಚಿಮಂಡ ಚಿಂಗಪ್ಪನವರು ಪೊನ್ನಂಪೇಟೆ ಹೈಸ್ಕೂಲು ಹೆಡ್‌ಮಾಸ್ಟರಾಗಿಯೂ ಕೆಲಸ ಮಾಡುವರು

ನ್ಯಾಯ ಶಾಸನ ಸಭೆಯು ಒರುವ ಅಕ್ಟೋಬರ್ ತಿಂಗಳ ಸಭೆಯ ನಂತರ ಕೊಡಗಿನಲ್ಲಿ ವಾನ ನಿರೋಧವನ್ನು ಜಾರಿಗೆ ತರುವ ಯೋಚನೆಯನ್ನು ಸರಕಾರವು ಮಾಡುತ್ತಿರುವುದಾಗಿ ತಿಳಿಯ ಬಂದಿದೆ

ಕೊಡಗಿನ ದೇವಸ್ಥಾನಗಳಿಗೆ ಹರಿಜನರ ಪ್ರವೇಶಕ್ಕೆ ಅನುಮತಿಯ ಮಸೂದೆಯೊಂದನ್ನು ಜಾರಿಯಲ್ಲಿ ತರುವ ವಿಚಾರ ಮಾಡುತ್ತಿದೆಯಂತಾ.

ಈ ತಾ. ೧೯-೪ರಲ್ಲಿ ಜನರಲ್ ಪರ್ಪಸ್ ಕಮಿಟಿಯು ವಿಟ್ಟಂಗೊಂದು ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು. ಕಟ್ಟಡಗಳ ಬಾಡಿಗೆಯನ್ನು ನಿಯಂತ್ರಣ ಮಾಡುವ ವಿಷಯ, ಪೈಸ್ಕೂಲು ಕಿಟ್ಟಿಂಗಳ ಬಿಂಪನ್ನು ಪ್ರಾಪ್ತಿಸುವ ವರ್ಷ ತರುವ ವಿಷಯವೂ, ಕಾಫಿಗೆ ನಿಷ್ಪಾಪಿಸಿದ ಧನವನ್ನು ಆದಷ್ಟು ಬೇಗನೆ ಜಿಲ್ಲೆಗೆ ಕೊಡುವ ವಿಷಯ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಸೇರ್ಪಡೆ ನಿರ್ಣಯವಾಯಿತು

ಕಳೆದ ಎರಡು ವರ್ಷಗಳಿಂದ ಜೋರಾಗಿ ನಡೆಯುತ್ತಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಕಾಲೆಂಬರ್ಸಿನಲ್ಲಿ ಬೆಂಬಲಿಸಿದ್ದ ಶ್ರೀ ಚಾರ್ಟರ್ಡ್ ಅಕೌಂಟೆಂಟ್ ಯಜ್ಞಾಧಿಪತಿಯವರ ಪತ್ನಿಯಾದ ಶ್ರೀಮತಿ ಪದ್ಮಾವತಮ್ಮನವರು ಉತ್ತರ ಕರ್ನಾಟಕದಲ್ಲಿ ಕೇಳಗಡೆ ಹೆಂಗಸರಿಗಾಗಿ ತೆರೆಯಲ್ಪಟ್ಟ ಶೌಚಾಲಯವನ್ನು ಉದ್ಘಾಟಿಸಿದರು.

## WANTED.

*From 1st June 1948*

*A Secondary grade trained teacher on an Intermediate or Rs 50 5-75 (Higher start to qualified man). Apply so as to reach before 7-5-48 Applicants have to appear in person if called for.*

*Apply to*

President,
Hithur Sports Club,
H B School, Hithur,
Gonicoppal Coorg

## NOTICE.

*A seat has been reserved in the first year class of the B V Sc degree course in the Veterinary College, Madras for students from Coorg during the 1948 49 academic year Applications from qualified candidates desiring nomination for the said seat should be made in the prescribed form, which can be obtained from the office of the Chief Commissioner of Coorg, so as to reach the Chief Commissioner not later than the 1st may 1948 Applications received after that date will not be considered*

*The minimum general educational qualification required of applicants is a pass in the intermediate Examination in Arts and Science of the Madras University with either Chemistry or Natural Science as one of the optional subjects or an Examination accepted as equivalent there to by the Syndicate of the Madras University*

*Further particulars may be obtained from the office of the Chief Commissioner of Coorg on any working day during office hours.*

K A. AYANNA,
*For Chief Commissioner.*

# ಭಾರತದ ಭಾವೀ ರಾಜ್ಯಪಟ್ಟನೆ.

## ॥ ಚೀಫ್ ಕಮಿಷನರ್ ಪ್ರಾಂತಗಳ ಭವಿಷ್ಯ ॥

ಭಾರತ ರಾಜ್ಯಘಟನಾ ಸಭೆಯ ಸಮಿತಿಯು ಹಿಂದೂದೇಶದ ಭವಿಷ್ಯ ರಾಜ್ಯಘಟನೆಯ ಕರಡನ್ನು ತಯಾರಿಸಿ ಆ ಬಗ್ಗೆ ಜನಾಭಿಪ್ರಾಯಕ್ಕಾಗಿ ಇತ್ತೀಚೆಗೆ ಪ್ರಕಟಿಸಿರುವರು ಆದರಲ್ಲಿ ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಯಾವ ರೀತಿಯ ಏರ್ಪಾಡಿಗೆಯೆಂಬುದನ್ನು ವಾಚಕರ ಅವಗಾಹನೆಗೆ ಇಲ್ಲಿಕೊಡಲಾಗಿದೆ

ಹಿಂದೂದೇಶಗ ಭವಿಷ್ಯ ರಾಜ್ಯರಚನೆಯನ್ನು ರಚಿಸಿದ್ದು—ಶ್ರೀಗಳಾದ ಡಾ ಅಂಬೇಡ್ಕರ್ (ಅಧ್ಯಕ್ಷ), ಎಸ್ ಗೋಪಾಲಸ್ವಾಮಿ ಐಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಐಯ್ಯರ್, ಕೆ ಎಂ ಮುನ್ಷಿ, ಸಯ್ಯದ್ ಮಹಮ್ಮದ್ ಸಾದುಲ್ಲಾ, ಎನ್ ಮಾಧವರಾವ್ ಮತ್ತು ಡಿ. ಪಿ ಕೈತಾನ್‌ರವರುಂದ ಕೂಡಿದ ರಾಜ್ಯಘಟನಾ ಸಭೆಯು ಉಪಸಮಿತಿಯೊಂದಾಗಿದೆ

ಈ ಕರಡು ಸಿದ್ಧ ಸೂಚನೆಗಳನ್ನು ರಾಜ್ಯಘಟನಾ ಸಭೆಯ ಅಧ್ಯಕ್ಷರಿಗೆ ಒಪ್ಪಿಸುತ್ತಾ 'ಡ್ರಾಫ್ಟಿಂಗ್' ಸಮಿತಿಯ ಅಧ್ಯಕ್ಷರಾದ ಡಾ ಅಂಬೇಡ್ಕರ್ ರವರು ತಮ್ಮ ಪತ್ರದಲ್ಲಿ ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಈ ರೀತಿ ಹೇಳಿದ್ದಾರೆ

**ಕೇಂದ್ರದಿಂದ ಆತಂತ್ರತೆ ನಡೆಸಲ್ಪಡುವ ಭಾಗಗಳು**

'ರಾಜ್ಯಘಟನಾ ಸಮಿತಿಯು ಒಂದು ರಾಜ್ಯಸ್ಥಿತಿಯ ನಿಯಮ (ರಾಜ್ಯಘಟನಾ ಸಮಿತಿಯ ಅಧ್ಯಕ್ಷರ) ಪ್ರಕಾರ, ಕೂರ್ಗ, ಅಜಮೀರ್ ಮೀರ್ವಾರ, ಕೊಡಗ, ಸಂತಾಪಿಲ್ಲೋಡು, ಮತ್ತು ಅಂಡಮಾನ್ ನಿಕೋಬರ್ ದ್ವೀಪ, ಇವುಗಳಿಂದ ಆಡಳಿತ ನಡಸಲ್ಪಡುವ ಈ ಭಾಗಗಳಲ್ಲಿ ಶಾಸನಾತ್ಮಕ ಬದಲಾವಣೆಗಳನ್ನು ಸೂಚಿಸಲು ವಿಶೇಷ ಜನರಿಂದ ಕೂಡಿರುವ ಒಂದು ಸಮಿತಿಯನ್ನು ನೇಮಿಸಿದರಿ ಈ ಸಮಿತಿಯು ತಮ್ಮ ವರದಿಯನ್ನು ೨೧-೧೧-೧೯೪೭ ನಿಮಗೆ ಒಪ್ಪಿಸಿದೆ

ಈ ಸಮಿತಿಯು ತಮ್ಮ ಮುಖ್ಯ ಸೂಚನೆಗಳು ಸೂಕ್ಷ್ಮದಲ್ಲಿ ಹೀಗಿವೆ.

(೧) ದೆಲ್ಲಿ, ಅಜಮೀರ್‌ಮೇರವಾರ ವಹ್ಯ ಕೊಡಗು ಇವು ಪ್ರತಿಯೊಂದಕ್ಕೆ ಹಿಂದೂದೇಶದ ಪ್ರಸಿಡೆಂಬರಿಂಗ ನಾಮಕವಾದ ಒಬ್ಬೊಬ್ಬ ಲೆಫ್ಟಿನೆಂಟ್ ಗವರ್ನರ ರಿರಬೇಕು.

(೨) ಶಾಸನ ಸಭೆಗೆ ಜವಾಬ್ದಾರಿವಾದ ಮಂತ್ರಿ ಮಂಡಳಿಯಿಂದ ಈ ಪ್ರಾಂತಗಳ ಆಡಳಿತ ನಡಯಬೇಕು

(೩) ಈ ಪ್ರತಿಯೊಂದು ಪ್ರಾಂತಕ್ಕೆ ಒಂದೊಂದು ಚಿನ್ನಾಯಿತ ಶಾಸನಸಭೆ ಇರಬೇಕು

ಪಂತಪಿಲ್ಲೋಡದ ಬಗ್ಗೆ ಅದನ್ನು ಅಜಮೀರ್ ಮೀರ್‌ವಾರಕ್ಕೆ ಸೇರಿಸಿಬಿಡಬೇಕೆಂದೂ, ಅಂಡಮಾನ್ ನಿಕೋಬರ್ ದ್ವೀಪಗಳು ಕೇಂದ್ರದಿಂದ ಅವಶ್ಯವೆಂದು ತೋರುವ ಬದಲಾವಣೆಗಳಿಂದ ಈಗಿನಂತೆಯೇ ಆಳಲ್ಪಡಬೇಕೆಂದೂ ಅಂದರೆ ಈ ದ್ವೀಪಗಳ ಚೀಫ್ ಕಮಿಶನರ ಪ್ರಾತಿನಿಧಿಗಾರಿರಬೇಕೆಂದೂ ಈ ಸಮಿತಿಯು ಸಿಫಾರಸು ಮಾಡಿದೆ ಈ ಸಮಿತಿಯಲ್ಲಿ ಅಜಮೀರ್ ಮೀರ್‌ವಾರದ ಪ್ರತಿನಿಧಿಯಾದ ಸದಸ್ಯರು ಮತ್ತು ಕೊಡಗಿನ ಪ್ರತಿನಿಧಿಯಾದ ಸದಸ್ಯರು ಈ ವರದಿಗೆ ತಮ್ಮ ತೊಂದು ಸೂಚನೆಯನ್ನು ಸೇರಿಸಿ, ಅದರಲ್ಲಿ ಈ ಭಾಗಗಳ ಚಿಕ್ಕತನ, ಭೌಗೋಳಿಕ ಸ್ಥಿತಿ ಮತ್ತು ಕಡಿಮೆ ಆದಾಯದ ಕಾರಣ ಉದ್ದವಾಗಬಲ್ಲ ವಿಶೇಷ ಸಮಸ್ಯೆಗಳಿಂದ ಈ ಪ್ರತಿಯೊಂದು ಭಾಗವನ್ನು ನೆರೆಯ ದೊಡ್ಡ ಪ್ರದೇಶದೊಡನೆ ಸೇರಿಸುವ ಅವಶ್ಯಕತೆಯ ಕ್ಲಿಷ್ಟವಲ್ಲಿಯೇ ಆಗಬಹುದೆಂದು ಸೂಚಿಸಿ, ಈ ಕಾರಣ ಸಂಬಂಧಿಸಿದ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು (ಈ ಸಂಯೋಜನೆ) ಸಾಧ್ಯವಾಗುವಂತೆ ರಾಜ್ಯಪಟ್ಟನೆಯ ವಿಶೇಷ ಅನುವನ್ನು ಮಾಡಬೇಕೆಂಬ ಅಭಿಪ್ರಾಯವನ್ನು ಒತ್ತಿ ತಿಳಿಸಿರುವರಿ

ಜೆಲ್ಲಿಯ ಬಗ್ಗೆ ಅದು ಹಿಂದೂದೇಶದ ಮುಖ್ಯ ಪಟ್ಟಣವಾಗಿರುವುದರಿಂದ ಸ್ಥಳೀಯ ಆಡಳಿತದ ಕೈಕೆಳಗಿಡುವುದು ಯೋಗ್ಯವಿಲ್ಲವೆಂದು ಸಮಿತಿಯ ಅಭಿಪ್ರಾಯವಿದೆ ಸಂಯುಕ್ತ ಅಸೆಂಬ್ಲಿಕಾರ್ಯಲ್ಲಿ, ಸರಕಾರದ ಮುಖ್ಯ ಸ್ಥಾನದ ಬಗ್ಗೆ ಕಂಗ್ರೆಸು (ಅಮೇರಿಕಾದ ಶಾಸನ ಸಭೆ) ತನ್ನ ಪ್ರತ್ಯೇಕವಾದ ಶಾಸನ ಅಧಿಕಾರವನ್ನು ಉಪಯೋಗಿಸುತ್ತದೆ ಹಾಗೆಯೇ ಆಸ್ಟ್ರೇಲಿಯದಲ್ಲಿಯೂ ಕೂಡ. ಆದ್ದರಿಂದ ಈ ಎಡೆಹಾಕ್ ಸಮಿತಿಯು ಸೂಚಿಸಿದ ಯೋಜನೆಗಿಂತಾ ವಿಸ್ತೃತವಾದ ಯೋಜನೆಯು ಸೂಕ್ತವೆಂದು 'ಡ್ರಾಫ್ಟಿಂಗ್' ಸಮಿತಿಯು ತೀರ್ಮಾನಕ್ಕೆ ಒಂದಿದೆ ಇದರಂತೆ ಈ ಕೇಂದ್ರದಿಂದ ಆಳಲ್ಪಡುವ ಭಾಗಗಳು ಇಂಡಿಯಾ ಸರಕಾರದಿಂದ ಒಬ್ಬ ಚೀಫ್ ಕಮಿಷನರ, ಇಲ್ಲವೇ ಲೆಫ್ಟಿನೆಂಟ್ ಗವರ್ನರರ, ಇಲ್ಲವೇ ಗವರ್ನರರು, ಇಲ್ಲವೇ ನೆರೆಯ ಸಂಸ್ಥಾನದ ರಾಜರ ಮೂಲಕ ಆಳಲ್ಪಡಬಹುದೆಂದು ಈ ಸಮಿತಿಯು ಸೂಚಿಸಿದೆ ಯಾವುದೇ ಒಂದು ನಿರ್ದಿಷ್ಟ ಪ್ರಾಂತದ ಬಗ್ಗೆ ಏನು ಮಾಡಬೇಕೆಂಬುದನ್ನು ಪ್ರೆಸಿಡೆಂಟರು ತಮ್ಮ ಅಪ್ಪಣೆಯಂತೆ ವಿಧಿಸಬಹುದು ಆದರೆ ಇವರಲ್ಲಿ, ಇತರ ವಿಷಯಗಳಲ್ಲಂತೆ, ಜವಾಬ್ದಾರಿಯುತ ಮಂತ್ರಿಗಳ ಸಲಹೆಯಂತೆ ವರ್ತಿಸುವರು. ಆದರು ಹಾಗ ಸಲಹೆ ಕೊಡಲ್ಪಟ್ಟರೆ, ಜೆಲ್ಲಿಯನ್ನು ಒಬ್ಬ ಲೆಫ್ಟಿನೆಂಟ್ ಗವರ್ನರರು, ಹಾಗೆ ಸಲಹೆ ದೊರೆತರೆ ಕೊಡಗನ್ನು ಮದ್ರಾಸು ಗವರ್ನರರು ಯ ಮೈಸೂರು ಆರಸರ ಮೂಲಕ ಕೊಡಗಿನ ಜನತೆಯ ಅಭಿಪ್ರಾಯವನ್ನು ತಿಳಿದು ಆಡಳಿತ ನಡೆಸಬಹುದು ಇವರು (ಪ್ರೆಸಿಡೆಂಟರು) ತನ್ನ ಅಪ್ಪಣೆಯಿಂದ ಸ್ಥಳೀಯ ಶಾಸನ ಸಭೆಯನ್ನು ಇಲ್ಲವೇ ಸಲಹೆಗಾರರ ಸಮಿತಿಯನ್ನು ಅವುಗಳಿಗೆ ಅಸ್ತಿತ್ವದಲ್ಲಿ ವಿಧಿಸಲ್ಪಡದ ಅವಶ್ಯಕ ಘಟನೆ, ಅಧಿಕಾರ, ಆಡಳಿತ ವಿಧಿಗಳೊಡನೆ ರಚಿಸಬಹುದು ಇದು ಸಂಬಂಧಿಸಿದ ಭಾಗಗಳ ವಿವಿಧ ಅವಶ್ಯಕತೆಗನುಗುಣವಾಗಿ ಅಳವಡಿಸಿಕೊಳ್ಳಬಹುದಾದ ಯೋಗ್ಯ ಮಾರ್ಗವೆಂದು 'ಡ್ರಾಫ್ಟಿಂಗ್' ಸಮಿತಿಗೆ ತೋರುತ್ತದೆ'

* * *

ಕರಡು ರಾಜ್ಯಘಟನೆಯಲ್ಲಿ ಚೀಫ್ ಕಮಿಷನರ ಪ್ರಾಂತಗಳ ಬಗ್ಗೆ ಈ ರೀತಿ ಇದೆ

ಭಾಗ ೭

ಟಿಪ್ಪಣಿ (೧) ಈ ಭಾಗದ ಇತರ ಪರತೆಂಗಳಗೊಳಪಟ್ಟ ಪ್ರದೇಶ ಕೆಡ್ಯೂಲಿನ ಎರಡನೇ ಭಾಗದಲ್ಲಿ ತತ್ಕಾಲಕ್ಕೆ ಪರಿಶೀಕರಿಸಿರ ನಂದ ಸಂಸ್ಥಾನವು(ಚಿಕ ಪ್ರಾಂತ) ಪ್ರೆಸಿಡೆಂಟರಿಂದ ತಿವರಿಗ ಯುಕ್ತ ತೋರುವ ರೀತಿ ಆಳರಿಂದ ನಿಯುಕ್ತ ಮಾಡಲ್ಪಡುವ ಒಬ್ಬ ಚೀಫ್ ಕಮಿಷನರ ಮೂಲಕ ಆಡಳಿತ ನಡೆಸಲ್ಪಡಬೇಕು

ಪ್ರೆಸಿಡೆಂಟರು ಗವರ್ನರರ ಯೂ ನೆರೆ ಸಂಸ್ಥಾನದ ಅರಸರ ಸಲಹೆಯ ಮೂಲಕ ಕಾರ್ಯ ನಡೆಸುವ ಮೊದಲು—

(೧) ಸಂಬಂಧಪಟ್ಟ ಗವರ್ನರ ಯೂ ರ ಅಭಿಪ್ರಾಯ ತೆಗೆಯಬೇಕು

(b) ಆ ರೀತಿ ಆಳಲ್ಪಡುವ ಪ್ರಾಂತದ ಜನರ ಅಭಿಪ್ರಾಯ ವನ್ನು ಪ್ರೆಡೆಂಟರಿಗೆ ಹೇಳುವ ಸೂಕ್ತವೆಂದು ತೋರುವ ರೀತಿ ತಿಳಿಯಬೇಕು

* * *

ಟಿಪ್ಪಣಿ ಪ್ರೆಸಿಡೆಂಟರು ಪ್ರಥಮ ಕೆಡ್ಯೂಲಿನ ಎರಡನೇ ಭಾಗದಲ್ಲಿ ಸೂಚಿತವಾಗಿರುವ ಮತ್ತು ಚೀಫ್ ಕಮಿಷನರ್ ಇಲ್ಲವೇ ಲೆಫ್ಟಿನೆಂಟ್ ಗವರ್ನರರಿಂದ ಆಡಳಿತ ನಡೆಸಲ್ಪಡುವ ಯಾವದೇ ಪ್ರಾಂತಕ್ಕೆ

(a) ಸ್ಥಳೀಯ ಶಾಸನ ಸಭೆ ಅಥವಾ

(b) ಸಲಹೆಗಾರರ ಸಮಿತಿ ಇಲ್ಲವೇ ಎಡೆಹಾಕ್, ಪ್ರತಿಯೊಂದು ಪ್ರಾಂತಕ್ಕೆ ಬೇಕಾದ ಘಟನೆ, ಅಧಿಕಾರ ಮತ್ತು ಆಡಳಿತ ಕ್ರಮಗಳನ್ನೊಳಗೊಂಡ ತಮ್ಮ ಅಪ್ಪಣೆಯಿಂದ ರಚಿಸಬಹುದು ಇಲ್ಲವೇ ಇದ್ದುದನ್ನು ಮಾರ್ಪಡಿಸಬಹುದು

ಟಿಪ್ಪಣಿ ಪ್ರೆಸಿಡೆಂಟರಿಂದ ಈ ಬಗ್ಗೆ ಬೇರೆ ಏರ್ಪಾಡುಗಳು ಮಾಡಲ್ಪಡುವ ವರೆಗೆ ಕೊಡಗು ನ್ಯಾಯ ಶಾಸನ ಸಭೆಯ ರಚನೆ, ಅಧಿಕಾರ, ಮತ್ತು ಕಾರ್ಯಗಳೂ ಕೊಡಗಿನಲ್ಲಿ ಬರುವ ಆದಾಯ ಮತ್ತು ಖರ್ಚುಗಳಿಗೆ ಸಂಬಂಧ ಪಟ್ಟ ಏರ್ಪಾಡುಗಳು ಬದಲಾವಣೆ ಹೊಂದದೆ ಉಳಿಯುವವು

ಟಿಪ್ಪಣಿ.—ಪ್ರಥಮ ಕೆಡ್ಯೂಲಿನ ಎರಡನೆ ಭಾಗದಲ್ಲಿ ವಿವರಿಸಿರುವ ಪ್ರಾಂತಗಳ ಚೀಫ್ ಕಮಿಷನರ್ ಪ್ರಾಂತಗಳ-ಬಗ್ಗೆ ಎಡ್‌ಹಾಕ್ ಸಮಿತಿಯು ತಮ್ಮ ಶಿಫಾರಸ್ಸಿನಲ್ಲಿ ಸೂಚಿಸಿದ ವಿವರವಾದ ಏರ್ಪಾಡುಗಳನ್ನು ಮಾಡುವದು ಅನಾವಶ್ಯವೆಂದು ಈ ಕಮಿಟಿಯ ಅಭಿಪ್ರಾಯವಾಗಿದೆ ಈ ಭಾಗದಲ್ಲಿ ಸೂಚಿತವಾದ ಪರಿಷ್ಕೃತ ವ್ಯವಸ್ಥೆಗಳು ಎಡ್‌ಹಾಕ್ ಸಮಿತಿಯು ಸೂಚಿಸಿದ ರಾಜ್ಯಘಟನಾ ಸಭೆಯಿಂದ ಒಪ್ಪಲ್ಪಟ್ಟರೆ, ಪ್ರೆಸಿಡೆಂಟರು ಆವಗಳನ್ನು ತಮ್ಮ ಆಪ್ಪಣೆಯಿಂದ ಜಾರಿಗೆ ತರುವ ತನಮೂಡುವರ

## ಗಾಂಧೀಜಿಗೆ ನೋಬೆಲ್ ಬಹುಮಾನ.

ನೊರ್ವೆಜಿಯನ್ ನೊಬೆಲ್ ಪಾರಿತೋಷಕ ಕವಿಬಿಯವರು, 'ಶಾಂತಿ' ಯ ಹೆಸರಲ್ಲಿ ಕೊಡಲಿಟ್ಟಿರುವ ಪಾರಿತೋಷಕಕ್ಕೆ ಹವಿನೇಟು ಹೆಸರುಗಳನ್ನು ಆಲೋಚಿಸಿದ್ದರೆಂದೂ, ಆ ಸೃಕ್ತಿ ಗಾಂಧೀಜಿಯವರ ಹೆಸರೂ ಒಂದಾಗಿತ್ತೆಂದೂ ಈಗತಾನೆ ಪ್ರಕಟವಾಗಿದೆ (ಇತರ ಹೆಸರುಗಳಲ್ಲಿ, ರಷ್ಯದ ಸ್ಟಾಲಿನ್, ಮೊಲೊಟೊವ್, ಇಟೇಲಿಯ ಪೋಪ್ ಮಹಾಸ್ವಾಮಿ, ಮೊದಲಾದವು ಇದ್ದುವು) ಶಾಂತಿಗಾಗಿ ಯತ್ನಿಸಿದವರಲ್ಲಿ ಬುದ್ಧನ ನಂತರ ಇತಿಹಾಸದಲ್ಲಿ ಗಾಂಧಿಜಿಯವರ ಹೆಸರೇ ಪ್ರಧಾನವಾಗಿ ನನಗೆ ತೋರುತ್ತದೆ.ಆದರೂ, ಪಾಶ್ಚಿಮಾತ್ಯರು ಈ ವಿಷಯವನ್ನು ನೋಡುವ ದೃಷ್ಟಿಯು ಪ್ರತ್ಯೇಕವೇ ಇದೆ ಹಿಂದಿಯರಾದರೆ, ತಂತಿಯತ್ನಕ್ಕಾಗಿ ಪಾರಿತೋಷಕವೆನ್ನುತ್ತಲೆ ಹಬನೆಂಟು ಹೆಸರಗಾನ್ನೆತ್ತಿದ ಗಾಂಧಿಜಿಯೊಬ್ಬರನ್ನೇ ಆರಿಸುತ್ತಿದ್ದರು

## ಹಿಂದುಗಳ ನಿರ್ಗಮನ.

ಹೈದರಾಬಾದ ದಿನಿಂದ ಹಿಂದೂಗಳು, ಪುನಃ, ಇಂಡಿಯನ್ ಯೂನಿಯನಿಗೆ ಹೋಗುತ್ತಿರುವುದು ಇತ್ತೀಚೆಗೆ ಕಂಡುಬಂದಿದೆ ಕೆಲವ ನವಂಬರ್ ತಿಂಗಳಲ್ಲಿ, ಇ ಸ್ಪೋಹಾದ್ ಉಲ್ ಮುಸ್ಲಿಮೀನರ ಚಟುವಟಿಕೆಗಳು ಹೆಚ್ಚಲು, ಹಿಂದೂಗಳು ಸಾವಿರ ಗಟ್ಟಲೆಯಲ್ಲಿ ಹೊರಟಿದ್ದರಂತೆ ಇಂಡಿಯಾ ಸರಕಾರ ಮತ್ತು ಹೈದರಾಬಾದ್ ಸರಕಾರಗಳೊಳಗೆ ಒಡಂಬಡಿಕೆಯು ಮಾತುಕತೆಗಳಾಗಲಿಲ್ಲವೆಂಬಲಾಗಲು, ನಿರ್ಗಮನವು ನಿಂತಂತಿತ್ತು ಈಗ ರಜುಕಾರರ ಚಟುವಟಿಕೆಗಳು ಹೆಚ್ಚಿವೆ ಮೊನ್ನೆ ರಜುಕಾರರು ಸಶಸ್ತ್ರರಾಗಿ ಹೈದರಾಬಾದ್ ಮತ್ತು ಸಿಕಂದರಾಬಾದಲ್ಲಿ ಪ್ರದರ್ಶನಗಳನ್ನು ನಡಸಿದರು ಸಯ್ಯದ್ ಕಾಸ್ಮಿ ರಾಸ್ತಿಯವರು, ರಣವಾದ ಮೂಡಿ, ಭಾಷಣಕೊಟ್ಟರು. ಹಿಂದೂಗಳಲ್ಲಿ ದಿಗಿಲುಂಟಾಗಿದೆ


## FOR SALE

A good strong house with electric lights and a fine drawing room and spacious other rooms with a out-hose and a well with fine water etc in the best locality of Mercara, very near Civil Hospital and Fort Offers of Rs. 25000/ or near considered. Apply to

X
C/o. "KODAGU"
Mercara.
2-2

# ಗಾಂಧಿ ಸ್ಮಾರಕ ನಿಧಿ.

## — ರಾಷ್ಟ್ರಪತಿಗಳ ಪ್ರಕಟಣೆ —

ಮಹಾತ್ಮಾಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಜನರಿಗೆ ಆದರಲ್ಲಿಯೂ ವಿಶೇಷವಾಗಿ ಬಡವರಿಗೆ ಹಾಗೂ ಜನ ಸಾಮಾನ್ಯರಿಗೆ ನಿರಂತರವಾಗಿ ಹಿತಕಾರಿಯಾಗುವ ಕಾರ್ಯಗಳಿಗಾಗಿ ವಿನಿಯೋಗಿಸಲಾಗುವುದೆಂದು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ಅವರ ಮೂಲಕ ವಿವರವನ್ನು ಇಲ್ಲಿ ಕೊಡಲಾಗಿದೆ.

'ಗಾಂಧಿ ನಿಧಿಯ ಬಹು ಭಾಗವನ್ನು ಅಂದರೆ ಸುಮಾರು ೩/೪ ಅಂಶವನ್ನು ಅದು ಯಾವ ಪ್ರಾಂತ್ಯಲ್ಲಿ ಕೂಡಿತೋ ಅಲ್ಲಿ ವಿನಿಯೋಗಿಸಲಾಗುವದು. ಉಳಿದ ಕಾಲಾಂಶವು ಕೇಂದ್ರನಿಧಿಗೆ ಹೋಗುವದು. ಈ ಹಣದಿಂದ ಹಿಂದುಳಿದ ಪ್ರದೇಶಗಳಿಗೆ ಸಹಾಯ ಸಲ್ಲಿಸಲ್ಪಡುವದ .

ನಿಧಿಯ ಉದ್ದೇಶವು ಎರಡು ಬಗೆಯದಿದೆ. ಗಾಂಧಿಜಿಯವರ ವಿಧಾಯಕ ಕಾರ್ಯಕ್ರಮವನ್ನು ಮುಂದೆ ಸಾಗಿಸುವದು ಮೊದಲನೆಯದು. ಅವರ ಬರಹ ಮತ್ತು ಭಾಷಣಗಳನ್ನು ಜೇರೆ ಜೇರೆ ಭಾಷೆಗಳಲ್ಲಿ ಪ್ರಸಿದ್ಧಿಸುವುದು ಎಂಡನೆಯದು. ಮೊದಲನೆಯದಕ್ಕೆ ವಿಶೇಷ ಹಣ ಬೇಕಾದುದರಿಂದ ವಿಧಾಯಕ ಕಾರ್ಯಕ್ರಮಗಳಿಗಾಗಿ ಮಹಾತ್ಮರು ಹಾಕಿಕೊಟ್ಟ ರೂಪರೇಷೆಗನುಗುಣವಾಗುವಂತೆ ನಿಧಿಯು ಬಹುಭಾಗವನ್ನು ವೆಚ್ಚಮಾಡಲಾಗುವದು. ವಿಧಾಯಕ ಕಾರ್ಯಕ್ರಮವನ್ನು ಕುರಿತು ಮಹಾತ್ಮರು ತಮ್ಮ ಬರವಣಿಗೆಯಲ್ಲಿ ವಿಶದೀಕರಿಸಿರುವರು. ಅದರ ಯೋಜನೆ ಬಹಳ ವಿಶಾಲವಾಗಿದೆ. ಅದರಲ್ಲಿ ಅನೇಕ ವಿಷಯಗಳನ್ನು ಹೇಳಿದ್ದರೂ ಪಟ್ಟಿಯು ಅಷ್ಟಕ್ಕೆ ಪೂರ್ಣವಾಗುವದಿಲ್ಲ. ಅದರಲ್ಲಿ ಬೇರೆ ವಿಷಯಗಳನ್ನು ಸೇರಿಸಬಹುದು. ಜನಸಾಮಾನ್ಯರ ಉದ್ಧಾರವೇ ವಿಧಾಯಕ ಕಾರ್ಯಕ್ರಮದ ಗುರಿ. ಶಿಕ್ಷಣಿಕ ಕಾರ್ಯ, ಹಳ್ಳಿಗಳ ಅಭಿವೃದ್ಧಿ, ಗೃಹೋದ್ಯೋಗಗಳು, ಹಿಂದುಳಿದ ವರ್ಗಗಳಲ್ಲಿ ಕಾರ್ಯ, ಹಿಂದುಳಿದ ಜನಾಂಗಗಳ ಹರಿಜನರ ಮತ್ತು ಸ್ತ್ರೀಯರ ಉದ್ಧಾರ ಮೊದಲಾದವುಗಳು ಅದರ ಅಂಗಗಳಾಗಿವೆ. ಯಾವದೇ ಸಾಮಾಜಿಕ ಕಾರ್ಯವೂ ಅದರ ಅಂಗವಾಗಬಲ್ಲುದು.

ಆದರೆ ಪುತ್ಥಳಿ, ಕಟ್ಟಡ, ರಸ್ತೆ ಇವುಗಳ ಮೂಲಕ ಮಹಾತ್ಮರ ಸ್ಮಾರಕ ಕಟ್ಟಬಾರದೆಂದು ನಿರ್ದಿಷ್ಟ ನಿರ್ಧಾರವಾಗಿದೆ.

ನಿಧಿ ಸಂಗ್ರಹದ ಸಂಘಟನೆಗಾಗಿ ನಾನು ಬಂಗಾಳ ಪ್ರಾಂತಕ್ಕೆ ಬಂದಿದ್ದೇನೆ. ಎಲ್ಲ ಪ್ರಾಂತಗಳ ಹಾಗೂ ಸಂಸ್ಥಾನಗಳ ಸಮಿತಿಗಳು ಕಾರ್ಯ ಪ್ರಾರಂಭಿಸಿದೊಡನೆ ಅವು ಒಂದು ಕೇಂದ್ರ ಸಮಿತಿಯನ್ನು ರಚಿಸಿಕೊಳ್ಳುವವು. ಅದು ಎಲ್ಲರ ಪ್ರಾತಿನಿಧ್ಯ ಪುಳ್ಳ ಒಂದು ಧರ್ಮದರ್ಶಿ ಮಂಡಳವನ್ನು ನೇಮಿಸುವದು. ಈ ಮಂಡಲದಿಂದ ನೇಮಿಸಲ್ಪಟ್ಟ ವ್ಯವಸ್ಥಾಪಕ ಮಂಡಲವು ನಿಧಿಯ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುವುದು. ಹೊಸ ಕೇಂದ್ರ ಸಮಿತಿಯು ರಚಿಸಲ್ಪಟ್ಟ ಬಳಿಕ ಸದ್ಯದ ಕೇಂದ್ರ ಸಮಿತಿಯ ಕಾರ್ಯ ಮುಗಿದಂತೆ ಆಗುವದು.

ನಿಧಿಗೆ ನಾವು ಇಂತಿಷ್ಟೇ ಹಣ ಕೂಡಿಸಬೇಕೆಂಬ ಗುರಿಯಿಟ್ಟುಕೊಂಡಿಲ್ಲ. ಆದರೆ ನ್ಯಕ್ಕೆಗಳು ಎನ್ನು ಹಣ ಕೊಡಬೇಕೆಂಬುದನ್ನು ಮಾತ್ರ ಸೂಚಿಸಿದ್ದೇನೆ. ೧೦ ದಿನದ ಆದಾಯವನ್ನು ಪ್ರತಿಯೊಬ್ಬನು ಕೊಡಬೇಕೆಂದು ಹೇಳಿದ್ದೇವೆ. ಒಮ್ಮೆಲೆ ಹತ್ತು ದಿನದ ಆದಾಯವನ್ನು ಕೊಡಲು ಅಸಾಧ್ಯವೆನಿಸಿದ ಪಕ್ಷದಲ್ಲಿ ಸುಲಭವೆನಿಸಿದ ಕಂತುಗಳಲ್ಲಿ ಅದನ್ನು ಕೊಡಬಹುದು.

ಮಹಾತ್ಮರ ಜನ್ಮದಿನ ಶ್ರಾದ್ಧದ (೩೦-೧-೪೮) ಒಳಗೆ ನಿಧಿ ಸಂಗ್ರಹದ ಕಾರ್ಯ ನಡೆಯಬೇಕೆಂದು ನನಗನಿಸುತ್ತದೆ.

ಈ ಅವಧಿಯಲ್ಲಿ ಪ್ರತಿಯೊಬ್ಬರು ೧೦ ದಿನದ ತಮ್ಮ ಆದಾಯವನ್ನು ನಿಧಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಿಧಿಗೆ ಸಹಾಯವನ್ನೂಡಬೇಕೆಂದು ನಾನು ಭಾರತದ ಹೊರಗಿನವರಿಗೆ ಬಿನ್ನವಿಸಿಕೊಂಡಿಲ್ಲ. ಆದರೆ ಹೊರಗಿನವರು ಕೊಡಬಹುದು. ವಿದೇಶವಲ್ಲಿದ್ದವರಿಗೆ ನಾನು ಬಿನ್ನವಿಸಿಲ್ಲವಾದರೂ ಕೆಲವು ಕಡೆ ನಿಧಿ ಸಂಗ್ರಹ ನಡೆದಿದೆ ಎಂದು ವರದಿ ಬಂದಿದೆ. ಇಮ ಸ್ಥಾನಿಕ ಉದ್ದೇಶಗಳಿಗಾಗಿ ಇರಬಹುದು.'

---

**ಚಾಕ್ಷಿ.**

### ಕೊಡಗಿನಲ್ಲೇನು ?

ಭಾರತೀಯರೆಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದ ಮಹತ್ಮಾಜೀಯವರ ಸ್ಮಾರಕರಕ್ಷಣೆಗಾಗಿ ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಧನ ಸಂಗ್ರಹವು ಬಿರುಸಾಗಿ ನಡೆಯುತ್ತಿದೆ. ಅದರಲ್ಲೂ ಈ 7ನೇದ 13ರ ವರೆಗೆ ನಡೆದ ರಾಷ್ಟ್ರೀಯ ವಾರವಲ್ಲಿ, ರಾಷ್ಟ್ರಪತಿಯವರ ವಿನಂತಿಯಂತೆ ಈ ಧನ ಸಂಗ್ರಹವು ಬಹು ಉತ್ಸಾಹದಿಂದ ನಡೆಯಿತು. ಹಲವು ಮುನ್ಸಿಪಾಲಿಟಿಗಳು ತಮ್ಮ ತಮ್ಮ ಸ್ಥಳೀಯ ಸ್ಮಾರಕಗಳನ್ನು ನಿರ್ಮಿಸಲು ಉತ್ಸುಕತೆಯಿಂದ ಕೆಲಸ ಜರುಗಿಸುತ್ತಿವೆ. ಆದರೆ ಕೊಡಗಿನ ದುರಾದೃಷ್ಟವನ್ನು ನಾನು ಏನೆಂತ ಹೇಳಲಿ? ಇಲ್ಲಿಯ ಮುನ್ಸಿಪಾಲಿಟಿಗಳಾಗಲೀ ಯಾ, ಕಾಂಗ್ರೆಸ್ ಕೆಲಸಗಾರರಾಗಲೀ ಅಥವ ಸಾರ್ವಜನಿಕ ಕೆಲಸಗಾರರಾಗಲೀ ಈ ವಿಚಾರದಲ್ಲಿ ಏನು ಮಾಡುತ್ತಿಗುವರು?

'ಕೊಡಗು' ಪತ್ರಿಕೆಯು ಒಂದು ಸಂಚಿಕೆಯಲ್ಲಿ ಈ ಧನ ಸಂಗ್ರಹಕ್ಕೆ ಅಭಿಯಾನ ಮಾಡುತ್ತಾ ಇದಕ್ಕಾಗಿ ಇಲ್ಲಿಯೂ ಕೂಡ ಒಂದು ಸಮಿತಿಯೂಗಿದೆಯೆಂದು ಪ್ರಕಟವಾಗಿತ್ತು. ಈ ಸಮಿತಿಯವರು ಯಾರೆಂದೂ, ಇವರನ್ನು ಆರಿಸಿದವರು, ಯಾ ನೇಮಿಸಿದವರು ಯಾರೆಂದೂ, ಗೊತ್ತಾಗಿರುವುದಿಲ್ಲ. ಇದೇನು, ಗುಟ್ಟಿನ ಸಮಿತಿಯೊ! ಇವರು ಇಷ್ಟರ ವರೆಗೆ ಯಾರನ್ನೂ ಚಂದ ಕೇಳಿದ ವರ್ತಮಾನವಿಲ್ಲ.

ಇಲ್ಲವೇನೋ, ಸುಮಾರು ಒಂದು ತಿಂಗಳ ಹಿಂದೆ ಕೆಲವು ಕಾಂಗ್ರೆಸ್ ಕೆಲಸಗಾರರು ಮಡಿಕೇರಿಯಲ್ಲಿ ಸೇರಿ ಒಂದು ಸಮಿತಿಯನ್ನು ಏರ್ಪಡಿಸಿದರೆಂದು ಸುದ್ದಿ ಹೊರಟಿತ್ತು. 'ಕೊಡಗು' ಪತ್ರಿಕೆಯಲ್ಲಿ ಸೂಚಿಸಿದ ಸಮಿತಿಯು ಇದೇ ಸಮಿತಿಯಾಗಿರಬಹುದೇ! ಹಾಗಾಗಿದ್ದರೆ ಕೊಡಗಿನ ಎಲ್ಲಾ ಆಧಿನ ಹೆಚ್ಚಿನ ಕಾಂಗ್ರೆಸ್ ಕೆಲಸಗಾರರನ್ನು ಸೇರಿಸುವ ಪ್ರಯತ್ನವು ನಡೆದಿದ್ದಿತ್ತೇ! ಮಿಟಿಂಗಿಗೆ ನೋಟೀಸು ಕೊಡಲಾಗಿತ್ತೇ? ಅಂಧಾ ನೋಟೀಸಿನಲ್ಲಿ ಗಾಂಧಿ ಸ್ಮಾರಕ ನಿಧಿ ಕಮಿಟಿಯು ಏರ್ಪಾಡಿನ ವಿಷಯ ಸೂಚಿಸಲಾಗಿತ್ತೊ? ಇದು ಯಾವುದೂ ಮಾಡದೆ, ಬರೀ ಕೆಲವು ಜನರು ಸೇರಿ, ಅದರಲ್ಲೂ ರಾಜಕೀಯ ಅಭಿವ್ಯಾಯದಲ್ಲಿ ಒಂದು ಪಕ್ಷದವರು ಮಾತ್ರ ಸೇರಿ ಕಮಿಟಿಯನ್ನು ನಿರ್ಪಡಿಸಿದ್ದರೆ ಅಂಧಾ ಕಮಿಟಿಯ ಮೇಲೆ ಜನತೆಗೆ ವಿಶ್ವಾಸವಾದರೂ ಹುಟ್ಟುವುದು ಹೇಗೆ? ಅದರಲ್ಲೂ ಸದರಿ ಸಮಿತಿಯಲ್ಲಿ ಗಾಂಧಿಜೀಯವರ ತತ್ವ ಯಾವುದನ್ನೂ ಪರಿವಾಲಿಸದ, ಖಾದಿ ಉಟ್ಟರೆ ಮೈ ಸುಡುವುದೆಂದೂ, ನಿಶಾಸೇವಿಸದಿದ್ದರೆ ಮಲೇರಿಯ ಪೀಡಿಸುವುದೆಂದೂ, ಹೊಡೆಯು ಮೇಲೆ ನಾಯಿ ಕೂತರೂ ಹರಿಜನರು ಮನೆಯ ಸುರಲೊಳಗೆ ಬರಕೂಡದೆಂದೂ, ಅಹಿಂಸಾತತ್ವವು ಹೇಡಿಗಳ ಆಯುಧವೆಂದೂ, ಹೇಳುವವರು ಸದಸ್ಯರಾಗಿದ್ದರೆ ಜನತೆಯು ಅವರಿಗೆ ಚಂದಾವನ್ನು ಹೇಗೆ ತಾನೆ ಸಲ್ಲಿಸುವದು!

ಈ ನಿಧಿಗೆ ಪಾರ್ಟಿಪಂಗಡವೆಣಿಸದೆ ಸರ್ವರೂ ಗಾಂಧಿಜಿಯವರಿಗಾಗಿ ತಮ್ಮ ಕಾಣಿಕೆಯನ್ನು ಅರ್ಪಿಸಲು ಸಿದ್ಧರಿರುವ ಕಾಲಕ್ಕೆ ಸಾರ್ವಜನಿಕ ಸಭೆಗಳನ್ನು ಸೇರಿಸಿ ಸಮಿತಿಯ ಮೆಂಬರುಗಳನ್ನು ಆರಿಸುವುದು ಯೋಗ್ಯವಾಗಿತ್ತಲ್ಲವೇ! ಗಾಂಧಿಜೀಯವರು ಬರೀ ಕಾಂಗ್ರೆಸಿಗರ ಮುಂದಾಳು ಮಾತ್ರವಲ್ಲ, ಸರ್ವ ಜನತೆಯ ಪೂಜ್ಯ ಮೂರ್ತಿಗಳು ಆಗಿರುವಾಗ್ಗೆ ಈ ನಿಧಿಯ ಸಂಗ್ರಹ ಸಮಿತಿಯ ಆಯ್ಕೆಯಲ್ಲಿ ಸರ್ವರಿಗೂ ಅವಕಾಶವಿಬಾರದೇ!

ಒಂದು ವೇಳೆ ಗಾಂಧಿಜೀಯವರ ತತ್ವವನ್ನು ಪರಿವಾಲಿಸುವವರೇ ಈ ಸಮಿತಿಯಲ್ಲಿರಬೇಕೆನ್ನುವುದಾದರೆ ಅವರ ತತ್ವಗಳಿಗೆ ವಿರುದ್ಧ ಇರುವವರನ್ನು ಸೇರಿಸಲು ಕಾರಣವೇನು? ಮಾತ್ರವಲ್ಲ, ಮೊನ್ನೆ ತಾನೇ ಮಡಿಕೇರಿಯಲ್ಲಿ ಈ ಸಮಿತಿಯ ಮಿಟಿಂಗೊಂದನ್ನ ನಡಿಸಿ ಅದಕ್ಕೆ ಚೇರ್ಮ್ಯಾನ ಮಿಷನರನ್ನೂ, ಇತರ ಗಜಟೆಡ್ ಉದ್ಯೋಗಸ್ಥರನ್ನೂ ಕರಸಿಕೊಂಡು ಗಜಟೆಡ್ ಉದ್ಯೋಗಸ್ಥರೆಲ್ಲರನ್ನು ಸದರಿ ಸಮಿತಿಯ ಮೆಂಬರಾಗಿ ಸೇರಿಸಿಕೊಂಡಿರುವರೆಂದು ಸುದ್ದಿ ಹರಡಿದೆ. ಇದು ನಿಜವೇ? ಇದು ನಂಬಲೂ ಕೂಡ ಅಸಾಧ್ಯವಾದದಲ್ಲವೇ! ನಿಜವಾಗಿದ್ದರೆ, ಸಾರ್ವಜನಿಕರನ್ನು ಕೂಡ ಸೇರಿಸದೆ ಬರೀ ಒಂದು ಪಕ್ಷದ ಕಾಂಗ್ರೆಸ್ ಕೆಲಸಗಾರರು ಸೇರಿ ಮಾಡಿಕೊಂಡ ಸಮಿತಿಯಲ್ಲಿ ಸರ್ಕಾರಿ ಉದ್ಯೋಗಸ್ಥರನ್ನಾದರೂ ಸೇರಿಸಿಕೊಂಡದು ಯುಕ್ತವೇ? ಉದ್ಯೋಗಸ್ಥರಾದರೂ ಇದಕ್ಕೆ ಹೇಗೆ ಸೇರಿದರೋದು ಗೊತ್ತಾಗುವುದಿಲ್ಲ. ಯಾತಕ್ಕೆಂದರೆ-ಉದ್ಯೋಗಸ್ಥರು ಹಣ ಜಮಾಯಿಸಲು ಹೊರಟರೆ (ಯುದ್ಧ ನಿಧಿ ಸಂಗ್ರಹಕ್ಕೆ ಹೊರಟ ಕಾಲಕ್ಕೆ ಆದಂತೆ) ಒಂದು ರೀತಿಯ ಬಲತ್ಕಾರವೂ ಆಗುವುದರಲ್ಲಿ ಸಂದೇಹವಿಲ್ಲ. ಎಲ್ಲದಕ್ಕೆಂತಲೂ ಸರ್ವರ ಪ್ರೀತಿಗೆ ಪಾತ್ರರಾದ ಬಾಪೂಜಿಯವರ ಸ್ಮಾರಕ ನಿಧಿಗೆ ಅಪ್ರತ್ಯಕ್ಷ ಬಲಾತ್ಕಾರದಿಂದ ಸರಕಾರಿ ಉದ್ಯೋಗಸ್ಥರು ಧನ ಸಂಗ್ರಹಿಸುವುದು ಶೋಚನೀಯ ವಿಚಾರವಲ್ಲವೇ? ಒಂದು ವೇಳೆ ಸರ್ಕಾರಿ ಉದ್ಯೋಗಸ್ಥರು ಸಾರ್ವಜನಿಕರಿಂದ ಹಣ ಜಮಾಹಿಸಬಹುದೆಂದಾದರೆ ರಾಷ್ಟ್ರೀಯ ಸರ್ಕಾರವಾದ ಇಂಡಿಯೂ ಸರ್ಕಾರದವರು ಈ ಕಾರ್ಯವನ್ನು ಉದ್ಯೋಗಸ್ಥರ ಮೂಲಕವೇ ಮಾಡಿಸುತ್ತಿದ್ದರಲ್ಲವೇ? ಹಿಂದೂದೇಶದ ಬೇರೆ ಯಾವ ಕಡೆಗಳಲ್ಲೂ ಬಾಯಿಂ ಸರ್ಕಾರಿ ಉದ್ಯೋಗಸ್ಥರು ಇಂಥಾ ಸಮಿತಿಯಲ್ಲಿ ಸದಸ್ಯರಾಗಿರುವುದು ತಿಳಿದುಬಂದಿರುವುದಿಲ್ಲ. ಕಾಂಗ್ರೆಸು ಕೆಲಸಗಾರರ ಸಮಿತಿಗೆ ಧನ ಸಂಗ್ರಹವು ಸಾಧ್ಯವಿಲ್ಲವೆಂದು ಅವರು ಉದ್ಯೋಗಸ್ಥರ ಸಹಾಯವನ್ನು ಬೇಡಿರುವರೆ? ಇದು ನಿಜವಿದ್ದರೆ ಇದು ಯಾರಿಗೆ ಭೂಷಣ? ಇವೆಲ್ಲಾ ವಿಚಾರಗಳಿಗೆ ತಿಳಿದವರು ಉತ್ತರವಿಯವರಾಗಿ ಆಸಿಸುತ್ತೇನೆ.

ಕಡೆಗೆ ನನ್ನ ಒಂದು ಸೂಚನೆ:-ಗಾಂಧಿಜಿಯವರ ಪವಿತ್ರವಾದ ಪಾದಧೂಳಿನಿಂದ ಪಾವನಗೊಂಡ ಕೊಡಗಿನ ಪುತ್ರ ಪುತ್ರಿಯರಿಗೂ ಗಾಂಧಿಜಿಯವರ ಮೇಲೆ ಹೆಚ್ಚಿನ ಪೂಜ್ಯ ಭಾವವಿದೆ. ಅವರ ಸ್ಮಾರಕವನ್ನು ಸ್ಥಾಪಿಸಲು ಸರ್ವರೂ ಕುತೂಹಲರಾಗಿರುವರು. ಆದ ಕಾರಣ ಸದರಿ ಸ್ಮಾರಕದ ನಿರ್ಪಾಡಿನಲ್ಲಿ ಸರ್ವರಿಗೂ ಅವಕಾಶವನ್ನು ಕೊಡುವಂಥಾ, ಜನತೆಯ ವಿಶ್ವಾಸ ಪಡೆಯುವಂತ ಸಮಿತಿಯ ಆರಿಸುವಿಕೆಗೆ ಎಲ್ಲರೂ ಕೂಡಲೆ ಗಮನಕೊಡಬೇಕಾಗಿ ನನ್ನ ಸವಿನಯ ವ್ಯಾರ್ಥನೆ.

'ಗಾಂಧಿ ಭಕ್ತ.'

---

### ಕೈಗಾರಿಕೋದ್ಯಮ.

ನನ್ನು ಈ ಪುಟ್ಟ ದೇಶದಲ್ಲಿ ನೂರಕ್ಕೆ ೬೫ರಷ್ಟು ಜನರು ವೈತಾವಳಿಯನ್ನು ವಂಶ ಪಾರಂಪರ್ಯದಿಂದಲೂ ಮುಖ್ಯ ಕಸಬಾಗಿ ನಡಿಸಿಕೊಂಡು ಬಂದು ಈಗಲೂ ಸಹ ಅದೇ ಕಸಬು ನಮ್ಮ ಜೀವನದ ಮುಖ್ಯ ಆಧಾರವಾಗಿ ಉಳಿದುಕೊಂಡಿದೆ ಈ ಉನ್ನತಮವು ಪ್ರಪಂಚದ ಆರ್ಥಿಕತೆಯ ವಿರುತಗ್ಗುಗಳಲ್ಲಿ ಸಿಲುಕಿ ಅನೇಕ ಕಷ್ಟಗಳನ್ನು ಅನುಭವಿಸುತ್ತಾ ಬಂದಿದೆ. ಫಲಿತಾಂಶವಾಗಿ ಈ ಕಸಬು ಬರೀ ಒಂದು ಜೀವನವನ್ನು ನಡಿಸಿಕೊಂಡು ಹೋಗಲಿರುವ ಒಂದು ಉದ್ಯೋಗವಾಗಿ ನಿಂತಿದೆಯೇ ಹೊರತು ಕೃಷಿಕರಿಗೆ ಇತರ ಉದ್ಯಮಗಳಂತೆ ಪ್ರಯೋಜನಕಾರಿಯಾಗಿಲ್ಲ. ಇದರಿಂದ ಕೃಷಿಕರು ನಿರಾಶರಾಗಿದ್ದಾರೆ. ಪಾಶ್ಚಿತ್ಯ ದೇಶಗಳಲ್ಲಿ ವಿಜ್ಞಾನ ಶಾಸ್ತ್ರದ ಮೂಲಕ ವ್ಯವಸಾಯವೃತ್ತಿಯನ್ನೇ ಲಾಭವಾಗಿ ಪರಿವರ್ತಿಸಿಕೊಂಡು ಆ ನೀತಿಯ

# ಜಗತ್ತಿಗೆ ಶಾಂತಿ ಎಲ್ಲಿ?

## ಆರು ಯುದ್ಧಗಳು!

೧೯೧೪-೧೮ರಲ್ಲಿ ನಡೆದ ಪ್ರಪಂಚದ ಮಹಾಯುದ್ಧವು ಪ್ರಜಾ ಪ್ರಭುತ್ವದ ರಕ್ಷಣೆಗೆಂದು ನಡೆಯಿತು. ಜರ್ಮನಿಯಲ್ಲಿ ಚಿರವಾದ ಶಾಂತಿನೆಲೆಸುವ ಘೋಷಣೆಯಿಂದ ಸಾಗಿತು. ಯುದ್ಧ ಅಂತ್ಯವಾದೊಡನೆಯೇ ಜಗತ್ತಿನ ಶಾಂತಿ ಸಂಸ್ಥಾಪನೆಗೆಂದು ಜನ್ನಾಂಗಗಳ ಕೂಟ (League of nations) ತಯಾರಾಯಿತು. ಆದರೆ ಈ ಕೂಟವೇ ಮುಂದೆ ಬೀಜಕ್ಕೆ ಅವಕಾಶ ಕೊಟ್ಟು ೧೯೩೯-೪೫ರ ದ್ವಿತೀಯ ಮಹಾಯುದ್ಧಕ್ಕೆ ಕಾರಣವಾಯಿತು. ಈ ಯುದ್ಧವಾದರೂ ಕೂಡ ಮುಂದಿನ ಜಗತ್ತಿನಲ್ಲಿ ಯುದ್ಧವಾಗದಂತೆ ತಡೆಗಟ್ಟುವ ದೃಷ್ಟಿಯಿಂದ, ಸರ್ವಾಧಿಕಾರಿಗಳ ಹಾನಿಯಿಂದ ಪ್ರಜಾಪ್ರಭುತ್ವವನ್ನು ಉಳಿಸುವ ಕಾರಣದಿಂದ ನಡೆಯಿತು. ಈ ರೀತಿ ಎರಡೆರಡು ವಿಶ್ವ ಯುದ್ಧಗಳಿಗೆ ಜಗತ್ತು ಬಲಿಯಾಗಿ ಕೊನೆಗೆಂಡಿತು. ಪುನಃ ಶಾಂತಿ ಸಂಸ್ಥಾಪನೆಗಾಗಿ ಜಗತ್ತಿನ ರಾಷ್ಟ್ರಗಳು ಸಮಾಯುಕ್ತ ರಾಷ್ಟ್ರ ಸಭೆಯೆಂಬ ಸಂಸ್ಥೆಯನ್ನು ರಚಿಸಿಕೊಂಡಿತು. ಆದರೆ ಸರ್ವಾಧಿಕಾರಿಗಳ ಇಂದಿನ ವರೆಗೂ ಅದರ ಸಭೆಗಳು ನಡೆಯುತ್ತಿವೆ. ಚರ್ಚೆಗಳಾಗುತ್ತವೆ. ಆದರೆ ಜಗತ್ತಿನಲ್ಲಿ ಶಾಂತಿಯು ಚಿಮ್ಮಿ ಇವೆಯೇ? ಈ ರಾಷ್ಟ್ರಸಂಸ್ಥೆಯ ಬಗ್ಗೆ ಜನರಿಗೆ ಭರವಸೆ ಇವೆಯೇ?

೧೯೩೯ರಲ್ಲಿ ಮಹಾಯುದ್ಧ ಸುರುವಿಗೆ ಮೊತ್ತೋ ಹಾಗೆ, ಆದರೆ ೧೯೪೪ರಲ್ಲಿ ಯಂದ ಮುಗಿಯಲಿಲ್ಲ. ಅಂದಿನಿಂದಲೂ ಅವ್ಯಾಹತವಾಗಿ ಯುದ್ಧಗಳು ನಡೆಯುತ್ತಿವೆ. ಈಗಜಗತ್ತಿನ ವಿವಿಧ ಭಾಗಗಳಲ್ಲಿ ಭಯಂಕರ ಆರು ಯುದ್ಧಗಳು ಸಾಗಿವೆ. ಇವುಗಳಲ್ಲಿ ಹಲವು ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಈಗಾಗಲೇ ಬಂದರೂ ಈ ಸಭೆಯ ಕೈಯಳತೆಯಿಂದ ಇನ್ನಷ್ಟು ಅವು ಪ್ರಜ್ವಲಿಸುತ್ತಿರುವವೇ ವಿನಹ ಶಾಂತಿಯ ಸುಳಿವಿಲ್ಲ.

(೧) ಗ್ರೀಸಿನಲ್ಲಿ ಗ್ರೀಸ್ ಸರಕಾರವ ವೈನ್ಯಕ್ಕೂ, ಜನರಲ್ ಮೂರ್ಕೋಸ್ ವಫಿಯಂಡಸ್ ಎಂಬವನಿಂದ ನಡೆಸಲ್ಪಡುತ್ತಿರುವ ಕಮ್ಯೂನಿಷ್ಟ್ ಗೆರಿಲ್ಲಾ ಪಡೆಗೂ ೧೯೪೬ರಿಂದಲೇ ಯುದ್ಧ ನಡೆಯುತ್ತಿದೆ.

(೨) ಫಿಲೆಸ್ತೀನಲ್ಲಿ ಆರಾಬಿಯರಿಗೂ ಎಹೂದ್ಯರಿಗೂ ಯುದ್ಧ ನಡೆದಿದೆ. ಬ್ರಿಟಿಷ್ ಸೇನೆಗಳೂ ಇದರಲ್ಲಿ ಶಾಮಿಲಾಗಿವೆ. ಸಂಯುಕ್ತ ರಾಷ್ಟ್ರ ಸಂಘವೂ ಪ್ಯಾಲೆಸ್ತೀನನ್ನು ವಿಂಗಡಿಸುವಂತೆ ಕೊಟ್ಟ ಸಲಹೆಯನ್ನು ಎರಡೂ ಕಡೆಯವರು ತಿರಸ್ಕರಿಸಿದ್ದಾರೆ. ಯುದ್ಧಕ್ಕೆ ಮೊದಲು ಯೂರೋಪಿನಲ್ಲಿ ಮುತ್ತು ಪೂರ್ವ ಏಷ್ಯಾದಲ್ಲಿ ಆಯಕ್ಕೆ ಹಿತಿಮಿರಲಿಲ್ಲ. ಆದರೆ ಈಗ ಜಪಾನ್, ಜರ್ಮನಿ, ಇಟಲಿ, ಗ್ರೀಸ್, ಸ್ಪೇನ್, ಚೀನಗಳಲ್ಲಿ ಸಮಸ್ಯೆಗಳಿವೆ. ಜಗತ್ತಿನ ಎಲ್ಲ ಪ್ರದೇಶಗಳಲ್ಲಿ ತನ್ನ ಜಾಲವನ್ನು ಬಿಟ್ಟಿರುವ ರಷ್ಯಾದ ಗಂಡಾಂತರವನ್ನು ಎದುರಿಸಲು ಅದು ಸಮಾಸಿದ್ಧತೆಯನ್ನು ಮಾಡಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಇಟಿಳ ಮಿಲಿಟರಿ ಕೇಂದ್ರಗಳನ್ನು ವಿಸ್ತರಿಸಿರುವರು. ಪ್ರತಿ ಕೇಂದ್ರಸಲ್ಲಿ ನೈತ್ಯ ಪಡೆ ಇರಿಸಿದ್ದರೆ ಇವರಿಗೆ ಲೀಲ ಹೊಸೆಂಸ್ಥ, ಬರೋಗಳಲ್ಲಿ ಸೈನ್ಯ ಯೋಗ್ಯ ಕೇಂದ್ರಗಳಲ್ಲಿ. ಕ್ರಮಶಃ ಪಾಕಿಸ್ತಾನವನ್ನು ಇವರ ಸೈನ್ಯ ಕೋರಿ ಬಂದರೆ ಅಚ್ಚರಿಯಪಡಬೇಕಾಗಿಲ್ಲ.

(೩) ಕಾಶ್ಮೀರದಲ್ಲಿ ಹಿಂದೂದೇಶದ ಸೈನ್ಯಕ್ಕೂ, ಗಡಿಸ್ತಾಂತದ ಭಾಗಿಗಾರಿಗೂ ಯುದ್ಧ ನಡೆದಿದೆ. ಈ ವಿಚಾರವನ್ನು ಸಂಯುಕ್ತ ರಾಷ್ಟ್ರ ಸಂಘ ಮುಂದೆ ತಂದಾಗ ಅನೇಕ ಪಾಕಿಸ್ತಾನಕ್ಕೆ ಬೆಂಬಲ ಕೊಟ್ಟು ಪಾಕಿಸ್ತಾನದ ಪ್ರತಿನಿಧಿ ಝುಫರುಲ್ಲಾ ಖಾನ್ ಅವರು ಕಾಶ್ಮೀರ ತೀರ್ಮಾನಗಳನ್ನು ಎತ್ತಿ ಹಿಡಿದ ಕಾರಣ ಹಿಂದೂ ದೇಶದ ಸಿಟ್ಟಿಗೆ ಬಲಿಯಾಗಿ ಈ ಸಮಸ್ಯೆಯನ್ನು ಸಂಸ್ಥೆಯಿಂದ ಹಿಂತೆಗೆದು ಕೊಳ್ಳಬೇಕಾಗಿ ಬಂದಿದೆ. ಯುದ್ಧ ಇನ್ನೂ ಘೋಷಣೆಯಾಗದಿದ್ದರೂ ಇದು ಯುದ್ಧವೇ ಆಗಿದೆ.

(೪) ಇಂಡೋನೇಶಿಯಾದಲ್ಲಿ ದಚ್ಚರು ಸಾಮ್ರಾಜ್ಯ ಇಂದೋನೇಶಿಯನ್ನರಿಗೆ ಕಳೆದ ಜನವರಿಯಲ್ಲಿ ಯುದ್ಧ ವಿರಮಿಸುವ ಒಪ್ಪಂದವಾಗಿದ್ದರೂ ಪರ್ಮಣಿ ಪುನಃ ನಡೆಯುತ್ತಿರಬಹುದೆ.

(೫) ಇಂಡೋ ಚೀನಾದಲ್ಲಿ ಫ್ರೆಂಚ್ ಸೈನಿಕರಿಗೂ, ವಿಯೆಟ್‌ನಾಮ್ ಬಿಡುಕೆಗಾರರಿಗೂ ಕಳೆದ ಡಿಸೆಂಬರಿನಿಂದ ಘೋರ ಕದನ ನಡೆದಿದೆ. ವಿಯೆಟ್‌ನಾಮಿಯರು ಸೈನಿಕರೆಂದು ಹೋಬೆ ಮಿನಾರವರ ನೇತೃತ್ವದಲ್ಲಿ ಜಪಾನಿನ್, ಉನ್ನಾಮ್ ಮತ್ತು ಕೊಚ್ಚಿನ್ ಚೈನಾದಲ್ಲಿ ಸ್ವತಂತ್ರ ರಿಪಬ್ಲಿಕ್ ಸ್ಥಾಪಿಸಿರುವುದನ್ನು ಫ್ರೆಂಚ್ ಸರಕಾರವು ಇನ್ನೂ ತನ್ನ ಪ್ರಭಾವದೊಳಗಿದಲಾಯಿಸಿಕೊಳ್ಳಬೇಕಾಗಿದೆ. ಇದ್ದರಿಂದಲಾಯುದ್ಧ ಸಾಗಿದೆ.

(೬) ಜಪಾನರ ಪರಾಜಯದ ನಂತರ ಚಿಯಾಂಗ್ ಕೈಶೆಕರ ಸೈನಿಗೂ ಕಮ್ಯೂನಿಸ್ಟ್ ಪಡೆಗೂ ಭಯಂಕರ ಯುದ್ಧ ನಡೆದಿದೆ. ಕಮ್ಯೂನಿಸ್ಟ್‌ರು ಸ್ವಬಲದಿಂದ ಚೈನಾದ ಬಹು ಭಾಗವನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಆರು ಯುದ್ಧಗಳು ನಡೆಯುತ್ತಿವೆ. ಈ ಯುದ್ಧಗಳಲ್ಲಿ ಇಂದು ಫ್ರಿಂಡಿನಲ್ಲಿ ೬೦೦ ಅರಬರೂ, ಎಂಟ್ವಪ್ಪರೂ, ಇಂಡೋನೇಶಿಯಾದಲ್ಲಿ ೬೦೦ ಸೈಂಬರು, ಇಂದೋನೇಶಿಯಾದಲ್ಲಿ ೭೦೦೦ ಡಚ್ ಸೈನಿಕರೂ, ಸಹಿರುವರೆಂಬ ಲೆಕ್ಕ ಇದೆ. ಇವರ ವಿರುದ್ಧ ಹೋರಾಡುವವರಲ್ಲಿ ಸತ್ತವರ ಸಂಖ್ಯೆ ಇದಕ್ಕಿಂತಲೂ ಹೆಚ್ಚಾಗಿದೆಯೆಂದು ಅಂದಾಜು ಮಾಡಲಾಗಿದೆ.

### ಭಯಂಕರ ಕಾರ್ಮೋಡ

ಇಷ್ಟರಿಂದ ಪರಿಸ್ಥಿತಿ ಮುಗಿಯ ಲಿಲ್ಲ ಮತ್ತೊಂದು ಮಹಾಯುದ್ಧದ ಕಾರ್ಮೋಡಗಳು ಜಗತ್ತನ್ನು ಆವರಿಸತೊಡಗಿವೆ. ದ್ವಿತೀಯ ಮಹಾಯುದ್ಧದ ನಂತರ ಯೂರೋಪಿನಲ್ಲಿ ರಷ್ಯಾದ ಪ್ರಭಾವವು ಹೆಚ್ಚುತ್ತಾ ಹೋಗಿದೆ. ಈ ಗಂಡಾಂತರವನ್ನರಿತ ಆ ಮೇರಿಕ-ವ ಇದನ್ನು ಚಿಗುರಿನಲ್ಲೇ ಮುರಿಯಬೇಕೆಂದು ಹವಣಿಸಿದೆ. ಈ ದೃಷ್ಟಿಯಿಂದ ಅಗಾಧ ವಿಸ್ತರಣವಾದ ಸಿದ್ಧತೆಗಳನ್ನು ಮಾಡಿದೆ. ಕೆನಡ ಮಹಾಯುದ್ಧದಲ್ಲಿ ಎಲ್ಲಾ ರಾಷ್ಟ್ರಗಳಿಗೂ ವಿಶೇಷ ಸಹಾಯವನ್ನು ಕೊಟ್ಟಿದೆ. ರಷ್ಯಾ, ಬ್ರಿಟನ್, ಜರ್ಮನಿ, ಫ್ರಾನ್ಸ್, ಜಪಾನು ಮೊದಲಾದವು ಆ ನಷ್ಟದಿಂದ ಇನ್ನೂ ಚೇತರಿಸಿಕೊಂಡಿಲ್ಲ. ಆದರೆ ಯೂನಿಯನ್ ನಷ್ಟವಿಲ್ಲದೆ ಹೆಚ್ಚು ಲಾಭ ಪಡೆದ ರಾಷ್ಟ್ರವೆಂದರೆ ಅಮೇರಿಕಾ. ಯುದ್ಧದ ಸಮಯದಲ್ಲಿ ಇಡೀ ಜಗತ್ತಿಗೆ ಸಾಧನಗಳು ಸರಬರಾಯಿಸಿದಾತ ಅತ್ಯಲ್ಪ ಪ್ರಮಾಣವನ್ನು ಅಮೆರಿಕಾ ಯುದ್ಧಕ್ಕೆ ಮೊದಲು. ಯೂರೋಪಿನಲ್ಲಿ ಮುತ್ತು ಪೂರ್ವ ಏಷ್ಯಾದಲ್ಲಿ ಆಯಕ್ಕೆ ಹಿತಿಮಿರಲಿಲ್ಲ. ಆದರೆ ಈಗ ಜಪಾನ್, ಜರ್ಮನಿ, ಇಟಲಿ, ಗ್ರೀಸ್, ಸ್ಪೇನ್, ಚೀನಗಳಲ್ಲಿ ಸಮಸ್ಯೆಗಳಿವೆ. ಜಗತ್ತಿನ ಎಲ್ಲ ಪ್ರದೇಶಗಳಲ್ಲಿ ತನ್ನ ಜಾಲವನ್ನು ಬಿಟ್ಟಿರುವ ರಷ್ಯಾದ ಗಂಡಾಂತರವನ್ನು ಎದುರಿಸಲು ಅದು ಸಮಾಸಿದ್ಧತೆಯನ್ನು ಮಾಡಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ಇಟಿಳ ಮಿಲಿಟರಿ ಕೇಂದ್ರಗಳನ್ನು ವಿಸ್ತರಿಸಿರುವರು. ಪ್ರತಿ ಕೇಂದ್ರಸಲ್ಲಿ ನೈತ್ಯ ಪಡೆ ಇರಿಸಿದ್ದರೆ ಇವರಿಗೆ ಲೀಲ ಹೊಸೆಂಸ್ಥ, ಬರೋಗಳಲ್ಲಿ ಸೈನ್ಯ ಯೋಗ್ಯ ಕೇಂದ್ರಗಳಲ್ಲಿ. ಕ್ರಮಶಃ ಪಾಕಿಸ್ತಾನವನ್ನು ಇವರ ಸೈನ್ಯ ಕೋರಿ ಬಂದರೆ ಅಚ್ಚರಿಯಪಡಬೇಕಾಗಿಲ್ಲ.

ಈ ಇಟಿಳ ಯುದ್ಧ ಕೇಂದ್ರಗಳಂದ ರವ್ಯಾವನ್ನು ಆದರಿಸಿ ಕೇವಲ ೬೫ ದಿನಗಳಲ್ಲಿ ಮೂರನೇ ಮಹಾಯುದ್ಧವನ್ನು ಗಪ್ತಾಸ್ತ್ರಗಳಿಂದ ಅಮೇರಿಕನರ ಆಶಯವಾಗಿದೆ. ಜರ್ಮನಿಯಲ್ಲಿ ಅಮೇರಿಕನರ ಗವರ್ನರಾಗಿರುವ ಲೂಸಿಯಸ್ ಕ್ಲೇ ಎಂಬವರು ಈ ವಿಚಾರ ಪತ್ರಿಕೋದ್ಯೋಗಿಯೊಬ್ಬನೊಡನೆ ಹೇಳುತ್ತಾ ಮೂರನೆ ಮಹಾಯುದ್ಧವ ಸಾರಲ್ಪಟ್ಟ ೨೪ ಗಂಟೆಗಳೊಳಗಾಗಿ ಅಮೇರಿಕವು ರವ್ಯಾವನ್ನು ಹುಡಿಮಾಡ ಪಡೆದು ಹೇಳಿದ್ದಾರೆ. ಉತ್ಪ ರಪ್ರದೇಶದಿಂದ ತಮ್ಮ ೫,೦೦೦ ಸರಮಾಣು ಬಾಂಬುಗಳನ್ನು ರಷ್ಯಾದ ಮೇಲೆ ಪ್ರಯೋಗಿಸುವದಕ್ಕಾಗಿ ಅಮೇರಿಕಾದ ಹದಿನೈದಕ್ಕೂ ಹೆಚ್ಚು ವಿಮಾನಗಳು ವಿವಿಧ ಯುದ್ಧ ಕೇಂದ್ರಗಳಿಂದ ವಿಮಾನು ಬಾಂಬುಗಳನ್ನು ಪ್ರಯೋಗಿಸಿ ಸರ್ವನಾಶ ಮಾಡುವೆಂದಿದ್ದಾರೆ. ಈ ಮಿಂಚಿನ ವೇಗದ ಯುದ್ಧದಲ್ಲಿ ಹದಗುಪಡೆ, ಕಾಲ್ದಳಗಳು ಯಾವ ಉಪಯೋಗಕ್ಕೂ ಬಾರದೆಂದು ಹೇಳಿದ್ದಾರೆ ರಷ್ಯಾದ ನಿಜಸ್ಥಿತಿ ದೇಗಿದೆಯೋ ತಿಳಿಯದ ಆದರೆ ಅಮೇರಿಕವು ಈ ಹಿಂದಿನ ಜರ್ಮನಿಯಂತೆ ಜಗತ್ತಿನ ಶಾಂತಿಗೆ ಗಂಡಾಂತರ ಪ್ರಾಯವಾಗಿದೆ.

## ಮೂರಾಟಕ್ಕಿದೆ.

ನೀರಾಜಪೇಟೆಗೆ ಒಂದು ಮೈಲು ದೂರದಲ್ಲಿ ಕುಕ್ಲೂರು ಗ್ರಾಮದಲ್ಲಿ ಒಳ್ಳೆ ನಿರಾವರಿ ಭೂಮಿ 600 ಒಟ್ಟು ಪದ್ಧು ಕಾಫಿ, ಕೆತ್ತಳಿ ವ್ಯವಸಾಯಕ್ಕೆ ಅಗತ್ಯವಾದ 9 ಎಕರೆ ಜಾಗವೂ, ಒಳ್ಳೆ ಮಾರ್ಕೆಟ್ ಲಾಯರ್ಸ್‌ಗಳ ಹತ್ತಿರ ಪಾಕಿಸ್ತಾನ ಸನ್ನದ, ಒಂದು ಹೊಸ ಮನೆ ಮೂರಾಟಕ್ಕಿದೆ. ಖರೀದಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

'P'
2-1 C/o. 'Kodagu'
Mercara.


ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಯಮ್ಬತ್ತೂರ್ ಬ್ರದರ್ಸ್, ಲಿಮಿಟೆಡ್.
ಇವರ ಕಲಬೆರಿಗಿಂತ ಉತ್ತಮ ಏಜೆನ್ಸಿಯಿಲ್ಲ.
ಸಂಸ್ಥಾನಗಳನ್ನೆಳೆಗೊಂಡ ವಷ್ಟೆಯ ಹಿಂದೂಸ್ತಾನದ ಸಂಪ್ರದಾಯ ಬ್ರಾಂಚಿನ ಸರ್ವೆಟುಗಳು.
ವಿ ಬೋಂಬೆ ಮೈಸೂರ್ ಅಬ್ಯೂರೆನ್ಸ್ ಕಂ. ಲಿಮಿಟೆಡ್.
30 ಮೌಂಟ್ ರೋಡ್, ಬೋಂಬೆ ಮೈಸೂರ್ ಬಿಲ್ಡಿಂಗ್ಸ್,
ಪೊ. ಬ. ನಂ. 337. ಸ್ಟ್ರಾಂ ನಂ. 1,
ಮದ್ರಾಸು ೨ ಉಟಕಮಂಡ್.
(ಟೆಲಿಫೋನ್ ನಂ ೪೦೨೨)
ಇತರ ಆಫೀಸುಗಳು—ಬೆಂಗಳೂರು, ತಿರುವೆಂಡ್ರಂ, ಎರ್ನಾಕುಲಂ, ಸಿಂಗಳೂರು, ಮಧುರೈ, ಮಂಗಳೂರು, ಬೊಂಬಾಯಿ.



ಎ ಸಿ ಸಿ ಎ ಆಫೀಸ್ ಆಫ್ ಇಂಡಿಯಾ
ಬ್ರಿಟಿಷ್ ಎಂಪ್ಲಾಯೀಸ್ ಕಂಪನಿ, ಲಿಮಿಟೆಡ್.
ಸ್ಥಾಪನೆ—1897
ತಿತೇ ಪಾರ್ಮಿಕ ವ ಒಟ್ಟು ಆದಾಯ .... 1,07,00,000 ರೂಪಾಯಿ
ರಕ್ಷಿಯಲ್ಲಿನ ಕೆಲವು ಹಾಲ್ಯಸಿಯ ಸಂ .... 17,74,50,000 ,,
ಸ್ಟಾಕ್ ಎಂಗಡಿಗಳು ಆಸ್ತಿ ... .. 6,67,60,000 ,,
ಕಂಪೆನಿಯ ಆಯವ್ಯಯದಲ್ಲಿ ರಿಸ್ಟ್ ಕ್ಲೈಮುಗಳು ... 5,53,62,000 ,,
ಅಂಗ ಕಚೇರಿ. ಏಜೆನ್ಸಿಗಳು ಸ್ಥಾಪನೆಗಳು
ಡಿಸ್ಟ್ರಿಕ್ಟ್ ಜಡ್ಜ್ಸ್ ಬಿಲ್ಡಿಂಗ್, ಕೆಂಪೇಗೌಡರಪೇಟೆ, ಬೆಂಗಳೂರು. ಇಂಡಿಯಾ ಸ್ಟ್ರೀಟ್ ಸಂಪೂರ್ಣ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೆ

# ಹಿರಾಕುಡ್ ಅಣೆಕಟ್ಟು.

ಇಂಡಿಯನ್ ಡೊಮಿನಿಯನಿನಲ್ಲಿ ದೊಡ್ಡದೆನಿಸುವ, ಲಕ್ಷಾಂತರ ಏಕ್ರೆ ಜಮೀನಿಗೆ ನೀರೊದಗಿಸಿ ಆಹಾರ ಸಮೃದ್ಧಿಗೆ ಸಹಾಯವಾಗುವ, ಹೈಡ್ರೋ ಇಲೆಕ್ಟ್ರಿಕ್ ಯೋಜನೆಗಳಿಂದ ಕೈಗಾರಿಕೆಗಳು ಬಡಾವಣೆಕೊಂಡು ಮಿಲಿಯೊಂತರ ಜನರಿಗೆ ಉದ್ಯೋಗ ಒದಗಿಸಿ ಕೊಡಲನುಕೂಲವಾಗುವ ಹಿರಾಕುಡ್ ಯೋಜನೆಯ ಬುನಾದಿ ಕಲ್ಲನ್ನು, ಭಾರತದ ಪ್ರಧಾನ ಸಚಿವ ಪಂಡಿತ್ ಜವಾಹರಲಾಲ ನೆಹರುಗಳವರು ಇದೇ ತಾ ೧೫ರಲ್ಲಿ ಇರಿಸಿ, ಒರಿಸಾ ಪ್ರಾಂತ್ಯದ ಸಂಪದಭ್ಯುದಯ ಯುಗವನ್ನಾರಂಭಿಸಿದರು.

### ಒರಿಸಾ ಪ್ರಾಂತ್ಯ.

ಒರಿಸಾ ಪ್ರಾಂತ್ಯವು, ಭಾರತ ವಿಭಜನೆಯ ನಂತರ ಸಮಾವೇಶಗೊಂಡ ಕೆಲವು ದೇಶೀ ಸಂಸ್ಥಾನಗಳ ಸಹಿತ ೫೦,೦೦೦ ಚದರ ಮೈಲು ವಿಸ್ತೀರ್ಣವುಳ್ಳದಾಗಿದೆ. ಹನ್ನೆರಡು ಮಿಲಿಯ ಜನಸಂಖ್ಯೆ ಇದೆ. ಈ ವಿಸ್ತಾರ ಪ್ರದೇಶದಲ್ಲಿ ಆಹಾರ ಧಾನ್ಯ ಉತ್ಪತ್ತಿಯ ಜಮೀನುಗಳಿವೆ; ಅರಣ್ಯಗಳಿವೆ; ಮಹಾನದಿ-ಬ್ರಹ್ಮನಿ ಮತ್ತು ವೈತರಣಿ-ಈ ಮೂರು ದೊಡ್ಡ ನದಿಗಳಿವೆ, ಕಲ್ಲಿದ್ದಲು, ಕಬ್ಬಿಣ, ಬೊಕ್ಸಾಯಿಟ್, ಮೆಂಗನೀಸ್, ಗ್ರೆಫೈಟ್, ಮೈಕಾ, ಸುಣ್ಣದ ಕಲ್ಲು ಮೊದಲಾದುವು ದೊರೆಯುತ್ತವೆ. ಆದರೆ, ಈ ಭೂಸಂಪತ್ತೆಲ್ಲವೂ ಪೂರ್ಣ ಉಪಯೋಗ ಮಾಡಿಕೊಳ್ಳಲು ಬಂದಿಲ್ಲ. ಇಷ್ಟು ಸಂಪತ್ತು ಇದ್ದು, ಈ ಪ್ರದೇಶವು ಭಾರತದಲ್ಲಿ ಅತಿ ಬಡವಾಗಿಯೇ ಉಳಿದಿದೆ. ಇದರ ಅಭಿವೃದ್ಧಿಗಾಗಿ, ಮಹಾನದಿಯ ಯೋಜನೆಯೊಂದು ಸಿದ್ಧವಾಗಿದೆ; ಈ ಯೋಜನೆಯಲ್ಲಿ ಪ್ರಧಮತಃ ಹಿರಾಕುಡ ಯೋಜನೆಯನ್ನು ಸರಕಾರವು ಆರಂಭಿಸಿದೆ.

### ಮಹಾನದಿ

ಮಹಾನದಿಯು, ಟೆನ್ನೆಸ್ಸಿ ಮತ್ತು ನೈಲ್ ನದಿಗಳಿಗಿಂತ ಹೆಚ್ಚಿನದಾದ-ವರ್ಷಕ್ಕೆ ಎಪ್ಪತ್ತನಾಲ್ಕು ಮಿಲಿಯ ಏಕ್ರೆ ಅಡಿ ನೀರನ್ನೊಯ್ಯುತ್ತಿದೆ. ಈ ನೀರಿನ ಬಹು ಭಾಗದಿಂದ, ಲಕ್ಷಾಂತರ ಏಕ್ರೆ ಜಮೀನಿನಲ್ಲಿ ಕೃಷಿಮಾಡಲು ಬರುತ್ತಿದೆ. ಅಣೆಕಟ್ಟಿನಿಂದ ಹೊರಬರುವ ಐದು ಮಿಲಿಯ ಕ್ಯೂಸೆಕ್ ವಿದ್ಯುಚ್ಛಕ್ತಿಯನ್ನುತ್ಪಾದಿಸಲು ಬರುತ್ತಿದೆ. ನದಿಯನ್ನು ದೊಡ್ಡ ಮಂಜಿ ಮೊಲಲಾದುವುಗಳ ಚಲನೆಗೆ ಅಳವಡಿಸಿಕೊಂಡು, ಮೀನಿನ ವ್ಯವಸಾಯವನ್ನೂ ಹೆಚ್ಚಿಸಿಕೊಳ್ಳಲು ಬರುತ್ತಿದೆ. ಈಗ, ಮಹಾನದಿಯ ಮೇಲೆ ಅಣೆಕಟ್ಟನ್ನು ರಚಿಸಲು, ಹಿರಾಕುಡ, ತೆಕಿರವಾರ ಮತ್ತು ನಾರಾಜ್ ಎಂಬೀ ಮೂರು ಕಡೆಗಳಲ್ಲಿ ಸ್ಥಳ ಅರಿಸಿದರು. ಎಲ್ಲವನ್ನೂ ವಿಕಾಲದಲ್ಲಿ ಕೈಕೊಳ್ಳಲು, ಹಣ, ಸಮಯ ಮೊದಲಾದುವುಗಳು ಧಾರಾಳವೇಕು. ಅದು ಕಾರಣ, ಪ್ರಧಮತಃ ಹಿರಾಕುಡ ಯೋಜನೆಯನ್ನಾರಂಭಿಸಿದರು.

### ಯೋಜನೆಯ ವಿವರ.

ಒರಿಸ್ಸಾ ಪ್ರಾಂತ್ಯದ ಸಾಂಬಾಳಪುರ ಜಿಲ್ಲೆಗೇ ಪ್ರಧಮತಃ ನೀರಾವರಿ ಯೋಜನೆಯು ಅವಶ್ಯವಿರುವ ಕಾರಣ, ಹಿರಾಕುಡ ಯೋಜನೆಯನ್ನು ಕೈಕೊಳ್ಳಲಾಗಿದೆ. ಈ ಅಣೆಕಟ್ಟಿನಿಂದ ರಚಿಸಲ್ಪಡುವ ನೀರಿನ ಪೂರ್ತಿಕೆಯು ಕಾಲುವೆಗಳು ಹನ್ನೊಂದು ಲಕ್ಷ ಏಕ್ರೆ ಜಮೀನಿಗೆ ನೆರೆ ನೀರಿನ ಹಾನಿಯೊದಗದಂತೆಯೂ ಜಾಗರೂಕತೆ ವಹಿಸಲಾಗುವುದು. ಮೂರುವರೆ ಲಕ್ಷ ಕಿಲೊವಾಟ್ ವಿದ್ಯುಚ್ಛಕ್ತಿಯನ್ನುತ್ಪಾದಿಸಿ, ಕೂಡಲೇ ಕೈಗಾರಿಕಾ ಬಡಾವಣೆಯನ್ನೂ ಮೂಡಲನುಕೂಲತೆ ಮಾಡುವರು. ಸಾಂಬಾಳಪುರದ ಬಳಿ, ಈ ಅಗ್ಗದ ವಿದ್ಯುಚ್ಛಕ್ತಿಯಿಂದ ಅಲ್ಯುಮಿನಿಯಂ, ಉಕ್ಕು, ಕಾಗದ, ಸಿಮೆಂಟ್ ಮತ್ತು ಬಟ್ಟೆಯ ಕೈಗಾರಿಕೆಗಳನ್ನು ಆರಂಭಿಸುವರೆ ಸಾಧ್ಯವಾಗುವುದು. ನದಿಯನ್ನು ಬೇಕಾನಂತೆ ಆಳವಾಗಿ ಮಾಡಿ, ಅಣೆಕಟ್ಟಿನ ನೀರನ್ನು ಸಾಕಷ್ಟು ಬಿಟ್ಟು ಆರುನೂರರಿಂದ ಎಂಟು ನೂರು ಮಂಜಿಗಳ ತನಕ ಸಮುದ್ರದಿಂದ ಇತ್ತ ಬಂದು ಹೋಗುವಂತೆ ಮಾಡುವರು. ಅಣೆಕಟ್ಟು ೧೫೦ ಅಡಿ ಎತ್ತರ, ಮೂರು ಮೈಲು ಉದ್ದಕ್ಕೆ ರಚಿಸಲ್ಪಡುವುದು. ಹನ್ನೊಂದು ಲಕ್ಷ ಏಕ್ರೆ ಜಮೀನನ್ನು ಫಲವತ್ತಾಗಿ ಮಾಡುವರೇ ಈ ಅಣೆಕಟ್ಟಿನಿಂದ ಆರು ಕಾಲುವೆಗಳು ಆರು ದಿಕ್ಕುಗಳಿಗೆ ಹರಡುವುವು. ಹೈಡ್ರೋ ಇಲೆಕ್ಟ್ರಿಕ್ ಪವರನ್ನು ಮೊದಲು ಅಣೆಕಟ್ಟಿನ ಬಳಿಯೂ, ಅನಂತರ ಹನ್ನೆರಡು ಮೈಲು ದೂರದ ಮತ್ತೊಂದು ಸ್ಥಳದಲ್ಲಿಯೂ ಉತ್ಪಾದಿಸಿಕೊಳ್ಳುವರು. ಈ ಅಣೆಕಟ್ಟನ್ನು ರಚಿಸುವಾಗ, ೧೫,೫೫೦,೦೦೦ ಏಕ್ರೆ ಜಮೀನು ನೀರಾವರಿಗೆ ಯೋಗ್ಯ ಪ್ರತಿಫಲ ಕೊಡಲಾಗುವುದು. ಜಮೀನನ್ನು ಕಳಕೊಂಡವರಿಗೆ ಯೋಗ್ಯ ಪ್ರತಿಫಲ ಕೊಡಲಾಗುವುದು.

ಸಾಧ್ಯವಿದ್ದಷ್ಟು ಜಮೀನಿಗೆ ಬದಲಾಗಿ ಜಮೀನನ್ನು ಕೊಟ್ಟು, ಅಲ್ಲಿ ಆಧುನಿಕ ಸೌಕರ್ಯಗಳನ್ನೊದಗಿಸಿ ಕೊಡುವರು.

### ೪೭.೮೧ ಕೋಟಿ ರೂಪಾಯಿ.

ಅಣೆಕಟ್ಟಿಗೆ ೪೭ಕೋಟಿ, ೮೧ ಲಕ್ಷ ರೂಪಾಯಿ ವ್ಯಯ ತಗಲುವುದೆಂದು ಅಂದಾಜು ಹಾಕಿರುವರು. ಇದನ್ನು ಪೂರ್ಣಗೊಳಿಸಲು ಐದು ವರ್ಷಗಳ ಕಾಲ ಬೇಕಾಗುವದು. ಕೆಲವು ವರ್ಷಗಳ ನಂತರ, ಈ ಯೋಜನೆಯಿಂದ, ಸೇಕಡಾ ೪೫ ಲಾಭ ಉತ್ಪತ್ತಿ ಬರಬಹುದೆಂದು ನಿರೀಕ್ಷಿಸಲಾಗಿದೆ.

ತುಲನಾತ್ಮಕವಾಗಿ ನೋಡಿದರೆ ಹಿರಾಕುಡ ಯೋಜನೆಯು, ಇತರ ಯೋಜನೆಗಳಿಂತ ಎಷ್ಟೊ ಬೇಗ ಪೂರ್ಣಗೊಂದುವುದು.

ಸಿಂಧಪ್ರಾಂತ್ಯದ ಸಕ್ಕರ್‌ದಲ್ಲಿ, ಸಿಂಧೂ ನದಿಯ ಮೇಲಿನ ಅಣೆಕಟ್ಟಿನ ಯೋಜನೆಯು ೧೯೨೦ ರಲ್ಲಾಗಿತ್ತು. ಅದರ ಕೆಲಸವು ೧೯೩೨ರಲ್ಲಿ ಆರಂಭವಾಗಿ, ೧೯೫೧ ರಲ್ಲಿ ಪೂರ್ಣಗೊಂತಿತು.

ಪಂಜಾಬದೊಳಗಿನ ಒಖಾ ಅಣೆಕಟ್ಟು ೧೯೧೦ರಲ್ಲಿ ಯೋಜನೆಯಾಗಿತ್ತು. ೧೯೧೨ರಲ್ಲಿ ಅದರ ತನಖಿ ಆರಂಭವಾಗಿ, ೧೯೪೫ರಲ್ಲಿ ಕೆಲಸಪ್ರಾರಂಭವಾಗಿದೆ; ೧೯೪೫ ಅಥವಾ ೧೯೪೬ರ ವರೆಗೆ ಕೆಲಸ ನಡೆಯಬಹುದು.

ಸಂಯುಕ್ತ ಪ್ರಾಂತ್ಯದೊಳಗಿನ ಸಾರ್ದಾ ಕಾಲುವೆಯು ಪ್ರಥಮತಃ ೧೯೨೩ರಲ್ಲಿ ಆಲೋಚನೆಯಾಯಿತು ಸುಮಾರು ೧೫ ಪ್ಲಾನುಗಳು ಆದುವು ೧೯೨೦ರಲ್ಲಿ ಕೆಲಸ ಪೂರ್ಣವಾಯಿತು ಕೆಲಸ ಹಿಡಿದರು. ೧೯೨೪ರಲ್ಲಿ ಕೆಲಸ ಪೂರ್ಣವಾಯಿತು

ಮದರಾಸು ಪ್ರಾಂತ್ಯದ ಪೆಟ್ಟೂರು ಅಣೆಕಟ್ಟು ೧೯೧೧ರಲ್ಲಿ ಆಲೋಚಿಸಲ್ಪಟ್ಟು ೧೯೧೫ರಲ್ಲಿ ನಿರ್ಣಯವಾಗಿ ೧೯೨೫ರಲ್ಲಿ ಕೆಲಸ ಪ್ರಾರಂಭವಾಗಿ, ೧೯೩೪ರಲ್ಲಿ ಪೂರ್ಣವಾಯಿತು.

ತುಂಗಭದ್ರಾ ಯೋಜನೆಯು ೧೯೨೨ ರಲ್ಲಿ ಆಲೋಚಿಸಲ್ಪಟ್ಟು, ೧೯೪೫ರಲ್ಲಿ ಕೆಲಸವಾರಂಭವಾಯಿತು. ೧೯೫೫ ಅಥವಾ ೧೯೫೬ರಲ್ಲಿ ಪೂರ್ಣಗೊಳ್ಳಬಹುದು.

ಪಂಚಾಬದ ಧಾಖ್ ಯೋಜನೆಯು ೧೯೨೦ ರಲ್ಲಿ ಆಲೋಚಿಸಲ್ಪಟ್ಟಿತು. ೧೯೪೫ರಲ್ಲಿ ಆರಂಭವಾಯಿತು. ಇನ್ನೂ ಪೂರ್ಣಗೊಂಡಿಲ್ಲ.

ಹಿರಾಕುಡ ಯೋಜನೆಯೂದಲೊ ೧೯೪೫ನೇ ಮೇ ತಿಂಗಳಲ್ಲಿ, ಆಲೋಚನೆಯಾಯಿತು; ೧೯೪೬ರಲ್ಲಿ ಆರಂಭಿಸಲ್ಪಟ್ಟು ಐದೇ ವರ್ಷಗಳಲ್ಲಿ ಪೂರ್ಣ ಹೊಂದುವುದು. 'ಸಮಾಚಾರ'ತ

## ರಷ್ಯದ ಯುದ್ಧ ತಯಾರಿ.

ಅಮೇರಿಕದ ವಿಮಾನ ಬಲವನ್ನು ಹೆಚ್ಚಿಸಬೇಕೆಂದು, ಜನ್ಯಪ್ಪ ಟ್ರೂಮನರು ಅಸಮರವಲ್ಲಿ, ಕೇಳಿರುವರು. ಅಮೇರಿಕನ ಕೊಂಗ್ರೆಶ್ಶನಲ್ ಕಮಿಟಿಯು ಇದನ್ನು ಕೂಡಲೇ ಮಂಜೂರು ಮಾಡಿದೆ. ಅಮೇರಿಕನೀಗ ವಿಮಾನ ಬಲ ಹೆಚ್ಚಿಸಲು ಮಾಡಿದ ಯೋಜನೆಗಳಂತೆ ದನೂ, ರಷ್ಯದ ವಿಮಾನ ಬಲಕ್ಕೆ ಸರಿಗಟ್ಟಲಾರದು ಎಂದು ಬಯಲಾಗಿದೆ. ಅಮೇರಿಕವು ರಷ್ಯವನ್ನು ಸ್ಪರ್ಧಿಸಲು ಹೊರಟಿದೆ. ಬರುವ ವರ್ಷದ ಮಿಲಿಟರಿ ನಿಧಿಯಿಂದ ಈಗಲೇ ೨,೫೭೬,೦೦೦,೦೦೦ ಡಾಲ್ಲರುಗಳು ವಿಮಾನ ನಿರ್ಮಾಣಕ್ಕೆ ಮಂಜೂರು ಗಿವೆ. ರಷ್ಯದೊಡನೆ ಈಗ ಅಮೇರಿಕದ ಸಖ್ಯವೆ ರಿಷುಗಳ ಎಂಡದರಮ್ಮ ಸಖ್ಯವೇರ್ಪ್ ಬಲವಿದೆ. ಮತ್ತು ಅಮೇರಿಕದ ಹನ್ನೆರಡು ಪಾಲು ಹೆಚ್ಚು ವಿಮಾನ ಪಡೆ ರಚಿಸಲು ರಷ್ಯ ತೊಡಗಿದೆ. ಅಮೇರಿಕದ ನೌಕಾ ಮಂಡಲ ಎಡ್ಮಿರಲ್ ಲೂವಿಸ್ ಜಿಮ್ಸ್‌ಫೀಲ್ಡರ ಅಂದಾಜಿನಂತೆ, ಅಮೇರಿಕದೊಡನೆ ೧೫೫ ಸಖ್ಯವೆಂಬುಗಳೆವೆ; ರಷ್ಯದೊಡನೆ ೨೬೦ರಿಂದ ೩೭೦ರ ವರೆಗಿನ, ಮತ್ತು ಅಮೇರಿಕದೊಡನೆ ಇರುವುದಕ್ಕಿಂತ ಉಳ್ಳವೆಷ್ಟ ಇವೆ. ಜರ್ಮನ್ ತರಗತಿಯ ಸಬ್ ಮರಿನ್ ಗಳನ್ನು ರಷ್ಯವು ತಯಾರಿಸುತ್ತಿದೆ.

## ಭಾರತದ ಯುದ್ಧ ನೀತಿ.

ಜಾಗತಿಕ ಯುದ್ಧವೊಂದು ಬೇಗನೆ ಆರಂಭವಾಗಬಹುದು ಎಂಬ ಭೀತಿಯೊಂದು ಅನೇಕ ಜನೆಗಳಲ್ಲಿ ಹರಡಿದೆಯಷ್ಟೆ? ಈ ವಿಷಯವಾಗಿಯೂ ಪ್ರಸ್ತಾವಿಸುತ್ತ, ಪಂಡಿತ ಜವಾಹರಲಾಲನೆಹರುಗಳವರು, ಇತ್ತೀಚೆಗೆ ಕುರುಕ್ಷೇತ್ರದೊಳಗಿನ ನಿರಾಶ್ರಿತರ ನಿಬಿರದಲ್ಲಿ, ಭಾಷಣ ಮಾಡಿದ್ದಲ್ಲಿ, 'ಯುದ್ಧವಾದರೆ, ಭಾರತವು ದೂರವಿಂತು ನೋಡಲುಗುವುದಿಲ್ಲ. ಯುದ್ಧವನ್ನು ಆಹ್ವಾನಿಸಲು ಅಥವಾ ಯುದ್ಧ ಸಂಭವಿಸಿದ ದಿನವನ್ನು ನಿರೀಕ್ಷಿಸಿ ತರಲು ಭಾರತವು ಏನೂ ಮಾಡುವುದಿಲ್ಲ. ಆದರೆ, ಯುದ್ಧದ ಮೋಡಗಳು ಕಾಣಿಸುತ್ತಿವೆ; ನಿರಪರಾಧಿ ಜೀವಗಳನ್ನು ಬಲಿತೆಗೆದುಕೊಳ್ಳುವವರಲ್ಲಿ ಭಾರತವ ಪಾಲಿಲ್ಲ. ಜಾಗತಿಕ ಯುದ್ಧವು ಸಂಭವಿಸಿದಾಗ, ಭಾರತವು ಮೂಕ ಪ್ರೇಕ್ಷಕನಾಗಿರಲಾರದು' ಎಂದರು. (ನಿರಾಶ್ರಿತರನ್ನು ಕುರಿತು ಪಂಡಿತರು, 'ಸರಕಾರವು ತನ್ನ ಶಕ್ತಿಯಿಂದಿ ನಿಮಗಾಗಿ ಮಾಡಿಯಿಟ್ಟಿದೆ ಈ ಸಮಸ್ಯೆಯು ಒಗೆಹರಿಯಲು ನೀವಾದರೂ ಸ್ವಲ್ಪ ಮೊಗಳಾಗಿದ್ದರೆ ಸಲ್ಲುವು. ಮಂಡಿಯು ಬೇಕು. ಚಿಕ್ಕ ಪುಟ್ಟ ಕೈಗಾರಿಕೆಗಳಾದರೂ ನಿಮ್ಮನ್ನು ಕೊಡಬೇಕು....' ಮುಂತಾಗಿ ಬೋಧಿಸಿದರು.)


ಕೂಡಿಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ರೆಜಿ.ಆಫೀಸಿಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾದ (1921ರಲ್ಲಿ ಸ್ಥಾಪಿತವಾದದ್ದು.

ವಸೂಲಾದ ಶೇರು ಮೊಬಲಗು ರೂ. 1,33,740, ಜಮೆ ಬಂದ ರೀವರ್ಸ್ ಆತಿ 3,30,968-1-8, ವಸೂಲಾಗ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿವಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಜೆಟ್ಟಾಗಿ ಸಾಲ ಕೊಡುವುದಲ್ಲದೆ, ಡಿವಾಜಿಟ್ಟುದಾರರಿಗೆ ಅವರ ಡಿವಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ದೇವನಾತಿಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿವಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷತ್ಕೊಮ್ಮೆ ರಿಜಿಸ್ಟಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮ್ಯಾನೇಜ್.


Edited Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಖ್ಯಾಸ್ಥರು—ಪಿ. ಐ. ಬಸ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೩೬ | ತಾರೀಖು ೩೦-೪-೧೯೬೪ನೇ ಶುಕ್ರವಾರ | ಸಂಚಿಕೆ ೪೭

## "ರಾಜಘಾಟ್" ನಲ್ಲಿ.

ಲೇ:— ಬಿ. ಡಿ. ಗಣಪತಿ

### ಅಂದು.

ಜನವರಿ ತಾ. ೩೧ ಯಮುನಾ ನದಿ ತಟದಲ್ಲಿ ಕಿಕ್ಕಿರಿದು ಜನ. ನೆರೆದಿದ್ದಾರೆ. ಎಲ್ಲರ ಕಣ್ಣೆಲ್ಲಾ ಅರ್ಪಿಧಾರೆಯಾಗಿರೆಯುತ್ತಿದೆ. ಒಯಲಲ್ಲಿ ಮಾಡು ಭೂಮಿಯಂತಿದ್ದ ರಾಜಘಾಟಿನಲ್ಲಿ ವಿಲಿಯೂರಿ ಕೆಂದಗಳು 'ರಘುವರ ಅಬ್ಬಾ ತೇರೀ ತ್ರಾಸು ಸಬ್‌ಕೋ ಸನ್ಮತಿ ದೇ ಭಗವಾನ್' ಹಾಡುತ್ತಿವೆ. ನಾಲ್ಕು ಮೈಲಿಗೂ ವಿಸ್ತೀರ್ಣ ಮೆರವಣಿಗೆಯದು. ರಾಜಘಾಟ್ ಸಮಾಧಿಯಲ್ಲಿ ಭಾಗ ವಹಿಸಿದ್ದಾರೆ. ಮಹಾತ್ಮರ ಕಳೇಬರವು ತರಲ್ಪಡುತ್ತಿದೆ. ಮಣ್ಣಿನಿಂದ ಹಸ್ಸ ಬೆಳೆದು ಬಾಳಿದ ಶರೀರವು ಮಣ್ಣಿನಲ್ಲಿ ಸೇರಲು ಹೋಗುತ್ತಿದೆ. ಜಗತ್ತೇ ರಂಡಾಯದ ದೃಶ್ಯ! ಒಬ್ಬ ವ್ಯಕ್ತಿಯ ಸೇವೆ, ತ್ಯಾಗ, ಧರ್ಮಿಕ ಪ್ರವೃತ್ತಿಗಳು ಯಾವ ರೀತಿ ಜನತೆಯನ್ನು ಆಕರ್ಷಿಸಬಲ್ಲವೆಂಬುದಕ್ಕೆ ಉತ್ತಮ ನಿದರ್ಶನ! ಈ ಹಿಂದೆ ಎಷ್ಟೋ ಮಹಾತ್ಮರು ಹುಟ್ಟಿದ್ದಾರೆ. ಸಾಕ್ರೆಟಿಸ್, ಕ್ರಿಸ್ತ, ವಾಷಿಂಗ್ಟನ್, ಅಬ್ರಹಾಂ ಲಿಂಕನ್ ಮೊದಲಾದವರು ಅಸದೃಶ ಮಹಿಸೂಪಮ್ಯ ಜೀವನ ನಡೆಸಿದವರು. ಪರಂಧಾಮವನ್ನೈದಿದರು ನಮ್ಮ ಹಿಂದೂ ದೇಶದಲ್ಲೂ ಕೂಡ ಬುದ್ಧ, ಶ್ರೀ ರಾಮಕೃಷ್ಣ, ವಿವೇಕಾನಂದ ಮೊದಲಾದ ಧಾರ್ಮಿಕ ಪ್ರಭೃತಿಗಳು ಜನಿಸಿದರು. ಆದರೆ ಮಹಾತ್ಮರಂತೆ ಜನ ಹೃದಯಕಾಶದಲ್ಲಿ ಬೆಳಗಿದವರು ಮೂರೂ ಇಲ್ಲ. ಇಡೀ ಜಗತ್ತಿನ ಹೃದಯ ರಾಜ್ಯವು ಅಂದು ತಲಮಳಗೊಂಡಿತು.

ರಾಜಾಘಾಟಿನಲ್ಲಿ ಕಿಕ್ಕಿರಿದು ಜನ ನೆರೆದಿದೆ. ಅವರನ್ನು ಹಿಡಿತದಲ್ಲಡಲು ಡೆಲ್ಲಿಯ ಎಲ್ಲ ಪೊಲೀಸರು, ಸೈನ್ಯಗಳು ಕಂಕಣಬದ್ಧವಾಗಿ ಶ್ರಮಿಸುತ್ತಿವೆ. ಮಹಾತ್ಮರ ವಾರ್ಧಿವ ಶರೀರದ ದಫನ ಕ್ರಿಯೆ ನಡೆಯುತ್ತಿದೆ. ಯೂನಸ ಪಾದ ಧೂಳಿಯೇ ಪವಿತ್ರ ತೀರ್ಥಯಾತ್ರೆಯೆಂದು, ಯೂನಸ ವಾಣಿಯೇ ವೇದ ಮಂತ್ರವೆಂದೂ ಪರಿಗಣಿಸಲ್ಪಡುತ್ತಿತ್ತು ಆ ಮಾನವೋತ್ತಮನ ಶವ ಸಂಸ್ಕಾರವಾಗುತ್ತಿದೆ. ಶವದ ಮುಖವೂ ಕಟ್ಟಿಗೆ ತೆರೆಸಿದ ಚಿತೆಯ ಸ್ಥಿತಿಯಲ್ಲಿತ್ತು. ಎಣಿಕೆಯಿಂತ ಪೂಚಿ ತೆಯಲ್ಲಿ ಬೆಳಿ ಬಿಳಿ ಸುಣ್ಣಕ್ಕೆ! ರೋಧನ ಧ್ವನಿಯ. ಗಗನಾಂಗಣವು ತುಂಬಿತ್ತು. ಜನತೆಯು ರಾಷ್ಟ್ರಪಿತನನ್ನು ಅಲ್ಲಿಂ ಕಳೆಯಿತ್ತು. ರಷ್ಟ ಚಿತೆಗನ್ನು ಬೆಟ್ಟಿ ಮಾಡಿ ಹಿಂತಿರುಗಿಲು ಯಾರು ಕಲಿಯಿಲ್ಲ ಎಲ್ಲರೂ ಕೂತಲ್ಲೇ ಕುಳಿತಿದ್ದರು. ಎಲ್ಲರ ಮನೋಭಿಪ್ರಾಯವೂ ಒಂದೇ ಆಗಿತ್ತು.

### ಇಂದು

ನೆಲಿನ ದೃಶ್ಯ ನರಿ ಸಂಜೆ ಆಗಿದೆ. ಅಲ್ಲಿ ಗುತ್ತಾ ಹೊಸ್ಸಾರಿ ಜಿಲ್ಲಾ ಘೋಷಣೆಗಳು ಗೃಶ್ಯವೆಲ್ಲಾ ಮೌನ ಪಿಂಡವಾಗಿ ಮಾಡಿದೆ. ಮೊಸರು ಮಜ್ಜಿಗೆ ಮಾರುವ ಹುಡುಗರು ಕೂಗುವ ಧ್ವನಿಯೂ ಕೇಳಿಸುತ್ತಿಲ್ಲ. ಅಲ್ಲಿ ಸೇರಿದ್ದ ಜನರೆಲ್ಲಾ ಮೌನವಾಗಿ ಕುಳಿತಿದ್ದಾರೆ. ಅಲ್ಲಿ ಸೇರಿದ್ದ ಜನರಲ್ಲಿ ಕೆಲವರು ಮಾತ್ರ ಮಾತನಾಡುತ್ತಿದ್ದರು. ಅವರೂ ಸಹ ಮೆಲ್ಲಗೆ ಪಿಸುಗುಟ್ಟುತ್ತಿದ್ದರು. ಅಲ್ಲಿ ಸೇರಿದ್ದ ಜನರಲ್ಲಿ ಕೆಲವರು ಮಾತ್ರ ಮಾತನಾಡುತ್ತಿದ್ದರು. ಅವರೂ ಸಹ ಮೆಲ್ಲಗೆ ಪಿಸುಗುಟ್ಟುತ್ತಿದ್ದರು. ಅಲ್ಲಿ ಸೇರಿದ್ದ ಜನರಲ್ಲಿ ಕೆಲವರು ಮಾತ್ರ ಮಾತನಾಡುತ್ತಿದ್ದರು. ಅವರೂ ಸಹ ಮೆಲ್ಲಗೆ ಪಿಸುಗುಟ್ಟುತ್ತಿದ್ದರು.

ಸಂಜೆಯ ಸಮಯ. ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗಿ ಹೋಗಿದ್ದಾನೆ. ಆಕಾಶದಲ್ಲಿ ಕೆಂಪು ಬಣ್ಣ ಮಾಯವಾಗಿ ಕಪ್ಪು ಬಣ್ಣ ಆವರಿಸಿಕೊಳ್ಳುತ್ತಿದೆ. ಸಂಜೆಯ ಸಮಯ. ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗಿ ಹೋಗಿದ್ದಾನೆ. ಆಕಾಶದಲ್ಲಿ ಕೆಂಪು ಬಣ್ಣ ಮಾಯವಾಗಿ ಕಪ್ಪು ಬಣ್ಣ ಆವರಿಸಿಕೊಳ್ಳುತ್ತಿದೆ. ಸಂಜೆಯ ಸಮಯ. ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗಿ ಹೋಗಿದ್ದಾನೆ. ಆಕಾಶದಲ್ಲಿ ಕೆಂಪು ಬಣ್ಣ ಮಾಯವಾಗಿ ಕಪ್ಪು ಬಣ್ಣ ಆವರಿಸಿಕೊಳ್ಳುತ್ತಿದೆ.

### ಮುಹಾತ್ಮರ ಜೀವನದಲ್ಲಿ.

ಒಂದೂವರೆ ಹತ್ತರಿಗೆ ಈ ರಾಜಘಾಟ್‌ನಲ್ಲಿ ಸ್ಮಾರಕವನ್ನು ಕಟ್ಟಲಾಗಿದೆ. ಅಲ್ಲಿ ಅದ್ಯಪ್ರಮಾಣದಲ್ಲಿ ಸಾಮಾನ್ಯ ಮನುಷ್ಯರಿಗೆ ಸ್ಮಾರಕವಾಗಿರುವಂತೆ ಮಹಾತ್ಮರಿಗೆ ಸ್ಮಾರಕವನ್ನು ನೋಡಿದ ಕೂಡಲೆ ಎಲ್ಲರಿಗೂ ಎಂತೋ ಅನಿಸಿಕೆ. ಪರಿಪೂರ್ಣ ಸ್ವಾತಂತ್ರ್ಯಕ್ಕಾಗಿ ಸಾವು ಮಹಾತ್ಮರ ಕಾಲೆಳೆದಾಯಿತೇ ಅಲ್ಲ, ಅವರ ಕಳೇಬರವನ್ನು ಕೊಲೆಗಾರ ನಾಥೂರಾಮ ಸಿಸ್ತುಬದ್ಧವಾಗಿ ಧೂಪ ಗೈದ! ಗಾಂಧಿಯನ್ನು ಅವರ ಹೊಣೆಗಾರಿಕೆಯಿಂದ ಸಮರ್ಥಿಸಿಕೊಂಡು. ಆಗಾಗ ಗಾಂಧೀ ರೂಪಣಿಯಿಂದ ಕಾರ್ಯ ಭಸ್ಮಗಿದ ರಾಜಘಾಟ್ ಸಮಾಧಿಕ, ಧಾರ್ಮಿಕ ಮಾಧ್ಯಮವಾಯಿತು. ಇದು ಸಾಮಾನ್ಯರಲ್ಲಿ ಹಿಂದೂದೇಶದ ಉದ್ಧಾರಕ್ಕಾಗಿ ಒಡಹುಟ್ಟಿದವರ ಜೆದರು. ಕಣ್ಣೀರಾಗುತ್ತಾ ರಕ್ತವನ್ನು ಹಿಂಡಿ ಅಭಿಷೇಕ ಮಾಡಿಕೊಂಡಿದ್ದಾರೆ. ಗಾಂಧೀಜಿಯು ನರಸ್ವಪ್ನ ನಡಿಗೆಯಿಂದ ಅಹಿಂಸಾ, ಸತ್ಯ ಇವುಗಳನ್ನು ಸಾರಿದ್ದರೂ ಇಂದು ಭರತ ಖಂಡವು ಚಿತ್ರ ಜೇರಿಯಾಗಿದೆ. ದೊಟ್ಟಿಗೆ ಸರಿಯಾಗಿ ಕೂಡಿದೆಯು ಕೆಲಸಗಾರರು ಮನುಷ್ಯರ ಮಾಡಿದರೆ ಗಾಂಡಿಗೆ ಎಂದೂ ಆಗಬೇಕಾಗಿದೆ. ನೌಕಾದಳ, ವಿಮಾನದಳ, ಇತರ ಸೇನೆಗಳು ಅಹಿಂಸಾ ಪ್ರಯೋಜನವಿಲ್ಲವೆಂಬ ಪಕ್ಷ ಎಂದಿನಂತೆ ವಿರಾಜಿಸಲಾಗಿ ಮಹಾತ್ಮರು ಹುಟ್ಟಿದ ದೇಶದಲ್ಲೇ ನಾವಿತ್ತಿವೆ ನಮ್ಮ ವಿದೇಶ ರಾಯಭಾರಿ ಖಿಡೇರಿಗಳಲ್ಲಿ ವಿದೇಶಿ ಮಧ್ಯಗಳು ಶೀಲಿಸಂತೆ ಹುಯ್ಯುತ್ತಿವೆ. ಪಾರ್ಟಿಗಳು ನಡೆಯುತ್ತಿವೆ. ಗಾಂಧೀಜಿಯು ದೇಶದ ಪ್ರತಿನಿಧಿಗಳು ಅಲ್ಲಿ ಕುದ್ದ ವೇಶೋಪ್ಯರಂತೆ 'ಸೂಟ್' ನಲ್ಲಿರುತ್ತಾರೆ. ಗಾಂಧೀಜಿಯ ಉಪದೇಶ, ಜಾತಿ ತತ್ವ ಹೊಟ್ಟಿಗಿಲ್ಲದ ಬಡವರಿಗೆ! ಸ್ವಾತಂತ್ರ್ಯವಿಲ್ಲದ ಗುಲಾಮರಿಗೆ! ಸ್ವತಂತ್ರ ಹಿಂದೂಸ್ಥಾನಕ್ಕೆ ಅವುಗಳ ಅವಶ್ಯಕತೆಯಲ್ಲಿ?

### ಮರಳಿ ಮರಳಿ ಕೊಲೆ!

ಕ್ರಿಸ್ತನನ್ನು ಆನಿನ ಜನರು ಶಿಲುಬೆಗೇರಿಸಿದಾಗ ನೇಡು ಅಲ್ಲಿಗೇ ಮುಗಿಯಿತ್ತು. ಆದರೆ ನಂತರ ಜನತೆಗೆ ತಪ್ಪು ಅರಿವಾಗಿ ಕ್ರಿಸ್ತನನ್ನು ಪೂಜಿಸತೊಡಗಿದರು. ಅವನ ಸಂದೇಶವನ್ನು ಜಗತ್ತಿನ ಮೂಲೆ ಮೂಲೆಗೂ ಚೆಲ್ಲಿ ಸಂಸ್ಥೆಗಳನ್ನು ಪ್ರಾರಂಭಿಸಲು ಯತ್ನಿಸಿದರು. ಆದರೆ ಬಿಲಾತಭವನದ ಅವರಣದ ಸಿಂಹಾಸನವೇರಿದಲ್ಲಿ ಯೆಹೂದ್ಯರ ಎದೆಗೆ ಗಂಡು ಹಾಕಿ ಕೊಂದರೂ ಧರ್ಮಸಂಸ್ಥೆಗಳು ನುಗ್ಗಿದಂತಿಲ್ಲ. ನಮ್ಮ ದೇಶದಲ್ಲಿ ಬೆಳೆದು ಬಂದಂತಿಲ್ಲ. ಮಹಾತ್ಮರ ಜೀವನ ಸಿದ್ಧಾಂತಗಳೂ ಮಿಗಲಾಗಿದ್ದು, ಅಹಿಂಸೆ, ಸತ್ಯ, ನೀತಿ, ಧರ್ಮಗಳ ಕೊಲೆಯಾಗುತ್ತಿದೆ. ಪುನರಪಿ ಮರಳಿ ಕೊಲೆಯಾಗುತ್ತಿದೆ!

ರಾಜಘಾಟಿನಲ್ಲಿಯ ಮಹಾತ್ಮರ ಚಾಲ್ಲಾಸಿಕ ಚಿತ್ರ ಪದಗಳಂತೆಯೇ, ನನಗೆ ತೋರಿನ ರೀತಿ ಮಹಾತ್ಮರ ತತ್ವಗಳನ್ನು ರೂಪಿಸಕೊಡುಗಿರುವೆವು. ನೆನಗೆ ಹಿತವೆನ್ನುವರೀತಿ ಒಣ್ಣಬಳಿಯು ತ್ತಿರುವೆವು. ಇವರ ಸ್ಮಶಾನದಲ್ಲಿ ಅಂದಿಟ್ಟ ಹೂವುಗಳು ಬಾಡಿದಂತೆ ಅವರ ಅನಿವಾರ್ಯವಾದ ತ್ಯಾಗ ಹಿರಿಮೆಗಳಿಂದ ಬಾರತೀಯರು ಹೃದಯದಲ್ಲಿ ಪ್ರಜ್ವಲಗೊಂಡಿದ್ದ ಪವಿತ್ರಭಾವ ಕುಸುಮವು ಬಾಡಲಿಡಿದಿದೆ. ಪಂಡಿತ ಜವಾಹರರಿಂದ ಹಿಡಿದು ಎಲ್ಲರೂ ಗಾಂಧಿಮಾರ್ಗವನ್ನು ಒಮ್ಮತದಿಂದ ರಚಿಸಿದ ಪಾರ್ಟಿಸ್ಥಾಪಿತ ಸಿದ್ಧಾಂತಗಳನ್ನೇ ನೋಡುತ್ತಿದ್ದೇವೆ! ಇಂಥ ಧೋರಣೆಯಿಂದಲೇ ಪ್ರಗತಿಪರ ಪ್ರಗತಿಮಾರ್ಗಕ್ಕೆ ಬರುವುದು? ರಷ್ಟ್ರೀಯ ಶಕ್ತಿಯಂದಲ್ಲಿ ಆತ್ಮದ ಒಲವಿಗ. ವಿಜ್ಞಾನದ ಛಾವುಟ ದೊಡನಲ್ಲಿ ನಮ್ಮ ಪುಣ್ಯ ಆಹಿಂಸೆಯ ಧ್ವಜವೂದನ. ರಂಧ್ರಿನ ಒಲವಿಂದಲ್ಲ; ಬದಲು ತ್ಯಾಗ ಪೂರ್ಣ ಸೇವೆಯ ಒಲವಿಂದ ವಿನೋಕಾನಂದರ ಈ ವಾಣಿ ನಮ್ಮ ಕಣ್ಣೆರೆಯಲೀ.

ಸ್ವರ್ಗಲ್ಲಿ ಒಂದೂದೇಶವು ನಗರಗಳನ್ನು ನಿರ್ಮಿಸಿ ಲಂಡನ್, ನ್ಯೂಯಾರ್ಕ್‌ಗಳಿಗೆ ನೂರಿರು ತೋಲು ಹೊಲಿಟೆರಿಯಂದೇ? ಸಂಹಾರಕ್ಕೆಡಗುನ್ನು ಕಟ್ಟಿ ಆಕಾಶ ಜುಂಬಿತ ಅಮೇರಿಕಾ ಗೃಹಗಳಿಗೆ ಪಾದರಿರಿಗಾಗುವದೇ? ಬಾಂಬು ವಿಮಾನಗಳನ್ನು ಪ್ರಯೋಗಿಸಿ ಪಾಪಾಣು ಬಾಂಬಿಗೆ ತಲಪಿರುವ ಪಾಶ್ಚಿಮಾತ್ಯರಿಗೆ ಮಾರ್ಗದರ್ಶಿಯಾಗುವದೇ? ಜಯಹೋ ಕ್ರಿಸ್ತನ! ಹೇ ಭಾರತೀಯರೇ! ಸ್ವತಂತ್ರ ಭರತಖಂಡವೇ! ಆ ಮಾರ್ಗ ನಿಮ್ಮದಲ್ಲ. ಇದು ವಿನಾಶದ ಮಾರ್ಗ. ಯುದ್ಧದ ಮಾರ್ಗ. ಪಾಶ್ಚಿಮಾತ್ಯ ಧೌಲಿಕವಾದದ ಮಾರ್ಗ. ಈ ಮಾರ್ಗ ಅನುಸರಿಸಿ ಜಗತ್ತು ಶಾಂತಿಯನ್ನು ಕಾಣದೆ ತಲಮಳಗೊಂಡಿವೆ. ಈ ಜಗತ್ತಿಗೆ ಸತ್ಯ ಅಹಿಂಸೆಯನ್ನು ಸಾರಿ ಮಾರ್ಗದರ್ಶಿಯಾಗಿರಿ. ವಿಕೇಂದ್ರೀಕೃತ ಕೈಗಾರಿಕೆ ಉದ್ಯಮಗಳಿಂದ ಮಾರ್ಗದರ್ಶಿಸಿರಿ. ಪಂಚಾಯತ ರಾಜ್ಯವನ್ನು ಸ್ಥಾಪಿಸಿ ಪ್ರಜಾ ಪ್ರಭುತ್ವದ ಮಾರ್ಗ ತೋರಿ. ಇನ್ನೊಬ್ಬ ನನ್ನೂ ತನ್ನಂತೆ ನೋಡುವ ಪ್ರೇಮದ ವೀಣೆಯನ್ನು ಮಿಡಿದು ಶಾಂತಿಯ ಪಥ ತೋರಿಸಿ. ನೇಪಥ್ಯದಿಂದ ಹುಟ್ಟಿ ರಾಮ, ಕೃಷ್ಣ, ಬುದ್ಧ, ಅಶೋಕ, ವಿವೇಕಾನಂದ ಮೊದಲಾದವರಿಂದ ಸೃಜಿಸಲ್ಪಟ್ಟ ಇನ್ನೂ ಜೀವಂತ ಬದುಕಿ ನಡೆಯುತ್ತಿರುವ ಹಿಂದೂ ಸಂಸ್ಕೃತಿಯ ಸಹನಾಮೂರ್ತಿಯನ್ನು ತೋರಿಸಿ. ಅದೋದೇ ಜಗತ್ತಿಗೆ ಶಾಂತಿಯ ಮಾರ್ಗ. ಅದೇ ಗಾಂಧೀ ಮಾರ್ಗ. ಅದೇ ಯೇಸುದೇವನಿಗೆ ಚಿರ ಸ್ಮಾರಕವನ್ನು ರಚಿಸುವ ಮಾರ್ಗ.

# ಕೊ ಡ ಗು

ಶಾ. ೩೦-೪-೧೯೪೮ನೇ ಶುಕ್ರವಾರ

## ಘರ್ಷಣೆ?

ಹೈದರಾಬಾದಿನ ವಿಚಾರದಲ್ಲಿ ಪಂಡಿತ ಜವಾಹರರು ಹೇಳಿದ ವಿಚಾರಕ್ಕೆ ಉತ್ತರವಾಗಿ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ. ಲಾಯಖ್ ಅಲಿಯವರು ಈ ರೀತಿ ಉತ್ತರವಿತ್ತಿದ್ದಾರೆ. 'ಹೈದರಾಬಾದು ಸ್ವತಂತ್ರವಾಗಿಲು ಕೆಂಕಣಬದ್ಧವಾಗಿಲ್ಲ. ಹೈದರಾಬಾದು ನಿರ್ಬಲವಿಂಬಹುದ. ಆದರೆ ರಕ್ಕೆ ಪುಯೋಗದ ಪ್ರತಿಯೊಂಗು ವಿರ್ಣಾಹನ್ನೂ ಎದುರಿಸುವದು ಇದರಿಂದ ಹೈದರಾಬಾದಿನ ಸಮಸ್ಯೆಯು ಶಾಂತಿಯುತವಾಗಿ ಬಗೆಹರಿಸಲ್ಪಡುವದೇ ಎಂಬ ಶಂಕೆಯು ಬಂದಿದೆ. ಹೈದರಾಬಾದಿನ ದಬ್ಬಾಳಿಕೆ ಹದ್ದಮೀರಿದೆ. ಕೇಂದ್ರ ಸರಕಾರವು ಶಾಂತಿಯ ಮಾರ್ಗದಿಂದ ಈ ಸಮಸ್ಯೆಯನ್ನು ಬಗೆಹರಿಸುವ ಪಗೀರಥ ಪ್ರಯತ್ನ ಮಾಡಿದ; ಇನ್ನೂ ವಿಡುತ್ತಿದೆ. ಆದರೆ ಹೈದರಾಬಾದಿನ ಸಮ್ಮಿ ಮಂತ್ರಿ ಲಾಯಖ್ ಅಲಿಯವರು ಮನ್ನು, ರಜಕಾರ್ ಪಕ್ಷದ ಮುಂದಾಳಾದ ರಿಜ್ವಿಯವರ ಹೇಳಿಕೆಗಳು ಇವುಗಳಿಗೆ ಸಮಾಯಿಕವಾಗಿಲ್ಲ. ಕೇಂದ್ರ ಸರಕಾರದ ಶಾಂತಿಯ ಮಾರ್ಗವನ್ನು ಆದರ ನಿರ್ಬಲತೆಯೆಂದು ತಿಳಿದು ಯುದ್ಧಕ್ಕೆ ಹೈದರಾಬಾದು ಕಾಲುಕೆರೆಯುತ್ತಿದೆ. ಕೇಂದ್ರ ಸರಕಾರವು ಈ ಬಗ್ಗೆ ಶೀಘ್ರ ತೀರ್ಮಾನಗೊಡಲಿದೆ.

## ವರ್ತಮಾನ.

ಬಿನ್ನಂಡ ಸಂಜಪ್ಪ ಮೆಮೋರಿಯಲ್ ಕ್ರಿಕೆಟ್ ಕಪ್ಪಿನ ಸಂದ್ಯಾಟದ ಕಡೇ ಆಟವು ಮಡಿಕೇರಿ ಹೈಸ್ಕೂಲ್ ಟೀಮಿನವರಿಗೂ, ಪ್ಲಾಂಟರ್ಸ್ ಟೀಮಿನವರಿಗೂ ನಡೆದು ಪ್ಲಾಂಟರ್ಸ್ ಟೀಮಿನವರು ಜಯಶೀಲರಾದರು.

ತಮ್ಮಣ ಕೆಟ್ಟ ಹಾಕಿ ಕಪ್ಪಿನ ಸಂದ್ಯಾಟವು ತಾ. ೧೫-೪-೪೮ರಿಂದ ಮಡಿಕೇರಿಯಲ್ಲಿ ಪ್ರಾರಂಭವಾಗುತ್ತಿದೆ ಕಡೇ ಆಟವು ತಾ. ೪-೫-೪೮ರಲ್ಲಿ ನಡೆಯುವ ವದು.

ಸುಬಾಶಚಂದ್ರಬೋಸರ ರಾಷ್ಟ್ರೀಯ ದಳದಲ್ಲಿ ಕರ್ನಲರಾಗಿದ್ದ ಶ್ರೀ ಕೊಡಂದೆರ ಪೊನ್ನಪ್ಪ ತಿಮ್ಮಯ್ಯನವರು ಪಾರ್ಸಿ ಮತಕ್ಕೆ ಸೇರಿರುವರೆಂದೂ, ಅವರು ದ ಕ್ಯೂರ್‌ಜೀ ತಿಮ್ಮಯ್ಯ ಎಂದು ಹೆಸರಿಟ್ಟು ಕೊಂಡಿರುವರೆಂದು ವರ್ತಮಾನ.

ಕೊಂಗಣ ಗ್ರಾಮದ ಕಡೇಮಾಡ ಟಿ. ಉತ್ತಯ್ಯನವರ ದನಗಳ ಜೊತೆಯಲ್ಲಿ ಆರು ಹಲ್ಲಿನ ಒಂದು ಉಡ ಕೋಡಿನ ವಿನಾಶದ ಒಂದು, ನಾಲ್ಕು ಹಲ್ಲಿನ ಕುಡಿಕೆ ಕೋಡಿನ ಬಿಳಿ ಎಮ್ಮೆ ಹೀಗೆ ಎರಡು ರಾಸುಗಳು ಎರಡು ತಿಂಗಳುಗಳಿಂದ ಏಪೆಯೆಂದು ಕಾಣಿಸಿಕೊಂಡು ತಪ್ಪಿ ರುಜುವಾತಿನಿಂದ ಹೊಡೆಸಿಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಗಾಂಧಿ ಸ್ಮಾರಕ ಕೇಂದ್ರ ನಿಧಿಗೆ ಹಣ ಜನರಿಯಿಸುವ ಏರ್ಪಾಡು ಮಾಡಲು ತಾ. ೨೪ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಒಂದು ವಿಷಯಗಳ ನಡೆದು ತುಂಬಾ ಚರ್ಚೆ ನಡೆದ ಮೇಲೆ ಉಪಸಮಿತಿಯನ್ನು ನೇಮಿಸದೆ ವಿಷಯಗಳು ಬಂಕಾಸ್ಪಾಯಿತೆಂದು ತಿಳಿಯ ಬರುತ್ತದೆ.

ಶ್ರೀ ಕೋದಾಂಡ ಐಯ್ಯಪ್ಪ (ಜಪ್ಪ) ಮಾಚಯ್ಯನವರನ್ನು ಇಂಡಿಯಾ ಕಾಫಿ ಬೋರ್ಡಿನ ಮುಖ್ಯ ಮೂರ್ತಿಂಗ್ ಅ ಫೀಸರಾಗಿ ನೇಮಿಸಿರುವರು.

ತಾರೀಕು ೩೦ ರಲ್ಲಿ ಶ್ರೀ. ಮೂತಂಡ ಚಿಂಗಪ್ಪವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆನಾಡಿನವರ ಸಭೆಯೊಂದು ನೆರೆದು ಈ ನಾಡಿನಲ್ಲಿ ಗಾಂಧಿ ಸ್ಮಾರಕವೊಂದನ್ನು ಸ್ಥಾಪಿಸಲು ಒಂದು ನಿಧಿಯನ್ನು ಸಂಗ್ರಹಿಸಲು ವಿಳು ಸದಸ್ಯರಿಂದ ಕೂಡಿದ ಸಮಿತಿಯೊಂದನ್ನು ಆರಿಸಲಾಯಿತ.

ತಾರೀಕು ೨೯ ರಲ್ಲಿ ಸೂರ್ನಾಡಿನಲ್ಲಿ ಶ್ರೀ. ಬಡುವಂಡ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಗಾಂಧೀ ಸ್ಮಾರಕವೊಂದನ್ನು ರಚಿಸಲು ನಿಧಿ ಸಂಗ್ರಹಕಾರ್ಯಕ್ಕಾಗಿ ಜನರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು.

ತಾ. ೨೨ರಲ್ಲಿ ಹಳೆಯ ಕಾಂಗ್ರೆಸ್ ಕೆಲಸಗಾರರೂ ರಾಷ್ಟ್ರೀಯ ಪತ್ಯಾಗ್ರಹದಲ್ಲಿ ಜೈಲಿಗೆ ಹೋದವರೂ ಆದ ಹೊಟ್ಟೇಂಗಡ ಕುಶಾಲಪ್ಪನವರು ಶಿವಾಧೀನರಾದರೆಂದು ದುಃಖಿಸಲು ವ್ಯಸನ ಪಡುತ್ತೇವೆ.

---

ಬಾಷ್ಪಿ.

## ಹೊಸ ನಾಟಕ!

ವ್ಯಸನಾಯ ಇಲಾಖೆಯು ಯಾವ ದೋ ಉದ್ಯೋಗಕ್ಕೆ ಜನರು ಬೇಕಾಗಿತ್ತಂತೆ. ಈ ಕೆಲಸಕ್ಕೆ ಸುಮಾರು ೫೦ ಜನರ ಅರ್ಜಿ ಇತ್ತು. ತಾರೀಕು ೨೧ ರಲ್ಲಿ ಇವರ 'ಸಿಲೆಕ್ಷನ್' ಎಂದಿತ್ತು. ಮನೆಯಲ್ಲಿ ತಂದ ತಾಯಂದಿರಿಂದ ಪೀಡಿತರಾಗಿಯೋ, ಹೆಂಡತಿ ಮಕ್ಕಳ ಕಷ್ಟನಿವಾರಣಾರ್ಥವಾಗಿಯೋ, ಯಾ ತಮ್ಮ ಹೊಟ್ಟೆಹೊರೆದುಕೊಳ್ಳುವ ಕಾತುರತೆಯಿಂದಲೋ ದೂರದೂರದಿಂದ ಬಸ್ಸಿನಲ್ಲಿ ಸೀಟ್ ಸಿಕ್ಕದ ಈ ಸಮಯದಲ್ಲಿ ಕಂಡಕ್ಟರುಗಳಿಗೆ 'ದಮ್ಮಯ್ಯ' ಹಾಕಿ ಇವರು ಬಂದಿದ್ದರು. ಮಡಿಕೇರಿ ಕೋಟೆ. ಅಭ್ಯರ್ಥಿಗಳ ಮುಂದೆ ಕಟ್ಟುಕಥೆಯ ಮನೆಯ ಮುಂದೆ ನಿಂತ ಕುರಿಗಳಂತೆ ಇವರು ನಿಂತಿದ್ದರು! ನಾಲ್ಕು ಜನರ 'ಸಿಲೆಕ್ಷನ್' ಕಮಿಟಿ ಬಂತು ಅವರು ಕೆಲವರನ್ನು ಕರೆದು ಕೇಳಿದ ಪ್ರಶ್ನೆಗಳ ಮಾದರಿ ಇದು.

(೧) ಸಿಲೆಕ್ಷನ್ ಕಮಿಟಿ:- ನಿನ್ನ ಹೆಸರೇನು?

ಉಮೇದುದಾರ:-'ಎ. ಸಿ.'

ಸಿಲೆಕ್ಷನ್ ಕಮಿಟಿ:-'ಎ' ಎಂದರೆ?

ಉಮೇದುದಾರ:-ಎ..... ..(ಇಂಧಾನನೆ)

ಸಿಲೆಕ್ಷನ್ ಕಮಿಟಿ:-ಓಕ್ಕೋ,....ರ ಮಗ ನಿನ್ನ ತಂದೆಯನ್ನು ಗೊತ್ತು. ಸರಿ, ಹೋಗು.

(೨) ಸಿ. ಕ:-ನೀನು.....ನಲ್ಲವೇ?

ಉ:-ಹೌದು ಸಾರ್.

ಸಿ. ಕ. ಒಬ್ಬರು:-ಇವನು ಒಳ್ಳೆ ಪಾಕಿ ಆಟಗಾರ. ಆದ್ದರಿಂದ ಅವನಿಗೊಂದು ಛಾನ್ಸು ಕೊಡಬಹುದು.

ಸಿ. ಕ:-ನೀನು ಹೋಗಬಹುದು.

(೩) ಸಿ. ಕ:-ನಿನ್ನ ಹೆಸರೇನು?

ಉ:-.....(ಇಂಧಾವನು)

ಸಿ. ಕ:-ಯುದ್ಧ ನಿವೃತ್ತ ಸೈನಿಕನೆ?

ಉ:-ಇಲ್ಲ.

ಸಿ ಕ:-ಹಾಗಾದರೆ ನಿನ್ನನ್ನು ತೆಗೆದುಕೊಳ್ಳಲಾಗುವದಿಲ್ಲ.

ಹೀಗೆ ಕೆಲವರನ್ನು ಪ್ರಶ್ನಿಸಿದರು. ಕೆಲವರನ್ನು ಕರೆಯಲೇ ಇಲ್ಲ. 'ಸಿಲೆಕ್ಷನ್' ನಾಟಕ ಮುಗಿಯಿತು. ಅರಿಸಿದವರಲ್ಲಿ ಕೆಲವರಿಗೆ ನಾಲ್ಕು ವಾಕ್ಯ ಸರಿಯಾಗಿ ಬರೆಯಲು ಬರುವದಿಲ್ಲ ಬರೆಸದ್ದನ್ನು ಆರ್ಥಮಾಡಿಕೊಳ್ಳಲೂ ಸಾಧ್ಯವಿಲ್ಲ. ವ್ಯವಸಾಯದ ಅನುಭವ ಯಾರಿಗೂ ಇಲ್ಲವೆಂದರೆ ತಪ್ಪಾಗಲಾರದು 'ಸಿಲೆಕ್ಷನ್' ಮಂಡಳಿಯ ದೃಷ್ಟಿಯಲ್ಲಿ ತಮಗೆ ಗೊತ್ತಿರುವ ... ಮನೆಯವರ ಮಗನಾದರೆ ಅತಿಯಾಗಿ ವ್ಯವಸಾಯಕ್ಕೂ ಸಂಬಂಧವೇನು? ಹೀಗೆ ಆಟಗಾರನಾದರೆ ವ್ಯವಸಾಯವೇಕೆಬುದು ಹಾಕಿ ಆಟ ಆಲ್ಲತಾನೆ? ಸೈನ್ಯದಿಂದ ಬಂದವನಾಕ್ಷಣ ಆಕಸಿಗೆ ಹೆಚ್ಚಿನ ಅರ್ಹತೆ ಏನು? ಕೆಲವರನ್ನು ಸಿಲೆಕ್ಷನಿಗೆ ಒರಪೂಡಿದ್ದರೂ ಅವರನ್ನು ಕರೆಸಿ ವಿಚಾರಿಸದರಲು ಕಾರಣವೇನು? ಹಿಂದೂದೇಶಕ್ಕೆ ಸ್ವಾತಂತ್ರ್ಯ ಬಂದಿದೆ ನಿಜ. ಆದರೆ ಕೊಡಗಿನಲ್ಲಿ? ಒಡನಾಡಿಗಳ ಆಶ್ರಯಿಸುವ ಸ್ವಾತಂತ್ರ್ಯ ಏಂ?

'ಸಿಲೆಕ್ಷನ್'

---

## ಸಾರ್ವಜನಿಕ ಸಭೆಗಳು.

ವೀರಾಜಪೇಟೆ.

ಈ ತಾ. ೨೮ನೇ ಬುಧವಾರ ಮಧ್ಯಾಹ್ನ ೧ ಗಂಟೆಗೆ ವೀರಾಜಪೇಟೆ ರೀಡಿಂಗ್ ರೂಮಿನ ಎದುರುಗಡೆ ವೈದಾನದಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಶ್ರೀ ಮೂತಂಡ ಚಿಂಗಪ್ಪನವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಶ್ರೀಮಂಗಲಾಗ ಕೆ. ಪಿ. ಕರುಂಬಯ್ಯ ಪಿ. ಐ ಬೆಳ್ಳಪ್ಪ ಮುಚ್ಚಂ ಗುಮಾಡೆಯಂಡ ಬಿದ್ದಯ್ಯ ಇವರುಗಳು ಪಾರಸಿಗೆ ಬಂದಿದ್ದ ಭಾಷೀ ಕಾಡುವ ಚಿನ್ನಪ್ಪನವರಲ್ಲಿ ಕೊಡಗಿಗೆ ಸಂಬಂಧಿಸಿದ ಸಲಹೆಗಳನ್ನು ಕಾರಿತು. ವಿಧಿಸಿ ಭಾಷಣ ಮಾಡಿದನಂತರ ರಿ ಕೆಳಗಿನ ರೆರಾವು ಸರ್ವಸಮ್ಮತದಿಂದ ಪಾಸಾಯಿತು.

'ಚೀಫ್ ಕಮಿಷನರುಗಳ ಪ್ರಾಂತ್ಯಗಳ ಮುಂದಿನ ಆಡಳಿತ ರಚನೆಯನ್ನು ಕುರಿತು ಸಲಹೆ ಕೊಡಲು ವಿರ್ಮಿಸಿದ ವಿಧಾಕ್ ಸಮಿತಿಯವರು ಮಾಡಿರುವ ಸಿಫಾರಸ್ಸುಗಳು ಇಲ್ಲಿಯ ಜನರಿಗೆ ತೃಪ್ತಿಕರವಾಗುವುದರಿಂದ ಅವುಗಳನ್ನೇ ಮುಂಜಾರ್ಡಾಡೇಕೆಂದೂ, ಡ್ಯುಪ್ಲಿಕೇಟ್ ಕಮಿಟಿಯವರು ನೂಡಿರುವ ಸಲಹೆಗಳು ತುಂಬಾ ಅತೃಪ್ತಿಕರವಾಗಿ ಕಾರಣ ಜಿಲ್ಲೆಗಳನ್ನು ತಿರಸ್ಕರಿಸಬೇಕೆಂಮ ರಾಜ್ಯಘಟನಾ ಸಭೆಯವರನ್ನು ಈ ಸಭೆಯು ಕೇಳಿಕೊಳ್ಳುತ್ತದೆ.'

ಸಂಬಂಧ ಪಟ್ಟವರಿಗೆ ಕೂಡಲೇ ಇದನ್ನು ತಂತಿಮೂಲಕ ತಿಳಿಸುವಂತೆ ತೀರ್ಮಾನಿಸಲಾಯಿತು.

**ಸೂರ್ನಾಡು.**

ಸೂರ್ನಾಡಿನಲ್ಲಿ ಸಾರ್ವಜನಿಕ ಸಭೆಯೊಂದು ತಾ. ೨೯ ರಲ್ಲಿ ಮಧ್ಯಾಹ್ನ ಪಾಂಡಾಣೆ ಮಂಜಿನಲ್ಲಿ ನಡೆಯಿತು. ಶ್ರೀ ಪಾಂಡಂಡ ಮೊಣ್ಣಪ್ಪನವರು ಅಧ್ಯಕ್ಷರಾಗಿದ್ದರು. ಕೊಡಗಿನ ಭಾವೀ ಆಡಳಿತ ರಚನೆಯನ್ನು ಕುರಿತು ರಾಜ್ಯ ಘಟನಾ ಸಭೆಯ ಸಮಿತಿಗಳು ನೂಡಿರುವ ಸಲಹೆಗಳ ವಿಚಾರ ಶ್ರೀ. ಪಿ. ಪಿ. ಬೆಳ್ಳಪ್ಪನವರು ವಿವರಿಸಿ ಹೇಳಿದರು. ನಂತರ ಶ್ರೀ. ಕೆ. ಎಂ. ಪೊನ್ನಪ್ಪನವರು ಮೇಲ್ಕಂಡ ರೀತಿಯ ರೆರಾವನ್ನು ಸಭೆಯ ಮುಂದಿಟ್ಟರು. ಸರ್ವಸಮ್ಮತದಿಂದ ರೆರಾವು ನಂಜೂರಾಗಿ ಅದನ್ನು ಸಂಬಂಧಿಸಿದವರಿಗೆ ತಂತಿ ಕಳುಹಿಸಲು ತೀರ್ಮಾನವಾಯಿತು.

---

## ಶ್ರೀ ರಾಮಕೃಷ್ಣ ಜಯಂತಿ.

ತಾರೀಕು ೩೧-೪-೪೮ ರಲ್ಲಿ ಪೊನ್ನಂಪೇಟೆ ಶ್ರೀ ಶಾರದಾಶ್ರಮದ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ೧೦೩ನೇ ಜಯಂತಿಯೂ ಧರ್ಮಾನ್ವೇಷಯ ವಾರ್ಷಿಕ ಅಧಿವೇಶನವು ಕೊಡಗಿನ ಚೀಫ್ ಕಮಿಷನರಾದ ಶ್ರೀ. ಸಿ. ಟಿ. ಮೊದಲಿಯಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಮಧ್ಯಾಹ್ನ ೩-೩೦ ಗಂಟೆಗೆ ಪೂರಪಣಿಗೆ ಯಾಯಿತು. ಸಾಯಂಕಾಲ ೫ ಗಂಟೆಗೆ ಮೋಡೆಲ್ ಸ್ಕೂಲ್ ಹಾಲ್‌ನಲ್ಲಿ ಸಭೆ ಸೇರಿತು. ಪ್ರಾರ್ಥನೆಯ ನಂತರ ಧರ್ಮಾನ್ವೇಷಯ ಸೂಡುತ್ತಿರುವ ಸೇವೆ, ಆಫೀಸ ಆಡಚಣೆ, ತೆಂಗಳಿಗೆ ಪರಾಸರಿ ಹತ್ತು ಸಾವಿರಕ್ಕೂ ಮಿಕ್ಕಿ ಜನರಿಗೆ ಔಷಧಿ, ಚಿಕಿತ್ಸೆ ನಡೆಯುತ್ತಿದ್ದರೂ ಸಾರ್ವಜನಿಕ ಬೆಂಬಲ ಸಾಕಷ್ಟು ದೊರೆಯದೆ ದೊಂಬಾಯಿಯಂಧಾ ದೂರದ ನಗರದಿಂದ ಧನ ಸಹಾಯ ಪಡೆಯಬೇಕಾದ ಪ್ರಸಂಗ ವರದಿಯಲ್ಲಿ ಸೂಚಿಸಲ್ಪಟ್ಟಿತ್ತು. ಅಧ್ಯಕ್ಷರ ಭಾಷಣದ ನಂತರ ಶ್ರೀಗಳಾದ ಬಿ. ಡಿ. ಗಣಪತಿ ಮತ್ತು ಸ್ವಾಮಿ ಸೋಮಾನಂದ ಸರಸ್ವತಿಯವರು ಅನುಕ್ರಮವಾಗಿ ವಿಷೇಶಾನಂದರ ಮತ್ತು ಶ್ರೀರಾಮಕೃಷ್ಣ ಪರಮಹಂಸರ ಸಂದೇಶಗಳನ್ನು ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದಲ್ಲಿ ಇವ ಸಾಧನಾಂಶ ಈ ಆಶ್ರಮಕ್ಕೆ ಸಹಾಯನೀಡಲಾಗಿ ಭರವಸೆ ಇತ್ತರು. ಸ್ವಾಮಿ ಏಕ್ಯಭಾವಾನಂದ ಜೀಯವರು ನರೆವಾಗಿ ವಂದನೆ ಅರ್ಪಿಸಿದ ನಂತರ ಸಭೆ ಮುಕ್ತಾಯಗೊಂಡಿತು. ಸಾಯಂಕಾಲ ೮ ಗಂಟೆಗೆ ಮೈಸೂರಿನ ಗಮಕಿ ರಾಮಕೃಷ್ಣ ರವರಿಂದ 'ಜೇಷರ ಕಣ್ಣಪ್ಪ' ಎಂಬ ಹರಿಕಥೆ ಮೂಡಿಬರು.

---

## ನೀಲಗಿರಿ ಕೊಡಗು ಸಂಘ.

ತಾರೀಕು ೧೧-೪-೪೮ ರಲ್ಲಿ ನೀಲಗಿರಿಯಲ್ಲಿರುವ ಕೊಡಗರ ಸಭೆಯಂ ಮೇಲ್ಕಂಡ ಸಂಸ್ಥೆಯ ಆಶ್ರಯದಲ್ಲಿ ಶ್ರೀ. ಕೊಡಂದೆರ ಎಂ. ಐಯ್ಯಂಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಧಾನದಲ್ಲಿ ಜಗದ್ವ್ಯಾಪ್ತ ಮಯಾತ್ಮರ ನಿಧನದ ಬಗ್ಗೆ ಸಂತಾಪ ಸೂಚಿಸಿ ಎರಡು ನಿಮಿಷ ಮೌನವಾಗಿ ಪ್ರಾರ್ಥಿಸಲಾಯಿತು ನಂತರ 'ಕೊಡಗಿನ ಭವಿಷ್ಯದ ವಿಚಾರ' ಚರ್ಚೆಯಾಯಿತು. ಶ್ರೀ. ಕೆ. ಎನ್. ತಿಮ್ಮಯ್ಯನವರೂ, ಶ್ರೀ. ಕೆ. ಡಿ. ಸೋಮಯ್ಯನವರೂ ಕೊಡಗನ್ನು ಬೇರೆ ಪ್ರಾಂತ ದೊಡನೆ ಸೇರಿಸುವದರಿಂದಾಗುವ ನಷ್ಟ, ತಮ್ಮ ಸ್ವಾರ್ಥದೃಷ್ಟಿ ಯಿಂದ್ದ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸಬೇಕೆನ್ನುವವರ ಪ್ರಚಾರಗಳನ್ನು ಖಂಡಿಸಿ ಸೂಚಿಸಿದರು. ನೆರೆದಿದ್ದವರೆಲ್ಲರೂ ಕೊಡಗನ್ನು ಪ್ರತ್ಯೇಕ ವಿಡಬೇಕೆಂಬ ಬಗ್ಗೆ ಆಭಿಮತವಿತ್ತ ಕಾರಣ ಸರ್ವಾನುಮತದಿಂದ ಕೊಡಗನ್ನು ಪ್ರತ್ಯೇಕವಿಟ್ಟು ಕೇಂದ್ರ ಸರಕಾರದ ಆಧೀನದಲ್ಲಿ ಇತರ ಪ್ರಾಂತಗಳಂತೆ ಆಡಳಿತ ನಡೆಸಬೇಕೆಂಬ ರರಾವು ಪಾಸಾಯಿತು

ನಿವೃತ್ತ ಚೀಫ್ ಕಮಿಷನರಾದ ದಿ. ಬ. ಕೆ. ಚಿಂಗಪ್ಪನವರು ಕೊಡಗಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ರಂ ಪೊಂದಿದನ್ನೂ ಗುಡಲೂರಿನಲ್ಲಿ ಶಿವಾಧೀನರಾದ ಶ್ರೀ. ಪಟ್ಟೆಮಾಡ ಚೀಂಗಪ್ಪನವರ ಬಗ್ಗೆ ಸಂತಾಪ ಸೂಚನಾ ರೆರಾವನ್ನೂ ಸೂಚಿಸಲಾಯಿತು.

---

# = ಪಾನ ನಿರೋಧ =

["ನುಡಿ"ಯಿಂದ]

ಸ್ವಾತಂತ್ರ್ಯ ಸುಂಟಾವಿನ ಬೆಳಕು ಹರಿಯುತ್ತಿದೆ. ದೇಶದಲ್ಲೆಲ್ಲಾ ಹೊಸ ಹುರುಪು; ಜನತಂತ್ರದ ಹೊಸ ಹುಟ್ಟು ಅನ್ನಿಸಿರಬಹುದು ಸರಕಾರದ ರಾಜ್ಯಾಡಳಿತ ಹೆಚ್ಚಿಗೆ ಪ್ರಜಾರಂಜ್ಯದ ಸ್ಥಾಪನೆಯಾಗಿದೆ. ಜಗತ್ತಿನ ಯಾವ ಸ್ವತಂತ್ರ ಜನತಾಂಗದೊಡನೆಯೂ ನಾವು ತಲೆಯೆತ್ತಿ ನಿಲ್ಲುವಂತಾಗಿದೆ. ಆದರೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮುಂಗಿಯಿಟ್ಟು ಎಂದು ತೃಪ್ತಿಪಟ್ಟರೆ ಇನ್ನು ಮುಮ್ಮನಿರೋಣವೆಂದಂತಾಗುವುದು? ಮಹಡಬೇಕಾದ ಮುಂದಿನ ಕರ್ತವ್ಯಗಳು ಒಳಗಿವೆ. ಮುಖ್ಯವಾಗಿ ದೇಶದ ಪುನರ್ನಿರ್ಮಾಣ, ಗ್ರಾಮಗಳ ಪುನರುದ್ಧಾರಗಳಾಗಬೇಕು; ಕೈಲಿನ ನಾಗಲೀ ಕಲಹಹಿನಸಾಗದಿರಲಿ ಪ್ರತಿಯೊಬ್ಬನೂ ಆಹಾರ, ಬಟ್ಟೆ ಬರಿಗಳ ಕಷ್ಟವಿಲ್ಲದ ರೋಗಗಳಿಲ್ಲದ ಜೀವನವನ್ನು ಸಾಗಿಸುವಂತಾಗಬೇಕು. ಇದೇ ನಮ್ಮ ಮುಂದಿನ ಕರ್ತವ್ಯ; ರಾಷ್ಟ್ರದ ಪುನರ್ನಿರ್ಮಾಣ.

### ಸರಕಾರದ ಹೊಣೆ

ನೂರಾರು ವರ್ಷಗಳ ಪರತಂತ್ರತೆ ರಾಷ್ಟ್ರೀಯತೆಯಂಥ ಹಿಂದೆಳೆಯಲ್ಲಿ ಹಿಂದುಳಿದಿದ್ದೇವೆ. ನಮ್ಮ ಜನಾದಿಕಾಲದ ಸಡ ಜಾರಗಳಲ್ಲಿ ಕೆಲವು ಕೆಲಸಕ್ಕೆಲ್ಲಿ ಸಿಕ್ಕಿ, ಪರಿವರ್ತನೆಗೊಂಡಿವೆ. ಮೂಢನಂಬಿಕೆ ಎಂಬುದನ್ನು ಆಧುನಿಕ ಸಮಾಜ ಒಲಿಯಬಿಟ್ಟಿದೆ, ತಮ್ಮ ತಮ್ಮ ಇಷ್ಟದಂತೆ ಬದುಕಲು ಪ್ರತಿಯೊಬ್ಬರೂ ನಡೆದು ಕಾಳ್ಳುವಂತಾಗಿದೆ. ಹೀಗೆಯೇ ಮುಂದುಸ್ಥ ನಮ್ಮ ಎಲ್ಲಿಟಗಳು ಮುಂದುರಿಯಲಿ ಎಂದು ನಮ್ಮ ಸ್ವಾತಂತ್ರ್ಯಕ್ಕೆ ಕೈಕೆ ಆಧಾರವಿಲ್ಲ; ನಮ್ಮ ಕೈಲಿಂದಲೇ ನಾವು ಹತಂಗುವ ದಿನ ದೂರವಿಲ್ಲ. ಇಂತಹ ಸಂಘರ್ಷದಲ್ಲಿ ನಮ್ಮ ಪ್ರಜಾ ಸರಕಾರವು ನಮ್ಮ ಈ ಸ್ಥಿತಿಯಿಂದ ಸಮ್ಮುಸ್ಸನ್ನು ಬದುಕಿಸಲು ಪ್ರಯತ್ನ ಪಡದಿದ್ದರೆ, ನಮಗಾದ ಕೈ ಜನತಾಂಗದ ಗತಿಯೇನೆಂದು ಹೇಳಲು ಸಾಧ್ಯವಿಲ್ಲ.

### ಕಣ್ಣೀರು ತರಿಸುವ ಜಟಿ.

ಮನುಷ್ಯಾನವು ಸಾವಿರಾರು ವರ್ಷಗಳಿಂದ ಬಂದ ಒಂದು ಜಟಿ. ಭಾರತದ ಗ್ರಾಮ ಗ್ರಾಮಗಳಲ್ಲೂ ಸುರಾದೇವಿಯ ಸೇವೆ ನಡೆಯುತ್ತಿದೆ. ಒಂದೇ ಒಂದು ಗುಟ್ಟಿಕೊಂಡು ಕೆಲವೂ, ಸಂತೋಷ ಕೂಟವೆಂದು ಇತರರೂ, ವ್ಯಸನ ನಿವಾರಣೆಗೆಂದು ಉಳಿದವರೂ ತೊಡಗಿ, ಅದರಲ್ಲೇ ಆ ಸಕ್ತರಾಗಿ ತಮ್ಮ ಜೀವನವನ್ನು ಹಾಳು ಕೆಡುಹಿದ್ದಾರೆ. ಎಲ್ಲರಿಗೂ ಉದು ಕೆದುಬೆಂದು ಗೊತ್ತು. ಕುಡುಕನ ಸಂಸಾರ-ಅನ ಜೀವನ-ಇದು ಎಲ್ಲರೂ ಬಲ್ಲ ಒಂದು ಚಿತ್ರ. ಕುಡುಕನ ಹೆಂಡತಿಗೆ ಮಾತ್ರ ಕದರ ಪಡಿಪು ಜೀನ್ನಾಗಿ ಗೊತ್ತು. ಹೆಂಡತಿ ಮಕ್ಕಳ ಹಸಿವನ್ನು ನಿರ್ಲಕ್ಷಿಸಿ ತನ್ನ ಬಾಯೊಂಕೆ ತೀರಿಸುವ ಕುಡುಕನಿಗೂ ತಾನು ಮಾಡಿ-ವುದು ಮಹಾ ಪಾಪವೆಂದು ತಿಳಿಯದೆ ಇಲ್ಲ. ಹಗಲೆಲ್ಲ ಜೀವಪತ್ತು, ತನ್ನ ಸಂಸಾರದೊಡನೆ ಬೆರೆತು ಸುಖವಡುವ ಭಾಗ್ಯ ಅವನಿಗಿಲ್ಲ. ತನ್ನೆ ಹಣ ಕಾಸು, ಮನೆ, ಹೊಲ-ಯಾವುದು ಹೋದರೂ ಚಿಂತಿಲ್ಲ; ಸುರಾದೇವಿಯ ಕರೆಯನ್ನು ಮಾತ್ರ ಕಡೆಯಲಾರ! ಈ ಬಗೆಯ ಹಿಡಿತವಿರುವ ಸುರೆಯನ್ನು ಬೇರೆಯು ಯಾತಕ್ಕೆ ನಿರ್ಮಿಸಿದ, ಎಂದು ಅವನು ಶಪಿಸುವನು; ಮೃತ್ಯುವಿನ ರೂಪವೇ, ಎಂದು ಮನೆಯೊಳಯು ಕೂಗಾಡುವರು ಪೃಥಿಯೊಳ್ಳೆ ಕೊನೆಯ ಬಾರಿ, ಕೊನೆಯ ಬಾರಿ ಎಂದು ಹಟಕೊಟ್ಟು ತೆಂಕು ಸುಪೂರ್ಣ ಪ್ರಜ್ಞೆಯಲ್ಲದ ಸ್ಥಿತಿಯಲ್ಲಿ ಮರಳುವನು. ಆದರೆ ಮಂದಿನ ಅದೇ ತೃನ! ಬಿಗಿದ ಜಾರಿ ಬಿಡಲು ಸುಲಭವಲ್ಲ! ಇಂತಹ ಮೊರೆ ಜಾವಿತಾರು ಸಂಸಾರಗಳಿಂದ ಹೊರಟು ಗರ್ಜನೆರೊಗಿ ದಿಗಂತವನ್ನೇ ಬ್ಯಾಪಿಸಿಂಬಾಗ, ನಿಜವಾಗಿಯೂ ಜನಹಿತ ಇಚ್ಛಿಸುವ ಯಾವ ಸರಕಾರವು ತಾನೇ ಸುಮ್ಮನಿರಬಲ್ಲದು? ಇದನ್ನೆ ನೀಗಿಸಲು ಇರುವ ಉಪಾಯವೊಂದೇ ಪೂರ್ಣ ನಿರೋಧ!

### ಆವನತಿಗೆ ಮೂಲ.

ಹೆಂಡವಾಗಲಿ ಮುಸರ್ಮನಸನಾಗಲಿ ಮದ್ಯಪಾನವು ತನ್ನ ಧರ್ಮಾನ್ಯ ನಿರೋಧ ಮೇಡಲಿ ಒಲ್ಲ. ಕುಡಿತಕ್ಕೆಂದು ಮನುಷ್ಯನ ಶರೀರ ಜೀರ್ಣವಾಗಿ ಮೆಂಟಿಲೆಂಕಾಂತಿ ನರಗಳ ಒಲಹಿನತೆಯಾಗಿ ಘೋರ ರೋಗಗಳಿಗೆ ಆನುಸ್ಪಂದಿಸಿತ್ತಾಂಗುವ ದು. ಮನೆಯಲ್ಲಿ ಸುಖವಿಲ್ಲ; ಶಾಲಿಯಲ್ಲಿ ಆಕ್ತಿಯಿಲ್ಲ. ವ್ಯವಸಾಯದು ದಂಡದ ರೂ ಸಂಸಾರ ಸರಿಗವಾಗಿ ಸಾಗಲು ಸಾಧ್ಯವಿಲ್ಲ. ತಿನ್ನು ಕಾಸಲ್ಲೂ ಅಲೋಚನೆ ದ ಕುಟ್ಟಿ ಕರ್ಚುಗಳನ್ನು ಕುಡಿದು ನೃಪ ವಿಡಿಯುವಾಗ ಮೂದಲು ಬಂಜರಿಯಾ ಲಾರ. ಬಂಧು ಬಾಂಧವರೊಳಗೆ ವೈರತ್ವ, ವ್ಯಭಿಚಾರ, ಕಳ್ಳತನ, ಜಗಳಾಟ, ಹೊಡೆದಾ ಟ-ಇವೆಲ್ಲ ಸಾಮಾನ್ಯದಿಂದ ಹುಟ್ಟುವವು. ಸುರಾಪಾನದ ನಂಟಿ ಯಾವುರೂ ದೊಡ್ಡ ಬಲಿದಾನವಾಗಿ ಕೂಡು ಬರಲಾರದು. ಈ ವಾರ್ತೆಯೇನೂ ಹೊಸದಲ್ಲ. 'ನಾನೇನು ಮಾಡಲಿ! ಸುರೆಯಿಟ್ಟಿ ತಾನ ಕುಡಿಯಬೇಡ? ಸುರೆಯನ್ನೆಲ್ಲಿ ತೆಗೆಯಿರಿ! ಬೇರುಗಳನ್ನೇ ಕಡಿಯಿರಿ; ಮರ ನೆಲಕ್ಕಾರುಳಿಸುವುದೋ ಇಲ್ಲವೊ ಎಂಬುದನ್ನು ನೋಡಿಬಿಡೋಣವೆಂದೇ ಕುಡಕನ ಹಂಬಲ.

### ಯೋಧನೆಯಿಂದ ನಿರೋಧನೆ?

ಆದರೆ, ಈಗಲೇ ಪೂರ್ಣ ನಿರೋಧ ನೇತಕ್ಕೆ? ಕುಡುಕನ ಮನಸ್ಸನ್ನು ಒಲಿಸಿ ಅವನನ್ನು ಈ ದುಶ್ಚಟವನ್ನು ಬಿಡುವಂತೆ ಭಾವಣ, ಪ್ರಕಟಣೆ, ಪ್ರಚಾರಣೆಗಳಿಂದ ಸ್ಫೋರೆಪಿಸಿರಿ. ತನ್ನಷ್ಟಕ್ಕೆ ತಾನು ಈ ಅಭ್ಯಾಸವನ್ನು ಬಿಡುವನೋ ಇಲ್ಲವೊ ಎಂದು ನೋಡೋಣವೆಂದು ಹಲವರು ಹೇಳುತ್ತಿದ್ದಾರೆ ಆದರೆ ಇದು ಸಾಧ್ಯವೇ? ರಚನೋತ್ಸಾಹಗಳಿಂದ ಎಲ್ಲೆಲ್ಲೂ ಸುರಾಪಾನ ನಿರೋಧಕ್ಕಾಗಿ ಹಲವು ಮಂಡಳಿಗಳು ತಮ್ಮ ಸೇವೆಯನ್ನು ಸಲ್ಲಿಸಿವೆ. ಪರಿಣಾಮವೇನೂ ಒಡೆದು ಕಾಣುವುದಿಲ್ಲ; ಕುಡುಕತನ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಕುಡುಕನನ್ನು ಸುಲಭವಾಗಿ ನಮ್ಮ ಕಡೆ ಸೆಳೆಯಲು ಸಾಧ್ಯವೇ? ನೈತಿಕ ಧನಿಯ ಮೇಲೆ ಕಾಯಿದೆ-ಕಟ್ಟಳೆಗಳು ಫಲಿಸುವಿದಿಲ್ಲ! ಸುರಪಾನಕ್ಕೆ ಒಡಪರು ಧನಿಕರು, ಬಡ್ತಿವಂತರು, ಬುದ್ಧಿ ಹೀನರು ಎಲಸಗಾರರು, ರೈತರು, ಎಂದಿಲ್ಲ ಸಮಾಜದ ಎಲ್ಲ ಅಂಗಗಳಲ್ಲೂ ಪಾಸಹುಟ್ಟಿ ಕುಬ್ಜವಾಗಿದೆ. ಪರ್ಮ ವರ್ಮಕ್ಕೆ ಕಡುಕರ ಸಂಖ್ಯೆ ಜಿಗಿಯುತ್ತಿದೆ. ಈಗಲ್ಲಾ ಮುಂದಕ್ಕೆ ನಿರೋಧೋಣವೆಂದು ಸುಮ್ಮನಿದ್ದರೆ, ದೇಶದಲ್ಲಿ ಕುಡುಕತನದ ಪ್ರಮಾಣ ಹೆಚ್ಚಾಗಬಹುದು. ಆ ಮೇಲೆ ಅದನ್ನು ನಿಯಂತ್ರಿಸುವ ಕಾರ್ಯವು ಸುಲಭವಾಗುವುದೇ?

### ವ್ಯಕ್ತಿ ಸ್ವಾತಂತ್ರ್ಯ ಉಳಿವುದು?

ವ್ಯಕ್ತಿಸ್ವಾತಂತ್ರ್ಯದಲ್ಲಿದ್ದ ಸ್ವಾತಂತ್ರ್ಯ ಎಲ್ಲಿತ್ತಿ? ನನಗೆ ಬೇಕಾದಂತೆನ್ನ ನಾನು ಬಾಡುವ, ಇದರ ಹಾಗಿ ನನಗೆ ತಾನ ಟ್ಟುವ, ಎನ್ನಿಷ್ಟವಿರುವ ಬಯಕೆ. ಮುಖ್ಯವಾಗಿ ನಿರೋಧದಿಂದ ವ್ಯಯಕ್ತಿಕ ಸ್ವತಂತ್ರತೆಗೆ ಧಕ್ಕೆಯಾಗುವುದೆಂಬ ಕೂಗು. ಸಮಾಜದ ಒಳಿತು ತಿಯುವ, ವ್ಯಕ್ತಿ ಸ್ವಾತಂತ್ರ್ಯವನ್ನು ಬಿಡಿತ ಆಗಿ. ಅದರ ತೆಯನ್ನು ಎಲ್ಲರೂ ಬೇಕು? ಎಂಗಾಗಿ ಮಾಜದ ಸ್ವಾಸ್ಥ್ಯವನ್ನು ಕೂಯು ಬಡಪಡಿಸೆಂಬೂ, ಅದಂತನ್ನ ಹಕ್ಕೆಂದೂ ಜೀಳಿದರೆ ಒಪ್ಪುವ ಪಿರಾ? ಅಥವಾ ಕೈಯಲ್ಲಿ ಕಾಸಿಲ್ಲ, ಇನ್ನೊಬ್ಬನ ಹಣಕಾಸು ಕದಿಯುವೆನೆಂದರೆ ಸರಿಯೇ? ಯಾವಾಗ ಸಮಾಜವ ಸುರಕ್ಷತೆಗೆ ಅವಮಯೂ ಸಂರಕ್ಷಣೆಗೆ ಹಾನಿಯು ಬರುವುದೋ ಆಗ್ಗೆ ಆ ವ್ಯಕ್ತಿ ಸ್ವಾತಂತ್ರ್ಯವು ನ್ಯಾಯವಾಗಿ ತನ್ನ ಜೇರೆಯನ್ನು ಹಿಂತಿರಿಪ ಹಾಗಾಯಿತು ಅವನ್ನು ಒತ್ತಿಗೇನೇ ನಿಲ್ಲಿಸುವುದು ರಾಜಧರ್ಮ.

### ಎಂಥ ವರಮಾನ!

ಕುಡಿಯುವವರಂತೂ ಕಡಿಯಲಿ, ಮುಮ್ಮದ ತೆರಿಗೆಯಿಂದ ಸರಕಾರಕ್ಕೆ ಎಷ್ಟೊಂದು ವರಮಾನ! ಜೋಂಬಾಯಿ ಸ್ಟೇಟಿಗೆ ಒಂಭತ್ತು ಕೋಟಿ ರೂಪಾಯಿ! ಸ್ವಾತಂತ್ರ್ಯದ ಪೂರ್ಣ ಆದಾಯದ ಕಾಲಂ ರ! ಇನ್ನು ಎಷ್ಟು ಜನಹಿತಕಾರ್ಯಗಳಿಗಾಗಿ ವಿನಿಯೋಗಿಸಬಹುದು! ನಿರೋಧದಿಂದ ಇವೆಲ್ಲ ಉಳಿತವಲ್ಲವೆ? ಇಷ್ಟೆಲ್ಲ ಧನಜೀವನಕ್ಕೆ ಅತ್ಯಗತ್ಯವಾದ ವಸ್ತುಗಳಿಗಾಗಿ ಉಪಯೋಗಿಸಬಹುದಲ್ಲವೆ? ಆದ್ದರಿಂದ ದೇಶಕ್ಕೆ ಹಿತವಲ್ಲವೆ, ನಷ್ಟವು ಎಷ್ಟಕ್ಕೂ ಇರಲಾರದು.

### ಪೂರ್ಣ ನಿರೋಧ ಹೇಗೆ ಸಾಧ್ಯ?

ಸಂಪೂರ್ಣ ನಿರೋಧನವನ್ನು ಜಾರಿಗೆ ರಬಹುದೆನ್ನು ನಮ್ಮ ಸರಕಾರವು ಬಲ್ಲದು. ಅದು ಯಶಸ್ವಿಯಾಗದಂತೆ ನೋವಲು ವಿರುದ್ಧ ಪ್ರಯತ್ನಗಳಾಗಲೂಬಹುದು. ಆದರೆ ಜನಜಾಗ್ರತಿಗಾಗಿ ಜನರ ಸಹಾನುಭೂತಿ-ಸಹಕಾರದಿಂದ ಕೊನೆಗೆ ವಿಜಯ ಪಡೆಯುವುದೆಂಬ ದೃಢವಾದ ನಂಬಿಗೆ. ಒಬ್ಬೊಗೇಸೇ ಸಂಪೂರ್ಣ ನಿರೋಧವನ್ನು ತರಲು ಗುವುದಿಲ್ಲವೆಂಬುದು ಅನುಭವವಾದ ಮಾತು. ಆದುದರಿಂದ ಬೊಂಬಾಯಿ ಸರಕಾರವು ನಾಲ್ಕು ವರ್ಷಗಳೊಳಗಾಗಿ ಈ ನಿರೋಧವನ್ನು ತರುವುದಾಗಿ ನಿಶ್ಚಯಿಸಿರುವುದು ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸುವುದಕ್ಕಾಗಿ. ವ್ಯಾಂತೀಯ ನಿರೋಧ ಮಂಡಳಿ, ಜಿಲ್ಲಾ ನಿರೋಧ ಮಂಡಳಿಗಳನ್ನು ಏರ್ಪಡಿಸಿ, ಅವುಗಳ ಮುಖೇನ ಗ್ರಾಮ ಗ್ರಾಮಗಳಲ್ಲಿ ಪ್ರತಿಯೊಂದು ವ್ಯಕ್ತಿಯೂ ನಿರೋಧ ಸಂದೇಶವನ್ನು ಪಡೆಯುವಂತೆ ಮಾಡಿದೆ. ನಿರೋಧವು ಬರುವವರೆಗೆ ಕಳ್ಳತನದಿಂದ ಬೇರೆ ವ್ಯಾಂತಗಳಿಂದ ಸುರೆಯನ್ನು ತರಿಸುವರು. ಗುಟ್ಟಿನಲ್ಲಿ ಒಟ್ಟೆ ಇಳಿಸುವಿಕೆ, ಇತ್ಯಾದಿಗಳಿಗೆ ಪೋಲೀಸ್ ಇಲಾಖೆಗೆ ಸಿಗುವುದು ಸರಕಾರಕ್ಕೆ ಸೊತ್ತೇ ಇದ. ಈ ಎಲ್ಲ ಪ್ರಶ್ನೆಗಳನ್ನು ನಿವಾರಿಸಿ ನಿರೋಧನವನ್ನು ಜಯಶೀಲವಾಗಿ ನಡೆಸುವೆನೆಂದು ಸರಕಾರವು ಹಟಕೊಟ್ಟಿದೆ. ಜನತೆಯು ಸೇವೆಯೇ ಜನಾರ್ಧನನ ಸೇವೆಯೆನ್ನುವಾಗ, ಪುಜಗಳ ಜೊಂಬಲವೊಡನೆ ಯಾವ ಕಾರ್ಯವು ತಾನೇ ಉಸಾಧ್ಯವು?

[ಕೊಡಗಿನ ಸರಕಾರದ ಉತ್ಪತ್ತಿ ಯಲ್ಲಿ ಕಾಲಾರ್ಧ ಅಂದರೆ ಸುಮಾರು ಹತ್ತು ಲಕ್ಷ ರೂಪಾಯಿ ಮದ್ಯದ ತೆರಿಗೆಯಿಂದ ಬರುತ್ತದೆ. ಸರಕಾರದ ನಿವ್ವಳ ಉತ್ಪತ್ತಿ ಇದಾದರೆ ಮದ್ಯದ ವ್ಯಯ್ಯ ವ್ಯಾಪಾರಿಗಳ ಲಾಭ ಈ ರೀತಿ ಕೊಡಗಿನ ಬಡ ಜನರ ಕಿಡಿಮೆ ಯ ಲಕ್ಷ ರೂಪಾಯಿಗಳು ಸೂರೆಯಾಗುತ್ತಿವೆ. ಸರಕಾರವು ಆದಷ್ಟು ಬೇಗ ಪಾನನಿರೋಧವನ್ನು ಜಾರಿಯಲ್ಲಿ ತರಬೇಕು. ಇದರಿಂದಾಗುವ ನಷ್ಟವನ್ನು ತುಂಬಿಕೊಳ್ಳಲು ಬೇರೆ ರೀತಿಯ ಕಂದಾಯ ಹಾಕಿದರೂ ಆಹಿತವಾಗಲಾರದು. ಸ್ಥಳೀಯ ಸರಕಾರವು ಈ ವಿಚಾರವನ್ನು ಲೀಳು ಮನಸ್ಸಿಗೆ ತೆಗೆದುಕೊಂಡು ಮುಂಬರುವ ಶಾಸನಸಭೆಯ ನೇಕರಾ ಪಾನನಿರೋಧವನ್ನು ಜಾರಿ ತರಬೇಕು. ಸಂ.

# ಹೈದರಾಬಾದ್ ಸಮಸ್ಯೆ.

["ಜೈ ಹಿಂದ್" ಪತ್ರಿಕೆಯಿಂದ]

ಹೈದರಾಬಾದ ಸಂಸ್ಥಾನದಲ್ಲಿ ನಡೆದ ಅರಾಜಕತೆಯನ್ನು ಕಂಡು, ಕೇಳಿ ಮತ್ತು ಓದಿದವರ ಬಗ್ಗೆ ಓದಿ ಸರ್ವರಲ್ಲಿ ಚಿಂತೆಯೂ ಭಯವಾದ ತಿರಸ್ಕಾರವೂ ಉಂಟಾಗಿವೆ. ಈ ಬಗ್ಗೆ ಹಿಂದೂಸ್ಥಾನ ಸರಕಾರವು ಏನು ಮಾಡುವುದಿದೆ ಎಂಬುದನ್ನು ನೋಡುತ್ತ ಜನತೆಯು ಇಂದು ದಿನ ಹಾಕುತ್ತಿದೆ.

ಆದರೆ ಹೈದರಾಬಾದಿನ ಇಂದಿನ ನಿಜವಾದ ಅಧಿಕಾರಿಗಳಾದ ಇತ್ತೀಹಾದ ಪಕ್ಷದವರು ಅಥವಾ ಅವರ ಮುಂದಾಳುಗಳಾದ ಶ್ರೀ ಕಾಶೀಮ ರಝ್ವಿಯವರು ಇನ್ನೂ ಏರಿಕೆಯ ಧೋರಣವನ್ನೇ ಇಟ್ಟುಕೊಂಡಿದ್ದಾರೆ. ದಕ್ಷಿಣದಲ್ಲಿ ಪಾಕಿಸ್ಥಾನವನ್ನು ಅಸ್ತಿತ್ವದಲ್ಲಿ ತರಬೇಕೆಂಬ ಇನ್ನೂ ಕೆಲವು ಭಾಗಗಳನ್ನು ಆ ಸಂಸ್ಥಾನದ ಆದಳಿತದಲ್ಲಿ ಸಂಯಿಕೊಳ್ಳಬೇಕೆಂದೂ ಅವರು ಕನಸು ಕಾಣುತ್ತಿದ್ದಾರೆ ಮತ್ತು ಹಿಂದುಸ್ಥಾನ ಸರಕಾರವನ್ನು ಸರ್ವ ವಿಧದಿಂದ ಹೆದರಿಸುವರನ್ನು ಅವರು ಕಡಿಮೆ ಮಾಡಿಲ್ಲ 'ಮಲಗಿದ ಹುಲಿಯನ್ನು ಎಬ್ಬಿಸಬೇಡಿ. ಹಾಗೆ ಮಾಡುವುದರಿಂದ ಹಿಂದುಸ್ಥಾನವೇ ಹುಳಾದೀತು' ಎಂದು ಧೈರ್ಯದ ಮಾತಾಡುತ್ತಿದ್ದಾರೆ.

ಈ ಬಗ್ಗೆ ಹಿಂದುಸ್ಥಾನ ಸರಕಾರದ ಪರವು ಗಂಭೀರವಾಗಿ ಆಲೋಚಿಸುತ್ತಿದ್ದಾರೆ! ಅವರು ಬೇಗನೇ ಹೈದರಾಬಾದಿನ ಬಗ್ಗೆ ಉಸ್ತು ಉಪಾಯಗಳನ್ನ ಕೈಕೊಳ್ಳಿವ ಲಕ್ಷಣಗಳು ತೋರ ತ್ತಿವೆ.

ಹಿಂದೂಸ್ಥಾನದ ಜನತೆಯ ಮತ್ತು ಮುಂಖಂಡರ ಅಭಿಪ್ರಾಯಗಳನ್ನು ನೋಡಿದರೆ ಹೈದರಾಬಾದದ ಪೋರಣವನ್ನು ಅವರೆಲ್ಲರೂ ಖಂಡಿಸುತ್ತಿದ್ದಾರೆ ಹಿಂದುಸ್ಥಾನದಲ್ಲಿಯ ಮುನಲ್ಮಾನರ ಅನೇಕ ಮುಖಂಡರು ನಾಳೆ ಅಂತಹ ಹೋರಾಟವೇ ಹಿಂದೂಸ್ಥಾನ ಮತ್ತು ಹೈದರಾಬಾದುಗಳಲ್ಲಿ ನಡೆದುದಾದರೆ ಆಗ ತಾವು ಹಿಂದುಸ್ಥಾನದ ಬೆನ್ನು ತ್ತುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ, ಮೌ. ಅಬುಲ ಕಲಾಮ ಆಝಾದರು ಈ ಬಗ್ಗೆ ಸ್ಪಷ್ಟ ಹೇಳಿದ್ದಾರೆ ನನ್ನ ಸೈನ್ಯವ ಜನರು ನನಗೆ ಎಂದು ಸ್ಥಾನ ಸರಕಾರದವರು ಅಪ್ಪಣೆ ಕೊಟ್ಟರೆ ಹಾ ಹಾ ಅನ್ನುವದರೊಳಗೆ ಹೈದರಾಬಾದವನ್ನು ಹಣ್ಣು ಮಾಡುವೆವೆಂದು' ಸಾರಿದ್ದಾರೆ. ಸಮತಾವಾದಿಗಳು ಹೈದರಾಬಾದಕ್ಕೆ ಮಂಗಿ ಬೇಳುವ ನಿರ್ಧಾರ ಮಾಡಿದ್ದಾರೆ.

ಇತ್ತೀಹಾದ ಪಕ್ಷದವರು ಇಂತಹ ಪರಿಸ್ಥಿತಿಯಲ್ಲೂ ತಮ್ಮ ಧೈರ್ಯವನ್ನು ಬಿಡದೆ ಮುನ್ನುಗ್ಗುತ್ತಿರುವುದು, ನ್ಯಾಯಾನ್ಯಾಯಗಳ ದೃಷ್ಟಿಯಿಂದ ಅವಿಚಾರಪೂರ್ವಕವಾದ ದ್ಯಾಗಿದ್ದರೂ, ಕೇವಲ ಧೈರ್ಯ, ತ್ಯಾಗಗಳ ದೃಷ್ಟಿಯಿಂದ ಅಭಿನಂದನೆಗೆ ಪಾತ್ರವಿದೆ. ನಿಜವಾಗಿ ಕಣ್ಣು ತೆರೆಯುವ ಜನತೆ ಅವರು ಈ ತರಹದ 'ಗುಡ್ಡಕ್ಕೆ ಕಲ್ಲು ಹೊರುವ' ತಿಲಸವನ್ನು ಕೈಕೊಳ್ಳುತ್ತಿರುವುದು ಅವರ ಆಮೂರ್ದೃಷ್ಟಿಯು ಸಂಬಂಧವಾಗಿ, ಸ್ವಾಭಾವಿಕವೂ ಆಗಿದೆ.

ಧೈರ್ಯವಂತರೆಂದು ಈ ಇತ್ತೀಹಾದ ಉಲ್ಲಾದವರನ್ನು ಕರೆಯಬೇಕೇ? ಹಾಗೂ ಇಲ್ಲ. ಈ ನೊದಲು ಅವರು ಒಂಬಿಡೆಗೆ ಮಾಡಿದ ಭಾಷಣವು ಆಯೋಗ್ಯವಾಗಿತ್ತೆಂಬ ಬಗ್ಗೆ ಇಡೀ ಹಿಂದುಸ್ಥಾನದಲ್ಲಿ ಗದ್ದಲವೇಳಲು, ಆ ತರಹದ ಭಾಷಣವೇ ನಡೆದಿಲ್ಲವೆಂದು ಹೈದರಾಬಾದಿನ ಹೋಗೆಗಾರಿ ವ್ಯಕ್ತಿಗಳು ಹೇಳಿದರು. ಈ ತರಹದ ಅನೇಕ ವಂಚನಾತ್ಮಕ ಮಾರ್ಗಗಳನ್ನು ಅವರು ಅವಲಂಬಿಸಿದ್ದಾರೆ

ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ನಿಜಾಮರು ಪೂತ್ರ ಗಾಬರಿಯಾದಂತೆ ಕಾಣುತ್ತಿದೆ ಈ ನೊದಲೇ ಅವರು ಇಷ್ಟು ಗಾಬರಿಯಾಗಬೇಕಾಗಿತ್ತು. ಪದವ ದರೂ ಈಗಲಾದರೂ ಅವರು ಚೆದಪಡಿಸುತ್ತಿರುವುದು ಸಂತೆಹ್ನವಾಗಿದೆ

ವಾಸ್ತವಿಕವಾಗಿ ಈಗ ಹೈದರಾಬಾದಿನಲ್ಲಿ ನಿಜಾಮರು ಅನಹಾಯ ಸ್ಥಿತಿಯಲ್ಲಿದ್ದಾರೆ. ಈ ಮಾತು ಎಂದೋ ಗೊತ್ತಾಗಿಹೋಗಿದೆ ಆ ರೀತಿಯ ನಿಜಸ್ವರೂಪವನ್ನು ನಿಜಂಮರಿಂದಲೇ ಹೊರಬೀಳುವ ಪರಿಸ್ಥಿತಿ ಬಂದಿಲ್ಲ.

ತಮ್ಮ ನಿರ್ಮೂಣದಿಂದಲೇ ಅಸ್ತಿತ್ವದಲ್ಲಿ ಬಂದ ಈ ಇತ್ತೀಹಾದ ಪಕ್ಷವನ್ನು ಇಂದು ಅವರ ತಲೆಯನ್ನೇ ಏರಿ ಕುಳಿತಿದೆ ಮತ್ತು ಅವರ ಮೂತನ್ನೂ ಅದು ಕೇಳದಾಗಿದೆ ಇತ್ತೀಹಾದ ಪಕ್ಷದವರು ಸರ್ವನಾಶದ ದಾರಿಯನ್ನು ಹಿಡಿಯುತ್ತಿದ್ದಾರೆಂದು ನಿಜಾಮರಿಗೆ ಗೊತ್ತಾಗಿದ್ದರೂ ಅವರನ್ನು ತಡೆಯುವುದು ಅವರ ಶಕ್ತಿಯಿಂದ ಕಾರ್ಯವಾಗಿದೆ

ಅದಕ್ಕಾಗಿ ನಿಜಾಮರು ಈಗ ತಮ್ಮ ಅಂತಃಪುರವನ್ನು ಬೆಂಗನೆಬಿಟ್ಟು ದಿಲ್ಲಿಗೆ ಹೋಗಲಿರಿ ವರೆಂದು ಸುದ್ದಿಯಿದೆ ಸ್ವತಃ ಅವರು ಲಾರ್ಡ್ ಮೌಂಟ್ ಬ್ಯಾಟನ್ ಮತ್ತು ಪಂ ಜವಹರಲಾಲರೊಡನೆ ಹೈದರಾಬಾದ ಮತ್ತು ಹಿಂದೂಸ್ಥಾನದ ನಡುವೆ ಬಂದಿದ್ದ ಮತಭೇದಗಳ ಬಗ್ಗೆ ಚರ್ಚಿಸಲಿರುವರೆಂದು ಸುದ್ದಿಯಿದೆ ಡಿಲ್ಲಿಯ ಹೈದರಾಬಾದ ಭವನದಲ್ಲಿ ಅವರ ವಾಸ್ತವ್ಯದ ಬಗ್ಗೆ ಸಿದ್ಧತೆಯು ಭರದಿಂದ ನಡೆದಿದೆಯಂತೆ.

ನಿಜಾಮರು ಹೀಗೆ ಎಂದೂ ಹೊಗ ಬಿದ್ದಿರಲಿಲ್ಲ. ತಮ್ಮ ಘನತೆ ಗಾರವಗಳ ಬಗ್ಗೆ ಅವರಿಗೆ ಹೆಚ್ಚಿನ ಹೆಮ್ಮೆಯಿದೆ ಅವರ ಕೆಲಸಗಳೆಲ್ಲ ಆವರ ಕೈಕೆಳಗಿನವರ ಮುಖಾಂತರವಾಗಿಯೇ ಇದು ವರೆಗೆ ನಡೆಯುತ್ತ ಬಂದಿವೆ.

ಕಠಿಣ ಪರಿಸ್ಥಿತಿಯು ಉಂಟಾಗುವುದೆಂಬ ಕಲ್ಪನೆಯು ಈಗ ಆವ ದರಿಂದಲೇ ಅವರು ಹೀಗೆ ತಮ್ಮ ಗಾಬರಿಯನ್ನು ಬಟ್ಟು ಇಂದು ಹೊರಬೀಳುವವರೆದ್ದಾರೆಂಬ ಮಾತಿನಲ್ಲಿಯೂ ಸಂಶಯವೂ ಇಲ್ಲ ಒಂದು ವೇಳೆ ದಿಲ್ಲಿಯಲ್ಲಿ ಅವರ ಪ್ರಶ್ನೆಯು ಬಿಡದಿದ್ದರೆ ಮುಂದೆ ಪಾಕಿಸ್ತಾನಕ್ಕೆ ಹೋಗಿ ಕಾಯಿದೆ ಅಝಮ್‌ರೊಡನೆ ಅವರು ವಿಚಾರ ವಿನಿಯವ ಮಾಡುವವರಿದ್ದಾರೆಂಬ ಮಾತೂ ಕೇಳಿಬರುತ್ತಿದೆ.

ಒಟ್ಟಿನಲ್ಲಿ ಹೈದರಾಬಾದದ ಪ್ರಶ್ನೆಯು ತೀರ ಆಯಕಟ್ಟಿನ ಪರಿಸ್ಥಿತಿಗೆ ಬಂದಿದೆಯೆಂದೂ ಅದರ ಬಗೆಹರಿಸುವಿಕೆಯು ಕಾರ್ಯವೂ ಸಹಿಹದಲ್ಲಿಯೇ ಪೂರೈಸಲ್ಪಡಲಿರುವುದೆಂದೂ ನಿಸಂಶಯವಾಗಿ ಹೇಳಬಹುದು.

ಸ್ವಲ್ಪ ಸಮಂಜಸ ಬುದ್ಧಿಯಿಂದ ನಿಜಾಮರು ಈಗಲಾದರೂ ವಿಚಾರಪೂರ್ವಕವಾಗಿ ನಿರ್ಧರಿಸಿದರೆ, ಈ ಪ್ರಶ್ನೆಯನ್ನು ಬಗೆಹರಿಸುವಿಕೆಯು ಎಂದಿಗೂ ಕಠಿಣವಾಗಲಾರದು. ಜಗಳದಿಂದ ಮತ್ತು ಅನ್ಯಾಯ, ಅಸಮಂಜಸತನಗಳಿಂದ ಯಾರಿಗೂ ಸುಖವಿಲ್ಲವೆಂಬ ಮಾತನ್ನು ಅವರು ದೃಢವಾಗಿ ನಂಬಬೇಕು.

ಪಾಕಿಸ್ತಾನದ ಸಹಾಯ ತಕ್ಕೊಂಡು ಹಿಂದುಸ್ಥಾನದ ಎದುರುನಿಲ್ಲುವುದೆ? ಮೊದಲಾದ ಹುಚ್ಚು ಕಲ್ಪನೆಗಳನ್ನು ಅವರು ದೂರೀಕರಿಸಬೇಕು. ಹಿಂದೂಸ್ಥಾನದಲ್ಲಿ ಸೇರಿ ನೋಡಿದರೆ ತಮಗೂ ಕಲ್ಯಾಣವಿದೆ ಎಂಬ ಮಾತನ್ನು ಅವರು ಈಗಲಾದರೂ ಕಂಡು ಹಿಡಿಯಲು ಸಮರ್ಥರಾಗಬೇಕು

ಹೀಗಾದರೆ ಅವರು ಸುಖದಿಂದ ಇತ್ತೀಹಾದ ಪಕ್ಷದ ಕೈಯೊಳಗಿಂದ ಪಾರಾಗಿ ಸುಖ ಸಮಾಧಾನಗಳಲ್ಲಿ ಬರಲು ಶಕ್ಯವಿದೆ ಹಿಂದೂಸ್ಥಾನದ ಆದೇಶದಂತೆ ಅವರು ಸಮಸ್ಯೆಗಳನ್ನು ಆರ್ಧಾತ್ ಇತ್ತೀಹಾದ್ ಪಕ್ಷದವರ ಮಗ್ಗಲು ಮುರಿಯುವ ಕಾರ್ಯವನ್ನು ಪೂರೈಸಲು ಪೂರ್ಣ ಸಹಾಯ ಮಾಡುವುದು

# ಅಖಿಲಭಾರತ ಕಾಂಗ್ರೆಸ್ ಅಧಿವೇಶನ.

'ಭಾರತದ ಪ್ರದೇಶದ ನಡುವೆ ಪರಕೀಯ ರಾಷ್ಟ್ರವೊಂದು ಇರುವುದನ್ನು ನಾವು ಸಹಿಸುವುದಿಲ್ಲ. ಹೈದರಾಬಾದಿನ ಸಮಸ್ಯೆ ರಾಂತರೀತಿಯಲ್ಲಿ ಇತ್ಯರ್ಥವಾಗುವುದೆಂದೇ ಭಾರತದ ನಂಬಿಕೆ. ಹಿಂಸಾ ಮಾರ್ಗದಲ್ಲಿ ಎಲ್ಲಿನ ಸಮಸ್ಯೆ ನಿವಾರಿಸಬಹುದು. ಆದರೆ ಅವರಿಂದ ಇತರ ಸಮಸ್ಯೆಗಳಿಗೆ ಅವಕಾಶ ಕೊಟ್ಟಂತಾಗುವುದು. ಆದ್ದರಿಂದ ಭಾರತಜೊಡನೆ ಗೌರವಯುತ ಮತ್ತು ಶಾಂತಿಕರವಾದ ಸಂಬಂಧವಾಗುವುದೆಂದು ನನ್ನ ನಂಬಿಕೆ' ಎಂಬುದಾಗಿ ಭಾರತ ಸ್ವಾಧೀನ ಪಂಡಿತ ನೆಹರೂರವರು ತಾ. ೨೪ರಲ್ಲಿ ಬೊಂಬಾಯಿಯಲ್ಲಿ ಆರಂಭವಾದ ಎ ಐ ಸಿ ಸಿ ಅಧಿವೇಶನದಲ್ಲಿ ಹೇಳಿದರು.

ಹೈದರಾಬಾದಿನಲ್ಲಿರುವಂತಹ ನಿರಂಕುಶ ಪ್ರಭುತ್ವವು ಹಿಂದಿನ ದಿನಗಳಲ್ಲಿ ಇರಲಿಲ್ಲವೆಂದೂ ನೆಹರೂ ಹೇಳಿದರು

ಗಡಿ ಘಟನೆಗಳನ್ನೂ, ಇತ್ತೀಹಾದುಲ್ ಮುಸ್ಲಿಮೀನ್ ಸಂಸ್ಥೆಯವರ ದೌರ್ಜನ್ಯವನ್ನೂ ಹೇಳಿಕೆಗಳನ್ನೂ ನೆಹರೂ ಪ್ರಸ್ತಾಪಿಸಿ, ಒಂದೊಂದು ಬಾರಿ ಹೈದರಾಬಾದಿನ ಆಳುವರು ಒಪ್ಪಿನ ನಿಜಾಮರೇ, ಆಥವಾ ರಾಜಕಾರರ ಮುಖಂಡರೇ ಎಂಬ ಅನುಮಾನ ಬರುತ್ತದೆಂದೂ ಹೇಳಿದರು. ಈ ಹಿಂಸೆಯ ತಪ್ಪಿಸದೆ ಹೋದಲ್ಲಿ ಹೈದರಾಬಾದು ಭಾರತಕ್ಕೆ ಶಕ್ತುವೆಂದು ಪರಿಗಣಿಸುವುದಾಗಿಯೂ ಹೇಳಿದರು ಕಾಶ್ಮೀರದ ಬಗ್ಗೆ ನೆಕ್ಕಾರಿಟಿ ಕೌನ್ಸಿಲಿನಿಂದ ಭಾರತ ಸರಕಾರ ತನ್ನ ನೀತಿ ವಿವರಿಸುವುದಾಗಿ ಅವರು ತಿಳಿಸಿದರು ಸೆಕ್ಯೂರಿಟಿ ಕೌನ್ಸಿಲಿನಿಂದ ಕಾಶ್ಮೀರ ಪ್ರಶ್ನೆಗಾದ ತೀರ್ಪೋ ವಧಿಯನ್ನು ನೆಹರೂ ಖಂಡಿಸಿದರು. ಅಂತರಾಷ್ಟ್ರೀಯ ನೀತಿ ಒಗ್ಗೆ ಮಾತನಾಡುತ್ತ ಪ್ರಸಂಚವು ಎರಡು ಗಂಗಾ ಒಡೆದಿದೆ ಭಾರತ ಯಾವ ಕಡೆಯೂ ಸೇರುವುದಿಲ್ಲ ಎಂದು ಹೇಳಿದರು

### ಪಟೇಲರ ಸಂದೇಶ

'ಹೈದರಾಬಾದಿನ ಬಗ್ಗೆ ಗೌರವಯುತವಾದ ಮತ್ತು ಸಮರ್ಪಕವಾದ ಒಪ್ಪಂದದ ಹೊರತು ಮತ್ತಾವುದನ್ನೂ ನಾವು ಒಪ್ಪೆವು' ಎಂದು ಸಂಸ್ಥಾನ ಇಕಾಮೆ ಮಂತ್ರಿ ಸರ್ದಾರ್ ಪಟೇಲರು ತಾವು ಆಸ್ವಸ್ಥರಿರುವುದರಿಂದ ಎ ಐ ಸಿ ಸಿ.ಗೆ ಸಂದೇಶ ಕಳುಹಿಸಿದ್ದಾರೆ. ಹೈದರಾಬಾದಿನ ಒಳಗೂ ಗಡಿಯಲ್ಲೂ ನಡೆದಿರುವ ಅಕೃತ್ಯಗಳನ್ನು ಖಂಡಿಸಿದ್ದಾರೆ

ಕಾಶ್ಮೀರದ ಪ್ರಶ್ನೆ ಅಗಾಧವಾದುದು. ಅದು ಗಂಡಾಂತರದ ದಿನಗಳನ್ನು ಕಳೆಯುತ್ತಿದೆ. ಇದನ್ನು ಪರಿಹರಿಸಲು ಎಲ್ಲಾ ಸಾಧನೆಗಳನ್ನೂ ಕೂಡಿಸಬೇಕು ಎಂದು ಅವರು ಹೇಳಿದ್ದಾರೆ ಮಹಾತ್ಮರ ಆದರ್ಶವನ್ನು ಈ ಸಂದರ್ಭದಲ್ಲಿ ಸ್ಮರಣೆಗೆ ತಂದಿದ್ದಾರೆ.

### ಹೈದರಾಬಾದ್ ಕಾಶ್ಮೀರಗಳ ಚರ್ಚೆಗೆ ಗುಪ್ತ ಅಧಿವೇಶನ

ಹೈದರಾಬಾದ್ ಮತ್ತು ಕಾಶ್ಮೀರದ ಪ್ರಶ್ನೆಗಳನ್ನು ಚರ್ಚಿಸಲು ಎ ಐ ಸಿ ಸಿ. ಗುಪ್ತವಾಗಿ ನೇರಬೇಕೆಂದು ಸರ್ದಾರ್ ಮೋಹನ್ ಸಿಂಗ್‌ರವರು ಅಧ್ಯಕ್ಷರಿಗೆ ಮನವಿ ಮಾಡಿದ್ದಾರೆ

### ಕಾಂಗ್ರೆಸ್ ಅಧ್ಯಕ್ಷರ ಭಾಷಣ

ಕಾಂಗ್ರೆಸ್ ಅಧ್ಯಕ್ಷ ಡಾ ರಾಜೇಂದ್ರ ಪ್ರಸಾದರು ತಮ್ಮ ಆರಂಭ ಭಾಷಣದಲ್ಲಿ ಹೈದರಾಬಾದ್ ಮತ್ತು ಕಾಶ್ಮೀರ ಪರಿಸ್ಥಿತಿಯನ್ನು ಪ್ರಸ್ತಾಪಿಸಿದರು ಪಾಕಿಸ್ಥಾನದಿಂದ ಬಂದಿರುವ ನಿರಂಶ್ರಿತರ ಪುನರ್ವಸತಿ ಮತ್ತು ಕಾಂಗ್ರೆಸ್ಸಿಗೆ ಸೇವಲಿಸ್ಥರಾಜೇನಾಮೆ ಬಗ್ಗೆಯೂ ಅವರು ಮಾತನಾಡಿದರು.

'ನಾವು ಬ್ರಿಟಿಷರೊಡನೆ ಕಾದಾಡುತ್ತಿದ್ದಾಗ ಒಗ್ಗಟ್ಟಾಗಿದ್ದೆವು ಈಗ ಒಡೆದು ಹೋಗಿದ್ದೇವೆ ಸೋಷಲಿಸ್ಟರೂ ಇತರ ಎಲ್ಲರೂ ರಾಷ್ಟ್ರಸೇವಾ ಕಾರ್ಯದಲ್ಲಿ ಒಟ್ಟುಗೂಡಿ ದುಡಿಯಬೇಕು' ಎಂದು ರಾಜೇಂದ್ರ ಪ್ರಸಾದ್ ಆಶಿಸಿದರು.

ಬರ್ಮಾ ಸಿಲೋನ್‌ಗಳಲ್ಲಿ ಭಾರತೀಯರ ಸ್ಥಿತಿ ಉತ್ತಮಗೊಳಿಸಲು ನಡೆಯುತ್ತಿರುವ ಸಂಧಾನ ಫಲ ಪ್ರದವಾಗಲೆಂದು ದಕ್ಷಿಣ ಆಫ್ರಿಕಾ ಭಾರತೀಯರ ಸ್ಥಿತಿ ಉತ್ತಮಗೊಳ್ಳಲೆಂದೂ ಆಶಿಸಿದರು.

### ಎ ಐ. ಸಿ. ಸಿ. ಆರಂಭ ದೃಶ್ಯಗಳು.

ಎ. ಐ ಸಿ. ಸಿ ಅಧಿವೇಶನ ಗಾಂಧಿ ನಗರದಲ್ಲಿ ವೈಭವದಿಂದ ಆರಂಭವಾಯಿತು. ೩೦೦ ಇತರ ಸದಸ್ಯರಲ್ಲಿ ೨೫೦ ಇತ

ಬಂದಿದ್ದರು. ೬೦,೦೦೦ ಪ್ರೇಕ್ಷಕರಿಗೆ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ೨-೪೦ ಗಂಟೆಗೆ ಅಧ್ಯಕ್ಷರು, ನೆಹರೂ ಮುಂತಾದವರೂ ಅಧಿವೇಶನಕ್ಕೆ ಆಗಮಿಸಿದಾಗ ಎಲ್ಲರೂ ಗೌರವ ಸಲ್ಲಿಸಿದರು.

ಕಾಂಗ್ರೆಸ್ ಆಂಗೀಕೃತ ಅಂಶಗಳು ಒಂದೊಂದಾಗಿ ಚರ್ಚೆಗೆ ಆರಂಭವಾದುವು. ಪೂರ್ಣ ಪಾಕಿಸ್ತಾನದಲ್ಲಿ ೨ ವರ್ಷ ವಾದರೂ ಕಾಂಗ್ರೆಸ್ ಇರಬೇಕೆಂದು ಅಖಿಲ ಪ್ರತಿನಿಧಿಗಳು ಒತ್ತಾಯ ಮಾಡಿದರು. ಇದು ಸಾಧ್ಯವಿಲ್ಲವೆಂದು ನೆಹರೂ ಉತ್ತರ ಕೊಟ್ಟರು.

## ಕಾಮನ್ ಎಂಪ್ರೆನ್ಸ್ ಪರೀಕ್ಷಾ ಫಲಿತಾಂಶ (೧೯೪೮)

**ಈ ಕೆಳಗಿನ ಸಂಖ್ಯಾನ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು**

ಸೆಂಟ್ರಲ್ ಸ್ಕೂಲ್ ಮಡಿಕೇರಿ:–2 ರಿಂದ 6, 9, 12, 14, 15, 17, 19, 20, 21, 22, 23, 24, 25, 26, 29, 30 ರಿಂದ 34, 36 ರಿಂದ 42, 44, 49, 51, 53, 56, 59, 61, 62, 65, 69, 70, 71, 75, 82 ರಿಂದ 85, 88, 89, 90, 92, 93, 94, 101, 102, 104. (104 ರಲ್ಲಿ 57)

ಗವರ್ನ್‌ಮೆಂಟ್ ಸ್ಕೂಲ್ ವೀರಾಜಪೇಟೆ:–105, 109, 114, 115, 117, 119, 123, 126, 131, 132, 137, 139, 141, 149, 150, 151, 152, 156, 160, 161, 162, 164, 170, ರಿಂದ 173, 177, 178, 179, 181, 182, 183 191. (88 ರಲ್ಲಿ 33)

ಹೊಡಗಿನಮನೆ ಸ್ಕೂಲ್ ಮಡಿಕೇರಿ:–193, 194, 196 ರಿಂದ 202, 204, 210, 212, 215, 218, 221 ರಿಂದ 226, 229, 230, 231, 234, 235, 236, 243, 248, 250, 253. (61 ರಲ್ಲಿ 30)

ಸೈಂಟ್ ಜೋಸೆಫ್ಸ್ ಸ್ಕೂಲ್ ಮಡಿಕೇರಿ:–254 ರಿಂದ 257, 259 ರಿಂದ 262, 264, 266, 269, 271, 272, 273, 274, 276, 277, 281; 282, 289 290, 292 ರಿಂದ 296, 298, 300, 301, 302. (49 ರಲ್ಲಿ 30)

ಹೆಚ್. ಈ. ಸ್ಕೂಲ್ ಸೋಮವಾರಪೇಟೆ:–303, 304, 306, 307, 308, 309, 311 ರಿಂದ 314, 316 ರಿಂದ 320, 322, 323, 325, 328 ರಿಂದ 332 334, 335, 337, 338, 341, 342, 345, 350 ರಿಂದ 357, 361 ರಿಂದ 364. (62 ರಲ್ಲಿ 42)

ಹೆಚ್. ಈ. ಸ್ಕೂಲ್ ನಾಪೋಕ್ಲು:–366, 369, 370, 373, 374, 381, 383 ರಿಂದ 388, 393, 394, 396, 398 ರಿಂದ 403, 406, 408, 412. (49 ರಲ್ಲಿ 24)

ಹೆಚ್. ಈ. ಸ್ಕೂಲ್ ಪೊನ್ನಂಪೇಟೆ:–414, 415, 417 ರಿಂದ 421, 423 ರಿಂದ 430, 432 ರಿಂದ 440, 442, 444, 446, 447, 448, 451, 453 ರಿಂದ 457, 459, 462, 464, 466, 467, 469, 471, 472, 473, 476, 481, 483 (70 ರಲ್ಲಿ 47)

ಹೆಚ್. ಈ. ಸ್ಕೂಲ್ ಸುಂಟಿಕೊಪ್ಪ:–484, 486, 489, 490, 494, 495, 496, 497, 500, 501, 516, 517, 519, 522, 523, 521, 525, 529, 530, 533 (54 ರಲ್ಲಿ 20)

ಸೈಂಟ್ ಎನ್ಸ್ ಸ್ಕೂಲ್ ವೀರಾಜಪೇಟೆ:–538, 539, 540, 541, 545, ರಿಂದ 549, 551 ರಿಂದ 554, 560, 562 ರಿಂದ 566, 569 ರಿಂದ 574, 578 ರಿಂದ 582, 584, 588 ರಿಂದ 591 (55 ರಲ್ಲಿ 35)

ಹೆಚ್. ಈ. ಸ್ಕೂಲ್ ಶನಿವಾರಸಂ:–594 ರಿಂದ 600, 602, 604 605, 607, 608, 611, 614, 615, 616, 617, 620, 622, 623, 624, 627 ರಿಂದ 630, 632, 633. (41 ರಲ್ಲಿ 27)

ಹೆಚ್. ಈ. ಸ್ಕೂಲ್ ಪಾಲಿಬೆ:–635 ರಿಂದ 639, 643, 645 ರಿಂದ 648, 650 ರಿಂದ 652, 654, 655, 660, 661, 662, 664 (32 ರಲ್ಲಿ 19)

ಹೆಚ್. ಈ. ಸ್ಕೂಲ್ ಕಾಕೋಟುಪರಂಬು:–670, 672, 673, 675, 676 677, 683, 684, 685, 690, 691, 693, 697, 700, 701, 705, 707 (42 ರಲ್ಲಿ 17)

ಹೆಚ್. ಈ. ಸ್ಕೂಲ್ ಅವ್ವನಕ್ಕಿ:–708, 709, 712, 713, 714, 717, 718, 721, 722, 723, 725, 727, 729, 732, 733, 736, 737, 738, 739, 743 ರಿಂದ 746, 748, 751 ರಿಂದ 754, 756. (50 ರಲ್ಲಿ 29)

ಹೆಚ್. ಈ. ಸ್ಕೂಲ್. ಕೊಟ್ಟೂರು:–760, 761, 764, 768, 773 ರಿಂದ 776, 778 ರಿಂದ 785, 787. (33 ರಲ್ಲಿ 17)

ಹೆಚ್. ಈ. ಸ್ಕೂಲ್ ಭಾಗಮಂಡಲ:–791, 792, 794, 795, 798, 799, 801 ರಿಂದ 807, 809, 810. (20 ರಲ್ಲಿ 15)

ಹೆಚ್. ಈ. ಸ್ಕೂಲ್ ಕಕ್ಕಬೆ:–812, 813, 816, 818, 820 ರಿಂದ 827 830, 835. (25 ರಲ್ಲಿ 14)

ಹೆಚ್. ಈ ಸ್ಕೂಲ್ ಚೈಯಂಡಾಣೆ:–836, 837, 838, 841, 845, 846, 852, 855, 857, 861, 864. (20 ರಲ್ಲಿ 11)

ಹೆಚ್ ಈ. ಸ್ಕೂಲ್ ಬೆಟಗೊಂ:–865, 866, 868, 869, 871, 873 ರಿಂದ 877, 878 ರಿಂದ 885, 889, 890, 891, 893 (32 ರಲ್ಲಿ 22)

ಹೆಚ್. ಈ. ಸ್ಕೂಲ್ ಹಾರಂಗಿ:–897, 898, 900, 901, 903, 906, 907, 909, 911, 912, 914, 919, 920. (24 ರಲ್ಲಿ 13)

ಹೆಚ್. ಈ. ಸ್ಕೂಲ್ ಕಲ್ಕೋಡು:–928, 932, 934, 936, 939, 941. (28 ರಲ್ಲಿ 6)

ಹೆಚ್. ಈ. ಸ್ಕೂಲ್ ಬಿ. ಶೆಟ್ಟಿಗೇರಿ:–945, 948, 951. (18 ರಲ್ಲಿ 3)

ಹೆಚ್. ಈ. ಸ್ಕೂಲ್ ಪೇರೂರ್‌ವೇರಿ:–958, 959, 961, 963, 965. (10 ರಲ್ಲಿ 5)

ಹೆಚ್. ಈ. ಸ್ಕೂಲ್ ಹೆಬ್ಬಾಲೆ:–967, 968, 971, 974, 975, 976, 978, 980, 983, 984, 986, 988. (24 ರಲ್ಲಿ 13)

ಹೆಚ್. ಈ. ಸ್ಕೂಲ್ ಕೊಡ್ಲಿಪೇಟೆ:–991 ರಿಂದ 995, 997 ರಿಂದ 1004, 1006, 1007. (17 ರಲ್ಲಿ 15)

ಹೆಚ್. ಈ. ಸ್ಕೂಲ್ ಸಣ್ಣಕ್ಕಿ:–1009 ರಿಂದ 1013, 1015 ರಿಂದ 1020. (13 ರಲ್ಲಿ 11)

ಹೆಚ್. ಈ. ಸ್ಕೂಲ್ ಬಿರುನಾಣಿ:–1021 ರಿಂದ 1025, 1028, 1029. (9 ರಲ್ಲಿ 7)

ಹೆಚ್. ಈ. ಸ್ಕೂಲ್ ರವಿವಾರಸಂತೆ:–1031, 1033, 1034, 1036. (8ರಲ್ಲಿ 4)

ಪ್ರೈವೇಟ್:–1039 ಮತ್ತು 1042. (7 ರಲ್ಲಿ 2)

---

**COORG CENTRAL PUBLIC WORKS DIVISION.**

## TENDER NOTICE.

Sealed tenders will be received by the Undersigned for the following work up to 4 P. M. on 10-5-1948.

"Conducting trial boring operations at the proposed Submersible bridge site at Kottamudi across the Cauvery River, 13 miles from Mercara on Mercara-Napoklu road."

2. Tender schedules can be obtained from this office on any day during working hours on payment of Rs. 3/ per copy which is not refundable.

**Sd. C. B. Mannadiar,**
*Executive Engineer,*
*Coorg Central Divn.*

## ಮೂರಾಟಕ್ಕಿದೆ.

ವೀರಾಜಪೇಟೆಗೆ ಒಂದು ಮೈಲು ದೂರದಲ್ಲಿ ಈಚ್ಲೂರು ಗ್ರಾಮದಲ್ಲಿ ಒಳ್ಳೆ ವಿರಾವರಿ ಭೂಮಿ 600 ಬಟ್ಟೆ ಮತ್ತು ಕಾಫಿ, ಕೆತ್ತಳೆ ವ್ಯವಸಾಯಕ್ಕೆ ಲಾಯಕ್ಕಾದ 9 ಎಕ್ರೆ ಜಾಗವು, ಮತ್ತು ವಾಸಕ್ಕೆ ಲಾಯಕ್ಕಾದ ಹೊಚ್ಚ ಹೊಸ ಹಾಕಿದ ಮನೆ, ಒಂಹುಲ್ಲಿನ ಮನೆ ಮೂರಾಟಕ್ಕಿವೆ. ಖರೀದಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

'P'

2-2 C/o. 'Kodagu'
Mercara.


## ಎಂಪೈರ್ ಲೈಫ್ ಇಂಡಿಯಾ

**ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಸ್ಥಾಪನೆ,—1897

| | | | |
|---|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು | ಒಟ್ಟು ಆದಾಯ | .... | 1,07,09,000 ರೂಪಾಯಿ |
| | ಪಾಲಿಸಿಯಿಂದ ಮೀಸೆ | .... | 17,74,52,000 ,, |
| | ಪ್ಪತ್ತ ಸಂಗತಿಗಳು. ಜಸ್ಟ್ | ... | ... 6,67,60,000 ,, |
| | ಕಂಪನಿಯ ಆಯಿಯಲ್ಲಿ ಹೂಡಿದ ಫಂಡ್‌ಮುಗಳು | .... | 8,83,62,000 ,, |

ಅಂಗ ಕಛೇರಿ
ಮಿಷ್ಕಿನ್ ಬಿಲ್ಡಿಂಗ್ಸ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ
ತಮಗೆಷ್ಟು ಸ್ಥಾನಗಳಿವೆ.

ಕೃಷ್ಣ ಕಛೇರಿ
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬೇ.

## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಸೂಚನೆ:—ಈ ಸಂಸ್ಥೆಯ ಷೇರುಗಳನ್ನು ಕೊಳ್ಳಲು ಇಚ್ಛಿಸುವವರು (1921ನೇ ಸಾಲಿನ ಸಹಕಾರ

ವರೂಪಾದ ಕೆಲಸ ಮೊಬಲಗು ರೂ. 1,33,740, ಜಾಮೀನು ಒಂದು ಲಕ್ಷ ರೂಪಾಯಿ 3,30,968-1-8, ಪಡೆಯಲಾದ ಸ್ಥಿರಠೇವಣಿ ರೂ. 36,454-0-3, ಸದರಿಸಾಲ ಬ್ಯಾಂಕಿಗೆ ಸೇರಬೇಕಾದ ಮೊಬಲಗು ರೂ. 3,03,222-13-2.

ಈ ಬ್ಯಾಂಕಿನ ಸದಸ್ಯರಾಗಲು ಇಚ್ಛೆಯುಳ್ಳವರು ಕೂಡಲೇ ಹೆಚ್ಚಿನ ಷೇರು ಖರೀದಿಸಿದ ಪಕ್ಷದಲ್ಲಿ, ಮಿಕ್ಕಿದ್ದನ್ನು ಕಂತಿನ ರೂಪದಲ್ಲಿ ಆಯಾ ವರ್ಷದಲ್ಲಿ ಅಧಿಕಾರದ ಮೇರೆ ಶೇ. 50% ನೀಡಲಾಗುವುದು. ಅಲ್ಲದೆ ಸೇವಿಂಗ್ಸ್ ಖಾತೆಯಲ್ಲಿ ರೂ. 1-1-48ರಂದು ಹೊಂದಿರುವವರಿಗೆ ಸಾಲವನ್ನು ಕೊಡಲಾಗುವುದು. ಸಾಲವನ್ನು ಬ್ಯಾಂಕಿನ (on daily balance) ದಿನ ಬಾಕಿಗಳಿಗೆ ಶೇಕಡಾ 6-0 ರಂತೆ ಒಟ್ಟಿಗೆ ಕೊಡಲಾಗುವುದು. ಷೇರು, ಬಡ್ಡಿ ಇತ್ಯಾದಿಗಳ ಮೇಲೆ ಸಾಲ ಕೊಡಲಾಗುವುದು. ಹೆಚ್ಚಿನ ವಿವರಗಳನ್ನು ಬಯಸುವವರು ಲೆಕ್ಕ ಪರಿಶೋಧಕರನ್ನು ಮಾಡಿ ತಿಳಿಯಿರಿ. 1-13-48.

ಎಂ. ಬಿ. ಸುಬ್ರಹ್ಮಣ್ಯಯ್ಯ,
ಗೌರವ ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಬಿ. ಎಲ್.
ಸ್ಥಳೀಯ ಲೆಕ್ಕ ಪರಿಶೋಧಕರು.


Edited Printed and Published by P. T. Subbiah at 'Kodagu' Press, Mercara, for 'Kodagu' Ltd.

## ನೈಝಾಮ್ ರಾಜ್ಯದಲ್ಲಿ—

### ಪ್ರಾರ್ಥನಾಕಾಲದಲ್ಲಿ ಕೊಂದರು.

'ಬೊಂಬೇ ಕ್ರಾನಿಕಲ್' ಪತ್ರಿಕೆಯಲ್ಲಿ ಪ್ರಕಟವಾದ ಒಂದು ವಾರ್ತೆಯಂತೆ, ಹೈದರಾಬಾದಿನ ಗುಲ್ಬರ್ಗಾ ಜೈಲಿನಲ್ಲಿ ಸ್ಥಾನಬದ್ಧ ವೈದ್ಯನಿಗಿದ್ದ ಶ್ರೀ. ಭೀಮಸೇನ್ ರಾವ್ ಎಂಬವರನ್ನು, ಪ್ರಾರ್ಥನೆ ಮಾಡುತಿದ್ದಾಗ, ಜೈಲಿನ ಸುಪರಿಂಟೆಂಡೆಂಟರು ಗುಂಡಿನಿಂದ ಕೊಂದರು. ಕಳೇಬರವನ್ನು ಮೃತನ ಸಹೋದರನಿಗೆ ಕೊಡಲಾಗಿದೆ.

### ಜೈಲಿನಲ್ಲಿ ಲಾರಿಪ್ರಯೋಗ.

ಹೈದರಾಬಾದ ಜೈಲುಗಳೊಳಗೆ, ರಾಜಕೀಯ ಕೈದಿಗಳಿಗೆ ತಡೆಯಲಾರದ ಹಿಂಸೆ ಕೊಡಲಾಗುತ್ತಿದೆ ಎಂಬ ವರದಿಗಳು ಪ್ರಕಟವಾಗುತ್ತಿವೆ. ಗುಲ್ಬರ್ಗಾ ಜೈಲು ಈ ವಿಷಯದಲ್ಲಿ ಹೆಸರುವಾಸಿಯಾಗಿದೆ. ಎರಡು ಬಾರಿ, ರಾಜಕೀಯ ಕೈದಿಗಳ ಮೇಲೆ ಲಾರಿಪ್ರಯೋಗವಾಯಿತಂತೆ. ಒಮ್ಮೆ ಲಾರಿಪ್ರಯೋಗದಲ್ಲಿ, ರಾಯಚೂರಿನ ಒಬ್ಬ ಕೆಲಸಗಾರನು ಪ್ರಾಣಕಳಕೊಂಡನು. ರಜಕಾರರ ಒಂದು ಗುಂಪು, ಜೈಲು ಬಾಗಲುಗಳನ್ನೊಡೆದು ಒಳಗೆ ಪ್ರವೇಶಿಸಿ, ರಾಜಕೀಯ ಕೈದಿಗಳ ಮೇಲೆ ಕೈ ಮಾಡಿತಂತೆ. ಹೈದರಾಬಾದ ಸ್ಟೇಟ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು, ಈ ಅನ್ಯಾಯವಾದ ಅಕೃತ್ಯಗಳ ನಿವೇದ್ಯಾರ್ಥ ಅನ್ನ ಸತ್ಯಾಗ್ರಹ ಆರಂಭಿಸಿದ್ದರು.

### ರಜಕಾರರ ಧಾಳಿ.

ಸೋಲಾಪುರ ಜಿಲ್ಲೆಯ ಕರ್ಮರಾ ತಾಲೂಕಿನ ಒಂದು ಗಡಿಯ ಗ್ರಾಮದಲ್ಲಿ ಹೈದರಾಬಾದಿನ ರಜಕಾರರು ನುಗ್ಗಿ, ಗ್ರಾಮವಾಸಿಗಳ ಮೇಲೆ ದಾಳಿಮಾಡಿದರು. ಗ್ರಾಮಸ್ಥರು ಒಗ್ಗಟ್ಟಾಗಿ ಅವರನ್ನೆದುರಿಸಿ, ಕಾದಾಟ ನಡೆಯಲು, ರಜಕಾರರು ಪಲಾಯನಮಾಡಿದರು. ಮೂವರು ಗ್ರಾಮಸ್ಥರಿಗೆ ಪೆಟ್ಟಾಗಿದೆ. ರಜಕಾರರು ಒಂದು ಬಂದೂಕನ್ನೂ ಬೇರೆ ಕೆಲವು ಆಯುಧಗಳನ್ನೂ ಬಿಟ್ಟೋಡಿದ್ದಾರೆ.

### ಯಾತ್ರಿಕರ ಮೇಲೆ ಅನಾಚಾರ.

ಕೋಕನಾಡಿನ ವೇಲಂಗಿ ಎಂಬಲ್ಲಿಂದ ಭಕ್ತಾಂಜಲಕ್ಕೆ ರಾಮ ನವಮಿ ಉತ್ಸವಕ್ಕೆ ಹೋಗುತ್ತಿದ್ದ ಹನ್ನೊಂದು ಮಂದಿ ಯಾತ್ರಿಕರನ್ನು ನಿಝಾಮ ಪೊಲೀಸರು ದಾರಿಯಲ್ಲಿ ಹಿಡಿದು, ತಪಾಸಿಯಲ್ಲಿರಿಸಿದರೆಂದೂ, ಇಬ್ಬರು ಹೆಂಗಸರ ಮೇಲೆ ಅತ್ಯಾಚಾರ ನಡಿಸಿ, ಇವರ ವೈಢೂರ್ಯದ ಆಭರಣಗಳನ್ನು ದೋಚಿಕೊಂಡರೆಂದೂ, ವರದಿಯಾಗಿದೆ. ದೇವಸ್ಥಾನದ ಸ್ಪೆಶಲ್ ತಹಶೀಲ್ದಾರ ಶ್ರೀ. ಕೇಶವರಾವ್‌ರವರೊಡನೆ ತಾಲೂಕು ಕಾಂಗ್ರೆಸ್ ಅಧ್ಯಕ್ಷರು ಈ ವಿಷಯವನ್ನು ತಿಳಿಸಿದ್ದಾರೆ. ತಹಶೀಲ್ದಾರರು, ವಾರಂಗಲ ಕಲೆಕ್ಟರರಿಗೆ ವರದಿ ಮಾಡಿ, ಆರೋಪಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಬರೆಯುವೆನೆಂದು ತಿಳಿಸಿರುವರು. ಪೂರ್ವ ಗೋದಾವರಿ ಜಿಲ್ಲಾ ಕಲೆಕ್ಟರರಿಗೂ, ಪೊಲೀಸ್ ಸೂಪರಿಂಟೆಂಡೆಂಟರಿಗೂ ತಂತಿಯನ್ನು ವರದಿ ಮಾಡಲಾಗಿದೆ.

### ದಿಲ್ಲಿಯಲ್ಲಿ ಮಾತುಕತೆಗಳು ನಡೆದಿವೆ.

ಇತ್ತ ಹೈದರಾಬಾದ ಸಂಸ್ಥಾನದಲ್ಲಿ ನಿರಾತಂಕವಾಗಿ ಅನಾಚಾರಗಳು ನಡೆಯುತ್ತಿರುವಾಗ, ಅತ್ತ ದಿಲ್ಲಿಯಲ್ಲಿ, ಹೈದರಾಬಾದ ಪ್ರತಿನಿಧಿಗಳು ಪಂಡಿತ ಜವಾಹರಲಾಲ್ ನೆಹರು ಮತ್ತು ಇಂಡಿಯಾ ಸರಕಾರದೊಡನೆ, ಪೆಸ್ತ್ರನೆ ಮಾತುಕತೆಗಳು ನಡೆದಿವೆ. ರಜಕಾರ ಸಂಸ್ಥೆಯನ್ನೆ ಬರಖಾಸ್ತು ಮಾಡಬೇಕೆಂದು ಇಂಡಿಯಾ ಸರಕಾರವು ಖಂಡಕುಂಡವಾಗಿ ತಿಳಿಸಿದೆಯಂತೆ. ಆದರೆ ಇಲ್ಲಿಯವರೆಗೂ, ಅಧಿಕೃತವಾಗಿ ಏನೂ ತಿಳಿದು ಬಂದಿಲ್ಲ.

### ರಜಕಾರರನ್ನೆದುರಿಸಲು ಆಂಧ್ರರು ಸಿದ್ಧರು.

ಆಂಧ್ರ ಪ್ರಾಂತೀಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಾದ ಶ್ರೀ. ಎನ್. ಜಿ. ರಂಗರವರು ಬಿರಾರ್ ಮತ್ತು ಸೀಡೆಡ್ ಜಿಲ್ಲೆಗಳು ತಮ್ಮದೆಂದು ರಜಕಾರರು ಅವುಗಳನ್ನು ವಶಪಡಿಸಿಕೊಳ್ಳುವರೆ ಚಿಂತವಳಿಯೂಡುವುದನ್ನು ಕೇಳಿ, 'ಈ ವಿಷಯದಲ್ಲಿ ಆಂಧ್ರರು, ರಜಕಾರರನ್ನೆದುರಿಸಲು ಸಿದ್ಧರೇ ಇರುವರು. ನಿಝಾಮರು ರಜಕಾರರನ್ನೂ ಅವರ ಆ ಪುಟ್ಟ ಹಿಟ್ಲರನ್ನೂ ಲಗಾಮು ಹಿಡಿದಿಳೆವರೆಂದು ನಾವು ನಿರೀಕ್ಷಿಸುವುದು ನಿರರ್ಥಕ. ಎರಡು ಕೋಟಿ ಆಂಧ್ರರು, ಹೈದರಾಬಾದಿನಲ್ಲಿರುವ ಒಂದೂವರೆ ಕೋಟಿ ಮುಸ್ಲಿಮೇತರರು ಮತ್ತು ಅರ್ಧ ಕೋಟಿ ಬೇರಾರಿಗಳು—ಈ ಹೈದರಾಬಾದಿನ ಈ ಪುಟ್ಟಿ ಧರ್ಮಾಂಧನ್ನು ಎದುರಿಸಲು ಧಾರಾಳ ಸಾಕು' ಎಂದಿರುವರು.

### ಸರಕಾರದ ಕೊನೆಯ ಎಚ್ಚರಿಕೆ?

ಹೈದರಾಬಾದ ಮತ್ತು ಇಂಡಿಯನ್ ಡೊಮಿನಿಯನಿನೊಳಗಣ ಮುಂದಿನ ಸಂಬಂಧನೇನೆಂದು ಇತ್ಯರ್ಥವಾಗುವ ಮುಂಚಿತವಾಗಿ, ಸಂಸ್ಥಾನದೊಳಗಿನ ಜನರ ಆಕಾಂಕ್ಷೆಗಳನ್ನು ಮನ್ನಿಸಿ ನಿಝಾಮರು ಕೂಡಲೇ ಆ ರೀತಿ ನಡೆಯಬೇಕೆಂದೂ, ಸಂಸ್ಥಾನದೊಳಗಿನ ಈ ಅನಾನುಬಾಹಿರ ಸಂಸ್ಥೆಗಳನ್ನೂ (ಇತ್ತೀಚಿಹಾದ ಪೊಲಬಾದ ವರನ್ನೂ) ಬರಕಾಸ್ತು ಮಾಡಬೇಕಂಬುದಾಗಿ, ಹೈದರಾಬಾದ ಪ್ರಧಾನ ಮಿನಿಸ್ಟರ್ ಲಾಯಿಖ್ ಅಲಿಯವರಿಗೂ, ನಿಝಾಮರ ಮಂತ್ರಾಲೋಚಕ ಸರ್ ವಾಲ್ಟರ್ ಮೊಂಕ್ಟನ್‌ರವರಿಗೂ, ದಿಲ್ಲಿಯಲ್ಲಿ ಪಂಡಿತ ಜವಾಹರಲಾಲ್ ನೆಹರುಗಳವರೂ, ಸರದಾರ ವಲ್ಲಭಭಾಯಿ ಪಟೇಲರೂ ಸ್ಪಷ್ಟವಾಗಿ ತಿಳಿಸಿರುವುದನ್ನು, ಮಿನಿಸ್ಟರ್ ಲಾಯಿಖ್ ಅಲಿಯವರು ಹೈದರಾಬಾದಿಗೆ ಮರಳಿಬಂದು, ನಿಝಾಮರಿಗೆ ತಿಳಿಸಿರುವರು.

### 'ನಿಝಾಮರಿಗೆ ಎರಡೇ ದಾರಿಗಳು'

'ಹೈದರಾಬಾದಿನ ನಿಝಾಮರ ಮುಂದೆ ಎರಡೇ ದಾರಿಗಳಿವೆ–ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಿ ಉಳಿವುದು ಅಥವಾ ಪಲಾಯನಮಾಡಿ ಪಾಕಿಸ್ತಾನದಲ್ಲೋ ಟರ್ಕಿಯಲ್ಲೋ ದೇಶಭ್ರಷ್ಟನಾಗಿ ಇರುವುದು!–ಹೀಗೆಂದು, ಕೊನೆಸ್ಟಿಟ್ಯೂವೆಂಟ್ ಎಸೆಂಬ್ಲಿ ಮೆಂಬರರಾದ ಶ್ರೀ. ಮೋಹನಲಾಲ ಸತ್ಯನಾರಾಯಣರು, ವಿಜಯವಾಡದಲ್ಲಿ ಭಾಷಣ ಮಾಡುತ್ತ ಹೇಳಿದರು.

'ಪ್ರಭಾತ'

---

## ರವಿವಾರಪೇಟೆ ಹರಿಜನೋದ್ಧಾರ ಸಂಘದ ಪ್ರಥಮ ವಾರ್ಷಿಕ ಸಮ್ಮೇಳನ.

ಈ ಸಮ್ಮೇಳನವು ತಾ. 26-4-48 ರಲ್ಲಿ ಶನಿವಾರ ಸಂಜೆಯಲ್ಲಿ ಕೊಡಗು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ಏನೂರು ಹರಿಜನರು ನೆರೆದಿದ್ದರು.

ಪ್ರಾರ್ಥನೆಯಿಂದ ಸಮ್ಮೇಳನವು ಪ್ರಾರಂಭವಾಯಿತು. ಮಹಾತ್ಮಗಾಂಧೀಜಿಯವರ ಮರಣದ ಸಂತಾಪ ಸೂಚಕವನ್ನು ಶ್ರೀ ಪಿ. ಕೆ ಚಿನ್ನಪ್ಪನವರು ಸಭೆಯ ಮುಂದಿಟ್ಟರು. ಮಹಾತ್ಮರ ಆತ್ಮಕ್ಕೆ ಭಗವಂತನು ಶಾಂತಿಯನ್ನಿತ್ತಿಯೆಂದು ಸಭೆಯವರು ಎರಡು ನಿಮಿಷಕಾಲ ಎದ್ದು ನಿಂತು ಪ್ರಾರ್ಥನೆ ಮಾಡಿದರು. ಶ್ರೀ ಬಿ. ಡಿ. ಗಣಪತಿಯವರು ಜನಾಂಗದ ಅಭಿವೃದ್ಧಿಯ ವಿಷಯವಲ್ಲೂ, ಶ್ರೀ ಸಿದ್ದರಾಯಯ್ಯನವರು ವಿದ್ಯಾಭಿವೃದ್ಧಿ ಮತ್ತು ಆದರ ಪ್ರಯೋಜನದ ವಿಷಯವಾಗಿಯೂ ಭಾಷಣ ಮಾಡಿದರು. ಸತ್ತ ಗೋಮಾಂಸ ಭಕ್ಷಣ ಮತ್ತು ಸೇಂದಿಸರಾಯಿಗಳ ಸೇವನೆಯ ದುಷ್ಪರಿಣಾಮ ಸಂತ್ತು ಜನಾಂಗಕ್ಕೆ ತಕ್ಕ ಸಲಹೆಗಳ ವಿಷಯದಲ್ಲಿ ಕೇಂದ್ರ ಸರಕಾರದ ರಾಜ್ಯ ಘಟನಾ ಸಭೆಯ ಕೊಡಗಿನ ಸದಸ್ಯರಾದ ಶ್ರೀ ಎಂ. ಪೂಣಚ್ಚನವರೂ ಕೂಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಪಿ. ಕರುಂಬಯ್ಯನವರೂ ಮತ್ತು ಶ್ರೀ ಎನ್. ಕೃಷ್ಣಮೂರ್ತಿಯವರೂ ಭಾಷಣಗಳನ್ನು ಮಾಡಿದರು. ಆ ಮೇಲೆ ಈ ಕೆಳಕಂಡ ನಿರ್ಣಯಗಳು ಬಹುಮತದಿಂದ ಅಂಗೀಕಾರವಾದವು

1. ಕೊಡಗಿನಲ್ಲಿ ಹರಿಜನ ಏಳಿಗೆಗಾಗಿ ಸರಕಾರವು ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸಬೇಕೆಂತಲೂ ಚೀಫ್ ಕಮಿಶನರ್ ಸಾಹೇಬರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

2. ನಮ್ಮ ಹರಿಜನೋದ್ಧಾರ ಸಂಘಕ್ಕೆ ತಮ್ಮ ಡಿಸ್‌ಕ್ರಿಮಿನರಿ ಗ್ರ್ಯಾಂಟಿನಿಂದ 2,000 ರೂಪಾಯಿಗಳ ಧನ ಸಹಾಯ ಕೊಡಬೇಕಾಗಿ ಕೊಡಗು ಚೀಫ್ ಕಮಿಶರ್ ಸಾಹೇಬರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

3. ಹರಿಜನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪ್ರತಿಯೊಂದು ಸರಕಾರಿ ಹಾಸ್ಟೆಲುಗಳಲ್ಲಿ ಪ್ರವೇಶ ಕೊಡಬೇಕಾಗಿಯೂ ಹುಡುಗರಿಗೆ ಊಟ, ಬಟ್ಟೆ, ಪುಸ್ತಕ ಇವುಗಳ ಖರ್ಚನ್ನು ಸರಕಾರವೇ ಕೊಡಬೇಕಾಗಿಯೂ ಈ ಸಭೆಯು ಪ್ರಾರ್ಥಿಸುತ್ತದೆ.

4. ಕೊಡಗಿನ ಪ್ರತಿಯೊಬ್ಬ ಹರಿಜನ ವಿದ್ಯಾರ್ಥಿಗೂ ವರ್ಷಕ್ಕೆ ಎರಡು ಜೊತೆ ಬಟ್ಟೆ, ಪುಸ್ತಕ, ವಿದ್ಯಾರ್ಥಿವೇತನವನ್ನು ಕೊಡಬೇಕಲ್ಲದೆ ಖಡ್ಡಾಯ ವಿದ್ಯಾಭ್ಯಾಸವನ್ನು ಕೂಡಲೆ ಜಾರಿಗೆ ತರಬೇಕಾಗಿ ಚೀಫ್ ಕಮಿಶನರ್ ಸಾಹೇಬರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

5. ಜನರ ಆರೋಗ್ಯಕ್ಕೆ ಕೆಡಕನ್ನುಂಟುಮಾಡಿ ನಾನಾ ತರದ ಕಾಯಿಲೆಗಳಿಗೆ ಆಸ್ಪದ ಕೊಡುತ್ತಿರುವ ಹೊತ್ತಿದೇ ಸತ್ತ ಪ್ರಾಣಿಯ ಮಾಂಸ ಭಕ್ಷಣೆಯನ್ನು ಮಾಡದಂತೆ ಸೈಸೂರು ಸರಕಾರವು ಪಬ್ಲಿಕ್ ಹೆಲ್ತ್ ಆಕ್ಟ್ 110ನೆ ಸೆಕ್ಷನ್ ಪ್ರಕಾರ ಜಾರಿಗೆ ತಂದಿರುವ ಕಾನೂನನ್ನು ಕೂಡಗು ಸರಕಾರವು ಸಹ ಪಡನೆ ಜಾರಿಗೆ ತರ/ಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

6. ಕೊಡಗಿನಲ್ಲಿ ಮಿಲಿಟೀಲುವ ಜವಾನ ಕಲಸ, ಪೋಲಿಸ್ ಕಲಸ, ಫಾರೆಸ್ಟ್ ಗಾರ್ಡ್‌ಕಲಸ ಮತ್ತು ವಿಲೇಜ್ ಪೊಸ್ಟ್ ಪೇನ್ ಕೆಲಸಗಳನ್ನು ಹರಿಜನರಿಗೆ ಕಾದಿಟ್ಟು ಕೊಡಬೇಕಾಗಿ ಈ ಸಭೆಯು ಸರಕಾರವನ್ನು ಪ್ರಾರ್ಥಿಸುತ್ತದೆ.

7 ಕೊಡಗಿನ ಪುರೋಹಿತ್ಯ ಹರಿಜನರಿಗೆ ಆಯಾಯ ಗ್ರಾಮದ ಪೈಸಾರಿಯಲ್ಲಿ ತಲಾ ೧೦ ಕುಟುಂಬ ವ್ಯವಸಾಯಕ್ಕೆ ಬೇಕಾಗುವಷ್ಟು ಜಾಗಗಳನ್ನು ಕೆ ಎಕ್ರೆಗಳಿಗೆ ಕಡಿಮೆ ಇಲ್ಲದಂತೆ ಉಚಿತವಾಗಿ ಕೊಡುವ ಕಾನೂನನ್ನು ಪಡನೆ ಜಾರಿಗೆ ತರಬೇಕಾಗಿ ಕೂಡಗು ಸರಕಾರವನ್ನು ಈ ಸಭೆಯು ಪ್ರಾರ್ಥಿಸುತ್ತದೆ

8. ಈ ನಮ್ಮ ಹರಿಜನೋದ್ಧಾರ ಸಂಘವು ಒಂದು ಜನಾಂಗದ ಅಭಿವೃದ್ಧಿ ಸಂಸ್ಥೆಯಾಗಿರುವುದರಿಂದ ಸರಾಸರಿಗೆ 0-4-0 ಆಣೆ ದರ್ಜಾದ ಭೂಮಿಗೆ 1 ರೂಪಾಯಿ ಬೇರು ಪಣವನ್ನೂ ಸಂತರ ಪ್ರತಿ ವರ್ಷ 1 ರೂಪಾಯಿಯೆಂಬ ಕಣವನ್ನು ವಸೂಲು ಮಾಡಿ ಸಂಘವನ್ನು ನಡೆಸಿಕೊಂಡು ಹೋಗಲವಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ಸಂಘ ರಿಜಿಸ್ಟರ್ ಮಾಡಿಸಿಕೊಡಬೇಕಾಗಿ ಚೀಫ್ ಕಮಿಶನರ್ ಸಾಹೇಬರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ

9 ಈ ವರ್ಷ ಹರಿಜನೋದ್ಧಾರ ಸಂಘದ ವಾರ್ಷಿಕ ಸಮ್ಮೇಳನವನ್ನು ನಡೆಸಿದ ಬಗ್ಗೆ ಸಮ್ಮೇಳನದ ಖರ್ಚಿಗಾಗಿ 100 ರೂಪಾಯಿ ಧನ ಸಹಾಯ ಕೊಡಬೇಕಾಗಿ ಚೀಫ್ ಕಮಿಶನರ್ ಸಾಹೇಬರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ

10. ಕೊಡಗಿನ ಹರಿಜನರು ಕೂಲಿಯಿಂದ ಸಂಪಾದನೆ ಮಾಡಿದ ಹಣದ ಹೆಚ್ಚಿನ ಭಾಗವನ್ನು ಸೇಂದಿ ಶರಾಬುಗಳಿಗೆ ಕುಡಿತಕ್ಕೆ ಖರ್ಚು ಮಾಡುತ್ತಾರೆ. ಇದರಿಂದ ಹರಿಜನರ ಅಭಿವೃದ್ಧಿಯೇ ಹಾಳಾಗಿದೆ. ಆದ್ದರಿಂದ ಮದ್ಯ ನಿರೋಧನನ್ನು ಜಾರಿಯಲ್ಲಿ ತರಬೇಕೆಂದು ಈ ಸಭೆಯು ಚೀಫ್ ಕಮಿಶನರವರನ್ನು ಪ್ರಾರ್ಥಿಸುತ್ತದೆ.

11. ಕೊಡಗಿನ ಹೈಸ್ಕೂಲುಗಳಲ್ಲೂ ಹೈಯರ್ ಎಲಿಮೆಂಟರಿ ಸ್ಕೂಲ್‌ಗಳಲ್ಲೂ ಹರಿಜನವಿದ್ಯಾರ್ಥಿಗಳಿಂದ ಸ್ಕೂಲ್‌ಫೀಸು ವಸೂಲು ಮಾಡುವುದನ್ನು ಪಜಾ ಮಾಡಬೇಕೆಂದು ಚೀಫ್ ಕಮಿಶನರವರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ಈ ಮೇಲ್ಕಂಡ ಗೊತ್ತುವಳಿಗಳನ್ನು ಕೊಡಗು ಚೀಫ್ ಕಮಿಶನರವರ ಮಂಜೂರಾತಿ ಬಗ್ಗೆ ಕಳುಹಿಸಿಕೊಡುವಂತೆ ತೀರ್ಮಾನವಾಯಿತು. ನಂತರ ಅಧ್ಯಕ್ಷರು ಜನಾಂಗದ ಕಡುಬಡತನ ಆರ್ಥಿಕ ದುಸ್ಥಿತಿ, ಮತ್ತು ಜನಾಂಗದ ಏಳಿಗೆ ವಿಷಯ ಕುರಿತು ಭಾಷಣ ಮಾಡಿದ ಮೇಲೆ ಅಧ್ಯಕ್ಷರಿಗೂ ಇನ್ನಿತರ ಮಹನೀಯರಿಗೂ ಗೌರವ ಕಾರ್ಯದರ್ಶಿಯವರು ವಂದನೆಗೆ ಅಕ್ಷರ್ಪಿಸಿದನಂತರ ಮಿಟಿಂಗು ಮುಕ್ತಾಯವಾಯಿತು.

---

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೩೬ | ತಾರೀಕು ೭-೫-೧೯೪೯ನೇ ಶುಕ್ರವಾರ | ಸಂಚಿಕೆ ೪೮

## ಮಹಾತ್ಮರ —ಸುತ್ತು ಇದ್ದ ಮಹಿಳೆಯರು.

### ಸರಳಾಬೆನ್

ವಿದ್ಯಾಭ್ಯಾಸ ಕಾರ್ಯಕ್ರಮದಲ್ಲಿ ನಿಪುಣೆ. ಆಲ್ಮೋರಾದಲ್ಲಿ ಒಂದು ಮೂಲ ಶಿಕ್ಷಣ ಶಾಲೆಯನ್ನೂ ಗುಡಿಕೈಗಾರಿಕೆಗಳ ಪ್ರಾಯೋಗಿಕ ಕೇಂದ್ರವನ್ನೂ ನಡೆಸುತ್ತಿದ್ದಾಳೆ. ಕಾಫಿ ಕುಡಿಯುವು. ಬೆಣ್ಣೆ, ತುಪ್ಪ, ರೊಟ್ಟಿ ತಿನ್ನುವು. ಸಾದಾ ಬಡ ಜೀವನ ಉನ್ನತ ಆದರ್ಶ. ಭಾರತೀಯರ ಸೇವೆಯೇ ಆಕೆಯ ಜೀವನ

### ಮಿರಾಬೆನ್

ಬ್ರಿಟಿಷ್ ನೌಕಾಧಿಕಾರಿಯೊಬ್ಬನ ಪುತ್ರಿ ಮಗಳು. ವಿಲಿಕ ಭೋಗ ಭಾಗ್ಯಗಳನ್ನು ತ್ಯಜಿಸಿ ಗಾಂಧೀಜಿಯ ಪರಿವಾರದಲ್ಲಿ ಗಣ್ಯಸ್ಥಾನ ಪಡೆದಳು ಲಂಡನಿನಲ್ಲಿ ಬಾಪುವಿದ್ದಾಗ ಬಾಪುವಿನ ಆಹಾರದ ವ್ಯವಸ್ಥೆ ಇವಳದಾಗಿತ್ತು. ನಿರಾಶ್ರಿತರಿಂದ ತುಂಬಿರುವ ಭರತಖಂಡದ ಮಹಾಗಾಯವನ್ನು ವಾಸಿಗೊಳಿಸುವ ಮಹಾಕಾರ್ಯದಲ್ಲಿ ಮಗ್ನಳಾಗಿದ್ದಾಳೆ

### ನಿಜಯೆಲಕ್ಷ್ಮಿ

ಅಂತರಾಷ್ಟ್ರೀಯ ರಾಜಕಾರಣಿ ಈಕೆ. ಸಂಯುಕ್ತ ರಾಷ್ಟ್ರ ಸಂಘಕ್ಕೆ ಭಾರತ ನಿಯೋಗದ ನಾಯಕಿಯಾಗಿ ಹೋಗಿ ಮಹಿಳಾ ಜಗತ್ತಿನ ವಿಜಯ ಪತಾಕೆಯನ್ನು ಎತ್ತಿಹಿಡಿದು ಭಾರತದ ಗೌರವನ್ನು ಹೆಚ್ಚಿಸಿದಳು. ರಷ್ಯಾದಲ್ಲಿ ಭಾರತದ ರಾಯಬಾರಿ. ಗಾಂಧೀಜಿಯವರ ಸಕಲ ತತ್ವಗಳ ಹಿಂಬಾಲಕಿಯಲ್ಲದಿದ್ದರೂ ಮಹಾತ್ಮರ ಪ್ರಭಾವದಿಂದ ಹೆದವರಿತು ವರ್ತಿಸುತ್ತಾಳೆ

### ಅರುಣಾ ಆಸಫ್ ಅಲಿ

ಗತಿಸಿದ ಆಗಸ್ಟ್ ತರಬೇತಾದ ಈಕೆ ಮಹಾತ್ಮರ ತುಂಟ ಬಾಲಕಿ. ಕ್ರಾಂತಿಯೇ ಈಕೆಯ ಉಸಿರು. ಆಕೆಯ ರಾಜಕೀಯ ಪಿತನಾದ ಬಾಪುವು ಈಕೆಯನ್ನು ಅಮೋಘಿಕದಿಂದ ಶೀಘ್ರ ಬರಬೇಕೆಂದು ಕರೆಕಳುಹಿಸಿದರು. ಗಾಂಧೀಜಿಯ ತತ್ವ ಪಥವನ್ನು ಪೂರ್ತಿ ವಿಸಿಸದಿದ್ದರೂ ಗಾಂಧೀಜಿ ಪುತ್ರಿತ್ವಳಲ್ಲಿ ಅಪೂರ್ವಾಭಿಧೇಯವಿತ್ತು.

### ಸುಶೀಲಾನಾಯರ್

ಗಾಂಧೀಜಿಯ ಡಾಕ್ಟರು. ಜಪುಣ ಪ್ರಜೆಯನ್ನು ರಕ್ಷಿಸಿದಂತೆ ಮಹಾತ್ಮ ಗಾಂಧೀಜಿಯವರ ಮೇಲೆ ಈಕೆಯ ಕಾವಲು. ಅವೇ ಅಲ್ಲ; ಗಾಂಧಿ ಆಶ್ರಮದವರೆಲ್ಲರ ಆರೋಗ್ಯ ಇವಳ ಕರ್ತವ್ಯ ವಾಂಛಿತೆ ಬೇರಾವುದೇ ಇರಲಿ; ಸೇವಾಗ್ರಾಮದ ಜವಾಬ್ದಾರಿ ಈಕೆಯದು. ಔಷಧೋಪಚಾರದಲ್ಲಿ ಹೆಚ್ಚಿನ ತರಬೇತಿಗೆ ಅವಕಾಶಕ್ಕೆ ಹೋಗಬೇಕಿದ್ದಾಳೆ.

### ವೃಂದಾ ಸಾರಾಭಾಯಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದ ಈಕೆ ಹೆಗಸ ದರೂ ಈಕೆಯ ವ್ಯವಹಾರ ಸಾಧಾರಣ ಗಂಡಸಿನಂತೆ. ಜೋನ್ ಆಫ್ ಆರ್ಕ್ ನಂಗೆಯನ್ನು ಅಪಪೆಸಲ್ಪಟ್ಟು ಹೆಂಗಸರನ್ನ ಹಿಂದಕ್ಕೆ ತಳುವ ಕಠಿಣ ಕೆಲಸಕ್ಕೆ ತೊಡಗಿದ್ದಾಳೆ. ಜೀವಕ್ಕೆ ಗಂಡಾಂತರವಿರುವಲ್ಲಿ ಧೈರ್ಯಗೆಡದೆ ಶ್ರಮಿಸುತ್ತಿದ್ದಾಳೆ.

### ಸುಚೇತಾ ಕೃಪಾಲಿನಿ

ಹಿಂದಿನ ಕಾಂಗ್ರೆಸ್ ಪ್ರಸಿಡೆಂಟರ ಪತ್ನಿ. ನಿರಾಶ್ರಿತರ ತಾಯಿ ಈಕೆಯೆಂದರೆ ಅತ್ಯುಕ್ತಿಯಾಗದು. ಕನ್ನ ಪತಿಯೊಡನೆ ಗಾಂಧೀಜಿಯವರ ಸಂಸ್ಕಾರ ಪಡೆದಿದ್ದಾಳೆ ಸ್ವಾಧ್ಯ ಸಂಕಟಕ್ಕೆ ಭಾವನೆಗೆಡೆಯಿಲ್ಲದೆ 'ಮೋತಾ' ಸ್ವರೂಪದಿಂದ ಅಖಿಶ್ರಾಂತ ದುಡಿಯುತ್ತಿರುವಳು.

### ಅಮ್ತುಸ್ ಸಲಾಮ್

ಯಾರಿಗೂ ಗೊತ್ತಿರಲಾರದ ವ್ಯಕ್ತಿ. ಬಣ್ಣ ಬಡಾಯಿ ಇಲ್ಲದೆ ಮೌನವಾಗಿ ಸೇವೆ ಸಲ್ಲಿಸುತ್ತಿರುವ ಕಲಸಗಾತಿ. ನವಕಾಲಿಯಲ್ಲಿ ಕೋಮುವಾರು ಪಿಡಂಬೂತವು ಸಹಸ್ರ ತಲೆಯಿಂದ ಮೇಲೆದ್ದಾಗ ಐಕ್ಯತೆಗಾಗಿ ಉಪವಾಸ ಮಾಡಿದಳು. ಮಹಾತ್ಮರ ಕೊಲೆಯ ನಂತರವೂ ಚಿತಾ ಭಸ್ಮ ವಿಸರ್ಜನೆಯವರೆಗೆ ಆತ್ಮ ಪರಿಶುದ್ಧತೆಗಾಗಿ ಉಪವಾಸ ಮಾಡಿದಳು.

### ಸರೋಜಿನಿದೇವಿ.

ಈಕೆಯ ಪರಿಚಯ ಯಾರಿಗೂ ಬೇಕಿಲ್ಲ. ರಾಜಕಾರ್ಯದಲ್ಲಿ ವಿದುಷಿ, ಕವಯಿತ್ರಿ, ಭವಿಷ್ಯವನ್ನು ನಿರೂಪಿಸಬಲ್ಲ ಶಕ್ತಿಮಯಿ. ಭಾರತೀಯ ನವಚೇತನದ ಮೂರ್ತಿ ಈಕೆ. ಆಗಾಖಾನ್ ಅರಮನೆಯ ಜೈಲಿನಲ್ಲಿ ಗಾಂಧೀಜಿಯನ್ನು ಆರೈಕೆ ಮಾಡಿದಳು. ಈಗ ಸಂಯುಕ್ತಪ್ರಾಂತದ ಗವರ್ನರರಾಗಿ ತನ್ನ ಕಾರ್ಯ ಕುಶಲತೆಯಿಂದ ಜನಸೇವೆ ಮಾಡುತ್ತಿರುವಳು. ಕಾಂಗ್ರೆಸ್ಸಿನ 'ಪ್ರೆಸಿಡೆಂಟ್' ಆಗಿದ್ದ ಈಕೆಗೆ ಕಾಂಗ್ರೆಸ್ ಕಾರ್ಯಕಾರಿ ಮಂಡಳದಲ್ಲಿ ಗೌರವ ಸ್ಥಾನವಿದೆ.

### ಸತ್ಯವತಿದೇವಿ

ಗಾಂಧೀಜಿಯ ಮರಣಕ್ಕೆ ಮೂರು ವರ್ಷಗಳಿಗೆ ಮೊದಲು ಈಕೆ ಮೃತಿಯನ್ನೈದಿದ್ದಳು. ಗಾಂಧೀಜಿ ಮರಣದ ಕಾಲಕ್ಕೆ ಅಲ್ಲಿಗೆ ಹೋಗಿದ್ದರು. ಪ್ರಾಣಬಿಡುವ ಸಮಯದಲ್ಲಿ ಈಕೆ ಗಾಂಧೀಜಿಯೊಡನೆ ಹೇಳಿದಳು. 'ದಾಸ್ಯದಿಂದ ಸ್ವಾತಂತ್ರ್ಯದ ಶಿಖರಕ್ಕೇರುತ್ತಿರುವದರಿಂದ ನಾನು ಧನ್ಯಳು. ನಾನು ಇದನ್ನು ಮರಣವೆಂದು ಭಾವಿಸಬಾರದೆ. ಪರದಾಸ್ಯತೆಯು ಕೈ ಇರದ ರಾಜ್ಯಕ್ಕೆ ಕರೆಯುತ್ತಿರುವೆನು.'

### ಪ್ರಭಾವತಿದೇವಿ.

ಗೃಹಕೃತ್ಯದಲ್ಲಿ ಜಯಪ್ರಕಾಶನಾರಾಯಣರ ಸಹಭಾಗಿನಿಯೊದರೂ ರಾಜಕೀಯದಲ್ಲಿ ಮಹಾತ್ಮರ ಅನುಯಾಯಿ ಈಕೆ. ಜಯಪ್ರಕಾಶರು ಜೈಲಿನಲ್ಲಿದ್ದಾಗ ಗಾಂಧೀಜಿಯ ರಾಷ್ಟ್ರರಚನಾ ಕಾರ್ಯದಲ್ಲಿ ಮಗ್ನಳಾಗಿದ್ದಳು. ತನ್ನ ಅಹಿಂಸಾ ಮಾರ್ಗದಲ್ಲಿ ಹೆಸರು ಘನತೆಗಳಗಾಶಿಸದೆ ನಿಷ್ಕಾಮ ಸೇವೆ ಸಲ್ಲಿಸುತ್ತಿದ್ದಳೆ.

### ಮೀನಾದಾಸ್.

ಒಮ್ಮೆ ಪ್ರಖ್ಯಾತ ಕ್ರಾಂತಿ ಪಂಥದವಳು ಗಾಂಧೀಜಿಯವರ ಅಹಿಂಸಾತ್ಮಕ ಈಕೆಯನ್ನು ಗಾಂಧಿ ಅನುಯಾಯಿಗಳಲ್ಲಿ ಸೇರಿಸಿತು. ಆಸ್ಟೇ ಅಲ್ಲ; ಈಕೆಯನ್ನು ರಾಜಕೀಯ ಬೆಳಕಿನಲ್ಲಿ ನಿಲ್ಲಿಸಿತು. ಈಗ ಬಂಗಾಳ ಶಾಸನ ಸಭೆಯಲ್ಲಿ ಕಲಸ ಮಾಡುತ್ತಿರುವಳು.

### ಗೋಪಿಬೆನ್ ಕೆಷ್ಟನ್.

ರಾಜಕೀಯ ನಿಜ್ಞತೆಕೆಯನ್ನೇರಿ ಹಿರಿಗಳಿಸಲು ಆಲೆ ಇಲ್ಲದ ಈ ಕುಶಲೆ ಸಾಮಾಜಿಕ ಕೆಲಸದಲ್ಲಿ ಕೊಪಗಿನವಳು. ಬಾಪುವಿನ ಸಾಮಾಜಿಕ ಕಾರ್ಯಕ್ರಮದ ಯೋಜ್ಯ ಉದ್ಗಾರಿಕಾರಿಣಿ ಈಕೆ ಎನ್ನಬಹುದು.

### ಸಾಫಿಯಾಖಾನ್.

ಡಾ. ಟಿ ಸಾಹೇಬರ ಮಗಳು. ಕಾಂಗ್ರೆಸ್ ಸಂಸ್ಥಾಪಕನ ನಾಯಕಿ. ಈಗ ಪಾಕಿಸ್ತಾನದಲ್ಲಿದ್ದಾಳೆ. ಗಾಂಧೀಜಿಯವರ ಪ್ರಿಯಶಿಷ್ಯೆ. ಪಾಕಿಸ್ತಾನದಲ್ಲಿ ಗಾಂಧಿ ತತ್ವಗಳನ್ನು ಅನುಸರಿಸುತ್ತಿರುವ ಇಂಥಾವಂ ಜೀವನದಿಂದ ಪಾಕಿಸ್ತಾನವು ನಿಜವಾಗಿಯೂ ಪವಿತ್ರವಾಗಲಿ.

### ಅನಸೂಯಬಾಯಿ ಕಾಳೆ.

ಅಖಿಲ ಭಾರತ ಮಹಿಳಾ ಪರಿಷತ್ತಿನ ಅಧ್ಯಕ್ಷಣಿ. ಜೆಮೂರು ದುರಂತದ ಕೈದಿಗಳ ಜೀವರಕ್ಷಣೆಗಾಗಿ ಅವಿಶ್ರಾಂತ ದುಡಿದಳು. ಮಹಾತ್ಮರ ಬಲಗೈ ಧಕ್ಕರ್ ಬಾವಾರವರ ಪ್ರೇಮಣಿಯಂತೆ ಮಹಾ ಪ್ರಯತ್ನಮಾಡಿದಳು. ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಹೆಂಗಸರು ಗೃಹಕೃತ್ಯದ ಲ್ಲೇ ಮಗ್ನರಾಗಿದ್ದಾಗ ಎಂಬಿ ಬಂದು ಜೈಲಿಗೆ ನಡದ ಎದೆಗಾತಿ ಈಕೆ.

### ಮ್ಯೂರಿಯಲ್ ಲೆಸ್ಟರ್.

ದುಂಡುಮೇಜಿನ ಪರಿಷತ್ತಿನ ಕಾಲಕ್ಕೆ ಗಾಂಧೀಜಿಯವರನ್ನು ಆತಿಥಿಯಾಗಿ ಪಡೆದ ಭಾಗ್ಯ ಈಕೆಯದು. ಅಂದಿನಿಂದ ಗಾಂಧಿ ಪಂಥಕ್ಕೆ ಸೇರಿದ್ದಾಳೆ. ಗಾಂಧೀಜಿಯವರ ತತ್ವಸಿದ್ಧಾಂತಗಳನ್ನು ಪಾಶ್ಚಿಮಾತ್ಯ ಜಗತ್ತಿಗೆ ತಿಳಿಯುವಂತೆ ಹೇಳುವ ವಳೀಕೆ. ಕಳೆದ ೨೦ ವರ್ಷಗಳಿಂದ ಗಾಂಧೀಜಿಯ ತತ್ವಗಳನ್ನು ಸಾರುತ್ತಾ ಜಗತ್ತನ್ನು ಸುತ್ತಿದ್ದಾಳೆ ೧೯೪೬ ರಲ್ಲಿ ವಿಷ್ಯಾದ ಎಲ್ಲಾ ದೇಶಗಳನ್ನು ಸುತ್ತಿದಳು. ತ್ರಿನಿದಾದಿನಲ್ಲಿ ಈಕೆಯವೇ ಆದ ಬಿಳಿ ಜನರು ಈಕೆಯನ್ನು ಬಂಧಿಸಿಟ್ಟಿದ್ದರು.

### ಮಣಿಬೆನ್ ಪಟೇಲ್.

ಸರ್ದಾರ ಪಟೇಲರ ಮಗಳಾದ ಈಕೆಯಲ್ಲಿ ತಂದೆಯ ದೃಢಕೆ ಇದೆ. ಮಹಾತ್ಮರ ಮೃದುಭಾವವಿದೆ. ತಂದೆಯ ಕಾರ್ಯದರ್ಶಿಯೂ ಈಕೆ. ಮಹಾತ್ಮರಲ್ಲಿ ಇವಳ ಭಕ್ತಿ ಸೇವೆ [illegible] ಯಲ್ಲಿ ಬಿದ್ದಿರುವ [illegible] ನಿರತಳಾಗಿದ್ದಾಳೆ.

### ಪ್ರೇಮಾ

ಕನ್ನಡ ನಾಡಿನ [illegible] ಶ್ರಮದಲ್ಲಿ ನಿರಂತರ [illegible] ಸೇವೆ ಈಗೊಂದು [illegible] ಬಂದವರೊಡನೆ [illegible] ಕೆ. ಸೇವೆಯೇ [illegible] ಮಹಾತ್ಮರ ತತ್ವಗಳನ್ನು [illegible] ಸರಳ ಆದರ್ಶಜೀವನ ನಡಿಸುತ್ತಿರುವಳು.

### ರಾಮೇಶ್ವರಿ ನೆಹರೂ

ಗಾಂಧೀಜಿಯವರು ಕಲಿಸಿದ ಸತ್ಯವನ್ನು ನಿರ್ಭಯದಿಂದ ನೂತಾಡುವಳೆಂದು ಹಿಂದೊಮ್ಮೆ ಸರಕಾರವು ಈಕೆಯ ಮೇಲೆ ನಿರ್ಬಂಧ ಹಾಕಿತ್ತು. ಸತ್ಯ ಪಥದಲ್ಲಿ ನಡೆಯುವ ಈಕೆ ಹಿಂಜರಿಯಲ್ಲಿಲ್ಲ. ಅಖಿಲ ಭಾರತ ಸಂಸಿಳಾ ಪರಿಷತ್ತು ಈಕೆಯ ಪ್ರಧಾನ ಕಾರ್ಯಕ್ಷೇತ್ರ. ನಾಡಿನ ಜನ್ನತಿಗಾಗಿ ಅಹೋರಾತ್ರಿ ದುಡಿಯುತ್ತಿರುವಳು.

### ಉಷಾಮೆಹತಾ

ಗತಿಸಿದ ಕಾಲಕ್ಕೆ ಗುಪ್ತಗಾಮಿನಿಯಾಗಿ ಚಾರ್ತಾಹ ಚಳವಳಿಯ ಸಂದೇಶವನ್ನು ದೇಶದ ಅಧ್ಯಂತಕ್ಕೂ ಗುಪ್ತ 'ರೇಡಿಯೋ'ದ ಮೂಲಕ ಪ್ರಚಾರ ಮಾಡುತ್ತಿದ್ದಳೀಕೆ. ಎಲ್ಲಿ ಕೇಳಿದರೂ ಈಕೆಯ ವಾಣಿ. ಆದರೆ ಪೋಲಿಸರಿಗೆ ದೊರೆಯಲಾಕೆ. ಕಡೆಗೆ ದಸ್ತಗಿರಿ ಮಾಡಲ್ಪಟ್ಟು ಈಕೆ ಈಗ ಧಾರ್ಮಿಕ ಬೋಧನೆಯಲ್ಲಿ ಮಗ್ನಳಾಗಿದ್ದಾಳೆ. ನವಚೇತನದ ಧುರೀಯು ಈಕೆಯಿಂದ ಸದಾ ಹರಿಯುತ್ತಿದೆ.

### ಆಶಾದೇವ್.

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರ ಆಶ್ರಮದಲ್ಲಿದ್ದವಳು. ಗಾಂಧೀಜಿಯವರ ನಾಲ್ಕು ಮಕ್ಕಳನ್ನು ಯೋಗ್ಯರೀತಿ ಪೋಷಿಸುವ ಜವಾಬ್ದಾರಿ ಹೊತ್ತಿದ್ದಳು. ಗಾಂಧೀಜಿಯ ಪ್ರಭಾವ ಈಕೆಯ ಮೇಲೆ ಎಷ್ಟು ಬಿದ್ದಿದೆಯೋ ಅದರಂತೆ ಈಕೆಯ ದೃಢಕೆ, ಕರ್ಮನಿಷ್ಠೆಗಳ ಪ್ರಭಾವವು ಗಾಂಧೀಜಿಯ ಮೇಲೂ ಬಿದ್ದಿತ್ತು.

### ಲೇಡಿ ಮೌಂಟ್‌ಬೆಟನ್.

ಗಾಂಧೀಜಿಯವರ ಮರಣದ ನಂತರ ಅವರ ಮನೆಯೋಹಕ ನಗೆ, ಮೃದುಮಾತು, ನೂತನ ಚೇತನ ಯುಕ್ತವಾದ ವ್ಯಕ್ತಿತ್ವ ಇವುಗಳನ್ನು ಮರೆಯಲಾರದವರಲ್ಲಿ ಈಕೆ ಒಬ್ಬಳು. ಗಾಂಧೀಜಿ ಬ್ರಿಟಿಷರ ಪರಮ ಮಿತ್ರರಾಗಿದ್ದರು. ಆದ್ದರಿಂದಲೇ ವೈಸರಾಯರ ಭವನದಲ್ಲಿ ಅವರ ಪ್ರಭಾವವು ಸರ್ವರ ಮೇಲೆ ಬೀಳುತ್ತಿತ್ತು. ಸಾಮಾಜಿಕ ವಿಚಾರವೇ ಇರಲಿ, ರಾಜಕೀಯವೇ ಇರಲಿ ಗಾಂಧೀ ಪ್ರಭಾವಕ್ಕೊಳಗಾದವರಲ್ಲಿ ಈಕೆ ಒಬ್ಬಳೆನ್ನಬಹುದು.

ಭಾರತ ದೇಶದಲ್ಲಿ ಮಣ್ಣಿನಿಂದ ಮಹಾಮಹಾ ಯೋಧರನ್ನು ನಿರ್ಮಿಸಿದ ಯುಗಪುರುಷ ಬಾಪುವಿನ ಸ್ಪರ್ಶ ವೇಧ ಸ್ಪರ್ಶ. ಅವರ ವಾಣಿ ದೇವವಾಣಿ. ದೇವತೆಗಳ ಸ್ಪರ್ಶದಿಂದ ಪದೀಜಯು ಮೃಷ್ಟಿಪಡೆಯುವ ವಜ್ರಾಯುಧವಾದಂತೆ ಮಹಾತ್ಮರ ಅದೇಶ ಕೈಚಳಕದಿಂದ ಭಾರತೀಯರು [illegible] ರಂತೆ ವರ್ತಿಸಿದರು. ಸ್ವತಂತ್ರರಾ

—— ಪೇಗೆವ

# ಕೊಡಗು

ತಾ. ೭-೫-೧೯೪೮ಲನೇ ಶುಕ್ರವಾರ


## ವಿವಿಧತೆಯಲ್ಲಿ ಏಕತೆ.

ಲ್ಲಿ ಪ್ರಕಟವಾ
ಹೈದರಾಬಾದು ಕಳೆದ ಆಗಸ್ಟ್ ೧೫ ರ ನಂತರ ಕೊ
ಸ್ಥಾನಬದ್ಧ ಭೂಬಿಯನ್ನಿ ಹರಿಜನ ಸಮ್ಮೇಳನ, ಕುರುಬರ
ಸೇನ್ ರಾವ್ ಎಂಬವರನ್ನು ಹೀಗೆ ಹಿಂದೆ ಹಾಕಲ್ಪಟ್ಟಿದ್ದ
ಮಾಡುತ್ತಿದ್ದಾಗ, ಜೈಲಿನ ಸಮೀಪದಿಂದು ಉತ್ಸಾಹ ಕೋ
ಟರು ಗುಂಡಿನಿಂದ ಕೊಂದರು. ಹೀಗೆ ಜನಸಂಖ್ಯೆಯ
ರವನ್ನು ಸ್ವತಂತ್ರ ಸಹೋದ್ಯೋಗಿಗಳು ಅರುವತ್ತಕ್ಕಿಂತು ಸಾವಿರದ
ಲಾಗಿದೆ. ಲ್ಲ ಹಿಂದಿಯರು, ಎರವರು, ಕುರುಬರು
ಜೈಲಿ ಎಂದು ವರ್ಗೀಕರಿಸಿದ ಕುಮಾರು ಇಪ್ಪ
ತ್ತೈದು ಸಾವಿರ ಜನರಿದ್ದಾರೆ. ಈ ಜನ
ಸಮುದಾಯವನ್ನು ಇಂದಿನ ಆವರ ದಾ
ರುಣ ಪರಿಸ್ಥಿತಿಯಲ್ಲಿಯೇ ಇಟ್ಟು ನಾವೆ
ಷ್ಟು ಸ್ವತಂತ್ರಿಗಳೆಂದರೂ ನಮ್ಮ ದೇಶ ಪ್ರ
ಗತಿಪಥದಲ್ಲಿ ಸಾಗದು. ದೇಶದ ಯಾವ
ದೇ ಒಂದು ಕೋನ ವಿದ್ಯಾಸಂಪನ್ನವಾ
ಗಿ ಮುಂದಿರದರೆ ದೇಶದ ಪ್ರಗತಿಯೂ ತಿನ್ನಲಾಗ ವದಿಲ್ಲ. ಹಿಂದುಳಿದ ಇತರ
ಕೋಮುಗಳ ಭಾರವು ಅದನ್ನು ಹಿಂದೆ
ಜಗ್ಗುವದರಿಂದ ದೇಶವು ಅಭಿವೃದ್ಧಿಗೊಳ್ಳ
ಲಾರದ. ದೇಶವೆಂಬ ಮಹಾರಥದಲ್ಲಿ
ಗಾಲಿಗಳಂತಿರುವ ಈ ಕೋಮುಗಳೆಲ್ಲಾ
ಸರಿಯಾಗಿ ಸಮನಾಗಿ ಮುಂದೆ ಸಾಗಬೇ
ಕು. ಆಂದರೇನೇ ದೇಶವೆಂಬ ರಥವು
ಸುಗಮವಾಗಿ ಮುಂದೆ ಸಾಗುವದು.

ಕೊಡಗಿನಲ್ಲಿ ದಳತನಗರ್ವವೆಂದು ಹಿಂ
ದೆ ತಳ್ಳಲ್ಪಟ್ಟಿರುವ ಹೊಲೆಯರು, ಎರವ
ರು, ಕುರುಬರು ಮೊದಲಾದವರ ಇಂದಿನ
ಜೀವನವು ಪಾಷಾಣಯುಗದ ಜೀವನ
ಕ್ಕಿಂತಾ ಉತ್ಕೃಷ್ಟವಿಲ್ಲ. ಇಂತಾ ಒಂದು
ನಿಕೃಷ್ಟ ಜೀವನ ಮಾಡುವಂತೆ ಸಮಾಜದ
ಕಟ್ಟುನಿಟ್ಟುಗಳನ್ನು ರಚಿಸಿ ಅವರ ಪಾಲಿಗೆ
ಯಿಂದ ಜೀವನ ಹೊರೆಯುವ ಉತ್ತಮ
ರೆನ್ನುವವರು ಇನ್ನಾದರೂ ತಮ್ಮ ತಪ್ಪಿಗೆ
ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಇ
ವರನ್ನು ಅಸ್ಪೃಶ್ಯರೆಂದು ಗ್ರಾಮದ ಪ್ರ
ಯೋಜನಕ್ಕೆ ಬಾರದ ಸ್ಥಳಗಳಲ್ಲಿರಿಸಿರುವೆ
ವು. ಅವರ ದುಡಿಮೆಯ ಫಲವನ್ನು ಸ್ವ
ಚ್ಛಂದವಾಗಿ ಭೋಗಿಸುವೆವು. ಆದರೆ ಆ
ವಕ: ನಮ್ಮ ಬಾವಿಯ ನೀರು ಮುಟ್ಟಲಾ
ರು. ದೇವಸ್ಥಾನದ ಆವರಣವೊಳಗೆ ಬ
ರಲಾರರು. ಈ ರೀತಿ ಅವರನ್ನು ಹೊರತ
ಳೆದ ಕಾರಣ ನಮ್ಮ ಜನಜೀವನ ಶಕ್ತಿ
ಕುಂದಿದೆ. ಕೊಡಗಿನಲ್ಲಿ ಈ ೫೫ ಸಾವಿ
ರವಿರುವ ಈ 'ದೇವರ ಜನ'ರಿಗೆ ಯೋಗ್ಯ
ಅವಕಾಶ ಒದಗಿಸಿ ಕೊಟ್ಟು, ಅವರಿಗೆ ವ್ಯ
ವಸಾಯ ಮಾಡಲು ಭೂಮಿ, ವಿದ್ಯೆಯ
ಅನುಕೂಲತೆ, ಉದ್ಯೋಗದ ವ್ಯವಸ್ಥೆ ಮಾ
ಡಿದರೆ ದೇಶದ ಸಂಪತ್ತು ಹೆಚ್ಚಿ ನಾಡು
ಶೋಭಿಸುವದು. ರಿಷ್ಯದ ಸಂಪತ್ತಾದ
ಈ ಜನರ ಕಾರ್ಯೋತ್ಸಾಹಗಳು ಇಂದು
ಬಡತನದ ಮಡುವಿನಲ್ಲಿ ಕುಗ್ಗಿ ದೇಶಕ್ಕೆ
ಮಾಡ್ಯಲೂಲುಭವಾಗುತ್ತಾ ಇಲ್ಲ.

ತೆಗೆದುಕೊಳ್ಳುವಂತೆ ಯಾವದೇ ದೇಶದ ಜನರಾಗಲೀ,
ತೋಳಿರುವರು. ಪುಣೇ ಕೋಮಿನವರಾಗಲೀ, ತಾನೇ
ಜಿಲ್ಲಾ ಕಲಿಕ್ಟರರು, ಕುಶಲರು, ಮೇಧಾವಿಗಳೆಂ
ಪರಂಟೆಂಡೆಂಟರಿಗೂ ಕೊಳ್ಳಲಾರರು. ಏಕೆಂದರೆ ಪ್ರ
ಮಾಡಲಾಗದೆ. ವ್ಯಕ್ತಿಯಲ್ಲಿಯೂ ಚೇತನವಿ
ದೆ, ಕುಶಲತೆ ಇದೆ. ಯೋಗ್ಯ ಅವಕಾಶ
ದೊರೆತುದಾದರೆ ಅವು ವಿಕಾಸಗೊಂಡು ಆ
ತನು ಬುದ್ದಿವಂತ, ದಕ್ಷನೆನಿಸುವನು. ನ
ಮ್ಮ ಇಂದಿನ ಪರಿಸ್ಥಿತಿಯನ್ನವಲೋಕಿಸಿ
ದರೆ ಇದಕ್ಕೆ ಸಾಕಷ್ಟು ನಿದರ್ಶನಗಳು
ದೊರೆಯುವವು. ಡಾ ಅಂಬೇಡ್ಕರರು ಹ
ರಿಜನರಾದರೂ, ಬುದ್ಧಿಯಲ್ಲಿ, ಕುಶಲತೆ
ಯಲ್ಲಿ ಯಾವ ದೇಶದ ಉತ್ತಮನಿಗೂ ಕ
ಡಿಮೆ ಇಲ್ಲ. ಜಗಜ್ಜೀವನರಾಮರು ಹ
ರಿಜನರಾದರೂ ಯಾರಿಗೂ ಹಿಂದಿಲ್ಲ.
ಇಂಥಾ ನೂರಾರು ಉದಾಹರಣೆಗಳನ್ನು
ಕೊಡಬಹುದು. ಶಾಲೆಗೆ ಹೋಗುತ್ತಿರು
ವ ಹರಿಜನ ಬಾಲಕರು ಯಾವ ರೀತಿ ವಿ
ದ್ಯೆಯಲ್ಲಿ ಮುಂದರಿಯುತ್ತಿರುವರೆಂಬುದು
ಇವರು ಬೇರೆಯವರಿಗಿಂಥಾ ಕಡಿಮೆ ಇಲ್ಲ
ವೆಂಬುದನ್ನು ಸಾಬೀತುಪಡಿಸಿದೆ. ಆದ್ದ
ರಿಂದ ನಾವು ಉತ್ತಮರೆಂದುಗೊಳ್ಳುವದು
ತಪ್ಪಲ್ಲವೇ ಅಲ್ಲ; ಮಹಾತ್ಮ ಗಾಂಧೀಜಿಯ
ವರೆಂದಂತೆ ಹಿಂದೂ ಮತಕ್ಕೆ ಕಲಂಕವಾ
ಯವಾದುದು.

ಕೊಡಗಿನಲ್ಲಿ ಈ ಹಿಂದೆ ತಳ್ಳಲ್ಪಟ್ಟ
ಪಂಗಡಗಳ ಹಿತಸಾಧನೆಯ ಬಗ್ಗೆ ಅಲ್ಲಲ್ಲಿ
ಪ್ರಯತ್ನಗಳಾಗುತ್ತಿವೆ. ಕೆಲವು ಸಾರ್ವ
ಜನಿಕ ಕೆಲಸಗಾರರು ಇದರಲ್ಲಿ ಆಸಕ್ತಿ
ತೋರುತ್ತಿದ್ದಾರೆ. ಭರತಖಂಡದ ಭಾ
ವೀ ರಾಜ್ಯಘಟನೆಯಲ್ಲಿ ಈ ಬೇಧಭಾವ
ಕ್ಕೆಡೆ ಇಲ್ಲದ ಕಾರಣ ಪಟ್ಟು ಇವರೆಲ್ಲರಿ
ಗೂ ಮತಾಧಿಕಾರ ಬರುವ ಕಾರಣ ಇವ
ರಲ್ಲಿ ಜ್ಞಾನದ ಬೆಳಕನ್ನು ಜೆಲ್ಲಿ ತಮಗೆ ಬ
ರುವ ಅಧಿಕಾರಗಳ ಸದುಪಯೋಗ ಮಾ
ಡುವಂತೆ ಮಾಡಬೇಕು. ಇಲ್ಲದಿದ್ದರೆ
ಪ್ರಜಾಪ್ರಭುತ್ವದ ಕೊಲೆಯಾದೀತು. ಸ
ರಕಾರವು ಈ ಬಗ್ಗೆ ಎಚ್ಚೆತ್ತು ವರ್ತಿಸಬೇ
ಕು. ಶೀಘ್ರವಾಗಿ ಈ ಭಿನ್ನತೆಯ ವಿಷ
ವನ್ನು ಆಳಿಸಿ ಸರ್ವರೂ ಏಕ ಮನಬವಾ
ಗಿ ಹೆಗಲಿಗೆ ಹೆಗಲುಕೊಟ್ಟು ಭವಿಷ್ಯವನ್ನು
ಎದುರಿಸುವ ಪರಿಸ್ಥಿತಿಯನ್ನು ಕಲ್ಪಿಸಬೇ
ಕು. ಹರಿಜನರೆನ್ನುವವರು ದೇವಸ್ಥಾನ,
ಹೊಟೇಲು, ಇನ್ನಿತರ ಸಾರ್ವಜನಿಕ ಸ್ಥಳ
ಗಳಲ್ಲಿ ಯಾವದೇ ನಿರ್ಬಂಧವಿಲ್ಲದೆ ಪ್ರವೇ
ಶಿಸುವ ಏರ್ಪಾಡನ್ನು ಪ್ರಥಮ ಹೆಜ್ಜೆಯಾ
ಗಿ ತೀರ್ಪು ಮಾಡಬೇಕು.

## ಗು. ಮ. ನರಸಿಂಹಮೂರ್ತಿ

ಸಾರ್ವಜನಿಕ ಕಾರ್ಯಗಳಿಗೆ ಕೊ
ಡುಗೈಯಿಂದ ಪಡಾಯಿತಿಸ್ತ, ಪ್ರೋತ್ಸಾ
ಹಿಸುವ ಶ್ರೀ ಗುಂಡ್ಯಕುಟ್ಟಿ ಮಂಜುನಾಥ
ಯ್ಯನವರು ಕೊಡಗಿನವರಿಗೆ ಚಿರಪರಿಚಿತ
ರು. ಅವರ ಮಗ ನರಸಿಂಹ ಮೂರ್ತಿ
ಯವರು ತಾರೀಕು ೪-೫-೪೮ರಲ್ಲಿ ತಮ್ಮ
ಸ್ನೇಹಿತರೊಂದಿಗೆ ಹಟ್ಟಿ ಹೊಳೆಗೆ ಸ್ನಾನ
ಮಾಡಲು ಹೋಗಿದ್ದಾಗ ಮುಳುಗಿ ಮೃತ
ರಾದರೆಂಬ ಭಯಂಕರ ವಾರ್ತೆ ಹಲವರ
ನ್ನು ದಿಗ್ಭ್ರಮೆಗೊಳಿಸಿದೆ. ಮೂರ್ತಿ
ಯವರು ಕೊಯಮುತ್ತೂರು ವೈದ್ಯಸಾ
ಯ ಕಾಲೇಜಿನಲ್ಲಿ ಓದುತ್ತಿದ್ದರು. ಕಾ
ಲೇಜಿನ ಸ್ನೇಹಿತರಿಬ್ಬರೊಡನೆ ಮನೆಯಲ್ಲಿ
ದ್ದರು. ಮೊನ್ನೆ ನಡೆದ ದುರಂತವಲ್ಲಿ
ಸ್ನೇಹಿತರಿಬ್ಬರು ಈಜುತ್ತಿದ್ದಾಗ ಕೈ
ಸೋತು ಮುಳುಗುತ್ತಿದ್ದಾಗ ಅವರನ್ನು ರ
ಕ್ಷಿಸಲು ಹೋಗಿ ತನ್ನ ಪ್ರಾಣಕಳಕೊಂಡ
ರು. ತರುಣರಾಗಿದ್ದ ಮೂರ್ತಿಯವರು
ಅಚ್ಚು ಕಾಂಗ್ರೆಸ್ಸಿಗರು. ಸೇವಾದಳ ಸಂ
ಘಟಕರಾಗಿ ಹಲವಾರು ವಿದ್ಯಾರ್ಥಿಗಳಿಗೆ
ತರಬೇತು ಕೊಟ್ಟಿದ್ದಾರೆ. ಇನ್ನೂ ಆರ
ಳಿ ಆಪ್ತ ವಿಕ್ಕುಗಳಲ್ಲಿ ತನ್ನ ಸುಗಂಧವನ್ನು
ಬೀರಲಿದ್ದ ಜೀವನ ಕುಸುಮವು ಅಸ್ಪರ
ಲ್ಲೇ ಕಾಲನ ದವಡೆಗೆ ಸಿಲುಕಿ ಬೇಕಾ
ಯಿತು. ಈ ಅಪಾರ ದುಃಖ ಸಹನಾಶ
ಕ್ತಿಯನ್ನು ಭಗವಂತನು ಮಂಜುನಾಥ
ಯ್ಯನವರಿಗೂ ಅವರ ಕುಟುಂಬಕ್ಕೂ ಕೊ
ಡಲಿ. ದಿವಂಗತರ ಆತ್ಮವು ಚಿರಶಾಂತಿ
ಯನ್ನು ಪಡೆಯಲಿ.

## ವರ್ತಮಾನ.

ವೀರಾಜಪೇಟೆ ಶ್ರೀ ಗರುಮಾಲ್ಲೇಶ್ವ
ಸ್ವಾಮಿ ಮರವ ಉತ್ಸವವು ತಾ. ೧೫ ರಲ್ಲಿ
ಜರಗುವದು. ಮೇರವಣಿಗೆ, ಭಜನೆ, ಪೂ
ಜೆ, ಹರಕೆಲೆ, ಅನ್ನಸಂತರ್ಪಣೆಯು ನಡೆ
ಯುವದು.

ವೀರಾಜಪೇಟೆ ಸೇಂಟ್ ಎನ್ಸ್ ಹೈಯ
ರ್ ಎಲಿಮೆಂಟರಿ ಶಾಲೆಯಲ್ಲಿ ಈ ವರ್ಷ
ನಾಲ್ಕನೇ ಫಾರ್ಮ್ (೯ನೇ ತರಗತಿ) ತೆ
ರೆಯುವದೆಂದೂ ಹೊಸದಾಗಿ ತೆರೆಯುವ
ಈ ತರಗತಿಗೆ ಕೇವಲ ವಿದ್ಯಾರ್ಥಿನಿಯರ
ನ್ನು ಮಾತ್ರ ತೆಗೆದುಕೊಳ್ಳುವರೆಂದೂ ವ
ರ್ತಮಾನ.

ವೀರಾಜಪೇಟೆ ಕುರ್ಲೂರು ಗ್ರಾ
ಮದ ಭಗವತಿದೇವರ ಹಬ್ಬವು ತಾರೀಕು
೨೨ ರಿಂದ ೩೦ ರವರೆಗೆ ನಡೆಯುವದು.

ತಾರೀಕು ೨೮-೫-೪೮ ರಲ್ಲಿ ಕೊಡ
ಗು ಜಿಲ್ಲಾ ನೇಚಿಸ್ಟೆಂಟರ ಖಚೇರಿಯ ಎ
ದುರು ಗಿವಾಲ್ಸರ್, ೭ ಜೊಂಟೆ ಹೊಳವಿ
ನ ಮತ್ತು ೩ ಜೋಡು ಹೊಳವಿನ ತುಂ
ಬುವ ಕೋಲಿಗಳು, ಸರಿಯಾಗಿಲ್ಲದ ಐದು
ಪೈಸಲುಗಳೂ ಹರಾಜುಮಾಡಲ್ಪಡುತ್ತವೆ.

ಅಮ್ಮತ್ತಿ ನಾಡಿನವರು ಈ ತಾ. 4 ರ
ಲ್ಲಿ ಶ್ರೀ ಪಿ. ವಿ. ಚಂಗಪ್ಪನವರ ಅಧ್ಯಕ್ಷತೆ
ಯಲ್ಲಿ ಅಮ್ಮತ್ತಿಯಲ್ಲಿ ಸಭೆನೇರಿ ಸ್ಥಳೀಯ
ಗಾಂಧೀ ಸ್ಮಾರಕ ನಿಧಿಯನ್ನು ಸ್ಥಾಪಿಸ
ಲು ತೀರ್ಮಾನಿಸಿ ಇದಕ್ಕೆ ಜೀಣ ಸಂಗ್ರಹ
ಹಿಸಲು 15 ಮಂಬರುಗಳ ಕಮಿಟಿಯೊಂ
ದು ಅಧಿಸ್ಥಪಟ್ಟಿತು.

ಈ ತಾ. ೩ರಲ್ಲಿ ಸೋಮವಾರಪೇಟೆ
ಯಲ್ಲಿ ಶ್ರೀ ಕೆ. ಎಸ್. ಚಂಗಪ್ಪನವರ ಅ
ಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆ
ಯಲ್ಲಿ ಇಷ್ಟಿ ಈ ಸೊಪಲೇ ಸ್ಥಾಪಿಸಲ್ಪಟ್ಟಿ
ರುವ ಸ್ಥಳೀಕ ಗಾಂಧೀ ಸ್ಮಾರಕ ನಿಧಿಗೆ
ಸರ್ವರೂ ಧನ ಸಹಾಯ ಮಾಡಬೇಕಾಗಿ
ಶ್ರೀ ಹೆಚ್. ಟಿ. ಮಂತ್ರಣನವರು ಅಪ್ಪೀ
ಲು ಮಾಡಿದರು.

ಕೊಯಮುತ್ತೂರು ವೈದ್ಯಸಾಯ
ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ ಗುಂಡು
ಕುಟ್ಟಿ ಮಂಜುನಾಥಯ್ಯನವರ ಮಗ ನರ
ಸಿಂಹ ಮೂರ್ತಿಯವರು ತಾ. ೪-೫-೪೮
ರಲ್ಲಿ ಹಟ್ಟಿ ಹೊಳೆಯಲ್ಲಿ ಸ್ನೇಹಿತರೊಂದಿ
ಗೆ ಈಜಲು ಹೋಗಿದ್ದಾಗ ಮುಳುಗುತ್ತಿ
ದ್ದ ಸ್ನೇಹಿತನೊಬ್ಬನನ್ನು ರಕ್ಷಿಸುವ ಪ್ರ
ಯತ್ನದಲ್ಲಿ ತಾವೇ ಮುಳುಗಿ ವ್ಯಥರಾದ
ರು. ಅವರ ಶವವು ಮೂರನೆ ದಿನ ದೊರೆ
ತು ಶವ ಸಂಸ್ಕಾರ ನಡೆಯಿತು.

## ಬೇಕಾಗಿದೆ.

ಓದು ಬರಹ ಗೊತ್ತಿರುವವರಿಗೆ ವಿ
ಲಿಟರಿಯಲ್ಲಿ ನಾನಾ ತರಹದ ಟೆಕ್ನಿಕಲ್ಲ್ ಟ್ರೇನಿಂಗ್ ಇದೆ. ಇನ್‌ಫೆಂಟ್ರಿ ಆರ್ಟಿಲರಿ
ಮತ್ತು ಆರಮೆಡ್ ಕೋರ್‌ಗಳಲ್ಲಿ ಸೇರಲು
ಇಷ್ಟ ಇರುವವರು ಸೇರಬಹುದು. ಹದಿ
ನಾರುವರೆ ವಯಸ್ಸಿನ ಒಳಗೆ ಇರುವ ಹು
ಡುಗರಿಗೂ ಸಹ ಟೆಕ್ನಿಕಲ್ಲ್ ಟ್ರೈನಿಂಗ್
ಇದೆ. ಎಲ್ಲ ವಿಚಾರಕ್ಕೆ ಈ ಕೆಳಗಿನ ಸ್ಥ
ಳಗಳಲ್ಲಿ ನೂರಾ ಶ್ರೀ ಅಲ್ಲಾರೆಂದ ಮುಂದ
ಣ್ಣನವರನ್ನು ಕಂಡು ವಿಚಾರಗಳನ್ನು
ತಿಳಿಯಬಹುದು.

| | | |
|---|---|---|
| ಸೋಮವಾರಪೇಟೆ | ಮೇ | ತಿಂಗಳು 16 |
| ವೀರಾಜಪೇಟೆ | ,, | 18 |
| ನಾಪೋಕ್ಲು | ,, | 20 |
| ಪೊನ್ನಂಪೇಟೆ | ,, | 23 |
| ಮಡಿಕೇರಿ | ಮೇ | 25, 26, 27 |

2-1

## ಮಡಿಕೇರಿ ಮುನ್ಸಿಫ್ ಕೋರ್ಟ್‌ನಲ್ಲಿ

ಸಿ. ಅ. ನಂಬ್ರ 32/1948

ವಾದಿಯರು:-ತಳೂರು ಮೊದ್ಯೆಯ್ಯ
ಕರುಂಬಯ್ಯ ವೈಗೈರ್‌ಗಳು. ಇವರ
ಕ್ಷೇಮಚಿಂತಕ ತಾಯಿ ಬಬ್ಬಮ್ಮ, ಆರವ
ಶೊಕ್ಕಲು, ಮಡಿಕೇರಿನಾಡು.

ಪ್ರತಿವಾದಿಯರು:-ತಳೂರು ಕೃಷ್ಣ
ಪ್ಪ ಮತ್ತು 11 ಬೇರೆ ಪ್ರತಿವಾದಿಯರು
ಆರವತ್ತೊಕ್ಕಲು, ಮಡಿಕೇರಿನಾಡು.

ಮೇಲ್ಕಂಡ ನೊಮಿದಮ್ಮಯ್ಯಲ್ಲಿ ವಾ
ದಿಯರು ಪ್ರತಿವಾದಿಯರ ಮೇಲೂ ಮ
ತ್ತು ಅರುವತ್ತೊಕ್ಕಲು ಗ್ರಾಮದ ಇತರ ತ
ಳೂರು ಕುಟುಂಬಸ್ಥರ ಮೇಲೂ ಸಿ. ಪಿ ಸಿ.
ಆರ್ಡರ್ 1 ರೂಲ್ 8ರ ಪ್ರಕಾರ ರಿಪ್ರೆ
ಸೆಂಟೇಟಿವ್ (Representative)
ದಾವೆಯನ್ನು ದಾಕಲು ಮಾಡಿರ್ಯ
ವುದರಿಂದ ತಳೂರು ಕುಟುಂಬ
ಸ್ಥರ ಪೈಕಿ ಪ್ರತಿವಾದಿಯರಿಲ್ಲದೆ ಬಾ
ಕಿಯವರು ತಮ್ಮನ್ನು ಪ್ರತಿವಾದಿಯ ಸ್ಥಾ
ನಕ್ಕೆ ಸೇರಿಸಿಕೊಳ್ಳಲು ಅಪೇಕ್ಷಿಸಿದಲ್ಲಿ
ತಾ. 9-6-1948 ನೇ ಬುಧವಾರ ಬೆಳಿ
ಗ್ಗೆ 11 ಗಂಟೆಗೆ ಈ ಬಗ್ಗೆ ವಿಚಾರಣೆಗೆ ಇ
ಟ್ಟಿರುವ ಕಾರಣ ಕೋರ್ಟಿಗೆ ಹಾಜರಾಗಿ
ಮನೆನೆ ಮಾಡಿಕೊಳ್ಳಬಹುದೆಂತ ಈ
ಮೂಲಕ ತಿಳಿಸಲಾಗಿದೆ.

1948ನೇ ಇಸವಿ ಮೇ ತಿಂಗಳು
4ನೇ ತಾರೀಕಿನಲ್ಲಿ ಕೋರ್ಟುನೋಶರಿನ
ನಮ್ಮ ದಸ್ಕತ್ತಿನಿಂದ ಕೊಡೋಣಾಗಿದೆ.

ಕೋರ್ಟಿನ ಆಪ್ತಜೆ ನೇರ್ಪಿ
ಜಿ. ಕಾರ್ಯಪ್ಪ,
ಪೆಡ್ಡಾಶ್ಟಾರ್.


ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯಪ್ಪನವರು

# ಹಳ್ಳಿಗರೊಡನೆ ವಿನೋಬಾ.

[ಭಕ್ತವಾರಪುರವು ತಿಲ್ಲಿಯಿಂದ ೧೬ ಮೈಲು ದೂರವಿರುವ ಒಂದು ಹಳ್ಳಿ. ಕಳೆದ ಗಲಭೆಯಲ್ಲಿ ಆ ಹಳ್ಳಿಯ ಕೆಲವು ಮುಸಲ್ಮಾನರು ಹಿಂದು ಧರ್ಮಕ್ಕೆ ಒಂದು ಸೇರಿದ್ದರು. ಆವರಲ್ಲಿ ಕೆಲವರು ಮತ್ತೆ ಇಸ್ಲಾಮಿಕ್ಕೆ ಕೂಡಿಕೊಂಡಿದ್ದರು. ಇನ್ನು ಕೆಲವರು ಕೂಡ ಬಯಸಿದ್ದರು. ಈ ಹಳ್ಳಿಯಲ್ಲಿ ಏಪ್ರಿಲ್ ತಿಂಗಳ ೯ಕ್ಕೆ ಒಂದು ಸಭೆ ನಿರ್ಧರಿಸಿತ್ತು. ಶ್ರೀ. ವಿನೋಬಾ ಭಾವೆಯವರು ಮೊತನಾಡಿದರು. ಕಳಗಿನದು ಅವರ ಮಾತಿನ ಸಾರಾಂಶ -ಸಂಪಾದಕ]

ಹಳ್ಳಿಗರೊಡನೆ ಇರಲು ನನಗೆ ಸೊಗಸೆನಿಸುವದು. ಪಟ್ಟಣಗರಿಗಿಂತ ಹಳ್ಳಿಗರ ನಿರಿಯೂ ನನಗೂ ಹಿತವೆನಿಸುತ್ತದೆ. ಹೆಂಣುಮಕ್ಕಳೂ ಬಂದುದನ್ನು ನೋಡಿ ನನಗಿನ್ನೂ ಸಮಾಧಾನ. ಹೆಣ್ಣು ಗಂಡು ಸಂಸಾರದ ಎರಡು ಗಾಲಿಗಳು. ಒಂಟಿಗಾಲಿಯಿಂದ ರಥ ಮುಂದೆ ಸರಿವುದು ಅಸಾಧ್ಯವಿದ್ದು ತೆ. ಸಮಾಜ ರಥವು ಹೆಣ್ಣನ್ನೋ ಗಂಡನ್ನೋ ಉಳಿದು ಪ್ರಗತಿಯು ಹಾದಿಯಲ್ಲಿ ಉರುಳಲು ರದು. ಜ್ಞಾನ ವಿಲಿ, ಕರ್ಮಯಲಿ, ಯೂತ್ಪತಿ ಲಿ, ಹಳ್ಳಿಯ ದಿನವನ್ನು ಕಂಡ ಕಲಸಗಳಲಿ ಸ್ತ್ರೀಪುರುಷರೂ ಕೂಡಿಯೇ ನಿರ್ವಹಿಸಬೇಕು ಗುವುದು

ನನು ನಿಮಗೆ ಒಂದು ಎಚ್ಚರಿಕೆ ಹೇಳುತ್ತೇವೆ. ಎದೆಯರೆ ಪಟ್ಟಣದ ವಾತಾವರಣದ ಸಂಕೇತಿಸಿದ ದೂರವಿವದು ಇತ್ತೀಚಿಗೆ ನಮ್ಮ ನಾಡಿನ್ನು ಮುಸುಕಿದ ಕೆಡಕು ಪಟ್ಟಣದಲ್ಲಿ ಹುಟ್ಟಿಯೇ ಹಬ್ಬಿತು. ಪಟ್ಟಣ ವಾಸಿಗಳು ಏನೂ ಅರಿಯದ ಪತ್ತಿ ಇಸ್ಲಿನ ವದಕ್ಕಿಳಿಯದ ಹಳ್ಳಿಗರನ್ನು ಅಡ್ಡದಾರಿಗಳವರು ಜಾತಿ ಜಾತಿಯಲ್ಲಿ ಎತ್ತರ ಬಿತ್ತಿದರು. ಕೊಸ್ತಿತ ಭಾವನೆಗಳನ್ನೂ ರಾಗದ್ವೇಷಗಳನ್ನೂ ಪಟ್ಟಣಿಗರು ಹಳ್ಳಿಗರಲ್ಲಿ ಹರಿಡಿಸಿದರು. ಹೀಗೆ ಮಾಡಿ ಎಲ್ಲರ ನಾಶಕ್ಕೆ ಕಂಡಂದರು ಆದ್ದರಿಂದ ಎಂದಿಗೂ ಮತ್ತೆ ಪಟ್ಟಣಗರು ಹಳ್ಳಿಗರಲ್ಲಿ ಹರಿಡಿಸಿ ಕೂಡಿಸಿದ ಬೀಜಗಳನ್ನು ಬಿತ್ತಲೂ ಹವಣಿಸಿದರೆ ಅವರಿಗೆ ಸಿರ್ಮಳಾ ಅನುಭವಗೊಡಬ ರದಿನ್ಯೇ ಅಲ್ಲ, ಪಟ್ಟಣದ ಜಗಳಗಳನ್ನು ಹಳ್ಳಿಯಲ್ಲೂ ಹಬ್ಬಿಸುವದು ಬೇಡವೆಂದು ಸ್ಪಷ್ಟವಾಗಿ ಹೇಳಿ ಅವರನ್ನು ದೂರ ಉಟ್ಟಬೇಕು.

ಸಮಾಜಪೂಂದರಲ್ಲಿಯ ಭಿನ್ನ ಜಾತಿಗಳನ್ನು ಕೈಯ ಐದು ಬೆರಳುಗಳಿಗೆ ಹೋಲಿಸಬಹುದು. ಕೆಲ ಬೆರಳುಗಳು ಚಿಕ್ಕವು, ಕೆಲವು ದೊಡ್ಡವು. ಆದರೆ ಯಾವ ದಾವದಿನಂದನ್ನು ಎತ್ತಬೇಕಾದರೆ ಆ ಕಲಸ ಮಾಡಲು ಎಲ್ಲ ಬೆರಳುಗಳು ಒಟ್ಟಿಗೆ ಸೇರಬೇಕು. ಏವೇ ಬೆರಳುಗಳಿದ್ದರೂ ಆವುಗಳ ಒಟ್ಟು ಜನರಿಗೆ ಸಾವಿರಾರು ಕಾರ್ಯಗಳನ್ನ ಮಾಡಿಕೊಟ್ಟಿದೆ. ಏದೂ ಒಟ್ಟಿಗೆ ಕೆಲಸ ಮಾಡುವುದೇ ಕಾರಣ. ಉಳಿದವುಗಳೊಡನೆ ಕೆಲಸ ಮಾಡಲು ಯಾವುದಾದರೊಂದು ತಪ್ಪಿದರೆ ಕೈಯ ಕಾರ್ಯಶಕ್ತಿಯು ಎಸ್ಟೋ ಕೆಡಿಸಿ ಯೂಗುವುದು. ಆದುದರಿಂದ ಹಳ್ಳಿಗಳ ಉದ್ಧಾರವಾಗಬೇಕಾದರೆ ಅಲ್ಲಿಯ ಜನರು ಒಗ್ಗಟ್ಟಿನಿಂದ ಕೆಲಸಮಾಡಬೇಕು.

ಈ ಹಳ್ಳಿಯಲ್ಲಿ ಕೆಲವು ಮುಸ್ಲಿಮರೂ ಇರುವುದು ಸಂತೋಷದ ಸಂಗತಿ. ಬೇರೆಯ ಜಾತಿಯವರಿದ್ದರೂ ಒಳ್ಳೆಯದು.

ಬೇರೆ ಬೇರೆ ಜನರು ಬೇರೆ ಬೇರೆ ವಿಧವಾಗಿ ದೇವತಾರಾಧನೆ ಮಾಡುತ್ತಾರೆ ಪ್ರತಿಯೊಂದು ವಿಧದಲ್ಲೂ ಕೆಲವು ಯೋಗ್ಯ ಅಂಶಗಳಿವೆ. ಅಂಧ ಎಲ್ಲರೂ ದೇವರನ್ನು ತಮ್ಮ ಪದ್ಧತಿಗಳಂತೆ ಪೂಜಿಸಿದರೂ ಒಟ್ಟಿಗೆ ಸೌಹಾರ್ದದಿಂದ ನಡದುಕೊಂಡರೆ ಸಾಮಾ ಸಂತೋಷಗಳು ಸಿಗುವುದು. ಅವರ ವಿವಿಧ ಪದ್ಧತಿಗಳು ವಾದ್ಯವೃಂದದ ಭಿನ್ನ ಸ್ವರಗಳಂತೆ ಇವೆ.

ಹಿಂದುಗಳಲ್ಲಿ ಕೂಡ ಒಂದೇ ಪೂಜಾ ವಿಧಾನವಿಲ್ಲ. ಕೆಲವರು ವಿಷ್ಣುವನ್ನು, ಕಲವರು ಶಿವನನ್ನು, ಕೆಲವರು ಶಕ್ತಿಯನ್ನು ಉಳಿದವರು ಹಲವು ದೇವತೆಗಳನ್ನು ಅರಾಧಿಸುತ್ತಾರೆ. ಇದು ಕೆಲವರಿಗೆ ಸರಿಹೋಗದೆ ಇರೊಂದು ದೇವ ದೇವತೆಗೆ ಳಬಾಜಾರಂತೆ ಕಾಣ ತ್ತದೆಯೆನ್ನುತ್ತಾರೆ ಇದು ನನಗೆ ಗೊತ್ತು. ಆದರೆ ಒಬ್ಬೊಬ್ಬರ ರುಚಿ ಒಂದೊಂದು. ಬಗೆ ಆದರಿಂದ ಎಲ್ಲ ರಿಗಯು ರುಚಿಗಳಗೂ ಒಗ್ಗುವ ವಸ್ತುಗಳು ದೊರೆವ ಬಾಜಾರವಿರುವದರಿಂದ ಏನು ಕೆಟ್ಟು ಹೋಯಿತು? ಆ ಹಾರವಸ್ತುಗಳಲ್ಲಿ ಬಗೆಬಗೆ ಬೇಕೆಂದು ಜನರು ಬಯಸುವದಿಲ್ಲವೆ? ವರ್ತಮಾನದಲ್ಲಿ ನಿತ್ಯವೂ ಒಂದೇ ಬಗಯ ಆಹಾರವುಣ್ಣಲು ನಮಗಿಗೆ ಒಗ್ಗುವದಿಲ್ಲ. ಹಗೆಯೆ ಈ ವಿಧವಿಧ ಆಂತಾಧನಗಳು. ವಿಧವಿಧ ಅನ್ನಗಳದ್ದಂತೆ ಪ ವರಮಾತ್ಮನಿಗೆ ಎಲ್ಲ ನಾಮಗಳು ಎಲ್ಲರೂವಾಗಿ ಸರಿಯೋಗುತ್ತವೆ. ಕಂದ ತನ್ನ ಒಬ್ಬೊಬ್ಬ ಮಗನಿಗೆ ಒಂದೊಂದು ಹೆಸರಿಟ್ಟು ಕರೆಯಂತೆ ಜನರು ಪರಮಾತ್ಮನ ನಾನಾ ರೂಪಗಳಿಗೆ ನಾನಾ ಕಲ್ಪನೆಗಳಿಗೆ ನಾನಾ ನಾಮ ಗಳನ್ನು ಕೂಡುತ್ತಾರೆ ಒಬ್ಬನಿಗೆ ವಿಷ್ಣುವೆಂಬ ಹೆಸರು ಮನಸ್ಸಿಗೆ ಒಪ್ಪುತ್ತದೆ. ಇನ್ನೊಬ್ಬನಿಗೆ ಕೃಷ್ಣನೆಂಬದು ಮತ್ತೊಬ್ಬನಿಗೆ ಇನ್ನೊಂದು. ಈ ರುಚಿ ಭೇದವೇಕೆ ಘಮಗ ಆತಂಕ ಸ್ವರೂಪವಾಗಬೇಕು? ಎರಡು ದೇವರೇ ಇಲ್ಲವೆಂದ ಮೇಲೆ ಭಕ್ತನು ಅವನಿಗೆ ಯಾವ ಹೆಸರು ಕೊಟ್ಟರೂ ಆಪ್ಪೆ

ಅದು ಕಾರಣ, ಮುಸಲ್ಮಾನರು ಪರಮಾತ್ಮನನ್ನು ತಮ್ಮದೇ ರೀತಿಯಲ್ಲಿ ಆರಾಧಿಸಬೇಕೆಂದರೆ, ಕಲಿಮ ಮೇಲೆ ಜುಟ್ಟು ಬೆಳೆಸಿಕೊಂಡು ಅವರು ಹಿಂದುಗಳಿಂದು ಹೇಳಕೊಳ್ಳಬೇಕೆಂದು ನೀವೇಕೆ ಹೇಳಬೇಕೋ ನನಗೆ ತಿಳಿಯದು. ಇನ್ನು ಒಬ್ಬನನ್ನು ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲು ನೀವು ಉಪಯೋಗಿಸಿದ ಉಪಾಯವೊ! ಒಬ್ಬನು ಹಂದಿಯ ಎಲುಬಿನ ಒಂದು ಚೂರನ್ನು ಬಾಯಲ್ಲಿ ಹಾಕಿಕೊಂಡರೆ ತೀರಿತು, ಆತ ಹಿಂದುವಾದನಂತೆ! ಹಿಂದೂ ತ್ವ ಸ್ವೀಕಾರ ಇಷ್ಟೊಂದು ಸುಲಭವಾಗಿದ್ದರೆ, ಋಷಿ-ಮುನಿಗಳ, ಧರ್ಮೋಪದೇಶಕರ ಹೆಂಗೇ ಇಲ್ಲ. ಇಂಥ ಹಾಸ್ಯಾಸ್ಪದ ಉಪಾಯವು ಒಂದೂ ಧರ್ಮದ ತತ್ವವಾಗಿ ಹೋಯಿತೆ! ಇದು ಪ ಖಂಡತನವೇ ಸರಿ

ಯಾವನೊಬ್ಬನೂ ತನ್ನ ಧರ್ಮವನ್ನು ತ್ಯಜಿಸಬೇಕೆಂದು ಹಿಂದೂ ಧರ್ಮ ಹೇಳುವದಿಲ್ಲ. ಪ್ರತಿಯೊಬ್ಬನೂ ತನ್ನ ಧರ್ಮವನ್ನಾಚರಿಸಿ ಸಜ್ಜನನಾಗಲಿ, ದೇವರ ದಾಸನಾಗಲಿ ಸಜ್ಜನಿಕೆಯು ಮುಕ್ತ ದೇವಸೇವಕತೆಯ ಮುಖ್ಯ ತತ್ವವನ್ನು ಹಿಂದೂ ಮುಸ್ಲಿಮರಿಬ್ಬರೂ ಬಿಟ್ಟು ಕೊಟ್ಟವ್ವಾರೆ ಇಬ್ಬರೂ ಸುಳ್ಳು ಹೇಳುತ್ತಾರೆ, ಕೊಲೆಮಾಡುತ್ತಾರೆ, ಬಡವರ ಹೊಟ್ಟೆಗೆ ಕಾಲುಕೊಡುತ್ತಾರೆ ಇಷ್ಟಿದ್ದರೂ ತಾವು ಪರಮ ಧಾರ್ಮಿಕರೆಂದು ಕೊಳ್ಳುತ್ತಾರೆ ಇದು ಶುದ್ಧ ರಕ್ಕು ಸ್ನೇಹ, ಸೌಹಾರ್ದ, ಮಾನವ ಮಾನವರಲ್ಲಿ ಪ್ರೇಮ ಸಂವರ್ಧನೆ, ಜಗಳ ಬೂಡದಿರುವದು ಇವೀಗ ಕಿಂದ್ಧ ಧಾರ್ಮಿಕ ಆಚಾರಗಳು

'ಹರಿ

ನಡೆಸಿಕೊ

# ಪುಟ್ಟ ಮಹಾತ್ಮರು.

ಮಹಾತ್ಮರಾಗಲ, ಅಥವಾ ಅವರಂತೇ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಭಗೀರಥ ಯತ್ನಮಾಡಿದ ಪುಟ್ಟ ಮಹಾತ್ಮರು ಅನೇಕರಿದ್ದಾರೆ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟಿರುವೆನು.

'ಎ' ಮಹಾಶಯನೊಬ್ಬನಿದ್ದ. ಜೈಲಿನಲ್ಲಿರುವಾಗ ಈತನ, ತಲೆಸಿಡಿತವಾಗುತ್ತಿದೆಯೆಂದು, ಜೈಲು ಸೂಪರಿಂಟೆಂಡೆಂಟ್ ನೋಡನೆ ಒಂದು ಬಾಟ್ಲಿ ಕೇಶ ತೈಲ ಕೇಳಿದನು ಅವನಿಗೊಂದು ಬಾಟ್ಲಿ ಎಣ್ಣೆ ಕೊಟ್ಟರು. ಕೆಲವು ದಿನಗಳಲ್ಲಿ ಅವನ ಜೊತೆ ಯಿವು ತಿರ ಫಾಗ ಕರ್ಕಾರ ಶಬ್ದಮಾಡಿತು. ಭಕ್ಕನು, ಆ ಎಣ್ಣೆ ಬಾಟಲಿಯಿಂದ ಕೆಲವು ತಟಿಕೆ ಎಣ್ಣೆಯನ್ನು ಚರಬಕ್ಕೆ ಹೊಯ್ದನು. ಅಂದು ರಾತ್ರಿ ಅವನಲ್ಲಿ ಕಳವಳವೆದ್ದಿತ್ತು. ಅವನು ತಲೆಗೆಂದು ಎಣ್ಣೆ ಕೇಳಿ ಪಡೆದಿದ್ದನ, ಅವನ್ನ ಚರಬಿಕ್ಕೆ ಹೊಯ್ದಿದ್ದನ ಅದು ಅಕಸ್ಮ!

ಮಂದಿನವೇ ಸುಪರಿಂಟೆಂಡೆಂಟರ ನುಂದೆ ಹೋಗಿ ತಾನು ತಪ್ಪು ಮಾಡಿರುವೆನೆಂದನು 'ಯಾವ ತಪ್ಪು?' ಎಂದು ಸುಪರಿಂಟೆಂಡೆಂಟರು ಪ್ರಶ್ನಿಸಿದರು. ತಿಕ್ಷೆಗಾಗಿ ಅಲ್ಲಂರಗೊಂಡ ಈ ಕೃತ್ಯವನ್ನು ನೋಡಿ ಅವರಿಗೆ ವಿಸ್ಮಯವುಂಟು-ಗಿತ್ತು. ತಾನು ತೈಲದ ಪರುಪಯೋಗ ಮಾಡಿರುವೆನೆಂದನು 'ಎ'.

ಸುಪರಿಂಟೆಂಡೆಂಟನು ಅವನಿಗಿತ್ತ ಉತ್ತರವು ಇಲ್ಲಿ ಮುದ್ರಿಸಕಕ್ಕಂಥದ್ದಲ್ಲ

* * *

ನಾನು ಬಿಜಾಪುರ ಜೈಲಿನಲ್ಲಿರುವಾಗ ವಾರ್ಡರ್‌ನಾಗಿದ್ದ ನಮ್ಮವರೊಳಗೆ ಒಬ್ಬ 'ಬ' ಮಹಾಶಯನಿದ್ದನು ಮಹಾತ್ಮರನ್ನು ಚಾಂಚೂ ತಪ್ಪದೆ ಹಿಂಬಾಲಿಸುತಿದ್ದನು. ಮುಂಜಾನೆ ಳಕ್ಕೆ ಸಾಯಂಕಾಲ ೬ಕ್ಕೆ ತಪ್ಪದೆ ಗೀತೆಯೋದುವನು, ಜೈಲು ಕೆಲಸಗಳನ್ನೆಲ್ಲ ತಪ್ಪದೆ ಮಾಡುವನು. ಒಂದು ದಿನ ಬೆಳಿಗ್ಗೆ ಈ ಮಹಾಶಯನು, ಜವಧಿಯಲ್ಲದ ಉಪವಾಸ ವ್ರತ ಕೈಕೊಂಡನು. ನನ್ನ ಮಧ್ಯಸ್ಥಿಕೆಯಿಂದಾಗಿ ಜೈಲಿನೊಳಗೆ ನಮಗೆ ವಿಶೇಷ ತ್ಯಾಗವಿರಲಿಲ್ಲ; ಹೊಂದಿಯಿರಲಿಲ್ಲ; ಸಂತೋಷದಿಂದಿದ್ದಿವು; ನಮ್ಮ ಮೇಲೆ ರಿಸ್ತು ಜಾರಿಯಾಗುವುದೂ ..... ಇತ್ಯಾದಿ.

'ಬ' ಮಹಾಶಯನೊಡನೆ, ಉಪವಾಸದ ಕಾರಣವೇನೆಂದು ಕೇಳಿದೆ. ಅವನ ಉತ್ತರವು ಮಹಾತ್ಮರ ಶೈಲಿಯಲ್ಲಿ ಇತ್ತು.

ಜೈಲಿನಲ್ಲಿ ಅಸತ್ಯ ತುಂಬಿದೆಯೆಂದೂ ತನ್ನ ಆತ್ಮವು ಸಾಕಷ್ಟು ಪರಿಶುದ್ಧ ವಿಲ್ಲದ ಕಾರಣ ಹೀಗಾಗಿದ್ದಿರಬೇಕೆಂಬುದರಿಂದ ತಾನು ಉಪವಾಸ ಹಿಡಿದು ಅದನ್ನು ಶುದ್ಧ ಪಡಿಸುತ್ತಿರುವೆನೆಂದೂ ಹೇಳಿದನು. ವಿವರ ಕೇಳಿದೆ ಹೇಳಿದನು. ಪ್ರಥಮತ ನನ್ನ ಸ್ವಾಧ್ಯಸ್ಥಿಕೆಯಿಂದಾಗಿ, ಜೈಲಿನ ನಿಯಮಗಳನ್ನು ರಾಜಕೀಯ ಕೈದಿಗಳು ಸರಿಯಾಗಿ ಪಾಲಿಸುತ್ತಿರಲಿಲ್ಲ ಎರಡನೆಯದಾಗಿ, ಕಲವು 'ಸಿ' ತರಗತಿಯ, ಒಬ್ಬ ಹುಡುಗನು ಕಳ್ಳತನದಿಂದ ಒಂದು ಸಿಗರೇಟು ಸಾದುತಿದ್ದನು ಅದಕ್ಕಾಗಿ ತಾನು ತನ್ನ ಆತ್ಮದ ಅಶುದ್ಧತೆಯನ್ನು ಹೋಗಲಾಡಿಸಿ, ಜೈಲಿನಲ್ಲಿ 'ಸತ್ಯಮೇವ ಜಯತೆ' ಮೂಡಲು ತೊಡಗಿದ್ದನು!

ನನ್ನ ಮನಸ್ಸು ಚಿನ್ನವಾಯಿತು ನನ್ನ ಗೆಳೆಯರಿಗೆ ಜೈಲುವಾಸವು ಸುಖಕರವಾಗಲೆಂದು ನಾನು ಮಾಡುತ್ತಿದ್ದ ಯತ್ನಗಳೆಲ್ಲವೂ ಈ 'ಬ' ಮಹಾಶಯನ ತಲೆಮೇಲೆ ಕುಸಿದುಬಿದ್ದುದ್ದುವು! ಇಷ್ಟಾದರೂ ಅವನ ಆ ಪವಿತ್ರ ಯಜ್ಞದಲ್ಲಿ ಸೇರಿ ನಾನೂ ನ್ಯಾಣಬಿಡಲು ಸಿದ್ಧನಾಗಿರಲಿಲ್ಲ.

ಸುಪರಿಂಟೆಂಡೆಂಟರೊಡನೆ ನಾನು ಮಾತಾಡಿ, 'ಬ' ನನ್ನು ಒಂದು ಒಂಟಿ ಕೊಠಡಿಗೆ ಬಯ್ಯುವಂತೆ ಮಾಡಿದೆ ನಿತ್ಯವು ಅವನಿದ್ದಲ್ಲಿಗೆ ಹೋಗಿ, ಬೇಡಿದೆ ಇನ್ನೂರು ಮಂದಿ ರಾಜಕೀಯ ಕೈದಿಗಳ ಜೀವನದಲ್ಲಿ ಕತ್ತಲು ತಂದೊಡ್ಡಬೇಡವೆಂದು ಕೇಳಿದ ಏಕಂದರೆ ಈ ಮಹಾಶಯನು ಉಪವಾಸ ಮುಂದುವರಿಸಿದರೆ, 'ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್' ರವರು, ವಿವರ ಕೇಳುವರು ಮತ್ತೆ ಜೈಲಿನಲ್ಲಿ ಶಾಂತಿ ಸುಖಗಳಿಗೆ ವಿದಾಯ!

ನಾಲ್ಕನೆ ದಿನ 'ಬ' ಯ ಆತ್ಮವು ಒಂದು ಸಂದೇಹದಿಂದ ಕಡಿಯಿತು. ಅವನು ನನ್ನೊಡನೆ ಕೇಳಿದನು. 'ಮುನ್ಸಿಜ! ಬಾಪೆ ತಪ್ಪುವುದಕ್ಕಿಂತ ಸಾಯುವುದೊಳ್ಳಿಯದು ಎಂದು ಮಹಾತ್ಮಾಜಿಯವರನ್ನುತ್ತಾರೆ. ಕಳೆದ ವರ್ಷ ನಾವು ನಿಮ್ಮ ವಾರ್ಡರ್ ಶಿಪ್ಪಿಗೆ ಒಪ್ಪಿದಾಗ, ನಿಮ್ಮ ಆಜ್ಞೆಯಂತೆ ನಡಕೊಳ್ಳುತ್ತೇನೆಂದು (ಜೈಲಿನಲ್ಲಿ) ಮಾತುಕೊಟ್ಟಿವೆ ಈಗ ನೀವು ಉಪವಾಸ ಕೊನೆಗೊಳಿಸಬೇಕೆಂದು ನನಗೆ ಆದೇಶ ಕೊಟ್ಟರೆ, ನಿನ್ನು ಮಾತನ್ನು ಏಂ ರಿ ಹೊ

ಗುವದು ನ್ಯಾಯವೇ ಎಂದಾಲೋಚಿಸು ತಿದ್ದೇನೆ.'

ನನಗೆ ಕೂಡಲೇ ಆಶಾಕಿರಣ ಕಂಡಿತು. ಅವಸರದಿಂದ ಆನಂದದಿಂದ ಹೇಳಿದೆ. 'ಖಂಡಿತ! ನನ್ನ ಆಜ್ಞೆಯಂತೆ ನಡಕೊಳ್ಳುತ್ತಿ ಎಂದು ಹೇಳಿದ್ದಿ; ಈಗ, ಉಪವಾಸ ಮುಗಿಸೆಂದು ಹೇಳಿದಾಗ, ಮಂಗಿಸದೆ, ನನ್ನ ಮಾತು ಮೀರಿಯುತ್ತೀ!'

'ಬಾ' ಯ ಆತ್ಮವು ಅತಿಶುದ್ಧವಾದುದು ಅಜ್ಞಾಪಿಸಿದನು.' ಎಲ್ಲಿ ನೀವು ನನಗೆ ಆಜ್ಞೆ ಮಾಡಿದ್ದೀರಿ? ಉಪವಾಸ ಬಿಡುವಂತೆ ನೀವು ಬೇಡುತಿದ್ದಿರಿ!'

ಆಜ್ಞೆ ಕೊಟ್ಟೆ: 'ಇನ್ನಿಂದಿಲ್ಲೆ ಕೊಡುತ್ತಿದ್ದೇನೆ ಆಜ್ಞೆ! ರಘು ಕುಲನ ಮಂತ್ರ ಬಲ್ಲೆ ನೀನು ಪ್ರಾಣಹೋದರೂ ಚಿಂತೆಯಿಲ್ಲ ಮಾತು ತಪ್ಪಬಾರದು. ತುಳಸಿದಾಸರು ಹಾಡಿದ್ದಾರೆ. ಮಹಾತ್ಮರು ನಿತ್ಯವೂ ಹಾಡುತಿದ್ದಾರೆ!'

'ಇನು ನಿನ್ನ ಆಜ್ಞೆಯೇ?'

ಆಹುದು.'

ಆಗಲೇ, ಜಮೂದಾರರಿಂದ ಒಂದು ಕಪ್ ಮುಸಂಬಿ ರಸ ತರಿಸಿಯೂಯಿತು.

* * *

ಚಿನ್ನೂರ್ ಘಟನೆಯ ನಿಷೇಧಾರ್ಥ (ಸೋಲ್ಜರರ ಅತ್ಯಾಚಾರ ೧೯೪೭ರಲ್ಲಿ) ಬನಸಿಲಾಲರು, ವರ್ಧಾದಲ್ಲಿ ಆರುವತ್ತು ಮೂರೋ ಅರುವತ್ತನಾಲ್ಕೋ ದಿನ ಉಪವಾಸ ಮಲಗಿದ್ದರು. ಅಧಿಕಾರಿಗಳು ಕೊನೆಗೆ ಮುಂದೆ ಬಂದರು. ನಾನು ಮಧ್ಯಸ್ಥಿಕೆಗೆ ಹೋಗಿದ್ದೆ. ಬನಸಿಲಾಲರು ನನಗೆ ಹೇಳಿದರು. ನನ್ನ ದೇಹದ ವಿಷಯ ಚಿಂತೆ ನಿಮಗೆ ಬೇಡ. ಬಾಪುಜಿಯು ಮೊನಕ್ಕೆ ಕುಂದು ಬಾರದಂತೆ ನೋಡಿಕೊಳ್ಳಿ! ಎಂದು. ನನ್ನ ಕಣ್ಣುಲ್ಲಿ ನೀರು ಬಂತು. ಬನಸಿಲಾಲರು ಆಗ ಸತ್ಕಿದ್ದರೆ 'ನಮ್ಮ ಚಕ್ರವರ್ತಿ ದೀರ್ಘಾಯುವಾಗಲಿ!' ಎಂದು ಮಡಿದ ಫ್ರೆಂಚ್ ವೀರನಂತೆ ಬನಸಿಲಾಲನೂ 'ಗಾಂಧೀಜಿ ಚಿರಾಯುವಾಗಲಿ' ಎನ್ನುತ ಪ್ರಾಣಬಿಡುತಿದ್ದರು. 'ಪ್ರಭಾತ'

# ಸಂಕುಚಿತ ಪ್ರಾಂತೀಯತೆ.

ಪಂಡಿತ ಜವಾಹರಲಾಲ್ ನೆಹರೂ ಮತ್ತು ಇತರ ಪ್ರಮುಖರು ಈಚೆಗೆ ಕೆಲ ವರ್ಷಗಳಿಂದ ನಮ್ಮ ದೇಶದಲ್ಲಿ ರೂಪುಗೊಳ್ಳುತ್ತಿರುವ ಸಂಕುಚಿತ ಪ್ರಾಂತೀಯತೆಯ ಕಡೆಗೆ ಸಾರ್ವಜನಿಕ ಗಮನವನ್ನು ಸೆಳೆದಿ ದ್ದಾರೆ.

ಕಡಿಮೆಯೆಂದರೆ ೧೯೩೫ ರಿಂದಲೂ ಈ ಭಾವನೆಯು ಬೆಳವಣಿಗೆಯನ್ನು ನಾನು ಲಕ್ಷಿಸಿದ್ದೇನೆ. ಮುಂದೆ ಗಾಂಧೀ ಸೇವಾ ಸಂಘದ ಅಧ್ಯಕ್ಷನಾದ ನಂತರ ಅದನ್ನು ಹತ್ತಿರದಿಂದ ಅಭ್ಯಸಿಸುವ ಹೇರಳ ಅವಕಾಶ ಸಿಕ್ಕಿತ್ತು. ೧೯೩೭ರ ರಷ್ಟೆ ದೇಲಂಗ್ (ಬಿರಿಸಾ) ದಲ್ಲಿ ಸೇರಿದ ಸಂಘದ ಸಮ್ಮೇಲನದಲ್ಲಿ ನನ್ನ ಸೂಚನೆಯನ್ವಯ, ಗಾಂಧೀಜಿಯ ಬೆಂಬಲದಿಂದ ಈ ಪ್ರಶ್ನೆಯನ್ನು ಸ್ವಲ್ಪ ಮಟ್ಟಿಗೆ ಚರ್ಚಿಸಿದ್ದುಂಟು. ಶ್ರೀ. ರಾಜೇಂದ್ರಪ್ರಸಾದ, ಡಾ. ಪ್ರಫುಲ್ಲಘೋಷ ಹಾಗು ಶ್ರೀ. ಶಂಕರರಾವ್ ದೇವ ಇವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಸಮ್ಮೇಳನ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಿತ್ತು.

'ದೇಶದಲ್ಲಿ ಸಂಕುಚಿತ ಪ್ರಾಂತೀಯತೆಯ ದುಷ್ಟ ಭಾವನೆಗಳು ಹಬ್ಬುತ್ತಿರುವದನ್ನು ಸಂಘವು ವಿಷಾದದಿಂದ ಗಮನಿಸಿದೆ. ಪ್ರಾಂತೀಯ ಪ್ರಶ್ನೆಗಳಲ್ಲಿ ಸಂಘದ ಸದ್ಯಸರ ಕರ್ತವ್ಯ ಜಾತೀಯತೆಯ ವಿಷಯದಲ್ಲಿ ದ್ವೇಷವೆಯೆ ಇದೆಯೆಂದು ಈ ಸಮ್ಮೇಳನದ ಅಭಿಪ್ರಾಯ ಆರ್ಥಾತ್, ವಿವಿಧ ಪ್ರಾಂತಗಳ ಹಾಗು ಭಾಷೆಗಳ ಜನರಲ್ಲಿ ಪರಸ್ಪರ ಪ್ರೀತಿಯನ್ನು ಅಭಿವೃದ್ಧಿಗೊಳಿಸಬೇಕು. ಹಿಂದುಸ್ಥಾನವೆಲ್ಲ ಒಂದು ಮತ್ತು ಪ್ರತಿಯೊಬ್ಬ ಹಿಂದೀಯನಿಗೂ ಬೇಕಾದ ಪ್ರಾಂತದಲ್ಲಿ ನೆಲಸಿದರೂ ನಾಗರಿಕ ಹಕ್ಕುಗಳುಂಟಿಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ. ಅವನಾಗಲಿ ಅವನ ಪೂರ್ವಜರಾಗಲಿ ಇನ್ನೊಂದು ಪ್ರಾಂತದಿಂದ ಬಂದು ನೆಲಸಿದವರೆಂಬ ಕಾರಣದಿಂದ ಅವನ ಈ ಹಕ್ಕುಗಳನ್ನು ಅಸಹರಿಸುವದಾಗಲಿ ಅವನ ವಿರುದ್ಧ ಪಕ್ಷಪಾತ ಮಾಡುವದಾಗಲಿ ಸಲ್ಲದು. ಆದರೆ, ತಾವು ಯಾವ ಪ್ರಾಂತದಲ್ಲಿ ನೆಲಸಿರುವರೋ ಆ ಪ್ರಾಂತದ ಜನಜೀವನಗಳಲ್ಲಿ ಸಂಪೂರ್ಣ ಸಮರಸರಾಗಿ, ಅವರ ಸುಖದುಃಖಗಳಲ್ಲಿ ಪಾಲುಗಾರರಾಗಿ, ಆ ಪ್ರಾಂತದ ಅಭಿವೃದ್ಧಿ, ಹಿತಸಾಧನೆ, ಸುಖಗಳಿಗಾಗಿ ಅದೇ ಪ್ರಾಂತದ ಜನರಂತೆ ದುಡಿಯುವದು ಹೊರಗಿಂದ ಬಂದು ನೆಲಸಿದವರ ಕರ್ತವ್ಯ.'

ಸ್ವತಃ ನನಗೆ, ಭಾಷಾನ್ವಯ ಪ್ರಾಂತರಚನೆ ಮತ್ತು 'ಅಲ್ಪ ಸಂಖ್ಯಾಕರ' ಭಾಷಾತ್ಮಕ ಹಕ್ಕುಗಳನ್ನು ಕುರಿತ ಕಂತಿ ಗೊತ್ತುವಳಿ ಆಪ್ಪೇನೂ ಚಾಣಕ್ಷನದ್ದೆಂದ್ಯ ಎಂದೂ ಅನಿಸಿದ್ದಿಲ್ಲ. ವ್ಯವಹಾರ್ಯನಾದಷ್ಟು ಮಟ್ಟಿಗೆ ಒಂದೇ ಭಾಷೆಯನ್ನಾಡುವ ಜನರನ್ನೆಲ್ಲ ಒಂದೇ ಆಡಳಿತ ಘಟಕದಲ್ಲಿ ಕೂಡಿಸಬೇಕೆಂಬ ವಾದು ಬೇರೆ, ಅನೇಕ ಭಾಷೆಗಳನ್ನೊಳಗೊಂಡ ಪ್ರಾಂತಗಳೇ ಬೇಡೆಂಬ ಮಾತು ಬೇರೆ. ಮೊದಲನೆಯದು ಜನರಿಗೂ ಆಡಳಿತ ಯಂತ್ರಕ್ಕೂ ಅನುಕೂಲವಾಗಿ ಸ್ವೀಕಾರಾರ್ಹವಾಗಿದೆ. ಎರಡನೆಯದು ಬೇಕೆಂದು ಹಟಹಿಡಿಯುವದು ಹಾಗಿದೆಯೆಂದು ಹೇಳಲಾರದು. ಆದ್ದರಿಂದ ಭೇದಬುದ್ಧಿ ಬೆಳೆಯುವದು. ಮುಖ್ಯ ಭಾಷೆಯ ಹಕ್ಕುಗಳಿಗೆ ಭಂಗ ಬಾರದಂತೆ ಅನೇಕ ಭಾಷಾಪ್ರಾಂತಗಳನ್ನು ನಡೆಸಿಕೊಂಡು ಹೋಗುವದು ಸರ್ವಥಾ ಅಸಾಧ್ಯವೆಂದಾಗಲಿ ಅನನುಕೂಲವೆಂದಾಗಲಿ ಹೇಳಬರುವದಿಲ್ಲ. 'ಒಂದು ಭಾಷೆ ಒಂದು ಪ್ರಾಂತ' ಎಂಬ ಛಲದಿಂದ ಅದರ ಪುರಸ್ಕರ್ತರು ಅದನ್ನು ಸಾಧಿಸುವದರಲ್ಲಿರುವ ಕೊಡುಕುಗಳನ್ನು ನಿವಾರಿಸಲು ಒಂದು ಪ್ರಾಂತದಿಂದ ಇನ್ನೊಂದ ಪ್ರಾಂತಕ್ಕೆ ಸ್ಥಾನಾಂತರವಾಗುವಂತೆ ಬಲಾತ್ಕಾರ ನಡೆಸಲಿಕ್ಕಿಲ್ಲೆಂದು ಯಾರು ಹೇಳಬಲ್ಲರು? ವಾತಾವರಣದಲ್ಲಿ ದುಷ್ಕೃತ್ವ ಹುಟ್ಟಿರುವಾಗ ಅದು ಸಿಕ್ಕವರಲ್ಲೆಲ್ಲ ಅವಿಶ್ವವಾಗುತ್ತದೆ.

ತನ್ನ ಭಾಷೆಗಾಗಲಿ ಲಿಪಿಗಾಗಲಿ ಸರಕಾರದ ಅಂಗೀಕಾರ ದೊರಕುವಂತೆ ಮಾಡಲು ಯಾವುದೊಂದು ಗುಂಪಿಗೆ ಇರುವ ಅಧಿಕಾರಕ್ಕೆ ಕೂಡ ವಿಶಾಲ ದೃಷ್ಟಿಯಿಂದ ಅರ್ಧ ಹಚ್ಚಬೇಕು ಪೂರ್ಣಭಾಷೆಯಲ್ಲಿ ಶಿಕ್ಷಣ ದೊರಕಬೇಕೆನ್ನುವದು ಶೈಕ್ಷಣಿಕ ದೃಷ್ಟಿಯಿಂದ ಯೋಗ್ಯವಾದ ಸ್ಪಯೇಯವೇ. ಆದರೆ ವರ್ಧಾದಲ್ಲಿ ವಾಸಿಸುತ್ತಿರುವ ನಾನು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಗುಜರಾತಿ ಭಾಷೆಯು ಮೂಲಕವೇ ವ್ಯವಸ್ಥೆಯಾಗಬೇಕೆಂದು ಹಟ ಕೊಡಬಹುದೆ? ಅಂಥ ಹಕ್ಕನ್ನು ಸರಕಾರ ಅಂಗೀಕರಿಸಲಾರದೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಬದಲಿಗೆ, ನನ್ನ ಮಕ್ಕಳು ಗುಜರಾತಿ ಕಲಿಯಲಿ ಬಿಡಲಿ, ಪ್ರಾಂತಿಕ ಭಾಷೆಯಾದ ಮರಾಠಿಯನ್ನು ಕಲಿತೇತೀರಬೇಕೆಂದು ಸರಕಾರ ಒತ್ತಾಯಪಡಿಸಬಲ್ಲದು. ನಾನು ನನ್ನ ಮಕ್ಕಳಿಗೂ ಗುಜರಾತಿ ಕಲಿಸಿದರೆ ಸರಕಾರ ಅದನ್ನು ತಡೆಯಲಾರದು. ಆದರೆ ಅದು ತಾನು ಗುಜರಾತಿ ಕಲಿಸುವ ಹೊಣೆ ಹೊರಲಾರದು. ಎಲ್ಲ ಶಿಕ್ಷಣವನ್ನೂ ಗುಜರಾತಿಯಲ್ಲೆ ಕೊಡಿಸುವ ಮಾತಂತೂ ದೂರ ಉಳಿಯಿತು. ತದ್ವಿರುದ್ಧವಾಗಿ, ಅನ್ಯ ಪ್ರಾಂತದಿಂದ ಬಂದು ನೆಲಸಿದವನು, ಸುಮಾರು ೫೦ ವರ್ಷಗಳಿಗೂಳಗೆ, ಸ್ಥಾನಿಕ ಭಾಷೆಯನ್ನು ತನ್ನದಾಗಿ ಮಾಡಿಕೊಳ್ಳಲೇ ಬೇಕೆಂದು ಅಪೇಕ್ಷಿಸುವ ಅಥವಾ ಒತ್ತಾಯ ಕೂಡ ಮಾಡುವ ಹಕ್ಕು ಸರಕಾರಕ್ಕಿದೆ.

ಕೆ. ಫೆ. ಮಶ್ರುವಾಲಾ.

## ಬಾತ್ಮಿ.

### ಸೋಮವಾರಪೇಟೆ ಹೈಸ್ಕೂಲು.

ಕಳೆದ ನಾಲ್ಕು ವರ್ಷಗಳಿಂದ ಪ್ರಾಸಗಿಯಾಗಿದ್ದ ಸೋಮವಾರಪೇಟೆ ಹೈಸ್ಕೂಲನ್ನು ತಾ. 24-4-48 ರಿಂದ ಸರಕಾರದವರು ವಹಿಸಿಕೊಂಡಿರುವುದು ಸಂತೋಷದ ಸಂಗತಿ. ಈ ಸ್ಕೂಲನ್ನು ಸ್ಥಾಪಿಸಿ ಸುಗಮವಾಗಿ ನಡೆಸಿಕೊಂಡು ಬರಲು ಹೆಚ್ಚುತ್ತು ಮುತುವರ್ಜಿ ವಹಿಸಿದ್ದ ಹೆಡ್ ಮಾಸ್ಟರಾಗಿದ್ದ ಶ್ರೀ. ಡಿ. ಎನ್. ದೇವೈಯ್ಯನವರು ತೆಗೆದುಕೊಂಡ ಶ್ರಮಕ್ಕೆ ಎಷ್ಟು ವಂದಿಸಿದರೂ ಸಾಲದು. ವಿದ್ಯೆಯಲ್ಲಿ ಹಿಂದುಳಿದವರನ್ನು ಮುಂದಕ್ಕೆ ತರಲು ಹಗಲು ರಾತ್ರಿ ದುಡಿದಿರುವರೇಬುದಕ್ಕೆ ಕಳೆದ ವರ್ಷದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮದ್ರಾಸು ಆದಿಪತ್ಯದಲ್ಲಿ ಪ್ರಥಮ ಸ್ಥಾನವನ್ನು ಈ ಶಾಲೆಯು ಪಡೆದಿರುವುದೇ ಸಾಕ್ಷಿ. ಹೀಗೆ ಶ್ರಮವಹಿಸಿ, ಕಲಸ ಮಾಡುವ ನಿಪುಣರನ್ನು ಈ ಶಾಲೆಯ ಹೆಡ್ ಮಾಸ್ಟರಾಗಿಯೇ ಉಳಿಸಿಕೊಡಬೇಕೆಂಬ ಜನರ ಕೇಳಿಕೆಯನ್ನು ಸರಕಾರವು ನಿರಾಕರಿಸಿದ್ದು ವ್ಯಸನಕರ. ಶ್ರೀ. ದೇವೈಯ್ಯನವರನ್ನು ಆಸಿಸ್ಟೆಂಟ್ ಸೂಪ್ರಿಂಟೆಂಡೆಂಟರಾಗಿ ನೇಮಿಸಿರುವುದರಿಂದ ಬೇರೆ ಸ್ಕೂಲಿಗೆ ವರ್ಗಮಾಡಿಸಿಕೊಳ್ಳುವರೆಂದು ವರ್ತಮಾನ ಕೇಳಬರುತ್ತೆ. ಇದು ನಿಜ ಇದ್ದರೆ ಶ್ರೀ. ದೇವೈಯ್ಯನವರು ಕಳೆದ ನಾಲ್ಕು ವರ್ಷಗಳಿಂದ ತಾಲೆಯ ಪುರೋವೃದ್ಧಿಗೆ ಶ್ರಮಿಸಿ ವಿದ್ಯಾರ್ಥಿಗಳ ಹಾಗೂ ಜನರ ಪ್ರೀತಿಗೆ ಪಾತ್ರರಾಗಿದ್ದು ಮಧ್ಯದಲ್ಲಿ ಬಿಟ್ಟು ಹೋದರೆ ತಾನು ಬೆಳಸಿದ ಮರವನ್ನು ತಾನೇ ಕೊಂದಂತಾಗುವುದು. ಶ್ರೀ. ದೇವೈಯ್ಯನವರು ಧೀರ್ಘ ಆಲೋಚನೆಯಿಂದ ತಮ್ಮ ಅಸಮಧಾನವನ್ನು ಬದಿಗಿರಿಸಿ, ಅವರು ಎತ್ತಿ ಹಿಡಿದ ಸ್ಕೂಲಿನಲ್ಲಿಯೇ ಕೆಲವಾರು ವರ್ಷಗಳು ದುಡಿದು ವಿದ್ಯೆಯಲ್ಲಿ ಹಿಂದುಳಿದವರನ್ನು ಮುಂದಕ್ಕೆ ತರಲು ಸ್ರಯತ್ನಪಟ್ಟು ಜನತೆಯ ಹಾಗೂ, ಸರಕಾರದ ಪ್ರೀತಿಯನ್ನು ಗಳಿಸಿ ಕೆಲವೇ ವರ್ಷಗಳಲ್ಲಿ ಇದೇ ತಾಲೆಯ ಹೆಡ್ಡ್ ಮಾಸ್ಟರ ಪದವಿಗೇರಿ ಇಲ್ಲಿಯ ಜನರ ಸೇವೆ ಮಾಡಲು ಮರೆಯಬಾರದಾಗಿ ನನ್ನ ಕೋರಿಕೆ. ಹೊಸ ಹೆಡ್ ಮಾಸ್ಟರವರು ಸಹ ನಿಪುಣರೂ, ಜನರ ಪ್ರೀತಿಯನ್ನು ಗಳಿಸಿದವರೆಂದೂ ಕೇಳಬರುತ್ತೆ. ಇವರು ಮತ್ತು ಶ್ರೀ. ದೇವೈಯ್ಯನವರು ಸಹ ಒಗ್ಟಟ್ಟಿನಿಂದ ಕೆಲಸ ಮಾಡಿದರೆ ನಮ್ಮ ತಾಲೆಯು, ಇನ್ನೊಂದು ಮೆಟ್ಟಲು ಮುಂದರಿಯದಿರಲಾರದು. ಇದಕ್ಕೆ ಎರಡು ಜನರು ಒನ್ನುನಿನಿಂದ ಸ್ರಯತ್ನಪಡುವರಾಗಿ ನಂಬಿರುವ.

'ತಾಲೆಯ ಹಿತಚಿಂತಕ.'

### ಹೆಡ್ಮಾಸ್ಟರುಗಳ ನೇಮಕ.

ಇತ್ತೀಚೆಗೆ ಮೂರು ಹೈಸ್ಕೂಲುಗಳನ್ನು ಸರಕಾರವು ತೆಗೆದುಕೊಂಡ ವರ್ತಮಾನವು ದೇಶೀಯರಿಗೆ ದೊಡ್ಡ ಸಂತೋಷವನ್ನುಂಟುಮಾಡಿದೆ. ಅಲ್ಲಿ ಹೆಡ್ ಮಾಸ್ಟರಾಗಿ ಸೀನಿಯರ್ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದು ಅದಕ್ಕಿಂತಲೂ ದೊಡ್ಡ ಸಂತೋಷ. ಆದರೆ ಸೀನಿಯರ್ ಉಪಾಧ್ಯಾಯರುಗಳನ್ನು ನೇಮಿಸುವಾಗ ಚೀಫ್ ಕಮಿಷನರ್ ಸಾಹೇಬರು 'ಸೀನಿಯಾರಿಟಿ'ಯನ್ನು ಗಮನಿಸದೆ ಮೂರು ಗಾಜುನೇಟ್ ಉಪಾಧ್ಯಾಯರ ಹಕ್ಕನ್ನು ಮುರಿದು ಕೇವಲ ಜೂನಿಯರೊಬ್ಬರಾದ ಶ್ರೀ. ಕೆ. ಎಮ್. ಮುತ್ತಣ್ಣನವರನ್ನು ನೇಮಿಸಿದ್ದು ದೇಶದ ಜನರಲ್ಲಿ ಬಹಳ ನೋವನ್ನು ಉಂಟುಮಾಡಿದೆ. ಚೀಫ್ ಕಮಿಷನರ್ ಸಾಹೇಬರು ಹೊಸಬರು. ಇವರು ಡಿ. ಇ. ಒ ಆಫೀಸರನ್ನು ಕೇಳಿ ಮಾಡಿದ್ದರೆ ಇಂಥ ತಪ್ಪಿಗೆ ಎಡೆ ಇರುತ್ತಿರಲಿಲ್ಲ. ಈಗಲಾದರೂ ಇದನ್ನುನೇರ್ಪಡಿಸಿ ಉಪಾಧ್ಯಾಯ ವರ್ಗಕ್ಕೂ ದೇಶದ ಜನರಿಗೂ ಸಮಾಧಾನಕೊಡಬೇಕೆಂದು ನನ್ನ ಪ್ರಾರ್ಥನೆ.

ಇನ್ನೊಂದು ಮಾತು. ಹೊಸ ಹೈಸ್ಕೂಲುಗಳಲ್ಲಿದ್ದ ಹಿಂದಿನ ಮೂರು ಹೆಡ್ ಮಾಸ್ಟರುಗಳು ಬಹಳ ಜೂನಿಯರರು. ಇವರಿಗೆ ಬಹಳ ದೊಡ್ಡ ಸಂಬಳವನ್ನು ಕೊಟ್ಟು ಹೈಸ್ಕೂಲುಗಳಲ್ಲಿದ್ದ ಅನೇಕ ಸೀನಿಯರ್ ಗ್ರಾಜುವೇಟು ಉಪಾಧ್ಯಾಯರನ್ನು ಹಿಂದೆ ಹಾಕಿರುತ್ತಾರೆ. ಇದರಿಂದ ಇತೀ ಉಪಾಧ್ಯಾಯ ವರ್ಗದವರಿಗೆ ದೊಡ್ಡ ಅಸಮಾಧಾನವಾಗಿದೆ. ಇದನ್ನೂ ಸರಿಪಡಿಸಬೇಕಾಗಿ ಅಪೇಕ್ಷಿಸುತ್ತೇನೆ.

'ಸಮದರ್ಶಿ.'

## ಡಿಸ್ಮಿಸ್ ಬೋರ್ಡು ನೌಕರರೂ, ಹುಟ್ಟಿ ಭತ್ಯವೂ

16-3-47 ರಲ್ಲಿ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಿಗೂ, ಜಿಲ್ಲಾ ಬೋರ್ಡು ಉಪಾಧ್ಯಾಯರಅಸೋಸಿಯೇಶನ್ನಿನ ಪ್ರೆಸಿಡೆಂಟರು ಮತ್ತು ಕಮಿಟಿಮೆಂಬರುಗಳೊಳಗೂ ಮಡಿಕೇರಿ ಹೈಸ್ಕೂಲಿನ ಆಸಿಸ್ಟಿನಲ್ಲಿ ಆದ ಒಪ್ಪಂದ ಪ್ರಕಾರ ಡಿ. ಬಿ ಪ್ರೆಸಿಡೆಂಟರು ಪ್ರಯತ್ನಪಟ್ಟು, ಕೆಲಪು ತಿಂಗಳುಗಳಿಗಿಂತ ಹಿಂದೆ ನೌಕರರಿಗೆ ಸಲ್ಲಬೇಕಾದ ಹಿಂದಿನ ಬಾಕಿಯನ್ನು ಕೊಡಗಿನ ಸರಕಾರದ ಉಳುವರಿ ಹಣದಿಂದ ನುಂಜಾರುಮಾಡಿಸಿ ಕೊಡಬೇಕೆಂತ್ತು. ಅವರು ಹಾಗೆ ಮಾಡಬಹುದೆಂದು ನಿರೀಕ್ಷಿಸಲಾಗಿತ್ತು. ಆ ಒಪ್ಪಂದವಾಗಿ 12 ತಿಂಗಳ ಗಳು ಒಟ್ಟಿದ್ದರೂ ಸಲ್ಲಬೇಕಾದ ಹಿಂದಿನ ಬಾಕಿ ಇನ್ನೂ ನೌಕರರಿಗೆ ದೊರಕಿರುವುದಿಲ್ಲ ಸಾಲದುದಕ್ಕೆ ಕೊಡುತ್ತಿದ್ದ ಬತ್ಯವೂ ಈ ಮಾರ್ಚಿನಿಂದ ನಿಲ್ಲಿಸಲ್ಪಟ್ಟಿದೆ. ಅಂದರೆ ರೂ 14-20 ಸಂಬಳದವರನು ಆಸ್ಪದಂದಲೇ ದೊಟ್ಟಿ ಹೊರೆಮಾಡಿಕೊಂಡು ಉದ್ಯೋಗ ಮಾಡಬೇಕಿದೆ ಈ ಹಿಂದಿನ ಬಾಕಿ ಕಥೆ ವಿಶೇಷ ತರದ್ದಾಗಿದೆ 1946 ನೇ ಇಸವಿ ಅಕ್ಟೋಬರಿನಲ್ಲಿ ಕೌನ್ಸಿಲಿನಲ್ಲಿ ಇದರ ಪ್ರಶ್ನೆ ಬಂದಾಗ್ಗೆ ಚೀಫ್ ಕಮಿಷನರವರು ಆಗರ ವಿಚಾರ ಡಿ ಬಿ ಪ್ರೆಸಿಡೆಂಟರಿಂದ ಪತ್ರ ಬಂದರೆ ಆಲೋಚಿಸಲಾಗುತ್ತೆ ಎಂಬ ಜವಾಬು ಕೂಟ್ಟ. ರೀತಿ ಮಾಡಿದ ಮೇಲಿನವರ ಬಾಯಿ ಮುಚ್ಚಿಸಿದರು 1947 ರ ಅಕ್ಟೋಬರಿನಲ್ಲಿ ಪ್ರೆಸಿಡೆಂಟರು ಪೆಳ್ಳಪ್ಪನವರು 'ರೂ 1 ಲಕ್ಷ 7 ಸಾವಿರ ಡಿ ಬಿ ಗೆ ಗ್ಯಾರಂಟಿಗಾಗಿ ಕೊಡಬೇಕು' ಎಂಬ ವರಾವನ್ನು ಮಂಡಿಸಿದರೂ ಆದು ಪಾಸಾಯಿತು ಮತ್ತೆ ಈ ಜನವರಿಯಲ್ಲಿ ಸ್ಪೆಷಾಲ್ ಕಮಿಟಿಯವರೂ ಆ ಮೊಬಲಗನ್ನು ದೇಶವಲ್ಲಿರುವ ಸುಮಾರು 50 ಲಕ್ಷದಷ್ಟು ಉಳುವರಿಯಿಂದ ಕೊಟ್ಟು ಮೂಕ್ಕೆರುಗಳನ್ನು ತೃಪ್ತಿಪಡಿಸಬೇಕು ಎಂದು ಶಿಫಾರಸು ಮಾಡಿದರು. ಆದರೂ ಈ ವರೆಗೆ ಈ ವಿಚಾರ ಯಾವ ಇತ್ಯರ್ಥಕ್ಕೂ ಬಂದಿಲ್ಲವೆಂದರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ? ಪೊನ್ನೆ ಪೊನ್ನೆ ನಿಶ್ಚಯಿಸಿದ ಚೀಫ್ ಕಮಿಷನರು ಕೌನ್ಸಿಲಿನಲ್ಲಿ ಪಾಸಾದ ವರಾವನ್ನು ನೆನಪಾದಿಸಿ, 'ಆ ಪೊಬಲಗನ್ನು ಜಿಲ್ಲಾ ಬೋರ್ಡಿಗೆ ಕೊಡಲು ಶಿಫಾರಸು ಮಾಡಿ ಬರೆದಿರುವೆನೆ' ಎಂಬದಾಗಿ ಜಿಲ್ಲಾ ಬೋರ್ಡು ಉಪ್ಯೋಗಸ್ಥರ ಸಂಘದ ಪ್ರೆಸಿಡೆಂಟರಿಗೆ ಅನೇಕ ಬಾರಿ ಹೇಳಿರುವದಾಗಿ ತಿಳಿದಿದೆ ಈಚೆಗೆ ಈಗಿನ ಚೀಫ್ ಕಮಿಷನರನ್ನ ಬೇಟಿ ಮಾಡಿದಾಗ್ಲೆ ಆ ವಿಚಾರ ತನಗೆ ಗೊತ್ತಿಲ್ಲವೆಂದು ಅಂದರಂತೆ! ಆಗ್ಗೆ ಆಸಿಸ್ಟಿನ ಪಟ್ಟಿಯೊಂದನ್ನು ಕಳಿಸಿ ಕೇಳಲಾಗಿ, ಮದ್ರಾಸಿನಲ್ಲಿ ಯಾವ ತರಹದ ಪತ್ಯ ಜಿಲ್ಲಾ ಬೋರ್ಡಿನವರಿಗೆ ಕೊಡಲಾಗುತ್ತಿದೆ ಎಂಬ ವಿಷಯ ತಿಳಿಯಲು ಅಲ್ಲಿಗೆ ಬರೆಯಲಾಗಿದೆ ಎಂಬ ಮಾತ್ರ ಹೇಳಿದರಂತೆ ತಾತ್ಪರ್ಯ ಶಿಫಾರಸು ಮಾಡಿ ಕೇಂದ್ರ ಸರಿಂಚಾಕ್ಕೆಳು ಹಿಸಿದುದು ಗಾಳಿಗೋಪುರ-ಈ ರೀತಿ ಬಡ ನೌಕರರನ್ನೆನೋಯಿಸಿ, ಆ ಮೂಲಕ ದೇಶಜನಗಳ, ತಿಪರಲ್ಲೂ ಹಳ್ಳಿಯ ಮಕ್ಕಳ ವಿದ್ಯೆಯನ್ನು ಹಾಳುಮಾಡುವುದು, ನಿಜವಾಗಿಯೂ ಮಹಾಪರಾಧವೆಂಬುದನ್ನು ಇವರು ಇನ್ನೂ ಆರಿತಿಲ್ಲವಾಗಿ ತೋರುತ್ತೆ. ಇದು ಹೇಗೂ ಇರಲಿ-ಈ ವಿಚಾರ ಕೌನ್ಸಿಲಿನಲ್ಲಿ ಪಾಸಾಗಿದೆ, ಫೈನಾನ್ಸ್ ಕಮಿಟಿ ಶಿಫಾರಸು ಮಾಡಿದೆ, ಸರಕಾರದಲ್ಲಿ ಹಣ ವಿದೆ, ನೌಕರರು 1943 ನೇಯ ಇಸವಿಯಿಂದ ಕೇಳುತ್ತಾ ಬಂದಿದ್ದಾರೆ ಜಿಲ್ಲಾ ಬೋರ್ಡಿನವರು ಇದು ಕಮ್ಮ ನೌಕರರಿಗೆ ಸಿಗಬೇಕೆಂದೂ, ಕೊಡಿಸುತ್ತೇವೆಂದೂ ಹೇಳುತ್ತಿದ್ದಾರೆ. ನೌಕರರು ನಿಶ್ಚತ್ಕಿಂದು ಸ್ಪಷ್ಟವಾಗಿ ಸಂಬಿಕೊಂಡಿದ್ದಾರೆ-ಇಲ್ಲಿಂದ ಶಿಫಾರಸ್ಸಾಗಿ ಹೋದರೆ, ಕೇಂದ್ರದವರು 'ಸೆಂಕ್ಷನ್' ಮಾಡುತ್ತಾರೆಂದು ತಿಳಿದಿದೆ ಹಾಗಾದುದರಿಂದ ಈಗಿನ ಚೀಫ್ ಕಮಿಷನರು ಈ ವಿಚಾರದ ಕಾಗದ ಪತ್ರಗಳನ್ನು ಒಡನೆ ವರಿಸಿಕೊಂಡು, ಇದರ ಸತ್ಯತೆಯನ್ನು ಕಂಡುಹಿಡಿದು, ನಾಲ್ಕಾರು ವರ್ಷಗಳಿಂದ ಸುಮಾರು 300 ಜನರಿಗೆ ಆಗಿರುವ ಅನ್ಯಾಯವನ್ನು ಒಡನೆ ಹೋಗಲಾಡಿಸಿ, ಆ ಮೂಲಕ, ದೇಶದ ವಿದ್ಯಾ ಪ್ರಚಾರಕ್ಕೆ ಸಹಾಯಮಾಡಬೇಕೆಂದು ಪ್ರಾರ್ಥಿಸುವ,

'ವಿದ್ಯಾರ್ಥಿ.'

---

## ಗಾಂಧಿ ಕೇಂದ್ರ ಸ್ಮಾರಕ ನಿಧಿ ಆಯ್ಕೆ,

ಈ ತಾ 3ನೇ ಸೋಮವಾರ ಶ್ರೀ ಕೆ ಪಿ ಕರುಂಬಯ್ಯನವರು ಜಿಲ್ಲಾ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ, ಶ್ರೀ ಮಂಗಲಗಣಪತಿಯ ಉಪಸಮಿತಿಯನ್ನು ಸ್ಥಾಪಿಸಲ ಉದ್ದಿಶ್ಯ ಹುದಿಕೇರಿಯಲ್ಲಿ ಸಾರ್ವಜನಿಕ ಸಭೆಯೊಂದನ್ನು ಕೂಡಿಸಲು ಪ್ರಯತ್ನಿಸಿದರೂ ಸಫಲರಾಗದೆ ಹೋದರು. ಇವರು ಒಂದೇ ಪಕ್ಷದವರಿಂದ ಕೂಡಿದ ಜಿಲ್ಲಾ ಸಮಿತಿಯ ಅಧ್ಯಕ್ಷರಾದುದರಿಂದಲ್ಲವೇ ಈ ರೀತಿಯಾಗಲು ಕಾರಣ? ಇನ್ನಾದರೂ ತಾಂಗ್ರೇಸು ಕಲಸಗಾರರ ಉಳಿಯ ಪಕ್ಷದವರಿಂದ ಕೂಡಿದ ಗಾಂಧಿ ಸ್ಮಾರಕ ಜಿಲ್ಲಾ ಸಮಿತಿಯನ್ನು ಏರ್ಪಡಿಸಲು ಯತ್ನಿಸಿ, ಗಂಗಾಧರಯ್ಯನವರ ಜೀವನದ ಮುಖ್ಯ ಗುರಿಯೊಂದಿಗೆ ಸ್ಪಷ್ಟಪಡಿಸುವುದು ಎಲ್ಲರ ಕರ್ತವ್ಯವಲ್ಲವೇ?

'ಹುದಿಕೇರಿಯವ'

---

## ಸಾರ್ವಜನಿಕ ಸಭೆಗಳು.

### ಸೋಮವಾರಪೇಟೆ

ಈ ತಾ ೩ನೇ ಸೋಮವಾರ ಸಾರ್ವಜನಿಕ ಸಭೆ ನಾಡಿನ ಪರ ಪಕ್ಷದ ಪ್ರಮುಖ ವ್ಯಕ್ತಿಗಳಾದ ಮಾನ್ಯ ಸೋಮವಾರಪೇಟೆ ಜಿಮ್ಮಿ ಎಸ್ಟೇಟಿನ ಮಾಲೀಕರಾದ ಶ್ರೀ ಕಾರ್ಯಪ್ಪನವರು ಅಧ್ಯಕ್ಷರಾಗಿದ್ದರು ಚೀಫ್ ಕಮಿಷನರ ಎಗ್ಸಿಕ್ಯೂಟಿವ್ ಎಸ್ಟಾಬ್ಲಿಷ್ಮೆಂಟ್ ಸಮಿತಿಯ ಪರವಾಗಿ ಶ್ರೀ ಭಾರತದ ಭಾವಿ ರಾಜ್ಯಾಂಗ ಕರಡು ರಚನೆಯಲ್ಲಿಯೂ ಕೊಡಗಿನ ಪರವಾಗಿ ಸೂಚನೆಗಳನ್ನು ಸಲಹೆಗಳನ್ನು ಶ್ರೀ ಪೊನ್ನಪ್ಪನವರು ಸೂಚಿಸಿದ ಮೇಲೆ ವಿವರಿಸಿದನಂತರ ಶ್ರೀ ಮಂ ತ್ರಣ್ಣನವರು ಸೂಚಿಸಿದ ಈ ಕೆಳಗಿನ ನಿರಾವು ಸರ್ವಸಮ್ಮತದಿಂದ ಪಾಸಾಯಿತು.

'ಕೊಡಗಿನ ಭವಿಷ್ಯದ ಆಡಳಿತ ಕ್ರಮವನ್ನು ಕುರಿತು ಭಾರತದ ರಾಜ್ಯಾಂಗ ರಚನಾ ಡ್ರಾಫ್ಟಿಂಗ್ ಸಮಿತಿಯವರು ಕೂಟ್ಟಿರುವ ಸಲಹೆಗಳು ಇಲ್ಲಿಯ ಜನರಿಗೆ ತೃಪ್ತಿಕರವಾಗಿಲ್ಲವೆಂಬುದನ್ನು ಈ ಸಭೆಯು ಮನಗಂಡಿದೆ. ಆದುದರಿಂದ ಈ ಸಭೆಯು ಕೊಡಗಿನ ಭವಿಷ್ಯದ ಆಡಳಿತ ರಚನೆಯನ್ನು ಕುರಿತು ನೂಡಿರುವ ಏರ್ಪಾಡುಗಳನ್ನು ಕುರಿತ ಸಾಂಗವಾದ ಚರ್ಚೆ ನಡೆಯಿತು ಆ ಮೇಲೆ ಕೊಡಗಿಗೆ ಜವಾಬ್ದಾರಿ ಸರ್ಕಾರ ಕೊಡಲು ಪ್ರಸ್ತಾವ ಮಾಡಿರುವ ಉಪಸಮಿತಿಯ ಸೂಚನೆಗಳನ್ನು ಮಂಜೂರು ಮಾಡಿಸ್ಪಷ್ಟಪಡಿಸಲು ಆಧ್ಯದ (ಹೆಚ್ಚು ಕಮ್ಮಿ ವೇಳೆ ಮಾಡಿರುವ ರಚನೆಯಂತೆಯೇ ಇದೆ) ಗಳಿಗೆ ಪ್ರತ್ಯೇಕಯನ್ನು ಶ್ರೀ ಬಿದ್ದಂಡ ಎ ಪೂನಯ್ಯನವರು ಸೂಚಿಸಿದನ್ನು ಶ್ರೀ ಕೂತಂಡ ಪೂವಯ್ಯನವರು ಅನುಮೋದಿಸಲಾಗಿ ಸರ್ವ ಸಮ್ಮತದಿಂದ ಪಾಸು ಮಾಡಲಾಯಿತು

---

COORG FOREST DEPARTMENT

*Mercara the 25th April 1948*

## Sale of elephants.

About 10 to 15 trained elephants will be sold by auction at Tittimathi at 2 P M on 29 5 1948 The elephants are of all sizes and include both cows and tuskers For further particulars apply to the Chief Forest Officer, Coorg, Mercara

**C. M Kushalappa,**
*Chief Forest Officer, Coorg.*

---


ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕ್ಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಬಾಸ್ಟನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ತಾನದ ಮದ್ರಾಸ್ ಬ್ರಾಂಚಿನ ಸಕ್ರಿಯರಿಗಳು.

**ದಿ ಬೋಂಬೆ ಬೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಹಾರ್ಸಾಂಟ್ ರೋಡ್, ಪೋ ಬಾ ನಂ. 337, ಮದ್ರಾಸು 2

ಬೋಂಬೆ ಬೈಫ್ ಬಿಲ್ಡಿಂಗ್, ಪ್ರ ಬ ನಂ 1, ಬಾಂಬೆ

(ಟೆಲಿಫೋನ್ ನಂ 1109)

ಇತರ ಆಫೀಸುಗಳು—ಬೆಂಗಳೂರು, ತಿರುವೆಂದ್ರಂ, ಕಲ್ಲಿಕೋಟ್, ಮಂಗಳೂರು, ನಾಗಪುರ, ಪುಣೆ, ಜೋಧಪುರ.



ಎಂಪ್ಲಾಯರ್ಸ್ ಲಿಯಬಿಲಿಟಿ ಇನ್ಷೂರೆನ್ಸ್

ಬೈಫ್ ಅಶ್ಯೂರನ್ಸ್ ಕಂಪನಿ, ಲಿಮಿಟೆಡ್

ಸ್ಥಾಪನೆ—1907

ಕಾಸಿ ಸಾರ್ವಜನಿಕ ಬಿಲ್ಡಿಂಗ್ ಮತ್ತು ವಿವಿಧ ಆಯಿಲ್ಲಿನ ಕೆಲಸಗಳು ಮತ್ತು ಸ್ವಚ್ಛ ಇಂಜನಿಯರುಗಳು ಕೆಲಸದ ಆದಿಯಲ್ಲಿ ಸ್ಥಿರವಾದ ಪ್ರೀಮಿಯಂ

ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕಂಪೌಂಡ್ ವರ್ಕ್ಸ್, ಬೇಲಿಗಳು ಮತ್ತು ಸ್ಥಾವರಗಳಿಗೆ ಸಂಬಂಧಪಟ್ಟ ಕೆಲಸಗಳು

ಏಜೆಂಟರು ಮತ್ತು ಬ್ರೋಕರುಗಳಿಗೆ ಉದಾರವಾದ ಕಮಿಷನ್ ಏರ್ಪಾಡು

ಶಾಖೆಗಳು ಮತ್ತು ಏಜೆಂಟರು ಎಲ್ಲಾ ಮುಖ್ಯ ಪಟ್ಟಣಗಳಲ್ಲಿ

ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕಂಪೌಂಡ್ ವರ್ಕ್ಸ್, ಕಾಂಟ್ರಾಕ್ಟರ್ಸ್, ಇಂಜಿನಿಯರ್ಸ್

ಜನರಲ್ ಮ್ಯಾನೇಜರ್ ಮತ್ತು ಸೆಕ್ರೆಟರಿ ಬಿ. ಎಫ್. ಬಿಲ್ಲಿಂಗ್ಟನ್

ಸ್ಥಾಪನೆ: ಲಿವರ್‌ಪೂಲ್ ಮತ್ತು ಲಂಡನ್

# ಜವಾಹರರ ಜಾಜ್ವಲತೆ.

ಯಾವದೇ ಒಂದು ವ್ಯಕ್ತಿಯ ಪ್ರಭಾವವು ಜನತೆಯು ಮೇಲೆ ಬೀಳಬೇಕಾದರೆ ಅದಕ್ಕೆ ಅನುಪಮ ತ್ಯಾಗವೂ, ಪ್ರಚಂಡ ಸೇವಾಭಾವವೂ, ಸತ್ಯ ಪ್ರೀತಿಗಳ ಜಾಜ್ವಲತೆಯೂ ಇರಬೇಕಾಗುತ್ತದೆಂಬ ಮಾತು ಪೊಸ್ತಿ ಮುಂಬಯಿಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ನಡೆದ ಸಂಗತಿಯೊಂದರಿಂದ ನಿಶ್ಚಿತವಾಗಿ ತಿಳಿದುಬರುತ್ತದೆ. ಪ್ರಜಾಪ್ರಭುತ್ವವೆಂದು ಕೂಗಾಟವೆಬ್ಬಿಸಿ, ಕೇವಲ ಜನಸಂಖ್ಯೆಯ ಬಾಹುಳ್ಯದ ಬಹುಮತದಿಂದ ಅನ್ಯಾಯವನ್ನು ನಡೆಸಬೇಕೆಂದರೆ ಅದು ಸಾಧ್ಯವಿಲ್ಲ.

ಕಾಂಗ್ರೆಸಿನ ಹೊಸಘಟನೆಯು ಸ್ವೀಕೃತವಾದ ಬಳಿಕ, ಆ ಘಟನೆಯನ್ನು ಮಂಡಿಸಿದ ಆಚಾರ್ಯ ಕಿಪೋರರು, ಆ ಹೊಸ ಘಟನೆಯು ಕಾರ್ಯರೂಪವಡೆಲ್ಲಿ ಬರಲು ಬಹಳ ಕಾಲ ಹತ್ತುವದರಿಂದ ಎಲ್ಲ ಕಾಂಗ್ರೆಸ್ ಸಮಿತಿಗಳ ಕಾರ್ಯವಾಹಕರು ತ್ಯಾಗಪತ್ರವನ್ನು ಸಲ್ಲಿಸಬೇಕೆಂದೂ ಹೊಸ ಆಯ್ಕೆ ನಡೆದು ಕಾರ್ಯವಾಹಕರನ್ನು ಗೊತ್ತುಪಡಿಸಬೇಕೆಂದೂ ಒಂದು ಗೊತ್ತುವಳಿಯನ್ನು ಮಂಡಿಸಿದರು. ಈ ಆಯ್ಕೆಯ ವ್ಯವಸ್ಥೆಯು ಕೇವಲ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಸದಸ್ಯರ ಪುನರಾಯ್ಕೆಯಾಗಬೇಕಲ್ಲದೆ ಪ್ರಾಂತಿಕ, ಜಿಲ್ಲಾ ಹಾಗೂ ತಾಲೋಕು ಸಮಿತಿಗಳದಲ್ಲ. ಈ ಗೊತ್ತುವಳಿಯನ್ನು ಮತಕ್ಕೆ ಹಾಕಲಾಗಿ ಪರವಾಗಿ ಏನತ್ತೆಂಟು ಮತಗಳೂ ವಿರುದ್ಧವಾಗಿ ಅರವತ್ತುಮೂರು ಮತಗಳೂ ಬಿದ್ದವು. ಆದ್ದರಿಂದ ಆ ಗೊತ್ತುವಳಿಯು ಬಿದ್ದುಹೋಯಿತು. ಆದರಲ್ಲಿ ಪಂಡಿತ ಜವಾಹರಲಾಲರು ಅನುಕೂಲ ಮತ ಕೊಟ್ಟಿದ್ದರು. ಫಲಿತಾಂಶವು ಸಾರಲ್ಪಟ್ಟ ಕೂಡಲೇ ಪಂಡಿತ ಜವಾಹರಲಾಲರು ವ್ಯಾಸಪೀಠದ ಬಳಿಗೆ ಹೋಗಿ 'ಗೊತ್ತುವಳಿಯನ್ನು ನಿರಾಕರಿಸಲು ಸಭೆಗೆ ಅಧಿಕಾರವಿದೆ. ಆದರೆ ಪುನರಾಯ್ಕೆಯಾಗದೆ ಆಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯನಾಗಿ ಉಳಿಯಬಾರದು ಅನ್ಯಾಯವೆನಿಸುತ್ತದೆ. ಆದ್ದರಿಂದ ನನ್ನ ಸದಸ್ಯತ್ವಕ್ಕೆ ನಾನು ತ್ಯಾಗಪತ್ರವನ್ನು ಸಲ್ಲಿಸುತ್ತೇನೆ. ನನ್ನೊಡನೆ ಉಳಿದವರೂ ತ್ಯಾಗಪತ್ರ ಸಲ್ಲಿಸುವರೆಂದು ಅಪೇಕ್ಷಿಸುತ್ತೇನೆ' ಎಂದು ಹೇಳಿದರು.

ಅವರ ಭಾಷಣವಾದ ಬಳಿಕ ಈ ಗೊತ್ತುವಳಿಯ ಮೇಲೆ ಗುಂಪೀಕರಣವನ್ನು ಬೇತಲಾಗಿ ವ್ಯಾಸಪೀಠದ ಮೇಲಿನ ವರಿಷ್ಠರು ಜವಾಹರೊಡನೆ ಗೊತ್ತುವಳಿಗೆ ಅನುಕೂಲ ಗುಂಪಿನಲ್ಲಿ ಸೇರಿದರು. ಗುಂಪೀಕರಣದಲ್ಲಿ ಗೊತ್ತುವಳಿಯ ಅನುಕೂಲ ಒಂದು ನೂರ ಮೂರು ಮತ್ತು ವಿರುದ್ಧ ಆರುವತ್ತಾರು ಮತಗಳಿಂದ ಸ್ವೀಕೃತವಾಯಿತು.

ಬಿದ್ದುಹೋದ ಗೊತ್ತುವಳಿಯು ಪುನಃ ಸ್ವೀಕೃತವಾಗಬೇಕಾದರೆ ಅದರ ನ್ಯಾಯಾನ್ಯಾಯ ವಿಮರ್ಶೆಯನ್ನು, ಯೋಗ್ಯತಾ ಸಂಪನ್ನ ತ್ಯಾಗಮೂರ್ತಿಯೊಡ ಭಾರತದ ನಿಜ ಸೇವಕರೊಬ್ಬರಾದ ಪಂಡಿತ ಜವಾಹರಲಾಲರು ಮಾಡಿದ ಬಳಿಕ, ಜನರ ಮನಸಿನಲ್ಲಿಯು ವಿರೋಧವು ಹೇಗೆ ಗಕ್ಕನೆ ಮಾಯವಾಗಿ ಬಹುಮತ ದೊರೆಯಿತೆಂಬದನ್ನು ಅವಲೋಕಿಸಿದರೆ ಜವಾಹರರ ಜಾಜ್ವಲತೆಯ ಅನುಭವವಾಗದೆ ಇರದು.

ಕಾಂಗ್ರೆಸಿನಲ್ಲಿ, ಅಧಿಕಾರ ಸ್ವೀಕಾರದ ನಂತರ, ಅಧಿಕಾರ ಅಪೃತೆಗಳ ಮೋಹಕ್ಕೆ ಬಲಿಬಿದ್ದ ಖಾದಿ ಧಾರಿಗಳಾಗಿ ಬಹಳ ಸ್ವು ಜನ ತಾವು ಕಾಂಗ್ರೆಸಿಗರೆಂದು ಹೇಳಿಕೊಳ್ಳುತ್ತ ಕಾಂಗ್ರೆಸಿನಲ್ಲಿ ಕೊಳೆಯನ್ನು ದಿನ ದಿನಕ್ಕೂ ಹೆಚ್ಚಿಸುತ್ತಾಲಿದ್ದರೆಂಬದು, ಪಂಡಿತ ಜವಾಹರಲಾಲ್,ದಿವಂಗತ ಪೂಜ್ಯ ಬಾಪೂಜಿ ಆವರ ಆಗಾಗಿನ ಮಾತುಗಳನ್ನು ಕೇಳಿದ ಜನಕ್ಕೆ ವಿದಿತವಾದ ವಿಷಯವೇ ಆಗಿದೆ. ಪೂರಲಿಗೆ ಕೇವಲ ತ್ಯಾಗ ಪೂ ೇವಾಭಾವವೂ ಕಾಂಗ್ರೆಸಿಗರ ಮೂಲಗುಣಗಳಾಗಿದ್ದವು ಆಗಿನ ಕಾಲವೆಲ್ಲಿ ಸ್ವಾತಂತ್ರ್ಯ ಸಂಸಾದನೆಯೊಂದೇ ಗುರಿಯಿದ್ದು ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತಿದ್ದಿತು. ಆಗ ಕಾಂಗ್ರೆಸಿಗರೆಂದು ಹೇಳಿಕೊಳ್ಳುವ ಜನ ಬಹಳ ಕಡಿಮೆಯಿತ್ತು. ಮುಂದೆ ಅಧಿಕಾರ ಸ್ವೀಕಾರದ ನಂತರ ಕಾಂಗ್ರೆಸಿಗರೆಂದರೆ ಬಹಳ ಮರ್ಯಾದೆಯೆಂಬಂತಿತ್ತು. ದೇಶದ ನಿಜವಾದ ಸೇವಕರೆಂಬ ಮಾನವೂ, ಅಲ್ಲದೆ ಅಧಿಕಾರ ನಡೆಸುವ ಆಡಳಿತ ಸಾಗಿಸುವ ಹೊಣೆಯೂ ಅವರನ್ನು ಬಹಳ ಉತ್ತಮಮಟ್ಟಕ್ಕೇರಿಸಿದೆ ಅವರನ್ನು ಉತ್ತಮರೆಂದು ಜನತೆಯು ಭಾವಿಸುತ್ತದೆ. ಜನತೆಯು ಈ ಭಾವನೆಯ ದುರುಪಯೋಗ ಮಾಡಿಕೊಂಡು ತಮ್ಮನ್ನು ಮೆರೆಯಿಸಿಕೊಳ್ಳಬೇಕೆಂದೇ ಕೆಲವು ಜನ ಹೊಸದಾಗಿ ಕಾಂಗ್ರೆಸಿಗರೆಂದು ಹೇಳಿಕೊಳ್ಳುತ್ತ ದೇಶದ ಕುಂಬ ಪ್ರಚಾರ ನಡೆಸಿ ಸ್ವಾರ್ಥ ಸಾಧನೆಯಲ್ಲಿ ಮಗ್ನರಾದರು. ಸುದೈವದಿಂದ ಈ ಗುಂಪು ಕಡಿಮೆ ಸಂಖ್ಯೆಯಲ್ಲಿತ್ತು. ಇಲ್ಲದಿದ್ದರೆ ಸ್ವಜಾಪ್ರಭುತ್ವದ ದುರುಪಯೋಗ ಬಹುಮತದ ಗೊಂದಲದಿಂದ ಈ ಗುಂಪು ಏನೇನು ಅನಾಹುತ ಮಾಡಿಬಿಡುತ್ತಿತ್ತೋ?

ಇವರೆದೇ ಒಂದು ರುಜುಳುಕು ಮೊನ್ನಿನ ಕಾಂಗ್ರೆಸಿನ ಅಧಿವೇಶನದಲ್ಲಿ ಹೊಸ ಆಯ್ಕೆ ನಡೆದು ಸದಸ್ಯರಾಗಬೇಕೆಂದು ಬಂದ ಗೊತ್ತುವಳಿಯ ವಿರೋಧದಲ್ಲಿ ಕಂಡುಬರುತ್ತದೆ. ದೇಶದ ಮತ್ತು ಜನತೆಯ ಕಲ್ಯಾಣದ ಕಡೆಗೆ ಲಕ್ಷ್ಯಗೊಡದ ಕೇವಲ ತಮ್ಮ ಸ್ಥಾನಮಾನಗಳನ್ನು ಕಾಯ್ದುಕೊಳ್ಳಬೇಕೆನ್ನುವ ಈ ಗುಂಪೇ ಆ ಗೊತ್ತುವಳಿಯನ್ನು ವಿರೋಧಿಸಿರಲಿಕ್ಕೆ ಸಾಕು. ಆದರೆ ಈ ಗುಂಪಿನ ಕಣ್ಣಿನಲ್ಲಿ ಪಂಡಿತ ಜವಾಹರಲಾಲರು ಚಿನ್ನಾಗಿ ಅಂಜನಹಾಕಿದ್ದಾರೆ. ತ್ಯಾಗ ನಿಸ್ವಾರ್ಥ, ಸೇವೆ ಜನ ಕಲ್ಯಾಣ ಬುದ್ಧಿಯ ಜಾಜ್ವಲತೆಯು ಎದುರು ಪ್ರಜಾಪ್ರಭುತ್ವದ ಬೂಟಾಟಿಕೆಯು, ಸ್ವಾರ್ಥಿಗಳ ವಿರೋಧವೂ, ಸೂರ್ಯನ ಮುಂದೆ ಮಂಜು ಕರಗಿಹೋಗುವಂತೆ ಹೇಗೆ ಕರಗುವದೆಂಬ ಮಾತನ್ನು ಪ್ರತ್ಯಕ್ಷ ಉದಾಹರಣೆಯಿಂದ ತೋರಿಸಿಕೊಟ್ಟಿದ್ದಾರೆ. ಕೇವಲ ಏನತ್ತೆಂಟು ಮತಗಳ ಅನುಕೂಲವು ಜವಾಹರರ ಜಾಜ್ವಲತೆಯ ಪ್ರಭಾವದಿಂದ ಕೂಡಲೆ ಒಂದು ನೂರ ಮೂರಾಗಿ ಪರಿಣಮಿಸಿದುದು ಸಾಮಾನ್ಯ ಮಾತಲ್ಲ. ದೇಶಪ್ರೇಮದ, ದೇಶಬಾಂಧವರ ಕಲ್ಯಾಣದ, ನಿಸ್ವಾರ್ಥತ್ಯಾಗೀ ಬುದ್ಧಿಯ ಜಾಜ್ವಲತೆಯ ಪರಿಣಾಮವೇ ಅದು. ಅವಕ್ಕೆ ಪೂಜ್ಯ ಬಾಪೂಜಿಯವರು ಆಗಾಗ್ಗೆ ಪ್ರಸಂಗ ಬಂದಾಗ್ಗೆ ಪಂಡಿತ ಜವಾಹರಲಾಲರೇ ನನ್ನ ಉತ್ತರಾಧಿಕಾರಿ ಎಂದು ನುಡಿಯುತ್ತಿದ್ದುದು ಎಷ್ಟು ನಿಜವಾದ ಮಾತೆಂಬುದು ತಿಳಿದುಬರುವಂತಿದೆ.

ಭಾರತದ ಶಾಂತಿ ಸುಖ ಸಮೃದ್ಧಿಗಾಗಿ ಸರ್ವಸ್ವವನ್ನೂ ಮಿಸಲಿಟ್ಟ ಧುರೀಣರ 'ರತ್ನ ಖಣಿ'ಯಲ್ಲಿ ಪಂಡಿತ ಜವಾಹರಲಾಲರು ನಿಃಸಂಶಯ ರತ್ನ! ಕೋಹಿನೂರು! ಜವಾಹರ!! ಇವರಿಂದಲೇ ಭಾರತದ ಭವಿಷ್ಯವು ಭವ್ಯ ದಿವ್ಯವಾಗಿ ಬೆಳಗುವದರಲ್ಲಿ ಸಂದೇಹವಿಲ್ಲ. 'ಬೈ ಹಿಂದ್.'

## ಪ್ರಸಿದ್ಧ ಪತ್ರಿಕೆ.

ಕೊಡಗು ದೇಶವಲ್ಲಿ ಮುಖ್ಯ ಬೆಳೆಗಳಾದ ಬತ್ತ ಮತ್ತು ಕಿತ್ತಳೆ ಬೆಳೆಗಳಿಗೆ ಅನೇಕ ತರದ ರೋಗಗಳು ಬಂದು ಕೊಡಗಿನ ರೈತರಿಗೆ ವರ್ಷ ವರ್ಷ ನಷ್ಟವಾರು ರೂಪಾಯಿಗಳ ನಷ್ಟವಾಗುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ರೋಗಗಳನ್ನು ನಿವಾರಿಸಿ ರೈತರ ಬೆಳೆಗಳನ್ನು ಕಾಪಾಡಿ ರೈತರ ಉತ್ಪತ್ತಿಯನ್ನು ಹೆಚ್ಚಿಸುವ ಅಖಿಲಲಬೆಯಿಂದ ಕೊಡಗು ಸರಕಾರವು ಇಂಡಿಯಾ ಸರಕಾರದ ಸಹಾಯದಿಂದ ಆಹಾರ ಪದಾರ್ಥಗಳ ಮತ್ತು ಹಣ ಹಂಚಲುಗಳ ಬೆಳೆಗಳ ರೋಗಗಳ ನಿವಾರಣೋಪಾಯದ ಬಗ್ಗೆ ಒಂದು ಯೋಜನೆಯನ್ನು ಈಗಾಗಲೇ ನೂಡಿರುತ್ತದೆ. ಈ ಯೋಜನೆಯ ಪ್ರಕಾರ ಈ ಇಲಾಖೆಯು ಕಿತ್ತಳೆ ಮತ್ತು ಬತ್ತದ ಬೆಳೆಗಳಿಗೆ ತಗಲು ಒಹುದಾದ ನಾನಾ ರೋಗಗಳನ್ನು ತಡೆಗಟ್ಟುವುದಕ್ಕೋಸ್ಕರ ಇದಕ್ಕೆ ಬೇಕಾಗುವ ಎಲ್ಲಾ ಹತ್ಯಾರುಗಳನ್ನೂ ಔಷಧಿಗಳನ್ನೂ ಒಟ್ಟಗಿಸಿಕೊಳ್ಳುವ ಏರ್ಪಾಡುಗಳನ್ನು ಮಾಡಿ ಈಗಾಗಲೇ ಕೆಲವನ್ನು ಒಟ್ಟಗಿಸಿಕೊಳ್ಳಲಾಗಿದೆ. ಮತ್ತು ಈ ಯೋಜನೆಯನ್ನು ಕಾರ್ಯರೂಪಗೊಳಿಸಲು ಬೇಕಾಗುವ ಸಿಬ್ಬಂದಿಗಳನ್ನು ಕೂಡ ಬೆಳೆಗಳು ಬೆಳೆಯುವ ಮುಖ್ಯ ಸ್ಥಳಗಳಲ್ಲೆಲ್ಲಾ ಬೇಗನೆ ನೇಮಕ ಮಾಡಲಾಗುವುದು. ಬತ್ತದ ಬೆಳೆಗೆ ತಗಲುವ ರೋಗಗಳು ಮತ್ತು ಕ್ರಿಮಿ ಕೀಟಗಳ ಹಾವಳಿಯನ್ನು ತಪ್ಪಿಸುವ ಬಗ್ಗೆ ತಗಲುವ ಖರ್ಚನ್ನು ಪೂರ್ತಿಯಾಗಿ ಸರಕಾರದವರೇ ಪಟ್ಟುಕೊಳ್ಳುವಂತೆಯೂ ಕಿತ್ತಳೆ ಪಸಲಿಗೆ ಬರುವ ರೋಗಗಳ ನಿವಾರಣೆಯ ಬಗ್ಗೆ ಬೇಕಾದ ಔಷಧಿಗಳ ಖರ್ಚಿನಲ್ಲಿ ಶೇಕಡ 75ರಷ್ಟನ್ನು ರೈತರು ಪಟ್ಟುಕೊಳ್ಳುವಂತೆಯೂ ಉಳಿದ ಭಾಗವನ್ನೂ ಸಿಬ್ಬಂದಿ ಖರ್ಚನ್ನೂ ಸರಕಾರದವರೇ ಮಾಡುವಂತೆಯೂ ತೀರ್ಮಾನಿಸಲಾಗಿದೆ. ಔಷಧಿ ಮಾಡಲು ಬೇಕಾಗುವ ಕೆಲಸಗಾರರನ್ನು ಎಲ್ಲಾ ಬೆಳೆಗಳ ವಿಚಾರದಲ್ಲಿಯೂ ರೈತರೇ ಒದಗಿಸಿ ಕೊಳ್ಳಬೇಕಾಗಿದೆ. ಕೊಡಗಿನ ರೈತರೆಲ್ಲರೂ ಈ ಮೇಲ್ಕಂಡ ಯೋಜನೆಯ ಪ್ರಯೋಜನವನ್ನು ಪೂರ್ತಿಯಾಗಿ ಹೊಂದಿಕೊಂಡು ತಮ್ಮ ತಮ್ಮ ಕಿತ್ತಳೆ ಮತ್ತು ಬತ್ತದ ಬೆಳೆಗಳನ್ನು ರೋಗಗಳ ಮತ್ತು ಕ್ರಿಮಿಕೀಟಗಳ ಹಾವಳಿಯಿಂದ ತಪ್ಪಿಸಿ ಹೆಚ್ಚಿನ ಇಳುವಯನ್ನು ಪಡೆಯಬೇಕಾಗಿ ಈ ಮೂಲಕ ಕೋರಲಾಗಿದೆ.

ಕಿತ್ತಳೆಯ ಬೇವು ರೋಗಕ್ಕೆ ಸ್ವೀಕೃತವಾದ ಸಮಯ ಈಗಾಗಲೇ ಬಂದಿರುವುದರಿಂದ ಈ ಮೇಲ್ಕಂಡ ಯೋಜನೆಯಲ್ಲಿ ಸಹಕರಿಸಲಿರುವ ಕಿತ್ತಳೆ ಸ್ವಾಮಿಯಾಗಾರರು ತಮ್ಮ ತಮ್ಮ ಗ್ರಾಮವು ಮತ್ತು ನಾಡಿನ ಹೆಸರು ತಮ್ಮ ಕಿತ್ತಳೆ ತೋಟದ ವಿಸ್ತೀರ್ಣ ಮತ್ತು ಯಾವ ಸಮಯದಲ್ಲಿ ತನ್ನ ತೋಟಕ್ಕೆ ಸ್ವೀಕೃತ ಮಾಡಿಸಿಕೊಳ್ಳುತ್ತೀರಿ ಎಂಬ ತಪಸ್ಸೀಲು ಸಮೇತವಾಗಿ ಆರ್ಜಿಯನ್ನು ಕೊಡಗು ವ್ಯವಸಾಯ ಇಲಾಖಾ ಆಫೀಸಿಗೆ ಒಡನೆ ಬರೆದುಕೊಳ್ಳುವುದು.

ಒಕ್ಕುವ ಬೆಳೆಯ ಪರಿಚಾರಿಯಲ್ಲಿ ಆಯಾಯ ಗ್ರಾಮದ ರೈತರು ತಮ್ಮ ತಮ್ಮ ಗ್ರಾಮಗಳಲ್ಲಿ ಯಾವ ಯಾವ ಸಮಯದಲ್ಲಿ ನಾಥುಣಾಗಿ ಬರುವ ರೋಗಗಳು ಮತ್ತು ಕಂಡಿಳಿಯಲ್ಲ, ಬೊಂಟುಚ್ಚಿ ಇವೇ ಮೊದಲಾದ ಹುಳಗಳ ತೊಂದರೆಗಳು ಯಾವ ಯಾವ ತಿಂಗಳಲ್ಲಿ ಕಾಣಿ ಬರುತ್ತವೆಂಬುದನ್ನು ಮುಂಚಿತವಾಗಿಯೇ ವ್ಯವಸಾಯ ಇಲಾಖಾ ಇನ್ಸೀಸರಿಗೆ ಒರಕೊಳ್ಳಬೇಕಾಗಿ ಈಮೂಲಕ ಕೋರಿಕೊಳ್ಳಲಾಗಿದೆ.

ಬಿ. ಎಸ್. ವರದರಾಜನ್.
ವ್ಯವಸಾಯ ಇಲಾಖಾ ಆಫೀಸರು


## ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದ್ದ (1941ನೇ ಸಾಲ್ಕಟ್ಟಿನವರಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮೂ ಬಂದ ಈವ ನಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಮು ರೇಪಣತೆಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ವರಪ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾನ್ಜಿ.


Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

# ಕೊಡಗು

ಸಂಪಾದಕರು—ಪಿ. ಬಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೩೭ | ತಾರೀಖು ೨೧-೫-೧೯೪೪ಲನೇ ಶುಕ್ರವಾರ | ಸಂಚಿಕೆ ೫೦

## ರಾಜಕೀಯ ಜಾದು.

ರಾಜಕಾರಣದಲ್ಲಿ ಸುಣ್ಣವನ್ನು ಬೆಣ್ಣೆಯನ್ನಾಗಿಯೂ, ಬೆಣ್ಣೆಯನ್ನು ಸುಣ್ಣವನ್ನಾಗಿಯೂ ಮಾಡಿ ತೋರಿಸುವ ಚಾತುರ್ಯ ಯಾರಲ್ಲಿ ಉಂಟೋ ಅವರೇ ಜಾದೂಗಾರರೆಂದು ಬರುತ್ತಾರೆ. ಹುರುಳು ಇರಲಿ ಇರದಿರಲಿ, ಬಣ್ಣ ಬಣ್ಣದ ಮಾತುಗಳಿಂದ ಇಂದ್ರಧನುಸ್ಸನ್ನು ರಚಿಸಿ ತೋರಿಸುತ್ತ, ಗಾಳಿಕ್ಕೆ ಮಂಡೆಹುಳು ಹಿಡಿಯುವ ಪ್ರವೃತ್ತಿಗೆ ಅಲ್ಲಿ ಪ್ರಾಧಾನ್ಯತೆ ಬಡಕ್ಕಿಂತಲೂ ಪ್ರಚಾರ ಕುಶಲತೆಯೇ ಸದ್ಯದ ರಾಜಕಾರಣದ ಜೀವಾಳ. ಯಾವ ರಾಷ್ಟ್ರವು ನಾಲ್ಕು ಉಳಿದ ರಾಷ್ಟ್ರಗಳನ್ನು ಬಗಲಿಗೆ ಹಾಕಿಕೊಂಡು ಜಗತ್ತನ್ನ ತಂಬ ತನ್ನನ್ನಾಲಗೆಯ ಸಪ್ಪಳವೇ ಕೇಳಬರುವಂತೆ ಬಾಯಿ ಬಡಿಯಲ್ಕೆ ಬರುವುದೋ ಅನೇಕ ಇಂದ್ರ ಜಾಲ.

ಭಾರತವರಿಗಂತೂ ಬ್ರಿಟಿಶ್ ರಾಜನೀತಿಯ ಪರಿಚಯ ಮಾಡಿಕೊಡುವುದೇ ಬೇಡ; ಶತಶತಮಾನಗಳ ಸವಿ ಸಂಬಂಧ. ಬ್ರಿಟಿಶ್ ರಾಜ್ಯತಂತ್ರ ಕುಶಲತೆಯ ತವರಲ್ಲೂ ಬಾಪೂಜಿಯವರನ್ನು ಬತ್ತಲು ಬೈರಾಗಿಯೆಂದು ಕರೆದ ಚರ್ಚಿಲರು ಈಗ ಯುರೋಪ ಖಂಡದ ಕಲ್ಯಾಣಕ್ಕಾಗಿ ಟೊಂಕ ಕಟ್ಟಿದ್ದಾರೆ. ಇಡೀ ಯುರೋಪು ಒಂದಾದ ಸುದಿನವನ್ನು ನೋಡುವೆನೆಂದು ಅವರ ಎಕ್ತಾನ ವೇತೆ. ಪ್ರಜಾಸತ್ತಾತ್ಮಕ ತತ್ವ ಪ್ರಣಾಲಿಗೆ ಒಪ್ಪುವ ಎಲ್ಲ ಜನರಿಗೂ ಪ್ರತ್ಯೇಕಾಧಿಕಾರವಿರುವ ಒಂದು ಒಕ್ಕೂಟವನ್ನು ಸ್ಥಾಪಿಸುವ ಯೋಜನೆಯೊಂದರ ಬಗ್ಗೆ ಹೇಗೆದಲ್ಲಿ ಅವರು ಮೊನ್ನೆ ಒಂದು ಮನಮೋಹಕ ಭಾಷಣವನ್ನು ಮಾಡಿದ್ದಾರೆ. ಹೇಗೆದಲ್ಲಿ ಹಿಟ್ಲರು ಯುರೋಪಿಯನ್ನ ರಾಷ್ಟ್ರಗಳ ಪರಿಷತ್ತೊಂದು ಸ್ಥಾಪಿಸಿತ್ತು. ಚರ್ಚಿಲರು ಅದರ ಗೌರವಾಧ್ಯಕ್ಷಸ್ಥಾನದಿಂದ ಮಾತನಾಡುತ್ತ 'ಎಲ್ಲ ಸ್ವತಂತ್ರ ರಾಷ್ಟ್ರಗಳಲ್ಲಿ ಯುರೋಪದವಾಣಿ ಕೇಳಬರಬೇಕಾದರೆ ಮತ್ತು ಅದಕ್ಕೆ ಬೆಲೆದೊರೆಯಬೇಕಾದರೆ ನಾವು ಯುರೋಪಿಯನ್ ಮಂಡಲವೊಂದನ್ನು ರಚಿಸಬೇಕಾದುದು ಅವಶ್ಯ. ಈ ಯುರೋಪಿಯನ್ ಒಕ್ಕೂಟದ ಅಂದೋಲನವು ನಮ್ಮ ಪ್ರಜಾಸತ್ತಾತ್ಮಕವಾದದ ಮೂರ್ತಸ್ವರೂಪವಾಗಿರಬೇಕು. ಪಶ್ಚಿಮ ಯುರೋಪಕ್ಕಷ್ಟೇ ಈ ಪರಿಷತ್ತು ಸಂಬಂಧಿಸಿದ್ದರೂ ಅದರ ಕಕ್ಷೆಯು ಪಶ್ಚಿಮ ಯೂರೋಪಿಗಷ್ಟೇ ಮರ್ಯಾದಿತವಾಗದೆ ಇಡೀ ಯುರೋಪನ್ನು ಆವರಿಸಬೇಕು. ಯೂರೋಪಿನ ಬೇರೆಬೇರೆ ಪ್ರಜೆಗಳ ಕೈಯ್ಯಲ್ಲಿ ಸರಕಾರಿಯೆಂಬ ಆ ಬೆಲ್ಲಿ ಸ್ವಪ್ರಜೆಗಳು ಸಲಹುವ ಭಗ್ನಾವಶೇಷಗಳಾಗಿಲ್ಲವೋ ಆ ಎಲ್ಲ ಯೂರೋಪಿಯನ್ ದೇಶಗಳನ್ನು ಮೇಲೆತ್ತುವ ಕಾರ್ಯವನ್ನು ಈ ಪರಿಷತ್ತಿಗೆ ಅವಶ್ಯಿಸುತ್ತೇವೆ.

ಈ ಯೂರೋಪಿಯನ್ ಒಕ್ಕೂಟದ ಬಗ್ಗೆ ಚರ್ಚಿಲರು ಎತ್ತಿ ವೈಜಾತ್ಯವನ್ನು ತಳೆಯುವುದೂ ಎಂದು ನಿಗ ಘೋಷಿಸಿದ್ದ ಜರ್ಮನಿ ಇತ್ತೀಚಿನ ರಗಳಿಗೆ ಎಬ್ಬಿಸಿಕೊಟ್ಟಿಲ್ಲವೆಂಬುದನ್ನು ಕಂಡು ನನಗೆ ಸಂತೋಷವಾಗುತ್ತದೆ. ಯೂರೋಪಿಯನ್ ಸಂಘದಲ್ಲಿ ಬ್ರಿಟನ್ನಿನ ಸಾಮ್ರಾಜ್ಯ ರಾಷ್ಟ್ರಗಳ ಸಂಘವು ಪ್ರತ್ಯೇಕ ಘಟಕವಾಗಿ ಕಾರ್ಯ ನಡೆಸುವುದೆಂದೂ ಜಾಗತಿಕ ಸಭೆಯ ಒಳ ಮೂರು ಅಧವಾ ಹೆಚ್ಚು ಗುಂಪುಗಳು ವಶಾಂತಿ ನೈಸರ್ಗಿಕವೆಂಬ ಹಿನ್ನೆಲೆ ವಿಷಯವೆಂದೂ ತನಗೆನಿಸಿದ್ದನ್ನು ಒಂದು ನೆಯದಾಗಿ ಯೂರೋಪಿಯನ್ನ ಮಂತಳೆ (ಇದಲ್ಲಿ ಇಂಗ್ಲೆಂಡ್ ದೀರ್ಘ ಬಾಂಧವ್ಯ ವೆಲ್ಲ ಸಂಕಲ್ಪಿಸಿದ್ದ) ಎಂಬನೇಯದು ಪಶ್ಚಿಮ ಗೋಲಾರ್ಧ. ಮೂರನೇಯದು ರಷ್ಯಾ ಈ ವಿಭಾಗನೆಗಳು ದೊಡ್ಡ ರಾಷ್ಟ್ರದ ಅಭಿಪ್ರಾಯ ಭೇದಗಳಿಗೆ ಅವಕಾಶವಿಲ್ಲದೆ ವಿಶ್ವಸಂಸ್ಥೆಯ ಘೋರಜೆಯಂದು ನಾವೆಲ್ಲ ವಿನಂತಿಸಿಕೊಳ್ಳಗಾಗಿದ್ದೇವೆ ಈ ರಾಷ್ಟ್ರದ ಸಹಕಾರವಿಲ್ಲದೆ ಜಾಗತಿಕ ಸಂಘಟನೆಯ ಕಾರ್ಯವು ಪಾಗಲಾರದು. ಜನರ ಮತ್ತು ರಾಷ್ಟ್ರಗಳ ಹೃದಯದ ಮೇಲೆ ಮುಸುಕಿದ ಯುದ್ಧದ ಕಾರ್ಮೋಡಗಳು ಮರೆಯಾಗಲು.

ಈ ಬಗೆಯಿಂದ ಉದಾರಾಂತರಣದಿಂದ ತೆರೆದ ಹೃದಯದಿಂದ ಉದ್ಗಾರಗಳ ಮಳೆಗರೆದು ಒಂದು ಗೂಡಿದ ಈ ಹದಿನಾರು ರಾಷ್ಟ್ರಗಳಲ್ಲಿ ಎದು ರಾಷ್ಟ್ರಗಳು ಈಗಾಗಲೇ ಅಧಿಕೃತ ಹಾಗೂ ಸೈನಿಕ ಸಂಬಂಧಗಳನ್ನು ಇಟ್ಟುಕೊಂಡಿವೆಯೆಂದೂ, ಇವಕ್ಕೆ ಉಳಿದ ಯೂರೋಪಿಯನ್ ದೇಶದ ಪ್ರಜೆಗಳೂ (ಇಟಲಿ ಸ್ಯಾಂಡಿನೇವಿಯಾ) ಕೂಡಬೇಕೆಂದೂ ಪಶ್ಚಿಮ ಮನದ ಮಾತನ್ನು ಚರ್ಚಿಲರು ಹೇಳಿದ್ದಾರೆ. ಅಲ್ಲದೆ ಪಶ್ಚಿಮಕ್ಕೆ ಯುರೋಪದಲ್ಲಿಯ ಕೋಟ್ಯಾವಧಿ ಕುಟುಂಬಗಳು ಪೊಲೀಸರ ಜೊಪ್ಪಿಗೆಂಜಿ ನತಗುತ್ತಲಿವೆಯೆಂದೂ ಇದರಿಂದ ಯೂರೋಪವು ಎದ್ದೇಳಬೇಕೆಂದೂ, ಹಿಂದಿನ ಅಧವಾ ಇಂದಿನ ನಾಝಿಯ ಅಥವಾ ಕಮ್ಯೂನಿಸ್ಟರ ದಬ್ಬಾಳಿಕೆಯನ್ನು ಅಜೇಯವಾದ ಶಕ್ತಿ ಸಾಮರ್ಥ್ಯಗಳಿಂದ ಎದುರಿಸಬೇಕೆಂದೂ ಸಾರಿದ್ದಾರೆ.

ಜಗತ್ಕಲ್ಯಾಣವನ್ನು ಅಪೇಕ್ಷಿಸುವೆನೆಂದು ಹೇಳಿಕೊಳ್ಳುವ ಚರ್ಚಿಲರ ವಾಗ್ಜಾಲದತ್ತ ಬ್ರಿಟನಿನ ಆಧ್ಯತೆ. ಪೂರ್ವ ಗೋಲಾರ್ಧವಲ್ಲಿ ಉಸಿಳ್ಕೆ ರಹಿಯಾಗಿ ಸೇರಿಸಿ ಸಂಬಂಧವಿಲ್ಲ ಈ ಮೂರು ಮುಖ್ಯ ನಾಡುಗಳ ಜೊಗ ಒಣ್ಣ ಬಣ್ಣ ಬಳಿದು ಕೊಂಡು ಮನಮೋಹಕ ರೀತಿಯಲ್ಲಿ ಕಂಗೊಳಿಸುತ್ತಲಿವೆಯೆಂಬುದು ಗಮನಾರ್ಹವಾಗಿದೆ ಜಾಣೋರಿಕೆಯನ್ನೆಂತೊ ಅವರು ಹೊಗಳಬೇಕಾದುದು ಅನಿವಾರ್ಯವೇ. ಏಕೆಂದರೆ ಜರ್ಮನಿಯ ಬ್ರಿಟನ್ನಿಕ್ಕೂ ಅದರ ಆಧ್ಯತೆಯನ್ನು ತಲೆಯೆತ್ತಿ ನಿಸೆಗೊಡುತ್ತಿರುವ ಯುದ್ಧೋಪದ ಉಳಿದ ರಾಷ್ಟ್ರಗಳಿಗೂ, ಚಾಣೋರಿಕೆಯು ತನ್ನ ಧನ ಸಹಾಯದಿಂದ ಜೀವದಾನವನ್ನೇ ಮಾಡಿದೆ ಪ್ರಪಂಚವ ಕಲ್ಯಾಣವನ್ನೇ ಬಯಸುತ್ತಿರುವ ಚರ್ಚಿಲರು ಪ್ರಪಂಚದಲ್ಲಿ ಪೂರ್ವ ಗೋಲಾರ್ಧನೇ ಇಲ್ಲವೆನ್ನುವಂತೆ ಉಸಿಳ್ಕೆಮಾಡಿ ಬಿಟ್ಟಿದ್ದಾರೆ, ಅಧವಾ ಪೂರ್ವ ಗೋಲಾರ್ಧವೇ ಪ್ರೊಪೆಗಾಮನಾವೆಟ್ಟಿದಲ್ಲಿ ಒರುವಿದಂಬಿದನ್ನ ಸೂಚಿಸುವಂತಿರುವ ಆವರ ಮಾತಿನ ಸಾರಿಯೂ ಹೇಗೆ ಸುಣ್ಣ ಬೆಣ್ಣೆಗಳ ಒಣ್ಣದಾಟದಲ್ಲಿ ಕೊಡಗಿನವೆಯೆಂಬುದನ್ನ ನಿರೀಕ್ಷಿಸಿರಿ ಆ ಪರಮೋತಿನ ಹಿರಿಯವ ಗೂಢಾರ್ಥದ ಒಳ್ಳಸೆಯನ್ನು ಕಣ್ಣಾರೆಗಳೆದೂ ಕಟ್ಟಿ ಕೊಂಡಂಗಿರಿ ನವೆಂಬರ್‌ನ್ನು ಸಂಗಡಾಣಬಹುದು.

ಈ ಚರ್ಚಿಲರ ಅಧ್ಯಾಪಿಕೆಯರ ಜಗತ್ ಕಲ್ಯಾಣದ ಬುದ್ಧಿ ಜಾರಿ ಪ್ರಜಾಪ್ರಭುತ್ವವು ಒಳ್ಳೆ, ಜಗತಿನ ಕಜ್ಜಿಲು ಭೂರವಾಗಿ ಅಂತ್ಯ ಕಾಣಲಿ ಬಂದೀತೆಂದು ಪಾಲನ್ನ ಹಿಂಡಿಕೊಳ್ಳುವ ರೀತಿಯಂತೆಯೇ ಇದೆಯೆಂಬುದನ್ನು ಪೂರ್ವ ಗೋಲಧ್ರ ಅದರಲ್ಲಿಯೂ ವಿಶೇಷ ಮಂಡಿದ ಒಡು ಜನರು ಅರಿತಿರುವ ಮಾತೇ ಆಗಿರು. ಇವೇ ಜಗತ್ ಕಲ್ಯಾಣದ ದೃಷ್ಟಿಯಿಂದಲೇ ಭಾರತವನ್ನು ಇಬ್ಭಾಗಿಸಿದಾಗ, ಮತ್ತು ಧರ್ಮತೀವ ಲವು ಪಾಕಿಸ್ತಾನ್ನ ಇಬ್ಭಾಗಿಸಿಂದು ಈ ಇಬ್ಭಾಗದ ಜವ್ಯಾಣಾಮಗಳು ಸದ್ಯಕ್ಕೆ ಅಕಾಂಡ ತಾಂಡವವಾಡುತ್ತಿರುವುದೂ, ಸಾಜ್ಞ ಜನರಿಗೆ ತಿಳಿಯದೆ ಇಲ್ಲ. ಅದರೂ ಜಗತ್ಕಲ್ಯಾಣ, ಜಗತ್ ಶಾಂತಿ ಎಂದು ಬಾಯಿತುಂಬಾ ಮಾತನಾಡುತ್ತಿರುವ ಈ ಹಬ್ಬಿಮ ಗೋಲಾರ್ಧದ ರಾಜಕಾರಣೀ ಪ್ರಮುಖರ ರೀತಿಯನ್ನು ನೋಡಿದರೆ ತುಂಬ ಆಶ್ಚರ್ಯವೆನಿಸದಿರದು.

ಹಾಲು ಪಾಳಾಗದಂತೆ ನೋಡಿಕೊಳ್ಳಲು ಬೆಕ್ಕಿನ ಕಾವಲು ನೇಮಿಸಿದಂತೆ ಜಗತ್ ಶಾಂತಿಯನ್ನು ಹಾಳಾಗದಂತೆ ಉಳಿಸಿಕೊಳ್ಳಲು ಈ ಪಶ್ಚಿಮ ಗೋಲಾರ್ಧದ ಪ್ರಮುಖರು ಜಗತ್ ಕಲ್ಯಾಣದ ಕಾವಲು ಮಾಡಬೇಕೆನ್ನುತ್ತಿದ್ದಾರೆ. ಬಣ್ಣ ಮೃದುವಷ ಹೊರನೋಟಗಳಿಗೆ ಹೌದೆನಿಸುವಂತೆ ಇದು ಬೆಣ್ಣೆ ಎಂದು ಹೇಳಿ ಸುಣ್ಣವನ್ನು ತಿನ್ನಿಸುವ ಇವರ ಪ್ರಯತ್ನವನ್ನು ನೋಡಿ, ಚಾತುರ್ಯವನ್ನು ಕಂಡು, ಇವರ ಯೂವ ಯೋಜನೆಗಳೂ ಫಲಕಾರಿಯಾಗುವದಿಲ್ಲವೆಂದು ಸಾಧಾರಣವಾಗಿ ಹೇಳಬಹುದು. 'ಲೀಗ್ ಆಫ್ ನೇಶನ್ಸ್'ಅ ಸುಣ್ಣ ಬೆಣ್ಣೆಗಳ ಮೂಯೂ ಜಾಲಕ್ಕಾಗಿಯೇ ನಣ್ಣುಗೂಡಿ ಹೋಯಿತು. ಸದ್ಯಕ್ಕೆ ಭದ್ರತಾಮಂಡಲವೂ ಸಂಯುಕ್ತ ರಾಷ್ಟ್ರಸಂಘವೂ ದಿನ ದಿನಕ್ಕೆ ಅಸ್ಪೃಯವಾಗಿತ್ತಲೂ, ನಿಷ್ಕ್ರಿಯೆ ಸ್ವರೂಪವನ್ನು ತಳೆಯುತ್ತಲೂ ಇರುವುದೂ ಇದೇ ಕಾರಣಕ್ಕಾಗಿಯೇ.

ಈ ಸುಣ್ಣವನ್ನು ಬೆಣ್ಣೆ ಮಾಡುವ ಪಶ್ಚಿಮ ಗೋಲಾರ್ಧದವರ ಈ ಯತ್ನವು ಅಧವಾ ಈ ಹೊರಗೊಂದು ಒಳಗೊಂದು ರೀತಿಯು ಅನ್ಯಶ್ವದಲ್ಲಿರುವವರಿಗೆ ಜಗತ್ ಶಾಂತಿ ಕನಸಿನ ಕೈಗಾಣೇ. ಈ ಪಾಶ್ಚಿಮಾತ್ಯ ಪ್ರಮುಖರು ನಿಜವಾಗಿಯೂ ಜಗತ್ ಶಾಂತಿಯನ್ನು ಬಯಸುತ್ತಿದ್ದರೆ, ಬತ್ತಲೆ ಬೈರಾಗಿಯೆಂದು ಎಸ್ಸಿಸಿಕೊಂಡ ಪೂಜ್ಯ ಬಾಪೂಜಿಯವರ ಸತ್ಯ ಅಹಿಂಸೆಗಳ ಅನುಷ್ಠಾನವನ್ನು ತಮ್ಮ ರಾಜಕಾರಣದ ಶ್ಲಿ ಸಂಪೂರ್ಣವಾಗಿ ಅಳವಡಿಸಿಕೊಳ್ಳದೆ ಗತ್ಯಂತರವಿಲ್ಲ. ಈ ಅಹಿಂಸೆ, ಸತ್ಯ, ಪ್ರೀತಿ ನಿಷ್ಕಾಪಟ್ಯಗಳೇ ನಿಜವಾಗಿಯೂ ಜಗತ್ತಿಗೆ ಶಾಂತಿಯನ್ನುಂಟುಮಾಡಿ ಜಗತ್ಕಲ್ಯಾಣ ಮಾಡಗಲ್ಲವಲ್ಲದೆ ಈ ಸುಣ್ಣ ಬೆಣ್ಣೆಗಳಾಟಗಳಲ್ಲವೆಂದು ಧೈರ್ಯದಿಂದ ಹೇಳಬಹುದು.

'ಜೈ ಹಿಂದ್.'

---

## ಬೊಂಬಾಯಿ.

ನೌರೋಜಿಯವರು ತನ್ನ ಯಜಮಾನನ ಬಾಬ್ತು ೧೦೦೦ ರೂಪಾಯಿಗಳ ಎರಡು ಗಿಂಬಿಗಳನ್ನು ಹಿಡಿದುಕೊಂಡು ಬ್ಯಾಂಕಿಗೆ ಹೋಗುತ್ತಿರಲು ಒಂದು ಗಂಟು ಕಳೆದು ಹೋಗಿ ಬ್ಯಾಂಕಿಗೆ ತಲುಪಿವೆ ನೆಂದರೆ ತಿಳಿಯಿತು. ಆತನು ಇದನ್ನು ತನ್ನ ಯಜಮಾನನಿಗೆ ತಿಳಿಸಿದನು. ಯಜಮಾನನು ಈತನೇ ಆ ಹಣವನ್ನು ಪಾಯಿ ಸಿರಬೇಕೆಂದು ಈತನ ದಸ್ಕಗಿರಿ ಮಾಡಿಸಿದನು. ಹಣ ಕಳೆದು ಹೋದ ವಿಚಾರವನ್ನು ಪತ್ರಿಕೆಯಲ್ಲಿ ಜಾಹೀರು ಮಾಡಲಾಯಿತು. ಈ ಹಣದ ಕಟ್ಟು ದೊರೆತ ಲಾಲಶಂಕರ ಕಾಂಜಿ ಎಂಬವರು ಪತ್ರಿಕೆಯಲ್ಲಿಯ ಜಾಹೀರಾತು ನೋಡಿ ಈ ಯಜಮಾನನ ಪತ್ತೆ ತಿಳಿದು ಹಣವನ್ನು ತಂದು ವಾಪಾಸು ಕೊಟ್ಟರು.

ನೂರು ರೂಪಾಯಿಗಳ ಮೇಲಿನ ದರದ ಕರೆನ್ಸಿ ನೋಟುಗಳನ್ನು ರದ್ದುಪಡಿಸಿದ ಸಂಬಂಧ ಕಳ್ಳ ಅಧಾರವಿಲ್ಲದೆ ಸೋಲಾಪುರ ಮಿಲ್ಲಿನ ರೂ ೪ ಲಕ್ಷ ೫೦೦೦ ಆಪಲೋ ಮಿಲ್ಲಿನ ೩ ಲಕ್ಷ ೫೦೦೦ ರೂಪಾಯಿಗಳ ಮೊತ್ತದಮ್ಮೆಯು ಇವೆರಡರ ಸಂಚಾಲಕರಾದ ಗೋಕುಲಚಂದ್ ದ್ವಾರಕದಾಸ್ ಮೊರಾರ್‌ಕರೆಂಬವರ ಮೇಲೆ ನಡೆದಿತ್ತು. ಈ ಮೊಕದ್ದಮ್ಮೆಯಲ್ಲಿ ಪೊಲೀಸ್ ಡಿಪ್ಟಿ ಇನ್ಸ್‌ಪೆಕ್ಟರಾದ ಮಿರಾಂಡರವರಿಗೆ ಒಂದು ಲಕ್ಷ ರೂಪಾಯಿಗಳ ಲಂಚ ಕೊಟ್ಟು ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮೊರಾರ್‌ಕರವರು ಮಾಡಿದರು. ಆದರೆ ಮಿರಾಂಡರವರು ಅದನ್ನು ತಿಗೆದು ಕೊಳ್ಳದೆ ಈ ವಿಚಾರ ಮೇಲಿನ ಅಧಿಕಾರಿಗಳಿಗೆ ತಿಳಿಸಿದರು. ಮಿರಾಂಡರವರನ್ನು ಒಡನೇ ಇನ್ಸ್‌ಪೆಕ್ಟರಾಗಿ ನೇಮಿಸಲಾಗಿದೆ.

---

ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯಪ್ರಭುಗಳು

# ಕೊಡಗು

ತಾ. ೨೧-೫-೧೯೪೮ನೇ ಶುಕ್ರವಾರ

## ಯುದ್ಧ ಕಿಡಿ.

ಪೆಲೆಸ್ತೀನವು ಎಹೂದಿಗಳ ಜನ್ಮ ಭೂಮಿ. ಆದರೆ ಪೆಲೆಸ್ತೀನವು ಅರಬರ ವಶವಾಗಿ ಎಹೂದಿಗಳಿಗೆ ಜಗತ್ತಿನಲ್ಲಿ ನೆಲೆಯೇ ಇಲ್ಲದಾಗಿದೆ. ತಮ್ಮದು ಎಂದು ಹೇಳಿಕೊಳ್ಳುವ ದೇಶ ಅವರಿಗಿಲ್ಲ. ಪೆಲೆಸ್ತೀನಿನ ಬಗ್ಗೆ ಈ ಮೊದಲೇ ಅರಬ ಮತ್ತು ಎಹೂದ್ಯರಲ್ಲಿ ಘರ್ಷಣೆಯಿತ್ತು. ಇದರಲ್ಲಿ ಬ್ರಿಟಿಷರು ಕೈಹಾಕಿ ಗಲಾಟೆಯಲ್ಲಿ ಒಂದು ಒಪ್ಪಂದವಾಗಿ ಬ್ರಿಟಿಷರ 'ಮೇಂಡೇಟಿಗೆ' ಒಳಪಟ್ಟ ರಾಜ್ಯವಾಗಿತ್ತು ಈ 'ಮೇಂಡೇಟಿ'ನ ಅವಧಿಯು ಮೇ ತಾರೀಕು ೧೫ಕ್ಕೆ ಮುಗಿದು ಬ್ರಿಟಿಷರ ಕೈವಾಡ ನಿಂತಿದ. ಈ ಪರಿಸ್ಥಿತಿಯಲ್ಲಿ ಪಾಲೆಸ್ತೀನದಲ್ಲಿ ತಾಬ ಎಹೂದ್ಯರೊಳಗೆ ಘರ್ಷಣೆ ಬರುವಹುದು ಮೊದಲೇ ತಿಳಿದಿತ್ತು. ಆ ದ್ದರಿಂದ ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ತೀರ್ಮಾನಕ್ಕೆ ಬಿಡಲಾಯಿತು. ಸಂಯುಕ್ತ ರಾಷ್ಟ್ರ ಸಂಘವು ಈ ವಿಚಾರದಲ್ಲಿ ನಿರ್ದಿಷ್ಟ ತೀರ್ಮಾನಕ್ಕೂಟ್ಟು ಆ ರೀತಿ ಪರ್ಕಿಸದೆ ಇಂದು ಪೆಲೆಸ್ತೀನದಲ್ಲಿ ಯುದ್ಧವಾಗಲು ಅನುಮತಿದೆ. ಸಂಯುಕ್ತ ರಾಷ್ಟ್ರ ಸಂಘವು ಪೆಲೆಸ್ತೀನನ್ನು ಎಹೂದ್ಯ, ಅರಬರಿಗೆ ವಿಂಗಡಿಸಿ ನೆಂಚಿಬೇಕೆಂದು ಮೊದಲು ನಿರ್ಣಯಮಾಡಿತ್ತು. ಪ್ರತಿ ಕ್ಷಣಕ್ಕೆ ಬದಲಾಗುತ್ತಿರುವ ಆಮೇರಿಕಾ ಅಂತರಾಷ್ಟ್ರೀಯ ರಾಜಕಾರಣವ ಫಲವಾಗಿ ಈ ನಿರ್ಣಯವು ಜಾರಿಗೆ ಬರಲಿಲ್ಲ.

ಮೇ ೧೫ರಲ್ಲಿ ಬ್ರಿಟಿಷರ ಹಸ್ತವು ಪಾಲೆಸ್ತೀನದಿಂದ ಹಿಂತೆಗೆಯಲ್ಪಟ್ಟೊಡನೆಯೇ ಎಹೂದಿಯರು ತಮ್ಮ ೧೩ ಜನ ಮಂತ್ರಿಗಳಿಂದ ಕೂಡಿದ ಸ್ವತಂತ್ರ ಎಹೂದಿ ಸರಕಾರದ ಘೋಷಣೆಯನ್ನು ಮಾಡಿ ಟೆಲ್ ಎವ್ಯೂ ಎಂಬ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡು ಸ್ವತಂತ್ರರಾದರು. ಈ ರೀತಿ ಎಹೂದಿಗಳ ಸ್ವತಂತ್ರ ರಾಜ್ಯವು ಮೇ ೧೫ರಲ್ಲಿ ರೂಪುಗೊಂಡಿತು. ಈ ಸ್ವತಂತ್ರ ರಾಜ್ಯಕ್ಕೆ ಅಮೇರಿಕೆಯು ಅಭೂತಪೂರ್ವ ಬೆಂಬಲವಿತ್ತಿದೆ. ರಷ್ಯಾವು ಸಂಪೂರ್ಣ ಬೆಂಬಲಕೊಟ್ಟಿದೆ. ಈ ಹೊಸ ಸರಕಾರವನ್ನು ವಿರೋಧಿಸಿ ಅರಬಿಯಾ ರಣಾಂಗಣದಲ್ಲಿ ಕ್ರಮಿಸತೊಡಗಿದ್ದಾರೆ. ಟ್ರಾನ್ಸ್‌ಜಾರ್ಡನಿನ (ಪೆಲೆಸ್ತೀನಕ್ಕೆ ನೆರೆರಾಜ್ಯ) ಅರಸರಾದ ಅಬ್ದುಲ್ಲಾ ರವರು ಸೈನ್ಯಸಜ್ಜತರಾಗಿ ಎಹೂದಿಗಳ ಮೇಲೆ ಯುದ್ಧ ಸಾರಿದ್ದಾರೆ. ಅರಬಿ ರಾಜ್ಯಗಳು ಒಂದೊಂದಾಗಿ ಹತ್ತಿರ ಸೇರುತ್ತಿವೆ. ಈಜಿಪ್ಟ್, ಸಿರಿಯಾ, ಲೆಬೆನಾನ್ ಮತ್ತು ಈರಾಖ್ ಈ ರಾಷ್ಟ್ರಗಳು ಪವಿತ್ರ ಪಾಲೇಸ್ತೀನನ್ನು ಎಹೂದ್ಯರಿಂದ ರಕ್ಷಿಸಲು ಕಂಕಣಬದ್ಧರಾಗಿದ್ದಾರೆ. ಸಿರಿಯಾ ಸರಕಾರವು ಪಾಲೆಸ್ತೀನ್ ಗಡಿಯಲ್ಲಿ ತನ್ನ ಸೇನೆಗಳನ್ನು ಪಣ್ಣಾಗಿ ನಿಲ್ಲಿಸಿದೆ. ಈ ಜಿಪ್ಟಿನ ಸೇನೆಗಳು ಪಾಲೆಸ್ತೀನಮೊಳಗೆ ಹೊಕ್ಕಿವೆ. ಯುದ್ಧದ ಕಿಡಿ ಹಾರಿದೆ.

ಅರಬರಿಗೂ, ಎಹೂದ್ಯರಿಗೂ ಅದ ಪ್ರಥಮ ಘರ್ಷಣೆಯಲ್ಲಿ ಎಹೂದ್ಯರ ಕೈ ಮೇಲಾದ ಕಾರಣ ಅನರಲ್ಲಿ ಕೆಚ್ಚು ಮೂಡಿ ತಮ್ಮ ಹೊಸ ಮಾತೃಭೂಮಿಯ ಕನಸು ಕಾಣುತ್ತಿದ್ದಾರೆ. ಇದಕ್ಕಾಗಿ ಅವರು ಸರ್ವತ್ಯಾಗ ಮಾಡಲೂ ತಯಾರಿದ್ದಾರೆ ಆದ್ದರಿಂದ ಜಗತ್ತಿನ ವಿವಿಧ ದೇಶಗಳಲ್ಲಿರುವ ಎಹೂದ್ಯರು ದೊಂಗರು, ಗಂಡರು ಅದಿಯಾಗಿ ಬರುತ್ತಿದ್ದಾರೆ. ಯೋಗ್ಯ ಶರೀರ ಬಲವಿರುವ ಹೆಂಗಸರು ಗಂಡರನ್ನು ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಲಾಗುತ್ತಿದೆ. ಈ ರೀತಿ ಇಕ್ಕಡೆಯೂ ಬಲವಾದ ಸಿದ್ಧತೆ ನಡೆಸಿರುವದರಿಂದ ಪಾಲೆಸ್ತೀನದಲ್ಲಿ ಭೀಕರ ಅಂರ್ಯುದ್ಧವ ನಡೆಯುವದು.

ಈಗಾಗಲೆ ವಿಮಾನಗಳ ಭಯಂಕರ ಝೇಂಕಾರ, ತೋಪುಗಳ ಬೀಭತ್ಸ ಗದುಗಾಟ ಪ್ರಾರಂಭವಾಗಿದೆ. ಅರಬ ರಾಷ್ಟ್ರಗಳು ಒಂದೆಡೆ ಸಾಲಾಗಿ ನಿಲ್ಲಿಕೊಡಗಿವ ಎಹೂದ್ಯರ ಕಡೆ ಪ್ರಬಲ ರಾಷ್ಟ್ರಗಳು ಕಲವು ಸಹಾಪ್ರಭುತೆಯ ಎಂದಿನ. ಈ ಘರ್ಷಣೆಯ ಮುಂದೆ ಮಹಾ ಯುದ್ಧ ಏಬಿಯ ಪ್ರಥಮ ಕಿಡಿಯಾಗಬಹುದೆ? ಬಲ್ಲ ವರಾರು?

ಈ ಸಂದರ್ಭದಲ್ಲಿ ಸಂಯುಕ್ತ ರಾಷ್ಟ್ರ ಸಂಘವ ನಪುಂಸಕ ಬುದ್ಧಿಯನ್ನು ರೀಕಿಸದೆ ಸಾಧ್ಯವಿಲ್ಲ. ತನ್ನ ನಿರ್ಣಯವನ್ನು ಜಾರಿಗೆ ತರಲಾರದಷ್ಟು ಈ ಸಂಘವು ಅಶಕ್ತವ ಗಿದ್ದು ಇದರ ಅಸ್ತಿತ್ವದಿಂದ ಯಾವ ಲಾಭವಾದೀತು? ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಬಗ್ಗೆ ಈ ಸಂಘವು ಮಾಡಿದ ನಿರ್ಣಯವನ್ನು ಅಲ್ಲಿಯ ಪ್ರಧಾನಿ ಜನರಲ್ ಸ್ಮಟ್ಸರು ಗಾಳಿಗೆರಚಿ ತಮ್ಮ ಸ್ವಚ್ಛಂದ ಆಡಳಿತೆಯನ್ನು ಮುನ್ನಡೆಸಿದರು. ಈಗ ಪೆಲೆಸ್ತೀನದ ಬಗ್ಗೆ ತೀರ್ಮಾನ ಒಂದನ್ನು ಮಾಡಿ ಈಗ ತಿಂಡಿ ಮನೋವೈತ್ತಿಯನ್ನು ತಳೆದಿದೆ. ಹಿಂದೂ ದೇಶವು ಕಾಶ್ಮೀರದ ಪ್ರಶ್ನೆಯನ್ನು ಈ ಸಭೆಯ ಮುಂದೆ ತಂದಾಗಲೂ ಪಠಣೆಯ ಹಿನ್ನೆಲೆಯಲ್ಲಿ ಪಾಕಿಸ್ತಾನದ ಬೆನ್ನು ತಟ್ಟಿ ತೊಡಗಿ ತನ್ನ ಉಚ್ಚ ಧ್ಯೇಯದಿಂದ ಕೆಳಗಿಳಿದು ವರ್ತಿಸಿತು. ಮಾಸ್ತಪವಾಗಿ ಹೇಳಬೇಕಾದರೆ ಸಂಯುಕ್ತ ರಾಷ್ಟ್ರ ಸಭೆಯು ಸ್ವಾರ್ಥ ರಾಜಕಾರಣಿಗಳ ಕ್ರೀಡಾರಂಗವಾಗಿದೆ. ಈ ಸ್ವಾರ್ಥಸಾಧನೆಗಾಗಿ ಅಂತರಾಷ್ಟ್ರೀಯ ಶಾಂತಿಯ ಬಲಿಹರಣವಾಗುತ್ತಿದೆ. ಪಾಲೆಸ್ತೀನದ ನಿಜಾರದಲ್ಲಿ ಈ ಸಭೆಯು ಮಾಡಿದ ನಿರ್ಣಯ ಸಮಂಜಸವಿತ್ತು. ಆದರೆ ಆದನ್ನು ಜಾರಿಯಲ್ಲಿ ತರುವ ಎದೆಗಾರಿಕೆಯಿಲ್ಲದೆ ಅಂತರ್ಯುದ್ಧಕ್ಕೆ ಎಡೆ ಮಾಡಿದೆ.

## ವರ್ತಮಾನ.

ದ. ಕನ್ನಡದ ಕಡಬ ರೇಂಜಿನಲ್ಲಿ ಸೆಂಟ್ರಲ್ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರಾಗಿರುವ ಶ್ರೀ ಡಿ. ಎಸ್. ದೇವಶೆಟ್ಟಿಯವರು ತಾ. ೫ರಲ್ಲಿ ಐಕೂರು ಗ್ರಾಮದ ಜನರಿಗೆ ತೊಂದರೆ ಕೊಡುತ್ತಿದ್ದ ಹುಲಿಯೊಂದನ್ನು ಗುಂಡಿಕ್ಕಿ ಕೊಂದರು. ಈ ಮೊದಲು ಕಳೆದ ನವೆಂಬರ್ ತಿಂಗಳಲ್ಲಿ ಒಂದು ಹುಲಿಯನ್ನು ಇವರು ಕೊಂದಿದ್ದರು.

ತಾರೀಕು ೯-೫-೪೮ರಲ್ಲಿ ಗರ್ನಾಲೆ ಜಿಲ್ಲಾ ಬೋರ್ಡು ಶಾಲೆಯ ವಾರ್ಷಿಕೋತ್ಸವವು ರಾ. ಬ ಪಿ ಎ. ಬೆಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ನ ಪೋಕ್ಲು ಗ್ರಾಮದ ಶ್ರೀ ಕೇಲಪ್ಪರ ಮುದ್ದಯ್ಯನವರನ್ನು ತಾ. ೧೫-೫-೪೮ರಲ್ಲಿ ಯಾರೋ ಗುಂಡು ಹಾರಿಸಿದೆಂದೂ ಗಾಯಗೊಂಡ ಮುದ್ದಯ್ಯನವರು ಅದೇ ರಾತ್ರಿ ಮೃತರಾಗಿರೆಂದೂ, ಪೊಲೀಸರು ತನಿಕೆ ನಡೆಯುತ್ತಿರುವುದಾಗಿಯೂ ತಿಳಿದು ಬಂದಿದೆ.

ನೇಶನಲ್ ಕೆಡೆಟ್ ಕೋರ್ ತರಬೇತಿಗೆ ಶ್ರೀ ಗಳಾದ ಜಿ ಬಿ ಲಿಂಗಣ್ಣ, ಎ ವ್ಯಾಣಿಚಂಡ ನಂದಣ್ಣ, ಎ ಆರ್. ಭಗವಾನ್ ಸಿಂಗ್, ಬಿ. ಪಿ ಚೀಯಪ್ಪ, ಕೋಟೆರ ಸೋಮಣ್ಣ, ಪಿ ಎಸ್. ನಾರಾಯಣಾಚಾರ್, ಬೆಟ್ಟೆಯಂಡ ಮಾಚಯ್ಯ, ಪುಲಿಯಂಡ ಗಣಪತಿ, ಮಣ್ಣಂಡ ಜ. ಕಾರ್ಯಪ್ಪ ಮುಂತಾದವರನ್ನು ಕಳಿಸಿಕೊಡಲಾಗಿದೆ. ಇವರಲ್ಲಿ ಏಳು ಮಂದಿ ಗಳಿಗೆ ತರಬೇತಿಗಾಗಿ ಕೊಡಗು ಸರಕಾರವು ಬೆಂಗಳೂರಿಗೆ ಕಳುಹಿಸಿದ

ಶ್ರೀರಂಗಪಟ್ಟಣದ ಗಿರ್ಜಾಕ್ರೀಸ್ತರ ತಂಡ ಪೂನ್ಯಪ್ಪನವರನ್ನು ಚಿಕಿತ್ಸೆ ಕುರಿತು ಆಫೀಸಿನ ಸಹಾಯಕರಾಗಿಯೂ, ಶ್ರೀ. ಕೇಳಿದಂಡ ಬಿಯ್ಯಣ್ಣನವರನ್ನು ಉತ್ತರ ಕೊಡಗಿನ ಸಂಘೇಜಿಂಟರಾಗಿಯೂ, ಶ್ರೀ. ಬಿದ್ದಪಂಡ ಬಿಪ್ಪಯ್ಯನವರನ್ನು ನೇಶನಲ್ ಸೇವಿಂಗ್ಸ್ ಆಫೀಸರಾಗಿಯೂ, ಶ್ರೀ. ಎ. ಶ್ರೀನಿವಾಸಮೂರ್ತಿಯವರನ್ನು 'ಹೆಚ್ಚು ಜೆನರಿ' ಆಫೀಸರಾಗಿಯೂ ನೇಮಿಸಲಾಗಿದೆ.

## ಸಾರ್ವಜನಿಕ ಸಭೆಗಳು.

ಹೊಳೆ ಸಿಬ್ಬಾಪುರ ನಾಡಿನ ಸಾರ್ವಜನಿಕರ ಸಭೆಯೊಂದು ಈ ತಾ. ೨ ನೇ ಆದಿತ್ಯವಾರ ಸಿದ್ದಾಪುರ ಪೋಸ್ಟಫೀಸು ಎದುರುಗಡೆಯಲ್ಲಿ ನಡೆಯಿತು. ಶ್ರೀ. ಚೇನಂಡ ಮೀದಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರ ಕೋರಿಕೆಯ ಮೇರೆ ಶ್ರೀ. ಪಿ. ಐ. ಬೆಳ್ಯಪ್ಪನವರು ಭಾರತದ ಕಂಡು ರಾಜ್ಯಘಟನೆಯಲ್ಲಿ ಕೊಡಗಿಗೆ ಸಂಬಂಧಿಸಿದ ವಿಷಯಗಳನ್ನು ವಿವರಿಸಿದರು. ನಂತರ ಈ ಕಳಿಗಿನ ರಂಪ್ರಾವು ಸರ್ವಸಮ್ಮತದಿಂದ ಪಾಸಾಯಿತು

'ಭಾರತದ ಭಾವಿರಾಜ್ಯಘಟನೆಯಲ್ಲಿ ಕೊಡಗಿನ ಸಂಬಂಧ ಡ್ರಾಫ್ಟಿಂಗ್ ಕಮಿಟಿಯವರು ಮಾಡಿರುವ ಸಲಹೆಗಳು ಅತ್ಯಪ್ತಿಕರವಾದುದರಿಂದ ಅವುಗಳನ್ನು ಏಕಸ್ಕರಿಸಬೇಕೆಂದೂ, ಎಡ್‌ಹಾಕ್ ಸಮಿತಿಯವರು ಮಾಡಿಂವ ನಿಧಾರನೆಗಳಲ್ಲಿಯ ಜನರ ಕೋರಿಕೆಗಳನ್ನು ಕಕ್ಕಸ ಪಟ್ಟಿಗೆ ಸಲ್ಲಿಸುವುದರಿಂದ ಅವುಗಳನ್ನೇ ಮಂಜೂರುಮಾಡಬೇಕೆಂದೂ ಈ ಸಭೆಯು ಕಾನಸ್ಟಿಟುವೆಂಟ್ ಎಸೆಂಬ್ಲಿಯವರನ್ನು ಕೇಳಿಕೊಳ್ಳುತ್ತದೆ'

ಆ ಮೇಲೆ ಅಧ್ಯಕ್ಷರು ಸ್ಥಳೀಕ ಗಾಂಧಿ ಸ್ಮಾರಕದ ವಿಚಾರ ಈ ಮೊದಲೇ ಇಲ್ಲಿ ನಡೆಸಿದ್ದ ವಿಚಾರಗಳ ವಿಚಾರ ವಿವರಿಸಿ, ಅದಕ್ಕಾಗಿ ಸರಕ ರದವರು ಸ್ಥಳ ಕೊಡಲು ಒಪ್ಪಿದ್ದನ್ನು ಸಭೆಯ ವರಿಗೆ ತಿಳಿಸಿದನಂತರ ಇಂಕ್ಕೆ ಧನ ಜಮಾಯಿಸಲು ೧೫ ಮೆಂಬರ್‌ಗಳ ಕಮಿಟಿಯೊಂದನ್ನು ಆರಿಸಲಾಯಿತ

ಮುದಿಕೇರಿ.

ತ್ರೈ ತಾರೀಕು ೧೦-೫-೪೮ರಲ್ಲು ಶ್ರೀ ಸೂನ್ ಸಿ. ಜಿ. ಮುದ್ದಯ್ಯನವರ ಅಧ್ಯಕ್ಷತೆಯಲ್ಲು ಮುದಿಕೇರಿಯಲ್ಲಿ ಸಾರ್ವಜನಿಕ ಸಭೆ ನಡೆದು ಈ ತೀರ್ಮಾನಗಳಾದವು.

೧ ಈ ನಾಡಿನ ಕಾಂಗ್ರೆಸು ಕೆಲಸಗಾರರಲ್ಲಿ ಒಬ್ಬರಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ ಶ್ರೀ. ಹೊಟ್ಟೇಂಗಡ ಎ. ಕುಶಾಲಪ್ಪನವರು ಮೃತಪಟ್ಟದಕ್ಕೆ ಅವರ ಆತ್ಮಕ್ಕೂ ಮತ್ತು ಅವರ ಕುಟುಂಬಕ್ಕೂ ಶಾಂತಿ ಸಿಗಲೆಂದು ಸಂತಾಪಸೂಚಿಸಲಾಯಿತು.

೨. ಕೊಡಗಿಗೆ ಈಗಿನ ಕರದು ಪಟ್ಟನೆಗಳಲ್ಲಿ ಡ್ರಾಫ್ಟಿಂಗ್ ಸಮಿತಿಯವರು ಸೂಚಿಸಿರುವಂತೆ ಸುಧಾರಣೆಗಳನ್ನು ರೂಪಿಸಿ ಎಡ್‌ಹಾಕ್ ಸಮಿತಿಯವರು ಕೊಡಗಿಗೆ ಮಾಡಿರುವ ರಿಪೋರ್ಟಿನಲ್ಲಿಯನ್ನು ಜಾರಿಗೆ ತರಬೇ ಕೆಂದು ಬಹುಮತದಿಂದ ನಿರಾವೃ ಪಾಸುಮಾಡಿ ಈ ವಿಷಯಗಳನ್ನು ರಾಜ್ಯಘಟನಾ ಸಮಿತಿಯ ಅಧ್ಯಕ್ಷರಿಗೂ, ಮುಖ್ಯ ಮಂತ್ರಿಯವರಿಗೂ, ಮತ್ತು ಗೃಹಮಂತ್ರಿಯವರಿಗೂ ಸಹ ಳಿಸಿಕೊಡುವಂತೆ ತೀರ್ಮಾನಿಸಲಾಯಿತು.

೩ ಗಾಂಧಿ ಸ್ಮಾರಕ ಒಂದನ್ನು ಹುದಿಕೇರಿಯಲ್ಲಿ ಸ್ಥಾಪಿಸುವ ಹಾಗೂ, ಅದಕ್ಕೆ ಬೇಕಾದ ನಿಧಿಯನ್ನು ಸಂಗ್ರಹಿಸುವ ಸಲವಾಗಿ ೧೫ ಜನರನ್ನೊಳಗೊಂಡ ಕಮಿಟಿಯೊಂದನ್ನು ಚುನಾಯಿಸಲಾಯಿತು

೪ ಶಾಲೆಗಳಿಗೆ ಈಗ ಸಂಸ್ಥಳನ್ನು ಸೇರಿಸದೆ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿರುವುದರಿಂದ ಬಡವರ ಎಲ್ಲ ಮಕ್ಕಳನ್ನು ಶಾಲೆಗಳಿಗೆ ಸೇರಿಸಿಕೊಂಡು ವಿದ್ಯಾಭ್ಯಾಸಕ್ಕೆ ತಕ್ಕ ವ್ಯವಸ್ಥೆ ಮಾಡುವ ಬಗ್ಗೆ ಸ್ಥಳೀಯ ಸರಕಾರ ಹಾಗೂ, ಮತ್ತು ಜಿಲ್ಲಾ ಬೋರ್ಡು ಪ್ರಸಿಡೆಂಟರನ್ನು ಕೇಳಿಕೊಳ್ಳುವ ದಾಗೆ ತೀರ್ಮಾನವಾಯಿತು.

## ಗಾಂಧೀಜಿಯವರಿಗೆ ಸೊನ್ನೆ ಮಾರ್ಕ್.

ಆಗಾಖಾನ್ ಅರಮನೆಯಲ್ಲಿ ಬಂಧಿಯಾಗಿದ್ದಾಗ ಗಾಂಧೀಜಿಯವರು ಒಂದು ಚಿಕ್ಕ ಪರೀಕ್ಷೆಯಲ್ಲಿ ಸೋತ ಘಟನೆಯು ಪ್ರಕಟವಾಗಿದೆ. ಗಾಂಧೀಜಿಯವರ ಜನ್ಮದಿನೋತ್ಸವ (ಅಕ್ಟೋಬರ್ ತಿ ೨) ಆಚರಿಸುವಾಗ ಅವರ ಸಹ ಕೈದಿಗಳು ಒಂದು ಸ್ಪರ್ಧೆ ಏರ್ಪಡಿಸಿದರು. ಸ್ಪರ್ಧೆಯಲ್ಲಿ ಪ್ರಸಿದ್ಧ ವ್ಯಕ್ತಿಗಳ ಭಾವಣಗಳಿಂದ ಕೆಲವು ಪಂಕ್ತಿಗಳನ್ನೆತ್ತಿ, 'ಇವು ಯಾರ ಮಾತುಗಳು?' ಎಂದು ಪ್ರಶ್ನಿಸಿದರು. ಇಂಥ ಮೂರು ಮಾತುಗಳನ್ನು ಗಾಂಧೀಜಿಯರಿಗೆ ಕೇಳಲಾಯಿತು. ಗಾಂಧೀಜಿಯವರು ಕೊಂಚ ಆಲೋಚಿಸಿ, ಒಂದು ಧೋರಿಯೋ—ಎರಡು ಎಮರ್ಸನ್—ಮತ್ತು ಮೂರನೆಯದು ಕವೀಂದ್ರ ರಾಕೂರ್ ಅಥವಾ ರಷ್ಯದ ಟೊಲ್‌ಸ್ಟಾಯಿ ಇವರದು ಎಂದರು. ಎಲ್ಲರೂ ಗೊಳ್ಳೆಂದು ನಕ್ಕರು. ನೋಡಲಾಗಿ ಮೂರೂ ವಿಷಯಗಳೂ ನೋಹನದಾಸ ಕರಮಚಂದ ಗಾಂಧಿಯವರ ಭಾಷಣಗಳಿಂದಲೂ ಗ್ರಂಥಗಳಿಂದಲೂ ಆಯ್ದ ವಿಷಯಗಳಾಗಿದ್ದುವು! ಗಾಂಧೀಜಿಯವರೇ ಅದನ್ನು ತಿಳಿದಿರಲಿಲ್ಲ.

# ಕೊಡಗಿನ ಚೀಫ್ ಕಮಿಷನರವರಿಗೆ-

— ಲೇ:—'ವಿನಾಯಕ' —

ಈ ಬಹಿರಂಗ ಪತ್ರದ ಮೂಲಕ ಕೆಲವೊಂದು ವಿಚಾರಗಳನ್ನು ನಿಮ್ಮ ಮುಂದಿಡುವ ಪ್ರಯತ್ನ ಮಾಡುತ್ತಿದ್ದೇನೆ. ಈ ವಿಚಾರಗಳಿಗೆ ತಾವು ಮನ ಕೊಡುವಿರೆಂಬ ಭರವಸೆಯೇ ಈ ಪತ್ರಕ್ಕೆ ಕಾರಣ.

ಪರೀಕ್ಷೆಯ ಫಲಿತಾಂಶ ಬರಲು ಇನ್ನು ಒಂದು ವಾರವಿಲ್ಲ. ಕೊಡಗಿನಲ್ಲಿ 'ಹಳ್ಳಿದ್ದವನಿಗೆ ಕಡಲೆ ಇಲ್ಲ—ಕಡಲೆ ಇದ್ದವನಿಗೆ ಹಲ್ಲಿಲ್ಲ' ಎಂಬಂತೆ ವಿದ್ಯೆಯಲ್ಲಿ ಚುರುಕಿರುವವರಿಗೆ ಹಣವಿಲ್ಲ. ಹಣವಿರುವವರಿಗೆ ವಿದ್ಯೆ ಇಲ್ಲ. ಇಂದು ಕೊಡಗಿನಲ್ಲಿ ದೊಡ್ಡ ಹುದ್ದೆಗಳನ್ನು ಮಾಡುವವರಲ್ಲಿ ಮೊರು ಮಕ್ಕಳ ಪಾಲು ಪರರ ಸಹಾಯದಿಂದ ವಿದ್ಯಾರ್ಜನೆ ಮಾಡಿದವರು. ಅವರ ಆ ದಿನಗಳನ್ನೊಮ್ಮೆ ಮನಸ್ಸಿಗೆ ತಂದು ನಮ್ಮ ದೇಶದಲ್ಲಿ ಒಂದು ಕಾಲೇಜು ಬೇಗ ಸ್ಥಾಪನೆಯಾಗುವಂತೆ ಮಾಡಿದರೆ ಅ ಮಹನೀಯರಿಗೆ ನಾವು ಶಿರಬಾಗುವೆವು.

ಮದ್ರಾಸು ಪ್ರಾಂತ್ಯದಲ್ಲಿ ಈ ವರ್ಷ ಆರು ಕಾಲೇಜುಗಳು ತೆರೆಯಲ್ಪಡಲಿವೆ ಎಂದು ಪತ್ರಿಕೆಯಲ್ಲಿ ನೋಡಿರುವೆನು. ಕಡಪದ ಜಿಲ್ಲಾಕಲೆಕ್ಟರ್ ಜಿಲ್ಲಾ ಬೋರ್ಡು ಆಫೀಸನ್ನೇ ಸದ್ಯಕ್ಕೆ ಕಾಲೇಜಿಗೆ ಬಿಟ್ಟು ಕೊಡುವರಂತೆ! ನಮ್ಮ ಮಾನ್ಯ ಚೀಫ್ ಕಮಿಷನರವರು ಹೀಗೆ ಮಾಡುವರೆ? ಮಾಡಿದರೆ ಆವರಿಗೆ ಸುಬ್ರಮಣ್ಯ ದೇವರ ಕೃಪೆ ಬರುವುದು!

ಅವರು ಈಗಾಗಲೇ ಕುಡುಕುತನವನ್ನು ನಿಲ್ಲಿಸಿ ದೇಶದ ಕೀರ್ತಿಯನ್ನು ಉಳಿಸ ಹೊರಟಿರುವರಂತೆ. ಕಲಾ ಶಾಲೆಯನ್ನು ಹೊರಡಿಸಿ ಈ ಪುಟ್ಟದೇಶದ ಸಕ್ಕೀರ್ತಿಯನ್ನು ಹಬ್ಬಿಸಲಿ. ಮದ್ರಾಸ್ ಪ್ರಾಂತ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಒಂದು ಆದರೆ ಹೆಚ್ಚು ಕಾಲೇಜುಗಳಿರುವಾಗ ನಮಗೆ ಬೇಡವೇ? ಏಳು ಹೈಸ್ಕೂಲುಗಳಿರುವಾಗ ಒಂದು ಕಾಲೇಜು ಬೇಡವೇ? ಪಕ್ಷ ಭೇದವನ್ನು ವಿದ್ಯಾ ವಿಷಯದಲ್ಲಿ ಮರೆತು ದೇಶದ ಜನರು ಒಂದಾಗರೇ?

ಈ ವರ್ಷ ಕಾಲೇಜಾಗುವ ಮಾತು ಸತ್ಕೀರ್ತು. ಬರುವ ವರ್ಷಕ್ಕಿರುವ ಸಿದ್ಧತೆಗಳನ್ನು ಮಾಡಲೋಸುಗ ಮಾನ್ಯ ಚೀಫ್ ಕಮಿಷನರವರು ಮುಂದಡಿ ಇಡುವರೇ?

'ತೀರ್ಗಡೆ ಹೊಂದಲಿರುವ ಬಾಲಕಿ'

---

## ಸಿಸ್ಟೆಸ್ಟ್ ಬೋರ್ಡೂ, ಭಕ್ಷೆಯೂ.

ಸಾಮಾನ್ಯವಾಗಿ ಡಿ. ಬೋರ್ಡಿನ ವಿಚಾರ ಬಾಕಿ ಬಂದರೆ ಅದನ್ನು ಯಾರೂ ಓದುವುದಿಲ್ಲ. ಆದರೆ ಇದನ್ನು ಓದಲೇಬೇಕೆಂದು ಅಗ್ರಹಪೂರ್ವಕವಾಗಿ ತಿಳಿಸುತ್ತೇವೆ.

ಈಗ ಒಂದೆರಡು ವಾರಗಳಿಂದ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚುರವಾಗುತ್ತಲಿರುವ ಡಿ. ಬೋರ್ಡಿನ ನೌಕರರಿಗೆ ಸಂಬಂಧಪಟ್ಟ ಲೇಖನಗಳನ್ನು ಓದಿ, ನಮಗೆಲ್ಲಾ ಅತ್ಯಂತ ಸಂಕಟವಾಗಿದೆ. ನಮ್ಮ ಮಕ್ಕಳು ಡಿ. ಬೋರ್ಡು ಸ್ಕೂಲುಗಳಲ್ಲಿ ಓದುತ್ತಲಿರುವರು. ಆ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಈ ಮೂರ್ಚಿನಿಂದ ತುಟ್ಟಿಭತ್ಯವನ್ನು ನಿಲ್ಲಿಸಿರುವುದಾಗಿಯೂ, ಆದು ಮತ್ತೆ ಸಿಕ್ಕುತ್ತೋ ಇಲ್ಲವೋ ಎಂದು ಗೊತ್ತಿಲ್ಲವಾಗಿಯೂ, ಒಂದು ವೇಳೆ ಸಿಕ್ಕಿದರೆ ಯಾವಾಗ ಯಾವ ದರದಲ್ಲಿ ಸಿಗುವುದೆಂಬುದರ ಅರಿವಿಲ್ಲದಾಗಿಯೂ ಇರುವ ಈ ಸಂದರ್ಭದಲ್ಲಿ ನೌಕರರು ಎಷ್ಟು ತೃಪ್ತಿಯಿಂದ ಕೆಲಸ ಮಾಡಲು ಸಾಧ್ಯವೆಂಬುದನ್ನು ಮನಶ್ಶಾಸ್ತ್ರ ಬಲ್ಲ ಮಾನವರು ಆಲೋಚಿಸಬೇಕು. ಕಳೆದ ವರ್ಷ III ಫಾರಂ ಫಲಿತಾಂಶ ನೋಡಿದರೆ, ತುಲನಾತ್ಮಕ ದೃಷ್ಟಿಯಿಂದ ಡಿ. ಬೋರ್ಡು ಶಾಲೆಗಳು ಸಮರ್ಪಕವಾದ ಫಲಿತಾಂಶವನ್ನು ಪಡೆದಿವೆ ಎಂದು ತಿಳಿದುಬಂದಿದೆ. ಆದರೆ ಭಾವೀ ಭಾಗ್ಯವು ಯಾವ ರೀತಿ ಇರುತ್ತದೆಂದು ಗೊತ್ತಿಲ್ಲದ ಕಾರಣ, ಈಗ ಅಲ್ಲಲ್ಲೇ ಉಪಾಧ್ಯಾಯರು ತುಂಬ ಅತೃಪ್ತರಾಗಿರುವ ವಿಚಾರ ನಮಗೆ ತಿಳಿದಿದೆ ಇದರ ಜತೆಗೆ ವರ್ಗಗಳ ಸುರಿಮಳೆ ಬೇರೆ. ಬೇಕಾದವರಿಗೂ ಬೇಡವಾದವರಿಗೂ ವರ್ಗ! ಸರಕಾರಿ ಉಪಾಧ್ಯಾಯರುಗಳಿಗೆ ಹೆಚ್ಚು ಸಂಬಳ, ಹೆಚ್ಚು ಭತ್ಯ, ವರ್ಗವಿಲ್ಲ, ಕೆಲವು ಕಡೆ ಹೆಚ್ಚು ರಜ ಸಹ ಇರುವುದರಿಂದ ಈ ಡಿ. ಬಿ. ಉಪಾಧ್ಯಾಯರು ತಾವು ಅವರಂತೆ ಮತ್ತು ಅವರಷ್ಟು ಏಕೆ ಕೆಲಸ ಮಾಡಬೇಕು ಎಂದು ಆಲೋಚಿಸತೊಡಗಿದ್ದಾರೆ. ಮೊನ್ನೆ ಮೊನ್ನೆ ನಡೆದ ಇವರ ವಾರ್ಷಿಕ ಸಮ್ಮೇಳನದಲ್ಲಿ, 'ಸಮ ಕೆಲಸಕ್ಕೆ ಸಮ ಸಂಬಳ,' ಎಂಬ ತತ್ವ ಪ್ರಕಾರ ತುಂಬ ಸಂಬಳ ಭತ್ಯ ಪಡೆಯುವ ಸರಕಾರಿ ಉಪಾಧ್ಯಾಯರು ವಾದದಲ್ಲಿ ಎದು ದಿನ ಕೆಲಸ ಮಾಡಿದರೆ, ಕಡಿಮೆ ಸಂಬಳ, ಭತ್ಯದ ಇವರು ನಾಲ್ಕು ದಿನ ಮಾತ್ರ ದುಡಿದರೆ ಸಾಲದೇ ಎಂಬ ವಿಚಾರ ಅಭಿಪ್ರಾಯ ತೆಗೆಯುವುದರಲ್ಲಿದ್ದಾರಂತೆ? ಕಳೆದ ವರ್ಷ ಆಮಂಡ ಮುಸ್ಕೂರ ಹೂಡಿದರು. ಆಗ್ಗೆ ದೇಶಕ್ಕೆ ದೇಶವೇ ಸಹಾನುಭೂತಿ ತೋರಿಸಿತು. ಕೌನ್ಸಿಲ್, ಫೈನಾನ್ಸ್ ಕಮಿಟಿ ಇವುಗಳೆಲ್ಲಾ ಇವರ ವಿಚಾರದಲ್ಲಿ ನ್ಯಾಯವಾಗಬೇಕೆಂದು ನುಡಿದಿವೆಯೆಂದು ಪತ್ರಿಕೆಗಳಿಂದ ತಿಳಿದುಬರುತ್ತದೆ. ಅದರೂ ಯಾವ ಪ್ರಯೋಜನವಿಲ್ಲ. ಅದೆಂದೋ ಚುನಾವಣೆಯಾಗಿ, ಬಂದು ಕೂತಿರುವ ಡಿ. ಬಿ. ಯನ್ನು ನಡೆಸುವ ಅಧ್ಯಕ್ಷರೂ, ಮೆಂಬರುಗಳೂ ಏನು ಮಾಡುತ್ತಿರುವರೋ ನಾವು ಬೇರೆ ತಿಳಿಯೆವು. ಒಂದು ವೇಳೆ ಅತ್ಯಪ್ರಾಣದ ಈ ನೌಕರರು ಕಳೆದ ವರ್ಷದಂತೆ ಮತ್ತೆ ಯಾವುದಾದರೂ ಕಾರ್ಯಕ್ಕೆ ಕೈ ಹಚ್ಚದಿದೆ, ಅಥವಾ ತಾಲೆಗೆ ಕೋಗುತ್ತಿದ್ದರೂ ಸರಿಯಾಗಿ ಕೆಲಸ ಮಾಡದೆ ಕಾಲಹರಣ ಮಾತ್ರ ಮಾಡಿ, ನಮ್ಮ ಮಕ್ಕಳ ವಿದ್ಯೆ ಹಾಳಾದರೆ, ಅದರ ಜವಾಬ್ದಾರಿಕೆ ಯಾರದಾಗುತ್ತದೆ? ಎಲ್ಲವನ್ನೂ ಕೊಡಿಸುತ್ತೇವೆ ಅಂದು ಡಿ. ಬಿ. ಯವರ ಮೇಲೆ ಅದರ ಹೊಣೆಗಾರಿಕೆ

ಇಲ್ಲವೆನ್ನಲಿಲ್ಲ. ನಾಡಿನ ಮಕ್ಕಳ ಪೋಷಕರಾದ ನಾವು ಈ ವಿಷಯ ಕಾಣಿಕೆ ಕೊಡುವುದಿಲ್ಲವೆನ್ನುವೆ? ಸರಕಾರಿ ಸ್ಕೂಲುಗಳ ಸುತ್ತಮುತ್ತಲಿನ ಜನಗಳು ಮಾತ್ರ ಹೆಚ್ಚು ಕಂದಾಯಕೊಡುವರೆನ್ನುವೆ? ಮಂತ್ರಿಯವರ ಕಾಲದಲ್ಲಿ ಅಮ್ಮ ಶಾಲೆಗಳು ಪಿಲಿದುಬಿದ್ದವು, ಇಪ್ಪತ್ತು ಉಪಾಧ್ಯಾಯರು ಕೆಲಸಕ್ಕೆ ಬಂದರು, ಉಳಿದವರನ್ನು ಡಿಸ್‌ಮಿಸ್ ಮಾಡಲಾದೀತು ಎಂಬಿತ್ಯಾದಿ ಪ್ರಚಾರ ಮಾಡಿದವರು ಈಗ ಏತಕ್ಕೆ ಬಚ್ಚಿದ ವಿಚಾರ ಪರಿಪುಕಟಣೆ ಹೊರಡಿಸಿ, ಉಪಾಧ್ಯಾಯರ ಮನಸ್ಸನ್ನು ನೆನ್ನಮಿಯಲ್ಲಿಡಲು ಯತ್ನಿಸುವುದಿಲ್ಲ? ಕೊಟ್ಟ ವಚನವನ್ನು ನೆಡೆಸಲು ಕಾಂಗ್ರೆಸ್ ಮೆಂಬರುಗಳಿಂದಲೇ ಕೂಡಿದ ಈ ಬೋರ್ಡಿಗೆ ಧೈರ್ಯವೂ ಅಂದರೆ ಸ್ವರಾಜ್ಯ ಬಂದು ಕೇಂದ್ರದಲ್ಲಿ ಕಾಂಗ್ರೆಸ್ ಹಿಡುಮತದ ಸರಕಾರವಿರುವ ಈ ಕಾಲದಲ್ಲೂ ಮತ್ತು ಆ ಕೇಂದ್ರ ಸರಕಾರದಿಂದ ನಿಯಮಿತರಾದ ಚೀಫ್ ಕಮಿಷನರವರು ಇರುವ ಈ ಸಂದರ್ಭದಲ್ಲಾದರೂ ಸಾಧ್ಯವಿಲ್ಲವೆಂದಾದರೆ ಆಮೂರ ಪ್ರಾರ್ಥನೆ? ಕಳೆದ ಸಮಯ ಹೋಯಿತು ಈಗಲಾದರೂ ಡಿ. ಬಿ. ಅಧ್ಯಕ್ಷರು ಇನ್ನಾದರೂ ಮನಸ್ಕಾಂತಿಯೊಂಗಲೋಸುಗ ಭಕ್ಷಣ ಪಿಚಾರ ಅಂದರೆ ಊಟಾ ಯಾಪ ರವಪತ್ರ ಬರ್ತ್ತಿ, ಹಂದಿನ ಬಕೆಸಂಗತಿಯನ್ನು ಬರುವ ಪರಿಗೆ ನೌಕರರು ಹೇಗೆ ಜೀವಿಸಬೇಕು. ಕತ್ತಲ್ಲಿಂದ ಆತ್ಮಸ್ಥಿಕರವಾದ ಕೆಲಸವಾರ ಇದೇನು ಗರ್ಭ ಮಾತ್ರ ಹೊಡುವರೇ ಎಂಬ ವಿಷಯ ಪಾರ್ಷಜಿಕರ ಹಾಗೂ ನೌಕರರ ತಲೆಯಲ್ಲಿ ಬಗ್ಗೆ ಮಂದಿಸಿ ವಾರವೇ ಪತ್ರಿಕೆಗಳ ಮೂಲಕ ಪ್ರಚುರಪಡಿಸಬೇಕಾಗಿ ಕಳಕಳಿ

ಭೃಪ. ಎಂ ಎಂ ಅಪ್ಪಯ್ಯ,
ಬಿ ಎಸ್ ಬೆಂಗಪ್ಪ,

---

ನಿದಾರಸಂತೆಯಲ್ಲಿ ನೀರಿನ ಅಭಾವ.

ಶನಿವಾರಸಂತೆಯ ಸ್ಥಿತಿ ಬೋಜನೇವಾಗಿದ ಈ ಪಟ್ಟಣದ ರಸ್ತೆಗಳು ಹೆ೫. ರಸ್ತೆಗಳಂಗಿವೆ ಇಲ್ಲಿ ರಸ್ತೆಗಳಲ್ಲಿ ನವ ಸರಿಯೂದ ಸ್ಥಪಸ್ಥೆ ಇಲ್ಲ ಪೂರಿದ ದೃಷ್ಟಿಯಿಂದ ವಾಸಿಸಲು ಅಯೋಗ್ಯ ಳವಾಗಿದೆ ಎಪುಗಳೆಲ್ಲದರ ಮೂತಿಗೆ ದುಕ್ಕ ಉಪ್ಪು ಹಾಕಿದಂತೆ ಕೊಡಿಯ ನೀರಿಗೇ ಅಭಾವವೆಂದರೆ ಶನಿವಾರ ಸಂಯವರ ಹೀನ ಚಾಗ್ಯವನ್ನು ಯಾರೊಡ ಹೇಳುವದು? ಶನಿವಾರಸಂತೆಯವರು ಎಪಯೋಗಿಸುವ ನೀರು ಕೊಳಕು ನೀರಾಗಿದೆ ಆರೋಗ್ಯ ಇಲಾಖೆಯವರ ದೃಷ್ಟಿ ಈ ಕಡೆಗೆ ಪರಿಸಿಲ್ಲ ಈ ನೀರಿನ ಭಾವಕ್ಕೋಸ್ಕರ ಜಿಲ್ಲಾ ಬೋರ್ಡಿಗೂ ಂಬಂಧಪಟ್ಟ ಅಧಿಕಾರಿಗಳಿಗೂ ಈ ಹಿಂಯೇ ಬರೆದು ಳೇಳಿಕೊಂಡರೂ ಒಂದು ವಿ ತೋಡಿಸಿ ಕೊಡುವ ಕೃಪ ಬಂದಿಲ್ಲ ಭಾಗದ ಜನರು ಕಂದಾಯ ಪಾವತಿ ಸೂಡುತ್ತಿಲ್ಲವೇ? ಇಲ್ಲಿರುವವರು ಸರಕಾರದ ದೃಷ್ಟಿಯ ಹೊರಗಿರುವವರೇ? ಈಗ ಸುಡಿಯತ್ತಿರುವ ನೀರು ದನಗಳ ಉಪಯೋಗಕ್ಕೂ ಯೋಗ್ಯವಾಗಿಲ್ಲ. ಈ ವಿಚಾರ ಯಾವ ಇಲಾಖೆಯೂ ಸಿಗ ಪಹಿಸಿಲ್ಲ ಸರಕಾರವು ಇನ್ನಾದರೂ ಗಮನಿಸಿ ಶನಿವಾರಸಂತೆಗೆ ಒಂದು ಬಾವಿ ತೋಡಿಸಿ ಕೊಡಬೇಕಾಗಿ ಅರಿಕೆ 'ಪ್ರಜಾಮಿತ್ರ'

---

## ಭಾಷಾವಾರು ಪ್ರಾಂತ ರಚನೆ ಬೇಡ.

### ಶ್ರೀ ಟಿ ಆರ್ ವಿ ಶಾಸ್ತ್ರಿಗಳ ಭಾಷಣ.

ಮದ್ರಾಸಿನ ಲಕ್ಷ್ಮೀಪುರದಲ್ಲಿ ನಡೆದ ಒಂದು ಸಭೆಯಲ್ಲಿ ಮಾತಾಡುತ್ತಾ, ಶ್ರೀ. ಟಿ. ಆರ್ ವೆಂಕಟರಮಣ ಶಾಸ್ತ್ರಿಗಳು ಈ ರೀತಿ ಹೇಳಿದರು 'ಭಾಷಾನುವಾರು ಪ್ರಾಂತರಚನೆಯು ಸಧ್ಯದ ಪರಿಸ್ಥಿತಿಯಲ್ಲಿ ಅರುಚಿಕರ ಮಾತ್ರವೇ ಅಲ್ಲ; ದೇಶಕ್ಕೆ ಅಪಹಿತಕರವು ಕಾಂಗ್ರೆಸು ಭಾಷಾವಾರು ಪ್ರಾಂತರಚನೆಯ ತತ್ವವನ್ನು ಒಪ್ಪಿದೆ ಸಹಜ ಆದರೆ ಆ ಚಳವಳಿಯ ನಿಷ್ಟ ಪರಿಣಾಮ ಏನನ್ನು ಮಾಡುತ್ತಿದೆ ಅಂದರೆ ಪ್ರಾಂತದ ಬಗ್ಗೆ ನಡೆಯುವ ಚಳವಳಿಗಳು ಭಯಂಕರ ಇದಕ್ಕೆ ಸಾಕ್ಷಿ ಇತ್ತೀಚೆಗಾಗಿ ಆನೇಕ ನೇಕ ವಿಚಿತ್ರ ಅಭಿಪ್ರಾಯಗಳು ಜನರಲ್ಲಿ ತೋರಿಬರುತ್ತಿವೆ ರಾಜ್ಯಪುನರ್ ಸಂಘಟನಾ ಸಮಿತಿಯ ಸದಸ್ಯರೊಬ್ಬರಾದ ದಿವಾಕರರು ಕರ್ನಾಟಕಕ್ಕೆ ಪ್ರವೇಶವಾಗಬೇಕಂದು ಸೂಚಿಸಿದರು ಮೈಸೂರು ಮಹಾರಾಜರ ಭವಿಷ್ಯದ ವಿಚಾರವೇನೆಂದು ದಿವಾಕರರನ್ನು ಕೇಳಿದಾಗ ಅವರು 'ಪ್ರಮುಖ'ರಂಗಿರಿಬಹುದೆಂದು ಆ ಶಬ್ದದ ಅರ್ಥ ತಿಳಿಯದ ಅವರು ಹೇಳಿದರು ತಾ ರೀತಿ ತಿರುವಾಂಕೂರಿನ ತಮಿಳರು ಬೇರೊಂದು ತಮಿಳು ಪ್ರಾಂತವಾಗಬೇಕೆನ್ನುತ್ತಿದ್ದಾರೆ ತಿರುವಾಂಕೂರನ್ನು ಹೀಗೆ ವಿಂಗಡಿಸಿ ಮದ್ರಾಸಿಗೆ ಸೇರಿಸಲೆತ್ನಿಸುವ ಸೂಚನೆ ಹುಸಿಕಾರಿಕವಾದುದು ಮೈಸೂರು, ತಿರುವಾಂಕೂರು, ಕೊಚ್ಚಿನ್ ರಾಜರು ತಮ್ಮ ರಾಜ್ಯವನ್ನು ಕರ್ನಾಟಕ, ತಮಿಳುನಾಡು ಯೂ ಎಲಬಾರನೊಡನೆ ಸಾರಿಸಲು ಒಪ್ಪಲಾರರು ಹಿಂದೂದೇಶದ ರಾಜ್ಯಪುನರ್ಸಂಯೋಜನೆಯ ಕಥೆ ಏನಾಗಿದೆ ಈ ಭಿನ್ನಭಿನ್ನ ಭಾಗಗಳ ಭವಿಷ್ಯ ನಿರ್ಣಯವಾಗುವುದು

ಬಾಷ ವಾರು ಪ್ರಾಂತಗಳ ಭಕ್ತರು ದೇಶದ ಮುಂದಿರುವ ಪ್ರಾಣಿಕ್ಯ ಸಮಸ್ಯೆಗಳನ್ನು ಮರೆತಿದ್ದಾರೆ ಇಂಥಾದೊಂದು ಪರಿಸ್ಥಿತಿಯಲ್ಲಿ ಈ ರಚನೆಯು ದೇಶಕ್ಕೆ ಹಾನಿಯನ್ನೇ ಮಾಡುವದು ಭಾಷಾವಾರು ಪ್ರಾಂತ ರಚನೆಯ ತತ್ವದಲ್ಲಿ ದೇಶದ ಹಿತ ಆಡಕವಿಲ್ಲ. ವ್ಯಕ್ತಿಗಳ ಸಂಕೀರ್ಣತೆ ಮತ್ತು ಲಂಚಕೋರತೆ ಇವಕ್ಕೆ ಕಾರಣ ಹಿಂದೂದೇಶಕ್ಕೆ ಹುಟಿಯು ರಾಷ್ಟ್ರ ಭಾವೈಕ್ಯಗಟ್ಟಿಕೆಂದು ಸದ್ಭಾವನೆಯಿಂದ ಪ್ರಚಾರ ಮಾಡಿದರೆ ಈ ಬಾಗದ ಜನರು ಇವಕ್ಕೆ ವಿರೋಧ ಸೂಚಿಸುತ್ತಿದ್ದಾರೆ ಕೇಂದ್ರಕ್ಕೆ ಸಂಬಂಧಪಡದ ವಿಷಯಗಳ ಸಂಕುಚಿತ ಪ್ರಾಂತರಚನೆಗೂ ಜನ ಕಟ್ಟುಬೀಳುತ್ತಿದ್ದಾರೆ ಕಾಂಗ್ರೆಸ್ಸಿನಿಷ್ಠರೂ ಕೂಡ ಇತ್ತಲಾಗಿ ಈ ಚಳವಳಿಯ ಆ ಸಂಪೂರ್ಣವಲ್ಲಿ ಅನಾವಶ್ಯಕವಾದ ದೊಡ್ಡ ಘಾತವಾಗಿದೆ ಈ ಸಮಸ್ಯೆಯ ಸಂಬಂಧಿಸಿರುವ ಪ್ರಾಣಿಯನ್ನು ಲಕ್ಷಿಸಿ ಈ ಪ್ರಶ್ನೆಗೆ 'ಇಲ್ಲ' ಎಂಬ ಏಕಾಯ ಉತ್ತರವನ್ನು ಬೆಂಕಂಡಿಸಿಂ ಅಧಿಕಾರಿಗಳನ್ನು ಕೇಳಿತ್ತೇನೆ ದೇಶವನ್ನು ಇನ್ನೂ ನಿಜ ಜನ ಪಗಾಜಕೆ ಕೊಂಗದೆ ಘಾಂ ವಾರು ಪ್ರಾಂತರಚನೆಯು ಒಳ್ಳೆ ಕಾರಣ ಪ್ರಬಹ ಪೀರಿಸಿ ಇನ್ನೂ ನೀಂ ಬಿ ಸಬೇಕಿದೆ.'

---

## ಪ್ರಕಟಣೆ.

ಆಹಾರ ಪದಾರ್ಥಗಳನ್ನು ಹೆಚ್ಚು ಬೆಳೆಸಲು ಪ್ರೋತ್ಸಾಹ ಕೊಡುವ ಕಾರಣ ಚೀಫ್ ಕಮಿಷನರು 'ಹೆಚ್ಚು ಬೆಳೆಯಿರಿ' ಯೋಜನೆಯನ್ವಯ ಬೆಳೆಸುವವರಿಗೆ ಈ ರಿಯಾಯಿತಿಗಳನ್ನು ಕೊಡುವದಾಗಿ ಪ್ರಕಟಿಸಿದ್ದಾರೆ

(೧) ೧೯೪೮ ರಿಂದ ೧೯೫೦ ರವರೆಗೆ ಹೊಸದಾಗಿ ಸಾಗುವಳಿ ಮಾಡುವ ಕಂದಾಯವಿರದ ಯಾ ಇಲ್ಲದಿರುವ ಭೂಮಿಗೆ ಪ್ರತಿ ವರ್ಷ ವ್ಯವಸಾಯ ನಡೆಯುತ್ತಿದ್ದರೆ ಮೂರು ವರ್ಷ ಪೂರ್ತಿಯಾಗಿಯೂ, ಎರಡು ವರ್ಷ ಅರ್ಧವಾಗಿಯೂ ಕಂದಾಯ ಸೂಫಿ

(೨) ಕಡಿಮೆ ಎರಡು ವರ್ಷಗಳಿಂದ ಸಾಗುವಳಿ ಆಗದೆ ಇದ್ದು ೧೯೪೮-೫೦ ರಲ್ಲಿ ಸಾಗುವಳಿ ಆಗಿ ನಂತರ ಪುಕಿ ವರ್ಷ ಸಾಗುವಳಿ ಮಾಡಲ್ಪಡುವ ಭೂಮಿಗೆ ಮೂರು ವರ್ಷಗಳ ಕಂದಾಯ ಪೂರ್ತಿ ಮಾಫಿ.

(೩) ೧೯೪೮ ರಿಂದ ನಲ್ಕು ವರ್ಷಗಳ ವರೆಗೆ 'ಹೆಚ್ಚು ಬೆಳೆಯಿರಿ' ಚಳವಳವು ಮುಂದರಿಯುವದು. ಈ ಯೋಜನೆಯಂತೆ ಈ ಕೆಳಗಿನ ಕೆಲಸ ಮಾಡುವವರಿಗೆ ನ್ಯಾಯವಾದ ಮಂತಿಗೆ ಕೊಡಲಾಗುವದು

(೧) ಪಾಳುಭೂಮಿಯನ್ನು ಆಹಾರ ಪದಾರ್ಥ ವ್ಯವಸಾಯಕ್ಕೆ ತಂದರೆ.

(b) ನೀರಾವರಿಗಾಗಿ ಕೆರೆ ಕಟ್ಟಿಸಿದರೆ ಯಾ ರಿಪೇರಿ ಮಾಡಿದರೆ

(c) ನೀರಾವರಿಗಾಗಿ ಕಾಲುವೆ, ಕಟ್ಟೆ ಕಟ್ಟಿದರೆ ಇತ್ಯಾದಿ

ಈ ಮಂತಿಗಳು ಪ್ರಯೋಜನವನ್ನು ಹೊಂದಲಿಚ್ಛಿಸುವವರು ಅಸಿಸ್ಟೆಂಟ್ ಆಫಾರ ಉತ್ಪಾದಕ ಅಧಿಕಾರಿಗಳಿಗಾಗಲಿ, ವ್ಯವಸಾಯ ಇಲಾಖಾಧಿಕಾರಿಗಳಿಗಾಗಲಿ, ಕಲಸದ ವಿವರ, ಉಪ್ಪತ್ತಿಗಳ ಮಾಹಿತಿ ಕೊಟ್ಟು ಅರ್ಜಿ ಬರಕೊಳ್ಳಬಹುದು

ಸಿ. ಟಿ ಮುದಲಿಯಾರ್,
ಚೀಫ್ ಕಮಿಷನರ್.
ಮುಜ್ರಾಯಿ ಇಲಾಖಾ ಆಫೀಸಿಂದ.

## ಪ್ರಕಟಣೆ.

ಇಲಾಖೆಗೆ ಸೇರಿದ ಸೋಮವಾರಪೇಟೆ ನಂಜರಾಯಪಟ್ಟಣ ತಾಲೋಕುಗಳ ಮೆಂಬರಾದ ಮೇ ಯಂ ಜಿ ವಿಶ್ವನಾಥಯ್ಯನವರ ಮತ್ತು ಎಡೆನಾಲ್ಕು ನಾಡು ಕಿಗ್ಗಟ್ಟುನಾಡು ತಾಲೋಕುಗಳ ಪರ ಮೆಂಬರಾದ ಮಾ ಡಿ ಎನ್ ಕೃಷ್ಣಯ್ಯನವರ ಸಹ ಮೆಂಬರುತನವು ಖಲಿ ಬಿದ್ದಿದೆ. ಮೇಲ್ಕಂಡ ತಾಲೋಕುಗಳ ಪರವಾಗಿ ಮೆಂಬರಾಗಲು ಇಷ್ಟ ಪಡುವವರು ಆಧರುಗಳ ಅರ್ಜಿಯನ್ನು ಬರುವ ತಾರೀಕು 27ರ ಪಳಗೆ ಇಲಾಖಾ ಪುಸಿ ಡೆಂಟರವರ ಹೆಸರಿಗೆ ಬರೆದುಕೊಳ್ಳತಕ್ಕದ್ದು ಪಾಯಿದೆ ಮೀರಿ ಬರುವ ಅರ್ಜಿಯನ್ನು ಅಂಗೀಕರಿಸುವದಿಲ್ಲ ಸೋಮವಾರಪೇಟೆ ನಂಜರಾಯಪಟ್ಟಣ ತಾಲೋಕುಗಳಪರ ಮೆಂಬರುಗಳ ಜ ನಾವಣೆಯು ತಾರೀಕು 5-7-48ರಲ್ಲು ಸೋಮವಾರ ಸಂಜೆ ತಾಲೋಕು ಬಿಜೀರಿ ಒಲಿ. ವೀರಾಜಪೇಟೆ ಆಡಿತಿ ನಂಜಪ್ಪನವರ ಪತ್ರದ ಬಳಿ ಎಡೆನಾಲ್ಕುನಾಡು ಕಿಗ್ಗಟ್ಟುನಾಡು ತಾಲೋಕುಗಳ ಪರ ಮೆಂಬರ ಚ ನಾವಣೆಯು ತಾರೀಕು 7-7-48 ರಲ್ಲು ವಾಸ್ತು ನುಡಿಕೇರಿ ಪಾಡಿನಾಲ್ಕುನಾಡುಗಳ ಪರ ಮೆಂಬರ ಚ ನಾವಣೆಯು ತಾರೀಕು 7-7-48 ರಲ್ಲು ಒಂಕಾರೆಶ್ವರ ದೇವಸ್ಥಾನದ ಬಳಿ ಕವಿ ಬೆಟ್ಟ ಲ್ಲಿ ಒಜ್ಜು ತೆಗೆಯಲಾಗುತ್ತೆ ಒಬ್ಬರ ರಿಜಿಸ್ಟರಿನಲ್ಲು ಹೆಸರು ದಾಖಲು ಮಾಡಿಸಿಕೊಂಡವರೆಲ್ಲರೂ ಓಟ್ಸು ಕೊಡಬಹುದು

ತಾರೀಕು, ರಾ ಬ ಪಿ ಚಂಗಪ್ಪ
28-5-48 ಪ್ರಸಿಡೆಂಟ್.

ನಿಮ್ಮ ಮೂಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಸೂಗರಿಲ್ಲ
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಗುಡ್ಸ್ ಫ್ರಾಂಚೈಸಿ ಸ್ವೀಕರಿಗಳು.
ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
30 ಮಾಂಟ್ ರೋಡ್, ಪೋ ಬ ನಂ. 337, ಮದ್ರಾಸ್-2
ಬೋಂಬೆ ಲೈಫ್ ಬಿಲ್ಡಿಂಗ್, ಪೋ ಬ ನಂ. 5, ಉಡುಪಿ
(ಲೈಫ್ ಸ 5793)
ಇತರ ಆಫೀಸುಗಳು —ಬೋ ಳೂರು, ತಿರುವೆಂದರು, ಕಲ್ಲಿಕೋಟೆ, ಮಂಗಳೂರು, ಕಾರ್ವಾರ, ಮತ್ತ ಬೊಂಬಾಯಿ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪನಿ, ಲಿಮಿಟೆಡ್.
ಸ್ಥಾಪನೆ,—1897
ಆಸ್ತಿ ಪಾಸ್ತಿಗಳ ಒಟ್ಟು ಆದಾಯ .. 1,07,69,000 ರೂಪಾಯಿ
ಪಾಲಿಸಿದಾರರ ಹಕ್ಕಿನ ಪ್ರಮಾಣ .. 17,51,72,000 ,,
ಸ್ಪಷ್ಟ ಖಂಗಡಿಗಳು ಆಸ್ತಿ ... .. 6,67,60,000 ,,
ಕಂಪನಿಯ ಅಬಿವೃದ್ಧಿ ಕೆಲಸಗಳು .. 8,83,62,000 ,,
ಆಂಗಳಗಳು ಮೆಜೆಸ್ಟಿ ಕೃತಾಕಳಂ
ಡಿಸ್ಪೆನ್ಸರಿ ಬಿಲ್ಡಿಂಗ್, ಕೆಂಪೇಗೌಡ ರೋಡ್, ಬೆಂಗಳೂರು. ಆಫೀಸುಗಳನ್ನು ಸ್ಥಾಪಿಸಿದೆ ಎಂಪೈರ್ ಆಫ್ ಇಂಡಿಯ ಲೈಫ್ ಬಿಲ್ಡಿಂಗ್, ಬೋಂಬೆ

# ಪಾಕಿಸ್ಥಾನದಲ್ಲಿ ವಿರುದ್ಧ ಪಕ್ಷ.

ಪಾಕಿಸ್ಥಾನದಲ್ಲಿ ಮುಸ್ಲಿಂ ಲೀಗಿನ ಹೊರತು ಇನ್ನಾವ ಪಕ್ಷವೂ ಹುಟ್ಟಬಾರದು. ಹುಟ್ಟಿದರೆ ಬೆಳೆಯಬಾರದು ಎಂಬುದು ಅಲ್ಲಿಯ ಜಿನ್ನಾಸಾಹೇಬರ ಆಡಳಿತದ ಮುಖ್ಯ ಗುರಿಯಾಗಿದೆ. ಮುಸ್ಲಿಂ ಲೀಗಿನ ಆಡಳಿತದಲ್ಲಿ ಕೂಡ ಜಿನ್ನಾಸಾಹೇಬರ ಕಾರ್ಯ ಪದ್ಧತಿಯು ಎಂದಿನಿಂದಲೂ ಸರ್ವಾಧಿಕಾರದ ತತ್ವದ ಮೇಲೆ ನಡೆಯುತ್ತ ಬಂದಿದೆಯೆಂಬುದು, ಅಲ್ಲಿಯ ಕಾರ್ಯಕಲಾಪಗಳ ಬಗ್ಗೆ ಕೇಳಿ ತಿಳಿದುಕೊಂಡವರಿಗೆ ಗೊತ್ತಾಗಿದೆ. ಅವರು ಅಧ್ಯಕ್ಷರಿದ್ದಾಗ ತಮಗೆ ಮನಸ್ಸಿಲ್ಲದವರನ್ನು ಮೂತಾಡಗೊಡುವುದೇ ಇಲ್ಲ, ಮತ್ತು ತಮ್ಮ ವಿಚಾರ ಮತ್ತು ನಿರ್ಣಯಗಳನ್ನು ಇತರರ ಮೇಲೆ ಹೇರುವುದು ಅವರ ಸ್ವಭಾವವಾಗಿದೆ. ಬಹು ಕ್ಷೀಣಪ್ರಕೃತಿಯವರಾದ ಅವರು ಬಹು ಬೇಗ ಸಿಟ್ಟಿಗೇಳುವರು. ಇತರ ಸಾಧನಗಳಿಂದ ಸಾಧಿಸಲಾರದ ಕಾರ್ಯಕಲಾಪಗಳನ್ನು ಅವರು ಸಿಟ್ಟಿನ ಸಹಾಯದಿಂದ ಸಾಧಿಸಿಕೊಳ್ಳುತ್ತಿರುತ್ತಾರೆ.

ಈಗ ಪಾಕಿಸ್ಥಾನದಲ್ಲಿ ನಡೆದಿರುವ ಕಾರ್ಯಕಲಾಪಗಳನ್ನು ನೋಡಿದರೆ ಇದೇ ಮೂತು ಕಂಡುಬರುತ್ತದೆ. ಜಿನ್ನಾಸಾಹೇಬರ ಬಗ್ಗೆ ಅಲ್ಲಿ ಅಪ್ರೀತಿಯು ಬೆಳೆಯುತ್ತಿದೆ ಅವರ ಈ ಸರ್ವಾಧಿಕಾರಿತ್ವಕ್ಕೆ ಅನೇಕರು ಬೇಸತ್ತು ಹೋಗಿದ್ದಾರೆ. ಆದರೆ ಅನೇಕರು ಅವರ ವಿರುದ್ಧ ಸಿಲ್ಲುವ ಧೈರ್ಯ, ಶಕ್ತಿ ಇಲ್ಲದೆ ಒಳಗೆ ಕುದಿಯುತ್ತಿದ್ದಾರೆ. ಇನ್ನು ಕೆಲವರು ಮುಸಲ್ಮಾನ ಜನಾಂಗಕ್ಕೆ ಪಾಕಿಸ್ಥಾನ ದೊರತಿಸಿಕೊಟ್ಟ ಜಿನ್ನಾರವರ ಉಪಕಾರವನ್ನು ನೆನೆದು ಅವರು ಮಾಡಬಹುದಾದ ಹಲ ಕೆಲವು ತಪ್ಪುಗಳನ್ನು ನಾವು ಮರೆಯಬೇಕಾಗುವುದು ಎಂದು ಸುಮ್ಮನಿರುತ್ತಾರೆ.

ಆದರೆ ಎಲ್ಲರೂ ಹೀಗೆ ಕೈ ಕಟ್ಟಿಕೊಂಡು ಕೂಡ್ರುವುದು ಸಾಧ್ಯವೇ ಇಲ್ಲ. ಕೆಲವು ವಿಷಯದ ವರೆಗೆ ಸುಮ್ಮನಿದ್ದು, ಆ ದು ಮೀರಲ್ಪಟ್ಟಿತೆಂದರೆ ಅನಿವಾರ್ಯವಾಗಿ ಕೊಡವಿಕೊಂಡು ಏಳುವುದು ಕೆಲವರಿಗೆ ಅನಿವಾರ್ಯವಾಗುವುದು.

ಗಡಿನಾಡು ಪ್ರಾಂತದಲ್ಲಿರತಕ್ಕ ಪಾಸ ಬಂಧುಗಳು ಜಿನ್ನಾರವರಂಥವರ ಬಲಿಗೆ ಬೀಳತಕ್ಕಂಥವರಲ್ಲ. ಅವರು ಸ್ವಯಂ ಪ್ರಕಾಶಿಗಳಾಗಿದ್ದಾರೆ. ಜಿನ್ನಾರವರ ದ್ವಿರಾಷ್ಟ್ರ ತತ್ವಕ್ಕೂ ಇವರಿಗೂ ಮೊದಲಿನಿಂದ ಮೂರು ಗಾವುದ ದೂರವೆ ಅಂತರವಿರುತ್ತ ಬಂದಿದೆ. ಪಾಕಿಸ್ಥಾನದ ನಿರ್ಮಾಣವಾದಾಗ ಪಾಸಬಂಧುಗಳು ಬಹು ದುಃಖಪಟ್ಟರು. ಆ ಮೇಲೆ ಅವರು ಜಿನ್ನಾಸಾಹೇಬರ ಕೈವಾಡಕ್ಕೆ ಸಿಕ್ಕು ಬಂಧಿತರಂತೆ ಸುಮ್ಮನೆ ಕೂಡ್ರಬೇಕಾಗಿದ್ದಿತು. ಇವರೊಡನೆ ಒಪ್ಪಂದ ಮಾಡಿಕೊಳ್ಳಲು ಮತ್ತು ಇವರನ್ನು ತಮ್ಮ ಜಾತೀಯ ತಳಹದಿಗೆ ಎಳೆದುಕೊಳ್ಳಲು ಜಿನ್ನಾರವರು ಬಹಳ ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ.

ಪಾಸಸಾಹೇಬರಂತೆಯೇ ಇನ್ನೂ ಕೆಲವು ಮುಖಂಡರು ಪಾಕಿಸ್ಥಾನದಲ್ಲಿ ಜಿನ್ನಾರ ವಿರುದ್ಧ ಕಾರ್ಯಮಾಡಲು ಉದ್ಯುಕ್ತರಾಗಿದ್ದಾರೆ. ಈಗ ಖುಡ್ರೋ ಇವರನ್ನು ಕಿಶ್ತು ಪಾಕಿ ಸಿಂಧ್ ಪ್ರಾಂತದ ಮುಖ್ಯ ಮಂತ್ರಿಪದವನ್ನು ಬೇರೆಯವರಿಗೆ ಕೊಟ್ಟ ಮತ್ತು ಖುಡ್ರೋರವರ ಮೇಲೆ ಅಪರಾಧ ಹೊರಿಸಿ, ಅವರ ವಿಚಾರಣೆಯನ್ನು ನಡೆಸುವ ಘಟನೆಯು ಜಿನ್ನಾರವರಿಂದ ನಡೆದದ್ದರಿಂದ ಆನರ ಬಗ್ಗೆ ವಿರೋಧವು ಪಾಕಿಸ್ಥಾನದಲ್ಲಿ ಇನ್ನೂ ತೀವ್ರವಾಗಿ ಬೆಳೆಯುತ್ತಿದೆ.

'ಪೀಪಲ್ಸ್ ಪಾರ್ಟಿ' (ಜನತಾ ಪಕ್ಷ) ಎಂಬುದೊಂದು ಪಕ್ಷವು ಈಗ ಪಾಕಿಸ್ಥಾನದಲ್ಲಿ ಪ್ರಾರಂಭವಾಗಿ ಹಿಂದಿನ ಆಯ್ಕೆಯಲ್ಲಿ ಸಿಂಧ್‌ದ ರಾಜಕೀಯ ರಂಗದಿಂದ ಹೊರಬೀಳಬೇಕಾದ ಶ್ರೀ. ಜಿ ಎಂ. ಸಯ್ಯದ್ ಇವರು ಅಲ್ಲಯ ಬಡ ವರ್ಗದವರ ಬೆಂಬಲದಿಂದ ಈ ಪಕ್ಷವನ್ನು ಪ್ರಾರಂಭಿಸಿದರು. ಪಾಕಿಸ್ಥಾನದ ಸರ್ವ ಪ್ರಾಂತಗಳ ಪ್ರತಿನಿಧಿಗಳು ಈ ಪಕ್ಷದ ಉದ್ದೇಶ ಪತ್ರಿಕೆ ಮತ್ತು ಧ್ಯೇಯಕ್ಕೆ ಅಂಕಿತ ಪಾಕಿಪ್ರಸಿದ್ಧಿಯನ್ನು ಕೊಟ್ಟರು.

ಜಿನ್ನಾರವರಿಗೆ ಇದರಿಂದ ಕಳವಳಕ್ಕಿಟ್ಟುಕೊಂಡಿತು. ಅವರು ಈ ಪಕ್ಷದ ಗಡಿನಾಡಿನ ಪ್ರತಿನಿಧಿಯಾದ ಗಫ್ಫಾರ್‌ಖಾನರನ್ನು ಚರ್ಚಾಪಾನಕ್ಕೆ ಕರೆದು 'ನೀವು ಹೀಗೆಲ್ಲ ಅಡ್ಡ ಹೋಗಬಾರದು. ಮುಸ್ಲಿಂ ಲೀಗಿಗೇ ಪಾಕಿಸ್ಥಾನದಲ್ಲಿಯ ಸರ್ವರು ಬೆಂಬಲಕೊಟ್ಟು ಅದರ ಶಕ್ತಿಯನ್ನು ಬೆಳೆಸುವುದು ಅಗತ್ಯವಾಗಿದೆಯೆಂದು ಹೇಳಿದರು. ಆದರೆ ಅವರ ಮಾತಿಗೆ ಬಾದಶಹಾ ಖಾನರು ಒಪ್ಪಲಿಲ್ಲ. ಮೊನ್ನೆ ಜಿನ್ನಾರವರು ಗಡಿನಾಡು ಪ್ರಾಂತಕ್ಕೆ ಹೋದಾಗ್ಯೆ ಪುನಃ ಈ ಬಗ್ಗೆ ಬಾದಶಹಾಖಾನರೊಡನೆ ಮಾತಾಡಿದರು. ಆಗ ಕೂಡ ಅವರ ಕಾರ್ಯವು ಸಾಧಿಸಲಿಲ್ಲ. ಇದರಿಂದ ನಿರಾಶರಾದ ಜಿನ್ನಾರವರು 'ಪಾಕಿಸ್ಥಾನದಲ್ಲಿ ಮುಸ್ಲಿಂ ಲೀಗಿನ ವಿರುದ್ಧ ಯಾವುದೇ ಶಕ್ತಿಯು ಸಹಿಸಲ್ಪಡುವುದಿಲ್ಲ' ಎಂಬರ್ಥದ ಘೋಷಣೆಯನ್ನು ಮಾಡಿದರು.

ಕಾಯಿದೆ ಮಂಡಲದ ಅಧಿವೇಶನಕ್ಕಾಗಿ ಪಾಕಿಸ್ಥಾನದ ಸರ್ವ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಗಡಿನಾಡಿನ ಗಾಂಧಿಯವರಾದ ಖಾನ್ ಅಬ್ದುಲ ಗಫ್ಫಾರಖಾನರೂ ಬಂದಿದ್ದರು. ಇದೇ ಸಂಧಿಯನ್ನು ಸಾಧಿಸಿ, ಈ ಜನತಾ ಪಕ್ಷದ ಬಗ್ಗೆ ಅನುಕೂಲ ಮತವಿದ್ದವರನ್ನೆಲ್ಲ ಕೂಡಿಸಿ ಅದರ ಕಾರ್ಯವನ್ನು ಮುಂದಂಡಿಸಿದಾರೆ. ಈ ಪಕ್ಷದಲ್ಲಿ ಪಾಕಿಸ್ಥಾನ ಸಮಾಜವಾದಿಗಳು, ಬಂಗಾಳ ಪ್ರಾಂತದ ಕಾಂಗ್ರೆಸ್ ಪಕ್ಷದವರಲ್ಲಿ ಕೆಲವರು ಮತ್ತು ಅನೇಕ ಇತರರು ಕೂಡಿದ್ದಾರೆ.

ಆ ಸಭೆಯ ಅಧ್ಯಕ್ಷಸ್ಥಾನದಲ್ಲಿ ಗಡಿನಾಡಿನ ಬಾದಶಹಾಖಾನರು ಉಪಸ್ಥಿತರಾಗಿದ್ದರು. ಅವರು ಹೇಳಿದ ಮಾತುಗಳ ಸಾರವು ಈ ರೀತಿಯಲ್ಲಿತ್ತು.

'ಇಂದು ಜಗತ್ತಿನಲ್ಲಿ ಅಶಾಂತಿಯು ಹೆಚ್ಚಿದೆ ಅದಕ್ಕೆ ತಡೆಹಾಕುವುದಾದರೆ ಪಾಕಿಸ್ಥಾನವು ಬಲಾಢ್ಯಭಾಗವಾಗಬೇಕು. ಹಾಗಾಗುವುದಕ್ಕೆ ಹಿಂದುಸ್ಥಾನ ಮತ್ತು ಪಾಕಿಸ್ಥಾನಗಳ ಸ್ನೇಹಸಂಬಂಧವು ದೃಢವಾಗಬೇಕು.

ಹಿಂದೂಸ್ಥಾನವು ಇಬ್ಭಾಗವಾದುದು ದುರ್ದೈವದ ಸಂಗತಿಯಾಗಿದೆ. ಏನೇ ಇದ್ದರೂ ಆ ಕಲಸವು ಒನ್ಮೆ ಆಗಿಹೋಯಿತು. ನಾವು ಪಾಕಿಸ್ಥಾನಕ್ಕೆ ನಿಷ್ಠೆಯಿಂದಿರಲು ಸಿದ್ಧರಿದ್ದೇವೆ ಆದರೆ ಆ ರಾಜ್ಯದಲ್ಲಿ ಮುಸ್ಲಿಂಲೀಗು ಒಂಪೇ ಕಾರ್ಯ ಮಾಡಬಲ್ಲದು ಎಂಬ ಮಾತಿಗೆ ನಮ್ಮ ಒಪ್ಪಿಗೆಯಿಲ್ಲ. ಅದು ಕರ್ಮರ ರಾಜಕಾರಣವಾಗುವುದು. ಪ್ರಜಾಸತ್ತೆಯು ಈಗಿನ ಯುಗದಲ್ಲಿ ಇಂತಹ ವಿಚಾರವು ನಡೆಯಲಾರದು. ಜನತೆಯ ಅಭಿಪ್ರಾಯವು ವ್ಯಕ್ತವಾಗುವುದಕ್ಕೆ ಯಾವುದೇ ತೊಡಕಿಡ ಇರಕೂಡದು. ಮತ್ತು ವಿರೋಧಿ ಪಕ್ಷವು ಇದ್ದರೇನೇ ಯಾವುದೊಂದು ಆಡಳಿತವು ಎಚ್ಚರಿಕೆಯಿಂದ ನಡೆಯುವುದು.'

'ಜಿನ್ನಾರವರೊಡನೆ ನಾನು ಮೂತಾಡಿದ್ದಾಗ್ಗೆ ಸಂಪೂರ್ಣ ಸಹಕಾರವನ್ನು ಕೊಡುವುದಾಗಿ ಹೇಳಿದೆನು. ಆದರೆ ಒದಕ್ಕೆ ಒಂದು ಮೂತು ನಡೆಸಿಕೊಡಬೇಕೆಂದು ಅವರನ್ನು ಕೇಳಿದೆನು. ಗವರ್ನರ್ ಜನರಲ್ಲರಾದ ಅವರು ಯಾವುದೇ ಪಕ್ಷಕ್ಕೆ ಸೇರಕೂಡದು ಎಂಬುದು ನನ್ನ ಹೇಳಿಕೆಯಾಗಿತ್ತು. ಅದಕ್ಕೆ ಜಿನ್ನಾಗವರು ಒಪ್ಪಲಿಲ್ಲ; ಈಗಿನ ಸೂಕ್ಷ್ಮ ಪರಿಸ್ಥಿತಿಯ ದೃಷ್ಟಿಯಿಂದ ಮುಸ್ಲಿಂಲೀಗಿನ ಶಕ್ತ್ಯಯನ್ನು ಬೆಳೆಸದೆ ಗತ್ಯಂತರವಿಲ್ಲದಾಗಿದೆಯೆಂದು ಅವರು ಹೇಳಿದರು.

ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯನ್ನು ಮಾಡಬಲ್ಲ ಯಾವುದೇ ಪಕ್ಷವು ಇಂದು ಪಾಕಿಸ್ಥಾನದಲ್ಲಿ ಇಲ್ಲದ್ದು ದುರ್ದೈವದ ಸಂಗತಿಯಾಗಿದೆ. ಧರ್ಮದ ದುರುಪಯೋಗವನ್ನು ಮಾಡುವ ಕಾರ್ಯವು ಯಥಾಪ್ರಕಾರವಾಗಿ ಸಾಗಿದೆ.'

ಖುದಾಯಿ ಖಿದ್ಮತ್‌ಗಾರ (ಕೆಂಪು ಗಿ) ರನ್ನು, ಅವರ ಮುಖಂಡರಾದ ಖಾನ ಅಬ್ದುಲ್ ಗಫಾರ್ ಖಾನರನ್ನು ಪಾಕಿಸ್ಥಾನ ಸರಕಾರವು ಒಳ್ಳೇ ಸಂಶಯದಿಂದ ಇಂದು ನೋಡುತ್ತಿದೆ. ಮತ್ತು ಈ ಪ್ರಜಾಪಕ್ಷದವರನ್ನು ಕೂಡ ಅದು ಒಳ್ಳೇ ಸಿಟ್ಟಿನಿಂದ ನೋಡುತ್ತಿದೆ.

ಆದರೆ ಪ್ರಜಾ ಪಕ್ಷದವರು ಇವರಿಂದ ಎದೆಗುಂದಿಲ್ಲ. ಈ ದಿನವು ಮುಸ್ಲಿಂ ಲೀಗಿಗೆ ಇನ್ನೂ ಬಹಳ ಶಕ್ತಿಯಿದ್ದರೂ ನಾಳೆ ತಮಗೆ ಜನತಾ ಬೆಂಬಲವು ಸಿಗುವುದೆಂಬುದನ್ನು ಇವರು ದೃಢವಾಗಿ ನಂಬಿದ್ದಾರೆ. ಆದ್ದರಿಂದ ಅವರು ಈಗ ಅಯ್ಕೆ ರಾಜಕಾರಣ ಮೊಪಲುಮಾಡಿ ಯಾವುದೇ ರಾಜ್ಯಭಾರಕ್ಕೆ ಸಂಬಂಧಪಟ್ಟ ಕಾರ್ಯಗಳಲ್ಲಿ ತೈ ಹಾಕದೆ ಕೇವಲ ಜನರಲ್ಲಿ ಜಾಗ್ರತಿಯನ್ನುಂಟು ಮಾಡಲು ನಿಶ್ಚಯಿಸಿದ್ದಾರೆ. ಪಾಕಿಸ್ಥಾನದ ಘಟನಾ ರೂಪವು ಸಿದ್ಧವಾದ ನಂತರ ರಾಜಕಾರಣದಲ್ಲಿ ಬೇಕಾದ ವಿಚಾರಪಸ್ಸನ್ನು ಅವರು ಇಟ್ಟುಕೊಂಡಿದ್ದಾರೆ.

ಮುಸ್ಲಿಂಲೀಗಿನ ಬಲವು ಅಲ್ಲಿ ಇನ್ನೂ ಬಹಳಿವಿದ. ಅವನ್ನು ಎದುರಿಸುವ ಪರಿಸ್ಥಿತಿಯು ಅಲ್ಲಿ ಇನ್ನೂ ಯಾವಿಗ ಇಲ್ಲ.

ಇದೇಕಾಲಕ್ಕೆ ಕೂಡಿದ ಪಾಕಿಸ್ಥಾನದ ಕಾಯಿದೆ ಮಂಡಲದಲ್ಲಿ ಏನೂ ಉತ್ಸಾಹವಿದ್ದಿಲ್ಲವಂತೆ. ಸಾಕಷ್ಟು ಸಭಾಸದರೂ ಇರುತ್ತಿದ್ದಿಲ್ಲ. ಇದ್ದವರು ಆಸ್ಥೆವಹಿಸುತ್ತಿದ್ದಿಲ್ಲ. ಏನೋ ಬಲಾತ್ಕಾರದಿಂದ ಹಿಡಿತಂಕೊಂಡು ಬಂದ ಪ್ರಾಣಿಗಳಂತೆ ಆವರಲ್ಲಿಯ ಅನೇಕರು ವರ್ತಿಸುತ್ತಿದ್ದರು.

ಹೀಗೆ ಪಾಕಿಸ್ಥಾನದಲ್ಲಿ ಇಂದು ಇಬ್ಬಣವು ತಲೆದೋರುತ್ತಿದೆ. ಮತ್ತು ಜಿನ್ನಾರವರ ಸರ್ವಾಧಿಕಾರೀ ಮನೋವೃತ್ತಿಯ ಬಗ್ಗೆ ಪ್ರತಿಭಟನೆಯು ಉಂಟಾಗುತ್ತಿದೆ. ಅವನ್ನು ದುರ್ಬಲಪ್ಪಿಸಿ ತಮ್ಮ ಹಿರವನ್ನೇ ಸಾಧಿಸಲು ಜಿನ್ನಾರವರು ಮತ್ತು ಅವರ ಮುಸ್ಲಿಂಲೀಗ್ ಜನರು ಹಿಂದಿನಂತೆ ಮುಂದೆಯೂ ಯತ್ನಿಸಿದರೆ ಅವರ ನುನೆಯಲ್ಲಿಯೇ ಅವರಿಗೆ ಸೋಲು ಉಂಟಾಗದೆ ಇರದು. 'ಜೈ ಹಿಂದ್'

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ರಿಜಿಸ್ಟರ್ಡ್ ಆಫೀಸ್ 'ಆಫ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂಡ ರೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿಶಿಖು ರೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ತೀರದ 0-8-0 ದರದ ಪ್ರಕಾರ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ವಿಜಸ್ವಾರವರು ಲೆಕ್ಕ ಸರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Bellippa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

# ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೩೭ | ತಾರೀಕು ೪-೬-೧೯೬೪ಲನೇ ಶುಕ್ರವಾರ | ಸಂಚಿಕೆ ೧

## ॥ ಭಾಷಾವಾರು ಪ್ರಾಂತ್ಯ ನಿರ್ಣಯ ॥

— ಲೇ:—'ಕನ್ನಡಿಗ' ಕೊಡಗು —

ಭಾಷಾವಾರು ಪ್ರಾಂತರಚನೆಯ ತತ್ವವನ್ನು ಅಂದೊನ್ನೆ ಕಾಂಗ್ರೆಸ್ಸು ಒಪ್ಪಿತ್ತು. ಇಂದೂ ಕೂಡ ಅದಕ್ಕೆ ಬದ್ಧ ಆಭಿಸ್ರಾಯವನ್ನು ಕಾಂಗ್ರೆಸು ಪ್ರಕಟಿಸಿಲ್ಲ ಆದರೆ ಪಂಜಾಬ್ ವಿಭಜನೆ, ಬಂಗಾಳದ ವಿಭಾಗೀಕರಣದ ನಂತರ ಹೊಸ ಪ್ರಾಂತರಚನೆಯ ಬಗ್ಗೆ ಜನತೆ ಎಚ್ಚರಿಕೆ ವಹಿಸಿದಂತೆ ತೋರುತ್ತದೆ. ಭಾಷಾವಾರು ವ್ಯಾಂತರಚನೆಯೂಗುವಾಗ ದೇಶದ ಶಾಂತಿಭಂಗವಾಗಿ ಹಿಂದೂದೇಶವು ಹರಿದು ಹಂಚಲ್ಪಡುವದರಿಂದ ಈ ವಿಭಜನೆ ಬೇಡವೆನ್ನಲಾಗುತ್ತಿದೆ. ಕಾಂಗ್ರೆಸು ಯೂ ವದೋ ಒಂದು ದೃಷ್ಟಿಯಿಂದ ಈ ಭಾಷಾವಾರು ಪ್ರಾಂತರಚನೆಯು ತತ್ವವನ್ನು ಒಪ್ಪಿಕೊಂಡರೂ ಆಂದಿನ ಪರಿಸ್ಥಿತಿ ಇಂದಿಲ್ಲ ದ ಕಾರಣ ಪುನಹ ವಿಮರ್ಶೆ ಮಾಡಿ ಆ ತರಾವನ್ನು ರದ್ದುಮಾಡಬೇಕೆಂದು ಕೆಲವರು ಸೂಚಿಸಿರುವರು. ಪ್ರಾಂತೀಯತೆಯು ಹುಟ್ಟಿನಲ್ಲಿ ನಮ್ಮ ಪ್ರಾಂತಭಾಷೆಯೇ ನಮಗೆ, ಹಿಂದಿಭಾಷೆ ಬೇಕಿಲ್ಲ; ನಮ್ಮ ಪ್ರಾಂತವು ಕೇಂದ್ರಕ್ಕೆ ಸಂಬಂಧಿಸದೆ ಸ್ವತಂತ್ರ ರಿಪಬ್ಲಿಕ್ ಆಗಬೇಕು (ತಮಿಳು ನಾಡಿನ ಪ್ರಚಾರ) ಎಂಬ ಸಂಕೀರ್ಣ ಮನೋಭಾವನೆಯು ಹೆಚ್ಚುತ್ತಿದೆ. ಪ್ರಾಂತೀಯತೆಯು ಹುಮ್ಮಿಸಿ ಬೆಳೆಯತೊಡಗಿ ಅದು ಅಖಂಡ ಭರತಖಂಡದ ಏಕ್ಯತೆಗೆ ಕುತಾರವ್ಯಾಯವಾಗತೊಡಗಿದೆ. ಈ ದೃಷ್ಟಿಯಿಂದ ನಮ್ಮ ಕನ್ನಾಡಿನ ಪುನರ್ರಚನೆಗೆ ಸೀಮಿತವಾಗಿ ಮೇಲೆ ಹೇಳಿದ ಸಂಕೀರ್ಣತೆ ಎಷ್ಟರ ಮಟ್ಟಿಗೆ ಗಂಡಾಂತರ ರೂಪವನ್ನು ಧಾರಣೆಮಾಡುತ್ತಿದೆ ಎಂಬುದನ್ನು ವಿಚಾರಿಸಬೇಕಾಗಿದೆ.

### ಅಪಾಯವಿದೆ.

ಭಾಷಾವಾರು ಪ್ರಾಂತರಚನೆಯಿಂದ ಹಿಂದೂದೇಶಕ್ಕೆ ಅಪಾಯವಿದೆ. ಅಪಾಯವಿಲ್ಲವೆಂದಾಗಿದ್ದರೆ ಈ ಪ್ರಶ್ನೆ ಎಂದೋ ಬಗೆಹರಿದುಹೋಗುತಿತ್ತು. ಈ ಅಪಾಯದ ಕಾರಣದಿಂದಲೇ ಈ ಪ್ರಶ್ನೆಯನ್ನು ಮುಂದೂಡುವ ವಿಚಾರ ನಡೆದಿದೆ. ಮಹಾತ್ಮಾಗಾಂಧೀಜಿ, ಪಂಡಿತ ನೆಹರೂ ಮೊದಲಾದವರೇ ಇದಕ್ಕೆರುವ ಗಂಡಾಂತರಗಳನ್ನು ಸ್ಪಷ್ಟಪಡಿಸಿದ್ದಾರೆ. ಪ್ರಾಂತೀಯತೆಯ ಮನೋಭಾವ ಹೆಚ್ಚುತ್ತಿರುವದನ್ನು ಶಿಷ್ಟಳಂಕ ವಚನಗಳಂದ ನೆಹರೂರವರು ಖಂಡಿಸಿದ್ದಾರೆ. ಭಾಷಾವಾರು ಪ್ರಾಂತರಚನೆಯು ತತ್ವದ ಬಗ್ಗೆ ವಿರೋಧವಿಲ್ಲ ದಿರಬಹುದಾದರೂ ಕರ್ನಾಟಕ ಪ್ರಾಂತದ ಗಡಿಯ ವಿಚಾರದಲ್ಲಿ ಮದ್ರಾಸ್, ಆಂಧ್ರ, ಕೇರಳರು ಮೊದಲಾದವರಲ್ಲಿ ವಾದ ವಿವಾದಗಳು ಎದ್ದಿವೆ. ಇವು ಉಗ್ರಸ್ವರೂಪ ತಾಳುವ ಚಿಹ್ನೆಗಳೂ ಇವೆ. ಈಗ ಆಂಧ್ರರಿಗೂ ತಮಿಳರಿಗೂ ಬಂದಿರುವ ಘರ್ಷಣೆ, ಮದ್ರಾಸ್, ಮತ್ತು ಬೊಂಬಾಯಿಗಳಿಗಾಗಿ ನಡೆಯುತ್ತಿರುವ ಹೋರಾಟದ ಹೊಗೆ ಇವು ಎಂದಾದರೂ ಕಿಡಿಕಾರಿದರೆ ಆಶ್ಚರ್ಯಪಡಬೇಕಿಲ್ಲ.

ಕೇಂದ್ರ ಸರಕಾರಕ್ಕೆ ಹೊರಗಿನ ಶತ್ರುಗಳಿದ್ದಾರೆ. ಅಂತೆ ದೇಶದ ಒಳಗೂ ಶತ್ರುಗಳಿದ್ದಾರೆ ಈ ಶತ್ರುಗಳನ್ನು ಎದುರಿಸಿ ಜಯದ ದಾರಿಹಿಡಿಯುವ ಈ ಸಂಕಟಸಮಯದಲ್ಲಿ ಪ್ರಾಂತೀಕರಣದ ವಿಪರೀತ ಪ್ರಚಾರವು ದೇಶದ್ರೋಹಾತ್ಮಕವಾಯಿತು. 'ಭಾಷಾವಾರು ಪ್ರಾಂತರಚನೆಯು ಮುದ್ದು ಈಗ ಎತ್ತುವದೇ ಬೇಡ ಎಂದೆನ್ನುವ ಜನೇಕರು ರಾಜ್ಯಪುನರ್ನಾ ಸಭೆಯಲ್ಲಿರುವರು' ಎಂದು ಕರ್ನಾಟಕ ಪ್ರಾಂತರಚನೆಗೆ ಟೊಂಕಕಟ್ಟಿ ಶ್ರಮಿಸುತ್ತಿರುವ ಶ್ರೀ ರಂಗನಾಥ ದಿವಾಕರರು ಹೇಳಿರುವರು. ಆದ್ದರಿಂದ ಈ ವಿಘಾಗೀಕರಣ ಪ್ರಶ್ನೆಯಲ್ಲಿ ಅಪಾಯವಿದೆ. ಪಂಜಾಬಿನ ದುರಂತ ಕಥೆ ಇಲ್ಲಿಯೂ ಪುನರಾವೃತ್ತಿ ನಡೆಯಲಾರದಾದರೂ ಶಾಂತಿಗೆ ಖಂಡಿತಾ ಈ ಯೋಜನೆಯಿಂದ ಭಂಗವಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

### ಸ್ವಾರ್ಥ

ಕರ್ನಾಟಕ ಪ್ರಾಂತವಾಗಬೇಕೆನ್ನುವದರಲ್ಲಿಯೂ ಸ್ವಾರ್ಥತೆ ಇದೆ. ಮೈಸೂರಾಗಿಲೀ, ಕೊಡಗಾಗಿಲೀ ಕರ್ನಾಟಕ ದೊಡನೆ ವಿಲೀನವಾಗಬೇಕೆನ್ನುವದರಲ್ಲಿ ಸ್ವಾರ್ಥವಿದೆ. ಪ್ರಾಂತೀಯತೆ ಮತ್ತು ಜಾತೀಯತೆ ಎಲ್ಲರಲ್ಲಿರುವಂತೆ ಕನ್ನಡ ನಾಡಿನವರಲ್ಲಿಯೂ ಇದೆ. ಇದನ್ನು ಅಲ್ಲಗಳೆಯುವದು ಸಾಧ್ಯವಿಲ್ಲ. ಕನ್ನಾಡಿನಲ್ಲಿ ಜಾತೀಯತೆ ಇಲ್ಲವೇ? ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು ಇನ್ನಿತರರಿಂದು ಘರ್ಷಣೆ ನಡೆಯುತ್ತಿಲ್ಲವೇ? ಮೈಸೂರು ಮಹಾ ಕರ್ನಾಟಕ್ಕೆ ಸೇರುವದಿಲ್ಲವೆಂದು ಮೈಸೂರು ರಾಜ್ಯ ಘಟನಾ ಸಭೆಯಲ್ಲಿ ನಿರ್ಣಯಿಸಿದ್ದರೆ ಅದಕ್ಕೆ ಅಖಂಡ ಕರ್ನಾಟಕದಲ್ಲಿ ವಕ್ಕಲಿಗರು ಅಲ್ಪ ಸಂಖ್ಯಾಕರಾಗುವರೆಂಬದೂ ಒಂದು ಕಾರಣವಲ್ಲವೇ? ಮೈಸೂರಿನಲ್ಲಿ ಬಹುಮತವಿರುವ ವಕ್ಕಲಿಗರ ಈ ಭಯವು ನಿರಾಧಾರವಾದುದೇ? ತಾ. ೫-೬-೪೭ ರಲ್ಲಿ ನೀಲಗಿರಿಯಲ್ಲಿ ನಡೆದ ಲಿಂಗಾಯತ ಸಮ್ಮೇಳನದಲ್ಲಿ ಅಧ್ಯಕ್ಷರು ನುಡಿದ 'That in the past they (lingayats) had completely neglected their interests with the result that their cultural, social and economic progress has received a set back. The time has now come for their coming together in order to regain their lost political and economic position and cultural glory To fulfill their destiny they should first realise a Karnataka province for which their leaders required their whole hearted support.) 'ಲಿಂಗಾಯತರು ತನ್ನ ಹಿತವನ್ನು ಕಡೆಗಣಿಸಿದ ಕಾರಣ ಅವರ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಅಭ್ಯುನ್ನತಿಯು ಹಿಂದಿ ಇಟ್ಟಿತು. ಈ ಕಳೆದು ಹೋದ ರಾಜಕೀಯ ಮತ್ತು ಸಾಂಸ್ಕೃತಿಕ ವೈಭವವನ್ನು ಪುನಹ ಸಡೆಯುವ ಸಮಯ ಬಂದಿದೆ. ಇದನ್ನು ಕೈಗೂಡಿಸಲು ಪ್ರಥಮವಾಗಿ ಅವರು ಕರ್ನಾಟಕ ಪ್ರಾಂತಪ್ರಯತ್ನವನ್ನು ಜಯಿಯಬೇಕು ಇದಕ್ಕಾಗಿ ಮುಂದಾಳುಗಳಿಗೆ ನಿಮ್ಮ ಹೃತ್ಪೂರ್ವಕ ಬೆಂಬಲಬೇಕು.' ಈ ಮಾತಿನ ಅರ್ಥದಂತೆ ಲಿಂಗಾಯತರಿಗೆ ಕರ್ನಾಟಕ ಪ್ರಾಂತಬೇಕಾದಮಟ್ಟಿಗೆ ತಪ್ಪುಕಳೆದು ಹೋದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಅನುಕೂಲತೆಯನ್ನು ಪಡೆಯಲಿಕ್ಕಾಗಿ! ಹಾಗಾದರೆ ಮೈಸೂರು ವಕ್ಕಲಿಗರ ಭಯವು ನಿರಾಧಾರವಾದುದೇ?

ಆಗಿನ ಬೊಂಬಾಯಿ ಮತ್ತು ಮದ್ರಾಸ್ ಸರಕಾರಗಳಲ್ಲಿ ಕನ್ನಡಿಗರು ಅಲ್ಪ ಸಂಖ್ಯಾಕರಾಗಿದ್ದಾರೆಂದೂ ಅವರ ಹಿತವನ್ನು ಬಹುಮತದವರು ಅಲ್ಲಿ ಕಡೆಗಣಿಸುತ್ತಿರುವರೆಂದೂ ಅದಕ್ಕಾಗಿ ಕನ್ನಾಡು ಒಂದಾಗಬೇಕೆಂದೂ ಏಕೀಕರಣವಾದಿಗಳ ಮೂಲವಾದ. ಇಂದು ಬೊಂಬಾಯಿ ಮತ್ತು ಮದ್ರಾಸ್ಸಿನಲ್ಲಿರುವ ಕನ್ನಡಿಗರ ಸ್ಥಿತಿಯು ಮುಂದೆ ಕರ್ನಾಟಕದಲ್ಲಿರುವ ಅಲ್ಪ ಸಂಖ್ಯಾತರಾದವರಿಗೆ ಬರುವದಿಲ್ಲವೇ? ಲಿಂಗಾಯತರು, ಒಕ್ಕಲಿಗರು ಮಿತ್ತರು ಬಹು ಸಂಖ್ಯಾಕರು ಅಲ್ಪ ಸಂಖ್ಯಾತರ ಹಿತಗಳನ್ನು ಕಡೆಗಣಿಸುವದಿಲ್ಲವೇ? ಕನ್ನಾಡಿನ ಬಹುಸಂಖ್ಯಾತರು ಗಾಂಧಿಗಳೇನು? ಅವರ ಈ ವರೆಗಿನ ಕೃತಿಯೇ ಕನ್ನಾಡಿನಲ್ಲಿ ಅಲ್ಪ ಸಂಖ್ಯಾತರ ಜೀವನ ಮಟ್ಟವು ಹಾಸಿಗೆಯದೆಂದು ತೋರಿಸುವದಿಲ್ಲವೇ?

### ಘರ್ಷಣೆ

ಗಡಿನಿರ್ಣಯದ ವಿಚಾರದಲ್ಲಿ ಘರ್ಷಣೆ ಬಾರದಿರದು. ಬಳ್ಳಾರಿಯನ್ನು ಆಂಧ್ರರೂ, ಬೆಳಗಾವಿಯನ್ನು ಮಹಾರಾಷ್ಟ್ರರೂ ಕೊಡಗನ್ನು ಕೇರಳರೂ ಕೇಳುತ್ತಿರುವಾಗ ತಿಕ್ಕಾಟಕ್ಕೆದೆ ಇದೆ. ಸೇಲಂ, ಹೊಸೂರು, ಮಂಡಕತಿರ, ಕೃಷ್ಣಗಿರಿ ಈ ಭಾಗಗಳ ಬಗ್ಗೂ ಘರ್ಷಣೆ ಬಾರದಿರದು. ಗಡಿನಿರ್ಣಯವು ಸ್ವಯಂಪ್ರೇರಣೆಯಿಂದಾಗಬೇಕೇ ವಿನಹ ಯಾವದೇ ಸಮಿತಿ, ಕಮಿಷನ್ನು ಗಳಿಂದ ಆದರೆ ಪಂಜಾಬಿನ ಪುನರಾವೃತ್ತಿಯಾಗುವದು ಈ ವಿಚಾರದಲ್ಲಿ ಮಹಾತ್ಮರು ಸ್ಪಷ್ಟ ನುಡಿಗಳಂದ ಎಚ್ಚರಿಸಿದ್ದಾರೆ. ಕೊಡಗಾಗಲೀ, ಮೈಸೂರಾಗಲೀ ಕನ್ನಡನಾಡಲ್ಲವೆಂದು ಯಾರೂ ವಾದಿಸುವದಿಲ್ಲ. ಆದರೆ ಇನ್ನೆಲ್ಲವೂ ಡೊಮಿನಿಯನ್ ಕರ್ನಾಟಕದ ಭಾಗವೆಂದು ಎಣಿಸುವದು ತಪ್ಪು.

ಭಾಷಾವಾರು ಪ್ರಾಂತರಚನೆ ಸೂಕ್ತವೇ, ಅವುಗಳ ಅವಶ್ಯಕತೆ ಇದೆಯೇ, ಹಿಂದೂದೇಶದ ಹಿತವನ್ನು ಇವು ಹೆಚ್ಚಿಸುವವೇ ಎಂಬದನ್ನು ವಿಚಾರಿಸಲು ರಾಜ್ಯಪುನರ್ನಾ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರು ಒಂದು ಸಮಿತಿಯನ್ನು ನೇಮಿಸಲಿದ್ದಾರೆ. ಇದಕ್ಕೆ ಸಹಾಯಕವಾಗಿ ಮದ್ರಾಸ್ ಸರಕಾರವು ಕೆಲವರ ಹೆಸರು ಸೂಚಿಸಿದೆ. ತಮಿಳುನಾಡಿಗಾಗಿ ಟಿ. ರಾಮು ಲಿಂಗಂ ಚೆಟ್ಟಿಯಾರ್‌ನ್ನು ಆಂಧ್ರಕ್ಕಾಗಿ ಶ್ರೀ ಆರ್. ರಾಮಕೃಷ್ಣಯ್ಯರ್‌ಜು, ಕೇರಳಕ್ಕಾಗಿ ಶ್ರೀ ಎಂ. ನಾರಾಯಣ ಮೆನನ್ ಮತ್ತು ಕರ್ನಾಟಕ್ಕಾಗಿ ಶ್ರೀ ಟಿ. ಸುಬ್ರಮಣ್ಯಂರವರ ಹೆಸರು ಕೊಡಲಾಗಿದೆ. ಆದರಂತೆ ಬೊಂಬಾಯಿ ಸರಕಾರವೂ ಆರಿಸಬಹುದು. ಈ ಜನರು ರಾಜೇಂದ್ರ ಪ್ರಸಾದರಿಂದ ನೇಮಿತವಾಗುವ ಸಮಿತಿಗೆ ಸಹಾಯವನ್ನೀಡುವರು. ಆವರು ವಿಸುರ್ಶಿಸಿ ಭಾಷಾವಾರು ಪ್ರಾಂತರಚನೆ ಬೇಕೇ, ಬೇಡವೇ ಎಂಬುದನ್ನು ನಿರ್ಣಯಿಸಲಿದ್ದಾರೆ. ಇತರ ನಿರ್ಣಯ ಹೇಗಾಗಲಿದೆಯೋ ಬಲ್ಲವರಾರು? ಭಾಷಾವಾರು ಪ್ರಾಂತರಚನೆ ಬೇಕೆಂದು ಇತರ ನಿರ್ಣಯಿಸಿದರೂ ಇಂದಿನಂಧಾ ಸಂದಿಗ್ಧ ಪರಿಸ್ಥಿತಿಯಲ್ಲಿ ಇದನ್ನು ಜಾರಿಯಲ್ಲಿ ತರಲು ಕೇಂದ್ರ ಸರಕಾರವು ಖಂಡಿತಾ ಒಪ್ಪದು.

### ಸಾವಧಾನತೆ ಬೇಕು.

ಭಾಷಾವಾರು ಪ್ರಾಂತರಚನೆಯ ಪ್ರಶ್ನೆ, ಇಲ್ಲವೇ ಕನ್ನಡ ಏಕೀಕರಣದ ಸಮಸ್ಯೆ ಇವುಗಳನ್ನು ಪ್ರತಿಯೊಬ್ಬನೂ ದೀರ್ಘವಾಗಿ, ಆಳವಾಗಿ ನೋಡಬೇಕು. ಕೇವಲ ಸಂಯೋಜನೆಯೊಗಬೇಕೆನ್ನುವದೇ ದೂರದೃಷ್ಟಿ ದೇಶಭಕ್ತಿಗಳಂದ ಕೂಡಿದೆಯೆಂದೂ, ಪ್ರತ್ಯೇಕವಾಗಿರಬೇಕೆನ್ನುವ ವಾದವು ಸಂಕುಚಿತ ಮನೋಭಾವನೆಯಿಂದ ಇಲ್ಲವೇ ಸ್ವಾರ್ಥದಿಂದ ಕೂಡಿದೆಯೆಂದೂ ತಿಳಿಯಬಾರದು. ಇದು ಕ್ಲಿಷ್ಟವಾದ ಪ್ರಶ್ನೆ. ದುಡುಕಿನಿಂದ ಅವಸರದಿಂದ ಈ ಪ್ರಶ್ನೆಯನ್ನು ಬಿಡಿಸಬಾರದು. ಅವಸರದಿಂದ ಮಾಡಿದ್ದಕ್ಕೆ ದೀರ್ಘವಾಗಿ ಪಶ್ಚಾತ್ತಾಪ ಪಡಬೇಕಾಗುವದು.

---

ವೀರಾಜಪೇಟೆಗೆ 'ಕೊಡಗು'
ಏಜೆಂಟರು:
ಶ್ರೀ ಕೆ. ಎಂ. ಸುಬ್ರಾಯನವರು

# ಕೊಡಗು

ತಾ. ೪-೬-೧೯೪೮ರ ಶುಕ್ರವಾರ

## ಪಾಲೆಸ್ತೀನ್ ಯುದ್ಧ.

ಪಾಲೆಸ್ತೀನ್ ಯುದ್ಧ ಪ್ರಾರಂಭವಾಗಿ ಎರಡು ವಾರಗಳು ಕಳೆದು ಹೋದವು. ದಿನನಿತ್ಯ ಯುದ್ಧವು ಭೀಕರವಾಗುತ್ತಾ ನಡೆದಿದೆ. ಯುದ್ಧ ಶೀಘ್ರವಾಗಿ ನಿಲ್ಲುವ ಚಿಹ್ನೆ ಕಂಡುಬರುತ್ತಿಲ್ಲ. ಈ ಮಧ್ಯೆ ಯುದ್ಧ ನಿಲ್ಲಿಸಿರೆಂದು ಸಂಯುಕ್ತ ರಾಷ್ಟ್ರಸಂಘವು ತೀರ್ಮಾನ ಕೊಟ್ಟಿರುವುದು ಗೊತ್ತಿರುವ ವಿಷಯ. ಆದರೆ ರಷ್ಯಾ, ಇಂಗ್ಲೆಂಡ್, ಅಮೇರಿಕಾಗಳು ತಮ್ಮ ರಾಷ್ಟ್ರನೀತಿಯನ್ನು ಅನುಸರಿಸಿ ಪಾಲೆಸ್ತೀನಿನ ಬಗ್ಗೆ ಸ್ವತಂತ್ರ ರೀತಿಯಿಂದ ವರ್ತಿಸುತ್ತಿರುವ ಕಾರಣ ಸಂಯುಕ್ತ ರಾಷ್ಟ್ರ ಸಂಘದ ಕೊಡುಗು ಅರಣ್ಯರೋದನವಾಗಿದೆ.

ತಮ್ಮ ಪವಿತ್ರ ದೇಶಕ್ಕಾಗಿ ಅರಬರು ಒಕ್ಕಟ್ಟಾಗಿ ಹೋರಾಡುತ್ತಿದ್ದಾರೆ. ಎಹೂದಿಯರೂ ತಮ್ಮ 'ಜನ್ಮಭೂಮಿ'ಗಾಗಿ ಅಸಾಧ್ಯ ತ್ಯಾಗವನ್ನು ಮಾಡಲು ತಯಾರಾಗಿದ್ದಾರೆ. ಈ ವರೆಗಿನ ಯುದ್ಧದಿಂದ ಅರಬರ ಕೈಯೇ ಮೇಲಾಗಿದೆಯೆಂದು ಹೇಳಬಹುದು.

ಈ ಯುದ್ಧದ ಕಾರಣಗಳನ್ನು ಹುಡುಕುವದಾದರೆ ಮೂವತ್ತು ವರ್ಷಗಳ ವರೆಗೆ ತಮ್ಮ 'ಮೇಂಡೇಟು'ನ್ನು ಇಟ್ಟುಕೊಂಡಿದ್ದ ಬ್ರಿಟನು ಮೇ ತಾರೀಕು ೧೫ ರಲ್ಲಿ ಪಾಲೆಸ್ತೀನಿನ ಆಡಳಿತ ಅಧಿಕಾರವನ್ನು ಯಾರಿಗೂ ಮಹಿಸಿಕೊಡದೆ 'ಮೇಂಡೇಟು'ನ್ನು ಮುಕ್ತಾಯಗೊಳಿಸಿ ಹಿಂತೆರಳಿತು. ಈ ಸಂಧರ್ಭದಲ್ಲಿ ಎಹೂದಿಯರು ತಮ್ಮ 'ಇಸ್ರಾಯೇಲ್' ಸರಕಾರವನ್ನು ಸಾರ್ವಭೌಮ ಸ್ವತಂತ್ರ ಆಡಳಿತಕ್ಕೆ ಪ್ರಾರಂಭಿಸಿದರು. ಬ್ರಿಟಿಷರ ವತ್ತು ತುರ್ಕಿಸ್ತಾನದವರ ಪಾಲೆಸ್ತೀನಕ್ಕೆ ಕಾಲಿಡುವ ಮೊದಲೇ ಪಾಲೆಸ್ತೀನಿನ ಸ್ವಾಮಿಗಳಾಗಿದ್ದ ಅರಬರು ಪಾಲೆಸ್ತೀನಿನ ಸ್ವಾಮಿತ್ವ ಕಳಕ್ಕಾಗಿ ಪ್ರಯತ್ನಿಸಿದರು. ಘೋರಣೆ ಪ್ರಾರಂಭವಾಯಿತು. ಪ್ರಖರ ರೀತಿಯ ಯುದ್ಧ ನಡೆದಿದೆ. ಆದರೆ ಈ ಯುದ್ಧಕ್ಕೆ ಕಾರಣ ಇದೇ ಅಲ್ಲ; ಪಾಲೆಸ್ತೀನಿದಲ್ಲಿ ಎಹೂದಿ, ಅರಬರ ಸಂಬಂಧವು ಈ ಕಳೆದ ಅನೇಕ ವರ್ಷಗಳಿಂದಲೂ ಚೆನ್ನಾಗಿರಲಿಲ್ಲ. ಇದಕ್ಕೆ ಮೂಲಕಾರಣರಾದವರು ಇವರಡು ಶಕ್ತಿಗಳ ಮಧ್ಯೆ ತಮ್ಮ 'ಮೇಂಡೇಟು'ನಂತೆ ತಕ್ಕಡಿ ತೂಗುತ್ತಿದ್ದ ಬ್ರಿಟಿಷರೆಂದು ಗೊತ್ತಾಗಲು ಪಾಲೆಸ್ತೀನಿದ ಕಳೆದ ಮೂವತ್ತು ವರ್ಷಗಳ ಚರಿತ್ರೆಯನ್ನು ಸ್ವಲ್ಪ ಕೂಲಂಕಶವಾಗಿ ನೋಡಬೇಕು. ಹಿಂದೂದೇಶದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಯನ್ನು ಎತ್ತಿ ಕಟ್ಟಿ ಪರಸ್ಪರರು ಬಡಿದಾಡಿಕೊಳ್ಳಲು ಮಾಡಿದಂತೆ ಪಾಲೆಸ್ತೀನಿದಲ್ಲಿ ತಮ್ಮ 'ಮೇಂಡೇಟು' ಆಡಳಿತದ ಮೂಲಕ ಎಹೂದ್ಯರು ಅರಬರನ್ನು ಪರಸ್ಪರ ಎತ್ತಿ ಕಟ್ಟಿದರು.

ಪ್ರಾಮುಖ್ಯವಾಗಿ ಜಗತ್ತಿನ ಎಂದನೇ ಮಹಾಯುದ್ಧದ ನಂತರ ಬ್ರಿಟಿಷರು 'ಬೆಲ್‌ಫೋರ್' ಘೋಷಣೆಯೊಂದನ್ನು ಮಾಡಿ ಎಹೂದಿಗಳಿಗೆ ಪಾಲೆಸ್ತೀನವೇ ಮಾತೃಭೂಮಿಯೆಂದು ಸಾರಿ ಎಹೂದ್ಯರು ಇಂದು ಪಾಲೆಸ್ತೀನದಲ್ಲಿ ನೆಲೆಸುವ ಅನುಮತಿಯನ್ನು ಕೊಡಿಸಿದರು. ಈ ಸಂದರ್ಭದಲ್ಲಿಯೇ ಅರಬರು ಬ್ರಿಟಿಷರ ಬದ್ಧ ವಿರೋಧಿಯಾಗಿದ್ದ ತುರ್ಕಿಸ್ತಾನದ ಮೇಲೆ ಬೀಳುವದಾದರೆ ತಾವು ಪಾಲೆಸ್ತೀನವನ್ನು ಅರಬರಿಗೆ ಒದಗಿಸಿಕೊಡುವ ಗುಪ್ತ ಒಪ್ಪಂದವನ್ನೂ ಮಾಡಿಕೊಂಡಿದ್ದರು! ಬ್ರಿಟನು ಈ ಎಂಡು ಒಪ್ಪಂದಗಳನ್ನೂ ಪಾಲಿಸಲಿಲ್ಲ. ಆದರೆ ಬ್ರಿಟಿಷರ ಈ ದ್ವಿದಳ ನೀತಿಯು ಎಹೂದ್ಯ ಅರಬರಲ್ಲಿ ದ್ವೇಶವನ್ನು ಹುಟ್ಟಿಸಿತು ಈ ಯುದ್ಧದ ಮೂಲ ಕಾರಣ ಇದ್ದಿದೆ.

ಎಹೂದಿಗಳ ಚಳವಳಿ ಮತ್ತು ಅವರ 'ಝಿಯೋನಿಜಂ' ತತ್ವವು ನೆಪೋಲಿಯನನ ಕಾಲದಲ್ಲಿಯೇ ಪ್ರಾರಂಭವಾಗಿದೆ. ಜಗತ್ತಿನ ಎಲ್ಲೆಡೆಯಲ್ಲಿಯೂ ಅಲ್ಪ ಸಕ್ಷೀಯರಾಗಿರುವ ಎಹೂದಿಯರು ಜಗತ್ತಿನ ವಿವಿಧ ರಾಷ್ಟ್ರಗಳಿಂದ ಕಲ್ಪನಾತೀತವಾದ ಕೊಂದರೆಯನ್ನು ಅನುಭವಿಸಿದ್ದಾರೆ. ನಾಝಿ ಜರ್ಮನಿಯಲ್ಲಿ ಒಂದೇ ಎಹೂದಿ ಪಿಳ್ಳೆ ಉಳಿಯದಂತೆ ಹಿಟ್ಲರ್ ಸರಕಾರವು ಓಡಿಸಿತು. ಆದರೂ ಈ ಎಹೂದಿಯರು ಪ್ರತಿಯೊಂದು ದೇಶದಲ್ಲಿಯೂ ತಮ್ಮ ಹಿಡಿತವನ್ನು ಉಳಿಸಿಕೊಂಡಿದ್ದಾರೆ. ಪಾಲೆಸ್ತೀನದಲ್ಲಿಯೂ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದ್ದಾರೆ. ಪಾಲೆಸ್ತೀನದ ಮೂಲ ನಿವಾಸಿಗಳು ಅರಬರು. ಎಹೂದಿಯರು ಆಳ್ವಿಗೆ ಬಂದವರು. ಹದಿನೈದನೇ ಶತಮಾನದ ವರೆಗೆ ಇವರು ಅಲ್ಲಿ ಅರಬ ರಾಜರ ಆಡಳಿತದೊಳಗೆ ತುರ್ಕಿಸ್ತಾನವು ಪಾಲೆಸ್ತೀನವನ್ನು ವಶಪಡಿಸಿಕೊಳ್ಳುವ ವರೆಗೆ ಇದ್ದರು. ಆದ್ದರಿಂದ ಪಾಲೆಸ್ತೀನದ ಹಕ್ಕುದಾರರು ಅರಬರು. ಬ್ರಿಟಿಷರು ಹಿಂದಿನಿಂದಲೂ ಎಹೂದಿಗಳ ಬೆನ್ನು ತಟ್ಟುತ್ತಿದ್ದರು. ಆದರೆ ರ್ಗರ್ಸ್‌ರಿಂದ ಅವರು ಅರಬರ ಬೆನ್ನು ಸಾವರಿಸತೊಡಗಿದ್ದಾರೆ. ದ್ವಿತೀಯ ಮಹಾ ಯುದ್ಧದ ನಂತರ ಬ್ರಿಟನು ತನ್ನ ಸ್ಥಾನವನ್ನು ಕಳಕೊಂಡು ಅಮೇರಿಕೆಯು ಜಗತ್ತಿನಲ್ಲಿ ಹಿರೀ ರಾಷ್ಟ್ರವಾಗಿ ಅಂತರರಾಷ್ಟ್ರೀಯ ರಾಜಕೀಯವು ಎಹೂದಿಗಳಿಗೆ ಸಹಾಯಕವಾಗಿ ನಡೆಯತೊಡಗಿತು ಎಹೂದಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ಯೋಜನೆಗಳಿಗೆ ತೊಡಗಿದರು. ಈ ಯೋಜನೆಗಳು ಪರಿಪಕ್ವವಾಗಿ ಈಗ ಯುದ್ಧ ಪ್ರಾರಂಭವಾಗಿದೆ. ಹೊಸದಾಗಿ ಸ್ಥಾಪಿತವಾದ ಎಹೂದಿ 'ಇಸ್ರೆಯಿಲ್' ಸರಕಾರಕ್ಕೆ ಅಮೇರಿಕಾ ರಷ್ಯಾಗಳ ಬೆಂಬಲ ದೊರೆತಿದೆ.

ಎಹೂದಿಗಳ ಈ ಹೊಸ ಸರಕಾರವನ್ನು ಹಿಂದೂದೇಶದ ಸರಕಾರವು ಆಂಗೀಕರಿಸಿಲ್ಲ. ಈ ಒಂದು ಕಾರಣಕ್ಕಾಗಿ ನೆಹರೂ ಸರಕಾರವು ಬ್ರಿಟಿಷರ ಬಾಲ ಹಿಡಿದಿದೆಯೆಂದು ಬೀಕೆ ನಡೆಯುತ್ತಿದೆ. ಆದರೆ ನೆಹರೂ ಸರಕಾರದ 'ವಿಚಾರಿಸಿ ಪರಿಶೀಲಿಸುವ' ನುನೋವೃತ್ತಿಯು ಯೋಗ್ಯವಾದುದು. ಏಕೆಂದರೆ ಭೂಮಧ್ಯ ಪ್ರಾಂತದ ಎಲ್ಲಾ ಮುಸ್ಲಿಂ ರಾಷ್ಟ್ರಗಳಲ್ಲಿ ಹಿಂದೂಸ್ಥಾನದ ವಿರುದ್ಧ ಪಾಕಿಸ್ತಾನವು ಅಪಪ್ರಚಾರ ನಡೆಸಿದೆ. ಹಿಂದೀ ಸರಕಾರವು ಎಹೂದಿ ಸರಕಾರವನ್ನು ಮಾನಸಿಸರೆ ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಸುವ ಪಾಕಿಸ್ತಾನೀ ಪ್ರಚಾರಕ್ಕೆ ಬೆಂಬಲ ನಿತ್ತಂತಾಗುವದು. ನ್ಯಾಯದ ದೃಷ್ಟಿಯಿಂದಲೂ ಎಹೂದ್ಯರು ಪಾಲೆಸ್ತೀನರ ಹಕ್ಕುದಾರರೆಂದು ಹೇಳಲಾಗುವದಲ್ಲ. ಆದ್ದರಿಂದ ಪಾಲೆಸ್ತೀನ್ ಯುದ್ಧದ ಬಗ್ಗೆ ಹಿಂದೂಸ್ಥಾನವು ಅನುಸರಿಸಿದ ತಟಸ್ಥನೀತಿಯು ಯೋಗ್ಯವಾಗಿದೆ.

## ಆನೆಗಳ ಮೂರಾಟೆ.

ಕಳೆದ ತಾರೀಕು ೨೯ರಲ್ಲಿ ತಿತಿಮತಿಯಲ್ಲಿ ಚೇಳ್ ಕಮಿಷನರವರ ಅಧ್ಯಕ್ಷತೆಯಲ್ಲಿ, ಕೊಡಗು ಫಾರೆಸ್ಟ್ ಇಲಾಖೆಯವರು ಹಿಡಿದಿರುವ ಆನೆಗಳ ಹರಾಜು ನಡೆಯಿತು. ಕೆಲವು ವರ್ಷಗಳಿಂದೀಚೆಗೆ ಹೆಚ್ಚಾಗಿ ಈ ವರ್ಷ ೨೭ ಕಾಡಾನೆಗಳು ಹಿಡಿಯಲ್ಪಟ್ಟುದರಲ್ಲಿ ಒಂದು ಸತ್ತುಹೋಗಿ, ಒಂದನ್ನು ಫಾರೆಸ್ಟ್ ಇಲಾಖೆಯ ಕೆಲಸಕ್ಕೆ ಇಟ್ಟುಕೊಂಡು ನಾಲ್ಕನ್ನು ಈ ಮೊದಲೇ ಸುಮಾರು ೧೫೫೦ ರೂಪಾಯಿಗಳಿಗೆ ಮಾರಿದ್ದು, ಉಳಿದ ೧೫೨೦ನ್ನು ಈ ಹರಾಜಿನಲ್ಲಿ ಸುಮಾರು ೮೧೦೦ ರೂಪಾಯಿಗಳಿಗೆ ಮಾರಲಾಯಿತು. ಇವುಗಳೆಲ್ಲನ್ನು ಹಿಡಿದು ಸುಮಾರು ಮೂರು ತಿಂಗಳುಗಳಿಂದ ಸಾಕಲು ಸುಮಾರು ೭ ಸಾವಿರ ರೂಪಾಯಿಗಳ ಖರ್ಚಿಗೆ ತಗಲಿದೆಯಂತೆ. ಹೀಗೂ ಈ ವರ್ಷದ ಆನೆಗಳ ನೂರಾಟದಿಂದ ಸುಮಾರು ೧೦ ಸಾವಿರ ರೂ. ಗಳ ಆದಾಯವು ದೊರಕಿದ್ದು ಶುಭ ಚಿಹ್ನೆ. ಯಾರಿಗೂ ತೊಂದರೆ ನಷ್ಟಗಳಿಲ್ಲದಂತೆ ಈ ರೀತಿಯ ಆದಾಯವನ್ನು ಪಡೆದು ದೇಶದಲ್ಲಿ ಕಂಡು ಕತನವನ್ನು ನಷ್ಟವಿಲ್ಲದೆ ನಿಲ್ಲಿಸಲು ಪ್ರಯತ್ನಿಸುತ್ತಿರುವದು ಸ್ತುತ್ಯರ್ಹವಾಗಿದೆ.

## ವರ್ತಮಾನ.

ಕೊಡಗು ಫಾರೆಸ್ಟ್ ಕ್ಲಬ್ಬಿನ ಆಟೋಟಗಳ ವಾರವು ತಾ. ೪ ವರೆಗೆ ಮಡಿಕೇರಿಯಲ್ಲಿ ನಡೆಯಿತು.

ಕಳೆದ ಬಿ. ಟಿ. ಪರೀಕ್ಷೆಯಲ್ಲಿ ಶ್ರೀಮತಿಯರಾದ ಚೇಂದ್ರಿಮಾಡ ಕಾವೇರಿ ಮತ್ತು ಕುಟ್ಟೇಟ್ಟಿರ ನೀಲಮ್ಮ ಇವರುಗಳು ತೇರ್ಗಡೆಯಾಗಿರುವರು.

ಮದ್ರಾಸ್ ವಿಶ್ವವಿದ್ಯಾಲಯದ ಎಂ. ಎ. ಪರೀಕ್ಷೆಯಲ್ಲಿ ಶ್ರೀ ಪಾಲೇಕಂಡ ಕರುಂಬಯ್ಯನವರು ಉತ್ತೀರ್ಣರಾಗಿರುವರು.

ದಿವಂಗತ ಚೇಂದ್ರಿಮಾಡ ಕುಟ್ಟಪ್ಪನವರ ಧರ್ಮಪತ್ನಿ ಬೊಳ್ಳವ್ವನವರು ೩೦ ಲಕ್ಷ ಶ್ರೀರಾಮನಾಮಾವಳಿಯನ್ನು ಬರೆದು ಪೂಜೆ ನಡೆಸಿ ಮೂರ್ನಾಡು ಶ್ರೀರಾಮ ಮಂದಿರದಲ್ಲಿಟ್ಟಿರುವರು.

ಕಳೆದ ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಚಿಂಯಪಂಡ ಬೋಪಣ್ಣ, ಕಾಡ್ಯಮಾಡ ಕೆ. ಪೊನ್ನಪ್ಪ, ಕಾಡ್ಯಮಾಡ ಕೆ. ನಾಣಯ್ಯ, ಪಾಲೇಕಂಡ ಎ. ಐಯ್ಯಪ್ಪ, ಪಾಲೇಕಂಡ ಪಿ. ಬೋಪಣ್ಣ ಮತ್ತು ನೆಲ್ಲಮಕ್ಕಳ ಕೆ. ಮುತ್ತಪ್ಪನವರು ತೇರ್ಗಡೆಯಾಗಿರುವರು.

ಮಡಿಕೇರಿ ಮಹಿಳಾ ಸಹಕಾರ ಸಮಾಜದ ಆಶ್ರಯದಲ್ಲಿ 'ಗೀತಾಂಜಲಿ' ಬಾಲ್ಗೆಯಲ್ಲಿ ಪ್ರಯೋಕ ಪರೀಕ್ಷೆಯ ವರೆಗೆ ಹಿಂದೀ ಕಲಿಸುವ ಏರ್ಪಾಡು ಮಾಡಿರುವಲ್ಲದೆ ಜೂನ್ ತಾ೦ ನಿರಿಂದ ಕಸೂತಿ ಕೆಲಸ ಕಲಿಸುವ ಏರ್ಪಾಡು ಮಾಡಿರುವದಾಗಿಯೂ, ಈಗ ನಡೆಯುತ್ತಿರುವ ಶಿಶುವಿಹಾರದ ಅಧ್ಯಾಪಿಕೆಯರಾಗಲು ಇಬ್ಬರನ್ನು ಮೈಸೂರಿಗೆ ತರಬೇತಿಗೆ ಕಳುಹಿಸುವ ಏರ್ಪಾಡು ಮಾಡಿರುವದಾಗಿಯೂ ಸಮಾಜದ ಅಧ್ಯಕ್ಷೆಯರು ತಿಳಿಸುತ್ತಾರೆ.

ಕಳೆದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಪಾರ್ವಂಗಡ ಪಿ. ನಂಜಪ್ಪ, ಮಂಡೇಪಂಡ ಟಿ. ಅಪ್ಪಚ್ಚ, ಕೋಗೆಟ್ಟೀರ ಪೊನ್ನಪ್ಪ, ಕಲ್ಲೆಟೀರ ಸೋಮಯ್ಯ, ಸಿ. ವಿ ಶಂಕರರಾವ್, ಸೈಕೆರ ಸಿ. ಪೊನ್ನಪ್ಪ, ಏ ಎಂ. ಉತ್ತಪ್ಪ, ಸಿ. ಎಸ್. ಐಯ್ಯಪ್ಪ, ಕೇಟೋಳಿರ ಪೊನ್ನಪ್ಪ ಚೆಪ್ಪುಡೀರ ಗೋಪಾಲ ಮತ್ತು ಶ್ರೀಮತಿ ಏ ಚೆಟ್ಟಿರ ಗಂಗಮ್ಮ ಚೆನ್ನಿರ ಕೆ. ತಂಗಮ್ಮ (ಇವರೆಲ್ಲರೂ ಒಂದನೆ ತರಗತಿಯಲ್ಲಿ), ನಾಪನೆರವಂಡ ಬೆಳ್ಯಪ್ಪ, ನೆಲ್ಲಮಕ್ಕಳ ಅಚ್ಚಯ್ಯ, ಪಾಲೇಕಂಡ ಮೇದಪ್ಪ, ಜಿ. ಎಂ. ಗೋಪಾಲಕೃಷ್ಣ, ಕೋದಂಡ ರತ್ನ, ಅಜ್ಜಕ್ಕಿಟ್ಟೀರ ಎಂ. ಸುಬ್ಬಯ್ಯ, ಮತ್ತು ಶ್ರೀಮತಿ ಕೆ. ಎಂ. ಗೌರಮ್ಮ ಇವರುಗಳು ತೇರ್ಗಡೆಯಾಗಿರುವರು.

### ಕೊಡಗು ಇಸ್ಲಾಹುಲ್ ಮುಸ್ಲಿಮೀನ್ ಸಭೆ.

ಕೊಡಗು ಇಸ್ಲಾಹುಲ್ ಮುಸ್ಲಿಮೀನ್ ಸಭೆಯವರ ವಿೂಟಿಂಗೊಂದು ಜೂನ್ 1ನೇ ಮಂಗಳವಾರ ದಿನ ಮಧ್ಯಾಹ್ನ 1 ಗಂಟೆಗೆ ಕಡಂಗದಲ್ಲಿ ಕುಪ್ಪೋಡಿಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಕೋರಿಕೆಯಂತೆ ಜನಾಬ್ ಕೆ. ಯಂ ಸೂಫಿಯವರು, ಜನಾಬ್ ಪಿ. ಮಾಯಿನ್, ಜನಾಬ್ ಕಾಪ್ಪೋಡಂಡ ಕಾರ್ಯಿಯವರು, ಜನಾಬ್ ಚೆ. ಅವ್ವ, ಜನಾಬ್ ಕುಪ್ಪಂರೆ ಹಸನ್, ಇವರುಗಳು ಭಾರತದ ಕರಡು ರಾಜ್ಯಘಟನೆಯಲ್ಲಿ ಕೊಡಗಿಗೆ ಸಂಬಂಧಿಸಿದ ವಿಷಯಗಳನ್ನು ವಿವರಿಸಿದರು. ಅಲ್ಲದೆ ಈ ಸಭೆಯನ್ನು ಬಲಪಡಿಸಿ ಇಸ್ಲಾಂ ಜನರನ್ನು ಏಕ್ಯ ವರ್ಗೀಯಲ್ಲಿ ಅಭಿವೃದ್ಧಿಗೊಳಿಸುವ ಸಂಗತಿಯನ್ನು ಸವಿಸ್ತಾರವಾಗಿ ಹೇಳಿ ನೆರೆದಿದ್ದ ಜನರಿಗೆ ಮಂದಟ್ಟು ಮಾಡಿದರು. ಈ ಕೆಳಗಿನ ರೀತಿಯ ನಿರ್ಣಯವು ಸರ್ವಸಮ್ಮತದಿಂದ ಪಾಸುಮಾಡಲಾಯಿತು.

ಭಾರತ ಭಾವಿ ರಾಜ್ಯಘಟನೆಯಲ್ಲಿ ಕೊಡಗಿನ ಸಂಬಂಧಿಸಿ ತ್ರಾಸ್ಟಿಂಗ್ ಕಮಿಟಿಯವರು ಮಾಡಿರುವ ಸಲಹೆಗಳು ಅಕ್ಷಮ್ಯಿಕರವಾದುದರಿಂದ ಅವುಗಳನ್ನು ತಿರಸ್ಕರಿಸಬೇಕೆಂದೂ, ಎಡ್‌ಹಾಕ್ ಸಮಿತಿಯವರು ಮಾಡಿರುವ ಶಿಫಾರಸು ಜನರ ಕೋರಿಕೆಗಳನ್ನು ತಕ್ಕಮಟ್ಟಿಗೆ ಸಲ್ಲಿಸುವದರಿಂದ ಅವುಗಳನ್ನೇ ಮಂಜೂರುಮಾಡಬೇಕೆಂದೂ ಈ ಸಭೆಯು ಕಾನ್‌ಸ್ಟಿಟುವೆಂಟ್ ಎಸೆಂಬ್ಲಿಯವರನ್ನು ಕೇಳಿಕೊಳ್ಳುತ್ತದೆ.

ಈ ತೀರ್ಮಾನವನ್ನು ರಾಜ್ಯಘಟನಾ ಸಭೆಯ ಅಧ್ಯಕ್ಷರಿಗೂ ಮುಖ್ಯ ಮಂತ್ರಿಯವರಿಗೂ, ಮತ್ತು ಗೃಹಮಂತ್ರಿಯವರಿಗೂ ಸಹ ಕಳುಹಿಸುವಂತೆ ತೀರ್ಮಾನವೂ ಆಯಿತು.

ನಂತರ ಅಲ್ಲಿಗೆ ಬಂದ ಶ್ರೀ. ಪಿ. ಸಿ. ಬೆಳ್ಯಪ್ಪನವರು ಮತ್ತು ಶ್ರೀ. ಕೆ. ಎ. ಚಿಣ್ಣಪ್ಪನವರು ಅಧ್ಯಕ್ಷರ ಕೋರಿಕೆ ಮೇರೆ ರಾಜ್ಯಘಟನಾ ಸಭೆಯ ಕಾರ್ಯಕಲಾಪಗಳು ಮತ್ತು ಕೊಡಗಿನ ಭವಿಷ್ಯತ್ತನ್ನು ಕುರಿತೂ, ಹಿಂದೂ ಮುಸ್ಲಿಮರ ಒಗ್ಗಟ್ಟು, ಮುಸ್ಲಿಮರ ವಿದ್ಯಾಭ್ಯಾಸ, ಆರ್ಥಿಕ ಅಭಿವೃದ್ಧಿ ಮೊದಲಾದ ವಿಚಾರಗಳನ್ನು ಕುರಿತೂ ಭಾಷಣ ಮಾಡಿದರು.

# ಎನ್ ಹೈದರಾಬಾದ್ ಕಲ

## ದ. ಭಾ. ಪ್ರಜೆಗಳ ಸಮಸ್ಯೆ.

ಭಾರ್ಗವತ್ವವು ಬ್ರಿಟಿಷರಿಗೆ ನೊಗದಿಂದ ಮುಕ್ತವಾಯಿತು ಸರದಾರ ಪಲ್ಲಭಭಾಯಿಯವರ ಅತ್ಮೀಯತೆಯು ಔದಾರ್ಯ, ರಾಜಕಾರಣ ಕೌಶಲ್ಯ, ಅಖಂಡ ರಾಷ್ಟ್ರೀಯತೆಗಳ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯವು 'ಪೂರ್ಣ ಪ್ರತ್ರ'ರೀತಿಯಿಂದ ಸುಮಾರು ಆರುನೂರು ಸಂಸ್ಥಾನಿಕರು ಭಾರತ ಮಾತೆಯ ಪ್ರೀತಿಪುತ್ರರಾದರು. ಹೀಗೂ ಲಯವಿಂದ ಕನ್ಯಾಬಾರಿಯ ಏರಿಗೆ ಭಾರತೀಯ ರೆಲ್ಲ ಒಂದು, ಒಂದು ನ ಡಿನ ಮಕ್ಕಳು, ಎಂಬ ಭಾವನೆ ಜಾತಿ ಮತಪಂಥಗಳನ್ನೆಲ್ಲ ಹಿಂದೆ ಹಾಕಿತು. 'ಒಂದು ಗ ಗನವ ಕಾಣ-ತೊಂದೆ ನೆಲವನು ತುಳಿಯಂ ತೊಂದೆ ಧ ನ್ಯವನಣ್ಣಾತೊಂದೆ ನೀರ್ಗುಡಿರು, ಒಂದೆ ಗಳಿಯನ ನುಗ್ಗ ವರಜಾತಿ' ಎಂದೀ ಭಾವನೆಯ ಸೆಳೆವಿಂಚ ಭಾರತೀಯರೆಲ್ಲೆಲ್ಲ ಮಿಂಚತೊಡಗಿತು.

ಆದರೆ ಜಾತೀಯ ಭಾವನೆಯೇ ಸಂಪೂರ್ಣವಾದ, ಪ್ಪಿರ ಪ್ಪ ತಪ್ಪ ಸ್ಪಷ್ಟಿಕೊಂಡ ಮುಸ್ಲಿಂ ಲೀಗು ಭಾರತವನ್ನ-ತ ಯಿನಾಡನ್ನು ಎಚ್ಚೆತಿಸಿದ್ದಲ್ಲದೆ, ಪೂರ್ಣಸ್ವ ಯಮೊಂ ಎ ಮಹಾಪೂರ್ಣಯ ಯಜ್ಞದೆ ಹೈವಾಡಕ್ಕೆಸಿಲುಕಿ ಬ ರತವು ಎಳಸಿಗೆಗೆ ಈ ಕ್ಲೋದಕನ್ನುಂಟುಮಾಡಿತು. ಅದು ಕ ಹಿಳಲನೇ ಇಂದು ಕ ಶ್ಮೀರ ವೈವರ ಬಾ ದಗಳ ನೆರೆಂತ ದೊಂಬಿಗಳು ಕಾಶ್ಮೀ ರದ ಪ್ರಶ್ನೆಯಂತೂ ಏನು ಸಮುದ್ರ ದಾ ಟಿ ಭಯಕ್ಕಾ ಮಂಡಲವ ಸಂದ್ಯಾನ ಸದಿಚ್ಛೆ ಗಳ ರಂಚೆಯಿಂದಿ ಈ ಸ್ವಾವಲಂಬಿ ಯಾಗಿ ತನ್ನ ಪ್ರಶ್ನೆಯ ಪಾಪ ರಕ್ಕೆ ತಾ ನೇ ತೊಡಗಿಸಿಯಾಯಿತು, ಭಾರತ ಒಕ್ಕೂಟ ಸರಕಾರವು ನಿವಿಸ್ಪಾ ಕಾಶ್ಮೀರದ ಕಡಲ ವೈರಿಗಳನ್ನ್ ಹಿಂದೂಡುವಲ್ಲಿರುವುದು. ಅ ಲ್ಲಿಯ ಬಹು ಸಂಖ್ಯಾತರಾದ ಮುಸಲ್ಮಾನ ರೂ, ಭಾರತ ಒಕ್ಕೂಟದಲ್ಲಿ ಸಾರ್ವಜನಿಕ ಗುವ ತಮ್ಮನ್ನ ನಿಜಮನ್ನು ಪ್ರಕಟಿ ಮಾ ಡಿಸ್ತಲ್ಲದೆ, ಜಾತೀಯತೆಯ ವಿಷವನ್ನ್ ಹ ಬ್ಬಿ ಪಾರುಮಾಡಲು ಪಣತಟ್ಟಿ ಪ್ರಯ ತ್ನಪಡ-ತ್ತಲಿದ್ದಾರೆ

ಇತ್ತ ದಕ್ಷಿಣ ಭಾರತ ಲ್ಲಿಯೂ ಎರ ಡು ದೊಡ್ಡ ಸಂಸ್ಥಾನಗಳಲ್ಲಿ ಮೈಸೂರಂ ತಹ ಒಕ್ಕೂಟ ಸೇರಿ ಭಾರತ ಮಹಾಸರ್ಪಕ್ಕೆ ಮಲ್ಲಿಗೆ ಬಳ್ಳಿಯಂತೆ ತು ಇನ್ನುಳಿದು ದು ಹೈದರಾಬಾದು ಮಾತ್ರವೆಯದೊಂದು ಮಹಾಯಜ್ಞಕ್ಕೆಯು ಮೂಯೆಯಂದ ಮುಸ್ಲಿಂಲೀಗು ತಾಯಿನಾಡನ್ನು ತುಂಡುಮಾ ಡಿದ ಪಾಪಕ್ಕೆ ಗುರಿಯಾದಂತೆ, ಈ ಹೈದರಾ ಬಾದವು ಪ ಕಿಸ್ತಾನವ ಯಜ್ಞಕ್ಕೆಯಂ ಪ ಜಾತೀಯತೆಯ ವಿಷದಿಂದ ತುಂಬಿತು ಳುಕ್ಕಿ ದಿನ ದಿನಕ್ಕೂ ಗಂಡಾಂತರದತ್ತ ಶೀ ಘ್ರಗತಿಯಿಂದ ಸಾಗುತ್ತಲಿರುವುದು. ಹೈ ದರಾಬಾದಿನ ಆರು ನೂತ್ರ ಮುಸ್ಲಿಮರಿ ದ್ದುದರಿಂದ ನೂರಕ್ಕೆ ಎಂಬತ್ತರಕ್ಕಿಂತಲೂ ಹೆಚ್ಚು ಪ್ರಮಾಣವಿಲ್ಲಿರುವ ಮುಸ್ಲಿಮರಲ್ಲಿ ದ ಪ್ರಜೆಗಳು 'ನೆನೂಜು' ಮಾಡಲೇಕಾಗಿ ಬಂದಿದೆ.

ಇತ್ತೀಚಾದ ರಜಪಿಯ ರಕ್ಷಣ ಶಕ್ತಿಯನ್ನು, ದಕ್ಷಿಣ ಭಾರತದ ಪ್ರಜೆಗಳ ಪ್ರಜಾಪ್ರಭುತ್ವ ಪ್ರೀತಿಯನ್ನು ನಾಶಮಾಡಲು ಸಾಕಷ್ಟು ಸಮರ್ಥವಿದೆ ಈ ಪ್ರಜಾಪ್ರಭುತ್ವ ಪ್ರೀತಿಯು ನುಂಗಾರು ಮಳೆಗೆ ಎಂತಹ ರಾಕ್ಷಸೀ ಬೆಂಕಿಯೂ ಆರಿಹೋಗದೆ ಇರದು. ಒಬ್ಬ ರಜಪಿಯ ಅಥವಾ ಒಂದು ಇತ್ತೀಚಾದದ ದುಃಶಕ್ತಿಯ ಬೆಂಕಿಯು ಸಂಜೇನು?

ಯಾವುದಕ್ಕಾದರೂ ಪರಿಪಕ್ವಕಾಲ ಬರಬೇಕು. ಹೈದರಾಬಾದಿಗೆ ಈಗ ಆ ಕಾಲ ಒಂದಿದೆಯೆಂದು ಎನಿಸುತ್ತದೆ. ಶಿಶುಪಾಲ ರಜಪಿಯ ನೂರು ಅಪಾಚ್ಯಗಳೂ ಮುಗಿದಿವೆ. ಪ್ರಜೆಗಳ ದುಃಖ ಸಂಕಟಗಳು ಸಹನಾತೀತವಾಗಿವೆ. ಇಷ್ಟೇ ಅಲ್ಲದೆ ಈ ರಕ್ಕಸ ಬೇಕಿಯನ ಲಿಗೆ, ಒಕ್ಕೂಟದ ಗಡಿಗಳನ್ನು ದಟ್ಟ ಚಿತ್ರಲಿದೆ. ಈ ನಂಮೇಧದ ಸೂರ್ಯಾಹುತಿಯು ಸಮಯ ಸಮೀಪಿಸುತ್ತಲಿದ

ಇಂತಹ ಭಯಂಕರ ಗಂಡಾಂತರ ಪರಿಸ್ಥಿತಿ ಹೈದರಾಬಾದ ಸಂಸ್ಥಾನದ ತಂಬ ಹುಬ್ಬಿರುವಾಗ, ಸುತ್ತಮುತ್ತಲಿನ ನಾಲ್ಕೂ (ಮಧ್ಯಪ್ರಾಂತ ಮದ್ರಾಸ್, ಮೈಸೂರು, ಮುಂಬಯಿ) ಪ್ರಾಂತರಗಳ ಜನರು ತಮ್ಮ ತಮ್ಮ ಕೈಲಾದ ಆಳಲು ನೇ ವೆಯನ್ನು ಈ ಸಂಸ್ಥಾನೀ ಜನತೆಗೆ ಸಲ್ಲಿಸುವುದು ನಿಜವಾದ ಮಾನವತ್ವವ ಕಾರು ಪಾ ಗಿದೆ

ಈ ರೀತಿಯಾಗಿ ಹೈದರಾಬಾದಿನ ರಾಜಕೀಯ ವಿಕ್ಷಿಪ್ತ, ದಕ್ಷಿಣ ಭಾರತದ ಸಮಸ್ತ ಪ್ರಜೆಗಳಿಗೂ ಒಂದು ಸಮಸ್ಯೆಯಾಗಿದೆ. ಇದನ್ನು ಬಿಡಿಸಿದ ಹೊರತು, ಈ ಸಮಸ್ಯೆಯ ಪರಿಹಾರವಾಗದೊರತು, ದಕ್ಷಿಣ ಭಾರತದ ಪ್ರಜೆಗಳು ಸುಖಸಮಾಧಾನಗಳಿಂದ ಜೀವಿಸುವಂತಿಲ್ಲ. ಅವರ ದೃನಂದಿನ ಜೀವನ ಕ್ರಮಕ್ಕೂ ಈ ಬಿಕ್ಕಟ್ಟು ನಿಂದ ಆಡೆತಡೆಯಾಗಿ, ಗಂಡಾಂತರವು ದಿನ ದಿನಕ್ಕೂ ಸಮೀಪಿಸುತ್ತಲಿದೆ. ಈ ಪ್ರಕರಣದಲ್ಲಿ, ದಕ್ಷಿಣ ಭಾರತದ ಪ್ರಜೆಗಳು ಔದಾರೀನ್ಯ ಮಾಡುವುದು ಪ್ರಾಣಘಾತಕ ವಿಷಯವೇ ಆಗಿದೆ. ಆದ್ದರಿಂದ ಸಮಸ್ತ ಪ್ರಜೆಗಳು, ಒಕ್ಕೂಟ ಸರಕಾರದ ಸಲಹೆ ಸೂಚನೆಗಳಂತೆ ಕರ್ತವ್ಯ ಪರಾಯಣರಾಗುವುದೇ ಏಕವೇವ ಉಪಾಯವಾಗಿರುವುದಂದ ಸ್ವತಂತ್ರ ಪ್ರಜಾ ರಾಜ್ಯದ ಪ್ರಜೆಗಳಂತೆ ಹೊಸೆಗಾರಿಕೆಯನ್ನೆತಿಸಿ ದಕ್ಷಿಣ ಭಾರತದ ಸಮಸ್ತ ಪ್ರಜೆಗಳು ಈ ಕಾರ್ಯದಲ್ಲಿ ಸರ್ವಸಹಕಾರವನ್ನು ನೀಡಿ, ಅಸಹಾಯಕರಾಗಿ ನನ್ಮ ಕಡೆಗೆ ದೀನವದನದಿಂದ ನೋಡುತ್ತಿರುವ ಹೈದರಾಬಾದಪ್ರಜೆಗಳ ಸಂಕಟಪರಿಹಾರ ಮಾಡುವುದು ಮುಖ್ಯ ಕರ್ತವ್ಯವಾಗಿದೆ ಈ ಸಮಸ್ಯೆಗೆ ಇದೊಂದೇ ದಾರಿಯಾಗಿದೆಯೆಂದು ಖ ಚಿತವಾಗಿ ಹೇಳಬಹುದು.

'ಜೈ ಹಿಂದ್'

# ಪಾ ಲೆಸ್ತೀನ

## ಅಂತರಾಷ್ಟ್ರೀಯ ಸ್ವಾರ್ಥ ರಾಜಕೀಯ ರಂಗ.

ಒಂದು ಮನೆಗಾಗಲಿ ಬಡೆವೆಗಾಗಲಿ ಬೆಕಿಯು ಹತ್ತಿದ ಗ್ಗೆ, ಆ ಬೆಂಕಿಯು ಎತ್ತ ಕಡೆಗೆ ಹಬ್ಬುವುದಿದೆಯೆಂಬುದನ್ನು ಹೇಳುವುದೇ ಕಠಿಣವಾ ಗಿದೆ. ಗಾಳಿಯು ಎತ್ತ ಬೀಸುವುದೋ ಅತ್ತಕಡೆಗೆ ಅದು ಪಬ್ಬುವುದು. ಈ ಆಸಿಕ್ಷಿತ ವಾತಾವರಣದಲ್ಲಿ ಬೆಂಕಿಯನ್ನು ಆರಿಸ ಹೊರಟವರ ಇಲ್ಲವೆ ಅದನ್ನ ಹಬ್ಬಗೊಡಬಾರದೆಂದು ಯತ್ನಿಸುವವರು ನಾಲ್ಕಾ ದಿಕ್ಕುಗಳಲ್ಲಿ ಬಗ್ಗ ದಕ್ಷಿಣ ನಹಿಸ ಬೇಕಾಗುತ್ತದೆ ಅದೇ ರೀತಿಗೆ ಇಂದಿನ ಜಗತ್ತಿನ ರಾಜಕಾರಣದ ಧೋರಣವು ಪರಿಣಮಿಸಿದೆ.

ಪಾಲಿಸ್ತಾನ ಯುದ್ಧ ಧೋರಣವು ಇಂದು ಎಲ್ಲಿಗೆ ಮುಟ್ಟೀತು ಮತ್ತು ಯಾವ ಯಾವ ದೇಶಗಳನ್ನು ಒಳಗೆ ಕಾಕಿ ಕೊಂಡೀತು ಎಂಬುದನ್ನು ಹೇಳುವುದು ಕಠಿಣವಾಗಿದೆ. ಆಸ್ಟೇ ಏಕೆ ಜಗತ್ತಿನ ಯಾವುದೇ ಭಾಗದಲ್ಲಿ ಇಂದು ತಂಟೆಯೆದ್ದರೂ ಆ ತಂಟೆಯು ಅಲ್ಲಿಯ ಸ್ಥಾನಿಕ ವಿಷಯವಾಗಿರುವುದು ಸಾಧ್ಯವೇ ಇಲ್ಲ. ಒಂದೊಂದು ಪ್ರಶ್ನೆಕ್ಕೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಕೂಡಿ ಅದನ್ನು ಜಗತ್ತಿನ ಪ್ರಶ್ನೆಯನ್ನು ಮಾಡಿ ಬಿಡುವುದು ಸಾಮಾನ್ಯ ಮಾತಾಗಿ ಕುಳಿತಿದೆ. ಏಕೆಂದರೆ ಈ ಪ್ರಬಲ ರಾಷ್ಟ್ರಗಳ ಸ್ವಾರ್ಥವು ಈ ರೀತಿಯಾಗಿ ಜಗತ್ತನ್ನು ಸುತ್ತು ಹಾಕಿಬಿಟ್ಟಿದೆ. ತಮ್ಮ ಸ್ವಾರ್ಥವನ್ನು ಸಾಧಿಸಲೋಸುಗ ತಮ್ಮ ಪ್ರತಿಪಕ್ಷಗಳಾದ ರಾಷ್ಟ್ರಗಳು ಬಲಗೆಳ್ಳಬಾರದೆಂದು ಇವರ ಅವ್ಯಾಹತವಾದ ಇಚ್ಛೆಯಾಗಿದೆ

ಮೂರನೆಯ ಮಹಾ ಯುದ್ಧವಾಗುವುದಕ್ಕೆ ಪಾಲಿಸ್ತಾನದಲ್ಲಿಯ ಚಟುವಟಿಕೆಗಳು ಹಾ ಹಾ ಅನ್ನುವದರೊಳಗೆ ಶಮಾಯ ಮಾಡಬಲ್ಲವು ಎಂದು ಹೇಳದುದಕ್ಕೆ ಇಂದಿನ ಜಾಗತಿಕ ಪರಿಸ್ಥಿತಿಯೇ ಕಾರಣವಾಗಿದೆ. ಆಲ್ಲಿಯ ಯುದ್ಧಕ್ಕೆ ಬಾಬರು ತ್ತಿ ಹೇಗೆ ಅಂತರ ರಾಷ್ಟ್ರೀಯ ಬಣ್ಣವು ಬರುತ್ತಿದೆಯೆಂಬದನ್ನು ಸಹಜವಾಗಿ ಬರಿಗಣ್ಣಿನಿಂದ ಕಾಣಬಹುದು

ಯೆಹೂದಿಗಳ ಪಕ್ಷಪಾತಿಗಳಾಗಿ ಅಮೇರಿಕನ್ನರು ಮತ್ತು ರಷಿಯನ್ನರು ಸತೀರಿಸುತ್ತಿದ್ದಾರೆ ಬ್ರಿಟಿಶರು ಅರಬರ ಬಗ್ಗೆ ಆತ್ಮೀಯತೆಯನ್ನು ತೋರಿಸುತ್ತಿದ್ದಾರೆ. ಅಮೇರಿಕನ್ನರು ಮತ್ತು ಬ್ರಿಟಿಶರು ಈ ಮೂತಿನಲ್ಲಿ ಮತ ಬೇಧವನ್ನು ಇಟ್ಟು ಕೊಂಡಿರುವುದು ಜಗತ್ತಿಗೆ ಆರ್ಶ್ಚರ್ಯವನ್ನುಂಟು ಮಾಡದೆ ಇರದು ಮತ್ತು ಆ ಮೇರಿಕೆ ರಷಿಯಾ ಇವು ಯೆಹೂದಿಗಳಿಗೆ ಸಹಾಯ ಮಾಡಬೇಕೆಂಬ ಬಗ್ಗೆ ಒಂದೇ ಅಭಿಪ್ರಾಯವನ್ನು ತಳೆದಿರುವುದು ಆಶ್ಚರ್ಯ ಸೋಜಿಗದ ಮಾತಾಗಿದೆ

ಇಸ್ರಾಯಿಲ (ಯೆಹೂದಿ) ಸರಕಾರವನ್ನು ರಷಿಯಾವು ಮಾನ್ಯಮಾಡಿದ್ದರ ಕಾರಣದಿಂದ ಪರಾಣ್ರು, ಹಿಂದುಸ್ಥಾನದ ವಾಯವ್ಯ ಸರಹದ್ದಿಗೆ (ಆಗ ಪಾಕಿಸ್ತಾನ

.ದ) ಹತ್ತಿರ ರತಿಯೂದ ಗಡಿಯಲ್ಲಿ ದಾಳಿ ಮಾಡಿದ್ದಾರೆಂಬ ಸುದ್ದಿಯು ಪ್ರಕಟವಾಗಿದೆ. ಈ ಸೊತ್ತನ್ನು ಪಾಕಿಸ್ತಾನ ಸರಕಾರದ ವಿದೇಶ ಮುಂತ್ರಿಯು ನಿರಾಕರಿಸಿದ್ದರೂ ಇಂತಹ ಘಟನೆಗಳು ನಡೆದರೆ ಅವರಲ್ಲಿ ಆಶ್ಚರ್ಯವಿದ ಮಾತೇನೂ ಕಾಣಲಾರದು.

ಹತ್ತಿದ ಬೆಂಕಿಯಲ್ಲಿ ಚಿಮ್ಮಾಡಿ ಎಣ್ಣೆ ಹಾಕುವ ಇನ್ನೊಂದು ಘಟನೆಯು ನಡೆಯಿತ್ತ ಪಾಲಿಸ್ತಾನದಲ್ಲಿ ಸಂಧಾನ ನಡೆಸಲು ಹೋದ ಅಮೇರಿಕೆಯ ಪ್ರತಿನಿಧಿ ಶ್ರೀ ಧಾನುಸ್ ವಾಸನ್ ಇವರನ್ನು ಎಂ ಬರು ಗುಂಡಿಕ್ಕಿ ಕೊಂದಿದ್ದಾರೆ.

ಈ ಸಂದರ್ಭಗಳನ್ನೆಲ್ಲ ನೋಡಿದರೆ ಜಗತ್ಪ್ರಸ್ಥೇ ಈ ಪ್ರಬಲ ರಾಷ್ಟ್ರಗಳು ಪುನಃ ಯುದ್ಧದಲ್ಲಿ ದೂಡ ಪುವಕ್ಕೆ ಹಿಂದೆ ಮುಂದೆ ನೋಡುವಂತೆ ತೋರುವುದಿಲ್ಲವೆಂಬ ಹೇಳಬಹುದು ಪಾಲಿಸ್ತಾನದಲ್ಲಿ ಯೆ ದೂರ ಸುತ್ತ ಅರಬ್ಬರಲ್ಲಿ ಹುಟ್ಟಿ ತಂಬಿಯ ಇಡೀ ಜಗತ್ತನ್ನು ವ್ಯಾಪಿಸುವಂತೆ ಇವರು ನೀಲಿಯಎತ್ತಿರ ವುದು ಅರ ಅಕ್ಷಮ್ಯ ಕೆಲಸವಾಗಿದ ಮತ್ತು ಇವರೆ ಲ್ಲರ ಕೈನ್ಯೂಮೃಪಯ ಗಳ ಸ್ಪಷ್ಟ ಲ್ಯಾತೆಗೆ ಎಡೆ ಆಗಿದ.

ಪರಸ್ಪರರಲ್ಲಿ ಹುಟ್ಟಿದ ತಂಟೆಯನ್ನು ಬಗೆಹರಿಸುವುದು ಇವರೆಲ್ಲರ ಅತ್ಯಕರ್ತವ್ಯ ವಾಗಿತ್ತು ಆದರೆ ಹಾಗೆ ಮಾಡದೆ ಯೊಳಗೈತೆಯು ಇವರಲ್ಲಿಯೇ ಮೊಳಲು ಇರುವುದಿಲ್ಲ ಅಂತಹ ಕಲಸಕ್ಕೆ ನಿಃ ಸ್ವಾರ್ಥ ಮತ್ತು ಶಂಕಿ ಸಮೊಧಾನಗಳನ್ನು ಹುಟ್ಟಿಸ ವಚಿತ ರತೆಯುಳ್ಳ ಜನರು ಬೇಕಾಗುತ್ತಾರೆ. ಈ ಪ್ರಬಲ ರಾಷ್ಟ್ರ ಗಳು ತಾವೂ ಶಾಂತಿ ಸಮೂಧಾನಗಳಿಗನ್ನು ಹಡಪ ವಂತಿಲ್ಲ ಮತ್ತು ಎರಡನಯವರಿ ಗೆ ಉಪದೇಶಗಳನ್ನು ಕೊಡುವುದಕ್ಕೆ ಮೊದಲೇ ತಮ್ಮಲ್ಲಿ ಸಾಮರ್ಥ್ಯವಿಲ್ಲ.

ತಮ್ಮ ಪ್ರತಿನಿಧಿಯನ್ನು ಕೊಂದದ್ದ ರಿಂದಾಗಿ ತಮೇರಿಕೆಯ ವಿಶ್ವವೇರಿ ವಂದೆ ಬಾಡಿ ಇರಲಾರದು. ಆಗ ಅ ದು ಸ್ವಾಭಾವಿಕವಾ ಗಿ ಯೆ ಹೂವಿಗಳೇ ಸಹಾಯ ಮಾಡುವುವು. ಅಪರಿಂದ ಬ್ರಿಟನ್ನ ಅಮೇರಿಕೆಗಳಲ್ಲಿ ತಿಕ್ಕಾಟ ಬರುವು ದೆಂದು ತೋರುತ್ತದೆ ಆದರೆ ನಿಜವಾಗಿ ರಣಾಂಗದ ನೇಲೆ ಇವರು ಬಂದಾಗ ಈ ಮೊತ್ತ ಆಗುವುದು ಕಠಿಣವೆಂದು ಹೇ ಳಬೇಕಾಗಿ ವುದು. ಇಷ್ಟ ಸಣ್ಣ ಪೂತಿ ಗಾಗಿ ಅಮೇರಿಕೆಯೊಡನಿನ್ನ ಹಿತ ಸಂಬಂ ಧವನ್ನ ಬ್ರಿಟನು ಕಡಿಸಿಕೊಂಡಿ ತೆಂದು ಹೇಳಲು ಬರಲಾರದು.

ರಷಿಯೂಪೂ ಯೆಹೂದಿಗಳಿಗೆ ಸಹಾಯ ಸೂತಪೇಕಾದುದರಿಂದ ಆ ಪಾತ್ರವು ಹೀಗೆ ಕುಣಿಯುವುದೋ ನೋಡಬೇಕಾಗಿದೆ ತಮ್ಮ ತಮ್ಮಲ್ಲಿ ಆಗದ ಇಬ್ಬರು ನಾಟಕದಲ್ಲಿ ಮಿತ್ರರಂತೆ ನಟಿಸಿ ಪಾಡಬೆ ಕಾದಾಗ ಅವರಲ್ಲಿ ಕಾಣಾನ ಮನೋನೈ ತ್ಯಿಯ ರಶಿಯಾ ಅಮೇರಿಕೆಗಳಲ್ಲಿ ಕಡು ಬರಬೇಕಾಗಿದೆ

ಪ್ರಬಲ ರಾಷ್ಟ್ರಗಳ ಬೆಂಬಲದಿಂದ ಯೆಹೂದಿಗಳು ಬಲವಂತರಾಗಬಹುದಾಗಿ ತೋರುತ್ತದೆ. ಅರಬರು ಇಂದು ಸ್ವಲ್ಪ ಮುನ್ನುಗುತ್ತಿದ್ದರೂ ನಾಳೆ ಇವೆಲ್ಲ ರಾ ಷ್ಟ್ರ ರಾಷ್ಟ್ರಗಳು ಅಲ್ಲಿ ಬೀಡುಬಿಟ್ಟವೆಂದರೆ ಅವರ ಬಲವು ಕುಗ್ಗದೆ ಇರಲಾರದು. ಬ್ರಿಟನ್ನಿನ ಮೇಲೆ ಅವರು ಬಹಳ ಅವ ಲಂಬಿಸಿ ಕೃಯೋಜನವಿಲ್ಲ. ಆ ಪಾತ್ರ ವು ಗಟ್ಟಿ ಮುಟ್ಟಯೂದುವಲ್ಲ. ಲಂಡೀ ಕೆಯು ಅವನ್ನು ಸಹಜವಾಗಿ ಎಲೆಂಡಿದು ತನ್ನ ಕಡೆಗೆ ತಿಗೆದುಕೊಳ್ಳದ ಇರಲಾರ ದು. ಅವರ ಸೂಚ್ಯಗಳು ಅಮೇರಿಕೆಯ ಕೃಯ ಲ್ಲಿಯೇ ಇವೆ

ಹೀಗ ಬಡೆದ ಟವನ್ನು ಬೆಳೆಸುವುದ ಕ್ಕಿಂತ ತವನ್ನು ಬಗಿಸಿದ್ದರೆ ನೆಚ್ಚಗಾಗಿ ತ್ತಿದ್ದಿಲ್ಲವೆ ? ಎಂಬುದೊಂದು ಸ್ಪಷ್ಟೆಯು ಮಟ್ಟಬ್ಬದ.

ಇನ್ನೆಷ್ಟಿರ ಕ್ಷನೆ ಹಾ ಳಾದರೆ ಕರಕಟ್ಟುವುದಕ್ಕೆ ಸ್ಥಳವಾಗುವು ದೆಂಬವರಿಗೂ ಕಡಿಮೆಯಿಲ್ಲ ಅದೇ ಮೇರೆಗೆ ಈ ಪ್ರಬಲ ರಾಷ್ಟ್ರಗಳು ಇಂದೂ ಆಲೋಚನೆ ಮಾಡುತ್ತವೆ. ಅರಬ ರಾ ಷ್ಟ್ರಗಳು ಈ ಚ್ಚಾಲೆಯಲ್ಲಿ ಸಿಕ್ಕು ಅನಾ ಯಾಸವಾಗಿ ಹೆಣ್ಣಾದರೆ, ಅದು ಅವರಿಗೆ ಬೇಕೇ ಆಗಿದ್ದು ಮುಖ್ಯವಾಗಿ ಈ ಭಾಗ ಕ್ಕೆ ಸುಹಕ್ಷ ಬಂದಿರವುದು ಕಲ್ಲೆಣ್ಣೆಯ ಕಾರಣದಿಂದ. ಅದನ್ನು ಹೇಗಾಗದರೂ ಮಾಡಿ ತಮ್ಮ ಬಾಯಲ್ಲಿ ಹಾಕಿಕೊಂಡು ಬಿಡೋಣ ಎಂದು ಈ ರಾಷ್ಟ್ರಗಳು ಆ ಲೋಚಿಸಿಲು ಸಾಕು.

'ಜೈ ಹಿಂದ್'

---

# ಗೋಡ್ಸೆಯವರ ವಿಚಾರಣೆ.

ಮಹತ್ಮಾಗಂಧಿಯವರ ಕೊಲೆಯ ಆರೋಪಣೆಗೆ ನಧೂರಾಂ ವಿನಾಯಕ ಗೋಡ್ಸೆ ಮೊದಲು ಮಾಡಿದ ಆರೋಪಣೆಗಳಲ್ಲಿ ಬ್ಯಾ. ನಾವ ರಕರ ಮೊದಲಾದವರ ವಿಚ್ಚಯ ವಿಚಾರಣೆ ಹೊಸದಿಲ್ಲಿಯ ಚಕಿಹಾಳ ಸಸ್ಪಿನ್ಸರ್ ಪುಂಟೂಪಿಸಲ್ಲಿ ಮೇ ತಾ ೨೭ನೇ ದಿನ ಪ್ರಾರಂಭವಾಯಿತು ಕಾನಪುರದಲ್ಲಿ ಇತ್ತೀಚೆಗೆ ನಡೆದ ಜತ್ತಂಗಿನ್ನ ಮೀ ಅತ್ಯ ಜ್ಞಾಣ ಇರುವ ವಿಶೇಷ ನ್ಯಾಯಾಧೀಶರೆಂದ ತ ಖಿಚ್ಚಯನ್ನು ನಡೆಸಿಸಿದರು. ಸರ ಕಾರದ ಪರವಾಗಿ ಪ ಬಂಬಯಿಯ ಎಸ್. ಪ್ಲೀಡರ್, ಎಂ. ಜಿ ವ್ಯವಹಾರಕರ ಪಂಜಾಬದ ರಾಯಬಹಾದ್ದೂರ ಜ್ಞಾ ಲಪ್ರಸಾದ, ದಿಲ್ಲಿಯ ಪಂಡಿತ ರಾಕೊರ ದ ಪ ಇರುವ ಸಹಾ ಯ ಮಾಡುತಿದ್ದಾರೆ. ಮುಂಬಯಿಯ ಡೆ. ಪೊಲೀಸ ಕವಿ.ಪರಚ ರಂದ ಜೆ. ಸಿ. ನಗರವಾಲಾ ಇವರೂ ಕೋರ್ಟಿನಲ್ಲಿ ಉಪಸ್ಥಿತರಾಗಿರುವರು. ಆರೋಪಿಗಳ ಪರವಾಗಿ ಪುಣೆಯ ಶ್ರೀ ಎಸ್ ಬಿ. ಭೋಪಟಕರ್, ಪಿ. ಬ್ಯಾನರ್ಜಿ ಜಸ್ಟಿನ ದ ಸಮೆಹರ್, ಗಣಪತರಾಯ ಇನ್ನಾಮದಾರ ಇವರು ವಕೀಲಿ ನಡೆಸು ವರು ಸರಕಾರವ ಪರವಾಗಿ ೨೦೦ ಸಾ ಕ್ಷಿದಾರರಿರುವರು. ವಿಚಾರಣೆ ಜೂನ್ ೧೪ಕ್ಕೆ ಮುಂದೂಹುಕಲ್ಪಟ್ಟಿದ್ದರೂ ಇನೇ ತಾ ರೀಕಿಗೆ ಅಲ್ಪಾವಧಿಯ ನರಿಗೆ ಸೇರಿ ಕೆಲ ಔಪಚಾರಿಕ ಪ್ರಶ್ನೆಗಳ ವಿಚಾರ ಪೂಡ ಲಾಗಿದೆ. ಮುಂಬೈ ಸುರಕ್ಷತತೆ ಕಾಯ ದೆಯನ್ವಯ. ಈ ನ್ಯಾಯಾಲಯವನ್ನು ಸ್ಥಾಪಿಸಿದೆ.

### ಕೆಂಪುಕೋಟೆಯಲ್ಲಿ ಆರೋಪಿಗಳು

ತಾ. ೨೭ ಮುಂಜಾನೆ ಹತ್ತು ಹೊಡೆ ಯಲು ಕೆಲ ನಿಮಿಷ ಇರುವಾಗ ಆರೋಪಿ ಗಳನ್ನು ನ್ಯಾಯಾಲಯಕ್ಕೆ ತರಲಾಯಿತು. ಕೆಂಪು ಕೋಟೆಗೆ ಬರುವ ಎಲ್ಲ ದಾರಿಗಳಲ್ಲಿ ಪೊಲೀಸರ ಬಂಪೋಬಸ್ತು ಈಡಿ. ನ್ಯಾ ಯಾಲಯದ ಸುತ್ತಲೂ ಮುಳ್ಳಿನ ತಂತಿ ಬೇಲಿಯನ್ನು ಕಟ್ಟಲಾಗಿದ್ದು ಸಶಸ್ತ್ರ ಪೋಲೀಸರು ಕಾವಲು ಮಾಡುತಿರುವರು. ಒಳಗೆ ಬರುವವರನ್ನೆಲ್ಲ ತಪಾಸ ಮಾಡಿಬಿ ಡಲಾಗುತಿದೆ. ಪ್ರೇಕ್ಷಕರಾರಿಗೂ ಪ್ರ ವೇಶವಿಲ್ಲ ೧೨೦ ಜನ ಪತ್ರಿಕಾ ಪ್ರತಿನಿ ಧಿಗಳಿಗೆ ಫೋಟೋ ಗ್ರಾಫರಿಗೂ ಪ್ರ ವೇಶವಿಸ್ತ ನ್ಯಾಯಾಧೀಶರ ಅಪ್ಪಣೆ ಯಿಂ ಸ್ಥಾಟೋಗಳನ್ನು ತೆಗೆಯಲು ಯಿಂ ಅಗ ನ್ಯಾಯಾಲಯವನ್ನೆಲ್ಲ ವಿಮೇ ಕ್ಷಿಸಿದ ಪ್ರಕ ಟಿಕವಾಗಿತ್ತು.

ಆರೋಪಿಗಳಲ್ಲಿ ಎಲ್ಲಕ್ಕೂ ಮೊದಲು ನಧೂರಾಂ ಗೋಡ್ಸೆಯವರು ಬಂದು ಕಟಕಟೆಯಲ್ಲಿ ಕುಳಿತರು. ಅರ್ಧತೋ ಳಿನ ಶರ್ಟು ಹಾಕಿದ್ದರು ಆಸ್ಟೆಂದು ದಪ್ಪನ್ನ ಶರೀರವಲ್ಲ. ಇವರ ಹಿಂದೆ ನಾ ರಾಯಣ ದತ್ತಾತ್ರೆಯ ಆಪಟೆ ಅವರ ತ ರುವಾಯ ವಿಷ್ಣುರಾಂವಂಕಣ್ಣ ಕರಕರೆ, ದಿ ಗಂಬರ ಬಾಮಚಂದ್ರ ಬಡಗೆ, ಮದನಲಾ ಲ್, ಗೊ ಪಾಲ ವಿನಾಯಕ ಗೋಡಸೆ, ಶಂ ಕರ ಕಿಷ್ಟಯ್ಯ ದಾತ್ತಾ ವಿನಾಯಕ ದಾಮೋ ದರ ಸಾವರಕರ ಮತ್ತು ಡಿ. ಎಸ್. ಪರ ಚುರೆ ಹೀಗೆ ಕ್ರಮವಾಗಿ ಕಳಿತುಕೊಂ ಡರು. ಬ್ಯಾ ನಾವರಕರರು ಪ್ರಕೃತಿಯು ಅಸ್ವಸ್ಥವಿದ್ದುದರಿಂದ ಜನರಿಗೆ ಮತ್ತನ್ನ ಗಾದಿಯ ಆಸನವನ್ನು ಕೊಡಲಾಗಿದೆ ಇವರೆಲ್ಲರ ವೇಲೆ ಕೊಲೆ, ಕೊಲೆ ಮಾಡ ಲು ಒಳಸಂಚು ಮಾಡಿದ್ದು, ಪ್ರೋತ್ಸಾಹ ಕೊಟ್ಟದ್ದು, ಕಾನೂನಿಗೆ ವಿರುದ್ಧವಾಗಿ ಶ ಸ್ತ್ರಾಸ್ತ್ರ ಯಾಗು ಸ್ಫೋಟಕ ದ್ರವ್ಯಗಳನ್ನು ಇಟ್ಟು ಕೊಂಡದ್ದರ ಆರೋಪಗಳವೆ.

ಈ ಆಪಾದನೆಗಳ ಬಗ್ಗೆ ಎರಡು ಗಂ ಟೆಗಳ ವರೆಗೆ ವಿಚಾರಣೆ ನಡೆದು ೧೫ಕ್ಕೆ ಕೋರ್ಟ ಮುಂದರಿಯಿತು.

### ಆರೋಪಿಗಳಾರು ?

**೧ ನಧೂರಾಂ ವಿನಾಯಕ ಗೋಡ್ಸೆ.**

ಮಹಾತ್ಮರ ಕೊಲೆಯ ಆರೋಪವು ೪ ನಧೂರಾಂ ಗೋಡಸೆ ಇವರು ಕೆಲ ಸಮಯದ ವರೆಗೆ ಹೊಲಿಗೆ ಕೆಲಸ ಮಾಡು ತ್ತಿದ್ದರು ೪೦ ವಯಸ್ಸು ೩೬. ಬ್ಯಾ. ನಾವ ರಕರ ಪರಿಚಯವಾದನಂತರ ಅವರ ಜಾ ತಿಗ ಕಾರ್ಯದರ್ಶಿಗಳಾಗಿ ದೇಶದಲ್ಲೆಲ್ಲ ಸಂ ಚರಿಸಿದರು. ರಾಷ್ಟ್ರೀಯ ಸ್ವಯಂ ಸೇವ ಕ ಸಂಘದ ಸದಸ್ಯರು. 'ಅಗ್ರಣಿ' ಎಂಬ ಮರಾಠಿ ಪತ್ರಿಕೆ ತೆಗೆದಿದ್ದರು. ಅದು ನಿಂತಕಡಲೆ 'ಹಿಂದು ರಾಷ್ಟ್ರ' ಎಂಬ ಮ ತ್ತೊಂದು ಪತ್ರಿಕೆಯ ಸಂಪಾದಕರಾದರು

ಜನವರಿ ೩೦ಕ್ಕೆ ಬಿರ್ಲಾ ಭವನದಲ್ಲಿ ಮ ಹಾತ್ಮ ಗಾಂಧಿಯವರಿಗೆ ಪಿಸ್ತೂಲಿನಿಂದ ಹೊರಬಿದ್ದ ಮೂರು ಗುಂಡುಗಳು ತಾಕಿದ ಕೂಡಲೆ ಆ ಗುಂಡುಗಳನ್ನು ಹಾಂಸಿದ್ದ ಕ್ಕಾಗಿ ಇವರನ್ನು ಸೆರೆಹಿಡಿಯಲಾಯಿತು.

**೨. ನಾರಾಯಣ ದತ್ತಾತ್ರೇಯ ಆಪ್ಟೆ.**

ವಯಸ್ಸು ೩೫. ಬಿ. ಎಸ್. ಸಿ. ಇ ದ್ದು ಆಹಮ್ಮದನಗರದಲ್ಲಿ ಉಪಾಧ್ಯಾಯ ರಾಗಿದ್ದರು. ಅಲ್ಲಿಯೆ ಹಿಂದಿ ರೈಫಲ್ ಕ್ಲಬ್ಬನ್ನೂ ಸ್ಥಾಪಿಸಿದ್ದರು.

**೩. ವಿಷ್ಣು ದಿಗಂಬರ ಕರಕರೆ.**

ವಯಸ್ಸು ೩೫. ಅಹಮ್ಮದನಗರದಲ್ಲಿ ಯ ಒಂದು ಹೊಟೆಲ್ ಒಡೆಯರು; ನಟ ರೂ ಆಗಿರುವರು.

**೪ ದಿಗಂಬರ ರಾಮಚಂದ್ರ ಬಡಗೆ.**

ವಯಸ್ಸು ೩೫. ಬ್ಯಾಹ್ಮಣರು. ಪು ಣೆಯಲ್ಲ ಶಸ್ತ್ರಾಸ್ತ್ರಗಳ ಅಂಗಡಿ ಒಡೆ ಯರು.

**೫. ಮದನಲಾಲ ಕಾಶ್ಮೀರಿಲಾಲ ಸಹವಾ.**

ವಯಸ್ಸು ೩೫. ಪಂಜಾಬದಿ ನಿರಾಶ್ರಿ ತರೆಂದು ವಿಸಾಪೂರ ತಿಬಿರದಲ್ಲಿದ್ದರು. ಮಹಾತ್ಮರ ಪ್ರಾರ್ಥನಸಭೆಯಲ್ಲಿ ಬಾಂಬು ಸ್ಫೋಟವಾದಾಗ ಇವರ ಮೃಡತಿನೂಡ ಲಂಗಿ ಕೈಬಾಂಬು. ಇವರ ಕೈಯಲ್ಲಿ ಸಿಕ್ಕಿ ತೆಂದು ಹೇಳಲಬಗುತ್ತದೆ

**೬ ಶಂಕರ ಕಿಷ್ಟಯ್ಯಾ**

ಬಡಗೆಯವರ ಸೇವಕರೆಂದು ಹೇಳ ಲಾಗುತ್ತದೆ, ರಿಕ್ಷಾ ಎಳೆಯುವವರು.

**೭ ಗೋಪಾಳ ವಿನಾಯಕ ಗೋಡಸೆ.**

ವಯಸ್ಸು ೩೨ ನಧೂರಾಂ ಗೋಡ ಸೆಯ ತಮ್ಮ ಕಳೆದ ಮಹಾಯುದ್ಧದಲ್ಲಿ ಸೈನ್ಯದಲ್ಲಿ ಸೇರಿದ್ದರು ಇನ್ನೂ ಬ್ರಹ್ಮ ಚಾರಿ.

**೮. ವಿನಾಯಕ ದಾಮೋದರ ಸಾವರಕರ.**

ವಯಸ್ಸು ೬೫. ಬ್ರಿಟಿಷ್ ಆಳಿಕೆಯ ವಿರುದ್ಧ ಹೋರಾಡಿ ಅಂಡಮಾನದಲ್ಲಿ ೧೪ ವರ್ಷ ತಿಕ್ಷ ಜನ್ಮಭೋಗಿಸಿ ಬಂದವರು. ಆ ನಂತರ ರತ್ನಾಗಿರಿಯಲ್ಲಿ ಸ್ಥಾನಬದ್ಧತೆ ಯಲ್ಲಿದ್ದರು. ಮೊದಲನೆಯ ಸಲ ಕಾಂ ಗ್ರೆಸ್ ಮಂತ್ರಿ ಮಂಡಲ ಸ್ಥಾಪಿತವಾದ ಕೂಡಲೆ ಬಿಡುಗಡೆ ಮಾಡಲ್ಪಟ್ಟರು. ನಂ ತರ ಹಿಂದೂಮಹಾಸಭೆ ಸೇರಿದರು.

**೯. ದತ್ತಾತ್ರೇಯ ಸದಾಶಿವ ಪರಚೂರಿ**

ಇವರು ಗ್ವಾಲೇರದಲ್ಲಿ ಡಾಕ್ಟರರು. ವಯಸ್ಸು ೪೫. ಸಾವರಕರ ಮತ್ತು ಗೋ ಡಸೆಯವರ ಆಪ್ತಮಿತ್ರರು.

'ಕರ್ನವೀರ.'

---

## ಪ್ರ ಕ ಟ ಣೆ .

ದಕ್ಷಿಣ ಕೊಡಗು ವೀರಾಜಪೇಟೆ ನಾಡು ಕೊಟ್ಟೋಳಿ ಗ್ರಾಮದಲ್ಲಿ ಸಾಗಿನ 100 ಒಟ್ಟೆ ಭೂಮಿ, ಅಡಿಕೆ, ಬಾಳೆತೋ ಟ ಮತ್ತು ಮನೆ, ಜಾಗ ವಗೈರೆ ನ್ಯಾಯ ವಾದ ಖರೀದಿಗೆ ಮಾರಲ್ಪಡುತ್ತೆ ಹೆಚ್ಚಿ ನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬಗೆದು ತಿಳಿಯಬಹುದು.

1-1 ಕೆ. ಚಂಪಯ್ಯ,
ವ್ಯವಸಾಯ ಇಲಾಖೆ, ಮಡಿಕೇರಿ.

## ಸಾ ರ್ವ ಜ.

ಮದ್ರಾಸ ಗವರ್ನರ್ ಸರ್ ಆರ್ಚಿಬಾಲ್ಡ ನೈ ಅವರು ಗಾಂಧಿ ಸ್ಮಾರಕ ನಿಧಿಗೆ ಐವತ್ತು ಸಾವಿರ ರೂ. ಗಳನ್ನು ಕೊಟ್ಟದ್ದು ಇದರಲ್ಲಿ ೧ ಸಾವಿರ ಮದ್ರಾಸ ನಗರ ಗಾಂಧಿ ನಿಧಿಗೆ ಉಳಿದ ನಾಲ್ಕು ಸಾವಿರಗಳಲ್ಲಿ ಆಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳ ಗಾಂಧಿ ನಿಧಿಗೆ ಒಂದೊಂದು ಸಾವಿರ ಹಂಚಬೇಕು ಎಂದು ಸೂಚಿಸಿದ್ದಾರೆ.

ಮಸೂರಿಯಲ್ಲಿ ಸರದಾರ ವಲ್ಲಭಭಾಯಿಯವರ ಪ್ರತಿಮೆಯ ಪ್ರತಿಷ್ಠಾಪನೆಯು ಈಚೆಗೆ ಸಂಭ್ರಮದಿಂದ ನಡೆದಿತ್ತು. ಆದರೆ ಮತ್ತೆ ಅವರು ಕಾರ್ಯ ಪ್ರವೃತ್ತರಾದೊಡನೆ ಪ್ರತಿಮೆ ಸ್ವಲ್ಪ ಇಳಿಮುಖವಾಗಿದ್ದು ಪುನಃ ಪೂರ್ಣ ವಿಶ್ರಾಂತಿಯ ಫಲಕೊಯನ್ನು ಅವರಿಗೆ ಕೊಡಲಾಗಿದೆ

ಪಾಕಿಸ್ತಾನ ಘಟನಾ ಸಮಿತಿಯ ಸದಸ್ಯನಾಗಿರತಕ್ಕವನು ಪಾಕಿಸ್ತಾನನಾಗಲಿಕನಿರಬೇಕು ಇಲ್ಲವೆ ಆಗಬೇಕು ಎಂಬ ಗೊತ್ತುವಳಿಯನ್ನು ತಾ ೧೫ ಕ್ಕೆ ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಸ್ವೀಕರಿಸಲಾಯಿತು. ಇದರ ಫಲವಾಗಿ ಜ ಸರ್ವಾರ್ದಿಯವರು ಸದಸ್ಯತ್ವ ಕಳೆದುಕೊಂಡಿದ್ದಾರೆ. ಈ ಬಗ್ಗೆ ಮಾತನಾಡುತ್ತ ಸರ್ವಾರ್ದಿಯವರು ನಸ್ಸಂಕೋಚವನ್ನು ಹೊರಗೆ ಹಾಕಲೆಂದೇ ಈ ಗೊತ್ತುವಳಿಯು ಸ್ವೀಕೃತವಾಗಿದೆಯೆಂದು ಉದ್ಗಾರವೆಸಿದಂತಾಗಿ ತಿಳಿಯುತ್ತದೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಆಹಾರ ಧಾನ್ಯ ಹತೋಟಿ ತಪ್ಪಿದ ನಂತರ ಅವುಗಳ ಬೆಲೆ ಮಿತಿಮೀರಿ ಏರಿರುವ ವಿಷಯ ಕುರಿತ ನಿಲುವಳಿ ಸೂಚನೆ ಬಗ್ಗೆ ಮಾತನಾಡುತ್ತಾ, ಸದಸ್ಯರು ರೂಪಾಯಿಗೆ 1 ಸೇರು ಅಕ್ಕಿ ಸಿಕ್ಕುವುದೂ ಕಷ್ಟವಾಗಿದೆ ಎಂದರು.

ಈ ವರ್ಷದ ನೋಬಲ್ ಪಾರಿತೋಷಿಕವು ಗಾಂಧೀಜಿಗೆ ದೊರೆಯ ಬಹುದೆಂದೂ ಹೀಗೆ ಸತ್ತವೇಲೆ ಬಹುಮಾನ ಪಡೆದ ಮೊದಲನೆಯವರು ಟಾಲಸ್ಟಾಯರೆಂದೂ ಹೇಳಲಾಗಿದೆ.

ಬೆಂಗಳೂರಲ್ಲಿ ಜುಲೈ ೭ ಮತ್ತು ೮ನೇ ತಾರೀಖುಗಳಲ್ಲಿ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ೪ನೇ ಅಧಿವೇಶನವು ಕೂಡಲಿದೆ

ಮಂಗೋಲಿಯಾದ ಗೋಬಿ ಮರುಭೂಮಿಯಲ್ಲಿ ರಶಿಯಾದ ಮಿ. ಐವಾನರು ಕೈಕೊಂಡ ಸಂಶೋಧನೆಯಲ್ಲಿ ಇತಿಹಾಸ ಪೂರ್ವ ಪ್ರಾಣಿಗಳ ಅಸ್ಥಿ ಪಂಜರವು ಕೋಟ್ಯಾವಧಿ ವರ್ಷಕ್ಕಿಂತ ಹಿಂದಿನ ಪೂರ್ವದಲ್ಲಿ ಜೀವಿಸಿದ್ದ ಪ್ರಾಣಿಗಳು ದೊರೆತಿರುವುದಾಗಿ ತಿಳಿಯುತ್ತದೆ

ಈಗಿಂದೀಗಲೇ ಸರಕಾರವು ಎಲ್ಲ ಬಟ್ಟೆ ಗಿರಣಿಗಳನ್ನು ಕೈವಶ ಪಡಿಸಿಕೊಂಡು ಬಟ್ಟೆಯ ಹುಟ್ಟುವಳಿ ಮತ್ತು ಹಂಚಿಕೆಯ ಕಾರ್ಯವನ್ನು ಕೆಲಸಗಾರರ ಸಮಿತಿಗಳಿಗೆ ಒಪ್ಪಿಸಿದಲ್ಲಿ ಬಟ್ಟೆಯ ಬರಗಾಲವು ಇನ್ನಷ್ಟು ಹೆಚ್ಚುವುದೆಂದು ಅ. ಬಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಉಪ ಕಾರ್ಯದರ್ಶಿಗಳಾದ ಶ್ರೀ. ಮಾಣಿಕ ಗಾಂಧಿಯವರು ಹೇಳಿದರು. ಈಗಿನ ಔದ್ಯೋಗಿಕ ಶಾಸ್ತ್ರೀಕರಣ ಯೋಜನೆಯು ಬಂಡವಾಲದಾರರ ಹಿತಸಾಧಿಸುವಂತಿದೆ ಎಂಬುದು ಅವರ ಮತ.

ಏರುತ್ತಿರುವ ಬಟ್ಟೆಯ ಕ್ರಯವನ್ನು ಕೇಂದ್ರ ಸರಕಾರದ ಗಮನಕ್ಕೆ ಆಗಾಗಲೇ ಬಂದಿದ್ದು ೧೫ ದಿನಗಳೊಳಗೆ ಬೆಲೆ ಇಳಿಯದಿದ್ದರೆ ಎಲ್ಲಾ ಬಟ್ಟೆ ವಿತರಣೆಯ ವ್ಯವಸ್ಥೆಯನ್ನು ಸರಕಾರವೇ ಮಾಡುವುದಾಗಿ ಪ್ರಕಟವಾಗಿದೆ.

ಸಂಯುಕ್ತ ಪ್ರಾಂತ್ಯದ ಸಿ ಐ. ಡಿ. ಖಾತೆಯವರು ಆಗ್ರಾದಲ್ಲಿ ಪಾಕೀಸ್ತಾನ ಪಂಚಮ ದಳದವರ ನಿರ್ವಾಣವನ್ನು ಶೋಧಿಸಿರುವರು. ಸಂಯುಕ್ತ ಪ್ರಾಂತ್ಯದ ಪಶ್ಚಿಮ ಜಿಲ್ಲೆಗಳಲ್ಲಿ ಈ ಪಂಚಮಾಂಗ ದಳದವರ ಚಟುವಟಿಕೆಗಳು ಬಿರುಸಿನಿಂದ ನಡೆಯುತ್ತವೆಯೆಂದೂ, ಅಲ್ಲಿಯೇ ಅವರ ಚಟುವಟಿಕೆಗಳ ಕೇಂದ್ರವಿದೆಯೆಂದೂ 'ಟೈಬ್ಯೂನ್' ಪತ್ರಿಕೆ ರಹಸ್ಯ ಬೇಧಿಸಿದೆ. ಈ ಸಂಬಂಧದಲ್ಲಿ ಇಬ್ಬರು ಖಾಸ್ಕಾರರನ್ನು ದಸ್ತಗಿರಿ ಮಾಡಿ ಅವರಿಂದ ವಶಪಡಿಸಿಕೊಂಡ ಕರಪತ್ರಗಳಲ್ಲಿ ಪಾಕಿಸ್ತಾನ ಮತ್ತು ಹೈದರಾಬಾದಿಗೆ ಕಳುಹಿಸಲು ಉದ್ದೇಶಿಸಿದ ರಹಸ್ಯ ವಾರ್ತಾ ವರದಿ ಸಿಕ್ಕಿರುವುದು. ಈ ಕುರಿತು ಮುಂದಿನ ತನಿಖೆ ನಡೆಯುತ್ತಿರುವುದು

ದಿಲ್ಲಿ ವಿಶ್ವ ವಿದ್ಯಾಲಯವು ಇತ್ತೀಚೆಗೆ ಒಂದು ರಷ್ಯನ್ ಸಂಘವನ್ನು ತೆರೆದಾಗ, ರಷ್ಯನ್ ಭಾಷೆ ಕಲಿಯಲು ಆತುರಪಡುತ್ತಿರುವವರ ದೊಡ್ಡ ನುಗ್ಗಾಟವೇ ಆಗಿ ಹೋಯಿತು. ಭಾರತದ ರಷ್ಯನ್ ರಾಯಭಾರಿ ಎಂ. ಸೊವಿಕಲ್‌ರವರಿಂದ ಈ ಸಂಘದ ಉದ್ಘಾಟನೆಯು ನಡೆಯಿತು. ರಷ್ಯನ್ ಸಾಹಿತ್ಯ ಮತ್ತು ಚಲಚಿತ್ರಗಳನ್ನು ಭಾರತಕ್ಕೆ ಆಗಾಗ್ಗೆ ತರಿಸಿ, ತನ್ನ ಕೈಲಾದ ಸಹಾಯ ಮಾಡುವೆನೆಂದು ರಷ್ಯಾ ರಾಯಭಾರಿಯು ಕನೆಯಿಂದ ಭರವಸೆ ದೊರಕಿರುವುದು. ಸಂಘಕ್ಕೆ ಎಳ್ಳಿಯನ್ನು ಬಯಸುತ್ತ ಭಾರತ ಪ್ರಧಾನ ಪಂಡಿತ ಜವಾಹರಲಾಲ ನೆಹರುರವರು ಕಳಿಸಿದ ಸಂದೇಶದಲ್ಲಿ 'ಇಂದು ರಷ್ಯಾ ಭಾಷೆಯು ಜಾಗತಿಕ ಭಾಷೆಗಳಲ್ಲಿ ಒಂದು ಪ್ರಾಮುಖ್ಯ ಸ್ಥಾನವನ್ನು ಗಳಿಸಿದೆ ಕೇವಲ ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲೂ ಅದು ಅಪೂರ್ವ ವರ್ಚಸ್ಸು ಬೀರಿರುವುದು' ಎಂದು ಹೇಳಿದರು.

---

### Office of the Registrar of Co-operative Societies, Coorg, Mercara, dated the 25th May 1948.

*Applications from candidates who have passed or completed S. S L. C Examination and ex service men with equwalent qualification are invited up to 15 6 1948, for training in Co operation and allied subjects at the Coorg Co operative Institute, Mercara The period of traming is 12 months commencing from 1st July 48.*

*The applicants are required to appear before the undersigned at their own cost for interview in his office at 11 a. m on the 20th June 1948. Thirty selected candidates will be paid a stipend of Rs. 25 per mensum each for the period of traming*

**P M. Chengappa,**
*Registrar*
*Co-operative Societies, Coorg*
2 2

---


ಏನೇ ಮಾಡಲು ಇಲ್ಲವೇ ಪ್ರತಿನಿಧಿಸಲು

**ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.**

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ತಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

**ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.**

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2

ಬೋಂಬೆ ಲೈಫ್ ಬಿಲ್ಡಿಂಗ್, ಪೊ. ಬಾ ನಂ. 1, ಊಟಕಮಂಡ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.



ಎಂಪ್ಲೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ—1897

| | | |
|---|---|---|
| 48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಾರಸ್ಯಗಳು | ಒಟ್ಟು ಆದಾಯ | 1,07,19,000 ರೂಪಾಯಿ |
| | ಬಾಲ್ಯಸಿರುವ ಏಸು | 17,74,32,000 ರೂ |
| | ಆಸ್ತಿ | 6,67,60,000 ರೂ |
| | ಕಂಪೆನಿಯ ಆದಿಯಲ್ಲಿ ಹೂಟ್ಟಿದ್ದ ವಂಗಳು | 5,00,000 ರೂ |

ಅಂಗ ಸ್ಥಳ: ಡಿಸ್ಟ್ರಿಕ್ಟ್ ಜೋರ್ಡ್ ಬಿಲ್ಡಿಂಗ್, ಕಾಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಸೌಲಭ್ಯಗಳನ್ನು ಪಡೆಯಿರಿ

ಎಂಪ್ಲೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೋಂಬಾಯಿ


ಕೊಡಗು ಜೇಂಟ್ ರಿಜಿಸ್ಟ್ರಾರ್ ಆಫೀಸ್, ಮರ್ಕಾರ, ತಾ 13—5—1948.

## ನೋ ಟೀ ಸು.

ಗೇಣಿ ಅವಧಿ ಮುಗಿದ ಯೂಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಯೂಲಕ್ಕಿ ಫಲವನ್ನು ಎತ್ತಾವಳಿ ಮಾಡುವ ಹಕ್ಕನ್ನು 1948ನೇ ಇಸವಿ ಜೂನ್ ತಾರೀಕು 9ನೇ ಬುಧವಾರ ದಿನ ವಿರಾಜಪೇಟೆ ನಾಡು ಖಜೇರಿ ಬಳಿ ಮತ್ತು 11ನೇ ಶುಕ್ರವಾರ ದಿನ ಮಡಿಕೇರಿ ನಾಡು ಖಜೇರಿ ಬಳಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಕೂಡಗು ಜೇಂಟ್ ಸ್ಟಾರೆಸ್ಟ್ ಆಫೀಸರವರ ಪರ್ಸನಲ್ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುವ ಸಂಗತಿ ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸಲಾಗಿದೆ. ಟಾಯಿಸ್ದಾರರು ಸಮಯಕ್ಕೆ ಸರಿಯಾಗಿ ಹಾಜರಾಗಿ ಚಿಡದರಕಾಸ್ತು ಮೂಲಕ ಸಹಕರಿಸಬಹುದು. ಹೆಚ್ಚಿನ ವಿವರಗಳನ್ನು ನಾಡು ಖಜೇರಿಗಳಿಂದಾಗಲಿ ಯೂ ರೇಂಜ್ ಆಫೀಸ್‌ಗಳಿಂದಾಗಲಿ ಹರಾಜು ಇಸ್ತಿಹಾರ್ ಮೂಲಕ ತಿಳಿದ ಕೊಳ್ಳಬಹುದು.

**ಸಿ. ಎಂ ಕುಶಾಲಪ್ಪ,**
ಜೇಂಟ್ ಸ್ಟಾರೆಸ್ಟ್ ಆಫೀಸರು.

---

### Department of Agriculture, Coorg, Mercara.

Applications are invited for two posts of Agricultural Demonstrators in the scale of Rs. 55 5 2-100 with F T. A. of Rs. 30 - P. M. with the usual dearness allowance. For graduates in agriculture a higher pay of Rs. 70 will be allowed. The scale of pay is subjected to revision on the upward-side according to pay Commission's proposals. The posts are temporary.

Qualifications: Licentiates in Agriculture or Bachelor in Agriculture with experience in District and farm work. Knowledge of Kannada essential. Age:- below 30 years, but relaxable to persons who are already in service. The applications should reach the undersigned before 15-6-48.

**B. S Varada Rajan,**
*Agricultural Officer, Coorg*

---

### TENDER NOTICE.

